
ಸಮಗ್ರ ದಾಸ ಸಾಹಿತ್ಯ

ಸಂಪುಟ : ೩೧ - ಭಾಗ ೧



ಗುರುಗೋವಿಂದವಿಠಲದಾಸರ ಕೀರ್ತನೆಗಳು

ಭಾಗ ೧

ಸಮಗ್ರ ದಾಸಸಾಹಿತ್ಯ
ಸಂಪುಟ : ೩೧–ಭಾಗ ೧

ಶ್ರೀಗುರುಗೋವಿಂದ ವಿಠಲದಾಸರ ಕೀರ್ತನೆಗಳು

ಸಂಪಾದಕರು :
ವರಾಹ ಹರಿವಿಠಲದಾಸರು
(ಕೆ.ಎಸ್. ವೆಂಕಟೇಶ್)

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

SAMAGRA DASA SAHITYA VOLUME - 31 Part 1 :
Shree Gurugovinda Vitaladasara Keertanegalu Edited by Varaha Harivittaladasaru, (K.S. Venkatesh) and published by Sri. Y.K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 80 + ೫೦೮

ಪ್ರಥಮ ಮುದ್ರಣ : ೨೦೦೩
ಪ್ರತಿಗಳು : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :
ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ನಂ. ೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು - ೫೬೦ ೦೫೨

ಮುದ್ರಕರು :
ಮೆ. ಡಾಟ್ಸ್
#೧೨೪, ಸುಲ್ತಾನ್‌ಪೇಟೆ
ಬೆಂಗಳೂರು - ೫೬೦ ೦೫೩

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು ; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿಡಿ ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಅವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ, ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿಡಿ ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್

ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮುವ್ವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು), ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ–ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ, ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ಸುಬ್ರಮಣ್ಯಂ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬ್ಳಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ ಪಾಮರರನ್ನು ಏಕ ಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಓದಲಾರದ ಕನ್ನಡ ಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ), ನಾಲ್ಕುನೂರಕ್ಕೂ ಮಿಕ್ಕಿದ ದಾಸರ ಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' - ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೆ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ' ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯವು ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿದ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾ ನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರ ಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದು ಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದ ವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದು, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದು ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು*, ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿ ಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿ ಕೊಡಬೇಕು – ಎಂಬುದಾಗಿ ನಿರ್ಧರಿಸಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ ಎಂದು ಘೋಷಿಸಿದರು. ಅದರಂತೆ ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ.ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಶ್ರೀ ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿದೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಶ್ರೀಗುರುಗೋವಿಂದವಿಠಲದಾಸರು

ಸಂಕ್ಷಿಪ್ತ ಜೀವನ ಚರಿತ್ರೆ

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ ।
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ ॥

ಪರಮಾತ್ಮ ತ್ರಿಯುಗಹೂತಿ ಎಂದು ಪ್ರಸಿದ್ಧನಾದವನು. ಕೃತ ತ್ರೇತಾ ದ್ವಾಪರ ಯುಗಗಳಲ್ಲಿ ಮಾತ್ರ ತನ್ನ ಅವತಾರ ಎಂದವನು. ಕಲಿಯುಗದಲ್ಲಿ ಇರುವ ಅಲ್ಪ ಸ್ವಲ್ಪ ಸಜ್ಜನರ ಉದ್ಧಾರಕ್ಕಾಗಿ ತನ್ನ ಪರಿವಾರ ದೇವತೆಗಳಿಗೆ ಭುವಿಯಲ್ಲಿ ಅವತರಿಸುವಂತೆ ಆಜ್ಞೆ ಮಾಡಿದ. ಅಂತೆಯೇ ವಾಯುದೇವರ ಅಂಶ ಸಂಭೂತರಾಗಿ ಶ್ರೀಮಧ್ವಾಚಾರ್ಯರು, ಇಂದ್ರಾಂಶ ಸಂಭೂತರಾಗಿ ಜಯತೀರ್ಥರು ಧ್ರುವಾಂಶ ಸಂಭೂತರಾಗಿ ಶ್ರೀಪಾದರಾಜರು ಪ್ರಹ್ಲಾದಾಂಶ ಸಂಭೂತರಾಗಿ ಶ್ರೀವ್ಯಾಸರಾಜರು ಲಾತವ್ಯಾಂಶ ಸಂಭೂತರಾಗಿ ಶ್ರೀವಾದಿರಾಜರು ಧಾರುಣಿಯ ಮೇಲೆ ಅವತರಿಸಿ ವೇದ ವಾಙ್ಮಯವೆನಿಸಿದ ವೇದವ್ಯಾಸರ ಬ್ರಹ್ಮಸೂತ್ರಗಳಿಗೆ, ಪುರಾಣಗಳಿಗೆ ಭಾಷ್ಯ ಟೀಕೆ ಟಿಪ್ಪಣಿಗಳನ್ನು ರಚಿಸಿ ವ್ಯಾಸವಾಙ್ಮಯದ ಗ್ರಂಥರತ್ನಗಳನ್ನು ಸಾಹಿತ್ಯ ಸರಸ್ವತಿಯ ಸಿರಿಮುಡಿಗೆ ಮುಡಿಸಿದರು. ಆದರೆ ಇವೆಲ್ಲವೂ ಸಂಸ್ಕೃತ ಭಾಷೆಯಲ್ಲಿದ್ದು ಪಂಡಿತರಿಗಷ್ಟೇ ನಿಲುಕುವಂತಿದ್ದು ಪಾಮರರಿಗೆ ಗಗನ ಕುಸುಮವಾಗಿತ್ತು. ಅದಕ್ಕಾಗಿ ಅಪ್ರಾಕೃತ ರೂಪಿಯಾದ ಪರಮಾತ್ಮನನ್ನು ಪ್ರಾಕೃತ ಭಾಷೆಯಲ್ಲಿ ಸ್ತುತಿಸಿ ಕೊಂಡಾಡಿ ತತ್ವಜ್ಞಾನವನ್ನು ದೊರಕಿಸಲು, ನಾರದಾಂಶ ಸಂಭೂತರಾದ ಶ್ರೀಪುರಂದರ ದಾಸರು ಧಾರುಣಿಯ ಮೇಲೆ ಅವತರಿಸಿದರು. ನಾರಾಯಣನೆಂಬ ನಾಮದ ಬೀಜವ ನಾರದ ಬಿತ್ತಿದ ಧರೆಯೊಳಗೆ. ಯಮಧರ್ಮ ಅಂಶ ಸಂಭೂತರಾಗಿ ಕನಕದಾಸರು ಅವತರಿಸಿ ಗ್ರಾಮ್ಯ ಭಾಷೆಯಲ್ಲೂ ತತ್ವಜ್ಞಾನದ ಮುತ್ತುಗಳನ್ನು ತಿಳಿಸಿದರು. ದೇವಾಲಯದಲ್ಲಿ ಪ್ರತಿಷ್ಠಾಪಿಸಿರುವ ಮೂಲ ಮೂರುತಿ ವ್ಯಾಸ ಸಾಹಿತ್ಯವಾದರೆ ಜನರ ನಾಲಿಗೆಯ

ಮೇಲೆ ನಲಿದಾಡುವ ಉತ್ಸವಮೂರುತಿ ದಾಸಸಾಹಿತ್ಯವಾಯಿತು. ರಾಮಾಯಣ, ಮಹಾಭಾರತ, ಭಾಗವತ ಗ್ರಂಥಗಳೆಲ್ಲಾ ಹರಿದಾಸರ ಕೀರ್ತನೆಗಳಲ್ಲಿ ತೇಲಿ ಬಂದವು. ನೀತಿಬೋಧಕ ಪದಗಳು, ಮುಂಡಿಗೆಗಳು, ನಿಂದಾಸ್ತುತಿಗಳು ಹೀಗೆ ತನ್ನ ವ್ಯಾಪ್ತಿಯನ್ನು ವಿಸ್ತಾರಗೊಳಿಸಿದ ಸಾಹಿತ್ಯ ಹರಿದಾಸ ಸಾಹಿತ್ಯ. ಅಲ್ಲದೆ ಕನ್ನಡದಲ್ಲಿ ಬಂದ ಅನೇಕ ಕೀರ್ತನೆಗಳು ಗ್ರಂಥಗಳೆನಿಸಿದವು. ಶ್ರೀ ಶ್ರೀಪಾದರಾಜರ ಲಕ್ಷ್ಮೀನರಸಿಂಹ ದಂಡಕ ಹಳೆಗನ್ನಡ ಶೈಲಿಯಲ್ಲಿದ್ದು ಆಳ್ವಾರರ ಪ್ರಬಂಧಗಳನ್ನು ಹೋಲುವಂತಿದೆ. ಭ್ರಮರಗೀತೆ ವೇಣುಗೀತೆ, ವಾದಿರಾಜರ ವೈಕುಂಠ ವರ್ಣನೆ, ಗುಂಡಕ್ರಿಯೆ, ಲಕ್ಷ್ಮೀ ಶೋಭಾನೆ, ಹರಿ ಸರ್ವೋತ್ತಮಸಾರ, ಸ್ವಪ್ನಪದ, ಕನಕದಾಸರ ಹರಿಭಕ್ತಿಸಾರ, ಮೋಹನ ತರಂಗಿಣಿ, ನಳ ದಮಯಂತಿ ಚರಿತ್ರೆ, ಜಗನ್ನಾಥದಾಸರ ಶ್ರೀಮದ್ಧರಿಕಥಾಮೃತ ಸಾರ, ಉದ್ಗ್ರಂಥಗಳಾದವು.

ಇಂತಹ ಸಾಹಿತ್ಯಕ್ಕೆ ಮೂಲ ಪ್ರೇರಕ ಶಕ್ತಿ ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯರ ದ್ವಾದಶಸ್ತೋತ್ರ. ನರಹರಿ ತೀರ್ಥರ ಕಾಲದಲ್ಲಿ ಸುಪ್ತವಾಗಿದ್ದ ಈ ಸಾಹಿತ್ಯಕ್ಕೆ ಒಂದು ಆಯಾಮ ನೀಡಿ ಶ್ರೀಕಾರ ಹಾಕಿದವರು ಶ್ರೀ ಶ್ರೀಪಾದರಾಜರು. ಸಂಸ್ಥಾನ ಪೂಜೆಯ ಕಾಲದಲ್ಲಿ ಕನ್ನಡ ಕೀರ್ತನೆಗಳನ್ನು ಹಾಡಿ ನರ್ತನ ಗೈದು ಪರಮಾತ್ಮ ಜ್ಞಾನ ಗಮ್ಯನೇ ಹೊರತು ಭಾಷಾ ಗಮ್ಯನಲ್ಲ ಎಂಬುದನ್ನು ಅರುಹಿದವರು. ತಮ್ಮ ಉಪಾಸ್ಯ ಮೂರುತಿ ಗೋಪಿನಾಥ ಮುದ್ರಿಕೆಯಿಂದ ಕೆಲವು ದೇವರನಾಮ ರಚಿಸಿದ್ದಾರಾದರೂ ನಂತರ ರಂಗವಿಠಲ ಅಂಕಿತದಲ್ಲಿ ಹಾಡಿರುವ ಹಾಡುಗಳು ಜನಪ್ರಿಯವಾಗಿವೆ. ಈ ಪದ್ಧತಿ ವ್ಯಾಸರಾಜರ ಕಾಲದಲ್ಲಿ ದಾಸಕೂಟವಾಗಿ ಮಾರ್ಪಟ್ಟಿತು. ವ್ಯಾಸರಾಯರು ಶ್ರೀಕೃಷ್ಣ ಎಂಬ ಅಂಕಿತದಲ್ಲಿ ದೇವರ ನಾಮ ರಚಿಸಿದವರಾದರೆ ಶ್ರೀವಾದಿರಾಜರು ಹಯವದನ ಮುದ್ರಿಕೆಯಿಂದ ತಮ್ಮ ಕೃತಿಗಳನ್ನು ಶ್ರೀಹರಿಗೆ ಅರ್ಪಿಸಿದ್ದಾರೆ. ವ್ಯಾಸರಾಜರು ಶ್ರೀ ಶ್ರೀನಿವಾಸ ನಾಯಕರಿಗೆ ಪುರಂದರ ವಿಠಲ ಎಂಬ ಅಂಕಿತ ನೀಡುವ ಮೂಲಕ ದಾಸಕೂಟದ ಉದ್ಘಾಟನೆಯನ್ನೇ ಮಾಡಿದರು.

ಅಂಕಿತವನ್ನು ತೆಗೆದುಕೊಳ್ಳುವುದು ಒಂದು ಸಂಪ್ರದಾಯದ ಪರಿಪಾಠ. ಯತ್ಯಾಶ್ರಮ ನೀಡುವಾಗ ಗುರುಗಳು ಶಿಷ್ಯರಿಗೆ ಮತ್ತೊಂದು ನಾಮಕರಣ ಮಾಡಿದಂತೆ ದಾಸ ದೀಕ್ಷೆ ಕೊಡುವಾಗ ಗುರುಗಳು ಶಿಷ್ಯನ ಉದ್ಧಾರಕ್ಕಾಗಿ ಪ್ರಾರ್ಥಿಸುವ ದೇವರ ನಾಮವೇ ಅಂಕಿತನಾಮ ಎನಿಸುತ್ತದೆ. ಸಾಮಾನ್ಯವಾಗಿ ವಿಠ್ಠಲ ಎಂಬ ನಾಮ ಕೊನೆಗೆ ಸೇರಿರುತ್ತದೆ. ಕಾಲಿಗೆ ಗೆಜ್ಜೆಕಟ್ಟಿ, ಕೈಯಲ್ಲಿ

ತಂಬೂರಿ ಪಿಡಿದು, ಹೆಗಲಿಗೆ ಜೋಳಿಗೆಯನ್ನು ಹಾಕಿಕೊಂಡು ಚಿಟಿಕೆಯನ್ನು ಅಥವಾ ತಾಳವನ್ನು ಬಾರಿಸುತ್ತಾ ಬಿಳಿಯ ವಸ್ತ್ರ ಉಟ್ಟು ಕಾವಿವಸ್ತ್ರ ತಲೆಗೆ ಸುತ್ತಿ ಭಗವಂತನ ಗುಣಗಾನ ಮಾಡುತ್ತಾ ಲೋಕದ ಜನರ ಡೊಂಕುಗಳನ್ನು ತಿದ್ದುವವರು ನಿಜವಾದ ಹರಿದಾಸರು. ನಮ್ಮ ಶರೀರದ ಎಲ್ಲ ಅಂಗಗಳೂ ಭಗವಂತನ ಸೇವೆಗಾಗಿ ಆಗಬೇಕು ಎಂಬುದು ಇದರ ಭಾವ. ಬಿಳಿಯ ವಸ್ತ್ರ ಉಡುವುದು, ಕಾವಿವಸ್ತ್ರದ ಪೇಟ, ಕಾವಿ ವೈರಾಗ್ಯದ ಸಂಕೇತ. ವಿಷಯಾ ಸಕ್ತನಾಗದೆ ಅವುಗಳಲ್ಲಿ ವೈರಾಗ್ಯವನ್ನು ತಾಳಿ ಭಗವಂತನಲ್ಲಿ ಭಕ್ತಿ ಮಾಡಬೇಕು. ಕಾರಣ ಸಂಸಾರದಲ್ಲಿದ್ದು ಕಂಸಾರಿಯನ್ನು ಕಾಣಲು ಯತ್ನಿಸುತ್ತಿರುವವನೀತ, ನರಲೋಕದ ಚಿಂತೆ ಬಿಟ್ಟು ನರಸಿಂಹನನ್ನು ಚಿಂತಿಸುವವನಾಗಬೇಕು. ಅನ್ನಪಾನಗಳಿಗವಸರಿಸದೆ ಅನ್ನಬ್ರಹ್ಮನನ್ನು ಕಾಣಲು ಯತ್ನಿಸಬೇಕು. ಇಂದು ನಾಳೆಗೆಯೆಂಬ ಯೋಚನೆ ಬಿಟ್ಟು, ಇಂದಿರೇಶನ ವ್ಯಾಪಾರವನ್ನು ನೆನೆಯಬೇಕು. ಮೂಕರಂತೆ, ಬಧಿರರಂತೆ ಇದ್ದು, ಕಾಕು ಯುಕುತಿಗಳನ್ನು ಮನಸ್ಸಿಗೆ ತಾರದೆ, ಭಗವಂತನಿಗೆ ಅರ್ಪಿತವಾಗದಿದ್ದುದನ್ನು ಎಂದೂ ಸ್ವೀಕರಿಸದೆ, ಇರುವವರು ಹರಿದಾಸರು. ಸ್ವಧರ್ಮನಿರತರಾಗಿ, ಕಂಡ ಕಂಡಲ್ಲಿ ವಿಶ್ವರೂಪವನ್ನು ಕಂಡು, ಉಂಡು ಉಟ್ಟಿದ್ದೆಲ್ಲಾ ಯಜ್ಞವೆಂದು ಅನುಸಂಧಾನ ಮಾಡಿಕೊಂಡು, ಭಗವಂತನ ಕಥೆಯಲ್ಲಿ ಮೈಮರೆತು ನಗುತ್ತಾ, ನಲಿಯುತ್ತಾ ಆನಂದ ಪರವಶರಾಗುವವರು ಹರಿದಾಸರು. ಲಜ್ಜೆಯನ್ನು ಬಿಟ್ಟು ಗೆಜ್ಜೆಯನ್ನು ಕಟ್ಟಿ ಮೂರ್ಜಗದೊಡೆಯನನ್ನು ಹೆಜ್ಜೆ ಹೆಜ್ಜೆಗೆ ಸ್ಮರಣೆ ಮಾಡುವವರು ಹರಿದಾಸರು. "ವೇದಶಾಸ್ತ್ರಗಳ ಮೋದದಿಂದೋದದೆ ಬಾದರಾಯಣ ಕೃತ ಭಾಗವತ ಕೇಳದೆಲೆ ಹ್ಯಾಂಗೆ ನೀ ದಾಸನಾದೆ" ಎಂದು ಕನಕದಾಸರು ಪ್ರಶ್ನಿಸುತ್ತಾರೆ. ಅಂದರೆ ದಾಸನಾಗಲು ಇದು ಅತ್ಯಂತ ಪ್ರಮುಖ ಅರ್ಹತೆ ಎಂದು ಅರಿವಾಗುತ್ತದೆ.

"ಮಾರಿಯ ಕೈಯಿಂದ ನೀರ ಹೊರಿಸುವರು
ಮಸಣಿಯ ಕೈಯಿಂದ ಕಸವ ಬಳಿಸುವರು
ಮೃತ್ಯುವಿನ ಕೈಯಿಂದ ಬತ್ತವ ಕುಟ್ಟಿಸುವರು"

ಇಂತಹ ನರಹರಿಯನ್ನು ನಂಬಿದ ಹರಿದಾಸರಿಗೆ ಎಂದೂ ಅಪಜಯವಿಲ್ಲ 'ದಾಸನಾಗಲುಬೇಕು ಏಸು ಜನ್ಮದ ಪುಣ್ಯ' ಎಂದು ಪುರಂದರದಾಸರು ಉದ್ಗಾರ ತೆಗೆದಿದ್ದಾರೆ.

"ದಾಸರೊಡನೆ ಆಡದವನ
ದಾಸರೊಡನೆ ಪಾಡದವನ ಹರಿ"
ದಾಸನಾಗದವನ ಜನ್ಮ ವ್ಯರ್ಥವಲ್ಲವೇ,

ಎಂದು ದಾಸರು ಹರಿದಾಸನಾಗು ಎಂದು ಮಾರ್ಮಿಕವಾಗಿ ತಿಳಿಸುತ್ತಾರೆ. "ದಾಸನ ಮಾಡಿಕೊ ಎನ್ನ ಸ್ವಾಮಿ ಸಾಸಿರ ನಾಮದ ವೆಂಕಟರಮಣ" ಎಂದು ಬೇಡುತ್ತಾರೆ.

ಶ್ರೀಹರಿ ಸರ್ವೋತ್ತಮ ವಾಯು ಜೀವೋತ್ತಮ ತಾರತಮ್ಯ ಪಂಚಭೇದ ಎಲ್ಲ ಪ್ರಮೇಯಗಳನ್ನು ಪುಂಖಾನುಪುಂಖವಾಗಿ ತಿಳಿಸುವವರು ಹರಿದಾಸರು. ನೀತಿ ಬೋಧನೆಯನ್ನೂ ಸಹ ದಾಸರು ಮಾಡಿದ್ದಾರೆ. ಅದಕ್ಕೆಂದೇ ಆಡುಮುಟ್ಟದ ಸೊಪ್ಪಿಲ್ಲ ದಾಸರು ಹಾಡದ ವಿಷಯವಿಲ್ಲ ಎಂಬ ನಾಣ್ನುಡಿ ಅರ್ಥವತ್ತಾಗಿದೆ.

ಇಂತಹ ಹರಿದಾಸರ ಪರಂಪರೆ ವಿಧ್ಯುಕ್ತವಾಗಿ ಶ್ರೀಪುರಂದರ ದಾಸರಿಂದ ಮುಂದುವರಿಯಿತು. ಮೊದಲಿಗೆ ನವಕೋಟಿ ನಾರಾಯಣನೆಂದು ಶ್ರೀಮಂತ ಕುಟುಂಬದಲ್ಲಿ ಬಂದವರು ನಂತರದ ದಿನಗಳಲ್ಲಿ ದಾಸರಾಗಿ ವ್ಯಾಸ ತೀರ್ಥರ ಶಿಷ್ಯರಾಗಿ ನಿಂತವರು. ಇವರ ಸಮಕಾಲೀನರಾಗಿ ಶ್ರೀಹರಿಯಿಂದಲೇ ದಾಸನಾಗು ದಾಸನಾಗು ಎಂಬ ಆದೇಶ ಪಡೆದು ದಾಸರಾದವರೇ ಕನಕದಾಸರು. ಜಲಜನಾಭನ ಭಜಿಸಲು ಕುಲವು ಪ್ರಾಧಾನ್ಯವಲ್ಲವೆಂದು, ಗ್ರಾಮ್ಯ ಭಾಷೆಯಲ್ಲಿ ನೀತಿ ಬೋಧೆ ಮಾಡಿ, ಮಡಿ ಮಾಡುವ ಬಗೆ ತಿಳಿಸಿ ಹರಿಭಕ್ತಿಸಾರವನ್ನು ಅರುಹಿದವರು. ಬೇಲೂರು ಕ್ಷೇತ್ರ ನಿವಾಸಿ ರಾಮಾನುಜೀಯ ಪಂಥದ ವೈಕುಂಠದಾಸರು ಚೆನ್ನಕೇಶವನನ್ನು ಚೆನ್ನಾಗಿ ಆಡಿಸಿದವರು. ಇಲ್ಲಿಗೆ ಹರಿದಾಸರ ಪರಂಪರೆಯ ಮೊದಲನೆಯ ಘಟ್ಟ ಮುಗಿಯುತ್ತದೆ. ನಂತರದ ನೂರು ವರುಷಗಳ ಮೇಲೆ ಬಂದ ಬಾಗಲಕೋಟೆಯ ಸಮೀಪದ ಕಾಖಂಡಕಿ ಗ್ರಾಮದ ವೆಂಕಪ್ಪ, ಪ್ರಸನ್ನ ವೆಂಕಟದಾಸರು, ಎಂದು ಪ್ರಖ್ಯಾತರಾದರು. ವೆಂಕಟೇಶನೆ ಇವರ ನಾಲಗೆಯಲ್ಲಿ ಪ್ರಸನ್ನ ವೆಂಕಟ ಎಂದು ಬರೆದ, ಅಂದೇ ಇವರಿಗೆ ಅಪರೋಕ್ಷ ಜ್ಞಾನವಾಯಿತು.

ಕ್ರಿ.ಶ. ೧೬೮೨ ರಲ್ಲಿ ಚೀಕಲ ಪರಿವಿಯಲ್ಲಿ ಜನ್ಮ ತಾಳಿ ಬಂದ ಮಹಾನು ಭಾವರೇ ವಿಜಯದಾಸರು. ಇವರು ಅಜ್ಞಾನ ತಿಮಿರ ಛೇದಕರು, ಬುದ್ಧಿ ಸಂಪತ್ಪ್ರದಾಯಕರು. ಇವರ ದರ್ಶನ, ಸ್ಪರ್ಶನ, ಸಂಭಾಷಣೆಗಳಿಂದ ಉದ್ಧೃತ ರಾದ ಹಲವಾರು ಮಂದಿ ಅಪರೋಕ್ಷ ಜ್ಞಾನಿಗಳ ಸರಮಾಲೆಯಲ್ಲಿ ಸೇರಿದವ

ರಾದರು. ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರು, ಶ್ರೀಮೋಹನದಾಸರು, ಹೆಳವನ ಕಟ್ಟೆ ಗಿರಿಯಮ್ಮ, ವಾಸುದೇವವಿಠಲದಾಸರು, ಪ್ರಾಣೇಶವಿಠಲರು, ಶ್ರೀದವಿಠಲದಾಸರು, ಶ್ರೀಶವಿಠಲದಾಸರು ಹೀಗೆ ದಾಸವೃಕ್ಷದ ವಿವಿಧ ಕೊಂಬೆಗಳು ಚಿಗುರಿದವು, ಹೂವರಳಿ ಕಾಯಾಗಿ ಹಣ್ಣು ದೊರೆತವು.

ಇಂತಹ ಶ್ರೇಷ್ಠವಾದ ಹರಿದಾಸ ಪರಂಪರೆಯಲ್ಲಿ ಬಂದು ತಮ್ಮ ಅಪಾರ ಗ್ರಂಥ ಸಮುದಾಯದಿಂದ ಸಾಹಿತ್ಯ ಸರಸ್ವತಿಯ ಆರಾಧನೆಯನ್ನು ಮಾಡಿ ತಮ್ಮ ಬಾಳನ್ನು ಬೆಳಗಿಸಿಕೊಂಡು ಪ್ರಾತಃಸ್ಮರಣೀಯರಾದವರು ಶ್ರೀಗುರುಗೋವಿಂದ ವಿಠಲದಾಸರು. ಅಂದು ಶ್ರೀವಿಜಯದಾಸರು ಶ್ರೀಗೋಪಾಲದಾಸರು ಶ್ರೀಜಗನ್ನಾಥದಾಸರು ಮಾಡಿದ ಸಮಾಜೋದ್ಧಾರದ ಕಾರ್ಯವನ್ನು ೨೦ನೇ ಶತಮಾನದ ಈ ರಾಕ್ಷಸೀ ಯುಗದಲ್ಲಿ ಕಲಿಯ ಪ್ರಭಾವದ ಈ ಅಧರ್ಮ, ರಾಜಕೀಯ ಜಂಜಾಟ ; ಸಂಸಾರ ತಾಪತ್ರಯಗಳು ; ಇಂತಹ ಪರಿಸರದಲ್ಲೂ ಜನರ ಮನಸ್ಸನ್ನು ಭಗವಂತನೆಡೆಗೆ ತಿರುಗಿಸಿದವರು. ತಾವು ಉದ್ಧಾರವಾಗುವುದಲ್ಲದೆ ಸುಮಾರು ೨೫೬ ಜನರಿಗೆ ಅಂಕಿತೋಪದೇಶ ಮಾಡಿ ದಾಸಕೂಟ ಪರಂಪರೆ ಅವಿಚ್ಛಿನ್ನವಾಗಿ ಮುಂದುವರೆಯುವಂತೆ ಮಾಡಿರುವವರು. ಮನೆಯಲ್ಲೆ ವಿಠಲನನ್ನು ಸ್ಥಾಪಿಸಿ ಮಂದಿರವನ್ನಾಗಿಸಿ ಶಿಷ್ಯರೆಲ್ಲರ ಆಧ್ಯಾತ್ಮಿಕ ಉನ್ನತಿಗೆ ಕೇಂದ್ರವೊಂದನ್ನು ಮಾಡಿದವರು, ಶ್ರೀಗುರುಗೋವಿಂದವಿಠಲ ದಾಸರು. ಸುಮಾರು ೪೦ ಕ್ಕೂ ಹೆಚ್ಚು ಸಂಪುಟಗಳನ್ನು ಪ್ರಕಟಿಸಿ ಅಪೂರ್ವ ಹರಿದಾಸರ ಜೀವನ ಕೃತಿಗಳನ್ನು ಬೆಳಕಿಗೆ ತಂದಿದ್ದಾರೆ. ಇವರ ಜೀವನ ಧನ್ಯ. ನಮಗೆಲ್ಲರಿಗೂ ಮಾನ್ಯ.

ಜನನ – ಬಾಲ್ಯ

ಶ್ರೀಪುರಂದರದಾಸರು ಪೂನಾದ ಬಳಿಯಲ್ಲಿ ಪುರಂದರ ಘಡ ಎಂಬಲ್ಲಿ ಶ್ರೀನಿವಾಸನಾಯಕನಾಗಿದ್ದರು ಎಂಬಂತೆ ಪೂನಾಗೆ ಸಮೀಪದ ಹಳ್ಳಿಯಲ್ಲಿ ಗುರು ಗೋವಿಂದವಿಠಲದಾಸರ ಪೂರ್ವಜರು ಇದ್ದರು. ಅಂದರೆ ದಾಸರು ಅಡ್ಡಾಡಿದ ಕ್ಷೇತ್ರಗಳಲ್ಲಿ ಇವರ ಪೂರ್ವಜರು ಅಡ್ಡಾಡಿದ್ದಾರೆ, ಧಾರ್ಮಿಕ ಚಟುವಟಿಕೆಗಳಿಗೆ ಹೆಸರಾದ ಕೋಡುಬಳೆ ಗೋವಿಂದರಾಯರು ಈ ವಂಶದ ಮೂಲ ಪುರುಷರು. ತಮ್ಮ ಕಿವಿಗಳಿಗೆ ಕೋಡು ಬಳೆ ಗಾತ್ರದ ಬಂಗಾರದ ಖಡಕನ್ನು ಹಾಕಿಕೊಂಡಿದ್ದರಿಂದ ಇವರಿಗೆ ಈ ಹೆಸರು ಬಂದಿತ್ತು. ಈ ವಂಶಜರು

ಕೆಲವು ಕಾಲದ ನಂತರ ಆಂಧ್ರಪ್ರದೇಶದ ಚಿತ್ತೂರನ್ನು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡರು. ಮೈಸೂರಿನ ಕಡೆ ಸಂಬಂಧ ಬೆಳೆಸಿದವರಾಗಿ ಮೈಸೂರನ್ನು ಸೇರಿದರು. ಈ ಸದ್ವಂಶದಲ್ಲಿ ಬಂದವರು ರಘುನಾಥರಾವ್ ಮತ್ತು ಲಕ್ಷ್ಮೀಬಾಯಿ ದಂಪತಿಗಳು. ಆಗ ಇವರ ವಾಸಸ್ಥಳ ಚಿಕ್ಕಮಗಳೂರು. ಒಮ್ಮೆ ಲಕ್ಷ್ಮೀಬಾಯಿ ಗರ್ಭಿಣಿಯಾಗಿದ್ದಾಗ ಇಭಾರಾಮಪುರದ ಅಪ್ಪಾವರ ಮಗ ಓಬಳಾಚಾರ್ಯರು ಬಂದರು. ಒಳ್ಳೆಯ ತೇಜಸ್ವಿ ಪುತ್ರ ಗರ್ಭದಲ್ಲಿ ಅಡಗಿರುವನೆಂಬ ವಿಚಾರ ಸಾಧ್ವೀಮಣಿಯ ತೇಜಸ್ಸಿನಿಂದಲೇ ವ್ಯಕ್ತವಾಗುತ್ತಿತ್ತು. ಓಬಳಾಚಾರ್ಯರು ಲಕ್ಷ್ಮೀಬಾಯಿಗೆ ಆಶೀರ್ವಾದ ಮಾಡಿ ಒಳ್ಳೇ ತೇಜಸ್ವೀ ಪುತ್ರನಾಗುತ್ತಾನೆ ಎಂದು ಹೇಳಿದರು. ಈ ವಿಚಾರಗಳನ್ನು ಶ್ರೀಗುರು ಗೋವಿಂದದಾಸರು ತಮ್ಮ ತಾಯಿಯನ್ನು ಸ್ತುತಿಸಿರುವ ಕೃತಿಯೊಂದರಲ್ಲಿ ತಿಳಿಸಿದ್ದಾರೆ.

ಶಿರಿರಂಗನಾಥಾಖ್ಯ । ವರಕುವರಗೀಯುತ್ತವರಲಗ್ನ
ಜರುಗಿಸಿರೆ । ದಾಂಪತ್ಯ ಸುಖದೊಳಗೆ
ಇರುತಿರಲು ಇಭರಾಮ । ಪುರದಮುನಿಸುತರ
ಬರವಾಯ್ತು ಚಿಕ್ಕಮಗಳೂರಿಗೆ ॥
ವರಮುನಿಯನುಗ್ರಹದ । ಲೋರ್ವಸುತನುದಯೆವನೆ
ನೆರೆತಿಳುಪಿ ಪೊರಮಡಲು । ಸತಿಯು ಲಕ್ಷ್ಮೀಬಾಯಿ ವರಕುವರಂ
ಪ್ರಸವಿಸುತ । ಸತಿಯೊಡನೆ ಸಂತಸದಿ ಕಾಲಕಳೆಯುತಿರಲು ॥

ದೊಡ್ಡವರ ಆಶೀರ್ವಾದದ ಫಲವಾಗಿ ದಾಸರು ಜನಿಸಿದ್ದು ಶಾ.ಶ. ೧೮೧೬ ಜಯ ನಾಮಸಂವತ್ಸರ ಶ್ರಾವಣ ಬಹುಳದ್ವಾದಶಿಯಂದು, ಅಂದರೆ ಕ್ರಿ.ಶ. ೨೮.೮.೧೮೮೪ ರಲ್ಲಿ ಜನಿಸಿದರು. ತಮ್ಮ ವಂಶದ ಮೂಲ ಪುರುಷರು ಗೋವಿಂದರಾಯರು ; ಅವರ ಸ್ಮರಣೆ ನಿರುತ ಬರಲಿ ಎಂದು ಮಗುವಿಗೆ 'ಗೋವಿಂದ' ಎಂದೇ ನಾಮ ಕರಣ ಮಾಡಿದರು.

'ಯಸ್ಯಾನುಗ್ರಹ ಇಚ್ಛಾಮಿ ತಸ್ಯ ವಿತ್ತಂ ಹರಾಮ್ಯಹಂ' ಯಾರಿಗೆ ನಾನು ಅನುಗ್ರಹಮಾಡಲು ಇಚ್ಛಿಸುತ್ತೇನೋ ಅವರ ವಿತ್ತ ಅಂದರೆ ಸಂಪತ್ತನ್ನು ಅಪಹರಿಸುತ್ತೇನೆ ಎಂಬುದು ಶ್ರೀಹರಿಯ ವಾಣಿ. ಅದಕ್ಕೆ ಅನುಸಾರವಾಗಿ ಬಡತನ ಇವರ ಬೆನ್ನುಹತ್ತಿತು. 'ಬಡತನ ಎಂಬುದು ಕಡೆತನಕ ಇರಲಿ' ಎಂದು ಹರಿದಾಸರು ಕೇಳುವಂತೆ ಪ್ರಾರಂಭದಿಂದಲೇ ಬಡತನದ ಬವಣೆಯಲ್ಲಿ

ಬಳಲಿದವರಿವರು. ಮೇಲಿಂದ ಮೇಲೆ ದುಃಖದ ಪರಂಪರೆಯೆ ಬಂದೊದಗಿತು. ಗೋವಿಂದ ನಾಲ್ಕು ವರುಷದವನಾಗಿದ್ದಾಗಲೇ ತಂದೆ ರಘುನಾಥರಾಯರು ವಿಧಿವಶರಾದರು. ಲಕ್ಷ್ಮೀಬಾಯಿಗೆ ಇದು ದೊಡ್ಡ ಆಘಾತ. ಒಂದು ಕಡೆ ಪತಿ ವಿಯೋಗ ಮತ್ತೊಂದು ಕಡೆ ಸುತನ ಆರೈಕೆ. ದಾಯಾದಿಗಳ ಮನೆಯಲ್ಲಿ ದುಡಿಯುವ ಪ್ರಸಂಗ ಬಂದಿತು. ಆ ಕಾಲದಲ್ಲಿ ಮಾರಿಕಣಿವೆಯಲ್ಲಿ ಇರಬೇಕಾದ ಪ್ರಸಂಗ ಬಂತು. ಆಗ ಲಕ್ಷ್ಮೀಬಾಯಿ ಬಹಳ ಕಷ್ಟಪಟ್ಟಿದ್ದಾಳೆ ಎಂಬ ವಿಚಾರ ದಾಸರ ಕೃತಿಯಿಂದಲೇ ತಿಳಿದು ಬರುತ್ತದೆ.

ನಾಲ್ಕಾರು ವರುಷಗಳು । ದಾಯಾದ್ಯರೊಳುದುಡಿದು
ನಾಲ್ಕೆಂಟು ಕಡುಕ್ರೂರ । ವಾಕ್ಕುಗಳ ಸಹಿಸುತ್ತ
ಪ್ರಾಕ್ಕುಕರ್ಮದ ಫಲವ । ಮುಕ್ಕಲೇ ಬೇಕೆಂಬ
ವಾಕ್ಕುಗಳ ಮನ್ನಿಸುತಲೀ

ನಾಲ್ಕಾರುವರ್ಷಗಳ ಕಾಲ ದಾಯಾದಿಗಳ ಮನೆಯಲ್ಲಿ ಜೀವನ ನಿರ್ವಹಣೆಗಾಗಿ ದುಡಿದು ಹೀನಾಯವಾದ ಮಾತುಗಳಿಗೆ ಕಿವುಡಿಯಂತಿದ್ದು, ಮಗನ ಪುರೋಭಿವೃದ್ಧಿಗೆ ಮುಂದಾದವಳೀಕೆ. ಗೋವಿಂದನ ದೊಡ್ಡಪ್ಪನ ಮನೆ ಹೆಗ್ಗಡದೇವನಕೋಟೆಯಲ್ಲಿತ್ತು. ಅಲ್ಲಿರುವ ಕಾಲದಲ್ಲಿ ಗೋವಿಂದನಿಗೆ ಹನ್ನೊಂದು ವರುಷ ತುಂಬಿತ್ತು. ಆ ಕಾಲದಲ್ಲಿ ಉಪನಯನ ಸಂಸ್ಕಾರವಾಗಿ ಗಾಯತ್ರಿ ಮಂತ್ರೋಪದೇಶವಾಯಿತು. ಗಾಯತ್ರಿಯ ಜಪದಿಂದ ಗೋವಿಂದನ ತೇಜಸ್ಸು ವೃದ್ಧಿಸಿತು. ಆದರೆ ಕುಲ ಬಂಧುಗಳ ಕಠೋರವಾದ ನುಡಿಗಳಿಂದ ಮನೆ ಬಿಡಬೇಕಾದ ಪ್ರಸಂಗ ಬಂದಿತು. ದಾರಿ ತೋರದಾಯಿತು. ನೊಂದ ಲಕ್ಷ್ಮೀಬಾಯಿ ಮಗನನ್ನು ಕರೆದುಕೊಂಡು ಧ್ರುವವರದನನ್ನು ಸ್ಮರಿಸುತ್ತಾ ಬರುತ್ತಿರಲು ಅಪರಿಚಿತರೊಬ್ಬರು ಸಹಾಯಕ್ಕೆ ಕೈಚಾಚಿದರು. ಬಂಧುಗಳು ಆದವರು ಬಂದುಂಡು ಹೋಗುವರು ಬಂಧನವ ಕಳೆಯಲರಿವರೇ 'ಎಂಬಂತೆ ನಿಜವಾದ ಬಂಧು ಆಪದ್ಬಂಧು' "ಉಂಟಾದ ಕಾಲಕ್ಕೆ ನೆಂಟರು ಇಷ್ಟರು. ಉಂಟು ತಪ್ಪಿದ ಬಳಿಕ ಒಣಹೆಂಟೆಯಲಿ ಮುಚ್ಚುವರು" ಎಂಬಂತೆ ತನ್ನವರೆಲ್ಲಾ ಇವರನ್ನು ಕೈಬಿಟ್ಟರೂ ಇವರನ್ನು ಸಾಕುವ ಪುಣ್ಯ ಮತ್ತೊಬ್ಬರಿಗೆ ಕರುಣಿಸಿದ ಶ್ರೀಹರಿ. ನವರತ್ನ ರಾಮರಾಯರು ಎಂಬ ಇಂಜಿನಿಯರರ ಪತ್ನಿ ತಾಯಿ ಮಗನಿಗೆ ಒದಗಿದ ದುಸ್ಥಿತಿಗಾಗಿ ಮರುಗಿ ತಮ್ಮ ಮನೆಯಲ್ಲಿ ಆಶ್ರಯ ನೀಡಿದರು. ಇದನ್ನು ಸಹ ಗುರುಗೋವಿಂದದಾಸರು ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ.

ನೂಕುತಿರೆ ಕೆಲಕಾಲ । ತೋಕಗಾಯ್ತುಪನಯನ
ಕಾಕು ಮಾತುಗಳಾಡಿ । ನೂಕಲೂ ಗೃಹದಿಂದ ಆ ಕುಮಾರನ
ಧ್ರುವನ ನೂಕಿದಾ ಪರಿಯಾಯ್ತು ಎಂದೆನುತ ಹೊರ ಹೊರಡಲು

ಧ್ರುವವರದನನಂಘ್ರಿಯನೆ । ಪವಿತರದಮನದಿ ಸುಸ್ತವನ ಗೈಯುತೆ ಬರಲು ।
ದಿನದಲ್ಲಿ ಪೊಳಲೊಳಗೆ ನವರತುನದ ಕುಲ ಬಂಧು । ನವವೆರಡು ವಯಸ್ಸಿನ
ಕುವರನು ಮಾತೆಯೊಡನೆ ಸವಿನುಡಿಯಲಾದರಿಸಿ ತವಕದಲಿ ಸಲಹುತಿರೆ ।

ಇದು ಶ್ರೀಹರಿಯ ವ್ಯಾಪಾರ ಎಂದು ಅರಿತರು. ಆಗ ಗೋವಿಂದನಿಗೆ ೧೮ ವರ್ಷ ವಯಸ್ಸು. ನವರತ್ನ ರಾಮರಾಯರದು ಸಂಪ್ರದಾಯಬದ್ಧ ಮನೆತನ. ಆರಾಧನೆ, ಪ್ರವಚನ, ಭಜನೆ ಮುಂತಾದ ಧಾರ್ಮಿಕ ಚಟುವಟಿಕೆಗಳು ಸದಾ ಅವರ ಮನೆಯಲ್ಲಿ ನಡೆಯುತ್ತಿದ್ದವು. ಈ ಧಾರ್ಮಿಕ ಪರಿಸರ ಗೋವಿಂದನ ಮನೋವಿಕಾಸಕ್ಕೆ ತುಂಬ ಪುಷ್ಟಿ ನೀಡಿತು. ಕಷ್ಟ ಸಹಿಷ್ಣುತೆ, ನಿಯಮ ಪಾಲನೆ ಸಾತ್ವಿಕ ನಿಷ್ಠೆ ಇವೆಲ್ಲಕ್ಕೂ ಗೋವಿಂದನೇ ಆಶ್ರಯನೆನಿಸಿದನು.

ಬಾಲ್ಯದಲ್ಲಿ ತುಂಬ ಚಟುವಟಿಕೆ, ಆಟಪಾಟಗಳಲ್ಲಿ ಆಸಕ್ತಿ, ಓಡುವುದು, ಜಿಗಿಯುವುದು ಮುಂತಾದ ಸ್ಪರ್ಧೆಗಳಲ್ಲಿ ಉತ್ತಮ ಆಟವಾಡಿ ಬಹುಮಾನಿತನಾಗುತ್ತಿದ್ದ. ನಾಟಕಾಭಿನಯ, ಕಂಠಪಾಠಗಳಲ್ಲೂ ಮುಂದು. ಗೋವಿಂದ ಓದಿನಲ್ಲೂ ಮುಂದು, ಕ್ರಮಬದ್ಧ ವ್ಯಾಸಂಗ. ಎಲ್ಲ ತರಗತಿಗಳಲ್ಲೂ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದುತ್ತಿದ್ದ. ಎಸ್.ಎಸ್.ಎಲ್.ಸಿ. ಆದನಂತರ ನಾಲ್ಕಾರು ಜನರ ಸಲಹೆಯಂತೆ ಇಂಜಿನಿಯರ್ ಆಗುವ ಬಯಕೆ. ಮದರಾಸಿನಲ್ಲಿ ಇರುವ ಇಂಜಿನಿಯರಿಂಗ್ ಕಾಲೇಜಿಗೆ ಅರ್ಜಿಯನ್ನು ಹಾಕಿದ. ಸೀಟೂ ದೊರೆಯಿತು. ಆದರೆ ಕಣ್ಣಲ್ಲಿ ಕಣ್ಣಿಟ್ಟು ಸಾಕಿದ ಕಣ್ಮಣಿಯನ್ನು ಕಂಡರಿಯದ ಊರಿಗೆ ಏಕಾಂಗಿಯಾಗಿ ಕಳಿಸಲು ಲಕ್ಷ್ಮೀಬಾಯಿ ಒಪ್ಪಲಿಲ್ಲ. ತಾಯಿಯ ಕಣ್ಣೀರನ್ನು ಕಂಡು ಸಹಿಸದೆ ತನ್ನ ಆಸೆಯನ್ನೇ ಚಿವುಟಿ ಹಾಕಿದ ಗೋವಿಂದ.

ಮುಂದೆ ಸಬ್ ಓವರ್ಸಿಯರ್ ಹುದ್ದೆಗಾಗಿ ತರಬೇತಿ ಪಡೆದ ಲೋಕೋಪಯೋಗಿ ಇಲಾಖೆಯಲ್ಲಿ ಉದ್ಯೋಗವೂ ದೊರೆಕಿತು. ಸಬ್ ಓವರ್ಸಿಯರ್ ಆಗಿ ನೇಮಕಗೊಂಡ. ಗೋವಿಂದನ ತಾಯಿ ಲಕ್ಷ್ಮೀಬಾಯಿ ತೃಪ್ತಿಯ ನಗೆ ನಕ್ಕಳು. ಇದುವರೆಗೆ ಪಟ್ಟ ಕಷ್ಟಗಳನ್ನೆಲ್ಲ ಮರೆತಳು. ದೈವ ಕೃಪೆಯಿಂದ ಮುಂದೆ ಬಂದ ಮಗನನ್ನು ಕಣ್ತುಂಬ ನೋಡುತ್ತ ಆ ಮಾತೃಹೃದಯ ಆನಂದಪಟ್ಟಿತು. "ತಂದೆಯಿಲ್ಲದ ಭಾವ ತಿಳಿಸದೆ ಇಂದು

ಎನ್ನನು ಪೋಷಿಸಿದ ನೀತಂದೆತಾಯಿಯು ಬಂಧು ಬಳಗವು ಸರ್ವ ಕಾಲದಲೀ'' ಎಂದು ತಾಯಿಯ ಸೇವೆಯನ್ನು ಮನಮುಟ್ಟಿ ಮಾಡುತ್ತಾ ಮಾತೃದೇವೋಭವ ಎಂಬ ನಮನದ ನುಡಿಯನ್ನು ಅನ್ವರ್ಥಗೊಳಿಸಿದ ಗೋವಿಂದ.

ಗೃಹಸ್ಥ ಜೀವನ

ಲೋಕೋಪಯೋಗಿ ಇಲಾಖೆ ಲೌಕಿಕವಾಗಿ ಒಂದಾದರೆ ಲೋಕೋಪಯೋಗಕ್ಕಾಗಿಯೇ ಇವರನ್ನು ಶ್ರೀಹರಿ ನಿಯಮಿಸಿದನೆಂಬಂತೆ ಕೆಲಸವು ಒಂದೇ ಕಡೆ ಖಾಯಂ ಆಗಿರದೆ ಆಗಾಗ ವರ್ಗಾವಣೆಯಾಗುತ್ತಿತ್ತು. "ದೇಶ ಸುತ್ತು ಕೋಶ ಓದು" ಎಂಬಂತೆ ಸರ್ಕಾರದವರು ನಾಲ್ಕಾರು ಊರುಗಳನ್ನು ಸುತ್ತಲು ಅವಕಾಶ ಕೊಟ್ಟಿರುವಾಗ ಸುತ್ತೋಣವಮ್ಮಾ ಎಂದು ಕಾರ್ಯ ನಿರ್ವಹಣೆ ಮಾಡುತ್ತಿದ್ದರು. ಇನ್ನು ಇವನಿಗೆ ಮದುವೆ ಮಾಡಬೇಕೆಂಬ ಬಯಕೆ ಲಕ್ಷ್ಮೀಬಾಯಿಗೆ ಸಹಜವಾಗಿ ಮೂಡಿತು.

ತಾಯಿಯು ಮಗನಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದರು. ತಾಯಿಯ ಬಯಕೆಗೆ ಒಪ್ಪಿಗೆ ಸೂಚಿಸಿದರು. ಮೈಸೂರಿನಲ್ಲಿ ವಾಸವಾಗಿದ್ದ ಯಾದವ ಮೂರುತಿರಾಯರ ಮಗಳಾದ ಕೃಷ್ಣವೇಣಿ ಎಂಬ ಕನ್ಯಾಮಣಿಯನ್ನು ತಂದು ಲಗ್ನ ಮಾಡಿದರು ; ಅತ್ತೆಯ ಮನೆಯಲ್ಲಿ ಆಕೆಯನ್ನು ತುಳಸಮ್ಮ ಎಂಬುದಾಗಿ ಕರೆದರು. ತಂದೆಯಿಲ್ಲದ ಬಾಲಕನಿಗೆ ಆ ಕೊರತೆಯ ಅರಿವಾಗದಂತೆ ನವರತ್ನ ರಾಮರಾಯರು ವಿದ್ಯಾ ಬುದ್ಧಿ ಕಲಿಸಿ ಪೋಷಣೆಮಾಡಿ ಮದುವೆಯನ್ನೂ ಮಾಡಿಸಿದರು. ದಂಪತಿಗಳು ರಾಮರಾಯರ ಮನೆಯನ್ನು ಬಿಟ್ಟು ತಮಗೆ ಕೆಲಸವಿದ್ದ ಕಡೆ ಮನೆಮಾಡಿ ಜೀವನ ನಡೆಸುತ್ತಿದ್ದರು.

ಕನ್ನಂಬಾಡಿಯಲ್ಲಿ ನಾಲ್ಕು ವರ್ಷಗಳ ಕಾಲ ಇರುವ ಸಮಯದಲ್ಲಿ ಇವರ ಗೃಹಸ್ಥ ಜೀವನದ ಆದಿಭಾಗ. ಸರಸಿಜಾಕ್ಷಿಯ ಕೂಡಿ ಸರಸವಾಡುತ ಸಂಸಾರ ಸಾಗರವನ್ನು ಆನಂದದಿಂದ ನಿರ್ವಹಿಸುತ್ತಾ, ಇದ್ದರು. ಮನೆಯಲ್ಲಿ ನಿತ್ಯ ದೇವರ ಪೂಜೆ ವೈಶ್ವದೇವ, ಅತಿಥಿಸೇವಾ ಎಲ್ಲ ಕಾರ್ಯಗಳಲ್ಲಿ ಸಹಧರ್ಮಿಣಿ ಎನಿಸಿ ತುಳಸಮ್ಮ ಪತಿವ್ರತಾ ಶಿರೋಮಣಿಯರಿಗೆ ಆದರ್ಶಪ್ರಾಯಳಾಗಿದ್ದಳು. ಗೋವಿಂದರಾಯರ ಮನೆ ತುಂಬಿದ ತುಳಸಮ್ಮವರ ನಡೆ ನುಡಿ ಅವರ ಮನವನ್ನೂ ತುಂಬಿಸಿತು. ಒಬ್ಬರ ನಂತರ ಒಬ್ಬರಂತೆ ಇಬ್ಬರು ಹೆಣ್ಣು ಮಕ್ಕಳು ಹುಟ್ಟಿದರು. ಇವರ ಕಾರ್ಯವ್ಯಾಪ್ತಿ

ಕನ್ನಂಬಾಡಿಯಿಂದ ನಾಗಮಂಗಲದ ಬಳಿ ಇರುವ ಬೆಳ್ಳೂರು, ಚಿಕ್ಕಬಳ್ಳಾಪುರ, ಕೋಲಾರ ಇಲ್ಲೆಲ್ಲ ಪಸರಿಸಿತು.

ನಾಗಮಂಗಲದ ಬಳಿ ಬೆಳ್ಳೂರಿನಲ್ಲಿದ್ದಾಗ ಅವರಿಗೆ ಇಬ್ಬರು ಗಂಡು ಮಕ್ಕಳ ಜನನ. ಮಂತ್ರಾಲಯಕ್ಕೆ ಹೋಗಿ ಅಲ್ಲಿ ಗುರುರಾಜರ ಸೇವೆ ಭಕ್ತಿಯಲಿ ಮಾಡಿ ಅನುಗ್ರಹೀತರಾಗಿದ್ದ ಕಾರಣ ಒಬ್ಬನಿಗೆ ಗುರುರಾಜನೆಂದೂ, ಮತ್ತೊಬ್ಬನಿಗೆ ಕ್ಷೇತ್ರ ಮೂರುತಿ ಮಾಧವರಂಗನ ಹೆಸರನ್ನಿಡಲು ಯೋಚಿಸಿ ಮಾಧವ ಎಂಬ ಹೆಸರನ್ನೇ ಕರೆದರು.

ಅಲ್ಲಿ ವೈಷ್ಣವರು ಹೆಚ್ಚು ಜನ ಇಲ್ಲದ ಕಾರಣ ಶ್ರಾದ್ಧ ಮಂತ್ರಗಳನ್ನು ಅರಿತು ಬ್ರಾಹ್ಮಣರಲ್ಲಿ ಪಿತೃಕಾರ್ಯಗಳನ್ನೂ ಮಾಡಿಸಿದರು. ಜೊತೆಗೆ ಸಣ್ಣ ಪುಟ್ಟ ಶುಭಕಾರ್ಯಗಳನ್ನೂ ಮಾಡಿಸುತ್ತಿದ್ದರು.

ಈ ಮಧ್ಯೆ ಶಾಸ್ತ್ರ ಗ್ರಂಥಗಳನ್ನು ಆದರದಿಂದ ಕಂಡು ವೈಷ್ಣವನಾಗಿ ಜನಿಸಿದ ಮೇಲೆ ಸರ್ವಮೂಲ ಗ್ರಂಥಗಳನ್ನು ಅಭ್ಯಾಸ ಮಾಡಬೇಕೆಂಬ ಆಸೆ ಬಲವತ್ತರವಾಯಿತು. ೧೯೩೮ ರಲ್ಲಿ ಮೊಳಕಾಲ್ಮೂರು ಚಿಕ್ಕೇರಹಳ್ಳಿ ಮಧ್ವೇಶದಾಸರಲ್ಲಿ ಶಾಂತಿ ಪಾಠದಿಂದಲೇ ಪ್ರಾರಂಭಿಸಿ ಅಧ್ಯಯನ ನಡೆಸಿದರು. ನಂತರ ಮೈಸೂರು ನಂದಗುಡಿ ನರಸಿಂಹಮೂರ್ತಿರಾಯರಲ್ಲಿ ಸೂತ್ರಭಾಷ್ಯಗಳ ಅಭ್ಯಾಸವನ್ನು ಮಾಡಿದರು. ಗೋವಿಂದರಾಯರು ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ ಹೊತ್ತು ಹೋದರೆ ಮತ್ತೆ ಬಾರದು ಎಂಬ ನುಡಿ ಅವರಲ್ಲಿ ಜಾಗೃತವಾಗಿತ್ತು ಯಾವಾಗಲೂ ಧಾರ್ಮಿಕ ಗ್ರಂಥಗಳ ಅವಲೋಕನ, ಆಧ್ಯಾತ್ಮ ಚಿಂತನೆ ಅವರ ಜೀವನದ ಉಸಿರಾಗಿತ್ತು. ಮನೆಯಿಂದ ಕಛೇರಿಗೆ ಕೆಲಸಕ್ಕೆ ತೆರಳುವಾಗಲೂ ಒಂದು ದೊಡ್ಡ ರೊಟ್ಟನ್ನು ಹ್ಯಾಂಡಲ್ಲಿಗೆ ಸಿಕ್ಕಿಸಿ ಅದಕ್ಕೆ ಹರಿ ಕಥಾಮೃತಸಾರದ ಪದ್ಯಗಳನ್ನು ಬರೆದು ಅಂಟು ಹಾಕಿಕೊಂಡು ಎಲ್ಲ ಸಂಧಿಗಳನ್ನೂ ಕಂಠಪಾಠ ಮಾಡಿದ ಮಹಾನ್ ವ್ಯಕ್ತಿ ಗೋವಿಂದರಾಯರು.

ನಾಲ್ಕು ಹೆಣ್ಣು ಮತ್ತು ಐದುಗಂಡು ಮಕ್ಕಳ ತುಂಬಿದ ಕುಟುಂಬದವರಾದರು. ತುಂಬಿದ ಸಂಸಾರದಲ್ಲಿದ್ದರೂ ಅವರು ಇರುತ್ತಿದ್ದ ಎಲ್ಲ ಊರುಗಳಲ್ಲಿಯೂ ಅಲ್ಲಿಯ ವೈಷ್ಣವರನ್ನೆಲ್ಲಾ ಕಲೆಹಾಕಿ ಮಧ್ವನವಮಿ, ರಾಯರ ಆರಾಧನೆ ಮುಂತಾದ ಉತ್ಸವಗಳನ್ನು ಮಾಡುತ್ತಿದ್ದರು. ತಾವೇ ಪುರಾಣ ಪುಣ್ಯ ಕಥೆಗಳನ್ನು ಶ್ರವಣ ಮಾಡಿಸುತ್ತಿದ್ದರು.

೧೯೩೯ ರಲ್ಲಿ ಗೋವಿಂದರಾಯರಿಗೆ ಹಾಸನಕ್ಕೆ ವರ್ಗವಾಯಿತು. ಹಾಸನದ ಜೀವನ ಗೋವಿಂದರಾಯರನ್ನು ಸಂಪೂರ್ಣ ಹರಿದಾಸರನ್ನಾಗಿ ಮಾಡಿತು. ಕಾರಣ ಇವರ ಸಮಕಾಲೀನ ಹರಿದಾಸರ ಸಂಪರ್ಕ ಇವರಿಗಾಯಿತು.

ಸಮಕಾಲೀನ ಹರಿದಾಸರು

ಉರಗಾದ್ರಿ ವಿಠಲದಾಸರು : ಇವರ ಸ್ಥಳ ಚಿತ್ರದುರ್ಗ. ಜನ್ಮನಾಮ ಶ್ರೀನಿವಾಸರಾಯರು. ಉತ್ತಮ ವೈಷ್ಣವ ದೀಕ್ಷೆ ಉಳ್ಳವರಾಗಿದ್ದು ಶಾಲೆಯ ಶಿಕ್ಷಕರಾಗಿ ಗುಡಿಸಿಲಿನಲ್ಲಿ ವಾಸ ಮಾಡುತ್ತಿದ್ದರು. ಪ್ರಾಣದೇವರ ಅರ್ಚಕರಾಗಿ ಏಕಾದಶೀ ಜಾಗರ ಹರಿಭಜನೆಗಳಲ್ಲಿ ಪ್ರಸಿದ್ಧರಾಗಿದ್ದು ಭಜನೆ ಶ್ರೀನಿವಾಸರಾಯರು ಎಂದೇ ಜನಪ್ರಿಯರಾಗಿ ಇದ್ದರು. ವೆಂಕಟೇಶನ ಭಕ್ತರಾಗಿ ವೆಂಕಟೇಶ ಎಂಬ ಸ್ವಪ್ರೇರಿತವಾದ ಅಂಕಿತದಿಂದ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಪರಮಪ್ರಿಯ ಸುಬ್ಬರಾಯದಾಸರು ಇವರ ಯೋಗ್ಯತೆ ತಿಳಿದಿದ್ದು ಇವರಿದ್ದೆಡೆಗೇ ಬಂದು ಮಾತನ್ನಾಡಿ ತಮ್ಮ ವಾದ ಸರಣಿಯಿಂದ ಇವರ ಒಲವನ್ನು ದಾಸದೀಕ್ಷೆಯ ಕಡೆ ತಿರುಗಿಸಿ 'ಉರಗಾದ್ರಿವಾಸ ವಿಠಲ' ಎಂಬ ಅಂಕಿತ ನೀಡಿದರು. ಪರಮಪ್ರಿಯರ ಉತ್ತರಾಧಿಕಾರಿಗಳೇನೋ ಎಂಬಂತೆ ಅವರಿದ್ದಾಗಲೇ ಅವರ ಅನುಮತಿಯಿಂದ ಹತ್ತಾರು ಜನರಿಗೆ ಅಂಕಿತೋಪದೇಶ ಮಾಡಿದವರು. ಅಪೂರ್ವವಾದ ಇವರ ಕೃತಿಗಳಲ್ಲಿ ತತ್ವಪೂರ್ಣ ವಿಚಾರಗಳು ತುಂಬಿ ತುಳುಕುತ್ತಿವೆ. ತತ್ವನ್ಯಾಸ, ಮಾತೃಕಾನ್ಯಾಸ, ಪಂಚಮುದ್ರಾಧಾರಣೆಯಂತಹ ಕ್ಲಿಷ್ಟ ವಿಚಾರಗಳನ್ನು ಸಹ ಸುಲಭವಾಗಿ ತಮ್ಮ ಪದ್ಯಗಳಲ್ಲಿ ರಚಿಸಿ ಹರಿದಾಸ ಸಾಹಿತ್ಯದ ಅಪೂರ್ವ ಕೊಡುಗೆ ನೀಡಿದ್ದಾರೆ. ದಾಸರು ಚಿತ್ರಕಲೆಯಲ್ಲೂ ನುರಿತವರಾಗಿದ್ದರು. ಇವರು ಬರೆದ ದೇವರ ಚಿತ್ರಗಳು ಇಂದಿಗೂ ಅಲ್ಲಲ್ಲಿ ಇವೆ.

ತಂದೆ ವೆಂಕಟೇಶವಿಠಲದಾಸರು

ಮೂಲತಃ ರಾಯದುರ್ಗದವರಾದರೂ ಚಿತ್ರದುರ್ಗದವರೆಂದು ಖ್ಯಾತರಾದ ಆರ್. ರಾಮಚಂದ್ರರಾಯರ ತಂದೆ ವೆಂಕಟೇಶವಿಠಲ ದಾಸರೆಂದು ಖ್ಯಾತಿ ಹೊಂದಿದವರು. ಉನ್ನತ ಪದವೀಧರರೂ, ವೃತ್ತಿಯಲ್ಲಿ ಅಧ್ಯಾಪಕರೂ ಆಗಿದ್ದರು. ಈ ದಾಸರಿಗೆ ಅಂಕಿತ ಪ್ರಾಪ್ತಿ ದೈವೀ ಪ್ರಸಾದದಿಂದ ಸ್ವಪ್ನ ದ್ವಾರಾ ಆದುದು ಎಂದಿದೆ. ಆದರೂ ಉರಗಾದ್ರಿವಿಠಲದಾಸರಲ್ಲಿ ತಂದೆ

ಮುದ್ದುಮೋಹನ ವಿಠಲದಾಸರಲ್ಲಿ ಇವರಿಗೆ ಗುರು ಭಾವನೆ ಇತ್ತು. ಅನೇಕ ಅಭಿಮಾನಿಗಳು ಇವರ ಶಿಷ್ಯರಾಗಬಯಸಿದರೂ ಸಹ ಅಂಕಿತ ನೀಡಲಿಲ್ಲ. ಇದು ಇವರ ಗುಪ್ತ ಸಾಧನೆಯ ಸಾಕ್ಷಿ. ಸುಮಾರು ೭೫ ವರ್ಷ ಸಾರ್ಥಕ ಜೀವನ ನಡೆಸಿ ೧೪.೭.೧೯೮೨ ರಲ್ಲಿ ಹರಿಪಾದ ಸೇರಿದವರು.

ಶ್ರೀಜಯೇಶವಿಠಲದಾಸರು

ಕಟ್ಟೆಮನೆ ಎಂದೇ ಪ್ರಸಿದ್ಧವಾಗಿರುವ ಮೈಸೂರಿನಲ್ಲಿರುವ ಹರಿದಾಸರ ಕೇಂದ್ರ ಸ್ಥಾಪನೆ ಮಾಡಿದ ಅಟ್ಟಾಜಿ ವೆಂಕಟರಾಯರೇ ಜಯೇಶ ವಿಠಲದಾಸರು. ಒಂದು ಕಾಲದಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿ ಮೆರೆದವರು. ಮೋಹನದಾಸರ ಪೀಳಿಗೆಯಲ್ಲಿ ಬಂದು ವಿಜಯರಾಮಚಂದ್ರದಾಸರ ಶಿಷ್ಯರಾಗಿ ಜಯೇಶ ವಿಠಲದಾಸರಾಗಿ ದಾಸಕೂಟವನ್ನು ರೂಪಿಸಿ ಹಲವಾರು ಕೀರ್ತನೆಗಳನ್ನು ಹಾಡಿ ಸೇವೆ ಮಾಡಿರುವವರು. ದಾಸರ ನಿಕಟ ವರ್ತಿಗಳಿಗೆ ಮಾತ್ರ ಇವರ ಕೃತಿಗಳು ಲಭ್ಯವಾಗಿವೆ. ದಾಸರು ಸುಮಾರು ಇಪ್ಪತ್ತೈದು ಜನರಿಗೆ ಅಂಕಿತ ಪ್ರದಾನ ಮಾಡಿದ್ದಾರೆ. ಈ ದಾಸರ ಕಟ್ಟೆಮನೆಯೇ ಈಗ ವೇಣುಗೋಪಾಲ ಸ್ವಾಮಿಯ ಕೃಷ್ಣನ ದಿವ್ಯ ದೇವಾಲಯವಾಗಿದೆ. ಸಂಪ್ರದಾಯಾನುಸಾರವಾಗಿ ಮಧ್ವನವಮಿ ಟೀಕಾರಾಯರ ಆರಾಧನೆ, ಅಪ್ಪಾವರ ಆರಾಧನೆ ನಡೆಯುತ್ತಿದೆ. ಈ ದಾಸರು ಎಂಭತ್ತೆರಡು ವರುಷಗಳ ತುಂಬು ಜೀವನ ನಡೆಸಿ ಕ್ರಿ.ಶ. ೨೧.೫.೧೯೩೨ ರಲ್ಲಿ ಹರಿಪಾದ ಸೇರಿದರು.

ಇನ್ನು ಈ ಕಾಲದಲ್ಲಿದ್ದ ತಂದೆ ಮುದ್ದುಮೋಹನ ದಾಸರ ವಿಚಾರವನ್ನು ಈಗಾಗಲೇ ತಿಳಿಸಿದೆ. ಇವರೆಲ್ಲರ ಪ್ರಭಾವದಿಂದ ಗೋವಿಂದರಾಯರಿಗೆ ದೀಕ್ಷೆ ಹೊಂದಬೇಕೆಂಬ ಹಂಬಲ ಹೆಚ್ಚಾಯಿತು. ಜಗನ್ನಾಥ ದಾಸರಿಂದ ಅನುಗ್ರಹೀತ ರಾಗಿ ಸ್ವಪ್ನ ದ್ವಾರಾ ಶ್ಯಾಮಸುಂದರ ವಿಠಲ ಎಂಬ ಅಂಕಿತ ಪಡೆದು, ಸರಳ ವಾದ ಶೈಲಿಯಲ್ಲಿ ಅನೇಕ ಕೃತಿಗಳನ್ನು ರಚಿಸಿದ ಮಾನ್ವಿ ಗುಂಡಾಚಾರ್ಯರ ಸ್ನೇಹವೂ ದಾಸರಿಗೆ ಇತ್ತು. ಇವರ ಪ್ರಭಾವವೂ ಗೋವಿಂದರಾಯರ ಮೇಲೆ ಆಗದಿರಲಿಲ್ಲ.

ಅಂಕಿತ ಸ್ವೀಕಾರ

ಅಂಕಿತೋಪದೇಶವನ್ನು ಹೊಂದಿ ಜನ್ಮವನ್ನು ಸಾರ್ಥಕ ಮಾಡಿ ಕೊಳ್ಳಬೇಕೆಂಬ ಬಯಕೆ ಗೋವಿಂದರಾಯರಿಗೆ ಬಲವತ್ತರವಾಯಿತು.

ರಾಮಚಂದ್ರರಾಯರ ಸಲಹೆಯಂತೆ ಹರಿಪ್ರೇರಣೆಯಂತೆ ದೇವರಾಯನ ದುರ್ಗದ ಪರಮಪ್ರಿಯ ಸುಬ್ಬರಾಯ ದಾಸರಿಂದ ಅಂಕಿತೋಪದೇಶ ಪಡೆಯಲು ನಿಶ್ಚಯಿಸಿದರು.

ಪರಮಪ್ರಿಯ ಸುಬ್ಬರಾಯದಾಸರು ದೇವರಾಯನ ದುರ್ಗದ ಶ್ರೀ ನರಸಿಂಹ ದೇವರ ಸನ್ನಿಧಿಯಲ್ಲಿ ದಾಸಕೂಟ ಸಭೆಯನ್ನು ಸ್ಥಾಪಿಸಿ ಸಾವಿರಕ್ಕೂ ಮೀರಿದ ಸಾತ್ವಿಕರಿಗೆ ಅಂಕಿತೋಪದೇಶ ನೀಡಿ ಸಾಧನೆಯ ಮಾರ್ಗತೋರಿದ್ದರು. 'ಪರಮಾರ್ಥ ಚಂದ್ರೋದಯ' ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರು.

೧೯೪೦ ರಲ್ಲಿ ಗೋವಿಂದರಾಯರು ದೇವರಾಯನದುರ್ಗಕ್ಕೆ ಹೊರಟು ನಿಂತರು. ರಾಮಚಂದ್ರರಾಯರಿಂದ ದಾಸರ ಭವ್ಯ ವ್ಯಕ್ತಿತ್ವವನ್ನು ತಿಳಿದ ಗೋವಿಂದರಾಯರಿಗೆ ದಾಸರನ್ನು ಪ್ರತ್ಯಕ್ಷ ನೋಡುವ ಕಾತುರತೆ ಇಮ್ಮಡಿಸಿತು. ಅವರಿಗೆ ಎಂದು ಶರಣಾದೇನೋ ಎಂಬುವ ಮನದ ಮಿಡಿತ ; ಬಂದರು. ದೇವರಾಯನ ದುರ್ಗದಲ್ಲಿ ರಥೋತ್ಸವ ಸಂದರ್ಭ, ದಾಸಕೂಟ ಸಭಾದಲ್ಲಿ ಸುಂದರೇಶ ಪ್ರಾಣ ದೇವರ ಪ್ರತಿಷ್ಠಾಪನೆಯ ಸಿದ್ಧತೆ ಬೇರೆ. ಇಂತಹ ಸಂದರ್ಭದಲ್ಲಿ ದಾಸರನ್ನು ಕಂಡರು.

ದಾಸರು ಆಜಾನುಬಾಹುಗಳು, ಉದ್ದನೆಯ ನಿಲುವು, ನಿಲುವಂಗಿ, ಅಂತರಂಗದ ವ್ಯಾಪಾರವನ್ನು ಅರಿಯಬಲ್ಲ ಅವರ ದೃಷ್ಟಿ, ತೇಜಸ್ವೀವದನ, ಮಂದಹಾಸದ ನಗೆ ಇವರೇ ನಿನ್ನ ಗುರು ಎಂದು ಸಾರಿ ಸಾರಿ ಹೇಳಿತು. ಸಾಷ್ಟಾಂಗ ನಮಸ್ಕಾರ ಮಾಡಿದರು. ಎರಡೂ ಭುಜಗಳನ್ನು ಹಿಡಿದು ದಾಸರು ಗೋವಿಂದರಾಯರನ್ನು ಎಬ್ಬಿಸಿದರು. ಕುಶಲ ಪ್ರಶ್ನೆಗಳಾದವು. ಎಷ್ಟೋ ದಿನಗಳ ಪರಿಚಯವಿರುವವರಂತೆ ಇವರೊಡನೆ ಮಾತನ್ನಾಡಿದರು. ಆ ಮಾತುಗಳೇ ಇವರನ್ನು ಸೆರೆ ಹಿಡಿದವು. ಗೋವಿಂದರಾಯರ ಮನೋದಾರ್ಢ್ಯವನ್ನು ಕಂಡು ಆನಂದಿಸಿದರು. ಅಂದು ಇಬ್ಬರು ಶಿಷ್ಯರಿಗೆ ಮೊದಲು ಉಪದೇಶವನ್ನು ಮಾಡಿದರು. ನಂತರ ಪ್ರಮಾಧಿ ನಾಮ ಸಂವತ್ಸರ ಫಾಲ್ಗುಣ ಬಹುಳ ಪ್ರತಿಪದೆಯಂದು ೨೪.೩.೧೯೪೦ ಪ್ರಾಣದೇವರ ಗುಡಿಯ ಕಟ್ಟೆಯ ಮೇಲೆ ಕೂಡಿಸಿ, ಶಿರದ ಮೇಲೆ ಹಸ್ತವನಿಟ್ಟು ತಮ್ಮ ಬಿಂಬಮೂರ್ತಿಯನ್ನು ಧ್ಯಾನಿಸುತ್ತಾ ಅಂಕಿತನಾಮವನ್ನು ನೀಡಿದರು.

ಗುರುಗೋವಿಂದವಿಠಲನೆ ನೀನಿವರ
ಕರುಣಾ ಕಟಾಕ್ಷದಿಂದೀಕ್ಷಿಸುತನ ಕಾಪಾಡೋ ಹರಿಯೇ ಪ.

ಗರುಡ ಗಮನನೆ ದೇವಗರ್ವಗಳ ಪರಿಹರಿಸಿ
ಸರ್ವಾಂತರಾತ್ಮಕನೆ ಕಾಪಾಡೋ ಹರಿಯೇ ಅ.ಪ.

ಸೃಷ್ಟ್ಯಾದಿ ಕರ್ತನೇ ಸುಗುಣ ಮೂರುತಿ ದೇವ
ಕಷ್ಟಗಳ ಪರಿಹರಿಸಿ ಕಾಪಾಡೊ ಹರಿಯೇ
ಕೃಷ್ಣ ಮೂರುತಿ ಹೃದಯ ಅಷ್ಟದಳಮಧ್ಯದಲಿ
ದೃಷ್ಟಿ ಗೋಚರನಾಗಿ ಕಾಪಾಡೋ ಹರಿಯೇ ೧

ಅಪಾರ ಮಹಿಮನೆ, ಆಪದ್ಬಾಂಧವನಾಗಿ
ತಾಪತ್ರಯಗಳ ಕಡಿದು ಕಾಪಾಡೋ ಹರಿಯೇ
ಕೋಪತಾಪದಿ ಭವ ದುರ್ಗಗಳನೆ ಪರಿಹಿಸಿಭವ
ಕೂಪದಿಂದೆತ್ತಿ ನೀ ಕಾಪಾಡೋ ಹರಿಯೇ ೨

ಹರಿಯೆ ಸರ್ವೋತ್ತಮನು । ಸಿರಿವಾಯು
ಮೊದಲಾದ ಸುರರೆಲ್ಲ ಕಿಂಕರರೆಂಬ
ವರಮಧ್ವ ಶಾಸ್ತ್ರವನೆ ತಿಳಿಸಿ ಕಾಪಾಡೋ ಹರಿಯೇ
ಪರಮಪುರುಷನೆ ತಂದೆ ಮುದ್ದುಮೋಹನವಿಠಲನೇ ನಿನ್ನ
ಪರತರಾತ್ಮಕವಾದ ದಿವ್ಯರೂಪವ ತೋರಿ ಕಾಪಾಡೋ ಹರಿಯೇ ೩

ಎಂಬುದಾಗಿ ಅಂಕಿತ ನಾಮ ಉಪದೇಶವಾಯಿತು. ಈ ಕೂಡಲೇ ದಾಸರ ಸ್ಪರ್ಶದಿಂದ ಗೋವಿಂದರಾಯರ

ಕಾಯವದು ರೋಮಾಂಚವಾಯಿತು
ಹಾಯವೆನಿಸಿತು ಜ್ಞಾನಸತ್ಸುಖ
ವಾಯುವಿನ ವೇಗದಲಿ ಓಡಿತು ದುಃಖದಜ್ಞಾನ
ಶ್ರೇಯವೆನಿಸಿತು ಹರಿಯಚಿಂತನೆ
ಮಾಯವೆನಿಸಿತು ಲೌಕಿಕವು ಪೂ
ರ್ಣಾಯುರಾರೋಗ್ಯಗಳ ಕೊಡುವುದು ಗುರುಕೃಪಾಬಲವು ॥

ಎಂಬಂತೆ ಗೋವಿಂದರಾಯರು ಗುರುಗೋವಿಂದವಿಠಲ ದಾಸರೆನಿಸಿದರು. ಮನಸ್ಸಿನಲ್ಲಿ ನವಚೈತನ್ಯ ಅಂಕುರಿಸಿತು. ಅಂತರಂಗದ ಕದವು ತೆರೆಯಿತಿಂದು ಎಂದು ಆನಂದಪಟ್ಟರು. ಸುಬ್ಬರಾಯ ದಾಸರು ಕೊಟ್ಟ ಕೊನೆಯ ಅಂಕಿತವಿದು.

ನೀನೇ ಕಡೆ ಇನ್ನಾರಿಗೂ ನಾ ಅಂಕಿತ ಕೊಡುವುದಿಲ್ಲ ಎಂದರು ಆದ್ದರಿಂದ ದಾಸರೇ ಕಡೆಯ ಶಿಷ್ಯರಾದರು. ಇದಾದ ಇಪ್ಪತ್ತು ದಿನಗಳೆಯುತಿರಲು ಸುಬ್ಬರಾಯ ದಾಸರು ಹರಿಪಾದ ಸೇರಿದರು.

"ವರಚೈತ್ರ ಪಂಚಮಿ ವರುಷವು ವಿಕ್ರಮ
ಶರಣರ ಪೊರೆಯಲು ಕರಿಗಿರಿಯಲ್ಲೀ
ಗುರುಮುಖ್ಯಪ್ರಾಣ ಪ್ರತೀಕವ ನಿಲಿಸುತ
ಆರು ಮೂರನೇದಿನ ಹರಿಯಸೇರುವೆನೆನುತಾ

ತೆರಳಿದರು ಮುದ್ದುಮೋಹನರು ಮರಳಿ ಬಾರದಾಪುರ ನರಹರಿಪುರಕೇ" ಎಂದು ಗುರುಗೋವಿಂದದಾಸರು ತಮ್ಮ ಗುರುಗಳನ್ನು ಕೊಂಡಾಡಿದ್ದಾರೆ.

ತೀರ್ಥಯಾತ್ರೆ

ಗುರುಗೋವಿಂದದಾಸರು ದಾಸರಾಗುವ ಮುನ್ನ ಅನೇಕ ತೀರ್ಥಕ್ಷೇತ್ರಗಳ ಸಂದರ್ಶನ ಮಾಡಿದ್ದವರಾಗಿದ್ದರೂ ದಾಸರಾದ ಮೇಲೆ ಮಾಡಿದ ಯಾತ್ರೆಯ ರೀತಿಯೇ ಬೇರೆ. ಕೆಲವು ಕಡೆ ತಂದೆ ವೆಂಕಟೇಶ ವಿಠಲ ಜೊತೆಯಲ್ಲಿ ಮತ್ತೆ ಕೆಲವು ಕಡೆ ಉರಗಾದ್ರಿ ವಾಸ ವಿಠಲದಾಸರ ಜೊತೆಯಲ್ಲಿ ಯಾತ್ರೆ ಮಾಡಿದರು.

ಪಾತ್ರರ ಸಂಗಡ ಯಾತ್ರೆಯ ಚರಿಸಿ ವಿ–
ಧಾತೃ ಪಿತನಗುಣಸ್ತೋತ್ರಗಳ
ಶ್ರೋತ್ರದಿ ಸವಿದು ವಿಚಿತ್ರಾನಂದದಿ
ಗಾತ್ರದ ಮರೆವುದೆ । ಫಲವಿದು ಬಾಳ್ವುದಕೆ

ಎಂಬಂತೆ ಯಾತ್ರೆ ಮಾಡಿದವರಿವರು. ಅವರು ಯಾತ್ರೆ ಮಾಡುತ್ತಾ ತೀರ್ಥಕ್ಷೇತ್ರಗಳ ಸಂದರುಶನ ಮಾಡಿ ಮಹಿಮೆಗಳನ್ನು ವರ್ಣನೆ ಮಾಡಿರುವುದು ತೀರ್ಥಕ್ಷೇತ್ರಮಾಲಾ ಎಂಬುದಾಗಿ ದೀರ್ಘಕಾವ್ಯವಾಗಿದೆ.

ತಂಬೂರಿ ಪ್ರಾಪ್ತಿ

೧೯೪೧ ರಲ್ಲಿ ಅಬ್ಬೂರಿನ ಬ್ರಹ್ಮಣ್ಯ ತೀರ್ಥರದರ್ಶನ ಮಾಡಿ ತೀರ್ಥ ಪ್ರಸಾದ ಸ್ವೀಕರಿಸಿ ಕ್ಲೋಸ್‌ಪೇಟೆ (ಈಗಿನ ಚನ್ನಪಟ್ಟಣ)ಗೆ ಬಂದರು. ಅಲ್ಲಿ ಓವರ್‌ಸಿಯರ್ ಕೆ.ಟಿ. ಅನಂತಮೂರ್ತಿ ಎನ್ನುವವರ ಮನೆಯಲ್ಲಿ

ಶ್ರೀಗುರುಗಳು ತರಿಸಿ ಇಟ್ಟಿದ್ದ ತಂಬೂರಿಯನ್ನು ೬.೧.೧೯೪೧ ರಂದು ಪಡೆದು ಕೊಂಡರು. ದಾಸದೀಕ್ಷೆ ವಹಿಸಿದ ನಂತರ ದಾಸರಿಗೆ ಭೂಷಣವೆನಿಸಿದ ತಂಬೂರಿ ಪ್ರಾಪ್ತವಾಯಿತು. "ತಂಬೂರಿ ಮೀಟಿದವ ಭವಾಬ್ಧಿ ದಾಟಿದವ" ಎಂಬಂತೆ ಅಂದಿನಿಂದ ಮೈಸೂರು ವಾಸ ಮಾಡುತ್ತಾ, ಮುಂದೆ ಚಿಪ್ಪಗಿರಿಯಾತ್ರೆ ಯನ್ನು ಮಾಡಿ ವಿಜಯರಾಯರ ಸೇವಾಮಾಡಿ, ಎಲ್ಲಾ ಹರಿದಾಸರ ಕ್ಷೇತ್ರ ನೋಡುವ ಬಯಕೆಯಿಂದ ಮಾನ್ವಿಗೆ ತೆರಳಿದರು. ೨೮.೧೦.೪೧ ರಲ್ಲಿ ಮಾನ್ವಿಯಲ್ಲಿ ಆಸನ್ನಿಧಾನದಲ್ಲಿ ಶ್ರೀಮದ್ಹರಿಕಥಾಮೃತಸಾರ ಪಾರಾಯಣ ಮಾಡಿದರು.

ಅನಂತರ ವಿಜಯದಾಸರ ಜನ್ಮಸ್ಥಳ ಚೀಕಲಪರವಿಗೆ ಪ್ರಯಾಣ, ಕಾರ್ತೀಕ ಶುದ್ಧ ದಶಮಿ ೨೬.೧೦.೧೯೪೧ ರಲ್ಲಿ ವಿಜಯರಾಯರ ಆರಾಧನೆಯನ್ನು ಅಲ್ಲಿಯೇ ನಡೆಸಿ ಸಾಯಂಕಾಲ ಪಲ್ಲಕ್ಕಿ ಉತ್ಸವ ನರ್ತನ ಸೇವಾದಿಗಳನ್ನು ಮಾಡಿದರು.

೧೯೪೨ ರಲ್ಲಿ ದಾಸರು ಕರಿಗಿರಿಕ್ಷೇತ್ರದಲ್ಲಿ ಗುರುಗಳ ಆರಾಧನೆ ಮಾಡಿ ದೊಡ್ಡ ಬಳ್ಳಾಪುರಕ್ಕೆ ಬಂದರು. ಅಲ್ಲಿ ಮುದ್ದುಮೋಹನ ವಿಠಲದಾಸರಿಂದ ಸ್ಥಾಪಿತವಾದ ವಿಜಯವಿಠಲದೇವರ ದರ್ಶನವನ್ನು ಮಾಡಿದರು. ಮುದ್ದುಮೋಹನದಾಸರ ಶಿಷ್ಯರು ೬೦ ವರುಷದ ವೃದ್ಧರ ಭೇಟಿಯಾಯಿತು. ಅವರಿಂದ ಪರಮಗುರುಗಳ ವಿಚಾರವನ್ನು ಆದಷ್ಟು ಸಂಗ್ರಹಿಸಿದರು. ನಂತರ ಮುದ್ದುಮೋಹನದಾಸರ ತಂಬೂರಿ ಶಿಥಿಲವಾಗಿದ್ದುದನ್ನು ಕಂಡರು. ಹೀಗೆ ಅವರ ಯಾತ್ರೆ ಮಾಡುವ ಕಡೆಗಳಲ್ಲೆಲ್ಲಾ ಒಂದಲ್ಲ ಒಂದು ಅನುಭವವಾಗುತ್ತಿತ್ತು.

"ಮುದ್ದುಮೋಹನದಾಸರೇ ನಿಮ್ಮ ಶುದ್ಧಪಾದವನಂಬಿದೇ ತಿದ್ದಿ ಎನ್ನಯ ನಾದ್ಯ ವಿದ್ಯೆಯ ಬುದ್ಧಿ ನಿಲಿಸಿರಿ ಹರಿಯಲೀ"ಎಂಬ ದೇವರ ನಾಮ ಹಾಡಿಗುರುಗಳಿಗೆ ಸಮರ್ಪಿಸಿದರು. ಬಂಡುಣಿಯಂದದಲಿ ಹರಿ ನಾಮಸ್ಮರಿಸುತ್ತ ತಮ್ಮಧರ್ಮವನ್ನು ಎಂತಹ ಸಂದರ್ಭ ಬಂದರೂ ಬಿಡದೆ ಆಚರಣೆಗೆ ತಂದು ಇರುವ ಪೂತಾತ್ಮರಿವರು. ಸಾಧನ ಶರೀರದಿಂದ ನಿಜವಾದ ಸಾಧನ ಮಾಡಿ, ಈ ಶರೀರವು ಸಾಧನದ ರಥ ಎಂದವರು. "ಗಾತ್ರವೇ ಮಂದಿರ ನೇತ್ರವೇ ಮಹಾದೀಪ ಹಸ್ತಚಾಮರವು ಯಾತ್ರೆ ಪ್ರದಕ್ಷಿಣೆ" ಎಂಬ ಅನುಸಂಧಾನ ದಾಸರದು.

ಇವರು ತಮ್ಮ ಧರ್ಮವನ್ನು ಎಂದಿಗೂ ಬಿಡುತ್ತಿರಲಿಲ್ಲ ಎಂಬುದಕ್ಕೆ ಒಂದು

ದೃಷ್ಟಾಂತವೆಂದರೆ ೧೯೪೫ರಲ್ಲಿ ಪ್ರಾರಬ್ಧ ಕರ್ಮವಶಾತ್ ಮೂತ್ರಕೋಶದ ಖಾಯಿಲೆ ಆಯಿತು. ಆಗ ಆಸ್ಪತ್ರೆಗೆ ಸೇರಿ ಕೆಲವು ದಿನಗಳು ಅಲ್ಲಿ ಇರಬೇಕಾದ ಪ್ರಸಂಗ ಬಂದಿತ್ತು. ಆಕಾಲದಲ್ಲಿ ಸಹ ಪ್ರತಿನಿತ್ಯ ಸ್ನಾನಮಾಡಿ ಊರ್ಧ್ವ ಪುಂಡ್ರಧಾರಣೆ ಮಾಡಿಕೊಂಡು ಉದಯ ರಾಗದಿಂದ ಪ್ರಾರಂಭಿಸಿ ತಾರತಮ್ಯ ಭಜನೆ ಮಾಡುತ್ತಿದ್ದರು. ವಿಜಯಧ್ವಜತೀರ್ಥರ ವ್ಯಾಖ್ಯಾನ ಸಹಿತ ಭಾಗವತವನ್ನು ಸಂಪೂರ್ಣ ಅಧ್ಯಯನ ಮಾಡಿದರು. ಇತರೆ ರೋಗಿಗಳು ಆಕ್ಷೇಪಮಾಡಿದರೆ ವಾರ್ಡಿನಿಂದ ಹೊರಗೆ ಬಂದು ಹೇಳಿಕೊಂಡು ವೈದ್ಯರು ಬರುವ ವೇಳೆಗೆ ಹಾಸಿಗೆಯ ಬಳಿ ಇರುತ್ತಿದ್ದರು. ಆಸ್ಪತ್ರೆಯ ಹೊರ ಆವರಣಕ್ಕೆ ಬಂದು ಮರದ ಕೆಳಗೆ ಮಡಿಯುಟ್ಟು ಕುಳಿತು, ಮನೆಯಿಂದ ತಂದ ಊಟಮಾಡುತ್ತಿದ್ದರು. ಹೀಗೆ ಎರಡು ತಿಂಗಳು ಕಾಲ ಕಳೆದ ಮಂಗಳಾತ್ಮರು ಇವರು.

ಮಾತೃ ವಿಯೋಗ

ಗುರುಗೋವಿಂದದಾಸರಿಗೆ ತಮ್ಮ ತಾಯಿಯವರಲ್ಲಿ ಅಸದೃಶ ಭಕ್ತಿ ; ಮಾತೃ ದೇವೋಭವ ಎಂಬ ನುಡಿ ಅನ್ವರ್ಥ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದು ಕೊಂಡ ಅವರಿಗೆ ತಂದೆಯ ಸ್ಥಾನವನ್ನೂ ತಾಯಿಯವರೇ ಅಲಂಕರಿಸಿದ್ದರು. ಬಂಧುಗಳೆಲ್ಲರೂ ಕೈ ಬಿಟ್ಟರೂ ಆಪದ್ಬಂಧುವನ್ನು ನಂಬಿ ತಮ್ಮನ್ನು ಸಾಕಿ ಸಲಹಿ ಒಬ್ಬ ಹರಿಭಕ್ತನನ್ನಾಗಿ ಮಾಡಲು ಆಕೆ ಪಟ್ಟ ಬವಣೆಗಳು ಇವರ ಕಣ್ಮುಂದೆ ಸುಳಿದಾಡುತ್ತಿದ್ದವು. ೧೯೫೦ ರಲ್ಲಿ ತಾಯಿಯವರಿಗೆ ದೇಹಾಲಸ್ಯವಾಗಿ ಹಾಸಿಗೆ ಹಿಡಿದರು. ವೈದ್ಯರು ತಪಾಸಣೆ ನಡೆಸಿ ಮರಣ ಸೂಚನೆಯನ್ನೂ ಕೊಟ್ಟರು. ಆಗ ದಾಸರು ಮನೆಯಲ್ಲಿಯೇ ಶ್ರೀಮದ್ಭಾಗವತ ಸಪ್ತಾಹ ನಡೆಸಿ ತಾಯಿಯವರಿಗೆ ಭಾಗವತ ಶ್ರವಣ ಮಾಡಿಸಿದರು. ತಾಯಿಯವರ ಮುಂದೆ ಹರಿಭಕ್ತಿಸಾರ ಹರಿಕಥಾಮೃತಸಾರ ಮುಂತಾದ ಸದ್ಗ್ರಂಥಗಳ ಪಾರಾಯಣವನ್ನು ಸ್ವತಃ ಮಾಡುತ್ತಿದ್ದರು. ವಿಕೃತಿ ನಾಮಸಂವತ್ಸರದ ಜ್ಯೇಷ್ಠ ಬಹುಳ ತೃತೀಯಾದಿನ ದಾಸರ ತಾಯಿ ಲಕ್ಷ್ಮೀಬಾಯಿಯವರು ದೇಹತ್ಯಾಗ ಮಾಡಿದರು. ಅವರ ಪ್ರಾಣೋತ್ಕ್ರಮಣ ಬಲಗಣ್ಣಿನ ಮೂಲಕ ಆಯಿತು ಎನ್ನುತ್ತಾರೆ. ಕಾರಣ ಬಲಗಣ್ಣಿನಲ್ಲ ಪ್ರಾಣ ಹೋದರೆ ಪುನರ್ಜನ್ಮವಿಲ್ಲ ಎಂದು ಬೃಹದಾರಣ್ಯಕ ಉಪನಿಷತ್ತಿನಲ್ಲಿದೆ. ತಮ್ಮ ತಾಯಿಯ ದೇಹವನ್ನು ಸಂಸ್ಕಾರ ಮಾಡಿ ಇಟ್ಟ ಬಲಿಯನ್ನವನ್ನು ಕಾಗೆ ಮುಟ್ಟಲಿಲ್ಲ. ಗರುಡ ಪಕ್ಷಿ ಬಂದು ತೆಗೆದುಕೊಂಡು ಹೋಗಿದ್ದನ್ನು ಅಂದು ದಾಸರೊಡನಿದ್ದ ಪುರೋಹಿತರು ಒಡನಾಡಿಗಳು

ಹೇಳುತ್ತಾರೆ. ತಮ್ಮ ತಾಯಿಯ ಸಾಧನವನ್ನು ದಾಸರು ತಮ್ಮ ಒಂದು ಕೀರ್ತನೆಯಲ್ಲಿ ತಿಳಿಸುತ್ತಾರೆ.

ಮೋದಮುನಿಮತನಿಷ್ಠೆ । ಆದರದೊಳನುಷ್ಠಾತೆ
ಸಾದರದಿ ಭಾಗವತ । ಮೊದಲಾದ ಶಾಸ್ತ್ರಶ್ರುತೆ
ಖೇದಮೋದಾದಿಎನ್ನೆ । ದ್ವಂದ್ವಗಳ ಸಹಿಷ್ಣುತೆ
ಸಾಧನೋತ್ತಮ ಗೈದೆ । ಈ ದೇಹದಾತೇ ॥೧॥

ವಿಷ್ಣುಪಂಚಕದ್ವಯವು । ಕೃಷ್ಣದರ್ಶನವಷ್ಟೆ
ಕೃಷ್ಣಕಾವೇರ್ಯಾದಿ । ನಿಷ್ಟೆಯಲಿಮಜ್ಜನವ
ಕೃಷ್ಣಸಿರಿವೆಂಕಟನ । ಬೆಟ್ಟಕ್ಕೆ ತ್ರೈ ಬಾರಿ
ಕಷ್ಟದಲಿ ಸಾಧನೆ ಸ । ಹಿಷ್ಣುತೆಯು ಎಷ್ಟಮ್ಮಾ ॥೨॥

ಸೇತು ರಾಮೇಶ್ವರದ । ಯಾತ್ರೆಗಳಗೈದು ಸ
ತ್ಪಾತ್ರರನ್ನಾದರಿಸಿ । ಕಾತುರರತೆಯಲ್ಲೀ
ವಾತಾಂತರಾತ್ಮ ಗುರುಗೋವಿಂದ ವಿಠಲನ
ಕೀರ್ತನೆಯ ಚತುರೇ । ತವ ಪಾದಕಾನಮಿಪೇ ॥೩॥

ನಮಿಸುವೆನುಮನ್ಮಾತೆ ಪದಯುಗಳಕೇ
ಅಮಮ ಎನ್ನಲ್ಲಿ ನಿಮ್ಮ । ಮಮತೆ ಎಷ್ಟಮ್ಮಾ

ಎಂದು ತಾಯಿಯವರ ಅಂತರ್ಯಾಮಿಗೆ ಅವರು ಸಮರ್ಪಿಸಿದ್ದಾರೆ. ಸುಮಾರು ೫೦ ಕ್ಕೂ ಹೆಚ್ಚು ವರ್ಷ ಮಗನ ಶ್ರೇಯಸ್ಸಿಗಾಗಿ ಜೀವನ ತೇಯ್ದು ಕೊಂಡಿದ್ದ ಮಹಾನ್ ಮಾತೃ ಚೇತನ ಕಣ್ಮರೆಯಾಯಿತು. ತಾಯಿಯವರ ಅಗಲಿಕೆಯ ನಂತರ ಅಂತರ್ಮುಖಿಗಳಾದ ದಾಸರು ಧಾರ್ಮಿಕ ಚಟುವಟಿಕೆಗಳನ್ನು ಮುಂದುವರೆಸುತ್ತಾ ಪುಣ್ಯಕ್ಷೇತ್ರ ಯಾತ್ರೆಗಳನ್ನು ಮುಂದುವರೆಸಿದರು. ೫.೨. ೧೯೫೧ ರಲ್ಲಿ ತಾಯಿಯವರ ಕಾರ್ಯವನ್ನು ಘಟಿಕಾಚಲದಲ್ಲಿ ಮಾಡಲು ನಿರ್ಧರಿಸಿದ ದಾಸರು ತಮ್ಮ ಆತ್ಮೀಯರಾದ ತಂದೆ ವೆಂಕಟೇಶವಿಠಲ ದಾಸರೊಂದಿಗೆ ಅನೇಕ ದಾಸಬಂಧುಗಳನ್ನು ಕೂಡಿಕೊಂಡು ಬಂದರು. ಪ್ರಾತರಾಹ್ನೀಕದ ನಂತರ ಎಲ್ಲರೂ ಹರಿದಾಸರ ವೇಷದಲ್ಲಿ ಬೆಟ್ಟವನ್ನು

ಏರಿದರು. ಬೆಟ್ಟದಲ್ಲಿ ಶ್ರೀನರಸಿಂಹ ದೇವಾಲಯದ ಹೊರಬಾಗಿಲಿಗೆ ಬೀಗ ಹಾಕಿತ್ತು. ಎಲ್ಲರಿಗೂ ನಿರಾಸೆಯಾಯಿತು. ಅರ್ಚಕರು ಬರುವವರೆಗೂ ಎಲ್ಲರೂ ಭಜನೆ ಮಾಡಬೇಕೆಂದು ಸಂಕಲ್ಪ ಮಾಡಿಸಿ ಬಿಚ್ಚುಮನದಿಂದ ಮುಚ್ಚಿದ ಬಾಗಿಲ ಮುಂದೆ, ತಮ್ಮನ್ನು ತಾವು ಮರೆತು ಭಜನೆ ಮಾಡಲು ತೊಡಗಿದರು ಸುಳಾದಿಗಳು ಉಗಾಭೋಗಗಳು ದೇವರ ನಾಮಗಳು ಗಾತ್ರವ ಮರೆದು ವಿಚಿತ್ರಾನಂದವನ್ನು ಅನುಭವಿಸುತ್ತಿರುವ ಕ್ಷಣಗಳಲ್ಲಿ ಅರ್ಚಕರು ಬಂದು ಕೂಗಿದಾಗ ಎಲ್ಲರಿಗೂ ಎಚ್ಚರ ಆಶ್ಚರ್ಯ ಬೇರೆ, ಕಾರಣ ಹಾಕಿದ ಬೀಗ ತೆಗೆದಿತ್ತು. 'ಮಹಾದ್ವಾರದ ಬೀಗವನ್ನು ತೆಗೆದವರು ಯಾರು' ಅರ್ಚಕರ ಪ್ರಶ್ನೆಗೆ ಮೌನವೇ ಉತ್ತರ, ಹೀಗಾಗಿ ಪುರಂದರದಾಸರು ವಿಜಯದಾಸರಿಗೆ ಅದ್ಭುತ ಮಹಿಮೆ ತೋರಿದವ ಗುರುಗೋವಿಂದ ದಾಸರಿಗೂ ತೋರಿದ. ದಾಸರು ನರಸಿಂಹನನ್ನ ನೋಡಿ ಕೊಂಡಾಡಿದರು. ಮುಂದೆ ಮುಖ್ಯಪ್ರಾಣದೇವರ ದರ್ಶನ ಮಾಡಿದರು. ಇಲ್ಲಿ ಪ್ರಾಣದೇವರು ಪದ್ಮಾಸನದಲ್ಲಿ ಕುಳಿತಿರುತ್ತಾರೆ. ಕೈಯಲ್ಲಿ ಜಪಮಾಲೆ ಹಿಡಿದಿದ್ದಾರೆ. ಇಂತಹ ಪ್ರಾಣದೇವರ ದರ್ಶನ ಮಾಡಿ ಪುನೀತರಾದರು, ನಂತರ ತಿರುಪತಿಗೆ ದಾಸರ ಪ್ರಯಾಣ ೬.೨.೫೧ ರಂದು ಪ್ರಾತಃಕಾಲ ಮೂರುವರೆ ಗಂಟೆಗೇ ಎದ್ದು ಆಹ್ನಿಕ ತೀರಿಸಿಕೊಂಡು ಐದು ಗಂಟೆಗೆ ಎದ್ದು ಕಾಲಿಗೆ ಗೆಜ್ಜೆ ಕಟ್ಟಿ ತಂಬೂರಿ ಮೀಟುತ್ತ ನೀಲವರ್ಣನ ಗಾನಪಾಡುತ್ತ ಬೆಟ್ಟ ಹತ್ತಲು ಪ್ರಾರಂಭಿಸಿ ಎಂಟು ಗಂಟೆಗೆ ಗಾಳಿ ಗೋಪುರದ ಬಳಿಬಂದು ಧೂಳಿದರ್ಶನ ಪಡೆದರು. ನಂತರ ಸ್ವಾಮಿಪುಷ್ಕರಣೀ ಸ್ನಾನ ವರಾಹ ದೇವರ ದರ್ಶನ ಮಾಡಿ ಶ್ರೀನಿವಾಸನ ದರ್ಶನಕ್ಕೆ ಒಂದೂವರೆ ಗಂಟೆಯಾಯಿತು ಎಂದು ಅಂದೇ ಅವರ ಪುಸ್ತಕದಲ್ಲಿ ಬರೆದಿಟ್ಟಿದ್ದಾರೆ. ನಾರಾಯಣದಾಸರ ಛತ್ರದಲ್ಲಿ ಊಟ ವಸತಿ ಏರ್ಪಾಟು ಆಯಿತು.

ನಾರಾಯಣದಾಸರು ಒಳ್ಳೆ ಕಲಾವಿದರು ಕೀರ್ತನೆ ಹೇಳುವುದರಲ್ಲಿ, ಮೃದಂಗ ನಿಡಿಸುವುದರಲ್ಲಿ, ನರ್ತನ ಸೇವೆಯಲ್ಲಿ ಸಹಚತುರರಾಗಿದ್ದರು ನರ್ತನ ಸೇವೆಯ ವಿಶೇಷವೆಂದರೆ ತಲೆಯ ಮೇಲೆ ನೀರು ತುಂಬಿದ ದೊಡ್ಡ ತಂಬಿಗೆ ಅದರ ಮೇಲೆ ಒಂದು ಥಾಲಿ ಅದರ ಮೇಲೆ ಒಂದು ಗಿಂಡಿ ಅದರಲ್ಲಿ ಒಂದು ದೀಪ ಇಟ್ಟುಕೊಂಡು ಕೈಯಲ್ಲಿ ತಂಬೂರಿ ಚಿಟಕಿ ಹಿಡಿದು ನರ್ತನ ಸೇವೆ ಮಾಡಿದರು. ದಾಸರು ಇದನ್ನು ಕಂಡು ತುಂಬ ಆನಂದಪಟ್ಟರು.

ಶ್ರೀನಿವಾಸನನ್ನು ಕಂಡು "ಆನಂದಗಿರಿರಾಯನೆ ಪಿಡಿಕೈಯ – ನಾ ನಿನ್ನ ಪಾದಕ್ಕಾನಮಿಸುವೆ ಸಂತತ ಶರಣರ ಪ್ರೀಯ"

ಎಂಬ ಕೀರ್ತನೆಯನ್ನು ಮಾಡಿದ್ದಾರೆ ನಂತರ ಪದುಮಾ ಸರೋವರದಲ್ಲಿ ಪ್ರೋಕ್ಷಣೆ, ಪದ್ಮಾವತಿ ದರ್ಶನ ಮಾಡಿದೆ ಎಂದು ಹೇಳುತ್ತಾರೆ. ದಾಸರು ಬೆಟ್ಟವನ್ನು ನಡೆದುಕೊಂಡು ಹತ್ತಿದ್ದಾರೆ. ಅವರ ಅನುಭವ ಅವರ ವಾಣಿ ಯಲ್ಲೇ ಹೇಳುವುದಾದರೆ

ಮೆಟ್ಟಲು ಮೆಟ್ಟಲುಗಳನೇರುತ್ತಾ । ತಾಳಂಗಳನು
ತಟ್ಟಿ ಹರಿ ಹರಿ ಎಂದೊದರುತ್ತಾ । ಪಾಪಂಗಳತಲೆ
ಮೆಟ್ಟಿ ತಂಬೂರಿಯ ಮೀಟುತ್ತಾ । ಕಾಲೊಳು ಗೆಜ್ಜೆಗಳ
ಕಟ್ಟುತ್ತಾ ಘಲು ಘಲು ಘಲುಕೆನ್ನುತ್ತಾ । ಜಗ
ಜಟ್ಟಿ ಹನುಮನನೀ ನೆನೆಯಲೋ ಮನವೆ ॥

ಹೀಗೆ ದಾಸರು ಅಂದು ತಿರುಪತಿ ಯಾತ್ರೆ ಮಾಡಿದ ನಂತರ ಹಲವಾರು ಬಾರಿ ಮುಂದೆ ತಿರುಪತಿಗೆ ಹೋಗಿ ಬಂದರು, ದಾಸರ ಮೇಲಿನ ಕಾರುಣ್ಯದಿಂದ ಶ್ರೀಹರಿದಾಸರ ಮೂಲಕವಾಗಿ ಪ್ರತೀ ಪುರಂದರದಾಸರ ಆರಾಧನೆಯನ್ನು ಅಖಿಲ ಭಾರತ ಹರಿದಾಸ ಸಮ್ಮೇಳನವನ್ನು ೨೩.೧.೯೭೬ ರಿಂದ ೨೯.೧.೯೭೬ ರವರೆಗೆ ವಿಜೃಂಭಣೆಯಿಂದ ಅಲ್ಲಿಯೇ ನಡೆಸಿದನು. ಅದು ದಾಸರು ನೀಡಿದ್ದ ಪ್ರವಚನ ದೇವಾಲಯದ ಹಿರಿಯ ಅಧಿಕಾರಿಗಳಾಗಿದ್ದ ಪಿ.ವಿ.ಆರ್.ಕೆ. ಪ್ರಸಾದರ ಮನಸ್ಸಿಗೆ ಬಂದು ದಾಸಸಾಹಿತ್ಯ ಪ್ರಾಜೆಕ್ಟ್‌ಗೆ ಅಂಕುರಾರ್ಪಣವಾಯಿತು. ಅದು ಇಂದು ಬೃಹದಾಕಾರವಾಗಿ ಬೆಳೆದು. ದೇಶದಾದ್ಯಂತ ವ್ಯಾಪಿಸಿ ನಿಂತಿರುವುದು ದಾಸರ ಪರಿಶ್ರಮದ ಫಲವಲ್ಲದೆ ಮತ್ತೇನು ಹೀಗೆ ದಾಸರ ಮೇಲೆ ಶ್ರೀನಿವಾಸ ಪರಮಾನುಗ್ರಹ ಮಾಡಿದ್ದಾನೆ. ತಾಯಿಯವರ ಇಹಲೋಕ ಸಂಬಂಧ ತೊರೆದ ನಂತರ ಪಿತೃ ಕಾರ್ಯಾತ್ಮಕ ಭಗವತ್ಸೇವಾಕ್ಕಾಗಿ ದಾಸರು ಐದು ತಿಂಗಳ ಕಾಲ ಉತ್ತರ ಯಾತ್ರೆ ಮಾಡಿದರು. ಖರನಾಮ ಸಂವತ್ಸರ ಫಾಲ್ಗುಣ ಬಹುಳ ಸಪ್ತಮಿ ಮಂಗಳವಾರ ಪ್ರಾತಃಕಾಲ ಮೈಸೂರಿನಿಂದ ಹೊರಟು ಶ್ರೀರಂಗಪಟ್ಟಣ, ತುಮಕೂರು, ದೇವರಾಯನ ದುರ್ಗ ಹರಿಹರ, ಕೊಲ್ಹಾ ಪುರ, ಪಂಢರಾಪುರ, ಪೂನ, ಬೊಂಬಾಯಿ, ನಾಶಿಕ, ತ್ರಿಯಂಬಕ, ಭೂಸಾವಲ್, ಉಜ್ಜಯನಿ, ಭೂಪಾಲ, ಹೋಷಂಗಾಬಾದ್, ಮಣಿಪುರ್, ಚಿತ್ರಕೂಟ, ಪ್ರಯಾಗ, ಕಾಶಿ, ಗಯಾ, ಕುರುಕ್ಷೇತ್ರ, ಹರಿದ್ವಾರ, ಹೃಷಿಕೇಶ, ದೇವಪ್ರಯಾಗ, ಕೀರ್ತಿನಗರ, ರುದ್ರ ಪ್ರಯಾಗ, ಕರ್ಣಪ್ರಯಾಗ, ಚಮೂಲಿ, ಪಿಪ್ಪಲುಕೋಟೆ, ಗುಲಾಬ್ ಜೆಟ್ಟಿ, ಜೋಡಿಮಠ, ಪಾಂಡುಕೇಶ್ವರ,

ಹನುಮಾನ್ ಜೆಟ್ಟಿ, ಶ್ರೀಬದರಿ ಕ್ಷೇತ್ರ ನೈಮಿನಾಥಧಾಮ ಸಿಂಡ್ರಿ (ದಾಮೋದರ ನದಿ) ಕಲ್ಕತ್ತ ಜಗನ್ನಾಥ ಪೂರಿ, ಸಿಂಹಾಜಲ ರಾಜಮಹೇಂದ್ರಿ, ಬೆಜವಾಡ, ಮಂಗಳಗಿರಿ, ಗದ್ವಾಲ್, ದರೂರ್ ಮೊದಲಾ ಕಲ್ಲು ಐಜಿ, ವೇಣಿ ಸೋಮಪುರ ರಾಯಚೂರು, ಮಂತ್ರಾಲಯ, ಆದವಾನಿ, ತಾಡಪತ್ರಿ, ಪ್ರೊದಟೂರು ತಿರುಪತಿ ಚಿತ್ತಾನೂರು, ಕಾಳಹಸ್ತಿ, ಕಪಿಲತೀರ್ಥ, ತಿರುಮಲ, ಅರ್ಕೋಣ, ಕಂಚಿ, ತಿರುವಣ್ಣಾಮಲೈ, ತಿರುಕೊಯಿಲೂರು, ಚಿದಂಬರಂ, ಶ್ರೀಮುಷ್ಣ ಕುಂಭಕೋಣ, ಶ್ರೀರಂಗ, ಮಾನಾ ಮಧುರಿ ರಾಮನಾಡು ನವಪಾಷಾಣ ದರ್ಭಶಯನ ರಾಮೇಶ್ವರ ಧನುಷ್ಕೋಟಿ, ಮಧುರೆ ತಿನ್ನವೆಲ್ಲಿ, ಶ್ರೀವೈಕುಂಠ, ತೋತ್ತಾದ್ರಿ, ಶುಚೀಂದ್ರ ಅನಂತಶಯನ ವಲ್ಲಲ ಎರ್ನಾಕುಲು ಕೊಜಿ ಕಲ್ಲಿಕೋಟೆ ಕ್ಷೇತ್ರಗಳಿಗೆ ಯಾತ್ರೆ ಮಾಡಿಬಂದು ೨೬-೮-೧೯೫೨ ರಲ್ಲಿ ಬದರಿ ಸಮಾರಾಧನೆ ಮಾಡಿದರು. ಈ ಎಲ್ಲ ಕ್ಷೇತ್ರಗಳ ಮಹಿಮೆಯನ್ನು ತಮ್ಮ ತೀರ್ಥಕ್ಷೇತ್ರ ಮಾಲಾ ಎಂಬ ಕೃತಿಯಲ್ಲಿ ಭಾಮಿನೀಷಟ್ಪದಿಯಲ್ಲಿ ಸೆರೆಹಿಡಿದಿಟ್ಟಿದ್ದಾರೆ.

ಈ ಯಾತ್ರೆಯಲ್ಲಿ ಉಡುಪಿಯಾತ್ರೆ ಆಗಲಿಲ್ಲವಾದ ಕಾರಣ ೧೯೫೪ರಲ್ಲಿ ಧರ್ಮಸ್ಥಳ ಯಾತ್ರೆ ಮಾಡಿಕೊಂಡು ೧೦.೭.೫೪ ರಂದು ಷಷ್ಠಿಪೂರ್ಣ ಶಾಂತಿಯನ್ನು ಉಡುಪಿಯಲ್ಲಿ ನಡೆಸಿದರು. ಅಂದು ೧೦೦೮ ಎಳನೀರಿನಿಂದ ಶ್ರೀಕೃಷ್ಣನಿಗೆ ಮಹಾಭಿಷೇಕವಾಗಿತ್ತು. ಅಷ್ಟ ಮಠದ ಯತಿಗಳು ಸೇರಿದ್ದರು. ಹಾಗಿಯೇ ಸಮುದ್ರ ಸ್ನಾನ ಒಡ ಭಾಂಡೇಶ್ವರ ದರ್ಶನ ಪಾಜಕ ಕ್ಷೇತ್ರ ಎಲ್ಲ ದರ್ಶನ ಮಾಡಿದರು ೧೩.೭.೫೪ ರಂದು ಸೋದೆಮಠದಲ್ಲಿ ಶ್ರೀಗಳವರು ಕಾಣೆಯೂರು ಶ್ರೀಗಳವರಲ್ಲಿ ಸುಧಾವ್ಯಾಸಂಗ ಮಾಡುತ್ತಿದ್ದು ಅದರ ಮಂಗಳ ಮಹೋತ್ಸವದಲ್ಲಿ ಪಾಲ್ಗೊಂಡು ತುಂಬ ಹರ್ಷಿತರಾದರು. ಕುಂಜಿ ಬೆಟ್ಟದಿಂದ ಎರಡು ಮೈಲಿ ದೂರದಲ್ಲಿ ಇಂದ್ರಾಣಿ ಕ್ಷೇತ್ರ ಎಂಬ ಸ್ಥಳಕ್ಕೆ ಕಾಲು ನಡಿಗೆಯಲ್ಲಿ ಹೋಗಿ ಅಲ್ಲಿ ಉದ್ಭವವಾಗಿರುವ ನಾರಾಯಣ ವಾಸುದೇವ ಪ್ರದ್ಯುಮ್ನ ಸಂಕರ್ಷಣ ಅನಿರುದ್ಧ ಮೂರ್ತಿಗಳು ಎದುರಿಗೆ ಶಚಿದೇವಿ ಅಲ್ಲಿ ಪುಲೋಮಜ ಎನ್ನುತ್ತಾರೆ ಇವಳೇ ಇಂದ್ರಾಣಿ ನಾಲ್ಕು ಭುಜ ಮೇಲಿನ ಎರಡು ಕೈಯಲ್ಲಿ ಪದ್ಮ ಕೆಳಗೆ ಒಂದು ಕೈಯಲ್ಲಿ ಈ ಅಭಯಹಸ್ತ ಮತ್ತೊಂದು ಕೈಯಲ್ಲಿ ವರದ ಹಸ್ತ ಇದೆ. ಇದು ಚ್ಯವನ ಋಷಿಗಳ ತಪಃಸ್ಥಾನ ಅವರ ತಪಸ್ಸಿನ ಫಲವಾಗಿ ಮೂರ್ತಿಗಳು ಉದ್ಭವಿಸಿವೆಯೆನ್ನುವರು. ಅಲ್ಲದೆ ಲಕ್ಷ್ಮೀ - ಮಾಯಾ ಜಯಾ ಕೃತಿ - ಶಾಂತಿ ರೂಪಗಳಿಂದ ಒಡ ಮೂಡಿರುತ್ತಾಳೆ. ಇಂದ್ರ ಇಲ್ಲಿ ಬಂದು ಈ ಪಂಚರೂಪಿ ಹರಿಯನ್ನು ಸೇವೆ ಮಾಡಿದನೆಂತಲೂ ಆಗ ಶ್ರೀಹರಿಯ ಆಜ್ಞೆ

ಯಂತೆ ಲಕ್ಷ್ಮೀದೇವಿ ಪ್ರತ್ಯಕ್ಷಳಾದಳು. ದೇವೇಂದ್ರನು ಶಚಿಯನ್ನು ಪ್ರೀತಿಸುವಂತೆ ವರದಾನ ಮಾಡಿದಳು ಲಕ್ಷ್ಮೀನಾರಾಯಣರ ಅನುಗ್ರಹ ಪಡೆದು ಪತ್ನಿ ಸಮೇತನಾಗಿ ಅಮರಾವತಿಗೆ ತೆರಳಿದ, ಇಂದ್ರ ಆಗ ಶಚೀವರಪ್ರದಳಾದ ಲಕ್ಷ್ಮೀದೇವಿಯ ಪ್ರತಿಷ್ಠೆ ಅಲ್ಲಿಯೇ ಮಾಡಿದರು ಅವಳೇ ಇಂದ್ರಾಣಿ ಅವಳು ಮಾಡಿದ ಯಜ್ಞಕುಂಡವೇ ಇಂದ್ರಾಣಿ ತೀರ್ಥ. ಇಲ್ಲಿ ಸ್ನಾನ ಮಾಡಿದರೆ ಬ್ರಹ್ಮಹತ್ಯಾದಿ ಪಾಪ ಪರಿಹಾರವಾಗುವುದು. ಈ ಕ್ಷೇತ್ರಕ್ಕೆ ವೇದಾಚಲ ಎಂದು ಹೆಸರು ಈ ಪರ್ವತ ಚಕ್ಷುಷ್ಮತಿ ಮತ್ತು ವಿನತಾನದಿ ಮಧ್ವದಲ್ಲಿರುತ್ತದೆ ನಾಲ್ಕು ಮೂಲೆಗಳ ಚತುರ್ವೇದೋಕ್ತ ತೀರ್ಥಗಳು ಇವೆ ಎಂಬಷ್ಟು ವಿಚಾರವನ್ನು ಗುರು ಗೋವಿಂದ ದಾಸರು ತಮ್ಮ ದಿನಚರಿಯಲ್ಲಿ ಉಲ್ಲೇಖಿಸಿದ್ದಾರೆ ಅಲ್ಲದೆ ದಾಸರು ಪಾಜಕ ಕ್ಷೇತ್ರದ ವಿಚಾರವನ್ನು ತಿಳಿಸುತ್ತಾ ಉಡುಪಿಯಿಂದ ಏಳು ಮೈಲು ದೂರದಲ್ಲಿರವ ಇದು ಆಚಾರ್ಯರ ಜನ್ಮಸ್ಥಳ. ವಾಸುದೇವ ತೀರ್ಥಸ್ನಾನ ಮಾಡಿ ಆಚಾರ್ಯರು. ಹುಟ್ಟಿದ ಮೆಟ್ಟಿದ ಉಪಯೋಗಿಸಿದ ಸ್ಥಳ ವಸ್ತುಗಳ ದಿವ್ಯ ದರ್ಶನ ಮಾಡಿದರು, ಗುರುಗೋವಿಂದದಾಸರು.

ಉಡುಪಿಯಾ ಯಾತ್ರೆಯ ಮಾಡಿ । ಉಡುಪಿಯಾ ॥ಪ॥

ಉಡುಪಿಯ ಯಾತ್ರೆಯನ್ನೇ ಮಾಡಿ । ಭಕ್ತಿ
ಮುಡುಪಿತ್ತು ಪ್ರಮೋದ ಬೇಡಿ । ಅಹ
ನಡುದೇಹದೋಳೀಹ । ನಡುನಾಡಿ ಕಮಲದಿ
ಒಡೆಯ ಶ್ರೀ ಕೃಷ್ಣನ । ಧೃಡಭಕ್ತಿಯಿಂದಭಜಿಸಿ ॥ಅ.ಪ॥

ಎಂಬ ಆಧ್ಯಾತ್ಮ ಬೋಧಕ ಕೀರ್ತನೆಯನ್ನು ರಚಿಸಿದ್ದಾರೆ.

ನಂತರ ದಾಸರು ಉಡುಪಿಯಿಂದ ಹೊರಟು ವಾದಿರಾಜರು ತೀರ್ಥ ಪ್ರಬಂಧದಲ್ಲಿ ವರ್ಣನೆಯನ್ನು ಮಾಡಿದ "ಸಪ್ತೈತೇ ಮೋಕ್ಷ ದಾಯಕಾಃ" ಎಂಬ ರಜತ ಪೀಠ, ಕುಮಾರಾದ್ರಿ ಕುಂಭಾಸಿ, ಕೋಟೀಶ್ವರ ಕ್ರೋಢ ಶಂಕರನಾರಾಯಣ ಕ್ಷೇತ್ರ, ಗೋಕರ್ಣ, ಕೊಲ್ಲೂರು, ಮೂಕಾಂಬಿಕೆಯ ಸಂದರ್ಶನ ಮಾಡಿದರು. ಕುಂಭಾಸಿ ಕ್ಷೇತ್ರದ ಮಹಿಮೆಯನ್ನು ತಿಳಿಸುತ್ತಾರೆ. ತ್ರೇತೆಯಲ್ಲಿ ಇದು ಮಧುಕಾನನ ದ್ವಾಪರದಲ್ಲಿ ಗೌತಮಕ್ಷೇತ್ರ ಕಲಿಯುಗದಲ್ಲಿ ಕುಂಭಾಸಿ ಎಂದು ಹೆಸರು. ಇದು ಸುವರ್ಣಮಯವಾದ ದೇವಾಲಯವಾಗಿತ್ತು. ಕಲಿಯುಗದಲ್ಲಿ ಅದನ್ನು ಮರೆಮಾಡಬೇಕೆಂದು ಒಂದು ಗುಡ್ಡವನ್ನು ಅದರ ಮೇಲೆ ತಂದಿಟ್ಟರು. ಅದಕ್ಕೆ ಆನೆಗುಡ್ಡೆ ಎಂಬ ಹೆಸರು ಬಂದಿದೆ ಗೌತಮರ

ಪ್ರಾರ್ಥನೆಯಂತೆ ಧರ್ಮರಾಜ ಈ ಕುಂಭಾಸುರನ ಸಂಹಾರ ಮಾಡಲು ಭೀಮಸೇನನ್ನು ನಿಯೋಜನೆ ಮಾಡಿದ. ಅಶರೀರ ವಾಣಿಯ ಪ್ರಕಾರ ಭೀಮಸೇನ ನನು ಗಣಪತಿಯ ಆವಿರ್ಭಾವಕ್ಕೆ ಕಾರಣನಾದನು. ಗಣಪತ್ಯಂತರ್ಗತ ಶ್ರೀ ವಿಶ್ವಂಭರಮೂರ್ತಿಯಿಂದ ಕೊಡಲ್ಪಟ್ಟ ಖಡ್ಗದಿಂದ ದೈತ್ಯನು ಸಂಹೃತ ನಾದನು. ಇಲ್ಲಿಯ ಗಣಪತಿಗೆ ಕಡುಬು ನೈವೇದ್ಯ. ವಿಚಿತ್ರವೆಂದರೆ ಈ ಕಡುಬು ಮಾಡಬೇಕಾದರೆ ತಾಳೆವಾಲೆಯಗರಿಯಲ್ಲಿ ದುಂಡಗೆ ಕೊಳವೆ ಮಾಡಿ ಅದರಲ್ಲಿಟ್ಟು ಬೇಯಿಸುತ್ತಾರೆ ಎಂಬ ಅತ್ಯಂತ ಸೂಕ್ಷ್ಮವಾದ ವಿಚಾರಗಳನ್ನು ದಾಸರು ಬರೆದಿದ್ದಾರೆ.

ದಾಸರು ನಡೆದುಕೊಂಡು ಹೂವಿನ ಕೆರೆಗೆ ಪ್ರಯಾಣ ಮಾಡಿದರು. ಇದು ವಾದಿರಾಜರಜನ್ಮಸ್ಥಳ ; ಅವರು ಗೌರಿಗದ್ದೆಯಲ್ಲಿ ಜನಿಸಿದ ವಿಚಾರ ಮಠದ ಮುಂದೆ ಇರುವ ಕೊಳದಲ್ಲಿ ಅನೇಕ ಹೂ ಬೆಳೆಸುತ್ತಿದ್ದ ಕಾರಣ ಹೂವಿನ ಕೆರೆ ಎಂದು ಪ್ರತೀತಿಯಿರುವುದು. ಅಲ್ಲಿರುವ ವಾದಿರಾಜರ ತಂದೆ ಯವರ ಕಾಲದ ದೇವರ ಪ್ರತಿಮೆಗಳು ; ಅನೇಕ ತಿಂಗಳಗಳಿಂದ ಹಯಗ್ರೀವ ನೈವೇದ್ಯವಾಗಿರದೆ ಇದ್ದದ್ದು, ದಾಸರು ಭೇಟಿ ಮಾಡಿದ ದಿನ ಹೆಸರುಬೇಳೆ ಹಯಗ್ರೀವ ನೈವೇದ್ಯವಾದದ್ದು ಇತ್ಯಾದಿ ವಿಚಾರಗಳನ್ನು ದಾಸರು ತಿಳಿಸುತ್ತಾರೆ.

ನಂತರ ಕೋಟೇಶ್ವರ ಕೊಲ್ಲೂರು ಸಂದರ್ಶನ ಮಾಡಿದ ದಾಸರು (ಮೂಕಾಂಬಿಕೆ ಮಹಾಲಕ್ಷ್ಮೀದೇವಿ ಲಿಂಗಾಕಾರವಾಗಿ ಉದ್ಭವಿಸಿದ್ದಾಳೆ). ಪ್ರತಿಯೊಂದು ಕ್ಷೇತ್ರದ ಮಹಾತ್ಮೆಯನ್ನೂ ತಿಳಿಸಿರುವುದನ್ನು ಸಂಗ್ರಹ ಮಾಡಿದರೆ ಮತ್ತೊಂದು ದೊಡ್ಡ ಸಂಪುಟವೇ ಆಗಬಹುದು ಅಷ್ಟು ವಿಚಾರಗಳನ್ನು ತಮ್ಮ ದಿನಚರಿಯಲ್ಲಿ ಬರೆದಿಟ್ಟಿದ್ದಾರೆ.

ದಾಸರು ಕ್ರೋಢ ಶಂಕರ ನಾರಾಯಣ ಕ್ಷೇತ್ರ, ಆನೆಗುಡ್ಡ ಈ ಕ್ಷೇತ್ರ ದರ್ಶನ ಮಾಡಿ ಮುಂದೆ ಮಹಿಷಿ ಕಡೆ ಪ್ರಯಾಣ ಬೆಳೆಸಿದ್ದಾರೆ. ಅಲ್ಲಿ ಸತ್ಯ ಸಂಧರ ದರ್ಶನ ಮಾಡಿದರು. ಇಲ್ಲಿ ಒಂಭತ್ತು ಜನಯತಿಗಳಿಗೆ ಹಸ್ತೋದಕ ಕೊಡುವ ಸಂಪ್ರದಾಯವಿದೆ ಎನ್ನುತ್ತಾರೆ. ಅವರುಗಳೆಂದರೆ ಟೀಕಾರಾಯರು. ರಘೂ ತ್ತಮರು, ಸತ್ಯನಾಥರು, ರಾಘವೇಂದ್ರರು ಸತ್ಯಬೋಧರು, ಸತ್ಯಸಂಧರು ಸತ್ಯವ್ರತರು ಸತ್ಯಪರಾಯಣರು ಸತ್ಯಕಾಮರು. ಅಶ್ವತ್ಥನಾರಾಯಣನ ದರ್ಶನ ಮಾಡಿದನಂತರ ಶಿಕಾರಿಪುರದ ಹುಚ್ಚೂರಾಯನ ದರ್ಶನ ಮಾಡಿ ಕೊಂಡು ಮರಳಿದ್ದಾರೆ.

ದಾಸರು ಸಂಚರಿಸಿದ ಸ್ಥಳಗಳಲ್ಲೆಲ್ಲಾ ಅಲ್ಲಿಯ ಮಾಹಿತಿ ಸಂಗ್ರಹಿಸಿ ಅದನ್ನು ಪ್ರಕಟಿಸಿಯೂ ಇದ್ದಾರೆ. ೧೯೬೧ರಲ್ಲಿ ಎರಡನೆಯ ಬಾರಿ ದಾಸರು ಕಾಲಿಗೆ ಗೆಜ್ಜೆಕಟ್ಟಿ ಕೈಯಲ್ಲಿ ಚಿಟಿಕೆ ಹಿಡಿದು, ಹರಿನಾಮ ಸಂಕೀರ್ತನೆ ಮಾಡುತ್ತಾ ಸಾರ್ಥಕ ಯಾತ್ರೆ ಮಾಡಿದರು. ಎಲ್ಲ ತೀರ್ಥಯಾತ್ರೆಯ ಪುಣ್ಯಫಲವನ್ನೂ ತಮ್ಮ ಮಾತೋಶ್ರೀಯವರಿಗೆ ಧಾರೆ ಎರೆದರು.

ದಾಸರು ಪೂಜಿಸುತ್ತಿದ್ದ ದೇವತಾ ಪ್ರತಿಮೆಗಳು

೧೯೭೦ರಲ್ಲಿ ದಾಸರಿಗೆ ಸ್ವಪ್ನ ಸೂಚನೆ : ಹಯಗ್ರೀವ ದೇವರು ಮನೆಗೆ ಬಂದಂತೆ, ಭಾಸವಾಗಿದೆ. ದಾಸರ ನೆಚ್ಚಿನ ಆರಾಧ್ಯ ಗುರುಗಳು ವಾದಿರಾಜರು. ಅವರ ಉಪಾಸ್ಯ ಮೂರುತಿಯ ಆಗಮನದ ಸೂಚನೆ ಸಂತಸವನ್ನುಂಟು ಮಾಡಿತ್ತು. ದಾಸರು ಈರೋಡಿಗೆ ಹೋಗಿದ್ದಾಗ ಈ ವಿಚಾರವನ್ನು ತಮ್ಮ ಸ್ನೇಹಿತರಾದ ಕರುಣಾರಸ ಪೂರ್ಣ ವಿಠಲ ದಾಸರಿಗೆ ತಿಳಿಸಿದರು. ಆಪ್ರಾಂತ ದಲ್ಲಿಯೇ ವಾಸವಾಗಿದ್ದ ಜಗನ್ನಾಥದಾಸರ ಶಿಷ್ಯರಲ್ಲಿ ಒಬ್ಬರಾದ ಮಾನಾಮಧುರೈ ದಾಸರ ವಂಶೀಕರು ಪಾಂಡುರಂಗ ದಾಸರ ಪರಿಚಯ ಮಾಡಿಸಿ ಜಗನ್ನಾಥದಾಸರ ಕರಾರ್ಚಿತವಾದ ಹಯಗ್ರೀವ ದೇವರನ್ನಿತ್ತರು. ಶಂಖಚಕ್ರ ಕಿರೀಟ ಅಭಯಹಸ್ತಗಳಿಂದ ಶೋಭಾಯಮಾನವಾದ ವಿಗ್ರಹ ಅದು. ಇದರೊಂದಿಗೆ ರುಕ್ಮಿಣೀ ಸತ್ಯಭಾಮಾಸಹಿತ ನವನೀತ ಕೃಷ್ಣ ಎರಡೂ ಕೈಯಲ್ಲಿ ಬೆಣ್ಣೆ ಮುದ್ದೆ ಹಿಡಿದು ಕೊಂಡಿದ್ದಾನೆ ಮತ್ತು ವೇದವ್ಯಾಸ ದೇವರು ಇದ್ದಾರೆ. ಈ ಎಲ್ಲ ವಿಗ್ರಹಗಳನ್ನೂ ದಾಸರಿಗೆ ಪಾಂಡುರಂಗದಾಸರು ತುಳಸೀ ದಳವಿಟ್ಟು ಶ್ರೀಕೃಷ್ಣಾರ್ಪಣವೆಂದರು. ಜಗನ್ನಾಥದಾಸರ ಕರಾರ್ಚಿತ ಪ್ರತಿಮೆಗಳು ಅನಾಯಾಸವಾಗಿ ತಮ್ಮಲ್ಲಿಗೆ ಬಂದಿದ್ದು ದಾಸರಿಗೆ ಆನಂದವಾಯಿತು. ಆ ಮೂರ್ತಿ ಪೂಜೆಗೆಂದು ಬೇಕಾದ ಸಲಕರಣೆಗಳನ್ನು ಮಾಡಿಸಿ ನಿತ್ಯ ಅರ್ಚನೆ ಮಾಡುತ್ತಿದ್ದರು. ಅಂತೆಯೇ ದಾಸರು ಮಳಖೇಡದಲ್ಲಿ ೧೫ ದಿನ ಪಯೋವ್ರತ ಮಾಡಿದರು. ಟೀಕಾರಾಯರ ಸೇವೆ ಮಾಡಿದರು. ಅಲ್ಲಿಯ ಅರ್ಚಕರಿಗೆ ಸ್ವಪ್ನ ಸೂಚಿತವಾಗಿ ಟೀಕಾರಾಯರ ವೃಂದಾವನದ ಮೇಲೆ ಬಹಳ ಕಾಲದಿಂದ ಪೂಜೆಗೊಳ್ಳುತ್ತಿದ್ದ ಲಕ್ಷ್ಮೀನಾರಾಯಣ ವಿಗ್ರಹ ದಾಸರಿಗೆ ಲಭ್ಯವಾಯಿತು. ಪಂಚ ಬೃಂದಾವನಗಳನ್ನು ಒಂದು ತಟ್ಟೆಗೆ ಸೇರಿಸಿ, ನಿತ್ಯ ರಾಜರಪೂಜಾ ಮಾಡುತ್ತಿದ್ದರು ಇವರ ಬಳಿ ಇದ್ದ ಇತರ ಮೃತ್ತಿಕಾ ಬೃಂದಾವನಗಳೆಂದರೆ ಶ್ರೀಬ್ರಹ್ಮಣ್ಯತೀರ್ಥರು ಶ್ರೀಶ್ರೀಪಾದರಾಜರು, ಶ್ರೀವ್ಯಾಸತೀರ್ಥರು, ಶ್ರೀರಾಘವೇಂದ್ರತೀರ್ಥರು, ಶ್ರೀವೇದೇಶ

ತೀರ್ಥರು ಇತ್ಯಾದಿ. ಕಂಕಣಾಕಾರ ಸುಳಾದಿಗೆ ಅನುಗುಣವಾಗಿ ತಾಮ್ರದ ದೊಡ್ಡ ಚಕ್ರಾಬ್ಜ ಮಂಡಲ ಮಾಡಿಸಿ ಅದರ ಮೇಲೆ ಎಲ್ಲ ದೇವರುಗಳನ್ನಿಟ್ಟು ನಿತ್ಯ ಪೂಜೆ ಮಾಡುತ್ತಿದ್ದರು. ದಾಸರ ದೇವರ ಪೂಜೆ ಅದೊಂದು ಸಂಸ್ಥಾನ ಪೂಜೆಯೇ ಆಗಿತ್ತು.

ಮನೆಯನ್ನೇ ಮಂದಿರ ಮಾಡಿದವರು

ದಾಸರು ಮೈಸೂರಿನ ಕೃಷ್ಣಮೂರ್ತಿ ಪುರದಲ್ಲಿದ್ದ ತಮ್ಮ ಮನೆಯನ್ನೇ ಮಂದಿರ ಮಾಡಲು ನಿರ್ಧರಿಸಿದರು. ಹರಿದಾಸರ ಮನ ದೈವ ವಿಠಲನ ಸ್ಥಾಪನೆ ಮತ್ತು ಪ್ರತಿಷ್ಠಾಪನೆಗೆ ಸಂಕಲ್ಪ ಕೈಗೊಂಡರು. ದೇವಸ್ಥಾನದ ಅಗತ್ಯಕ್ಕೆ ತಕ್ಕಂತೆ ಮನೆ ಮಾರ್ಪಾಟಾಯಿತು. ಗದುಗಿನ ಪ್ರಸಿದ್ಧ ಶಿಲ್ಪಿ ಸೋಮಣ್ಣ ಎಂಬುವರು ಕಪ್ಪು ಶಿಲೆಯಲ್ಲಿ ಪಾಂಡುರಂಗ ವಿಠಲನ ಸುಂದರಮೂರ್ತಿಯನ್ನು ಕೆತ್ತಿದರೆ ಸಿಕಂದರಾಬಾದಿನಲ್ಲಿ ಶ್ರೀರಂಗನಾಥರಾಯರ ಮನೆಯಲ್ಲಿ ಪೂಜೆಗೊಳ್ಳುತ್ತಿದ್ದ ಪುರಾತನವಾದ ಪ್ರಾಣದೇವರ ಪ್ರತೀಕ ದೈವೀದತ್ತವಾಗಿ ಪ್ರಾಪ್ತವಾಯಿತು. ಮನೆ ಗುರುಗೋವಿಂದ ನಿವಾಸ ಎಂದು ಕರೆಯಲ್ಪಟ್ಟಿತು.

ಮೈಸೂರಿನ ಕೃಷ್ಣಮೂರ್ತಿ ಪುರಂನ ಭಾಗದಲ್ಲಿರುವ ನಗರ ಮಧ್ಯ ಪ್ರದೇಶ ಸುಮಾರು ೧೦ ಲಕ್ಷಕ್ಕೂ ಮೀರಿದ ಆಸ್ತಿಯನ್ನು ತ್ಯಾಗಮಾಡಿ ಟ್ರಸ್ಟ್ ಹೆಸರಿಗೆ ರಿಜಿಸ್ಟರ್ ಮಾಡಿ ಶಿಷ್ಯರಿಗಾಗಿ, ಧಾರ್ಮಿಕ ಕಾರ್ಯಗಳಿಗಾಗಿ ಬಿಟ್ಟುಕೊಟ್ಟ ಮಹನೀಯರು ತ್ಯಾಗಿಗಳು ಇವರು. ಮಕ್ಕಳಾದವರು ಸಹ ಶಿಷ್ಯರಾಗಿ ಬಂದರೆ ಮಾತ್ರ ಇಲ್ಲಿ ಅವಕಾಶ ಎಂದ ಹರಿದಾಸರು. ಪ್ರಮಾದೀಚ ನಾಮಸಂವತ್ಸರ ವೈಶಾಖ ಬಹುಳ ಸಪ್ತಮಿ ೨೪.೫.೧೯೭೩ ಗುರುವಾರ ಪ್ರಾತಃಕಾಲ ಸಿಂಹ ಲಗ್ನದಲ್ಲಿ ಅಭಿಜನ್ಮುಹೂರ್ತದಲ್ಲಿ ಸಾಗರ ಕಟ್ಟೆ ಮಠಾಧೀಶರಾದ ಶ್ರೀ ಶ್ರೀಪ್ರದ್ಯುಮ್ನ ತೀರ್ಥ ಶ್ರೀ ಪಾದಂಗಳವರ ಅಮೃತ ಹಸ್ತದಿಂದ ವಿಠಲ ದೇವರ ಹಾಗೂ ಮುಖ್ಯ ಪ್ರಾಣದೇವರ ಪ್ರತಿಷ್ಠಾಪನಾ ಕಾರ್ಯ ವೈಭವದಿಂದ ನಡೆಯಿತು. ನವಕೋಟಿ ನಾರಾಯಣನಾಗಿದ್ದ ಶ್ರೀನಿವಾಸನಾಯಕ ಸಮಗ್ರ ಆಸ್ತಿಯನ್ನು ದಾನ ಮಾಡಿ ದಾಸರಾದರೆ ದಾಸರಾಗಿ ಸಮಗ್ರ ಆಸ್ತಿಯನ್ನು ವಿಠಲನಿಗೆ ಅರ್ಪಣೆ ಮಾಡಿದರು ಗುರು ಗೋವಿಂದ ದಾಸರು. ಸಹಸ್ರಾರು ಭಗವದ್ಭಕ್ತರು, ಹರಿದಾಸರು, ವಿದ್ವಾಂಸರು ಈ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು. ಹರ್ಷ ಪುಳಕಿತರಾದ ದಾಸರಿಂದ ಕೀರ್ತನೆ ಹೊರಹೊಮ್ಮಿತು.

ಬಂದಾನೋಡೇ – ವಿಠಲ ಮನೆಗೇ
ಬಂದಾ ನೋಡೇ ವಿಠಲಾ ॥ಪ॥

ನಂದನ ಕಂದ ಯಶೋದೆಯಾನಂದ ಅರವಿಂದ ನಯನ ಗೋವಿಂದ, ಇಂದುಭಾಗನಿವಾಸ ಗುರುಗೋವಿಂದ ವಿಠಲದಾಸರ ಕರೆಗೆ ಬಂದು ನಿಂತಿದ್ದಾನೆ ; ಇಂದಿಗೂ ಭಕ್ತರಿಗೆ ಅನುಗ್ರಹ ಮಾಡುತ್ತಾ, ಜ್ಞಾನಕಾರ್ಯಗಳನ್ನು ನಡೆಸುತ್ತಾ, ಗುರುಗೋವಿಂದದಾಸರ ಕೀರ್ತಿ ಪತಾಕೆ ದಿಗ್ದಿಗಂತಗಳಿಗೆ ಹರಿಸುತ್ತಾ ನೆಲೆಸಿದ್ದಾನೆ.

ಸದ್ಗ್ರಂಥಗಳ ರಚನೆ

ಸಾಹಿತ್ಯ ಸರಸ್ವತಿಯ ಸಿರಿ ಮುಡಿಗೆ ದಾಸರು ಮುಡಿಸಿರುವ ಕುಸುಮಗಳು ಹಲವಾರು. ಅವರಿಗೆ ಗ್ರಂಥರಚನೆ, ಪ್ರಕಟಣೆ ಒಂದು ಪವಿತ್ರದೀಕ್ಷೆ. ಅದಕ್ಕಾಗಿಯೇ ಗುರುಕೃಪಾ ಗ್ರಂಥಮಾಲಾ ಎಂಬ ಶೀರ್ಷಿಕೆಯಲ್ಲಿ ವಿಠಲನಿಗೆ ಸಮರ್ಪಿಸಿದ ಮಾಲೆಗಳು ಹತ್ತಾರು. ಹರಿದಾಸ ಸಾಹಿತ್ಯ ಪ್ರಚಾರದಲ್ಲಿ ಗೋರೆಬಾಳು ಹನುಮಂತರಾಯರು ದಾವಣಗೆರೆ ಭೀಮರಾಯರು ಇವರಿಬ್ಬರ ನಂತರ ಸಿಕ್ಕುವ ಹೆಸರು ಗುರು ಗೋವಿಂದದಾಸರದು.

ಸಾಹಿತ್ಯ ಜೀವನದ ಪ್ರಾರಂಭದಲ್ಲಿ ತಮಗೆ ಅಂಕಿತ ನೀಡಿ ಉದ್ಧಾರ ಮಾಡಿದ ತಂದೆ ಮುದ್ದುಮೋಹನದಾಸರ ಚರಿತ್ರೆ ಬರೆಯುವುದರೊಂದಿಗೆ ಚಾಲನೆ ಗೊಳಿಸಿದರು.

೧೯೬೫ ರಲ್ಲಿಯೇ ತಂದೆ ಮುದ್ದುಮೋಹನದಾಸರ ಜನ್ಮ ಶತ ಮಾನೋತ್ಸವದ ಸಂಸ್ಮರಣೆಗಾಗಿ ಪ್ರಕಟಿಸಿದರಾದರೂ ೧೯೭೭ರಲ್ಲಿ ಪುನ ರ್ಮುದ್ರಣಗೊಂಡಿತು. ಗುರುಗಳಿಗೆ ಸಂಬಂಧಿಸಿದ ವಿಚಾರಗಳು ಶಿಷ್ಯರ ಅನುಭವಗಳು ಎಲ್ಲ ತಿಳಿಸುವ ಮೂಲಕ ದಾಸರ ಮಹಿಮೆಯನ್ನು ತಿಳಿಸಿ ಭಕ್ತ್ಯುದ್ರೇಕವಾಗುವಂತೆ ಮಾಡಿದ್ದಾರೆ.

ನಂತರ ಪರಮಗುರುಗಳಾದ ಮುದ್ದುಮೋಹನದಾಸರ ಚರಿತ್ರೆ ಬರೆದರು. ಅನೇಕ ಊರುಗಳ ಸಂಚಾರ ಮಾಡಿ ಅನೇಕ ವ್ಯಕ್ತಿಗಳ ಭೇಟಿಮಾಡಿ ಅನೇಕ ವಿಚಾರಗಳನ್ನು ಸಂಗ್ರಹ ಮಾಡಿ ಪ್ರಕಟ ಮಾಡಿದ ದಿಟ್ಟರು ಗುರುಗೋವಿಂದ ದಾಸರು. ಗುರುಗಳ ಪರಮ ಗುರುಗಳ ಚರಿತ್ರೆಯ ಅನುವಾದ ಮಾಡುವುದರ ಮೂಲಕ ಅವರ ವಿಶೇಷಾನುಗ್ರಹದಕ್ಕೆ ಪಾತ್ರರಾಗಿ, ಹಿರಿಯರಾದ ಹರಿದಾಸರ

ಚರಿತ್ರೆಗಳನ್ನ ಪ್ರಕಟಿಸುವ ಸಂಕಲ್ಪ ಕೈಗೊಂಡು ಹರಿಭಕ್ತ ವಿಜಯ ಮಾಲೆ ಪ್ರಾರಂಭಿಸಿದರು.

ಹರಿಭಕ್ತವಿಜಯ

ಈ ಮಾಲೆ ಎಂಟು ಸಂಪುಟಗಳಲ್ಲಿ ಹೊರಬಂದಿದೆ. ರಾಜರಲ್ಲಿ ಅಪಾರ ಶ್ರದ್ಧೆ ಭಕ್ತಿ ಇಟ್ಟಿದ್ದ ದಾಸರ ಪ್ರತೀಕವೊ ಎಂಬಂತೆ ಮೊದಲ ಸಂಪುಟ ಭಾವೀ ಸಮೀರವಾದಿರಾಜರ ಚರಿತ್ರೆಗೆ ಮೀಸಲಾಗಿದೆ. ಈ ಪುಸ್ತಕದಲ್ಲಿ ಸೋದಾಕ್ಷೇತ್ರದ ದರ್ಶನವನ್ನೇ ನಮಗೆ ಮಾಡಿಸಿದ್ದಾರೆ. ಅಲ್ಲದೆ ವೃಂದಾವನಾಚಾರ್ಯರೆಂದೇ ಖ್ಯಾತರಾದವರಾದ ಶ್ರೀವಿಶ್ವಪ್ರಿಯ ತೀರ್ಥರ ಚರಿತ್ರೆಯನ್ನೂ ದಾಸರು ರಚಿಸಿದ್ದಾರೆ. ವಾದಿರಾಜರ ಪರಮಭಕ್ತರಾದ ಜಂಬುಖಂಡಿ ವಾದಿರಾಜಾಚಾರ್ಯರ ಚರಿತ್ರೆ, ತಂದೆ ವರದ ಗೋಪಾಲವಿಠಲದಾಸರ ಚರಿತ್ರೆ ಈ ಸಂಪುಟದಲ್ಲಿ ಪ್ರಕಟವಾಗಿವೆ.

ಎರಡನೆಯ ಸಂಪುಟದಲ್ಲಿ ದಾಸರ ಪೀಳಿಗೆಯ ಏಳು ಜನ ಹರಿದಾಸರ ಚರಿತ್ರೆಗಳು ಅರಳಿವೆ. ವ್ಯಾಸವಿಠಲ ದಾಸರು, ರಘುಪತಿ ವಿಠಲ ದಾಸರು, ಭೂವರಾಹ ರಘುಪತಿ ವಿಠಲದಾಸರು, ಶ್ರೀಪತಿ ವಿಠಲದಾಸರು, ತಂದೆ ಶ್ರೀಪತಿವಿಠಲದಾಸರು, ಶ್ರೀನಿಧಿ ವಿಠಲದಾಸರು, ಶ್ರೀವರವಿಠಲದಾಸರು, ಇವನ್ನು ಬೆಳಕಿಗೆ ತಂದ ಕೀರ್ತಿ ಗುರುಗೋವಿಂದದಾಸರಿಗೆ ಸಲ್ಲುತ್ತದೆ.

ಹರಿಭಕ್ತವಿಜಯನ ತೃತೀಯ ಭಾಗದಲ್ಲಿ ದಾಸರು ಚಿತ್ರಿಸಿರುವ ಹರಿದಾಸರ ಚರಿತ್ರೆಗಳೆಂದರೆ ವಿಜಯದಾಸರ ಸಾಕು ಮಕ್ಕಳಾದ ಮೋಹನದಾಸರು, ವಿಜಯದಾಸರ ಪೂರ್ವ ಜನ್ಮ ಹಾಗೂ ಪುರಂದರದಾಸರ ಮಕ್ಕಳಾಗಿದ್ದ ಮಧ್ವಪತಿ ವಿಠಲದಾಸರು, ಶ್ರೀನಿವಾಸನ ಕಾರುಣ್ಯ ಪಾತ್ರರಾಗಿ ಅವನಿಂದಲೇ ಅಂಕಿತ ಪ್ರದಾನ ಮಾಡಿಸಿಕೊಂಡ ಪ್ರಸನ್ನ ವೆಂಕಟದಾಸರು, ಜಯೇಶ ವಿಠಲ ದಾಸರು ಹಾಗೂ ವಿಜಯ ರಾಮಚಂದ್ರವಿಠಲ ದಾಸರ ಜೀವನ ಚರಿತ್ರೆಗಳು.

ಮಣೂರು ಹನುಮಂತದಾಸರು ಹಾಗೂ ಹರಪನ ಹಳ್ಳಿ ಭೀಮವ್ವನ ಚರಿತ್ರೆಯನ್ನು ಆಕರ್ಷಣೀಯವಾಗಿ ಹರಿಭಕ್ತ ವಿಜಯ ಭಾಗ ೪ ರಲ್ಲಿ ಚಿತ್ರಿಸಿದ್ದಾರೆ. ದಾಸರ ಶೈಲಿಯ ಸೊಬಗು ಈ ಕೃತಿಯಲ್ಲಿ ಕಾಣಬಹುದಾಗಿದೆ. ಓದಲು ಪ್ರಾರಂಭಿಸಿದರೆ ಮುಗಿಸುವವರೆಗೆ ಕೆಳಗಿಡಲು ಸಾಧ್ಯವಾಗದು.

ಹರಿಭಕ್ತ ವಿಜಯ ಭಾಗ – ೫ ರಲ್ಲಿ ಭಾಗವತ ಸಾರೋದ್ಧಾರ ಕರ್ತರಾದ, ರುದ್ರಾಂಶ ಸಂಭಾತರಾದ ಅರಣ್ಯಕಾಚಾರ್ಯರಾದ ಶ್ರೀವಿಷ್ಣುತೀರ್ಥ ಚರಿತ್ರೆ ಅವರ

ಕೃತಿಗಳ ಪರಿಚಯದೊಂದಿಗೆ ಚಿತ್ರಿಸಿದ್ದಾರೆ. ಶ್ರೀನಿವಾಸನ ಪರಮಾನುಗ್ರಹಕ್ಕೆ ಪಾತ್ರರಾಗಿ ಶ್ರೀನಿವಾಸ ಕಲ್ಯಾಣವನ್ನು ಕನ್ನಡದಲ್ಲಿ ಭಟ್ಟಿ ಇಳಿಸಿರುವ ಏರಿ ಶೇಷಾಚಾರ್ಯರ ಚರಿತ್ರೆ ಇದರಲ್ಲುಂಟು.

ತಮ್ಮ ಶಿಷ್ಯರಿಂದಲೂ ದಾಸರಾಯರ ಚರಿತ್ರೆಗಳನ್ನು ಅನುವಾದ ಮಾಡಿಸಿ ಪ್ರಕಟಿಸುವ ಕಾರ್ಯ ಪ್ರವೃತ್ತಿ ದಾಸರದು. ಶ್ರೀಮುರಳೀವಿನೋದವಿಠಲ ದಾಸರಿಂದ ರಚಿತವಾದ ಶ್ರೀ ರಾಘವಾರ್ಯ ಒಡೆಯರ ಚರಿತ್ರೆಯನ್ನು ಹರಿ ಭಕ್ತಿವಿಜಯ ಭಾಗ – ೬ ರಲ್ಲಿ ಪ್ರಕಟಿಸಿ, ಶಿಷ್ಯರಿಗೆ ಉತ್ತೇಜನ ನೀಡಿದ್ದಾರೆ.

ಪಾಂಡುರಂಗೀ ಹುಚ್ಚಾಚಾರ್ಯರ ಚರಿತ್ರೆಯನ್ನೂ ಹೃದಯಂಗಮವಾಗಿ ವರ್ಣನೆ ಮಾಡಿದ್ದಾರೆ. ತಮ್ಮ ಕಣ್ಣೆದುರಿಗೆ ಇದ್ದ ಮಹಾತ್ಮರನ್ನು ಗುರುತಿಸುವ ಶಕ್ತಿ ಅವರಲ್ಲಿತ್ತು.

ಎಂಟು ಉಪನಿಷತ್ತುಗಳ ಮೂಲ, ಆಚಾರ್ಯರ ಭಾಷ್ಯ – ಕನ್ನಡ ತಾತ್ಪರ್ಯ, ಭಾಮಿನಿಷಟ್ಪದಿಯಲ್ಲಿ ಪದ್ಯ ರಚನೆ ಮಾಡಿ ಅಪೂರ್ವ ದಾಖಲೆ ನಿರ್ಮಾಣ ಮಾಡಿದ್ದಾರೆ. ಸಾಮಾನ್ಯವಾಗಿ ಉಪನಿಷತ್ತುಗಳನ್ನು ಪ್ರತಿ ಶ್ಲೋಕ ಕ್ಕೊಂದು ಪದ್ಯದಂತೆ ಬರೆದಿರುವ ಕೀರ್ತಿ ಗುರುಗೋವಿಂದ ದಾಸರದು. ಇವುಗಳಲ್ಲಿ ಅವರು ಮಾಡಿರುವ ಮಂಗಳಾಚರಣೆ ಪದ್ಯಗಳೇ ಬಹು ಸೊಗಸಾಗಿವೆ.

ಉತ್ತಮರು ಬೊಮ್ಮಾದಿ ಜೀವರು
ಮತ್ತೆ ಲಕ್ಷ್ಮೀಗು ನಿತ್ಯಜ್ಞಾನ
ಸ್ಫೂರ್ತಿದಾಯಕ ಹರಿಗೆ ಮಧ್ವರು ನಮನಗೈದಿಹರು.

ಯಜ್ಞಪತಿ ಯಜ್ಞಾಂಗ ಯಜ್ಞನೆ
ಯಜ್ಞವಾಹನ ಯಜ್ಞನಾಮನೆ
ಯಜ್ಞ ಭೃದ್ಯಜ್ಞಗಳಕೃದ್ಯಜ್ಞಭುಗ್ಯಜ್ಞೀ
ಯಜ್ಞಸಾಧನ ಯಜ್ಞಗುಹ್ಯನೆ
ಯಜ್ಞ ಯಜ್ಞಾಂತ ಕ್ರತುವೆನಿಪನೆ
ಯಜ್ಞಭುಜಿಸರ್ವಜ್ಞ ವಿಘ್ನಹಹರಿಯೆ ನಮಿಸುವೆನು

ಎಂದು ಈಶಾವ್ಯಾಸ ಉಪನಿಷತ್ತಿನ ಮಂಗಳಾಚರಣೆಯಲ್ಲಿ ತಿಳಿಸಿದರೆ ಮತ್ತೊಂದು ಕಡೆಯಲ್ಲಿ "ಬರೆದವನು ನಾನಲ್ಲ ಬರೆಸಿದವರು ಬೇರೊಬ್ಬರುಂಟು"

ಅವರಿಗೂ ನಿಯಾಮಕನುಂಟು ಅವನೊಬ್ಬನೇ ಸರ್ವತಂತ್ರ ಸ್ವತಂತ್ರ ನಾವೆಲ್ಲ ಅವನ ಅಧೀನರು ಎನ್ನುತ್ತಾರೆ.

ಅರ್ಥ ಕನ್ನಡದಲ್ಲಿ । ವಿಸ್ತರಿಪಕಾರ್ಯದಲ್ಲಿ
ತತ್ವಮಾನಿಗಳೂ ಎನ್ನಲ್ಲಿ ನಿಂತು ಪರ
ಮಾರ್ಥಗಳನ್ನೇ ನುಡಿಸಾಲಿ ।

ಮಧ್ವಶಾಸ್ತ್ರದಜ್ಞಾನ । ಶುದ್ಧಮಂದನಿಗೆಂತು
ಮುದ್ದುಮೋಹನರಾ ಶಿಷ್ಯರು ಶಿಷ್ಯಮಮಗುರುತಂದೆ
ಮುದ್ದುಮೋಹನರೇ ನುಡಿಸಾಲಿ

ಗುರುಗಳಲಿ ತಾ ನಿಂತು । ಪರಮಾರ್ಥ ಬೋಧಿಸುವ
ಗುರುವಂತರಂತ್ಮಾ ಬೇಡುವೆ । ಬೇಡ್ವೆ ತವಪಾದಾಬ್ಜ
ಗುರುಗೋವಿಂದ ವಿಠಲಾ ಪಾಲೀಸೋ ॥

ಹೀಗೆ ಉಪನಿಷತ್ತುಗಳ ಮಾಲೆಯನ್ನೇ ವಿಠಲನಿಗೆ ಅರ್ಪಣೆ ಮಾಡಿದ್ದಾರೆ.

ದಾಸರ ಕರಕುಂಜದಿಂದ ಅರಳಿರುವ ಇತರ ಕೃತಿಕುಸುಮಗಳೆಂದರೆ,

೧. ಶ್ರೀ ವಾದಿರಾಜರ ಋಜುತ್ವಪ್ರಕಾಶಿಕಾ

೨. ಶ್ರೀಸ್ವಾಪ್ನ ವೃಂದವನಾಖ್ಯಾನ ಮೂಲ ಪ್ರಕಟಣ –೨೭ ಅಧ್ಯಾಯ ಗಳನ್ನು ೨ ಭಾಗಗಳ ಕನ್ನಡಲಿಪಿಯಲ್ಲಿ

೩. ಶ್ರೀ ವಿಷ್ಣು ತೀರ್ಥವಿರಚಿತ 'ಪೋಡಶಿ ಚತುರ್ದಶಿ' ಮೂಲ ಕನ್ನಡ ಅನುವಾದ

೪. 'ಆಧ್ಯಾತ್ಮ ರಸರಂಜನಿ' ಜಂಬುಖಂಡೀ ಆಚಾರ್ಯರ ವ್ಯಾಖ್ಯಾನ ಸಹಿತ

೫. ಸುಂದರ ಕಾಂಡ ರಾಮಾಯಣ ಮತ್ತು ಮಾನಸ ಸ್ಮೃತಿ ಮೂಲ ತಾತ್ಪರ್ಯ ಮತ್ತು ಷಟ್ಪದಿ ಅನುವಾದ

೬. ಶ್ರೀ ವಾದಿರಾಜ ವಿರಚಿತ ಪಂಚೀಕರಣ

೭. ಶ್ರೀ ಮನ್ಮಧ್ವಸಹಸ್ರ ನಾಮಾವಳಿ

೮. ದಾಸರಿಂದ ರಚಿತ ದೇವರ ನಾಮಗಳು ದಾಸಕಕ್ಷೆ - ಯತಿಕಕ್ಷೆ ದೇವತಾಕಕ್ಷೆ

೯. ಸತ್ಸಂಪ್ರದಾಯ ಭಜನಾ ಪದ್ಧತಿ

ಹೀಗೆ ಹಲವಾರು ಕೃತಿಗಳ ಪ್ರಕಟಣೆ ಮಾಡಿ ಒಂದು ವಿಶ್ವವಿದ್ಯಾನಿಲಯ ಮಾಡಬಹುದಾದ ಕಾರ್ಯವನ್ನು ಏಕೈಕ ವ್ಯಕ್ತಿ ಮಾಡಿದ್ದಾರೆ.

ದಾಸರಿಂದ ರಚಿತ ದೇವರ ನಾಮಗಳನ್ನು ಪ್ರತ್ಯೇಕವಾಗಿ ಮುದ್ರಿಸಿರುವ ಕಾರಣ ಅವುಗಳ ಸಮೀಕ್ಷೆಯನ್ನು ಅನುಬಂಧದಲ್ಲಿ ಮಾಡಿರುತ್ತೇನೆ.

ಈ ಕೃತಿಗಳಲ್ಲದೇ ಹಸ್ತಪ್ರತಿಯಾಗಿ ಉಳಿದಿರುವ ಅವರ ಕೃತಿಗಳು ಹಲವಾರು. ಸಾಲಿಗ್ರಾಮ ಮಹಾತ್ಮೆ - ಯೋಗ ವಿಚಾರ, ಅನ್ನ ಬ್ರಹ್ಮ, ಆಧ್ಯಾತ್ಮಿಕ ಶ್ರೀನಿವಾಸ ಕಲ್ಯಾಣ ಹೀಗೆ ಹಲವಾರಿವೆ. ಇದರಲ್ಲಿ ಅನ್ನ ಬ್ರಹ್ಮ ಒಂದು ಮಾತ್ರ ಇತ್ತೀಚೆಗೆ ಪ್ರಕಟಣೆಗೊಂಡಿದೆ. ಆಧ್ಯಾತ್ಮ ಶ್ರೀನಿವಾಸ ಕಲ್ಯಾಣ ಸಹ ಬೆಳಕಿಗೆ ಬಂದಿದೆ.

ಅಂಕಿತಮಾಲಾ ಎಂಬ ಪುಸ್ತಕ ಈಚೆಗೆ ಪ್ರಕಟವಾಗಿದ್ದು ಗುರುಗೋವಿಂದ ದಾಸರು ಅವರ ಗುರುಗಳಿತ್ತ ಅಂಕಿತನಾಮಗಳನ್ನು ಉಪಯೋಗಿಸಿಕೊಂಡು ರಚಿಸಿರವ ತ್ರಿಪದಿಗಳು. ಅಲ್ಲದೆ ತಾವೇ ನೀಡಿರುವ ೧೦೮ ಅಂಕಿತನಾಮಗಳ ತ್ರಿಪದಿಯೂ ಇದರಲ್ಲಿದೆ. ಇದರಲ್ಲಿ ವಿಠಲ ಸಹಸ್ರ ನಾಮಾವಳಿ ಅಡಗಿರುವುದು ವಿಶೇಷ.

ಹರಿದಾಸ ದೀಪಿಕಾ

ಗುರುಗಳಾದ ತಂದೆ ಮುದ್ದುಮೋಹನದಾಸರ ಮಾರ್ಗದರ್ಶನದಲ್ಲಿ ಹೆಜ್ಜೆಯನ್ನಿಡುವ ಸತ್ಸಂಪ್ರದಾಯ ದಾಸರದು. ಅವರು ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಸಲುವಾಗಿ ಪರಮಾರ್ಥ ಚಂದ್ರೋದಯ ಎಂಬ ಪತ್ರಿಕೆ ನಡೆಸುತ್ತಿದ್ದರು. ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ವಿವಿಧ ಲೇಖನಗಳನ್ನು ಹರಿ ಕೀರ್ತನೆಗಳನ್ನು ಪ್ರಕಟಿಸುತ್ತಿದ್ದರು. ಈ ದಿಶೆಯಲ್ಲಿ ದಾಸರು ತಮ್ಮ ಇಳಿ ವಯಸ್ಸಿನಲ್ಲಿ ಬಂದು ಮಾಸಪತ್ರಿಕೆ 'ಹರಿದಾಸ ದೀಪಿಕಾ' ಪ್ರಾರಂಭಿಸಿದರು. ಪರಮಾತ್ಮನ ಷೋಡಶೋಪಚಾರದ ಪೂಜೆಯ ಪ್ರತೀಕವಾಗಿ ೧೬ ಪುಟಗಳ ಮಾಸಪತ್ರಿಕೆ ಇದಾಗಿತ್ತು. ಇದರಲ್ಲಿ ಅನೇಕ ಮಹನೀಯರಿಂದ ಬರುವ ಲೇಖನಗಳನ್ನಷ್ಟೇ ಅಲ್ಲದೆ ತಾವೂ ಹರಿದಾಸರ ಅಂತರಂಗದ ಭಾವವನ್ನು ತಿಳಿಸುವವರಾದರು ; ಶಿಷ್ಯರಿಗೆ ಸದ್ಬೋಧನೆ ಮಾಡಿಸುವವರಾದರು. ಯಾವುದೇ

ಪ್ರತಿಷ್ಠೆ ಬಯಸಲಿಲ್ಲ, ಲಾಭಕ್ಕಾಗಿ ಆಸೆಪಟ್ಟವರಲ್ಲ, ಶ್ರೀಹರಿ ವಾಯುಗಳ ಸೇವೆ ಎಂದು ತಿಳಿದು ಮಾಡಿದ ಅದ್ಭುತ ಸೇವೆ ಇದು.

ಶ್ರೀ ಪುರಂದರದಾಸರ ಆರಾಧನೆ

ದಾಸರು ಎಲ್ಲ ಯತಿಗಳ, ಹರಿದಾಸರ ಆರಾಧನೆಗಳನ್ನು ತಪ್ಪದೆ ಮಾಡುತ್ತಿದ್ದರು. ಹರಿದಾಸರ ವೇಷದಲ್ಲಿ ಕಾಲಿಗೆ ಗೆಜ್ಜೆ ಕಟ್ಟಿ ತಂಬೂರಿ ಮೀಟುತ್ತ ಹೆಗಲಿಗೆ ಜೋಳಿಗೆ ಹಾಕಿಕೊಂಡು ಯಾಯಾವಾರಕ್ಕೆ ಹೋಗುತ್ತಿದ್ದರು ಜೊತೆಗೆ 'ಶ್ರೀಪುರಂದರ ದಾಸರ ಆರಾಧನೆಗಾಗಿ ಯಾಯಿವಾರ' ಎಂದು ? ಬರೆದು ತಂಬೂರಿಗೆ ಅಂಟಿಸಿಕೊಂಡು ಒಬ್ಬರೇ ಹಲವಾರು ಮನೆಗೆ ಯಾಯಿವಾರಕ್ಕೆ ಹೋಗುವರು. ಜೋಳಿಗೆ ಭರ್ತಿಯಾದರೆ ಭಾರವೆನಿಸಿದರೆ ಒಂದು ಮನೆಯಲ್ಲಿ ಸುರಿದು ಮುಂದೆ ಹೋಗುವುದು ನಂತರ ಸೈಕಲ್ ಮೇಲೆ ಒಂದು ಚೀಲದಲ್ಲಿ ಎಲ್ಲರ ಮನೆಯಲ್ಲಿ ಸಮರ್ಪಿಸಿದ ಧನ ಧಾನ್ಯ ಸಂಗ್ರಹಣೆ ಮಾಡಿಕೊಂಡು ಬರುವುದು, ಎಲ್ಲರನ್ನು ಆಹ್ವಾನಿಸಿ ವಿಜೃಂಭಣೆಯಿಂದ ಆರಾಧನೆ ಪ್ರಾರಂಭಿಸಿದರು. ಕ್ರಮೇಣ ಇದರ ವ್ಯಾಪ್ತಿ ಹರಡಿ, ಹಿರಿದಾಗುತ್ತಾ ಬಂತು. ದೇಶದ ವಿವಿಧ ಭಾಗಗಳಲ್ಲಿ ನಡೆಸಲು ಮುಂದಾಗಿ ಪಂಢರಾಪುರ, ತಿರುಪತಿ, ಹೈದ್ರಾಬಾದ್, ವಿಶಾಖಪಟ್ಟಣದಂತಹ ಪಟ್ಟಣಗಳಲ್ಲಿ ಸಹ ನಡೆಯಿತು. ಒಂದು ದಿನವಲ್ಲ ಎಂಟುದಿನ ಒಂಭತ್ತು ದಿನ ಹದಿನೈದು ದಿನಗಳ ಕಾಲ ಅನ್ನದಾನ ಜ್ಞಾನದಾನ, ನಡೆದ ಇತಿಹಾಸಗಳಿವೆ.

ಈ ಆರಾಧನೆಯನ್ನು 'ಅಖಿಲ ಭಾರತ ಹರಿದಾಸ ಸಮ್ಮೇಳನ' ಎಂಬ ಹೆಸರಿನಿಂದ ಕರೆಯಲಾಯಿತು. ಬೃಹತೀ ಸಹಸ್ರಹೋಮ, ಸ್ವಾಪ್ನ ವೃಂದಾವನಾಖ್ಯಾನ ಹೋಮ, ಹರಿಕಥಾಮೃತಸಾರ ಹೋಮ ಮುಂತಾದ ಅಪೂರ್ವ ಹೋಮಗಳನ್ನು ಸಹ ಆಚರಿಸಿ ಒಂದು ಶುಭ ಸಂಪ್ರದಾಯಕ್ಕೆ ನಾಂದಿಹಾಡಿದರು. ಶಿಷ್ಯರ ಸಮ್ಮೇಳನ ಕಮ್ಮಟಗಳನ್ನು ನಡೆಸಿ ಮುಂದಿನ ಕಾರ್ಯಗಳ ಬಗ್ಗೆ ಯೋಜನೆ ಮಾಡುತ್ತಿದ್ದರು.

ಏಕಾದಶಿ ದಿನದಲ್ಲಿ ಏಕಾಂಗಿಯಾಗಿ ಸಂಪೂರ್ಣ ಜಾಗರಣೆ ಮಾಡಿ, ಹರಿವಾಣ ಸೇವಾ ನಡೆಸಿದ ದಿನಗಳು ಎಷ್ಟೋಇವೆ. ದೇಹದ ಆಯಾಸವನ್ನು ಪರಿಗಣಿಸದೆ, ನಂದೇನಿಲ್ಲವೋ ಸ್ವಾಮಿ ನಿಂದೇ ಇದೆಲ್ಲಾ ಎಂಬ ಭಾವನೆಯಿಂದ ಸರ್ವಸಮರ್ಪಣೆ ಮಾಡಿ, ನರ್ತನ ಸೇವೆ ಮಾಡುವ ವೃದ್ಧದಾಸರ ಆದರ್ಶ, ಯುವಕರನ್ನು ಪ್ರೋತ್ಸಾಹಿಸುವಂತಿತ್ತು.

ಶಿಷ್ಯ ಕೋಟಿ

ಗುರುಗೋವಿಂದದಾಸರು ಶ್ರೀವಿಜಯದಾಸರ ಪರಂಪರೆಯಲ್ಲಿ ಅವಿಚ್ಛಿನ್ನ ವಾಗಿ ಬಂದಿರುವವರು. ತಂದೆ ಮುದ್ದುಮೋಹನ ದಾಸರ ಕೊನೆಯ ಶಿಷ್ಯರು. ಆದರೆ ಶ್ರೀಹರಿಯ ಪ್ರೇರಣೆಯಂತೆ ದಾಸ ಬಳಗ, ದಾಸವಂಶ ಬೆಳೆಸುವ ಸಲುವಾಗಿ ಅಂಕಿತೋಪದೇಶ ಮಾಡಲು ಪ್ರಾರಂಭಿಸಿದರು. ಯಾರಾದರೂ ಬಂದು ಅಂಕಿತ ಕೇಳಿದರೆ ಇಲ್ಲವೆನ್ನದೆ 'ದೇವರನ್ನು ಪ್ರಾರ್ಥಿಸಿಕೊಳ್ಳಿ ನಿಮಗಾದ ಸ್ವಪ್ನ ಸೂಚನೆ ನನಗೆ ತಿಳಿಸಿ' ಎನ್ನುತ್ತಿದ್ದರು. ಅದೇ ಕಾಲದಲ್ಲಿ ತಾವೂ ವಿಠಲನನ್ನು ಪ್ರಾರ್ಥಿಸಿ ಅಂಕಿತ ನೀಡಲು ಅಪ್ಪಣೆ ಕೇಳುತ್ತಿದ್ದರು. ಒಂದು ದೇವರ ನಾಮದ ರೂಪದಲ್ಲಿ ಅಂಕಿತನಾಮ ರೂಪುಗೊಳ್ಳುತ್ತಿತು. ಹೀಗೆ ರೂಪುಗೊಂಡಿರುವ ಅಂಕಿತನಾಮಗಳು ಸುಮಾರು ೨೫೦ನ್ನು ಮೀರಿದೆ. ದಾಸರ ಶಿಷ್ಯರ ವ್ಯಾಪ್ತಿ, ಹಳ್ಳಿಯಿಂದ ದಿಲ್ಲಿಯವರೆಗೂ ಹಬ್ಬಿದೆ. ಮೈಸೂರು, ಮಂಡ್ಯ, ಬೆಂಗಳೂರು, ಹೈದ್ರಾಬಾದ್ ಮುಂತಾದ ಕಡೆಗಳಲ್ಲಿ ಹೆಚ್ಚು ಜನರು ಇದ್ದಾರೆ. ಬಳ್ಳಾರಿ, ಹುಬ್ಬಳ್ಳಿ, ವಿಜಾಪುರ ಮುಂತಾದ ಕಡೆಗಳಲ್ಲಿ ಸಹ ದಾಸರಿಗೆ ವಿಪುಲವಾದ ಶಿಷ್ಯ ಸಂಪತ್ತಿದೆ.

ದಾಸರ ಮೇಲ್ಪಂಕ್ತಿಯನ್ನು ಅನುಸರಿಸಿ ಧಾರ್ಮಿಕ ಸಂಘಟನೆಗಳನ್ನು ನಡೆಸುತ್ತಾ ಅಖಿಲಭಾರತ ಹರಿದಾಸ ಸಮ್ಮೇಳನದಂತಹ ಕಾರ್ಯಕ್ರಮಗಳನ್ನು ಇಂದಿಗೂ ಆಚರಿಸುವ ಸಂಘಟನೆ ಇದೆ. ದಾಸರ ಶಿಷ್ಯರಲ್ಲಿ ಒಳ್ಳೆಯ ಸಾಧಕರಿದ್ದಾರೆ, ಭಾವುಕರೂ ಇದ್ದಾರೆ, ಪ್ರವಚನಕಾರರಿದ್ದಾರೆ, ಚಿತ್ರಕಲಾಕಾರರು, ಸಂಗೀತಗಾರರು ಇದ್ದಾರೆ, ಧಾರ್ಮಿಕಮಾರ್ಗದಲ್ಲಿ ಮುನ್ನಡೆಯಲು ಅಂಕಿತ ಒಂದು ಸಾಧನ ಎಂದು ದಾಸರು ಹೇಳುತ್ತಿದ್ದರು. ದಾಸರ ಶಿಷ್ಯರಾದ ಶ್ರೀ ಹರಿನಾರಾಯಣವಿಠಲ ದಾಸರು, ಲೌಕಿಕ ವೃತ್ತಿಯನ್ನು ತೊರೆದು, ಲೋಕೈಕನಾಥನ ಸೇವೆಗಾಗಿ ತಮ್ಮ ಜೀವನವನ್ನೇ ಇಟ್ಟಿರುವಂತಹ ವೈರಾಗ್ಯ ಮನೋಭಾವುಳ್ಳವರಾಗಿದ್ದಾರೆ 'ಪರಿಮಳ ಗೆಳೆಯರ ಬಳಗ' ಎಂಬ ಹೆಸರಿನಲ್ಲಿ ಹಲವಾರು ಶಿಷ್ಯರನ್ನು ಹೊಂದಿ, ಶ್ರೀರಾಯರ ಆರಾಧನೆ ನಡೆಸುತ್ತಾ, ಹರಿದಾಸರ ಕೃತಿಗಳನ್ನು ಪ್ರಕಟಿಸುತ್ತಿರುವ ಬೆಂಗಳೂರಿನ ತಿರುಮಲೇಶ ಹರಿವಿಠಲದಾಸರ ಕಾರ್ಯ ಸ್ಮರಣೀಯವಾದುದು. ಅಖಿಲ ಕರ್ನಾಟಕ ತತ್ವಜ್ಞಾನ ಸಮ್ಮೇಳನದ ಮೂಲಕ ಶ್ರೀ ವಾದಿರಾಜರ, ಶ್ರೀವ್ಯಾಸರಾಜರ ಆರಾಧನೆ ನಡೆಸಿ, ದಾಸ ಸಾಹಿತ್ಯ ಪ್ರಚಾರಕ್ಕಾಗಿ, ಪರೀಕ್ಷೆಗಳನ್ನು ನಡೆಸುತ್ತಿರುವ ಬೆಂಗಳೂರಿನ ಜಾಂಬವತಿ ಪ್ರಿಯ ವಿಠಲ ದಾಸರು, ಸಂಗೀತದಿಂದ ದಾಸರ ಕೀರ್ತನೆಗಳನ್ನು ಹಾಡಿ ಪ್ರಚಾರ

ಕಾರ್ಯದಲ್ಲಿ ನಿರತರಾಗಿದ್ದಾರೆ. ದಾಸರ ಪುತ್ರರುಗಳಾದ ಶ್ರೀ ಎಂ.ಜಿ.ಗುರುರಾಜ ರಾವ್ ಶ್ರೀ ಎಂ.ಜಿ.ಮಾಧವರಾವ್ ಮತ್ತು ಶ್ರೀ ಎಂ.ಜಿ.ನಾಗರಾಜರಾವ್ ಮತ್ತು ಇವರ ಕುಟುಂಬವರ್ಗದವರು ಸಹ ತಮ್ಮ ಹಿರಿಯರನ್ನು ತಂದೆಯ ಸ್ಥಾನದಲ್ಲಷ್ಟೇ ಅಲ್ಲದೆ ಗುರುಗಳು ಎಂಬ ಭಾವನೆಯನ್ನು ತಾಳಿ, ದಾಸರು ಮುಟ್ಟಿದ ಪದಾರ್ಥಗಳನ್ನು ಮೆಟ್ಟಿದ ನೆಲವನ್ನು ಉಳಿಸಿ ಬೆಳಗಿಸಲು ಸತತ ಶ್ರಮಿಸುತ್ತಿದ್ದಾರೆ. ಅವರು ಸ್ಥಾಪಿಸಿದ ವಿಠಲ ಮಂದಿರದಲ್ಲಿ ಇಂದು ನಿತ್ಯೋತ್ಸವ ನಿತ್ಯ ಮಂಗಳ ಎಂಬಂತೆ ಕಾರ್ಯಕ್ರಮಗಳು ನಡೆಯುತ್ತಿವೆ.

ದಾಸರ ಬಲಗೈ ಎನಿಸಿದ್ದ, ದಾಸರ ಸೇವೆಯನ್ನು ಅಪಾರವಾಗಿ ಮಾಡಿದ ಖಗವರಧ್ವಜ ವಿಠಲದಾಸರು ಇಂದಿಗೂ, ಶ್ರೀಮದ್ಭಾಗವತಾದಿ ಪ್ರವಚನಗಳ ಮೂಲಕ ಎಲ್ಲೆಡೆ ಧಾರ್ಮಿಕ ಜಾಗೃತಿಯನ್ನು ಉಂಟುಮಾಡುತ್ತಿದ್ದಾರೆ.

ಇನ್ನು ದಾಸರ ಶಿಷ್ಯರಲ್ಲಿ ಹಿರಿಯರಾದ ಶ್ರೀ ಮುದ್ದುವೆಂಕಟ ವಿಠಲದಾಸರು, ಉದಾಯಾದ್ರೀಶವಿಠಲ ದಾಸರು, ವಾಸಿಷ್ಠ ಕೃಷ್ಣ ವಿಠಲ ದಾಸರು ಹೀಗೆ ಹತ್ತು ಹಲವರು ಜನ ಗುಪ್ತ ಸಾಧನೆ ಮಾಡುವವರಿದ್ದಾರೆ, ಶ್ರೀಹರಿಪ್ರೇರಣೆಯಂತೆ ಕೃತಿ ರಚನೆಗಳನ್ನು ಮಾಡಿ, ಹಾಡಿ ಆನಂದವನ್ನು ಅನುಭವಿಸುತ್ತಿರುವವರು ಇವರು.

ದಾಸರ ಮೊಟ್ಟ ಮೊದಲನೆಯ ಶಿಷ್ಯರೆನಿಸಿರುವ ವೈಕುಂಠ ವಿಠಲ ದಾಸರು ಶ್ರೀ ಬಿ.ಎನ್. ರಾಮಶೇಷರಾವ್, ಶ್ರೀಸ್ವಾಪ್ನವೃಂದಾವನಾಖ್ಯಾನವನ್ನು ೧೫೦೦ ಕ್ಕೂ ಹೆಚ್ಚು ಸಲ ಪಾರಾಯಣ ಮಾಡಿ ಅದರ ಅರ್ಥಗಳನ್ನು ಶಿಷ್ಯರಿಗೆ ಬೋಧಿಸುತ್ತಾ ರಾಜರ ಅನುಗ್ರಹಕ್ಕೆ ಪಾತ್ರರಾಗಿರುವವರು.

ಇನ್ನು ಶ್ರೀ ಹರಿವಾಯುಗಳ ಪ್ರೇರಣೆಯಂತೆ ದಾಸಕೂಟ ಬೆಳೆಸಲು ದಾಸರಿಂದ ಅನುಜ್ಞೆ ಪಡೆದು, ಅಂಕಿತನಾಮ ರಚನೆಗಳನ್ನು ಮಾಡಿ ಉಪದೇಶಿಸಿ, ಅಲ್ಲದೆ ದಾಸರ ದೇವರ ನಾಮಗಳನ್ನ ಹಾಡಿ, ನಲಿಯುತ್ತಿರುವ ಶಿಷ್ಯರನ್ನು ಶ್ರೀಪಂಢರಿನಾಥ ವಿಠಲದಾಸರು ದಾಸರ ಶಿಷ್ಯ ಪ್ರಮುಖರಲ್ಲಿ ಒಬ್ಬರು.

ಪೂರ್ವ ಜನ್ಮದ ಪುಣ್ಯ ವಿಶೇಷದಿಂದ ದಾಸರಾಯರ ಅನುಗ್ರಹ ಹ[illegible] ಪ್ರಸ್ತುತ ಲೇಖನ ಮಾಡಿರುವ ಲೇಖಕ ವರಾಹ ಹರಿವಿಠಲ ದಾಸರು [illegible] ಶಿಷ್ಯರು.

ದಾಸರ ಶಿಷ್ಯರಲ್ಲಿ ಹೆಣ್ಣು ಮಕ್ಕಳೂ ಇದ್ದಾರೆ. ಅವರುಗಳು ಮಾ[illegible] ಸೇವೆ ಎಲೆ ಮರೆಕಾಯಿಯಂತೆ ಅಪೂರ್ವವಾದದ್ದು ಸತ್ಸಾಧ[illegible]

ತಾವು ಮಾಡಿಕೊಳ್ಳುವುದಷ್ಟೇ ಅಲ್ಲದೆ ತಮ್ಮ ಕುಟುಂಬ ವರ್ಗದವರಿಂದ ಮಾಡಿಸುತ್ತಿದ್ದಾರೆ. ಒಂದು ಮನೆಯಲ್ಲಿ ಅಂಕಿತೋಪದೇಶ ಪಡೆದ ಒಬ್ಬ ಗೃಹಿಣಿ ಯಿದ್ದರೆ ಆ ಮನೆ ಮಂದಿರಕ್ಕೆ ಸಮಾನವೆನಿಸಿ, ಧರ್ಮಜಾಗೃತಿ ಕೇಂದ್ರವಾಗುತ್ತದೆ.

ದಾಸರು ಬಿತ್ತಿದ ಭಕ್ತಿಯ ಬೀಜ ಇಂದು ಹೆಮ್ಮರವಾಗಿ ಬೆಳೆದು ತನ್ನ ಶಾಖೋಪಶಾಖೆಗಳಿಂದ ಹರಿದಾಸ ಸಾಹಿತ್ಯದ ಸೇವೆ ಮಾಡುತ್ತಿದೆ.

ದಾಸರು ಕೇವಲ ಬ್ರಾಹ್ಮಣರಿಗೆ, ಮಾಧ್ವರಿಗೆ ಅಂಕಿತ ನೀಡಿದವರಲ್ಲ. ಸ್ವಧರ್ಮದಲ್ಲಿ ನಿಷ್ಠೆಯಿದ್ದವರಾದರೂ ಪರಧರ್ಮ ದವರನ್ನು ಆತ್ಮೀಯ ಮನೋಭಾವನೆಯಿಂದ ಕಾಣುತ್ತಿದ್ದವರು. ಮಧ್ವಮತದ ಅನುಯಾಯಿ ಎನಿಸಿರುವ ಬ್ರಾಹ್ಮಣೇತರರಿಗೂ ಅಂಕಿತೋಪದೇಶ ಮಾಡಿದ್ದಾರೆ. ತುಮಕೂರಿನ ದೊಡ್ಡ ತಿಮ್ಮಯ್ಯ ನಿಗೆ ಅಂಕಿತ ನೀದಲು ತಮ್ಮ ಬಿಂಬ ಮೂರುತಿಯಲ್ಲಿ ಪ್ರಾರ್ಥನೆ ಸಲ್ಲಿಸಿದಾಗ ಗುರುಗೋವಿಂದ ವಿಠಲ ಎಂಬುದಾಗಿಯೇ ಸೂಚನೆಯಾಯಿತು. ಹೇಗೆ ಕೊಡುವುದು ಎಂದು ಯೋಚಿಸುತ್ತಾ ಮಲಗಿದರೆ ತೈಜಸನಾಮಕ ಹರಿ ಒಂದು ರೂಪದಿಂದ ಬಂದು 'ಸ್ವಾಮಿ' ಎಂದ ಇದರಿಂದ ಪುಳಕಿತರಾಗಿ ಸ್ವಾಮಿ ಗುರುಗೋವಿಂದ ವಿಠಲ ಎಂಬುದಾಗಿ ಅಂಕಿತ ನೀಡಿದರು. ಅವರ ಅನುಭವವನ್ನು ದೊಡ್ಡತಿಮ್ಮಯ್ಯ ಈ ರೀತಿ ಹೇಳಿಕೊಂಡಿದ್ದಾರೆ.

"ಜನ್ಮತಃ ಶೂದ್ರನಾದ ನಾನು ಅಂದರೆ ಅಗ್ನಿವಂಶದವನು ಶ್ರೀಗುರು ಗೋವಿಂದವಿಠಲದಾಸರ ಅನುಗ್ರಹವಾದ ಮೇಲೆ ನನ್ನಲ್ಲಿ ಪರಿವರ್ತನೆಗಳು ಆಗಿರುವುದನ್ನು ಕಾಣುತ್ತಿದ್ದೇನೆ. ಮೊದಲಿಗೆ ಈ ಗುರುಗಳ ಉಪದೇಶ ಬಯಸಿ ಬೇಡಿದಾಗ ಶ್ರೀರಾಘವೇಂದ್ರ ಸ್ವಾಮಿಗಳು ಬಂದು, ಓಡಿಹೋಗುತ್ತಿದ್ದ ಬಸ್ಸನ್ನು ತಡೆದು ನಿಲ್ಲಿಸಿದ ಸ್ವಪ್ನವಾಯಿತು. ಮುಂದೊಂದು ದಿನ ಶ್ರೀವಾದಿರಾಜ ಸ್ವಾಮಿಗಳ ಬೃಂದಾವನ ದರ್ಶನವಾದ ಮೇಲೆ ಅಂಕಿತೋಪದೇಶಕ್ಕೆ ಅನುಗ್ರಹವಾಗಿ ಸ್ವಾದಿಕ್ಷೇತ್ರದಲ್ಲಿ ಶ್ರೀಪ್ರಾಣ ದೇವರ ಸನ್ನಿಧಿಯಲ್ಲಿ ಗುರುಗಳಿಂದ ಉಪದೇಶ ವಾಯಿತು. ಹಿಂದೆ ಚಿಕ್ಕಂದಿನಲ್ಲಿ ೩ನೇ ತರಗತಿಯವರೆಗೆ ಓದಿದ್ದು ಸರಿಯಾಗಿ ಅಕ್ಷರಗಳನ್ನು ಕೂಡಿಸಿಕೊಂಡು ಓದಲು ಬಾರದೇ ಇದ್ದ ನನಗೆ ಈ ಗುರುಗಳ ದಯದಿಂದ ಪತ್ರ ಬರೆಯುವುದು ಸ್ವಲ್ಪ ಸರಾಗವಾಗಿ ಓದುವುದು ಕೂಡಾ ಮನನವಾಯಿತು". ಇಷ್ಟೇ ಅಲ್ಲದೆ ಸ್ವಾಮಿ ಗುರುಗೋವಿಂದ ವಿಠಲದಾಸರು ಗುರುಗಳ ಮೇಲೆ ಲಕ್ಷ್ಮೀದೇವಿಯ ಮೇಲೆ ಪರಮಾತ್ಮನ ಮೇಲೆ ದೇವರ ನಾಮಗಳನ್ನು ಸಹ ರಚನೆ ಮಾಡಿದ್ದಾರೆ. ಅಲ್ಲದೆ ಮಾಧ್ವ ಪದ್ಧತಿಯಂತೆ

ಜೀವನ ನಡೆಸುತ್ತ ಶ್ರೀಪುರಂದರಂದದಾಸರ ಆರಾಧನೆ ಇತ್ಯಾದಿಗಳನ್ನು ಮಾಡುತ್ತಿದ್ದಾರೆ.

ದಾಸರ ಅಪೂರ್ವ ಗುಣಗಳು

ದಾಸರು ಎಂದೂ ಬೂಟಾಟಿಕೆಯ ಡಂಭ ಪ್ರದರ್ಶನಕ್ಕೆ ಒಲಿದ ವರಲ್ಲ. ಪ್ರತಿಷ್ಠೆ ಪ್ರಚಾರಗಳಿಗೆ ಬಲು ದೂರ. 'ಸಾಧನ ಶರೀರವಿದು ನೀದಯದಿ ಕೊಟ್ಟದ್ದು ಸಾಧಾರಣವಲ್ಲ' ಎಂಬ ದಾಸರ ವಾಣಿ ಅವರಿಗೆ ಎಚ್ಚರಿಕೆ ನುಡಿಯಾಗಿತ್ತು. ನಿತ್ಯ ಕರ್ಮಗಳನ್ನು ಎಂದೂ ಬಿಟ್ಟವರಲ್ಲ. ದೇವರ ಪೂಜೆ ತೀರ್ಥ ಆಗುವತನಕ ಯಾವ ಪಾನೀಯವನ್ನೂ ಎಂತಹ ಸಂದರ್ಭದಲ್ಲೂ, ಸ್ವೀಕರಿಸುತ್ತಿರಲಿಲ್ಲ ನುಡಿದಂತೆ ನಡೆದವರು ಅವರು.

ದಿನಚರಿ ಪುಸ್ತಕ ಬರೆಯುವುದರಲ್ಲಿ, ಬಂದ ಪತ್ರಗಳಿಗೆ ಉತ್ತರಿಸುವುದರಲ್ಲಿ ಎಂದೂ ತಡಮಾಡುತ್ತಿದ್ದವರಲ್ಲ. ದಾಸರ ಶಿಷ್ಯ ವಾತ್ಸಲ್ಯ ಅಪಾರವಾದದ್ದು ಶಿಷ್ಯರು ತಮ್ಮ ಜೀವನದ ಸುಖ ದುಃಖಗಳನ್ನು ದಾಸರಲ್ಲಿ ತೋಡಿಕೊಂಡಾಗ ಸೂಕ್ತ ಸಮಾಧಾನ ನೀಡುತ್ತಿದ್ದರು. ದಾಸರು ಬರೆಯುವ ಪತ್ರಗಳಲ್ಲಿ ಅಗತ್ಯ ವಿಲ್ಲದ ಯಾವ ಪದವನ್ನು ಬಳಸಿದವರಲ್ಲ. ಚಿಕ್ಕದಾಗಿ ಚೊಕ್ಕವಾಗಿ ಸರಳ ವಾಗಿತ್ತು ಅವರ ಶೈಲಿ.

ದಾಸರ ಪತ್ನಿ ದೇಹ ಬಿಟ್ಟಾಗ ಸಹ ಧೃತಿಗೆಡದೆ 'ಕಾಲ ಕಾಲಕೆ ಹರಿಯು ಮಾಡುವ ಮರಿಯಾದೆಯೆಂದು ಸ್ವೀಕರಿಸಬೇಕು' ಎಂಬುದಾಗಿ ದಾಸವಾಣಿ ಸ್ಮರಿಸಿ ಮುಂದಿನ ಕಾರ್ಯ ಮಾಡಿದವರು.

ದಾಸರು ಸಂಕಲ್ಪ ಮಾಡಿದರೆ ಸಾಕು ಅದು ನಡೆಯಲೇಬೇಕು. ಹಿಡಿದ ಕಾರ್ಯ ಬಿಡದೆ ಮಾಡುವ ಛಲ ಅವರಲ್ಲಿತ್ತು. 'ದಾಸರ ಜೋಳಿಗೆ ಎಂದೂ ಬರಿದಾಗದು' 'ಹರಿದಾಸರಿಗುಂಟೇ ಅಪಜಯ' ಎಂದು ಎಲ್ಲರನ್ನೂ ಪ್ರೋತ್ಸಾಹಿಸುತ್ತಿದ್ದವರು.

ಯಾವ ಶಿಷ್ಯರು ಎಂತಹ ಮುಗ್ಧ ಪ್ರಶ್ನೆ ಮಾಡಲಿ ದಾಸರು ಸಿಟ್ಟಾಗುತ್ತಿರಲಿಲ್ಲ. ಸೂಕ್ತ ಸಮಾಧಾನ ನೀಡುತ್ತಿದ್ದರು. ತಾವು ಪ್ರಕಟಿಸಿರುವ ಪುಸ್ತಕಗಳಲ್ಲಿ ಯಾವುದಾದರೊಂದನ್ನು ಆಶೀರ್ವಾದ ಪೂರ್ವಕ ಎಂದು ಬರೆದು ಶಿಷ್ಯರಿಗೆ ನೀಡುತ್ತಿದ್ದರು.

ಸಮಾಜದಿಂದ ಸಂದ ಗೌರವಗಳು

ಶ್ರೀಗುರುಗೋವಿಂದ ವಿಠಲದಾಸರು, ಎಲೆಮರೆ ಕಾಯಿಯಂತೆ ಇದ್ದು ಹಣ್ಣಾದವರು, ಭಕ್ತಿಯ ರಸವನ್ನು ಎಲ್ಲರಿಗೆ ಕುಡಿಸಿದವರು. ವೈದ್ಯರ ಆದೇಶದಂತೆ ಹೆಚ್ಚು ಮಾತನ್ನಾಡಬಾರದಾಗಿತ್ತು. ಕಾರಣ ಪ್ರವಚನ ಉಪನ್ಯಾಸದ ಗೋಜಿಗೆ ಹೆಚ್ಚು ಹೋದವರಲ್ಲ. ಅವರ ಸ್ಮೃತಿಗೆ ಗೋಚರವಾದದ್ದೆಲ್ಲಾ ಲೇಖನ ರೂಪದಲ್ಲಿ ಹೊರಬಂತು. ಬರೆಯುವ ವಿಚಾರದಲ್ಲಿ ಅವರು ಒಂದು ಕಂಪ್ಯೂಟರ್ ಇದ್ದ ಹಾಗೆ. ಅವರು ಮಲಗುತ್ತಿದ್ದುದು ಮಧ್ಯರಾತ್ರಿಯ ನಂತರವೇ. ಕಣ್ಣು ಮಂಜು ಬರುವವರೆಗೂ ಬರೆಯುತ್ತಿದ್ದರು. ಈ ತೆರನಾಗಿ ಅವರು ಅಕ್ಷರ ಬ್ರಹ್ಮನ ಉಪಾಸನೆ ಮಾಡಿದ ಕಾರಣವೇ ೪೮ ಕೃತಿ ಕುಸುಮಗಳು ಅರಳಲು ಕಾರಣವಾಗಿರುವುದು. ಹಲವಾರು ಶ್ರೀಪಾದಂಗಳವರು ದಾಸರನ್ನು ಆಶೀರ್ವದಿಸಿದ್ದಾರೆ. ಹರಿದಾಸರು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ಬಿರುದು ಬಿನ್ನವತ್ತಳೆಗಳನ್ನು ನೀಡಿದ್ದಾರೆ. ೧೯೭೮ ರಲ್ಲಿ ಶ್ರೀ ಶ್ರೀರಾಘವೇಂದ್ರ ಗುರುಸಾರ್ವಭೌಮರ ಆರಾಧನಾ ಸಂದರ್ಭದಲ್ಲಿ ಪರಮ ಪೂಜ್ಯ ಪೇಜಾವರ ಮಠದ ಶ್ರೀಪಾದಂಗಳವರು 'ಹರಿದಾಸ ಕುಲತಿಲಕ' ಎಂಬ ಬಿರುದನ್ನಿತ್ತು ಗೌರವಿಸಿದರು. ಅಖಿಲ ಭಾರತ ಹರಿದಾಸ ಸಮ್ಮೇಳನ ಶ್ರೀ ಪುರಂದರದಾಸರ ಆರಾಧನೆ ಉತ್ಸವ ಸಂದರ್ಭದಲ್ಲಿ ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು, 'ದಾಸ ಧರ್ಮ ಪ್ರವರ್ತಕ' ಎಂಬ ಬಿರುದು ನೀಡಿ ಗೌರವಿಸಿದರು. ಅವರು ಈ ಸನ್ಮಾನಗಳನ್ನೆಲ್ಲ ತಮ್ಮ ಗುರುಗಳ ದ್ವಾರ ಬಿಂಬಮೂರುತಿಗೆ ಅರ್ಪಣೆ ಮಾಡಿದರು. 'ಅಪಮಾನ ವಾದರೆ ಒಳಿತು' ಎಂದು ದಾಸರ ವಾಣಿ. ಆದರೆ ವ್ಯತಿರಿಕ್ತವಾಗಿ ಸನ್ಮಾನಗಳಾಗುತ್ತಿವೆ ಇದೆಲ್ಲವೂ 'ನಿನ್ನ ಒಲುಮೆಯಿಂದ ಬಂದದ್ದು ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು ಮನ್ನಿಸುವರೋ ಮಹರಾಯ ನನ್ನದೇನುಂಟೋ ನಿನ್ನದೇ ಸಕಲ ಸಂಪತ್ತು' ಎಂಬ ವಿಜಯದಾಸರ ವಾಣಿ ಗುರುಗೋವಿಂದದಾಸರ ತಾರಕ ಮಂತ್ರವಾಗಿತ್ತು.

ದಾಸರ ಕೊನೆಯ ದಿನಗಳು

ಪ್ರಸ್ತುತ ಲೇಖಕನ ಅನುಭವ ಹೀಗಿದೆ. ೧೯೮೨ ರಲ್ಲಿ ದಾಸರಿಂದ ಅಂಕಿತ ಪಡೆಯಲು ಆಶಿಸಿ ಸ್ವಪ್ನ ಸೂಚನೆಯನ್ನು ಪತ್ರಮುಖೇನ ದಾಸರಿಗೆ ತಿಳಿಸಿದೆ. ಕೂಡಲೇ ಉತ್ತರವೂ ಬಂತು. ೨೧ ದಿನಗಳಲ್ಲಿ ಮತ್ತೊಂದು ಪತ್ರ ; ಅಂಕಿತ

ಸಿದ್ಧವಾಗಿದೆ, ಬಾ ಎಂದು ತಿಳಿಸಿದರು. ೧೦.೧೧.೧೯೮೨ ರಂದು ನಾನು ನಮ್ಮ ತಾಯಿ ಮತ್ತು ನನ್ನ ಪತ್ನಿ ದಾಸರು ವಾಸಿಸುತ್ತಿದ್ದ ಅವರ ಸುಪುತ್ರ ಮಾಧವರಾಯರ ಮನೆಗೆ ಮಧ್ಯಾಹ್ನ ೧೨.೦೦ ಗಂಟೆಗೆ ಹೋದೆವು. ದಾಸರು ಆದರದಿಂದ ಬರಮಾಡಿಕೊಂಡರು. ದಾಸರ ಊಟ ಮುಗಿದಿತ್ತು. ಪೂರ್ವ ಭಾವಿಯಾಗಿ ನಾನು ಆ ದಿನ ಬರುತ್ತೇನೆಂದು ತಿಳಿಸಿರಲಿಲ್ಲ. 'ಊಟ ಆಗಿ ಹೋಯಿತಲ್ಲೋ ಹೋಗಲಿ ಕುಳಿತುಕೋ' ಎಂದರು. ತಮ್ಮ ದಿನಚರಿ ಪುಸ್ತಕ ತೆರೆದು ನನ್ನ ಅಂಕಿತನಾಮ ಹುಡುಕಿದರು. 'ನನಗೆ ಬರೆಯಲು ಆಗುವುದಿಲ್ಲ ನೀನೇ ಬರಿ'. ಎಂದರು. ಅವರು ಹೇಳಿದರು, ನಾನೇ ಬರೆದೆ. ಕಾಗುಣಿತದ ತಪ್ಪುಗಳನ್ನು ಸಹ ನೋಡಿ ತಿದ್ದಿದವರು. ನಂತರ 'ಕಾಲಿಗೆ ನೀರು ಹಾಕು ಒರೆಸು' ಎಂದು ಈ ಪಾಮರನ ಕೈಲಿ ಸೇವೆ ಮಾಡಿಸಿಕೊಂಡು ಆಶೀರ್ವಾದಿಸಿದ ಮಹನೀಯರು, ಲಿಖಿತ ಅಂಕಿತ ನಾಮವನ್ನು ದೇವರ ಮನೆಯಲ್ಲಿಟ್ಟು ಚಕ್ರಾಂಕಿತವಿಟ್ಟು ಪೂಜೆಮಾಡಿ ತತ್ವನ್ಯಾಸ ಮಾತೃಕಾನ್ಯಾಸ ಬೋಧನೆ ಮಾಡಿ ಎರಡು ಬಾರಿ ಅಂಕಿತ ದೇವರ ನಾಮ ಉಪದೇಶಿಸಿದರು. ಆಗ ದಾಸರಿಗೆ ೮೮ ವರ್ಷ ವಯಸ್ಸು. ಕಾಲುಗಳು ಊದಿದ್ದವು. ದಾಸರೇ ಖುದ್ದಾಗಿ ಉಪದೇಶಿಸಿದ ಕೊನೆಯ ಅಂಕಿತನಾಮ ಇದಾಗಿತ್ತು. ತದನಂತರದಲ್ಲಿ ಅನಂತಪುರಕ್ಕೆ ಮಗನ ಮನೆಗೆ ತೆರಳಿದರು. ಅಲ್ಲಿ ಅವರು ಹಾಸಿಗೆಯ ಮೇಲೆ ಮಲಗಿ ಹರಿಸ್ಮರಣೇ ಮಾಡುತ್ತಿರುವಾಗ ಅವರ ಅನುಮತಿಯಿಂದ ಅವರ ಸನ್ನಿಧಾನದಲ್ಲಿ ಅವರ ಮಕ್ಕಳಿಂದ, ಅವರ ಅಳಿಯಂದಿರಿಂದ ಕೆಲವರಿಗೆ ಅಂಕಿತೋಪದೇಶ ವಾಗಿರುವುದೂ ಉಂಟು. ಅವರು ೮೯ ವರ್ಷಗಳ ತುಂಬು ಜೀವನ ನಡೆಸಿದರು. ೧೧.೧.೧೯೮೩ ರಂದು ಮಾರ್ಗಶೀರ್ಷ ಬಹುಳ ದ್ವಾದಶಿ ಇಹಲೋಕ ತ್ಯಜಿಸಿ ಅನಂತಪುರವನ್ನು ಸೇರಿದರು. ಅಂದು ಮಂಡ್ಯದಲ್ಲಿದ್ದ ಮುದ್ದು ವೆಂಕಟ ವಿಠಲದಾಸರಿಗೆ ಸ್ವಪ್ನ ಸೂಚನೆಯಿಂದ ಕರೆಸಿಕೊಂಡು ತಮ್ಮ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿರುವುದು ವಿಶೇಷ. ಜೀವಿತದ ಕಟ್ಟ ಕಡೆಯ ಕ್ಷಣದವರೆಗೂ ಹರಿದಾಸ ಕೈಂಕರ್ಯ ಬಿಡಲಿಲ್ಲ : ಹರಿಸ್ಮರಣೆ ಮರೆಯಲಿಲ್ಲ 'ಸಂತತಂ ಚಿಂತಯೇಽನಂತಂ ಅಂತಕಾಲೇ ವಿಶೇಷತಃ'.

ನಿವೇದನೆ

ಶ್ರೀಗುರುಗೋವಿಂದದಾಸರ ಜೀವನ ನಂದಾದೀಪವಿದ್ದಂತೆ. ದೀಪ ತಾನು ಉರಿದು ಅನ್ಯರಿಗೆ ಬೆಳಕುತೋರುವಂತೆ ತಾವು ಜೀವನದಲ್ಲಿ ಕಷ್ಟಗಳನ್ನು

ಅನುಭವಿಸಿ ಮುಂದಿನವರಿಗೆ ಆದರ್ಶಪ್ರಾಯರಾದ ಮಾರ್ಗದರ್ಶಿಗಳು. ಅವರು ತಂದೆ ಮುದ್ದುಮೋಹನದಾಸರ ಕಡೆಯ ಶಿಷ್ಯರಾಗಿ ವಿಜಯದಾಸರ ಪರಂಪರೆಯನ್ನು ಮುಂದುವರೆಸುವ ಸಲುವಾಗಿ ೨೫೬ ಜನಕ್ಕೆ ಅಂಕಿತೋಪದೇಶ ಮಾಡುವ ಮೂಲಕ ಸಾಧನದ ಮಾರ್ಗ ತೋರಿದವರು. ಸನಾತನ ಧರ್ಮದಲ್ಲಿ ವಿಶೇಷ ಗೌರವ ಉಳ್ಳವರಾಗಿ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಆಚರಿಸಿ ಧಾರ್ಮಿಕ ವಿಧಿ ವಿಧಾನಗಳನ್ನು ಅರ್ಥ ಪೂರ್ಣವಾಗಿ ಅರುಹಿದ ಮಹಾವ್ಯಕ್ತಿ. ಹರಿದಾಸ ಸಾಹಿತ್ಯ ಭಂಡಾರಕ್ಕೆ ದಾಸರು ನೀಡಿದ ಕೊಡುಗೆ ಅಮೂಲ್ಯವಾದದ್ದು. ದಾಸರು ಇಂದಿಗೂ ತಮ್ಮ ಶಿಷ್ಯರಿಗೆ ಸ್ವಪ್ನ ಮುಖೇನ ಮಾರ್ಗದರ್ಶನ ಮಾಡುತ್ತಿರುವುದು ಹಲವರ ಅನುಭವ. ದಾಸರು ತಮ್ಮ ಪಾರ್ಥಿವ ಶರೀರದಿಂದ ಕಣ್ಮರೆಯಾಗಿದ್ದರೂ ಅವರು ಕಟ್ಟಿದ ವಿಠಲನ ಮಂದಿರ, ರಚಿಸಿದ ಅಪಾರ ಕೃತಿಗಳು, ಅವರು ಬರೆದಿಟ್ಟಿರುವ ದಿನಚರಿ ಇವು ನಮ್ಮೆಲ್ಲರಿಗೆ ಸ್ಫೂರ್ತಿಯನ್ನು ನೀಡುವಂಥದ್ದಾಗಿವೆ. ಇಪ್ಪತ್ತನೆಯ ಶತಮಾನವನ್ನು ಗುರುಗೋವಿಂದವಿಠಲ ದಾಸರ ಸಾಧನ ಯುಗ ಎಂದು ಮುಂದಿನ ಇತಿಹಾಸ ತಿಳಿಸುತ್ತದೆ.

ಅವರು ಪ್ರಾರಂಭಿಸಿದ ಹರಿದಾಸ ಸಮ್ಮೇಳನ ಇಂದು ಬೃಹದಾಕಾರವಾಗಿ ಬೆಳೆದು ಎಲ್ಲೋ ಒಂದು ಮೂಲೆಯಲ್ಲಿ ಹುಟ್ಟಿ ವಿಸ್ತಾರವಾಗಿ ಹರಿಯುವ ನದಿಯಂತೆ ಧಾವಿಸುತ್ತದೆ. ಸಮ್ಮೇಳನ ವ್ಯಾಪ್ತಿ ದೇಶದುದ್ದಗಲಕ್ಕೂ ಹರಡುತ್ತಿದೆ. ತಿರುಪತಿಯಲ್ಲಿ ದಾಸರು ನಡೆಸಿದ ಸಮ್ಮೇಳನ ದಾಸ ಸಾಹಿತ ಪ್ರಾಜೆಕ್ಟಿಗೆ ನಾಂದಿಯಾಗಿ ಎಲ್ಲ ಹರಿದಾಸ ದಾಸಿಯರಿಗೆ ಶ್ರೀನಿವಾಸನ ಪರಮಾನುಗ್ರಹ ದೊರಕುವಂತೆ ಮಾಡಿರುವುದನ್ನು ಮತ್ತೊಮ್ಮೆ ಸ್ಮರಿಸಬಹುದು.

ದಾಸ ಸಾಹಿತ್ಯ ವಾಙ್ಮಯ ಯೋಜನೆಯಲ್ಲಿ ಎಲ್ಲ ಹರಿದಾಸರ ಜೀವನ, ಕೃತಿಗಳನ್ನು ಪ್ರಕಟಿಸುತ್ತಿರುವುದು ಸಂತಸದ ಸಂಗತಿ. ಇದು ಹರಿದಾಸರ ಸೇವೆ ಶ್ರೀಹರಿಗೆ ಪ್ರೀತಿಕರ. ಅಮೂಲ್ಯವಾದ ದಾಸ ಸಾಹಿತ್ಯದ ರಕ್ಷಣೆ. ಈ ಯೋಜನೆಯಲ್ಲಿ ನಮ್ಮ ಗುರುಗಳಾದ ಗುರುಗೋವಿಂದ ವಿಠಲದಾಸರ ಜೀವನ ಚರಿತ್ರೆ ಮತ್ತು ಕೃತಿಗಳನ್ನು ಪ್ರಕಟಿಸಲು ತೀರ್ಮಾನಿಸಿ ಈ ಕಾರ್ಯವನ್ನು ನನ್ನ ಪಾಲಿಗೆ ಕೊಟ್ಟಿದ್ದಕ್ಕಾಗಿ ಯೋಜನೆಯ ಪದಾಧಿಕಾರಿಗಳಿಗೆ ನನ್ನ ಕೃತಜ್ಞತೆಗಳು. ಸಂಪುಟದಲ್ಲಿ ಗಣಪತಿಯಿಂದ ಆರಂಭಿಸಿ ದೇವತಾ ಕಕ್ಷೆಗೆ ಸಂಬಂಧಪಟ್ಟ ಎಲ್ಲ ಕೃತಿಗಳನ್ನು ಸೇರಿಸಿದೆ. ದಾಸರು ಬರೆದಿರುವ ಉಪನಿಷತ್ತುಗಳ ಕನ್ನಡ ಅನುವಾದ, ಗದ್ಯ ಸಾಹಿತ್ಯ, ಅಪರೋಕ್ಷ ಜ್ಞಾನಿಗಳ ಚರಿತ್ರೆಗಳು ಇದರಲ್ಲಿ ಸೇರಿಸಿಲ್ಲ. ಅವೆಲ್ಲವನ್ನೂ ದಾಸರೇ ಪ್ರಕಟಿಸಿದ್ದಾರೆ. ದಾಸರ

ಜೀವನ ಚರಿತ್ರೆ, ದಾಸಕಕ್ಷೆ, ಯತಿಕಕ್ಷೆಯಲ್ಲಿ ಬರುವ ಸ್ತುತಿಗಳೂ, ಅಂಕಿತ ನಾಮಗಳು ಎರಡನೆಯ ಸಂಪುಟವಾಗಿ ಪ್ರಕಟಗೊಳ್ಳುತ್ತಿವೆ.

ಈ ಗ್ರಂಥ ಪ್ರಕಟಣೆಯ ಕಾರ್ಯದಲ್ಲಿ ಹಸ್ತಪ್ರತಿಗಳನ್ನು ಬರೆದು ಕೊಟ್ಟು ಸಹಕರಿಸಿದ ನನ್ನ ಎಲ್ಲ ಶಿಷ್ಯರಿಗೂ, ಈ ಗ್ರಂಥಕ್ಕೆ ಅವಶ್ಯಕವೆನಿಸಿದ ಹಸ್ತಪ್ರತಿಗಳನ್ನು, ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದ ಗುರುಪುತ್ರ ಶ್ರೀ ಎಂ.ಜಿ. ಮಾಧವರಾವ್ ಹಾಗೂ ಅವರ ಪತ್ನಿ ಉಮಾ ಅವರಿಗೂ ನನ್ನ ಅನಂತ ಧನ್ಯವಾದಗಳು. ಈ ಕಾರ್ಯದಲ್ಲಿ ಸೂಕ್ತ ಮಾರ್ಗ ದರ್ಶನ ಮಾಡಿದ ಯೋಜನೆಯ ಪದಾಧಿಕಾರಿಗಳಲ್ಲಿ ಒಬ್ಬರಾದ ಡಾ. ಶ್ರೀಮತಿ ಟಿ.ಎನ್. ನಾಗರತ್ನ ಅವರಿಗೆ ನನ್ನ ವಂದನೆಗಳು.

ಗೋವಿಂದದಾಸರ ಪಾದವ ನೆನೆಯಲು ಗೋವಿಂದನೊಲುಮೆಯು ಆಗುವುದು.

ವರಾಹ ಹರಿ ವಿಠಲದಾಸರು
(ಕೆ.ಎಸ್. ವೆಂಕಟೇಶ್)

ಕೀರ್ತನೆಗಳ ಕ್ರಮಸೂಚಿ

ಕೀರ್ತನೆ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಪುಟ ಸಂಖ್ಯೆ
೧೭೪.	ಪದ್ಮಾಕ್ಷಿ – ಪದ್ಮಾಕ್ಷಿ	೧೮೪
೧೭೫.	ಪಾಲೀಸೆ ಕೃಷ್ಣ ರಮಣಿ	೧೮೫
೧೭೬.	ಮಲ್ಲ ಮರ್ಧನ ರಾಣಿ	೧೮೬
೧೭೭.	ವಾರಿಜ ನಯನಳಿಗೆ	೧೮೭
೧೭೮.	ವಾರಿಜ ನಿಲಯೆ	೧೮೭
೧೭೯.	ಸಮಾ ಸಮಳೆ ಸೀತೆ	೧೮೮
೧೮೦.	ಸೀತೆ ಸದ್ಗುಣಗಳ ವ್ರಾತೆ	೧೯೦
	ಬ್ರಹ್ಮದೇವರು	
೧೮೧.	ಬ್ರಹ್ಮಾ ಮಾಂ ಪಾಲಯ	೧೯೧
	ಹನುಮ – ಭೀಮ – ಮಧ್ವ	
೧೮೨.	ಈರಾ – ಹರಿ ಪದ	೧೯೨
೧೮೩.	ಎಂಥ ದಯವಂತನೀತನು	೧೯೩
೧೮೪.	ಎದುರ್ಯಾರೋ ಗುರುವೆ ಸಮನ್ಯಾರೋ	೧೯೪
೧೮೫.	ಏನು ಕರುಣವೋ ನಿನಗೆ ಮೋತಂಪಲ್ಲೀಶ	೧೯೫
೧೮೬.	ಏಳಯ್ಯ ಏಳಯ್ಯ ಬೆಳಗಾಯಿತು	೧೯೭
೧೮೭.	ಕದರ ಉಂಡಲಿಗಿಯ ಹನುಮ	೧೯೮
೧೮೮.	ಖೇಟ ಕುಕ್ಕುಟ – ಜಲಟ	೨೦೦
೧೮೯.	ಗಾಡಿ ಪಾಳ್ಯ ಹನುಮ	೨೦೦
೧೯೦.	ಗುರು ಭಕ್ತಿದ್ವಾರಸಿರಿ (ಸುಂದರ ಕಾಂಡ)	೨೦೨
೧೯೧.	ನಮೋ ನಮೋ ಭೀಮ	೨೦೫
೧೯೨.	ನಿನ್ನ ನಾನೇನೆಂದೆನೋ	೨೦೬
೧೯೩.	ಪವಮಾನ ಪವಮಾನ ಪವಮಾನ	೨೦೭

ಕೃಷ್ಣನ ಷಣ್ಮಹಿಷಿಯರು

ಶ್ರೀ ಗುರುಗೋವಿಂದವಿಠಲದಾಸರ

ಕೀರ್ತನೆಗಳು

೧-೩೩೭

ಗಣಪತಿ ಪ್ರಾರ್ಥನೆ

೧

ಅಜ್ಞಾನ ಪರಿಹರಿಸು ಅಂಬರಾಧೀಶ
ಸುಜ್ಞಾನ ಭಕ್ತಿ ಶ್ರೀ ಹರಿಯಲ್ಲಿ ನೀಡೋ ಪ

ವಿಘ್ನರಾಜನೆ ನಿನ್ನ ನುತಿಸಿ ಬೇಡುವೆನಯ್ಯ
ಭಗ್ನಗೈಸೆನ್ನ ಮನ ಸಂದೇಹವನ್ನೂ ।
ತಜ್ಞರೊಡನಾಡಲು ನಿರ್ವಿಘ್ನ ನೀಡಯ್ಯಾ
ಲಗ್ನಗೈಸೆನ್ನ ಮನ ದೋಷಘ್ನನಲ್ಲೀ ೧

ಏಕದಂತನೆ ಗುರುವೆ ಮೈನಾಕಿ ತನಯನೇ
ನೋಕ ನೀಯನ ಗ್ರಂಥ ಲಿಖಿಸಿದ ಮಹಾತ್ಮ ।
ವಿಕೃತ ಗಾತ್ರನೆ ಎನ್ನ ವಕ್ರ ಗುಣ ವೆಣಿಸದಲೆ
ಸುಖತೀರ್ಥ ಮತ ಜಲಧಿ ಮೀನನೆನಿಸಯ್ಯಾ ೨

ಚಾರುದೇಷ್ಣನು ಎನಿಸಿ ದ್ವಾಪರದಲವತರಿಸಿ
ಶೌರಿಯಾಜ್ಞದಿ ತರಿದೆ ಬಹು ರಕ್ಕಸರನೂ ।
ಸರ್ವೇಶ ಶ್ರೀ ಗುರು ಗೋವಿಂದ ವಿಠ್ಠಲನ
ಚರಣ ಸರಸಿಜಕಾಂಬ ಮಾರ್ಗವನೆ ತೋರೋ ೩

೨

ಗಜಮುಖ ಗಣನಾಥಾ । ಬೇಡುವೆ
ಸುಜನರ ಪೊರೆ ಎಂದೂ ಪ

ಅಜನಯ್ಯನು ಶ್ರೀರಾಮನು ನಿನ್ನನು
ಪೂಜಿಸಿ ಪ್ರಥಮದಿ ಜಗಕೆ ತೋರಿದನು ಅ.ಪ.

ದಶಮುಖ ರಾವಣನು ನಿನ್ನ
ಹಸನಾಗಿ ಪೂಜಿಸದೇ ।
ವಶನಾದ ಮರಣಕೆ ರಣರಂಗದೊಳು
ಬಿಸಜ ಸಂಭವವರ ಬಹುವಾಗಿದ್ದರೂ ೧

ಯಮಸುತ ಮೊದಲಾಗಿ ನಿನ್ನ
ನಮಿಸಲು ಅಧ್ವರದೀ ।
ಅಮಮ ಪಾಪಾತ್ಮಕರ ಮಿತರಸವರುತ
ಸ್ವಾಮಿ ಎನಿಸಿದನು ಅಪಾರ ರಾಜ್ಯಕೆ ೨

ಗುರುಗೋವಿಂದ ವಿಠಲನಾ । ಕರುಣ
ಭರಣವಮಿತ ಪಡೆದಾ ।
ವರದಾಯಕ ವಿಘ್ನವ ಕಳೆಯುತ
ಅರವಿದೂರ ಪದರಜವನೆ ಕಾಣಿಸೋ ೩

೩

ಗಣಪತೇ – ಪಾಹಿ – ಗಣಪತೇ ಪ

ಗಣಪತಿ ಪಾರ್ವತಿ ತನಯಾ । ಭಕ್ತ
ಜನಕೆ ಕೊಡುವುದು ವಿನಯಾ । ಆಹ
ಮನದೊಳು ನೀನಿಂತು । ಅನುಗಾಲ ಹರಿಗುಣ
ಗಣಗಳ ಪೊಗಳುವ । ಮನವ ನೀ ಪಾಲಿಸೋ ಅ.ಪ.

ಬಾಲೇಂದು ಮೌಳಿಯ ತನುಜ । ವರ
ಶೈಲಜೆ ಶರೀರ ಮಲಜಾ । ಪುಟ್ಟಿ
ಶ್ರೀಲೋಲ ಕೃಷ್ಣ ರುಕ್ಮಿಣಿಜ । ನೆಂದು

ಪೇಳುವರು ಮಾರನನುಜಾ । ಆಹ
ಕಾಳಗದೊಳು ಬಲು । ಅಸುರರ ಅಸುಗಳ
ಕೀಲಿಸುತಲಿ ಬಹು । ಭೂಭಾರ ನಿಳುಹಿದ ೧

ಸುಜ್ಞ ಭಕ್ತಾಧೀನ ಗಣಪಾ । ಬಂದ
ವಿಘ್ನಗಳ್ಹರಿಸುವೆ ಭೂಪ । ನೀನು
ಭಗ್ನ ಗೈಸೋ ಮನಸ್ತಾಪಾ । ಇಂಗಿ
ತಜ್ಞ ಬೇಡುವೆ ತವ ಕೃಪಾ । ಆಹ
ಮಗ್ನ ಮಾಡಿಸು ಮನ । ಮೊದಲಾದ ಕರುಣವ
ಯಜ್ಞೇಶ ಶ್ರೀಹರಿ । ಪದದ್ವಯ ವನಜದಿ ೨

ಸಿಂಧುರಾಸ್ಯನೆ ಬಹು ಗುಣ । ಪೂರ್ಣ
ಮಂದರೋದ್ಧಾರಿಯೆ ಕರುಣ । ಪಾತ್ರ
ನೆಂದು ಹೊಕ್ಕನೊ ತವ ಚರಣ । ಕಂದ
ನೆಂದು ಕಾಯೆಲೊ ಬಹು ಕರುಣ । ಆಹ
ನಂದ ನಂದನ ಗುರು । ಗೋವಿಂದ ವಿಠಲನ
ಬಂಧುರ ಚರಣವಾ । ನಂದದಿ ತುತಿಪಂತೆ ೩

೪

ನಭಕೀಶ – ನಭಕೀಶ ಪ

ಇಭಮೊಗ ನಿನ್ನಡಿ । ಗಭಿ ವಂದಿಸುವೆನು
ಇಭವರದನ ಮನ । ನಭದಲಿ ತೋರೋ ಅ.ಪ.

ಮೂಷಕ ವಾಹಾಹಿ । ಭೂಷನೆ ತ್ರೈಜಗ
ತೋಷ ಗಣಾಧಿಪ । ಪಾಶಾಂಕುಶಧರ ೧

ಕುಬುಜೆ ವರದ ಪದ । ಶುಭ ಗುಣ ಭಜನೆಯ
ಸುಭಗನೆ ಪಾಲಿಸಿ । ಕುಭವನೆ ಹರಿಸೋ ೨

ಅಂಬುಜಾಂಡದಿ ತವ । ಶುಭಗುಣ ಪ್ರಸರಣ
ಸುಭುಜಾಹ್ವಯ ಗೈ । ದ ಭಯವ ನಿತ್ತನು ೩

ಅಬುಧಿಗೆ ಸೇತುವೆ । ವಿಭವದಿ ಗೈವಾ
ಗಬುಜಾಂಡೋದರ । ಭಜಿಸಿದ ನಿನ್ನಾ ೪

ಯಮಸುತನಧ್ವರ । ಸಮಯದಿ ತವಪದ
ನಮಿಸಿ ಪೂರೈಸಿದ । ಕ್ರತು ರಾಜಸೂಯ ೫

ರಕ್ತವಾಸ ಅನು । ರಕ್ತ ಹರಿಯಲಿ
ಭಕ್ತಿಯ ಪಾಲಿಸೋ । ಭಕ್ತಾಶ್ರಯನೇ ೬

ಅಸಮಾಧಿಕ ಪ್ರಿಯ । ಶಶಿಭೂಷಣ ಸುತ
ಶಶಿ ದ್ವಿಟ್ ಮರ್ಭವ । ಪಾಶವ ಕಳೆಯೋ ೭

ಏಕಮೇವ ನಲಿ – ವಿ । ವೇಕವ ಕೊಡುವುದು
ಏಕದಂತ ಚಾ । ಮೀಕರ ಕೃತ ಭೂಷಾ ೮

ಮೋದಕೇಕವಿಂಶ । ಸಾದರ ಸ್ವೀಕೃತ
ಮೋದ ತೀರ್ಥ ಮತ । ಬೋಧಿಸು ಗುರುವೇ ೯

ಚಾರುದ್ವೇಷ್ಣಾಭಿಧ । ಚಾರ್ವಾಂಗನೆ ಹರಿ
ಚಾರು ಚರಿತೆ ಸತ್ । ಸ್ಫೋರಣ ಕೊಡುವುದು ೧೦

ಭಾವಜಪಿತ ಗುರು । ಗೋವಿಂದ ವಿಠಲನ
ಭಾವದಿ ತೋರಿಸೊ । ಭಾವಜ ಭ್ರಾತಾ ೧೧

೫

ನಿರ್ವಿಘ್ನವನೆ ನೀಡೋ ನಭಕೀಶ ಪ

ಉರ್ವಿಯೊಳಗೆ ಕಾರ್ಯ ಪ್ರಾರಂಭಿಕ್ಕೀಶ ಅ.ಪ.

ಶೈಲಜೆ ಶರೀರ ಮಲಜನೆಂದೆನಿಸುತ್ತ
ಶೀಲ ಸತ್ಕರ್ಮಾಳಿ ಪ್ರಾರಂಭದೀ ।
ಮಾಲೋಲನಾಜ್ಞಾದಿ ಪೂಜೆಯ ಕೊಳ್ಳುತ್ತ
ಪಾಲಿಪೆ ಭಕುತರಾಭೀಷ್ಟವ ದಯದಿ ೧

ಪಂಚಮ ವೇದವು ಭಾರತ ರಾಹಸ್ಯ
ಸಂಚಿಂತನೆಯಿತ್ತು ನಿನ್ನಿಂದಲೀ ।
ಪಂಚಾತ್ಮ ವ್ಯಾಸಾತ್ಮ ಬರೆಸಿದುದೆ ಸಾಕ್ಷಿ
ಅಂಚೆ ಗಮನ ಪಿತ ಶ್ರೀಶಾನುಗ್ರಹ ಪಾತ್ರಾ ೨

ಹತ್ತೆಂಟು ಮೊಗ ಮಧ್ಯ ಹಸ್ತಿಯ ಮೊಗದವನ
ನಿತ್ಯ ಉಪಾಸಿಪೆ ವಿಶ್ವ ಮೂರುತಿಯ
ಸತ್ಯ ಮೂರುತಿ ಗುರು ಗೋವಿಂದ ವಿಠಲನ
ಹೃತ್ಪದ್ಮದಲಿ ತೋರಿ ಕೃತಕೃತ್ಯನೆನಿಸೋ ೩

೬

ವಿಘ್ನೇಶಾ – ಪಾಲಿಸೊ – ಎನ್ನ – ವಿಘ್ನೇಶಾ ಪ

ವಿಘ್ನೇಶ ಪಾಲಿಸೊ ಯೆನ್ನಾ । ದೋಷ
ಭಗ್ನವ ಗೈಸಯ್ಯ ಮುನ್ನಾ । ಆಹ
ಲಗ್ನವಾಗಲಿ ಯೆನ್ನ ಮನ ಆದೀಂದ್ರಿಯಗಳು
ಯಜ್ಞೇಶ ಶ್ರೀಹರಿ ಪದದ್ವಯ ವನಜದಿ ಅ.ಪ.

ಶಿರಿವ್ಯಾಸ ಹೃದ್ಗತ ಅರ್ಥಾ । ನೆರೆ
ಅರಿತು ಲಿಖೀಸಿದೆ ಗ್ರಂಥಾ । ನೋಡು
ಕರುಣಾಳು ಹರಿಕೃಪಾ ಪಾತ್ರಾ । ಬಾಗಿ
ಶರಣೆಂಬೆ ತಿಳಿಸ್ಯದರರ್ಥಾ । ಅಹ
ತಾರಕಾಂತಕನನುಜ । ವೀರ ವೈಷ್ಣವ ನಿನ್ನ
ಪರಮಾನುಗ್ರಹವನ್ನ । ಕರುಣಿಸಿ ಕಾಯೆನ್ನ ೧

ಚಾರುದೇಷ್ಣನ ನಾಮದಲ್ಲೀ । ಅವ
ತಾರ ಮಾಡಿದೆ ರುಕ್ಮಿಣೀಲಿ । ಸಿರಿ
ಅರಸನಾಜ್ಞೆಯ ಪೊತ್ತು ಅಲ್ಲೀ । ದೈತ್ಯ
ದುರುಳರ ತರಿದ್ಯೋಧುರದಲ್ಲೀ । ಅಹ
ಧರೆಯ ಭಾರವ ನಿಳುಹಿ । ಮೆರೆದಂಥ ಗುರುವರ
ಪರಮ ಕಾರುಣ್ಯದಿ । ಹರಿಸೆನ್ನ ಭವತಾಪ ೨

ಶೇಷಶತ ದೇವೋತ್ತಮಾ । ಬಾಷು
ಶ್ರೀಶನ ನಾಭಿಯೆ ಧಾಮಾ । ವಿಶ್ವೋ
ಪಾಸಕ ಖೇಶ ನಿಸ್ಸೀಮಾ । ಪ್ರಾಣಾ
ವೇಶಯುತನೆ ಗುಣಧಾಮಾ । ಅಹ
ಮೂಷಕ ವರವಾಹ ಭೇಶ ಗರ್ವಹರ
ಶ್ರೀಶನ್ನ ಹೃದಯಾವ । ಕಾಶದಲಿ ತೋರೊ ೩

ಮೋದಕೇಕ ವಿಂಶಾದ ಗಣಪಾ । ಪಂಚ
ಭೇದಜ್ಞ ಹರಿಪಾದ ಮಧುಪಾ । ಬೇಡ್ವೆ
ಮೋದ ತೀರ್ಥರ ಮತದಿ ಸುಖಿಪಾ । ನಂದ
ಸಾಧನ ಕೋಡು ವೇಗ ವಿಘ್ನಪಾ । ಆಹ
ಮೃದ್ಧವ ಪ್ರಾರ್ಥಿಪೆ । ಸಿದ್ಧಿದಾಯಕ ಕಾಯೋ
ಬುದ್ಧಿ ವಿಧ್ಯಾ ಪರಿ । ಶುದ್ಧ ಭಕ್ತಿಯನಿತ್ತು ೮

ತ್ರಿವಿಧ ತಾಪವ ಕಳೆಯೊ ಯೆನ್ನಾ । ಮನ
ಭವನದಿ ಸಿರಿ ರಮಣನಾ । ಗುರು
ಗೋವಿಂದ ವಿಠಲಾಭಿಧನ್ನಾ । ನಿಲ್ಲಿಸಿ
ಅವಿರತವನ ಧ್ಯಾನವನ್ನಾ । ಆಹ
ಗೈವಂಥ ಸೌಭಾಗ್ಯ । ಪಾಲಿಸೊ ವಿಘ್ನೇಶ
ಶ್ರೀವರನಂಘ್ರಿ ಸರೋಜ । ಭೃಂಗನೆ ಕರುಣೀ ೫

೭

ವಿಘ್ನೇಶ – ವಿಘ್ನೇಶ ಪ

ಭಗ್ನ ಗೈಸಿ ದು । ರ್ವಿಘ್ನಗಳನು ಹರಿ
ಯಜ್ಞನಲ್ಲಿ ಮನ । ಲಗ್ನವ ಗೈವುದು ಅ.ಪ.

ನಭಕಭಿಮಾನಿಯೆ । ಪ್ರಭುಹರಿ ಭಜನೆಗೆ
ಶುಭ ಅವಕಾಶದ । ವೈಭವ ಪ್ರದನೇ ೧

ಆದಿದೇವ ನಿನ । ಗಾದಿ ಪೂಜೆಯನು
ಮೋದದಿ ವಿಧಿಸುತ । ಸಾಧು ಜನೋದ್ಧಾರ ೨

ಕುಂತಿಯ ಸುತನೆನ । ಅಂತೆ ಭಜಿಸಿ ಭುವಿ
ಕಾಂತ ನೆನಿಸಿದನು । ಕಂತು ಹರನ ಸುತ ೩

ಸಂತತ ಸಂಗವ । ಸಂತತ ಕೊಡುತಲಿ
ಪಂಥಾಬಿಧ ಹರಿ । ಚಿಂತೆಯಲಿರಿಸೋ ೪

ವಿಶ್ವಂಭರ ಗುರು । ಗೋವಿಂದ ವಿಠಲನ
ವಿಶ್ವರೂಪ ಬಹು । ವಿಶ್ವಾಸಾರ್ಚಕ ೫

೮

ಶ್ರೀಶಪದ ಕಮಲಕ್ಕೆ ಮಧುಪ । ನಿನ್ನ
ದಾಸನೆಂದೆನಿಸುವುದು ಧನಪ । ಸಖ ಮ–
ಹೇಶನ ಸುತ ಪೇಳ್ವೆ ಭಿನ್ನಪ । ನೀ ಪ್ರ–
ಕಾಶಿಪುದು ಮನವಿ ವಿಘ್ನಪ ೧

ವ್ಯಾಸದೇವನ ಕರುಣ ಪಾತ್ರ । ಘನಾ
ಕಾಶ ಪತಿ ಕರುಣಿ ಶುಭಗಾತ್ರ । ಗ್ರಂಥ

ಲೇಸೆನಿಸಿ ಲಿಖಿಸಿದೆ ಪವಿತ್ರ । ಮೂರ್ತಿ
ಪಾಶಾಂಕುಶ ಪಾಣಿ ಸುಚರಿತ್ರ ೨

ಇಭೇಂದ್ರ ಮುಖ ಏಕದಂತಾ । ಎನ್ನ
ಕುಭವ ಪರಿಹರಿಸೊ ಮಮ ಕಾಂತ । ಕರ್ಮ
ಉಭಯವರ್ಜಿಪ ಸಂದು ಸ್ವಾಂತ । ದಲ್ಲಿ
ಅಭಯ ನೀ ತಿಳಿಸು ನಿಶ್ಚಿಂತ ೩

ವಿಘ್ನಪನೆ ದುರ್ವಿಷಯದಲ್ಲಿ । ಬಹಳ
ಮಗ್ನವಿಹ ಮನವ ಹರಿಯಲ್ಲಿ । ನಿರತ
ಲಗ್ನ ಮಾಡಿಸು ತ್ವರ್ಯದಲ್ಲಿ । ಇನ್ನೂ
ವಿಘ್ನಗಳಿಗಂಜಿಕೆಯು ಎಲ್ಲಿ ? । ೪

ಧನಪ ವಿಶ್ವಕ್ಸೇನ ಯಮಳ । ಆ ಅ–
ಶ್ವಿನೀಗಳ್ಗೆ ಸಮ ಕರಿಗೊರಳ । ಪುತ್ರ
ನನುಜನೇ ಶೇಷ ಶತಗರುಗಳ । ರಲ್ಲಿ
ಗುಣೋತ್ತಮನೆ ಕಾಯೊ ನಮ್ಮಗಳ । ೫

ಚಾರುಮತಿ ರುಕ್ಮಿಣಿಯ ಕುವರ । ನೀನು
ಚಾರುದೇಷ್ಣಾಭಿಧನೆ ಬವರ । ದಲ್ಲಿ
ಗೌರಿಪತಿ ವರದಿ ಉದ್ಧಟರ । ಆದ
ಕ್ರೂರಿ ಜನ ಸಂಹಾರಿ ಶೂರ । ೬

ಶೂರ್ಪಕರ್ಣನೆ ರಾಜಿಪಾ । ಇಂದು
ದರ್ಪಾಪ ಹರನೇ ವಿಘ್ನಪ । ಕಟಿಲಿ
ಸರ್ಪವರ ಸೂತ್ರ ಅಪರೂಪ । ಖಳರ
ದರ್ಪ ಭಂಜನನೆ ಶುಭರೂಪ । ೭

ಶ್ರೀಶನತಿ ನಿರ್ಮಲವು ಎನಿಪ । ನಾಭಿ
ದೇಶಗತನಾಗಿಹನೆ ಗಣಪ । ರಕ್ತ
ವಾಸೆರಡು ಶೋಭಿತನೆ ಸುರಪ । ಮಿತ್ರ
ಮೂಷಕಾ ವರವಹನ ರೂಪ । ೮

ಶಂಕರಾತ್ಮಜ ದೈತ್ಯ ಜನಕೆ । ಅತಿ ಭ-
ಯಂಕರ ಗತಿಯ ನೀಡಲ್ಕೇ । ನೀನು
ಸಂಕಟ ಚತುರ್ಥಿಗ ಎನಲ್ಕೆ । ಹಾಗೆ
ಮಂಕು ಜನಾವೃತವು ಮೋಹಕ್ಕೆ ೯

ಸಿದ್ಧಿ ವಿಧ್ಯಾಧರರು ಎಂಬ । ಗಣಾ
ರಾಧ್ಯ ಪದಕಮಲ ನಿನದೆಂಬ । ಜನಕೆ
ಸಿದ್ಧಿದಾಯಕ ವೇಗ ಎಂಬ । ಮಹಿಮ
ಬುದ್ಧಿ ವಿದ್ಯೆಗಳ ಕೊಡು ತುಂಬ ೧೦

ಭಕ್ತವರ ಭವ್ಯಾತ್ಮ ಪರಮ । ಶಾಸ್ತ್ರ
ಸಕ್ತವಾಗಲಿ ಮನವು ಅಧಮ । ವಿಷಯ
ಸಕ್ತಿರಹಿತನ ಮಾಡಿ ಪರಮ । ಶುದ್ಧ
ಭಕ್ತನೆಂದೆನಿಸು ನಿಸ್ಸೀಮ । ೧೧

ಶಕ್ರ ಪೂಜಿಸುತ ಗುರು ನಿನ್ನ ವೈರಿ
ಶುಕ್ರ ಶಿಷ್ಯರ ಕೊಂದ ನಿನ್ನ । ಆ ಉ-
ರುಕ್ರಮ ರಾಮ ಪೂಜಿಸೆನ್ನ । ತೋರ್ದ
ವಕ್ರ ತುಂಡನೆ ಕರುಣವನ್ನ ೧೨

ಕೌರವನು ಭಜಿಸದಲೆ ನಿನ್ನ । ಆಸ
ಮೀರನ ಗದೆಯಲಿಂದಿನ್ನ । ಹತನು
ತಾರಕಾಂತಕನನುಜ ಯೆನ್ನೆ । ಧರ್ಮ
ಪ್ರೇರಕನೆ ಸಂತೈಸು ಎನ್ನ ೧೩

ಮೂಕರನ ವಾಗ್ಮಿಗಳ ಗೈವ । ಗುರು ಕೃ-
ಪಾಕರನೆ ಕಾಮಗಳ ಕೊಡುವ । ಪರಮ
ಲೇಖಕನೆ ಮನ್ಮನದಲಿರುವ । ಬಹು
ವ್ಯಾಕುಲವ ಪರಿಹರಿಸು ದೇವ । ೧೪

ಸತ್ತೆ ವೃತ್ತಿಯು ಮತ್ತೆ ಪ್ರಮಿತಿ । ಜಗಕೆ
ಇತ್ತು ತಾ ಸೃಷ್ಟ್ಯಷ್ಟಕರ್ತ್ರೀ । ಎನಿಪ
ಚಿತ್ತಜ ಪಿತನ ದಿವ್ಯ ಸ್ಮೃತಿ । ಇತ್ತು
ನಿತ್ಯ ನೀ ಪಾಲಿಪುದು ಸದ್ಗತಿ ೧೫

ಪಂಚವಕ್ತ್ರನ ತನಯ ಕೇಳೊ । ಎನಗೆ
ಪಂಚಭೇದದ ಜ್ಞಾನ ಪೇಳೊ । ಹರಿಯು
ವಾಂಛಿತ ಪ್ರದನ ದಿಟ ಆಳೊ । ಭವದಿ
ವಂಚಿಸದೆ ಕಾಯೊ ಕೃಪಾಳೊ । ೧೬

ಏನು ಬೇಡುವುದಿಲ್ಲ ನಿನ್ನ । ದುಷ್ಟ
ಯೋನಿಗಳು ಬರಲಂಜೆ ಘನ್ನ । ಲಕುಮಿ
ಪ್ರಾಣಪತಿ ತತ್ವರಿಂದಿನ್ನ । ಕಾರ್ಯ
ತಾನೆಂಬ ಮತಿಯ ಕೊಡು ಮುನ್ನ ೧೭

ಭಕ್ತ ಜನ ಕಲ್ಪ ತರುವೆನಿಪ । ಉಮೆಯ
ಪುತ್ರ ಮಮ ಮಮತೆಯನು ಹರಿಪ । ದಾಯ
ಹತ್ತಿಹುದು ನಿನ್ನಲ್ಲಿ ಗಣಪ । ಕಳೆಯೊ
ಎತ್ತಿ ಕೈ ಮುಗಿವೆ ಭವರೂಪ ೧೮

ಜಯ ಜಯವು ಎಂಬೆ ವಿಘ್ನೇಶ । ತಾಪ
ತ್ರಯಗಳಿನು ನೀನೇ ವಿನಾಶ । ಗೈದು
ಭಯ ಶೋಕರಹಿತ ವಿದ್ಯೇಶ । ಜನ್ಮಾ
ಮಯ ಮೃತಿ ಹರಿಸೊ ನಭಕೇಶ । ೧೯

ನಮಿಸುವೆನೊ ಹೇರೊಡಲ ನಿನ್ನ । ಕರುಣಿ
ಕಮಲಾಕ್ಷ ಹರಿನಾಮವನ್ನ । ನಿರುತ
ವಿಮಲ ಮನದಿ ನುಡಿವಂತೆ ಎನ್ನ । ಮಾಡಿ
ಕಮಲೇಶ ಪದ ತೋರೊ ಘನ್ನ ೨೦

ಎರಡು ನವ ಮೂರು ಪದಗಳನ್ನ । ಗೌರಿ
ತರಳನಲಿ ಇರುವಂಥ ಪ್ರಾಣ । ಪತಿಯು
ಗುರು ಗೋವಿಂದ ವಿಠ್ಠಲನಾ । ಪದದಿ
ಇರಿಸುವರ ಹರಿ ಪೊರೆವ ಅವರನ ೨೧

ದೇವತಾಸ್ತುತಿಗಳು

೯

ಅಂಧನೋ ನಾ ಬಲು ಅಂಧನೊ ಪ

ಸುಂದರವಾದ ಹೃನ್ಮಂದಿರದಲಿ ನಿನ್ನ
ಸುಂದರಮೂರ್ತಿಯ ಕಣ್ದೆರದು ಕಾಣದ ಅ.ಪ.

ಬಹಿರದಲ್ಲಿ ಬಹು ಪರಿಯ ಅಂಗಡಿ ನೆರಹಿ
ಬಹುಜನರ ಮೆಚ್ಚಿಸಿ ಕುಹಕ ಚಿಂತಿಸುವ
ಅಹುದು ಸಜ್ಜನನೆಂದು ಬಹುಜನ ನುಡಿಯಲು
ಮಹಮೋದ ಮಡುವಿನೊಳ್ ಮಹದಜ್ಞನೆನಿಸಿದ ೧

ವಿಷಮ ದುರ್ವಿಷಯಗಳಲಿ ಮನ ಹೊಗಿಸೀ
ವಿಷವೆಂದು ತಿಳಿದು ವಿಷಯ ಸೇವಿಸೀ
ಅಸಮ ಮಹಿಮ ನಮ್ಮ ಝಷಕೇತು ಜನಕನ
ವಿಷಯಗಳ ಬಹು ವಿಷಯೀಕರಿಸಿದಂಥ ೨

ಹೃದಯ ಮಂದಿರ ಮಧ್ಯ । ಸದಮಲ ಪೀಠದಿ
ಸುದತೇರಿಂದೊಡಗೂಡಿ । ವಿಧಿಭವ ಸನ್ನುತ
ಮದನ ಜನಕ ಗುರು । ಗೋವಿಂದ ವಿಠಲನ
ಮುದದಿ ನೋಡದ ಬಲು । ಮದಡು ಮಾನವ ನಾ ೩

೧೦

ನೈವೇದ್ಯ ಸಮರ್ಪಣೆ ಸುಳಾದಿ

ಅನ್ನಾಭಿಮಾನಿ ಚಂದ್ರನಲ್ಲಿ ವೀರ್ಯ ಹಿ-
ರಣ್ಯಾ ದೇವಿಯವರೊಳಗೆ ಸಿರಿ ಕೇಶ
ವನ್ನ ರೂಪ ಚಿಂತಿಸುತಲಿ ಮುಂದೆ ಪರ
ಮಾನ್ನದೊಳು ಭಾರತಿ ಮುಖ್ಯ ಪ್ರಾಣ - ಹ
ರಿಣಿದೇವಿ ನಾರಾಯಣನು ಇಹ ಮುನ್ನ ರವೆ
ಭಕ್ಷದೊಳಿನ ದ್ಯುತಿ ಸತ್ಯಾ - ಮಾಧ
ವನ್ನ ಘೃತಕೆ ಲಕ್ಷ್ಮೀ ಪವನ ನಿತ್ಯಾ ಗೋವಿಂ-
ದನ್ನ ನೆನೆದು ಕ್ಷೀರಕೆ ಸರಸ್ವತಿ ಜೀವೋತ್ತು-
ಮನ್ನ ತಿಳಿ ನಂದಾದೇವಿಯು ಅಲ್ಲಿ
ವಿಷ್ಣು ಮಂಡಿಗೆಯೊಳಿನ ವಾಯು ಬ್ರಹ್ಮ ಮಾದೇವಿ
ಯನ್ನ ತಿಳಿಯೊ ಅಲ್ಲಿ ಮದುಸೂಧನನು ಇಹ
ಬೆಣ್ಣೆಯೊಳ್ಮಾರುತ ಆನಂದ ವಾರಿಧಿ-
ಯನ್ನೂ ಸುಖ ತ್ರಿವಿಕ್ರಮ ದಧಿ ವರುಣ
ಧನ್ಯ ಸುಗಂಧಿನೀ ವಾಮನ್ನರೂಪ
ವನ್ನು ಚಿಂತಿಸು ಸೂಪಕೆ ಗರುಡ - ನೀ
ರನ್ನ ತಿಳಿದು ಸುಂದರಿ ಶ್ರೀಧರನೆನ್ನು
ಪನ್ನಂಗಶಯ್ಯ ಗುರು ಗೋವಿಂದ ವಿಠಲನು
ಮನ್ನಿಸಿ ಕೈಗೊಂಡು ಉನ್ನತ ಪದ ಕೊಡುವ ೧

ಹುಳಿ ತೊವ್ವೆಯಲಿ ಸೌಪರಣಿ ಮತ್ತೆ ಪ್ರತಾಪ
ಓಲೈಸು ಸುಂದರೀ ಶ್ರೀಧರ ದೇವನ್ನ
ತಿಳಿ ಪತ್ರ ಶಾಖಕೆ ಮಿತ್ರನೆಂಬಿನನ
ಗಾಳಿ ದೇವನೆ ಸಾಧು ಅವನೊಳಗೆ ವಿದ್ಯಾ
ಒಲಿಸು ಹೃಷಿಕೇಶ ದೇವನ್ನ
ಫಲಶಾಖಕೆ ಶೇಷ ಶೂರಾಧಭಿನ ಸು-
ಶೀಲಾದೇವಿ ಪದ್ಮನಾಭನ್ನ ತಿಳಿದು

ಹುಳಿ ಸೊಪ್ಪು ಗೊಜ್ಜು ಸಾರು ಇವುಗಳೊಳ್
ಶೈಲಜೆ ಕಪಿ ಸಲಕ್ಷಣಾ ದಾಮೋದರ
ತಿಳಿ ಅನಾಮ್ಲ ಸಪ್ಪೆ ಭಕ್ಷ ಗಳಲ್ಲಿ ರುದ್ರ – ಅ–
ನಿಲನು ಜಗತ್ಪತಿ ಜಯಲಕ್ಷ್ಮೀ – ಇ
ವಳಲ್ಲಿ ಶ್ರೀ ಜಯಾಪತಿಯ ಚಿಂತಿಸೆ
ವಲಿವ ಗುರುಗೋವಿಂದ ವಿಠಲ ಆನಂದ ೨

ಶರ್ಕರ ಗುಡ ಭಕ್ಷ ಇಂದ್ರನು ಮಹಾಬಲ
ಲಕ್ಷ್ಮೀಮಿಯಾ ರೂಪ ಶ್ರೀ ವಾಸುದೇವನು ಸೋ–
ಪಸ್ಕರಕೆ ಗುರು ಆಕಾಶಾಶ್ರಯ ಮನೋಜವರ
ಲೆಕ್ಕಿಸು ಕಮಲೆಯ ಪ್ರದ್ಯುಮ್ನ ದೇವನ
ಮಿಕ್ಕ ಕಟು ದ್ರವ್ಯವು ಖಾರಕೆ ಯಮಧರ್ಮ
ಸತ್ಕರಿಸೆ ಜಿತನ ಪದ್ಮಾನಿರುದ್ಧರ
ಸೊಕ್ಕವರರಿ ಗುರು ಗೋವಿಂದ ವಿಠಲಯ್ಯ
ಸಿಕ್ಕಾ ಸುಳಿವ ಮುಂದೆ ಕಕ್ಕುಲಾತಿಯ ಸಲ್ಲ ೩

ಸಾಸಿವೆ ಜೀರಿಗೆ ಏಲಾದಿ ಪರಿಮಳ ಇಂಗು – ಮೆ–
ಣಸಿನಲಿ ಮನ್ಮಥ ಮಹೋತ್ಸಾಪ ಚಿತ್ರಕರ್ಮ
ವಾಸವು ಕಮಲೆಯು ಅಧೋಕ್ಷಜನು ಅಲ್ಲಿ
ಮಾಷ ತಿಲ ಕೂಷ್ಮಾಂಡ ಚಣಕ ಬೋಂಡವು
ಭಕ್ಷ ಬುರಿ ಬುರಿಯೊಳು ದಕ್ಷ ಪ್ರಜೇಶ ಪ್ಲವ
ಹರ್ಷಭ ಸುರ ವೀಕ್ಷಿತ ಲಕ್ಷ್ಮೀನರಸಿಂಹನು
ಮಾಷ ಪಿಷ್ಟವು ದೋಸೆ ಹಪ್ಪಳ ಸಂಡಿಗೆ
ಲೇಸು ಮೋದಕದೊಳ್ಮನು ಮಹಯೋಗ – ಮಹವ
ಪುಷ ವೃಷಾಕಪಿ ಅಚ್ಯುತ ದೇವನ್ನ ಚಿಂ–
ತಿಸು ಉಪ್ಪು ಉಪ್ಪಿನಕಾಯಿ ನಿರಋತಿ ಚಿರಜೀವಿ
ವಾಸುವು ಧನ್ಯಾದೇವಿ ಜನಾರ್ಧನನು ಫಲ
ರಸವು ಫಲೋದಕ ಶೀಕರಣೇತ್ಯಾದಿ
ರಸದೊಳ ಹಂಪ್ರಾಣ ಘ್ರಾಣನು ಆದ್ವಯರು
ಭಾಸಿಸುವಳು ವೃದ್ಧೀದೇವಿ ಉಪೇಂದ್ರನು

ದೋಷದೂರನು ಗುರು ಗೋವಿಂದ ವಿಠಲ ಪ್ರ–
ಕಾಶಿಸುವನು ಬಿಡದೆ ಈಪರಿ ಗುಣಪರ್ಗೆ ೪

ಮಂಗಳ ವೀಳ್ಯೆಯೊಳ್ ಗಂಗಾದೇವಿಯ ಪ್ಲ
ವಂಗ ಶುಚೀ ಸದನ ಯಜ್ಞಾದೇವಿಯರ
ರಂಗನು ಹರಿ ರೂಪದಲ್ಲಿರುವನು ಉತ್–
ತುಂಗ ಸ್ವಾದೋದಕದೊಳಗಿರುವನು ಬುಧನು
ಪಿಂಗ ಕಣ್ಣಿನ ಮತಿಮತನ ಸುಧಾದೇವಿ
ಅಂಗಜನಯ್ಯ ಶ್ರೀಕೃಷ್ಣನ್ನಧೇನಿಸೆ
ಗಂಗಾಜನಕ ಗುರು ಗೋವಿಂದ ವಿಠಲನು
ಮಂಗಳ ಕೊಡುವನು ಸಂದೇಹವಿಲ್ಲದೆ ೫

ಭೋಜನ ದ್ರವ್ಯದಿ ಯೋಚಿಸ್ಯಭಿಮಾನಿಗಳ
ಭೋಜ್ಯ ಗುರು ಗೋವಿಂದ ವಿಠಲನೆ ಭೋಜಕ ೬

೧೧

ಅನಿಲ ಹೃತ್ಕಮಲಸ್ಥ । ಮುನಿ ವೇದವ್ಯಾಸ
ಎನಗಿನ್ನು ತವಧ್ಯಾನ । ಸುಖವೀಯೊ ಶ್ರೀಶಾ ಪ

ಚಿದಚಿದ್ವ ಲಕ್ಷಣನೆ । ಚಿತ್ರ ಚಾರಿತ್ರನೇ
ಚತುರಾಸ್ಯ ಪಿತ ನೀನು । ಸುರ ಚಕ್ರವರ್ತೀ ।
ಚತುರ ರೂಪವ ಧರಿಸಿ । ಚತುರ ವ್ಯೂಹವ ರಚಿಸಿ
ಚತುರ ವಿಧ ಸೃಷ್ಟಿಯನು । ಚತುರ ವಿರಚಿಸಿದೇ ೧

ಮುನಿ ಪರಾಶರ ತನುಜ । ಶ್ರೀನಿಕೇತನ ಹರಿಯೆ
ಎನಗರುಹು ವೇದಾರ್ಥ । ವೇದವೇದ್ಯಾ ।
ಘನ ಮಹಿಮ ಕೋಟಿ । ನಿಖಿಲಾಂಡ ನಾಯಕನೆ
ಅನಘ ನೀ ಸಲಹಯ್ಯ । ಕಪಿಲ ರೂಪಾತ್ಮ ೨

ಸಚ್ಛಾಸ್ತ್ರ ಕರ್ತೃ ಸತ್ । ಸೂತ್ರಗಳ ನಿರ್ಮಾತೃ
ಸಚ್ಛಾಸ್ತ್ರ ಭಾವಗಳ । ಅರುಹೆ ವಿಬುಧರಿಗೇ ।
ಮತ್ಸ್ಯಾದಿ ರೂಪನಿ । ನ್ನಿಚ್ಛೆಯಿಂದಲಿ ಪೊಂದಿ
ವತ್ಸಗೆ ಭೋದಿಸಿದೆ । ಸಚ್ಚಿದಾನಂದಾ ೩

ಮೂಲ ಪ್ರಕೃತಿಯ ಮಾನಿ । ಮಹಾಲಕ್ಷ್ಮಿ ನಿನ್ನಯ
ಶೀಲಗಳನನುಸರಿಸಿ । ಸೇವಿಸುವಳೂ ।
ಪ್ರಲಯ ಕಾಲದಿ ನಿನ್ನ । ಒಲುಮೆಗೋಸುಗ ವಟದ
ಎಲೆಯ ರೂಪದಿ । ಮಲಗಲನು ವಾದಳಯ್ಯ ೪

ಬಾದರಾಯಣ ಮೂರ್ತಿ । ಬದರಿ ಕ್ಷೇತ್ರದಿ ಪೂರ್ಣ
ಭೋದರ ಸುಸೇವೆಯನೆ । ಸತತ ಕೊಳುತಾ ।
ಮೋದ ಗುಣ ಪೂರ್ಣ ಗುರು । ಗೋವಿಂದ ವಿಠ್ಠಲನೆ
ಹೇ ದಯಾಂಬುಧೆ ನಿನ್ನ । ಪಾದಾಬ್ಜ ತೋರೋ ೫

೧೨

ಅಪಮೃತ್ಯು ಪರಿಹರಿಸೊ ನಾರಸಿಂಹ
ಕೃಪಣ ವತ್ಸಲ ಹರಿಯೆ ಬಿನ್ನವಿಪೆ ನಿನಗೇ ಪ

ಅನ್ಯರಿಗೆ ಮೊರೆ ಇಡೆನೊ । ನಿನ್ನೊರತು ಇನ್ನಿಲ್ಲ
ಮನ್ಯು ಸೂಕ್ತೋದಿತನೆ । ಎನ್ನ ಶಿಷ್ಯನಿಗೇ
ಬನ್ನ ಬಡಿಸುವ ರೋಗ । ವನ್ನು ಮೋಚಿಪುದಯ್ಯ
ಅನ್ನಂತ ಮಹಿಮ ಹರಿ । ನಿನ್ನ ಕೃಪೆ ತೋರೋ ೧

ಜ್ವರ ಹರಾ ಹ್ವಯನೆಂದು । ವರ ವೇದಮಾನಿಗಳು
ಪರಿಪರಿಯಲಿಂ ನಿನ್ನ । ಸ್ತೋತ್ರ ಗೈವುದನ
ಅರಿತು ನಿನ್ನಲಿ ನಾನು । ಮೊರೆಯ ಇಡುವೆನೊ ಹರಿಯೆ
ಪರಿಪೊಷಿಸೋ ಇವನ । ಕರುಣರಸ ಪೂರ್ಣ ೨

ತಂದೆ ತಾಯಿಯು ನೀನೇ । ಬಂಧು ಬಳಗವು ನೀನೇ
ಇಂದು ಅಂದಿಗು ನೀನೇ । ಎಂದೆಂದು ನೀನೇ ।
ಕಂದನನು ಸಲಹೆಂದು । ಸಿಂದುಶಯನನೆ ಬೇಡ್ವೆ
ಇಂದಿರಾಪತಿ ಗುರು । ಗೋವಿಂದ ವಿಠಲಾ ೩

೧೩

ಅಪವಾದ ವದಗಿಹುದು । ಕೃಪಣ ಶಿಷ್ಯನಿಗೇ
ಅಪವರ್ಗಪ್ರದ ಹರಿಯೆ । ಅಪವಾದ ಕಳೆಯೋ ಅ.ಪ.

ದಾಸನಾದವನು ನಿ । ರ್ದೋಷಿ ಎನುವುದು ನಿಜ
ದಾಸನೆನೆ ಹನುಮಂಗೆ । ಲೇಸು ಸಲ್ಲುವುದೋ ।
ದಾಸರನುಯಾಯಿ ನರ । ದೂಷಣೆಗೆ ಒಳಗಾಗಿ
ಕ್ಲೇಶ ಪಡುವುದು ಉಚಿತೆ । ಶ್ರೀಶ ಸರ್ವೇಶಾ ೧

ಫಲವು ತುಸು ಕೆಟ್ಟಿರಲು । ಆ ಉಪಭಾಗವ ಬಿಸುಟು
ಮೆಲುವುದಿಲ್ಲವೆ ಫಲವ । ಹಲವು ಜನರೂ
ಕಲಿಮಲಘ್ನನೆ ಹರಿಯೆ । ಕಲುಮಷವನೆ ಕಳೆಯುತ್ತ
ಕಲುಷ ದೂರನ ಗೈಯ್ಯೋ । ಬಲು ದಯಾ ಪೂರ್ಣಾ ೨

ಶಿರಿಮಾಧವಾ ಭಿನ್ನ । ಗುರು ಗೋವಿಂದ ವಿಠಲ
ಕರುಣಾಪಯೋನಿಧಿಯೆ । ಸರ್ವಾಂತರಾತ್ಮ
ತರಳಗೊದಗಿಹ ವಿಪದ । ಪರಿಹರವ ಗೈಯ್ಯುತ್ತ
ಕರುಣಿಸೆನೆ ಮನಶಾಂತಿ । ಹರಿಯೆ ಭಿನ್ನವಿಪೇ ೩

೧೪

ಅಬ್ಜಭವಪಿತ । ಮದ್ಗುರ್ವಂತರ್ಯಾಮಿ । ಸಲಹಯ್ಯ
ಕುಬ್ಜ ಮೂರುತಿ । ಯಾದ ಗುರು । ಗೋವಿಂದ ವಿಠಲಯ್ಯ ॥ಪ॥

ಈಶ ತಂದೆ ವೆಂಕ । ಟೇಶ ವಿಠಲನ । ದಾಸ ಸಹವಾಸ ।
ದೋಷ ರಾಶಿಯ । ನಾಶ ಗೈಸಿತು । ಶ್ರೀಶ ಕೇಶವನೇ ೧

ಮರಣ ಸಮಯದಿ । ಚರಣ ಪುಷ್ಕರ । ಭಜಿಸಿದ ಜಮಿಳನ ।
ಕರುಣದಿಂದಲಿ । ಮರೆದ ವೋಲ್ । ಎನ್ನ ಮನಕೆ ಬಾ ನಾರಾಯಣ ೨

ಭೇದ ಮತವೆಂ । ಬಬ್ಧಿಯಲಿ । ಉದಿಸಿವೆನು ಕಾಣಯ್ಯ ।
ಮಧ್ವಪತಿ । ಮದ್ಭಾರ ನಿನ್ನದು । ಸಲಹೊ ಮಾಧವನೆ ೩

ಗೋವಿದಾಂಪತಿ । ಗೋಪ ಪಾಲಕ । ಶ್ರೀಶ ಗೋವಿಂದ
ಮಾವ ಕಂಸನ । ಕೊಂದಸಿರಿ । ಗೋವಿಂದ ಸಲಹಯ್ಯ ೪

ಜಿಷ್ಣು ಸಖ ಸಿರಿ । ಕೃಷ್ಣ ಬೇಡುವೆ । ಕಷ್ಟ ಬಿಡಿಸಯ್ಯ ।
ವೃಷ್ಟಿಕುಲ ಸಂ । ಪನ್ನ ಪಾವನ । ವಿಷ್ಣು ಮೂರುತಿಯೆ ೫

ವೇದಗಮ್ಯ । ದಯಾಪಯೋನಿಧಿ । ಸಾಧು ವಂದಿತನೆ ।
ಮೋದದಿಂ । ತವಪಾದ ಪೂಜಿಪೆ । ಪಾಲಿಸೈ ಮಧುಸೂಧನ ೬

ಸವೆದು ಪೋಗುವ । ಕಾಯ ಮಮತೆಲಿ । ಕಟ್ಟೆ ಧರ್ಮಾತ್ಮ ।
ಭವದ ಭವಣೆಯ । ಬಿಡಿಸುವುದು । ಬಲಿವರದ ತ್ರಿವಿಕ್ರಮ ೭

ವಿಮಲ ಸತ್ಕಲ್ಯಾಣ । ಗುಣ ನಿಸ್ಸೀಮ । ಸುಜ್ಞಾನಾ
ಅಮರಾರಿಯ ದ್ವರ । ಕೆಡಿಸಿ ಉಳಿಸಿದೆ । ಶೀಲ ವಾಮನ ೮

ಹೃದಯ ಶೋಭಿತ । ಮೋದಮಯ । ಮಧ್ವಾಂತರಾತ್ಮಕನೇ ।
ಆದಿಮೂರುತಿ । ಸಾಧು ವಂದಿತ ಕಾಯೋ ಶ್ರೀಧರನೇ ೯

ಅಸುರ ಭಂಜನ । ಬಿಸಜ ಭವ ಪಿತ । ಈಶ ಸರ್ವೇಶಾ ।
ಒಸೆದು ಬೇಡುವೆ । ಕಸರು ಕರ್ಮವ । ಹರಿಸೋ ಹೃಷಿಕೇಶ ೧೦

ಬದ್ಧ ಜೀವನ । ಅಬದ್ಧ ಮಾಡಲು । ತಿದ್ದಿ ಸೃಜಿಸಿದೆಯೋ ।
ಸದ್ಗುರುವೆ ಮತ್ । ಪೊದ್ದಿಕೆಯ ಕಳೆ । ಪದ್ಮನಾಭನೆ ೧೧

ಪ್ರೇಮ ಪೂರ್ಣನೆ । ಸಾಮ ಸನ್ನುತ । ಸಿರಿ ಮನೋಹರ ।
ಧಾಮತ್ರಯ ಸು । ತ್ರಾಮ ವಂದಿತ । ಪಾಲಿಸೈ ದಾಮೋದರ ೧೨

ಪಂಕಜಾಸನ । ವಿನತ ಎನ್ನಮನ । ಪಂಕ ಕಳೆಯಯ್ಯ ।
ವೆಂಕಟಾ ಬಿರು । ದಾಂಕ ಜಯ ಜಯ । ಸಂಕರುಷಣ ೧೩

ವಾಸವಾದಿ ದ್ವಿ । ಜೇಶ ಪೂಜ್ಯನೆ । ವಿಶ್ವ ವ್ಯಾಪಕನೇ
ಶ್ರೀಶ ಸದ್ಮನೆ । ವಾಸುದೇವನೆ । ಪೋಷಿಸೈ ಪರಮಾತ್ಮನೇ ೧೪

ಮುದ್ದು ಮೋಹನ । ಹೃದ್ಯು ನೀನನ । ವದ್ಯ ನಿರವದ್ಯ ।
ಸದ್ಯದಲಿ । ಆಪನ್ನ ಪಾಲನೆ । ಪೊರೆಯೊ ಪ್ರದ್ಯುಮ್ನ ೧೫

ಅನಘ ನಿನ್ನಯ । ಚರಣ ಕೆರಗುವೆ । ಗುಣವನಧಿ ಪೊರೆಯಯ್ಯಾ ।
ಮನವಹರ್ನಿಸಿ । ನಿಲ್ಲಿಸೈ ನಿನ್ನಲ್ಲಿ ಅನಿರುದ್ಧ ೧೬

ಕರಿವರನು ತವ । ಚರಣ ಸರಸಿಜ । ನಂಬಿ ಮೊರೆಯಿಡಲು ।
ಕರದ ಚಕ್ರದಿ । ತರಿದು ನಕ್ರನ । ಬಿಸುಟ ದೊರೆ ಪುರುಷೋತ್ತಮ ೧೭

ವಿಧಿಭವಾದಿ । ಸುರೇಂದ್ರ ವಂದಿತ । ಪಾಹಿ ಪದ್ಮಾಕ್ಷ ।
ಬದಿಗ ನೀಯನ । ದಣಿಪರೇ ದರ ಚಕ್ರಧರ । ಅಧೋಕ್ಷಜ ೧೮

ತರಳ ಕರೆಯಲು । ಭರದಿ ಕಂಬದಿ । ಬಂದ ತ್ರಿಪದಾಹ್ವ
ದುರುಳ ಹಿರಣ್ಯನ । ತರಿದು ಭಕ್ತನ । ಸಲಹಿದ್ಯೋ ನರಸಿಂಹನೆ ೧೯

ನಿಚ್ಚತವ । ಸಚ್ಚರಿತೆಯನು । ಉಚ್ಚರಿಸಿ ಪೊರೆಯಯ್ಯ ।
ಮಚ್ಛ ಕಚ್ಛಪ । ರೂಪಿ ಅಚ್ಯುತ । ಸಲಹೊ ಚ್ಯುತಿ ದೂರ ।೨೦

ಸಾನುಕೂಲವು । ಸಕಲ ಸಾಧನ । ನಿನ್ನ ಭಜಿಸುವಗೇ
ಜ್ಞಾನಗಮ್ಯ । ಅನಾದಿ ರೋಗವ । ನೀಗೋ ನೀ ಜನಾರ್ಧನ ೨೧

ಸಾಂದ್ರ ನೀಲವ । ಮೇಘ ವರ್ಣನೆ । ಕಾಯೊ ಕೃಪೆ ಸಾಂದ್ರ ।
ಚಂದ್ರ ರವಿ । ಸ್ಮರ ಕೋಟಿ ಸುಂದರ । ಪಾಹಿ ಉಪೇಂದ್ರ ೨೨

ಮರದಿ ಎಂಜಲ । ಸವಿದು ಶಬರಿಯ । ಕಾಯ್ದೆ ಮುರವೈರಿ
ತ್ವರದಿ ತ್ವತ್ಪದ । ವನಜ ಕಾಂಬುವ । ಹದನರುಹು ಶ್ರೀಹರಿ ೨೩

ಜಿಷ್ಣು ಸಖ । ಶಿಷ್ಟೇಷ್ಟಪರಿ । ಹರಿಸಯ್ಯ ಮುತೃಷ್ಣಾ ।
ಕೃಷ್ಣೆ ಗಕ್ಷಯ । ವಸನ ದಾತನೆ । ಕಾಯೊ ಶ್ರೀ ಕೃಷ್ಣ ೨೪

ನಿರುತ ನಿನ್ನಯ । ಚರಣ ಪುಷ್ಕರ । ಮಧುಪನೆನಿಸಯ್ಯ
ಸ್ಮರಿಪರಘ । ಪರಿಹರಿಪ ಗುರು । ಗೋವಿಂದ ವಿಠಲಯ್ಯಾ ।೨೫

೧೫

ಅರಿಯೆನೋ ನಿನ್ಮಾಯ । ಸದ್ವಪುಷ ಚಿನ್ಮಯ ಪ

ತೆರೆದ ಕಣ್ಣನು । ಗಿರಿಯಧರಿಸಿಹೆ ।
ಧರಣಿಕೆದರುವೆ । ತರಳನುಳುಹಿದೆ
ವರಸು ವಟುವೇ । ಪರಶುರಾಮನೆ
ಧರಣಿಜೆಯ ಪತಿ । ಗುರುಸುತ ಪ್ರದ ।
ಹರಿಯೆ ಬೌದ್ಧನೆ । ಪರಿ ಮಿಗಿಲು ಇಲ್ಲವೊ
ಚೆಲ್ವ ಹಯವೇರುತ್ತ ಮ್ಲೇಂಛರ ಸದೆವವನೆ ಅ.ಪ.

ಎಂಥ ಮಹಿಮನೋ ನೀನು । ಶಿರಿರಮೆಯ ಮನಸಿಗು
ಕ್ರಾಂತಿಕಾರಕ ನೀನು । ಮಿಕ್ಕವರು ತಿಳಿವರೆ ।
ಸಂತನಲ್ಮೊಗ ನಿನ್ನ । ಇದು ನಿನ್ನ ಖೂನು ॥
ಕಂತುಜನಕನೆ ಪಂಥಭಿದ ಹರಿ ನಿಂತು ಓಡುವೆ
ಅಂತ ಗಾಣದ । ನಂತ ಮಹಿಮನೆ
ಸಂತ ಜನ ಪರಿ । ಪಂಥಿ ಬಾಧಕ
ಕಂತುಹರ ಸಖ ಸೃಷ್ಟಿಕರ್ತನೆ ।
ಪ್ರಾಂತಗಾಣದ ಶಿರಿಸ್ತವನ ಕೊಂದನೆ ೧

ಸಮರು ನಿನಗ್ಯಾರು । ಹೇ ಶಿರಿರಮಣ ಮಮಕಾರವನು
ಬಿಡಿಸಯ್ಯ । ವಿಮಲಮತಿ ನೀನೆ ಕೊಡಿಸಯ್ಯ
ನಿಮಿನೃಪನ ಪೊರೆವಂತೆ ಪೊರೆಯಯ್ಯ
ಕಮಲಜಾದಿಗಳಿಂದ ಸ್ತುತ್ಯನೆ ।
ಅಮಿತ ಮಹಿಮೋಪೇತ್ ಶಿರಿಹರಿ ।
ಸುಮತಿ ಸುಜನಾಂಬೋಧಿ ಚಂದಿರ ।
ಪ್ರಮಿತ ಜಗ ಸತ್ಕರ್ತ ಪ್ರಾಣನೇ ೨

ಹರಿಯೆ ನಿನ್ನಯ ರೂಪ ।
ನೋಡುವುದಕೆ ಇರುವುದವು ಅಪರೂಪ ।
ದೇವಾದಿ ವರ್ಣಿಸೆ । ಇರುತಿರುವೆ ಬಹುರೂಪ ।
ಆರು ಅರಿಯದ ರೂಪ ನೀರೊಳಿರುತಿಹೆ । ಭಾರಪೊತ್ತಿಹೆ ।
ಕೋರೆದಂತನೆ ನಾರಸಿಂಹನೇ ಪೋರ ವಟುವೆ ।
ವೀರರಾಮನೆ । ಕ್ರೂರ ಖಳಹನ ನಾರಿಯರ
ವ್ರತವಳಿದು ತೇಜಿಯನೇರ್ದ ಗುರು ಗೋವಿಂದ ವಿಠಲ ೩

೧೬

ಆರ್ತನಾಭೀಷ್ಟವನು । ಪೂರ್ತಿಗೊಳಿಸೊ ಪ

ಕಾರ್ತಸ್ವರ ಮೊದಲಾದ । ವಾರ್ತೆ ನಾನೊಲ್ಲೇ ಅ.ಪ.

ಫಲ ಗಿಡೆಲೆ ಮರ ಬಳ್ಳಿ । ಜಲ ಬಿಂದು ನವ ನದಿಯು
ಜಲ ನಿಧಿಯು ವನಗಿರಿಯು । ಜಲ ಚರಾಚರಧೀ ॥
ಒಳ ಹೊರಗೆ ಸಂವ್ಯಾಪ್ತ । ಚಲಿಪೆ ನೆಲೆಯಿಲ್ಲದಲೆ
ತಿಳಿಸೊ ತವ ಮಹಿಮೆಗಳ । ಅಲವ ಭೋದಾತ್ಮಾ ೧

ಕಂಡ ನೀರೊಳು ಮುಳುಗಿ । ಅಂಡಲೆದು ಬೆಂಡಾದೆ
ಪುಂಡರೀಕಾಕ್ಷ ಪದ । ಬಂಡುಣಿ ಎನಿಸದೇ ॥

ಹಿಂಡು ತೀರದ ಗತ । ಪಾಂಡುರಂಗನ ರೂಪ
ಕಂಡು ಹಿಗ್ಗುವುದೆಂದೊ । ಕುಂಡಲಿಯ ಶಯನಾ ೨

ಜ್ಞಾನಾಯು ರೂಪಕನೂ । ಪ್ರಾಣಾಂತರಾತ್ಮ ನಿನ
ಜ್ಞಾನ ಕೊಟ್ಟು ಧರಿಸೊ । ಗಾನ ಪ್ರಿಯನೇ ॥
ಪ್ರಾಣನಿಗೆ ಪ್ರಾಣ ಗುರು । ಗೋವಿಂದ ವಿಠ್ಠಲನೆ
ನೀನಾಗಿ ಒಲಿಯದಲೆ । ಅನ್ಯಗತಿ ಕಾಣೇ ೩

೧೭

ಆನಂದ ಗಿರಿ ರಾಯನೆ ಪಿಡಿಕೈಯ್ಯಾ । ನಾ ನಿನ್ನ ಪಾದ
ಕ್ಕಾನಮಿಸುವೆ ಶರಣರ ಪ್ರಿಯ । ಭಕುತರ ಭವಣೆಯ
ನೀ ನೋಡುತಲಿಹುದೊಳಿತೇನಯ್ಯ । ಬಂಧನ ಬಿಡಿಸಯ್ಯ ಪ

ಮಾನದ ಮಾನ್ಯ ಭೂದಾನವ ಬೇಡ್ವನೆ
ಕಾಣಿಸೊ ಮನದೊಳು ದೀನನ ಮೊರೆಗೇ ಅ.ಪ.

ಕಲ್ಯಾಣ ಪುರಿಯಿಂದಲಿ ಪೋಗೀ ।
ಸಜ್ಜನರವೆರಸೇ ಕಲ್ಯಾದಿಗಳೆಲ್ಲ ದೂರಿದೆ ಸಾಗೀ ।
ಪೋಗುತ್ತಲಿರಲೂ ಬಲ್ಯಾದಿಗಳೊಡೆಯನ ಪುರಕಾಗೀ ।
ಮೂಡಬಾಗಿಲಲಿರುವಾ ವೇಳ್ಯಾದರು ನರಹರಿತೀರ್ಥವ ।
ಓಲೈಸುತ ಸರಿ ನಿರ್ಮಾಲ್ಯ ಪಡೆದೆವು ೧

ನಿಟಲಾಕ್ಷನ ಬಿಂಬನು ನೆಲೆಸಿರುವಲ್ಲಿ । ಮತ್ತೊಂದು
ಬೆಟ್ಟದಿ ಪಟು ಭಟ ತಾ ಯೋಗಾಸನದಲ್ಲಿ । ಕುಳಿತಿಹನಲ್ಲಿ
ಚಟುಲ ವಿಕ್ರಮನ ಧ್ಯಾನಿಸುತಲ್ಲಿ । ಹನುಮಂತನಲ್ಲಿ
ಘಟಿಕಾಚಲದೊಳು ಸೇವಿಸಿ ಭಕುತರ ।
ತಟಕ ಪೊರಟಿತು ವೆಂಕಟಗಿರಿಗೆ ೨

ಹದಿನಾಲ್ಕು ಲೋಕಾಧಿಪನರಸಿ । ಪುರದೊಳು ಪೋಗಿ
ಪದುಮ ಸರಸೋದಕ ಪ್ರೋಕ್ಷಿಸಿ । ಅಲ್ಲಿಂದ ಬಂದು

ಪದುಮಾವತಿ ಪಾದಾಬ್ಜಕೆ ನಮಿಸಿ । ಕುಂಕುಮಾರ್ಚಿಸಿ ॥
ಪದುಮೆ ಮನೋಹರ ಗೋವಿಂದ ಪುರಿಯಲಿ
ವದಗಿ ವಸಿಸಿ ನಾವ್ ನಿಶಿಯನೆ ಕಳೆದೆವು ೩

ಉದಯವಾಗದ ಮುಂದೇಳುತಲಾಗ । ಮಜ್ಜನವ ಗೈದೂ
ಪದಚಾರಿಗಳಾಗುತಲೀ ಬೇಗಾ । ಒಡಗೂಡಿ ಗಿರಿಯ
ಮುದದಿಂದಲೇರುವ ಯೋಗಾ । ಕೈ ಸೇರಲು ಬೇಗಾ ॥
ಪದತಲದಲಿ ಪಾಪಾತ್ಮಕ ತನು ಕ-
ಳೆದಾತನ ನೆನೆದು ಸೋಪಾನವ ಕ್ರಮಿಸಿದೆ ೪

ಗೋವಿಂದ ಗೋವಿಂದನೆಂಬುವ ನಾಮ । ಅಂಬರವು ತುಂಬೆ
ಅವುಗಳ ಕಾವವನ ಗುಣ ನಾಮಾ । ಕೀರ್ತಿಸಿ ಮುದದಿ
ಭಾವದೊಳ್ ಮೈಮರೆದು ಬ್ರಹ್ಮಾ । ಭವಸುರ ಪಾದ್ಯಾರ ॥
ಅವಾಗಲು ಅವರವಗುಣವೆಣಿಸದೆ
ಕಾವನು ಎನುತಲಿ ಪಾವಟಿಗೇರೋ ೫

ಶಿಲೆಯು ಶಾಲಿಗ್ರಾಮವು ನೋಡಾ । ಈ ಪರಿ ತಿಳಿದೂ
ತುಳಿದೂ ತುಳಿಯಲಿಲ್ಲವು ನೋಡಾ । ಸಲ್ಲುವುದೀದು
ತಿಳಿ ವಾದಿರಾಜರಿಗೆ ಗೂಢಾ। ನಾ ಬಲು ಮೂಢಾ ।
ಮಲವನು ಕಳೆಯುತ ಹುಲು ಮನುಜನ ಭವ
ವಳಿದು ಸಲಹೊ ಹೇ ತಿರುಪತಿ ನಿಲಯ ೬

ಮೆಟ್ಟಲು ಮೆಟ್ಟಲುಗಳನೇರುತ್ತಾ । ತಾಳಂಗಳನು
ತಟ್ಟಿ ಹರಿ ಹರಿ ಎಂದೊದರುತ್ತಾ । ಪಾಪಂಗಳ ತಲೆ
ಮೆಟ್ಟಿ ತಂಬೂರಿಯ ಮೀಟುತ್ತಾ । ಕಾಲೊಳು ಗೆಜ್ಜೆಗಳ ॥
ಕಟ್ಟುತ ಘಲು ಘಲು ಘಲಿರೆನ್ನುತ ಜಗ
ಜಟ್ಟಿ ಹನುಮನ ನೆನೆಯಲೊ ಮನವೆ ೭

ಸುರರೆಲ್ಲಾ ಅವತರಿಸಿಹರಯ್ಯ । ಗಿರಿಯೊಳು ನೆಲೆಸಿ
ತರು ಗುಲ್ಮ ಮೃಗ ಪಕ್ಷಿಗಳ ದಿವ್ಯಾ । ರೂಪಂಗಳ ಧರಿಸಿ

ನಿರುತ ಗೈವರು ತವ ಸೇವೆಯು ಭವ್ಯಾ ।
ಅವುಗಳ ವರ್ಣಿಸಲು ॥ ಉರಗರಾಜ ತನ್ನ ಸಾಸಿರ ನಾಲಿಗೆ
ಸರಿಯಾಗದು ಎನೆ ಶಿರವನೆ ತೂಗುವ ೮

ಏರೋ ಪಾವಟಿಗೆಗಳನು ಏರೋ । ಮೊಳಕಾಲು ಮುರಿಯ
ನೇರೋ ಕುಳಿತೊಮ್ಮೆ ತುತಿಸುತ ಸಾರೋ । ಹರಿಯ ಮಹಿಮೆಯ
ಸಾರೋ ಬಾರಿ ಬಾರಿಗೆ ನೀ ಸಾರೋ । ಗಾಳಿ ಗೋಪುರವ ॥
ಮೀರಿ ಬರಲು ದಿವ್ಯ ಗೋಪುರ ಕಾಣುತ ।
ಚೀರೊ ಚೀರೊ ಹರಿ ಗೋವಿಂದನೆನ್ನುತ ೯

ಸ್ವಾಮಿ ಪುಷ್ಕರಣಿಯಲೀ ಮಿಂದೂ । ಶ್ರೀ ಭೂವರಹಾ
ಸ್ವಾಮೀಯನೆ ಪ್ರಾರ್ಥಿಸಿ ಬಂದೂ । ಪ್ರಾಕಾರದೊಳಗಿಹ
ವಿಮಾನ ಶ್ರೀನಿವಾಸನ ಕಂಡಂದೂ । ನಮಿಸುತ ಬಂದೂ ।
ಭೂಮಿಜೆವಲ್ಲಭ ವೆಂಕಟನನು ಕಂಡು
ಕಾಮಿಸೊ ಜ್ಞಾನ ವೈರಾಗ್ಯ ಭಕುತಿಯ ೧೦

ದೇವಾದಿದೇವಾ ಜಗದ್ಭರ್ತಾ । ವೆಂಕಟನೆ ನಾ
ನಾನಾಜನುಮದ ಸುಕೃತಾ । ಪೊಂದುತಲಿ ನಿನ್ನ
ಸೇವಾ ದೊರಕಿದುದೆ ಪುರುಷಾರ್ಥಾ । ಹರಿಮುದು
ಸುಜನಾರ್ತಾ । ಭಾವನ ಕಾಯ್ದು ಸದ್ಭಾವಕೆ ವಲಿವನೆ
ಕಾವುದೆನ್ನ ಗುರು ಗೋವಿಂದ ವಿಠ್ಠಲ ೧೧

೧೮

ಆರ ಮೊರೆ ಇಡಲೊ – ಹರಿ ಎನ್ನ
ಪೊರೆವ ಭಾರ ನಿನ್ನದೆಲೊ ಪ

ಈರ ಪತೆ ಭವ ವಾರಿಧೀಯನು ।
ಪಾರು ಮಾಡುವರಾರು ಪೇಳೋ ಅ.ಪ.

ಈಶ ನೀನಹುದೋ । ಉಮೇಶ ಸಖ –
ಲಕ್ಷ್ಮೀಶ ನೀನಹುದೋ ॥
ವೀಶ ಶೇಷ ಗಿರೀಶ ವಾಸವ ।
ಪೋಷಕನೆ ಮಧ್ವೇಶ ಪೊರೆ ೧

ವಿಶ್ವೇಶ ನೀನಹುದೋ ।
ವಿಧಿಯ ಪಿತ ವಿಶ್ವಾಧಾರ ನೀನಹುದೋ ।
ವಿಶ್ವ ವ್ಯಾಪಕ ವಿಶ್ವವಂದ್ಯನೆ ।
ವಿಶ್ವ ಮೋಹೈಶ್ವರ್ಯ ರೂಪೀ ೨

ವಿತತ ನೀನಹುದೋ ವಿಸ್ತರದ ಮಹಿಮ ।
ವೀತ ಭಯನಹುದೋ ॥
ಯತನ ಜ್ಞಾನೇಚ್ಛಾದಿ ಪ್ರೇರಕ ।
ಸ್ಥಿತಿ ಮೃತಿ ಸತ್ತಾದಿ ಪ್ರದನೇ ೩

ಸುರ ತರುವೆ ನೀನಹುದೋ । ಶರಣ ಪೋಷಕ ।
ಸುರಧೇನು ನೀನಹುದೋ ।
ಶರಣ ಜನ ಕರ್ಮಾದಿ ಋಣಹರ ।
ಮೊರೆಯಿಡುವೆ ಚರಣಕ್ಕೆ ಎನ್ನ ಪೊರೆ ೪

ಬಿಂಬ ನೀನಹುದೋ । ಸಿರಿ ಬೊಮ್ಮ ಮುಖ್ಯ ।
ಬಿಂಬ ನೀನಹುದೋ ।
ಬಿಂಬ ಗುರು ಗೋವಿಂದ ವಿಠ್ಠಲ ।
ಇಂಬು ತವಪದ ಅಂಬುಜದಿ ಕೊಡು ೫

೧೯

ಆರೀಗೆ ಮೊರೆ ಇಡಲೋ । ನಿನ್ಹೊರತಿನ್
ಆರೀಗೆ ಮೊರೆ ಇಡಲೋ ಪ

ಆರೀಗೆ ಮೊರೆ ಇಟ್ಟು । ಚೀರಿ ಕೂಗಿದರೇನು
ಆರೂ ಕಾಯುವರಿಲ್ಲ । ಮಾರ ಜನಕೆ ಹರೇ ಅ.ಪ.

ನೀರಲಿ ಮುಳುಗಿ ನೀ । ಭಾರ ಬೆನ್ನಿಲಿ ಪೊತ್ತು
ಧಾರುಣಿಯನೆ ಚಿಮ್ಮಿ । ದುರುಳನ ತಂದೆಯೋ ೧

ಸಾರಿ ವಿರೋಚನ ವರಪುತ್ರ ಬಲಿಯನ್ನ
ಮೂರಡಿ ಧರಣಿಗೆ ಕರವ ಚಾಚಿದೆ ದೇವಾ ೨

ಪರಶುವ ಸಿಡಿದು ನೀ । ತರಿದೆಯೊ ತಾಯ್ ಕೊರಳ
ಶರಧಿಯ ಬಂಧಿಸಿ । ದುರುಳರ ತರಿದೆಯೋ ೩

ಪೂಥಣಿ ಶಕಟ ಧೇನುಕ ವತ್ಸ ಭಂಜನ
ಮಥಿಸಿ ಕಂಸನ ನಿನ್ನ ಮಾತಾಪಿತರ ಕಾಯ್ದೆ ೪

ಬೆತ್ತಲೆ ತಿರುಗಿ ನೀ । ಉತ್ತಮ ಹಯವೇರಿ
ವತ್ತಿ ದುರುಳನ ಶಿರ । ಕತ್ತರಿಸಿದೆ ದೇವಾ ೫

ಆರತ ಜನ ನಿನ್ನ । ಈ ರೀತಿ ಪೇಳ್ವರು
ವಾರುತೆ ಕೇಳಿ ನಾ । ಮೊರೆಯಿಟ್ಟು ಅರುಹುವೆ ೬

ಮುರಹರ ಶ್ರೀಕೃಷ್ಣ । ಗುರು ಗೋವಿಂದ ವಿಠಲ
ಸರುವ ದೇವೋತ್ತಮ । ಕರುಣದಿ ಸಲಹೆನ್ನ ೭

೨೦

ಇಂದಿರೆಯರಸನ ಛಂದದಿಂದ ಭಜಿಸೋ ।
ಮನದಲಿ ನೀ ನಿಲಿಸೊ ಪ

ಕುಂದನು ಎಣಿಸದೆ ಬಂದು ಕಾಯ್ವ ನಿನ್ನಾ ।
ನೆಂದು ಕಂದ ಬಲು ಘನ್ನಾ ಅ.ಪ.

ಪಾದದ ಮೂಲವು । ಪಾತಾಲವು ಎಂದೂ ।
ಉಪರಿ ರಸಾತಲವೆಂದು
ಪಾದದ ಪರ್ವವು । ಮಹಾ ತಲಾಖ್ಯ ಲೋಕ ।
ಉಪರಿ ತಲಾತಲ ಲೋಕ ॥
ಸಾಧಿಸು ಜಂಘೆಗಳ್ । ದ್ವಯವೆ ಸುತಲ ಲೋಕ ।
ಚಿಂತಿಸಿ ಕಳೆ ಶೋಕ ॥
ಮೋದದ ಊರು ದ್ವಯ । ವಿತಲಾತಲವೆನ್ನೂ ।
ಮುಂದೆ ಸಾಗುತಲಿನ್ನು ೧

ಸಾರು ಕಟಿಯಧರನೇ । ಮಹೀತಲವೆಂದೂ ।
ನಾಭಿಯು ಭುವರೆಂದೂ
ಚಾರು ಉರಸಿನಲ್ಲಿಹ । ಸ್ವರ್ಗ ಲೋಕವೆನ್ನೂ ।
ಸುರಪನಾಳ್ವನೆನ್ನೂ ॥
ಮೀರಿ ಕಂಠದಲ್ಲೀ । ಚಿಂತಿಸು ಮಹಲೋಕ ।
ಮುಖವೇ ಜನ ಲೋಕ
ಭೂರಿ ಲಲಾಟವೆ । ತಪಸಿಗಳಾಸ್ಥಾನಾ ।
ಶಿರ ಬ್ರಹ್ಮನ ಸ್ಥಾನ ೨

ಮುನ್ನ ಸೂಕ್ಷ್ಮ ಚಿಂ । ತನೆಯೇ ಬಲು ಕಷ್ಟ ।
ಎಂದೆನುತ ವಿಶಿಷ್ಟ
ಘನ್ನ ಮಹಿಮ ಹರಿ । ತಾಳಿದ ಬೃಹದ್ರೂಪ ।
ಅದುವೆ ವಿರಾಟ್ರೂಪಾ ॥
ನಿನ್ನ ಬಿಂಬ ಗುರು । ಗೋವಿಂದ ವಿಠಲನ್ನ ।
ಮತ್ತೆ ಸ್ಥೂಲವನ್ನಾ ನನ್ನೆಯೆಂದೈಕ್ಯವೆ ।
ಚಿಂತಿಸೋದು ಮುನ್ನ । ಒಲಿವನು ಗುಣ ಪೂರ್ಣ ೩

೨೧

ಇತರೆಯಳ ಸುತನೆನಿಪ ಐತರೇಯ ।
ಗತಿಪ್ರದ ಶ್ರೀ ವಿಷ್ಣು ಸರ್ವಾಂತರಾತ್ಮಾ ಪ

ಪಂಥಾದಿ ಪದವನ್ನೇ ಸರ್ವ ಶಬ್ದ ಸುವಾಚ್ಯ
ಎಂತೊ ತವ ಮಹಿಮೆಗಳು ಶೃತಿ ಭೋದ್ಯವೋ
ಸಂತ ಜನ ತವ ಭೂತಿ ವಿಭೂತಿ ನೆನೆಯುತಿರೆ
ಅಂತೆ ಶೃತಿ ಮಹ ಭೂತಿ ಪ್ರತಿ ಪಾದ್ಯ ಹರಿಯೇ ೧

ಅಕಳಂಕ ಹರಿ ಪರವು ಅಲ್ಲದಿಹ ಕ್ರಿಯೆಯೋಗ
ಸಕಲವೂ ಬಹು ವ್ಯರ್ಥ ಎಂಬುದನು ಅರುಹೆ ।
ನಿಖಿಲಾತ್ಮ ನೀನಾಗಿ ಕರ್ಮ ಕರ್ಮಾಂಗದಲಿ
ಪ್ರಕಟವಾಗಲು ಅಲ್ಲಿ ಸನ್ನಿಹಿತನಿರುವೇ ೨

ಭೂತ ಪಂಚಕದಲ್ಲಿ ಪಂಚಾತ್ಮ ನೀನಿದ್ದು
ಭೂತ ವಾಯುವಿನಲ್ಲಿ ಮತ್ತೆ ಪಂಚಾತ್ಮಾ ।
ಈ ತೆರದಿ ನೀನಿದ್ದು ಭೂತೇಂದ್ರಿ ಮಾನಿಸಹ
ವಾತನಡೆಸುವುದೆಲ್ಲ ಯಜ್ಞವೆನಿಸುವುದು ೩

ಇಂತಿಪ್ಪ ಯಜ್ಞದಲಿ ಸಂತ ಶ್ರೀಪಾದಾರ್ಯ
ಅಂತೆ ತಮ ಶಿಷ್ಯ ಸಹಕೃತ ಸುಮಂಗಳದಲಿ ।
ಧ್ವಾಂತ ಹರ ಶ್ರುತಿಯನ್ನೆ ಐತರೇಯದಿ ವಾಚ್ಯ
ಪಂಥಬಿಧ ಸರ್ವರಿಗೆ ಒಲಿಯೆ ಪ್ರಾರ್ಥಿಸುವೇ ೪

ಪರಮ ಹಂಸರು ಎನಿಪ ವಿಶ್ವೇಶ ತೀರಥರ
ವರ ಸುನೇತೃತ್ವದಲಿ ಮಂಗಳದ ಕಾರ್ಯ ।
ಪರಕಿಸುವ ಸೌಭಾಗ್ಯ ದೊರಕಿದವನಿಗೆ ಭಾಗ್ಯ
ಹರಿ ಗುರು ಗೋವಿಂದ ವಿಠಲ ಕರುಣಿಸುವ ೫

೨೨

ಎಂತು ಶೋಭಿಪ ನೋಡೀ – ಶ್ರೀವ್ಯಾಸ ವಿಠಲ
ಸಂಪುಟವ ಮನೆ ಮಾಡೀ – ವಿಶ್ವಜ್ಞ ತೀರ್ಥರ
ಶಾಂತ ಸೇವೆಯ ಗೂಡೀ – ಮೆರೆಯುತಿಹ ನೋಡೀ ಪ

ದ್ರುತ – ಎಂತು ಶೋಭಿಪ ಕಂತು ಪಿತ ಸಿರಿ ।
ಕಾಂತ ವಿಠಲ ಶಾಂತಮೂರುತಿ
ಸಂತ ಯತಿವರರಂತರಂಗದಿ ।
ಚಿಂತಿಸುತಲೇಕಾಂತ ಪೂಜೆಗೆ ಅ.ಪ.

ಉತ್ತಮ ಮತಿ ಸುದತೇರು – ಛತ್ರಿ ಚಾಮರಗಳ
ಎತ್ತಿ ಬೀಸುತಲಿಹರೋ ॥
ದ್ರುತ – ಕೃತಿವಾಸನ ಸಖನ ಪರಮ – ಸು ।
ಹೃತ್ತಮೋತ್ತಮ ಚಿತ್ಸುಖಪ್ರದ
ಚಿತ್ತವಿಸು ಚಿತ್ತಾಖ್ಯ ಪೀಠಿಕೆ ।
ಸತ್ಯಕಾಮ ಶರಣ್ಯ ಮೂರುತಿ ೧

ಕಾಯ ವಾಚಾ ಮನಸಾ – ಮಾಡಿದ ಸರ್ವ
ಕಾರ್ಯವೆಲ್ಲವು ನಿನ್ನಯ ।
ಸೇವಾನು ಸಂಧಾನದಾ ಭವವ ಕೊಟ್ಟು
ಕಾಯೊ ಶ್ರೀಧರ ಶ್ರೀವರ ॥
ದ್ರುತ – ಕಾಯ ಭವಪಿತ ತೋಯಜಾಕ್ಷನೆ ।
ದಾಯ ನಿನ್ನದು ಎನ್ನ ಗತಿಗೇ
ಪ್ರೇರ್ಯ ಪ್ರೇರಕ ಶ್ರೀಗುರು ।
ಗೋವಿಂದ ವಿಠಲನೆ ಕಾಯೋ ಬೇಗ ೨

೨೩

ಎಂತು ಶೋಭಿಪ ನೋಡೀ ಶ್ರೀವ್ಯಾಸ ವಿಠ್ಠಲ
ಸಂಪುಟನ ಮನೆ ಮಾಡೀ । ವಿಶ್ವಜ್ಞ ತೀರ್ಥರ
ಶಾಂತ ಸೇವೆಯ ಗೂಡೀ । ಮೆರೆಯುತಿಹ ನೋಡಿ ಪ

ಎಂತು ಶೋಭಿಪ ಕಂತುಪಿತ ಶಿರಿ ।
ಕಾಂತ ವಿಠ್ಠಲ ಶಾಂತಿ ಮೂರುತಿ
ಸಂತ ಯುತಿವರ ರಂತರಂಗದಿ ।
ಚಿಂತಿಸುತಲೇಕಾಂತ ಪೂಜೆಗೆ ಅ.ಪ.

ಶ್ರೀಮಧ್ವಮುನಿಗಳ ಕರಜ । ಶ್ರೀವಿಷ್ಣು ತೀರಥರಾ
ಮಹಾಮುನಿ ಪೂಜಾ । ಗೊಂಡಿರುವ ಶ್ರೀರಾಮ
ನರಹರಿ ಪೂಜಾ । ಶ್ರೀ ವ್ಯಾಸ ವಿಠ್ಠಲ ಪ್ರೇಮ
ಗುರುಗಳ ಕರಜ । ಶ್ರೀವಿಶ್ವಜ್ಞ ತೀರ್ಥ ॥
ಪ್ರೇಮದಲಿ ಗೈವ ಸುನೇಮದಲಿ ।
ಸೀಮೆ ಸುಬ್ರಹ್ಮಣ್ಯದಲ್ಲಿ ಝಾವ ಝಾವಕೆ ಭಜಿಪ ಭಕ್ತರ ।
ಕಾಮಿತಾರ್ಥಗಳೀಯುತಿರೆ ಹರಿ ೧

ವತ್ಸರ ಸುವಿಕ್ರಮದೀ । ಎರಡೊಂದು ಮಾಸದ
ಸಿತ ಪಕ್ಷದಲಿ ಹರಿ ದಿನದೀ । ರವಿವಾರದೊಳು
ಶ್ರೀಯತಿವರರು ಸ್ವಗೃಹದೀ । ಆಗಮಿಸಿ ಪೂಜೆಯ
ಶೃತಿ ಉಕುತ ಮಾರ್ಗದೀ । ಗೈಯ್ಯೆ ಭಕುತರೂ
ಕೃತಿಪತಿಯ ಚರಣಾಬ್ಜಗಳ ಸಂ । ಸ್ತುತಿಸುತ ಸುವೇದ
ಘೋಷದಿ ಕೃತ ರಜತ ಪೀಠಸ್ಥ ನರಹರಿ ।
ಪ್ರತಿ ರಹಿತ ಮಹ ಅತುಳ ವಿಭವದಿ ೨

ಪಾವನ್ನರಾದೆವು ನಾವು । ಸಂಯಮಿ ವರರ
ಪಾವನ್ನ ಪದ ರಜಕಾವು । ದ್ವಾದಶಿಯ ದಿನ
ಶ್ರೀವರನ ಮಹ ಅರ್ಚನವು ಗೈದ ವೈಭವವೂ ॥
ಕಾವ ಕರುಣೆಯು ಸ್ಮರಣೆ ತವಕದಿಂದಲಿ ಮಾಡ್ದ
ತಾವಕನ ಪರಮಾಲ್ಪವೆನಿಪ । ಸೇವೆಯನೆ ಸ್ವೀಕರಿಸಿ ನರಹರಿ ದೇವ ಗುರು
ಗೋವಿಂದ ವಿಠಲ । ಕಾವ ಕರುಣಾಳುಗಳ ಒಡೆಯ ೩

೨೪

ಕೊಂಡಜ್ಜಿ ಶ್ರೀ ಜನಾರ್ದನ ಸ್ವಾಮಿ ಸ್ತೋತ್ರ

ಎಂಥಾ ಸುಂದರನೊ ಶ್ರೀಕಾಂತನೂ ॥ಅ॥

ಸಂತರ ಮನೋರಥ ಸಂತತ ಪಾಲಿಸಿ
ಪಂಥಾವ ಗೆಲಿಪ ಮಹಾಂತನೋ – ಶ್ರೀಕಾಂತನೂ ಅ.ಪ.

ಮಾನಿನೀಯಳ ಬಿಟ್ಟು । ಮೌನಿಯಂದದಿ ನೀನು
ಕಾನನವನೆ ಸೇರಿ ನೆಲೆಸೀರ್ಪುದೂ । ಮುನಿಜನ ವಂದ್ಯಾ ೧

ತೊಂಡ ಜನರು ನಿನ್ನ । ಬಂಡುಣಿಯಂದದಿ
ಪುಂಡು ಮಾಡುವರೆಂದು ಬಂದೆಯಾ । ಪುಂಡರಿಕಾಕ್ಷಾ ೨

ಹಿಂಡು ಭಕ್ತರು ತಮ್ಮ । ದಿಂಡು ಮಂಡಿಪರೆಂದು
ಕೊಂಡಜ್ಜಿಯಲಿ ನೆಲಿಸೀದ್ಯಾ । ಪಾಂಡವ ಪ್ರೀಯಾ ೩

ವೇಲಾಪುರಿಗೆ ಪೋಗ । ಲೊಲ್ಲೆನೆಂದೆನುತಲಿ
ಇಲ್ಲೇ ನೆಲಸಿ ಪೂಜೆಗೊಂಬುದು ಫಾಲಾಕ್ಷ ಪ್ರಿಯನೇ ೪

ಎಲ್ಲಿಪೋದರೂ ಬಿಡ । ಲೊಲ್ಲರೂ ನಿನ್ನ ಜನ
ಸಲ್ಲಿಸೆನ್ನಯ ಮನೋಭೀಷ್ಟವ । ಹೇ ಜನಾರ್ಧನಾ ೫

ಆರು ಕಾಯುವರಿಲ್ಲ । ಸಾರಿದೆ ತವ ಚರಣ
ಪೋರನಾಮಯ ಹರಿಸಯ್ಯಾ । ನಾರದ ವಂದ್ಯಾ ೬

ಗುರುಗಳಂತರ ಗುರು । ಗೋವಿಂದ ವಿಠಲನೆ
ಪರಿಪರಿ ನಿನ ಕೀರ್ತಿ ನುಡಿಸಯ್ಯಾ । ಸುರವರ ವಂದ್ಯಾ ೭

೨೫

ಎಂದು ಕಾಂಬೆನೊ ತಂದೆ ಪಂಡರಿ ವಿಠಲರಾಯನೆ ।
ಬಂದು ನಿನ್ನಯ । ಸುಂದರಾ ಕೃತಿ । ಎಂದು ನೋಡುವೆ ಪ

ದಾಸ ಜನರಾ । ಕ್ಲೇಶ ಹರಿಪಾ । ದೋಷ ದೂರಾನೇ
ದೋಷಿ ಎನ್ನನು । ಪೋಷಿಸೂವುದು । ಸಹಸ್ರನಾಮಾನೇ ೧

ಶ್ರೇಷ್ಠ ಭಕ್ತನು । ಕೊಟ್ಟ ಇಟ್ಟಿಯ । ಮೆಟ್ಟಿ ನಿಂತಾನೇ
ಪುಟ್ಟನಾಗುತ । ಮೆಟ್ಟಿ ಒಲಿಯನು । ಕಷ್ಟ ಕಳೆದಾನೇ ೨

ಕಾವ ಕೊಲ್ಲುವ । ಬೋವ ಬಂಡಿಗೆ । ಯಾವನೀತನೇ
ಓವಿ ಭಜಿಸಲು । ಕಾವ ಗುರು । ಗೋವಿಂದ ವಿಠಲನೇ ೩

೨೬

ಎಲರುಣಿಯ ಶಯ್ಯ ಪವನಾ ।
ಕಾವೇರಿ ಕೂಲಗ ಚೆನ್ನಾ । ಬಾಬಾರನ್ನಾ ಪ

ಕಾಳಿರಮಣನುತ । ಕಾಳಿಂದಿಯ ಮನ
ಕೀಲಾಲಜ ರವಿ । ಬಾಲ ಗೋಪಾಲಾ ಅ.ಪ.

ಜಾಣಾ । ನೀರದವರ್ಣಾ । ಜಟೆ
ಹೇಮವರ್ಣಾ । ಭಕ್ತ ಪಾವನ್ನಾ ।
ಮೌನಿ ಕುಲಕೆ ಸನ್ಮಾನ್ಯ ಪರಾಶರ
ಮುನಿ ಸಂಭವ ತವ ಚರಣಕೆ ಶರಣು ೧

ನಂದಾ । ಗೋಪಿಯ ಕಂದಾ ।
ಪೂತನಿಯ ಕೊಂದು । ಲೋಕಾನಂದಾ ।
ಇಂದ್ರ ಖಗಪ ಅಹಿ । ಪೇಂದ್ರ ವಂದ್ಯ
ಮನಮಂದಿರ ಚಂದಿರ ನಂದವನೀಯೋ ೨

ಹೃದ್ಯಾ । ಅಚ್ಛೇದ್ಯ ಭೇದ್ಯಾ ।
ಹೇ ಅನವದ್ಯಾ । ಇಂದಿರಾರಾಧ್ಯ
ಭಾಧ್ಯ ಭಾದಕ ಸನ್ಮೋದ ಪ್ರಮೋದನೆ
ವೇದ ವೇದ್ಯ ಗುರು । ಗೋವಿಂದ ವಿಠಲ ೩

೨೭

ಏಕಮೇವಾ । ಅದ್ವಿತೀಯನೆ ಪಾಹಿ । ಏಕಮೇವ ಪ

ಏಕಮೇವ ತ್ರೈಲೋಕ ಜನಕ ಕರುಣಾಕರ ಹರಿಯೇ ಅ.ಪ.

ಮಾನ್ಯ ಮಾನದ । ನಾನ್ಯಪ ಹರಿ ಸತ್
ಶೂನ್ಯಾಭಿಧ ಸರಿ । ವಾಣ್ಯಾದಿಯ ಹರ ೧

ಅರ ವಿದೂರ ಹರಿ । ಪರಮ ಪುರುಷ ಶಿರಿ
ಸರಸಿಜ ಭವ ಸುರ । ಕರಣಶಕ್ತಿ ಹರ ೨

ಉದರದೊಳಗೆ ಜಗ । ಹುದುಗಿಸಿ ಸರ್ವವ
ಅದುಭುತ ತಮದಲಿ । ವಿಧಿಸಿದ ಹರಿಯೇ ೩

ಪ್ರಲಯೋದಧಿ ಶಯ । ಚೆಲುವ ಬಾಲ ಬಲ್
ಒಲವಿನಿಂದ ಪದ ಬೆ । ರಳನೆ ಸವಿದಾ ೪

ಸೃಷ್ಟಿಗೊಡೆಯ ಲಯ । ಅಷ್ಟ ಭಾಗವಿರೆ
ಚೇಷ್ಟಿಸಿ ದುರ್ಗೆಯ । ಹೃಷ್ಟಳ ಮಾಡಿದೆ ೫

ಮೃತ್ಯು ಮೃತ್ಯು ಹರಿ । ಸತ್ಯ ಕರ್ಮ ತವ
ಕೃತ್ಯವನಂತವು । ಭೃತ್ಯರ ಸುದತರು ೬

ಕಮಲಾರಮಣನೆ । ಕಮಲಜಾದಿ ನುತ
ನಿಮಿಷೋನ್ಮಿಕರ । ಸುಮನಸಕಪ್ಪುದೆ ೭

ದುರ್ಗೆ ತುತಿಸೆ । ಕರ್ಗತ್ತೆ ಕುಡಿದು ನಿಜ
ಸರ್ಗಕೆಣಿಸಿದೇ । ದುರ್ಗಮ ಮಹಿಮ ೮

ಮುಕ್ತರೊಡನೆ ಸೇ । ರ್ವ್ಯಕ್ತಿಗಳಲಿ ಅಭಿ
ವ್ಯಕ್ತನು ಲೀಲಾ । ಸಕ್ತ ಸುಪುರುಷಾ ೯

ಗೂಹಿಸಿ ಸರ್ವವ । ವ್ಯೂಹ ಚತುರಕೆ
ಮೋಹಿಸಿ ಪುಮಜನ । ಬಾಹಿರ ತೆಗೆದ ೧೦

ಕೃತಿ ಪತಿ ತಾ ಸರ । ಸ್ವತಿ ಭಾರತಿ ಎಂಬ
ಸುತೆಯರ ಪಡೆದು । ಸುತರೊಡನೈರಸಿದ ೧೧

ಪುಮಜಗೆ ಪ್ರಕೃತಿಯಿಂ । ಸುಮನಸ ಶೇಷನು
ಕ್ರಮದಿ ಸೂತ್ರನಿಂ ಜ । ನುಮವು ಕಾಲಿಗೆ ೧೩

ಎರಡು ಒಂದು ತನು । ಹರನಿಗೆ ಬಂದವು
ಸರಸಿಜ ಸಂಭವ । ಮರುತೋರಗದಿಂ ೧೪

ಹರನ ಮಡದಿ ತಾ । ನೆರದೊಂದು ರೂಪದಿ
ಹರನೊಡ ಜನಿಸಿದಳ್ । ವರ ಪತಿ ಸೇವೆಗೆ ೧೫

ವಿಧ ವಿಧ ಜೀವರು । ಉದುಭವವಾದರು
ವಿಧಿ ಪಿತ ಮಹಿಮೆಯ । ಅದು ಭುತ ಕೇಳೀ ೧೬

ಮುದದಿ ಇಟ್ಟ ತನ್ । ಉದರದೊಳೆಲ್ಲರ
ಅದುಭುತ ಚರಿತ ಅನಿ । ರುದ್ಧ ಮೂರುತಿ ೧೭

ಗುಣೋಪಾದಾನದಿ । ತನು ಸೂಕ್ಷ್ಮಗಳನು
ಅನಿರುದ್ಧನು ನಿ । ರ್ಮಾಣವ ಮಾಡಿದ ೧೮

ಈ ಪರಿ ಬಹು ಲಿಂ । ಗೋಪ ಚಯಿವಗ್ಯೆ
ದಾಪರ ಬೊಮ್ಮನು । ಸ್ಥಾಪಿಸಿದನು ಜಗ ೧೯

ಪದುಮ ಕಲ್ಪ ಮುನ್ । ಉದುಭವಿಸಿತು ಮತ್
ತದನನು ಸಿತವರ । ಹದ ಕಲ್ಪೋದಯ ೨೦

ಸರಸಿಜ ಭವನಿಂ । ವಿರಚಿಸಿದನು ಜಗ
ವ್ಯೆಡೇಳ್ಭುವನವು । ಭರಿತವು ಜೀವರಿಂ ೨೧

ಈ ವಿಚಿತ್ರ ಸ । ರ್ಗಾವವ ತಿಳಿಯಲು
ಸೇವಿಸುವುದು ಸತ್ । ಕೋವಿದ ಜನಪದ ೨೨

ಪಾವಮಾನಿ ನಿಜ । ಭಾವಕೆ ಸರಿಯಾಹ
ಸೇವೆಗೊಲಿದ ಗುರು । ಗೋವಿಂದ ವಿಠ್ಠಲ ೨೩

೨೮

ಏನು ಕರುಣವೊ ಸ್ವಾಮಿ । ಧೇನುಕ್ಷನನಾ ಪ

ಮಾನ ನಿಧಿ ತೈಜಸನೆ । ಕಾಣಿಸಿದೆ ಪುಷ್ಕರವಾ ಅ.ಪ.

ಉಜಯಿನಿಯ ಮುಂಧೋಗಿ । ಅಜಮೀರ ಸೇರದಲೆ
ಬಿಜಯಿಸುತ ನರ್ಮದೆನೆ । ಮಜ್ಜನವ ಗೈದು ।
ನಿಜ ಮನದಿ ಮಾಧವ । ತ್ರಿವೇಣಿಯನೆ ಮೀಯುತ್ತ
ಅಜ ಜನಕ ಶ್ರೀವ್ಯಾಸ । ಕಾಶಿ ನೋಡಿದೆವೋ ೧

ಗಯ ಗದಾಧರನೊಲಿಸಿ । ಪ್ರಿಯ ಬಂದು ಮಿತ್ರರಿಂ
ವ್ರಯ ಗೈದು ದ್ರವ್ಯವನು । ಅಗ್ರದಲಿ ನೆಲೆಸೀ ।
ಪ್ರಿಯ ಮಧುರ ವ್ರಜ ಸಾರಿ । ದೆಹಲಿ ಪುರವನು ಸೇರಿ
ಭಯ ರಹಿತ ಕುರುಕ್ಷೇತ್ರ । ಸೇರಿ ಚಿಂತಿಸದೇ ೨

ರೊಕ್ಕ ರೂಪನು ಹರಿಯ । ಅಕ್ಕರವ ಕಾಣದಲೆ
ಪುಷ್ಕರೊರ್ವಿಜಿತ ಮನದಿ । ಚಕ್ರಿಧ್ಯಾನದಿ ಮಲಗಿರೇ ।
ಚೊಕ್ಕ ತೈಜಸನನ್ನ । ಚಿಕ್ಕ ಲಿಂಗವು ಸ್ತಂಭ
ಪುಷ್ಕರದಿ ಪೂಜಿಸುತ । ಸ್ನಾನ ಸೂಚಿಸಿದೇ ೩

ಕೌರವರು ಪಾಂಡವರು । ವೀರರಾದಾಚಾರ್ಯ
ಘೋರ ಸಂಗರ ಬಯಸಿ । ಸಾರಿ ಈ ಕುರುಕ್ಷೇತ್ರವಾ
ಭಾರಿ ಕಾಳಗ ಗೈದು । ವೀರ ಸ್ವರ್ಗವ ಸೇರ್ದೆ
ಸ್ಮಾರಕಗಳಂ ತೋರ್ದೆ । ಶ್ರೀರಮಾಪತಿಯೇ ೪

ಸೂರ್ಯ ಕುಂಡದಿ ಪಿತರ । ಕಾರ್ಯಗಳ ನಿರ್ವಹಿಸಿ
ಆರ್ಯರುಕ್ತಿಯಗೊಂಡು । ಕಾರ್ಯ ಮುಂಬರಿಸೇ ।
ಪ್ರೇರ್ಯ ಪ್ರೇರಕ ಗುರು । ಗೋವಿಂದ ವಿಠ್ಠಲನ
ವೀರ್ಯಗಳ ಸ್ತುತಿಸಿ ಮನ । ಸ್ಥೈರ್ಯ ಸಾಧಿಸಿದೇ ೫

೨೯

ಏನೆಂದು ಕೊಂಡಾಡಿ ಸುತ್ತಿಸೆಲೊ ನಿನ್ನಾ ಪ

ದಾನವಾಂತಕ ಕೃಷ್ಣ ಆನಂದ ಗುಣ ಪೂರ್ಣ ಅ.ಪ.

ಮತ್ಸರೂಪಿಯೆ ನಿನ್ನ ಉತ್ಸಹದಿ ಕರೆಯಲಾ
ಕುತ್ಸಿತನ ಸೊಲ್ಲ ನೀನೆತ್ತ ಕೇಳುವಿಯೋ ।
ಮತ್ಸ್ಯಕೇತನ ಜನಕ । ಮತ್ಸರವ ಕಳೆಯಯ್ಯ
ಸಚ್ಚಿದಾನಂದಾತ್ಮ । ಚಿತ್ಸುಖಪದನೇ ೧

ಕೂರ್ಮರೂಪಿಯೆಂದು । ಪೇರ್ಮೆಯಲಿ ಕರೆಯಲಾ
ಭರ್ಮ ಗರ್ಭನ ಪಿತನೆ । ಗಿರಿಯ ಧರಿಸಿರುವೇ ।
ನಿರ್ಮಲಾತ್ಮಕನೆ ಯೆನಗೆ । ನಿರ್ಮಮತೆ ನೀಡಯ್ಯಾ
ಊರ್ಮಿಳಾಪತಿ ಭ್ರಾತೃ । ಪರಮ ಮಂಗಳನೇ ೨

ವರಹ ರೂಪಿಯೆ ನಿನ್ನ । ಕರೆಯುವುದು ಹೇಗಯ್ಯಾ
ಕೋರೆ ದಾಡಿಯ ಮೇಲೆ । ಧರೆಯೆ ಧರಿಸಿರುವೇ ।
ವಾರೆ ನೋಟದಿ ಯೆನ್ನ । ಪರಿಕಿಸೀ ಪೊರೆಯಯ್ಯಾ
ಧೀರ ಭೂವರಹ ವರ । ಧರಣಿ ಪರಿಪಾಲಾ ೩

ನಾರಸಿಂಹನೆ ನಾನು । ಕರೆಯಲಾಪನೆ ನಿನ್ನ
ಘೋರರೂಪವ ನೋಡಿ । ದೂರ ಸಾರುವರೋ
ವಾರಿಜಾಕ್ಷಿಯು ಬಂದು । ಘೋರ ಪ್ರಹ್ಲಾದನ್ನ
ಚಾರು ತವ ಚರಣದಲಿ । ಇರಿಸಬೇಕಾಯ್ತು ೪

ವಾಮನನೆ ಬಾರೋ ದಧಿ । ವಾಮನನೆ ಬಾರೆಂದು
ಸಾಮಸನ್ನುತ ನಿನ್ನ । ನಾಮಗಳ ನೆನೆಯೆಲಾ ।
ಭೂಮಿ ಬೇಡುವ ನೆವದಿ । ಬಲಿಯ ಭೂಮಿಗೆ ತುಳಿದೆ
ಸೀಮೆ ಮೀರಿದ ಮಹಿಮ । ಮರ್ಮವಿನ್ನೆಷ್ಟೋ । ೫

ಪರಶುರಾಮನೆ ನಿನ್ನ । ಕರೆಯಲಾರೆನು ನಾನು
ದುರುಳ ಕ್ಷತ್ರಿಯರ । ಶಿರಗಳನೆ ತರಿದೂ ।
ಭಾರಿ ಪರಶುವಿನಿಂದ । ವರಮಾತೆ ಶಿರ ತರಿದಿ
ಸರಿ ಕಾಣೋ ಇದು ನಿನಗೆ । ಪರಮ ಪಾವನ್ನಾ ೬

ರಾಮ ರೂಪಿಯೆ ನಿನ್ನ । ಆ ಮಹಾ ಮಹಿಮೆಗಳ
ಸೀಮೆಗಾಣಳು ಲಕುಮಿ । ಪಾಮರನಿಗಳವೇ ।
ಆ ಮರಾ ಈ ಮರಾನೆಂದ ಆ । ಪಾಮರನ ಪೊರೆದು
ಆ ಮಹಾತ್ಮನ ಗೈದ । ಪರಿಯೆನ್ನ ಮಾಡೋ ೭

ಕೃಷ್ಣ ಕೃಷ್ಣಾ ಎಂದು ಕರೆಯುವೆನೆ ನಾ ನಿನ್ನ
ಕಷ್ಟದೊಳು ಸಿಲುಕಿರುವೆ । ಗಿರಿಯನ್ನೆ ಪೊತ್ತು ।
ವೃಷ್ಣಿಕುಲ ಸಂಪನ್ನ । ಕೃಷ್ಣ ಮೂರುತಿ ನೀನು
ಇಷ್ಟ ಭಕುತರ ಮನೋ । ಭೀಷ್ಟ ಸಲಿಸುವಿಯಾ ೮

ಬುದ್ಧ ದೇವನೆ ಎನಗೆ ಸ । ದ್ಬುದ್ಧಿ ಕೊಡು ಎಂದು
ಬುದ್ಧಿ ಪೂರ್ವಕವಾಗಿ ನಿನ್ನ ಕರೆಯಲಾ ।
ಬುದ್ಧಿಯಿಂದಲಿ ನೀ । ಭೋಧಿಸಿದೆ ದುಶ್ಶಾಸ್ತ್ರ
ಬೌದ್ಧ ನಿನ್ನನು ಪೊದ್ದು । ಬುಧರ ಪಾಡೇನೊ ೯

ಕಲ್ಕಿ ಕಲ್ಕೀ ಎಂದೇ ಕರೆಯಲಾಪೆನೆ ದೇವಾ
ಶುಲ್ಕ ಮೇಲಾಗಿಹುದು ಕಲಿಯುಗದೊಳು ।
ಉಲ್ಕ ಮುಖ ಮೊದಲಾದ । ಕಲ್ಕಿರಾಜರು ನಿನ್ನ
ಕಲ್ಕಾತ್ಮ ಸತ್ಯ ತವ । ವ್ರತವ ಮಾಳ್ಪರು ಬಿಡದೆ ೧೦

ಸರ್ವರೂಪಾತ್ಮಕನೆ । ಸರ್ವ ವ್ಯಾಪಕ ಸ್ವಾಮಿ
ಸರ್ವಜಿತು ಸರ್ವಾತ್ಮ ಸರ್ವೇಶನೇ ।
ಶರ್ವಾರಿ ವಂದ್ಯ ಗುರು । ಗೋವಿಂದ ವಿಠಲನೇ
ಗುರು ಹೃದಂಬರದಲ್ಲಿ । ತೋರಿ ಪೊರೆಯನ್ನ ೧೧

೩೦

ಏಳು ನಾರಾಯಣನೆ – ಏಳು ವಾಸುದೇವ
ಏಳು ಕೃಷ್ಣಾಚ್ಯುತನೆ _ ಏಳು ಹೇ ಮಾಧವಾ ಪ

ಏಳು ವೈಕುಂಠನೇ – ಏಳು ಕಾರುಣ್ಯನೇ
ಏಳು ಲಕ್ಷ್ಮೀಶನೇ – ಏಳು ಭಗವಂತ ನಮಿಪೇ ೧

ಏಳು ಮಧ್ವೇಶನೇ _ ಏಳು ಪ್ರಾಣೇಶನೇ
ಏಳು ರುದ್ರೇಶನೇ – ಏಳಾಂಬಿಕೇಶಾ ೨

ಏಳು ಇಂದ್ರೇಶನೇ – ಏಳು ಶಚಿಗೀಶನೇ
ಏಳು ವಿಪ್ರೇಕ ಭ – ಕೇಶನೆ ಗೋಪತೇ ೩

ಏಳು ಶಾಸ್ತ್ರ ಪ್ರಿಯನೆ – ಏಳು ಹೇ ಋತ್ರಿಯನೇ
ಏಳು ಯಜ್ಞ ಪ್ರಿಯನೆ – ಏಳು ಕಾರುಣಿಕ ಮೂರ್ತೇ ೪

ಏಳು ಸಾಮ ಪ್ರಿಯನೆ – ಸರ್ವ ಕಾರಣ ಮೂರ್ತೆ
ಏಳು ವೇದಾರ್ಥ ಪ್ರಿಯ – ಸರ್ವದಾ ಇಹನೇ ೫

ಏಳು ಗದ್ಯ ಪ್ರಿಯನೆ – ಪುರಾಣ ಪುರುಷನೇ
ಏಳು ಸ್ತೋತ್ರ ಪ್ರಿಯನೆ – ಸರ್ವದಾ ವಿಶ್ವಮೂರ್ತಿ ೬

ಏಳು ಗುರು ಹೃದಯನೇ – ಪವನಾಂತರಾತ್ಮನೇ
ಏಳು ಗುರು ಗೋವಿಂದ – ವಿಠಲ ಹಯವದನ ೭

೩೧

ಒಡಲಿಗೊಡೆಯನೆ । ಬೇಡಿಕೊಂಬೇ
ಮಡದಿ ಮಕ್ಕಳ ಮೋಹ । ನೀನಾಗಿ ಬಿಡಿಸೋ ಪ

ಚತ್ವಾರಿಂಶತ್ ಸಪ್ತ । ವರುಷ ಸಂದವು ಇಂದು
ಚತುರಾಸ್ಯ ಪಿತ ನೀನೆ । ಸಲಹೋ ಎನ್ನ
ಚತುರ ಮೂರ್ತ್ಯಾತ್ಮಕನು । ಹರಿ ನಿನ್ನ ನೆನೆಯದಲೆ
ಚತುರ ನಾರಿಯ ರೂಪ । ನೆನೆಸುತ್ತಲಿರುವೇ ೧

ತತುವಾಭಿಮಾನಿ ದೇ । ವತೆಗಳೆಲ್ಲರು ಎನಗೆ
ಮತಿ ಭ್ರಾಂತಿ ಬಡಿಸುವರೊ । ಹೃಷಿಕೇಶನೇ ।
ವಿತತ ಮೂರುತಿ ನಿನ್ನ । ಸತತ ನೆನಸೂವಂಥ
ಮತಿಯನಿತ್ತಾದರಿಸೊ । ಕೃತಿರಮಣ ದೇವ ೨

ಹೃದಯಾಬ್ದ ಸದನ ಗುರು । ಗೋವಿಂದ ವಿಠಲಯ್ಯ
ಮುದದಿಂದ ನೀ ಪೊಳೆಯೊ । ನೇಕ ತಟಿತ್ಕಾಂತಿ ।
ಬದಿಗ ನೀನಾಗಿರಲು । ಭೀತಿ ಏತರದಯ್ಯ
ಸದಮಲ ಶ್ರೀರಂಗ । ಮಾಡು ಭವ ಭಂಗ ೩

೩೨

ಒದಗಿ ಪಾಲಿಸೊ ಸಿರಿ ಹರಿಯೇ । ಎನ್ನ ದೊರೆಯೇ ಪ

ಎದುರಾಳಿ ಜನ ಬಂದು । ಹದನ ಗೆಡಲು ಮನ
ಬದಿಗ ನಾಗಿಹ ನಿನ್ನ । ಹುದುಗಿಸುತಿಹರಯ್ಯ ಅ.ಪ.

ಎನ್ನ ಕಂಗಳು ನಿನ್ನಯ । ರೂಪಂಗಳ
ಚೆನ್ನಾಗಿ ನೋಡದಲೆ । ವಿಷಯಾನ್ಯವ ।

ನನ್ನೆಯಿಂದಲಿ ನೋಡಿ । ಧನ್ಯರಾದೆವು ಎಂದು
ಮನ್ನಿಸುತಿಹವಯ್ಯ । ಘನ್ನ ಗೋಪಾಲನೆ ೧

ಕರ್ಣಗಳ್ಹದನ ಕೇಳೋ । ಶ್ರೀಹರಿ ನಿನ್ನ
ಗುಣಗಳ ಕೇಳದಲೇ । ಯುವತೀಯರ ॥
ತನುಗಳೊರ್ಣನೆ ಕೇಳಿ । ಕ್ಷಣ ಕ್ಷಣಕಾನಂದ
ಸೊನೆಯಿಂದ ತೊಯ್ದಂತೆ । ಎಣಿಸುತಿಹವು ಅಯ್ಯ ೨

ಪ್ರಾಣ ಛಾದಿಯ ಪೇಳ್ವೆನೊ । ನೀ ಮುಡಿಧೂವಾ
ಘ್ರಾಣಿಸದೆಲೆ ಕನ್ಯೇರು । ಮುಡಿದಿಹ ಪುಷ್ಪ ।
ಘ್ರಾಣಿಸುತ್ತಲಿ ಬಹು । ಆನಂದ ಪಡುತಲಿ
ನಾನಾ ಜನ್ಮದಿ ದುಷ್ಟ । ಯೋನಿಗೆ ತರುವೋದು ೩

ವದನದ ಪರಿಯ ಕೇಳೊ । ನಿನ್ನಯ ಗುಣ
ಮುದದಲಿ ವರ್ಣಿಸದೆ । ಧನಿಕರ ಸ್ತುತೀ ॥
ವದಗಿ ಪೇಳುತ ಮುಂದೆ । ಉದರ ಕೋಸುಕವಾಗಿ
ವಿಧಿಯ ಮಾರುತ ದುಷ್ಟ । ಸಾಧನವಾಯ್ತಯ್ಯ ೪

ಸ್ಪರಿಶೇಂದ್ರಿಯರ ಸಾಧನ । ಕೇಳೆಲೊ ಹರಿ
ಹರಿಭಕ್ತರಾಲಿಂಗನ । ಮಾಡದಲಿದ್ದು
ಪರಸ್ತ್ರೀಯ ಸ್ಪರಿಶಕ್ಕೆ । ಹರಿಯುವಂತಿಹುದನ್ನ
ಪರಿಹಾರ ಗೈ ಗುರು । ಗೋವಿಂದ ವಿಠಲಯ್ಯ ೫

೩೩

ಶ್ರೀ ದೇವರ ಸ್ತೋತ್ರ

ಓಡೋಡಿ ಬಾರೋ ಶ್ರೀ ಹರಿಯೇ । ಯನ್ನಯ ದೊರೆಯೇ ಪ

ಕಾಡುವ ರೋಗವ ನೋಡಿಸೆ ಬಾರೋ
ಜೋಡು ಕುಂಡಲ ಧಾರಿ ಹರಿಯೆ ಮುರಾರಿ ಅ.ಪ.

ಮಾಡಿದ ಅಪರಾಧ ಅನಂತ । ಹೇ ಮಹಾಂತ
ಜೋಡಿಸಿ ಕರ ಮುಗಿವೆ ಕ್ಷಮೆ ಕಾಂತ । ಕಳೆವುದು ಧ್ವಾಂತ ॥
ನಾಡೊಳಗಾದಡೆ ನೋಡಲು ನಿನಗೇ
ಈಡು ಕಾಣೆನೊ ಬಲು ಗೂಢ ಮಹಿಮ ಹರಿ ೧

ಕರ ಕರ್ಮ ಚಿತ್ತಕ್ಕು ರಸನ । ಕಾಯವು ಮನ್ಮನ
ಕರಣಾಹಂಕಾರವು ಘ್ರಾಣ । ಬುದ್ಧಿಯು ನಯನಾ ॥
ಕರಣ ಸರ್ವೋದ್ಭವ ಉರುತರ ಪಾಪವ
ಪರಿಹರಿಸುತ ಪೊರೆ ತ್ವರಿತದಿ ಮಾಧವ ೨

ಕರುಣಾಕರ ಹರಿಯೆ ಮಾಲೋಲ । ಪರಿಪಾಲಿಸು ಕೋಲ
ಎರಡೇಳು ಲೋಕಗಳ್ಪಾಲಾ । ಬಹು ಪರಿ ಲೀಲಾ ॥
ಗುರು ಗೋವಿಂದನ । ಚರಣ ಪಂಕಜ ತೋರಿ
ಪರಿಹರಿಪುದು ಭವ । ಪರಮ ದಯಾನಿಧೆ ೩

೩೪

ಕಂಜ ನಿಲಯ ವಾಸಾ । ಹೃತ್
ಕಂಜ ನಿಲಯ ವಾಸಾ । ಜಯ ।
ಶ್ರೀ ಬಿಂಬ ಪ್ರಾಜ್ಞಾದಿ ರೂಪಿ । ಬಹುರೂಪಿ ಪ

ಕುಂಜಜ । ಜನಕದೇವ । ವೃಂದಾದಿಯ ।
ತಾರಕರೂಪ ಶ್ರೀಕುಮುದಾಪ್ತ ಕುಲಜ ॥
ಭೋಸುವ್ಯಾಪ್ತ ಮಹಂತ ಅಚಿಂತ್ಯ ।
ಮಹಿಮೋಪೇತ । ಸದಾಪ್ತ ಅ.ಪ.

ಮಂಗಳಾಂಗ । ಜಲಜಧರ ತ್ರಿ । ಧಾಮಾ । ಪದ
ಭೃಂಗನು ಎನೆ । ಗಂಗಾಧರ । ಭೀಮಾ – ಭಿಧ
ಸಂಗತಿಗನ । ಕಾಮಾ ಹರ ನಿ । ಸ್ಸೀಮಾ ।

ಗಾಂಗೇಯನ । ತೋಷಕ ವರ । ವೇಷಾ ಶೇ–
ಷಾಂಗಶಯನ । ಶರಣ ಸಂ । ತೋಷಾ । ವೇ–
ದಾಂಗ ವೇದ್ಯ । ಭಯ ನಿವಾರಣ । ಕೃಪೆ ಭೂಷಾ । ಅ–
ಪಾಂಗ ನೀ । ಕ್ಷಣದಿ ಸೃಷ್ಟಿಪೆ । ವಿಶೇಷಾ । ಶ್ರೀ
ದ್ರುತ _ ಅಂಗಜ ಪಿತನೆ ಗೋವಿಂದ ।
ಮಂಗಳ ಮಹಿಮ ಮುಕುಂದ ।
ಭಂಗೀಸುವ ಭವ ಭಂಗಿಸು ।
ಗುರು ಗೋವಿಂದ ವಿಠಲನೆ ೧

೩೫

ಕಂಡೆ ಕಂಡೆನು ಕೃಷ್ಣ ನಿನ್ನಯ ।
ಭವ್ಯ ಭಾವದ ಮೂರ್ತಿಯ ಪ

ಪುಂಡರೀಕ ದಳಾಯತಾಕ್ಷನ ।
ಹಿಂಡು ದೈವರ ಗಂಡನ ಅ.ಪ.

ಬಲಿಯ ಮೆಟ್ಟಿದ ಪಾದ ಶೋಭಿಸೆ ।
ಘುಲು ಘುಲೆನ್ನುವ ಪೈಜಣ ।
ಉಲಿವ ಗೆಜ್ಜೆಯಲಿಂದ ಮೆರೆಯುವ ।
ಚಲುವ ಕೃಷ್ಣನ ಸೊಂಟವ ೧

ಲಕ್ಷ್ಮೀ ವಕ್ಷಸ್ಥಿತನು ಎನಿಪನ ।
ಅಕ್ಷಯಾಂಬರವಿತ್ತನ ।
ಕುಕ್ಷಿಯೊಳು ಜಗ ಧರಿಸಿ ಮೆರೆವನ ।
ಪಕ್ಷಿವಾಹನ ದೇವನ ೨

ವೃಷ್ಣಿಕುಲ ಸಂಭೂತನೆನಿಪನ ।
ಜಿಷ್ಣುವಿಗೆ ಸಖನೆನಿಪನ ।
ವಿಷ್ಣು ಮೂರುತಿ ವಿಷ್ಟರ ಶ್ರವ ।
ಕೃಷ್ಣನ ಮಹಮಹಿಮನ ೩

ಕೊರಳ ಕೌಸ್ತುಭ ಹಾರ ಶೋಭಿತ ।
ಸರಸಿ ಜಾಸನಧಿಷ್ಟಿತ ॥
ಮೆರೆವ ತ್ರಿವಳಿಯ ಕಂಠ ಶೋಭಿತ ।
ಸರ್ವ ವೇದಗಳುಧೃತ ೪

ತೋಳ ಬಾಪುಕಿ ಬಾಹು ಕೀರ್ತಿಯ ।
ಕೈಲಿ ಕಡಗೋಲ್ಬಲದಲಿ ।
ಮೇಲೆ ರಜ್ಜುವ ತಾನೆ ಪಿಡಿದಿಹ ।
ಕೈಲಿ ವಾಮದ ಪಾರ್ಶ್ವದಿ ೫

ಕರದಿ ಕಂಕಣ ರತ್ನ ಖಚಿತವು ।
ಹರಳು ವಜ್ರದ ಉಂಗುರ
ಬೆರಳೊಳಿಟ್ಟಹ ದೇವ ಮಹಿಮೆಯ ।
ಸುರರು ಬಲು ಪರಿ ತುತಿಪುದ ೬

ಫಣೆಯಲೊಪ್ಪುವ ತಿಲಕ ವಿಧೃತ ।
ಕರ್ಣ ಕುಂಡಲ ಭೂಷಿತ ।
ಮಣಿಯು ಮೌಕ್ತಿಕ ಮುಕುಟ ರಂಜಿತ ।
ಫಣಿ ವಿಭೂಷಣ ಸೇವಿತ ೭

ಭುವನ ಮೋಹನ ದೇವ ದೇವನ ।
ಪವನನಯ್ಯನು ಎನಿಪನ ।
ಮಧ್ವ ಸರಸಿಯ ತಟದಿ ಮೆರೆವನ ।
ಮಧ್ವಮುನಿ ಸ್ತುತಿಗೊಲಿದನ ೮

ಅಷ್ಟ ಮಠಗಳ ಯತಿಗಳಿಂದಲಿ ।
ಸುಷ್ಟು ಪೂಜಿತ ಚರಣನ
ದಿಟ್ಟ ಗುರು ಗೋವಿಂದ ವಿಠಲನ ।
ಸೃಷ್ಟಿ ಸ್ಥಿತಿ ಲಯ ಕರ್ತನ ೯

೩೬

ಕಣ್ಮನಕೆ ಆನಂದ ಇಂದಿನದಿ ಕೇಳೀ ।
ಮನ್ಮನೋರಥ ಮುಂದೆ । ಪೋಗಿ ಸೇರಿಹುದು ಪ

ಮಧ್ವ ಸರಸಿಯ ತಟದಿ । ಮಧ್ವಮುನಿ ಸದ್ವಂದ್ಯ
ಮಧ್ವೇಶ ಶಿರಿ ಕೃಷ್ಣ । ನರ್ಚಿಸುತ ನಿತ್ಯ
ಮಧ್ವಮತ ಸಾಮ್ರಾಜ್ಯ । ಪೀಠದಲಿ ಭೂಷಿತರು
ವಿಶ್ವೇಶ ತೀರ್ಥರಿಗೆ । ವಂದಿಪೆನು ಸತತ ೧

ಮಧ್ವ ಸಿದ್ಧಾಂತಗಳ । ಉತ್ಕರ್ಷ ಭೋದಿಸುತ
ವಿದ್ವಜ್ಜನಾರಾಧ್ಯ । ಪಾಠಶಾಲಾ
ವರ್ಧಂತಿ ಹತ್ತಾರು । ನಾಲ್ಕೊರ್ಷ ಉತ್ಸವದಿ
ಅಧ್ಯಕ್ಷ ವಿಶ್ವೇಶ । ತೀರ್ಥರನುಗ್ರಹಿಸೇ ೨

ಅನಂತೇಶ ಸನ್ನಿಧಿಲಿ । ಅನುಮಾನ ತೀರ್ಥರಿಂ
ದಾನಂತ ಸತ್ ಜ್ಞಾನ । ರಶ್ಮಿ ಸೂಸುತಲೀ ।
ಜ್ಞಾನ ಕಾರ್ಯವು ಗುರು । ಗೋವಿಂದ ವಿಠಲನ
ಪ್ರೀಣನಕೆ ಜರುಗಿಹುದ । ನೋಡವನೆ ಧನ್ಯ ೩

೩೭

ಕರಿಗಿರಿ ದುರ್ಗ ನಿವಾಸಾ । ದಯಾ
ಪರಿಪೂರ್ಣ ಪೊರೆಯನ್ನ ಅನಿಶ ಪ

ಶಿರಿ ಅಜಭವ ವಿಪಗೇಶಾ । ಹೃತ್
ಸರಸಿಜ ವಾಸ ಲಕ್ಷ್ಮೀಶಾ ಅ.ಪ.

ಕುಸುಮಾಪ್ತಯ ಯಶ ಕುಧರವೆ ಸದನ
ಅಸಮ ತವ ಯಶ ವಿಸರಣಾಜ ಯಜನ
ಋಷಿ ಶಾಪಕೆ ಗಜ ಅಸುವ ಧರಿಸಿದವನ

ದಶರಥಸುತ ದಯ ರಸದಿ ಗಂಧರ್ವನ
ವಸುಧೆಯೊಳುದ್ಧರ ಗೈಸಿ ಪೊರೆದೆ ತವ
ಯಶವನರಿಯ ಸುವಿಶಾಲ ಹೃದಯರನ
ನುಸರಿಸಿ ತಿಳಿದ ಪದ ಬಿಸಜ ಕಿಂಜಲ್ಕದ
ಯಸಳು ರಜವ ಶಿರಸಿಯೊಳಗೆ ನೀನಿರಿಸೋ ೧

ಮೇಶ ಬ್ರಹ್ಮೇಶ ನಾಶವ ಗೈವೆ ಸಶೇಷ
ಶೇಷಶಯ್ಯ ಜೀವಾದ್ಯರ ಪೋಷಾ
ಈ ಸಮಸ್ತ ಜಗ ನಿನ್ನುದರದಿ ವಾಸಾ
ಕೇಶಾಸುರಪಾದೀಶ ಪರೇಶನೆ ವ್ಯಾಸಾ
ಈಶಿತವ್ಯ ತವ ದಾಸರಿಗೆಲ್ಲ ಉಪ
ದೇಶಿಸು ಶಾಸ್ತ್ರ ವಿಶೇಷ ರಹಸ್ಯ ಮಹಿ
ದಾಸ ಕುಶೇಶಯ ವಿಷಯ ವಿಲಾಸದಿ
ಪೋಷಿಸು ಮನ ಮಧ್ವೇಶ ಮಹಾಪ್ರಭೋ ೨

ಕರಿವರ ವರ ಶರಣಾಗತ ಪಾಲಾ
ತರಳೆಗಿತ್ತೆ ನವ ನವ ಸೀರೆಯ ಜಾಲಾ
ವರಸ್ತಂಭೋದಿತ ಹರಿಭಕ್ತಿ ಸುಪಾಲಾ
ಗುರು ಗೋವಿಂದ ವಿಠ್ಠಲಾ ಕಾಲಾ
ಸುರಪಾದಿಯ ತನು ವರ ರಥ ರೂಢ ಪು–
ರಾರಿ ಭಯಹರ ಮುರಾರಿ ಮಹ ಭವ
ತರಿ ಎನಿಸಿಹ ಸುಖ ತೀರಥ ಸನ್ನುತ
ಧರಿಸಿಹೆ ಕಣ್ಣೆದುರಿಲಿ ನೀ ಕುಣಿಯೋ ೩

೩೮

ಕರಿವರದಾ ಪಾಲಿಸೋ । ಪಾಲಿಸೋ
ಶರಣಾಗತ ಪರಿ ಪೋಷಕ ತ್ವಂ ಪ

ಮಾ ಕಮಲಾಸ ದಿವೌಕಸ ಪ್ರೇರಕ
ಏಕಮೇವ ಜಗದಾಧಾರಕಾ ೧

ತುಂದಿ ಚತುರದಳ ಮಂದಿರ ಶೋಭಿತ
ಮಂದಹಾಸ ಅನಿರುದ್ಧ ಮುಕುಂದಾ ೨

ನಾಭಿ ಪದ್ಮ ಸುನಿಕೇತನ ಪ್ರದ್ಯು
ಮ್ನಾಭಿಧ ಷಣ್ಮಹಿಷಿಯರರಸಾ ೩

ಅಷ್ಠ ದಳಗಳಲಿ ವಸುದಿಕ್ಷತಗಳ
ಅಷ್ಟ ನಿಯಂತ ಸಂಕರುಷಣನೇ ೪

ಎರಡು ದಶವು ದಳ ಸರಸಿವಾಸನೆ
ಎರಡಾರರ್ಕರ ನಿಯಾಮಕ ಹರಿಯೆ ೫

ಎರಡೆಂಟರ ದಳ ಇಂದ್ರ ಯೋನಿಯಲಿ
ಉರಗೇಶಣ ನಾರಾಯಣನೇ ೬

ಮಧು ಸುಮವರ್ಣದ ದ್ವಿದಳ ಸುಪದುಮದಿ
ವಿಧಿವಾಯು ಪೂಜಿತ ಖಗ ವಾಹನನೇ ೭

ಪದುಮ ಸಾಸಿರ ದಳ ವಸನೆ ಈಶಾ
ಪದುಮಜ ಪೋಷಕ ವಾಸುದೇವಾ ೮

ಸಮುತ ಚಕ್ರದಲಿ ವ್ಯಾಪಿಸಿ ಪೊರೆಯುವ
ಖಪತಿಗಮನ ಗುರು ಗೋವಿಂದ ವಿಠಲಾ ೯

೩೯

ಕರುಣದಿ ಕಾಯೊ ಗೋಪಾಲಾ
ಚರಣವ ಸ್ಮರಿಸುವೆ ಶರಣರ ಪಾಲಾ ಪ

ಹರಣ ಹೋಗದ ಮುನ್ನ । ಹರಿ ನಿನ್ನ ಹಂಬಲನ್ನ
ಕರುಣಿಸಿ ಕಾವುದೆನ್ನ । ಕರುಣ ನಿಧಿಯೆ ಘನ್ನ
ಮೊರೆಯಿಡುವೆನು ನಿನ್ನ । ಚರಣ ಸರೋಜವನ್ನ
ಶಿರದೊಳಗಿರಿಸೆನ್ನ । ಪರಮ ಪಾವನ್ನ ೧

ಮರುತನ ಮತದಲ್ಲಿ । ಕರೆ ತಂದು ಎನ್ನನು
ತರತಮ ಜ್ಞಾನವ । ಅರುಹುವುದೊಳಿತಲ್ಲೆ ।
ಹರಿಯೆ ಸರ್ವೋತ್ತಮ । ಮರುತ ಜೀವೋತ್ತಮ
ಹರ ವೈಷ್ಣವೋತ್ತಮ । ವರ ಜ್ಞಾನ ಪಾಲಿಸಿ ೨

ಪನ್ನಗಾಚಲವಾಸ । ಪ್ರಸನ್ನರಘನಾಶ
ನಿನ್ನ ನಾಮವ ಅನಿಶ । ಎನ್ನಿಂದ ನುಡಿಸೀಶ ।
ಅನ್ನಂತ ಗುಣ ಗುರು । ಗೋವಿಂದ ವಿಠಲನೆ
ಎನ್ನ ಬಿನ್ನಪ ಸಲಿಸು । ಮನ್ನಿಸಿ ಕುಂದುಗಳ ೩

೪೦

ಕರುಣಿಸುವುದೆನಗಿನಿತು । ಕಮಲ ನಯನ ।
ಬರಿದೆ ಬಳಲಿಸಬೇಡ । ಮರುತ ಪ್ರಿಯ ದೇವ ಪ

ಧನಕನಕ ವಸ್ತ್ರಗಳ । ಮಣಿ ಭೂಷಣಾದಿಗಳು
ಇನಿತು ಯೇನೇನುಂಟೊ । ವನಜ ಜಾಂಡದಲೀ
ಎಣಿಸಿಹೆನೊ ನಶ್ವರವು । ಎನಿತೆಂದು ಶ್ರೀಹರಿಯೆ
ಘನ ಜ್ಞಾನ ಕೊಡು ಎಂದು । ಮಣಿದು ಬೇಡುವೆನೋ ೧

ವಸ್ತು ನಿನ್ನದು ಎನಿಪ । ಸತಿಯನೆ ಕೊಂಡ್ವೈದೆ
ಮತ್ತೆ ಸುತ ಪರಿವಾರ । ವಿಸ್ತರ ಪ್ರವಿಷ್ಟಾ ।
ಹೊತ್ತು ಹೊತ್ತಿಗೆ ನೀನು । ತುತ್ತನುಣಿಸುತ ಕಾಯ್ವೆ
ವಿತ್ತಪನ ಸಖನೆನಿಪ । ಕೃತ್ತಿ ವಾಸನ ತಾತ ೨

ಶಿಷ್ಟ ಜನ ಪರಿಪಾಲ । ಎಷ್ಟೊ ನಿನ್ನದು ಕರುಣ
ವಿಷ್ಟರ ಶ್ರವ ನಿನ್ನ । ಸುಷ್ಟು ಭಕ್ತಿಯ ನೀಯೋ ।
ದುಷ್ಟ ನಿಗ್ರಹ ಶೀಲ । ಅಷ್ಟ ಮಹಿಷೆರ ಲೋಲ
ದಿಟ್ಟ ಗುರು ಗೋವಿಂದ । ವಿಠಲ ಭವ ನೀಗೋ ೩

೪೧

ಕರುಣಿಸುವುದೆನಗಿತು । ಕರಿವರದ ಕೃಷ್ಣಾ ।
ನಿರುತ ನಿನ್ನಯ ಸ್ಮರಣೆ । ವೆರಕವಾಗಲಿ ಮನಕೆ ಪ

ಪರಸತಿಯರೊಲಿಮೆಗೇ ।ಎರಗುವೀ ಮನವನ್ನು
ಬರ ಸೆಳೆದು ನಿನ್ನಂಘ್ರಿ । ಸರಸಿಜದೊಳಿರಿಸೋ ।
ಶರಣ ವತ್ಸಲನೆಂಬೊ । ಬಿರಿದು ನಿನ್ನದು ಇರಲು
ಬರಿದೇಕೆ ತಡಗೈವೆ । ಮರುತಾಂತರಾತ್ಮಾ ೧

ಮುದಿತನದ ತನುವಿನಲಿ । ಮದಡಾಗಿ ಮೈಮರೆವೆ
ಹೃದಯ ಸದನದಿ ನಿನ್ನ । ಪದವ ನೋಡದಲೇ
ಎದುರಾಳಿ ತತ್ವೇಶ । ರಧಿಕಾರ ತಪ್ಪಿಸುತ
ಪದುಮನಾಭನೆ ನಿನ್ನ । ಪದ ತೋರೊ ಘನ್ನಾ ೨

ಪುಂಡಲೀಕನಿಗೊಲಿದೆ । ಪಾಂಡವರ ಪಾಲಿಸಿದೆ
ಪುಂಡರೀಕಾಕ್ಷ ದೃಹಿ । ಣಾಂಡಗಳ ವಡೆಯಾ ।
ಅಂಡಜಾಧಿಪ ತುರಗ । ಕುಂಡಲಿಯ ಶಯನ ಹೃತ್
ಪುಂಡರೀಕದಿ ತೋರೊ । ಗುರು ಗೋವಿಂದ ವಿಠಲಾ ೩

೪೨

ಮಗಟಖಾನ ಹುಬ್ಬಳ್ಳಿ ಶ್ರೀಯಾದವಾರ್ಯರ
ಕರಾರ್ಚಿತ ಶ್ರೀನರಸಿಂಹ ಸ್ತೋತ್ರ

ಕರುಣವೆಂತುಂಟೋ ನಿನಗೆ । ಶ್ರೀನಾರಸಿಂಹಾ ಪ

ವರತಟನಿ ಮಲಪ್ರಭೆಯ । ತೀರಸ್ಥನೆನಿಸೀ ಅ.ಪ.

ಪೂರ್ವದಲಿ ಋಷಿ ಚ್ಯವನ । ರಿಂದರ್ಚಿತವು ಎನೆ
ಓರ್ವ ಶಿಲೆಯಲಿ ನಿಂದು ಯಾದವಾರ್ಯಾ ।
ಪಾರ್ವ ಯೋಗೀಶ ರಚಿ । ತಾಕಾರ ಗಂಧದಲಿ
ಆಹ್ವಾನಿತನು ಆಗಿ ನೀನಿಲ್ಲಿ ಇರುವೇ ೧

ಆದಿ ವ್ಯಾಧಿಲಿನೊಂದ । ಬುಧರಿಂದ ಬಹುಸೇವ್ಯ
ಯಾದವಾರ್ಯಾಂತಸ್ಥ । ಶ್ರೀ ನಾರಸಿಂಹಾ ।
ಬಧಿರ ಮೂಕರು ತಮ್ಮ । ವ್ಯಾಕುಲವ ಕಳೆಯುತ್ತ
ಮುದವಾಂತು ತವ ಮಹಿತಿ ಕೀರ್ತಿಸುತ್ತಿಹರೋ ೨

ವತ್ಸರವು ಕಾಳ್ಯುಕ್ತಿ । ಮಾಸ ನಿಶಿ ಜೇಷ್ಠದಲಿ
ಮತ್ತೆ ಹರಿದಿನದಲ್ಲಿ । ಮಂದವಾರದಲೀ ।
ಮತ್ಸರಾದ್ವಿರಹಿತರು । ಸತ್ಸುಜನರಿಂದ ಕೂಡಿ
ಉತ್ಸಹದ ಜಾಗರವ । ನೀ ಮಾಡಿ ಮಾಡಿಸಿದ್ಯೊ ೩

ಬೆಟ್ಟದಾಚಾರ್ಯರೆನೆ । ಸುಷ್ಠು ಕೀರ್ತನೆಗೊಂಡ
ಶ್ರೇಷ್ಠ ಹುಚ್ಚಾಚಾರ್ಯ । ರಿಲ್ಲಿ ನೆಲೆಸುತಲೀ
ಇಷ್ಟ ಸಿದ್ಧಿಗಾಗಿ ಶ್ರೇಷ್ಟ । ತಪವನೆ ಗೈದು
ಇಷ್ಟಾರ್ಥ ಪೊಂದಿತಾ । ಬೆಟ್ಟಕ್ಕೆ ತೆರಳಿದರೋ ೪

ಸುಧಾದಿ ಪ್ರವಚಿಸುತ । ಮೋದ ಪಡಿಸುತ ಬುಧರ
ಯಾದವೇಶನ ನೊಲುಮೆ । ಸಂಧಿಸುತ ಮೆರೆದೂ ।
ಆದರಿಸಿ ಮಂಗಳ ಸು । ಭೋದಗಳ ಬೀರುತಲಿ
ಮೋದ ಬಡಿಸಿದ ಹರಿಯ । ಭೂದೇವ ಆರ್ಯ ೫

ಪ್ರೇರ್ಯ ಪ್ರೇರಕರಾಗಿ । ಬೆಳಗಾವ್ಕರು ಎಂಬ
ಪಾರ್ವನಲಿ ನೀ ನಿಂತು । ಅಚ್ಚರಿಯನೆಸಗೀ
ಭಾರ್ಯೆ ತವ ಕೊಲ್ಲಾಪುರ । ಮ್ಮ ಸತ್ಯವ್ರತರ
ಆರ್ಯಗೊಡ ದರ್ಶಿಸುವ । ಯೋಗ ನೀನಿತ್ತೇ ೬

ಸೃಷ್ಟ್ಯಾದಿ ಅಷ್ಟಕವ । ದೃಷ್ಟಿ ಮಾತ್ರದಿಗೈವ
ಇಷ್ಟ ಭಕುತಿಗೆ ಮೆಚ್ಚಿ । ಘಟ್ಟಿ ಕಂಬದಿ ಜಿಗಿದೂ
ದುಷ್ಟನ್ನ ಸಂಹರಿಸಿ । ಕಷ್ಟಗಳ ಕಳೆದಂಥ
ಕೃಷ್ಣ ಗುರು ಗೋವಿಂದ ವಿಠಲಾ ಗಾನಮಿಪೇ ೭

೪೩

ಕಾಮಕೋಟಿ ಸುಂದರಾ । ತಿರುಪತಿಯ
ಸ್ವಾಮಿ ತೀರ್ಥಮಂದಿರಾ ಪ

ಕಾಮಜನಕ ಭಕ್ತಪ್ರೇಮಿ ಭವಾಟವಿ
ಧೂಮಕೇತು ಹೃತ್ । ಧಾಮದಿ ನೆಲಿಸೋ ಅ.ಪ.

ವೃಷಭಾಚಲಾ । ಸನ್ನಿಲಯನೆ
ವೃಷಭಾ – ಬಲಾ ॥
ಒಸೆದು ಪರಿಕಿಸುತ ॥ ಅಸುರನ ಸವರುತ
ಅಸಮಗಿರಿಗೆ ನೀ । ಅಸುರನ ಪೆಸರಿತ್ತೆ ೧

ಅಂಜನಾ – ಚಲಾ । ನಿವಾಸನೆ ಪ್ರ
ಭಂಜನಾ – ಬಲಾ ॥
ಸಂಜೆ ಚರರ ಕುಲ । ಭಂಜನ ಶರದಿಜೆ
ಕಂಜಜಾಕ್ಷಿ ಪ್ರಿಯ । ಅಂಜನಿವರದಾ ೨

ಶೇಷಾ _ ಭೂಧರಾ । ಮನಸಿನ ಬಹು
ಕ್ಲೇಶಾ _ ಅಪಹರ ॥
ಶೇಷದೇವ ಮದ । ಲೇಸು ಹರಿಸಿ ಅವ
ನಾಶೆ ಸಲಿಸಿ ಹರಿ । ಶೇಷಾಚಲನಾದೇ ೩

ವೆಂಕಟಾಚಲಾ । ಮಾಧವನಾ
ಸಂಕಟಾಗಳಾ ॥

ಅಂಕುರಿಸದೆ ನಿ । ಷ್ಪಂಕನೆಂದೆನಿಸಿ
ಕಿಂಕರ ತನಯಳ । ಕಂಕಣ ಕಟ್ಟಿದೆ ೪

ಶ್ರೀವರ – ಭೂವರಾ । ಪೊರೆಯುವೆ ನೀ
ಜೀವರಾ – ಅಂತರಾ ॥
ಜೀವನಾಮಕನಾಗಿ । ಜೀವ ಭಿನ್ನ ಹರಿ
ಕೈವಲ್ಯದ ಗುರು । ಗೋವಿಂದ ವಿಠಲ ೫

೪೪

ಕಾರಣಾತ್ಮಕ ಭಕ್ತವತ್ಸಲ ।
ಪೊರೆವುದೆನ್ನನು ॥ ಕರುಣಾರ್ಣವನೆ ಪ

ಸೃಷ್ಟಿ ಸ್ಥಿತಿ ಲಯ । ಅಷ್ಟಕರ್ತೃ ನಿ ।
ರ್ದುಷ್ಟ ಮಹಿಮ ಸು । ಪ್ರೇಷ್ಟ ಮೂರುತಿ
ವ್ಯಷ್ಟಿರೂಪಿ ಸ । ಮಷ್ಟಿ ತನು ಭವ ।
ಕಷ್ಟ ಕಳೆದು ಸಂ । ತುಷ್ಟಿ ಗೈಸೆನ್ನ ೧

ಪಕ್ಷಿವಾಹನ । ಅಕ್ಷರೇಡ್ಯ ಸು ।
ಪಕ್ಷಪಾತಿಯ । ಲಕ್ಷ್ಮೀವಕ್ಷನೆ ॥
ಇಕ್ಷುಶರ ಪಿತ । ಲಕ್ಷ್ಮಣಾಗ್ರಜ ।
ರಾಕ್ಷಸರ ಬಹು ಶಿಕ್ಷಕ । ಜಗ ರಕ್ಷಕ ೨

ಜೀವರಂತರ । ಭಾವ ಪ್ರೇರಕ । ಓವಿ ತುತಿಪರ ।
ಭಾವಕೊಲಿಯುವನೆ ॥
ನೀವೊಲಿದು ಭವ । ನೋವ ಕಳೆವುದು ।
ಶ್ರೀ ವರನೆ ಗುರು । ಗೋವಿಂದ ವಿಠಲ ೩

೪೫

ಕಾರ್ತ ಸ್ವರೇತ್ಯಾದಿ ವಿತ್ತ ಅಸಾರ್ಥಕತೆಯ ತಿಳಿದು ಪುರು
ಷಾರ್ಥ ಪ್ರದನು ಶ್ರೀ । ಹರಿಯ ಪ್ರಾರ್ಥಿಸೋ ಪ

ಮಡದಿ ಮನೆ ಮಕ್ಕಳೆಲ್ಲ । ಬಿಡದೆ ನಿನ್ನ ಸೇವಿಸೋರು
ಹಿಡಿಯ ತುಂಬ ಹೊನ್ನು ಹಣವು । ಬಿಡದೆ ಬರುತಿರೇ ೧

ಪ್ರಾಣ ಉತ್ತಮಣ ಸಮಯ । ಮಾನಿನೀಯು ರೋದಿಪಾಳು
ಪ್ರಾಣ ಪೋದ ತನುವ ಸೋಕೆ । ತಾನೆ ಒಲ್ಲಳು ೨

ಹಿಂದೆ ಬಪ್ಪುದಲ್ಲ ದ್ರವ್ಯ । ಮುಂದೆ ಗೈದ ಪುಣ್ಯ ಪಾಪ
ಒಂದು ಬಿಡದೆ ಉಣಬೇಕೊ । ಮಂದ ಮಾನವ ೩

ಬಿಂಬ ಚಲಿಸೆ ತಾನು ಪ್ರತಿ । ಬಿಂಬ ಚಲಿಪ ಮತಿಯೆ ನಿಜವು
ಉಂಬು ಕೊಂಬ ಕೊಡುವುದೆಲ್ಲ । ಬಿಂಬದೆನ್ನೆಲೋ ೪

ಇಂದಿರೇಶನರ್ಚಿಸೂತ । ಇಂದೆ ಗಳಿಸೊ ಪುಣ್ಯ ದ್ರವ್ಯ
ನಂದ ಕಂದಗರ್ಪಿಸೋದು । ದ್ವಂದ್ವ ಕರ್ಮವ ೫

ತನುವು ಮನವು ನಿನ್ನದಲ್ಲ । ಗುಣದ ಕಾರ್ಯ ನಿನ್ನದಲ್ಲ
ನಾನು ನನ್ನದೆಂಬ ಮತಿಯು । ಹೀನ ತಿಳಿಯೆಲೋ ೬

ನಿತ್ಯ ಬದ್ಧ ಜೀವಿ ನೀನು । ಸತ್ಯ ಸ್ವಾತಂತ್ರ ಹರಿಯು
ದತ್ತ ಕರ್ತೃತ್ವವಿಹುದು । ಕೃತ್ಯ ಉಂಬಲು ೭

ಹರಿಯ ರೂಪ ಹೃದಯದಲ್ಲಿ । ಪರಿಕಿಸಾದೆ ಗತಿಯು ಇಲ್ಲ
ಕರುಣಿಸಿಹನು ಮನುಜ ದೇಹ । ಹರಿಯ ಕಾಣಲು ೮

ಮಧ್ವ ಮತದಿ ಜನ್ಮವಿರಲ । ಅವಿದ್ಯೆಗಳನ ನೀಗಿಕೊಂಡು
ಮಧ್ವಮುನಿಯ ಕರುಣ ಪಡೆದು । ಸಿದ್ಧನಾಗೆಲೋ ೯

ಭಾವಿ ಮಧ್ವ ಚರಣ ಕಮಲ । ಭಾವದಿಂದ ಪೂಜಿಸಾದೆ
ಸಾವು ಹುಟ್ಟು ತಪ್ಪೊದಿಲ್ಲ । ಕೋವಿದನಾದರು ೧೦

ಅಂಶದಿಂದ ಇರುತ ತಾವು । ಹಂಸ ಮಂತ್ರ ಸರ್ವರಲ್ಲಿ
ವಿಂಶತ್ಯೇಕ ಸಾಸಿರಾವು । ಅಂತೆ ಷಟ್ಶತ ೧೧

ದಿನಕೆ ಇಂತು ಜಪವ ಚರಿಸಿ । ವಿನಯದಿಂದನಿರುದ್ಧನೀಗೆ
ಎಣಿಕೆ ಮಾಡಿ ಅನಿಲ ಸಹಿತ । ತಾನೆ ಅರ್ಪಿಪ ೧೨

ಪರ್ವಕಾಲದಿದನು ತಿಳಿದು । ಶರ್ವ ವಂದ್ಯ ಶೇಷಶಾಯಿ
ಸರ್ವ ಕಾರ್ಯಗಳನು ಲಾ । ತವ್ಯ ಗಿತ್ತಿಹ ೧೩

ದೈತ್ಯ ಜನರು ಅರಿಯದಂತೆ । ಯುಕ್ತನಾಗಿ ಬ್ರಹ್ಮ ವಾಯು
ಆಪ್ತ ವಾಕ್ಯ ಮೀರದಂತೆ । ಗುಪ್ತ ಚರಿಸುವ ೧೪

ತತ್ವಕಿದು ವಿರುದ್ಧವಲ್ಲ । ವ್ಯಕ್ತ ವಿಹುದು ಲೋಕದಲ್ಲಿ
ಮತ್ತೆ ಕ್ಷಣಕೆ ಒಪ್ಪೆನೆಂದು । ಇತ್ತು ಸ್ಥಾನವ ೧೫

ಗೊತ್ತು ಮಾಡಿ ಪೋಗುವಂತೆ । ಭ್ರಾತೃ ವಾದಿರಾಜರೀಗೆ
ಇತ್ತು ಪದವಿಗಳನು ತಾವು । ಸೂಕ್ತ ಪೇಳ್ವರು ೧೬

ಭಾವಿ ಭಾರತೀಶ ದ್ವಾರ । ಸರ್ವ ಕರ್ಮ ವೀಯೆ ಗುರು
ಗೋವಿಂದ ವಿಠಲ ಗತಿ ಇತ್ತು । ಕಾವ ಬಿಡದಲೆ ೧೭

೪೨೬

ಶ್ರೀ ಧನ್ವಂತ್ರಿ ಸ್ತೋತ್ರ
(ನಾರಾಯಣಾಚ್ಯುತ ವಿಠಲ ದಾಸಿಗಾಗಿ)

ಕಾರುಣ್ಯ ನಿಧಿ ತವಾ । ಪಾರ ಮಹಿಮೆಯ ಕೇಳಿ
ಸಾರಿದೆನೊ ಪಾದಾಬ್ಜ ಶರಣೆಂದು । ಶರಣೆಂದೆಶ್ರುನಾಥ
ಪಾರು ಮಾಡಾಕೆಯ ವೃಜಿನವ ೧

ಆಂತ್ರಕಟ್ಟಿಹುದೆಂದು । ತಾಂತ್ರಿಕರು ಪೇಳುವರು
ಆಂತ್ರ ಸರಿಮಾಡುವ ಕಾರ್ಯವ । ಕಾರ್ಯನಿರ್ವಹಿಸಿ ಸ್ವಾ-
ತಂತ್ರ ಪುರುಷಾ ದಯತೋರೋ ೨.

ಆರಿಗೋಸುಗವಲ್ಲ । ನಾರಾಯಣ್ಯಚ್ಯುತನೆ
ಸಾರಿ ತವ ಪಾದ ಭಜಿಸೂವ । ಭಜಿಸೂವ ದಾಸಿಗೆ
ಈ ರೀತಿ ಭವಣ್ಯಾಕೊ ಧನ್ವಂತ್ರಿ ೩

ಆರೋಗ್ಯ ಆಯುಷ್ಯ । ಆರಾಧಕರ್ಗೀವೆ
ಈರನುತ ಧನ್ವಂತ್ರಿ ಕರುಣಾಳು । ಕರುಣಾಳು ಸರ್ವಜ್ಞ
ಆರೋಗ್ಯ ದಾಸಿಗೆ ಕೊಡು ಎಂಬೆ ೪

ಧಂ ಎಂದು ಉಚ್ಚರಿಸೆ । ಧ್ವಂಸ ಮಾಡುವೆ ರೋಗ
ಧನಂತ್ರಿಯೆನ್ನೆ ಭವರೋಗ । ಭವರೋಗ ವಾರಿಸುವ
ಧನ್ವಂತ್ರಿ ರೂಪಿ ನಮೊ ಎಂಬೆ ೫

ಕರದಲ್ಲಿ ಸುಧೆ ಕಲಶ । ಧರಿಸಿರುವ ಬಗೆಯೇನೊ
ಶರಣರ್ಗೆ ಸುಧೆಯಾನುಣಿಸುತ್ತ । ಉಣಿಸುತ್ತಲಮರತ್ವ
ಕರುಣಿಸುವಿ ಎಂದೂ ಶ್ರುತಿ ಸಿದ್ಧ ೬

ಇಂತಿರಲು ದಾಸಿಸ । ತ್ವಂಥಗಳನ್ನುದ್ಧರಿಸೊ
ಅಂತು ತವ ಚರಣಾಬ್ಜ ಬೇಡುವೆ । ಬೇಡುವೆನೋಪಾದಾ
ಕ್ರಾಂತಳಿಗೆ ಸುಧೆಯಾ ನೂಣೀಸೊ ೭

ಚಂದ್ರ ನಿವಹದ ಕಾಂತಿ । ಯಿಂದಮೃತ ಕಿರಣದಿಂ
ಹೊಂದ್ಯಮಿತ ಸುಖರೂಪಿ ಉಲ್ಲಾಸವೀವುತ್ತ
ಚಂದುಳ್ಳ ಸುಧೆ ಕಲಶ ಪಿಡಿಯುತ್ತ ೮

ಆತು ಜ್ಞಾನಾಂಕವನು । ಆತ್ಮಸ್ಥಶೀತಾಂಶು
ಧೌತ ಮಂಡಲಗ ಲಕ್ಷ್ಮೀಶ । ಲಕ್ಷ್ಮೀಶ ಹರಿಯನ್ನು
ಮಾತು ಮಾತಿಗೆ ನಾನು ಸ್ಮರಿಸೂವೆ ೯

ಉತ್ತಮಾಂಗದಲಿರುವ । ಹತ್ತೆರಡು ದಳ ಕಮಲ
ಪ್ರಸ್ಥಿತನು ಧನ್ವಂತ್ರಿ ಮಕರಂದ । ಮಕರಂದ ಪ್ರವಿಸುವನ
ಭಕ್ತಿಯಲಿ ಸ್ಮರಿಸೋದು ರೋಗಾರ್ತೆ ೧೦

ಅಲ್ಲಿಂದ ಭ್ರೂ ಮಧ್ಯ । ಚೆಲ್ವನಾಲ್ದಳ ಪದ್ಮ
ಅಲ್ಲಿಂದ ಲಾಲುಸ್ಥ ದ್ವಿದಳಾಬ್ಜ । ದ್ವಿದಳಾಬ್ಜ ಮುಂದಕ್ಕೆ
ಚೆಲ್ವಾಷ್ಟ ದಳ ಕಮಲ ಹೃದಯಸ್ಥ ೧೧

ಹೃದಯದಿಂದಲಿ ನಾಭಿ । ಸದನ ಷಟ್ದಳ ಕಮಲ
ಗುದವು ಮೂಲಾಧಾರಾನಾಲ್ದಳವುನಾಲ್ದಳ ಕಮಲಸ್ಥ
ಬದಿಗನು ಧನ್ವಂತ್ರಿ ರೂಪೀಯು ೧೨

ರೂಪೀ ಈ ದೇಹವನು । ವ್ಯಾಪಿಸುತ ತಾನಿದ್ದು
ಕಾಪಾಡಲೋಸುಕದಿ ಮಕರಂದ । ಮಕರಂದ ಸುರಿಸುವ
ವ್ಯಾಪಾರದಿಂ ಜೀವರುದ್ಧಾರ ೧೩

ಹತ್ತಿರುವ ಅಜ್ಞಾನ । ವತ್ತಿಬಹ ಭಯದುಃಖ
ಮತ್ತೆ ಮಹವಿಷವು ಇದರಿಂದ । ಇದರಿಂದ ಪರಿಹಾರ
ಭಕ್ತಿಯಿಂ ಭಜಿಸೇ – ಸುಖ ಸೌಖ್ಯ ೧೪

ಶರಣರ್ಗೆ ತಪ್ಪದೆಲೆ । ಗೆರೆವೆ ಸೌಖ್ಯಂಗಳನು
ಗುರು ಗೋವಿಂದ ವಿಠಲಾ । ವಿಠ್ಠಲ ಧನ್ವಂತ್ರಿ
ಮರುತಾಂತರಾತ್ಮಾ ಸಲಹಯ್ಯ ೧೫

೪೭

ಕಾಲ – ನಾಮಕಾ । ತ್ರಿಸಂಧ್ಯಾ
ಕಾಲ – ಚಾಲಕಾ ಪ

ಕಾಲ ಕರ್ಮಗಳಿ । ಗಾಲಯ ರೂಪನೆ
ಬಾಲನ ಬಿನ್ನಪ । ಪಾಲಿಸಬೇಕೈ ಅ.ಪ.

ಲಿಂಗಾ – ಕುಪಚಯ – ಗೈಯ್ಯುತಲೀ
ರಂಗಾ – ಜೀವರಾ ॥
ಅಂಗ ಸೃಜಿಸೆ ಭವ । ಭಂಗದೊಳಗೆ ಮಹ
ಮಂಗನ ತೆರನಹೆ । ಶೃಂಗಾರ ಮೂರ್ತೇ ೧

ಕಾಯಾ – ನಿ ಹಿತಾ । ನಾಡಿಗಳಲಿ
ಧೇಯಾ – ವಿಹಿತಾ ॥
ಆಯಾ ನಾಡಿಗತ । ಧೇಯ ತೀರ್ಥ ಧ್ಯಾನೊ
ಪಾಯ ತಿಳಿಸಿ ಕಾಯೊ । ವಾಯು ಬೃಹತಿ ಪ್ರಿಯ ೨

ಸ್ನಾನಾ ಪಾವನಾ । ತವ ಮಹಿಮಾ
ಧ್ಯಾನೋಪಾಸನಾ ॥
ತ್ರಾಣವೀಯೊ ನಿತ್ರಾಣನೆನಗೆ ಜಗ
ತ್ರಾಣ ಪ್ರಾಣ ಗುರು ಗೋವಿಂದ ವಿಠಲ ೩

೪೮

ಕಾಲನೇಮಿ ಕಾಡುತಿರುವನೊ । ಕೇಳೊ ಶೌರಿ
ಕಾಲನೇಮಿ ಕಾಡುತಿರುವನೊ ಪ

ಕಾಲನೇಮಿ ಕಾಡುತಿಹನು ।
ಶೀಲಗೆಡಿಸಿ ಮನದ ಚರ್ಯೆ
ತಾಳಲಾರೆ ಅವನ ಬಾಧೆ ।
ಕೊಲ್ಲು ಬೇಗ ಅವನ ಹರಿಯೇ ಅ.ಪ.

ಸ್ನಾನಗೈದು ನಿನ್ನ ಪೂಜೆಯ ।
ಧ್ಯಾನವು ಆವಾಹನಾದಿಯ
ಏನು ನೋಡಿದೆ ತ್ವರ್ಯ ಬರುವ ।
ಧೀನಪಾಲ ಕಾಯೊ – ನೀನೆ ೧

ದೈತ್ಯ ಪರಿವಾರದೊಡನೆಯ ।
ಕೃತ್ಯ ಮನದಿ ಚರಿಸಿ ಪೋಪನು
ದೈತ್ಯ ಹರನೆ ಹಯವದನ ।
ಸತ್ಯ ಮಾಡೊ ನಿನ್ನ ವಚನ ೨

ಮುರುಳಿ ಧರನೆ ಮಾನಸಾಂಡದ ।
ಧೊರೆಯೆ ನೀನು ದೂರ ನೋಳ್ಪುದೆ
ಗುರು ಗೋವಿಂದ ವಿಠಲ ನಿನ್ನ ।
ಚರಣ ದಡಿಗೆ ಸೇರಿಸೆನ್ನ ೩

೪೯

ಶ್ರೀ ವಿಷ್ಣ್ವಾಷ್ಟಕ (ಪಾಲಯಾಚ್ಯುತ ಎಂಬತೆ)

ಕಾವುದೋ ಹರಿ । ಕಾವುದೋ ಹರಿ
ಕಾವುದೊ ಕರುಣಾರ್ಣವ ಪ

ಜೀವರಂತರ ಬಾಹ್ಯ ನೆಲಸಿಹ
ಶ್ರೀವರಾ ಶ್ರೀ ಭೂಧರಾ ಅ.ಪ.

ನಿತ್ಯ ನೂತನ । ನಿರ್ವಿಕಾರನೆ । ಸತ್ಯನೆ ನೀ ನಿತ್ಯನೇ
ಭೃತ್ಯ ವತ್ಸಲ । ಭವವನಾನಲ । ಕೃತ್ಯನೆ ದಯ ಪೂರ್ಣನೇ ॥
ಮೃತ್ಯು ವರ್ಜಿತ । ಪ್ರತ್ಯಗಾತ್ಮನೆ । ಕರ್ತನೇ ನಿರ್ಲಿಪ್ತನೇ
ಸತ್ಯ ಕಾಮ ಶರಣ ಶಾಶ್ವತ । ಸ್ತುತ್ಯನೇ ಜಗ ವ್ಯಾಪ್ತನೇ ೧

ಸರ್ವ ಪ್ರೇರಕ ಸರ್ವ ಚೇಷ್ಟಕ । ಸರ್ವ ನಿಯಮನ ಮಾಳ್ಪನೇ
ಸರ್ವ ವಾಚ್ಯನೆ ಅಮಿತ ತೇಜನೆ । ಸರ್ವರನ ಸಲಹೂವನೇ ॥
ಸರ್ವ ಶಬ್ದ ಪ್ರವೃತಿ ಕಾರಣ । ಸರ್ವಗುಣ ಪರಿಪೂರ್ಣನೆ
ಸರ್ವತೊಮುಖ ಬಾಹು ಚರಣನೆ । ಶರ್ವ ವಂದ್ಯ ಸುಮಹಿಮನೆ ೨

ವೀತಭಯ ವಿಶ್ವೇಶ ವಿಧಿಪಿತ । ಮಾತುಳಾಂತಕ ಪಾಲಕಾ
ಭೂತ ಭಾವನನಂತ ಭಾಸ್ಕರ । ದ್ಯೋತಕ ಮಹಕೌತುಕ ॥
ಗೌತಮ ಪ್ರಿಯ ಮಡದಿ ಕಾಯ್ದಾ । ನಾಥ ರಕ್ಷಕ ಶಿಕ್ಷಕಾ
ಖ್ಯಾತ ರಾವಣ ಕುಂಭಕರ್ಣನ । ಹಂತಕ ವಿಶ್ವಾಸಕ ೩

ಪ್ರಣತ ಕಾಮದ ಮಣಿ ವಿಭೂಷಿತ । ಭಕ್ತ ಭಯಹರ ಶ್ರೀಧರ
ಘೃಣಿ ಗುಣತ್ರಯ ದೂರ ವರ್ಜಿತ । ಬಂಧಕ ಭವ ಮೋಚಕ
ಅಣು ಮಹದ್ಗತ ವ್ಯಾಪ್ಯವ್ಯಾಪಕ । ಸಾಧಕ ಖಲ ಬಾಧಕ ।
ತೃಣ ಮೊದಲು ಬ್ರಹ್ಮಾಂತ ಜೀವರ । ಪಾಲಕ ಪರಿಪೋಷಕ ೪

ಮೀನ ಕಮಠನೆ ಕೋಲ ನರಹರಿ । ವಾಮನಾ ಸುಭಾಮನಾ
ರೇಣುಕಾತ್ಮಜ ರಾವಣಾಂತಕ । ದಾಶರಥಿ ನರ ಸಾರಥೀ ॥
ಧೇನುಕಾಸುರ ಮಥನ ತ್ರಿಪುರವ । ಹಾನಿಗೈದನೆ ಬುದ್ಧನೆ
ಮಾನುಷಾಕೃತಿಲ್ಹಯವನೇರಿದ । ಕಲ್ಕಿಯೇ ಕಲಹ ಪ್ರಿಯೆ ೫

ಉದಿತ ಭಾಸ್ಕರನಂತ ತೇಜನೆ । ಉದರ ನಾಮಕ ಪಾಚಕ
ಸುದತಿಯರು ಹದಿನಾರು ಸಾವಿರ । ವಾಳ್ದನೇ ಬ್ರಹ್ಮಚರ್ಯನೇ॥
ಮಧು ವಿರೋಧಿಯೆ ಮಧ್ವಮಾನಸ । ಮಂದಿರ ಬಹುಸುಂದರ
ಹೃದಯದಲಿ ನೀ ಬದಿಗನೆನಿಸುತ । ಪೂಜಿತ ಸುರ ಪೂಜಿತ ೬

ಸೃಷ್ಟಿ ಸ್ಥಿತಿ ಮೊದಲಾದ ಅಷ್ಟಕ । ಕರ್ತೃಕ ಪ್ರಾವರ್ತಕ
ಅಷ್ಟದಳ ಸತ್ಕಮಲಧಿಷ್ಠಿತ । ಪ್ರಾಜ್ಞಾನೇ ವಿಶ್ವಜ್ಞನೇ
ಜಿಷ್ಣು ಸಖ ಶ್ರೀಕೃಷ್ಣ ಕೃಷ್ಣೆಯ । ಭೀಷ್ಟದಾ ಶಿಷ್ಟೇಷ್ಟದಾ
ಪುಷ್ಟ ಮಹಿಮಾ ಪ್ರವಿಷ್ಟ ರೂಪನ । ವಿಷ್ಟನೇ ನಿವಿಷ್ಟನೇ ೭

ಗೋವಿದಾಂಪತಿ ಗೋವಪಾಲಕ । ಮಾವ ಮಾರಕ ಕಾರಕ ॥
ಭೂವರಾಹ ಸುಭಾವಜಾರಿಜ । ಷಣ್ಮುಖ ಪರಿಪಾಲಕ ॥
ಗೋವಿಂದ ಗುರು ಗೋವಿಂದವಿಠಲ । ಗೋವ್ಗರ್ಧನ ಗಿರಿಧರ
ಪಾವಮಾನಿಯ ಪ್ರೀಯ ಸಿರಿಧರ । ಕಾವ ಶರಣರ ಭವಹರಾ ೮।

೫೦

ಕೃಷ್ಣಾ – ಶ್ರೀಕೃಷ್ಣಾ ಪ

ಕೃಷ್ಣ ಕೃಷ್ಣ ಹರಿವೃಷ್ಟಿ ಕುಲೋದ್ಭವ
ಸೃಷ್ಟಿ ಕರ್ತ ಹೃತ್ಪುಷ್ಕರ ನಿಲಯ ಅ.ಪ.

ವಲಲ ಸಂರಕ್ಷಕ । ಅಲವ ಭೋದನುತ
ಕಲಿಮಲ ಕಲುಷಹ । ನಳಿನೇಕ್ಷಣಪಾಹಿ ೧

ನಂದನ ಕಂದ ಮು । ಕುಂದನೆ ಮಾಧವ
ಸಿಂಧು ಶಯನ ಕೃಷ್ಣ । ಮಂದರೋದ್ಧಾರಿ ೨

ಮುರ ನರಕರ ಸಂ । ಹರ ಶತದ್ವಷ್ಟಸಾ
ಸಿರಿ ವಧುಗಳ ಕರ । ಪರಿಗ್ರಹಿಸಿದನೇ ೩

ಚಿತ್ತಜಾರಿ ಸಖ । ವಿತ್ತವನೊಲ್ಲೆನೊ
ಭೃತ್ಯನ ಗೈ ಸ । ರ್ವೋತ್ತಮ ದೇವ ೪

ಪಾಪಿಯು ಎನೆ ನಾ । ಶ್ರೀಪತಿ ನಿನ್ನನು
ನಾಪೊಂದಲು ಆ । ಪಾಪೆಲ್ಲಿ ಹುದೋ ೫

ಕಾಮಪಿತನೆ ಸ । ದ್ಭೂಮ ಗುಣಾರ್ಣವ
ಪಾಮರ ಮನುಜನ । ಪ್ರೇಮದಿ ಸಲಹೋ ೬

ಶಿರಿ ಸಹ ಗುರು ಗೋ । ವಿಂದ ವಿಠಲ ಹೃತ್
ಸರಸಿಜ ಪೀಠದಿ । ದರುಶನ ವೀಯೋ ೭

೫೧

ಕೈಕೊಂಡ – ನೃಹರಿ ಕೈಕೊಂಡ ಪ

ಕೈಕೊಂಡ ಪೂಜೆಯ ನೃಹರಿ । ತ್ರೈಲೋ
ಕ್ಯಕನಾಥನು ಅಸುರಾರಿ । ಆಹ
ತೋಕನ ಸಲಹಲು । ಏಕಮೇವನ ಲೀಲೆ
ಕೈಕೊಂಡ ಅವತಾರ । ಆ ಕಂಬೋದ್ಭವನಾಗಿ ಅ.ಪ.

ಭಕ್ತಿ ಭಾವದಿ ಪರಾಶರ । ಬಹು
ತಪ್ತ ಭಾವದಿ ಕೃಷ್ಣೇ ತೀರ । ದಲ್ಲಿ
ಸಕ್ತನಿರೆ ಧ್ಯಾನ ಗೋಚರ । ನಾಗಿ
ವ್ಯಕ್ತನು ಷೋಡಶಕರ । ಆಹ
ದೃಪ್ತ ದಾನವ ಧ್ವಂಸಿ । ದೀಪ್ತಾನಂತ ತೇಜ
ಮೂರ್ತಿ ಕಾಣಿಸಿದನ । ವ್ಯಕ್ತನಾಗಿದ್ದಂಥ ೧

ಸುರ ಸಿದ್ಧ ನಿಚಯ ಸುಸೇವ್ಯ । ಪದ
ಪರಿಪರಿ ನೂಪುರ ದಿವ್ಯ । ಶೋಭಿ
ವರ ಕಟಿಸೂತ್ರ ಸುಭವ್ಯ । ಪರಿ
ಪರಿ ಕಂಕಣಗಳ ರಮ್ಯ । ಆಹ
ವರ ಪೀತಾಂಬರ ಭೂಷ । ಸ್ಮರ ಕೋಟಿ ಲಾವಣ್ಯ
ಕರ ಪಾಶ ಅಸಿಕುಂತ । ವರದಾ ಭಯವು ಹಸ್ತ ೨

ಕಂಬು ಚಕ್ರ ಚರ್ಮಕರ । ಮತ್ತೆ
ಅಂಬುಜ ಶಾಂರ್ಙ್ಗಾದಿಧರ । ಗದ
ಸಂಭೃತ ತುಳಸಿಯ ಹಾರ । ಮತ್ತೆ
ಇಂಬಿನ್ನೊ ಜಯಂತಿ ಹಾರ । ಆಹ
ಅಂಬುಜದಳ ನೇತ್ರ । ಇಂಬಾಗಿ ಕರಪಾತ್ರ
ತುಂಬ ಪೀಯುಷಧಿ । ಪೊಂಬಸಿರ ವಂದ್ಯನು ೩

ಶ್ರೀವತ್ಸ ಲಾಂಛನ ಭೂಷ । ತನ್ನ
ಭ್ರೂವಿಲಾಸದಿ ಬ್ರಹ್ಮ ಈಶ । ರಿಗೆ
ತಾವೊಲಿದೀವ ಆವಾಸ । ಯೆನು
ತವ ವೇದಂಗಳು ಅನಿಶ । ಆಹ
ಮಾವಿನೋದಿಯ ಗುಣ । ಸಾವಕಾಶಿಲ್ಲದೆ
ಸಾರ್ವದ ಪೊಗಳುತ್ತ । ಭಾವದೊಳ್ಹಿಗ್ಗುವವು ೪

ಪೊತ್ತು ರೂಪವ ಬಲಪಾದ । ಚಾ
ಚುತ್ತ ರಕ್ಕಸನೊಡಲಗಾಧ । ಇಟ್ಟು
ವತ್ತುತ ತೊಡೆಯಲ್ವಿನೋದ । ದ್ವಯ
ಹಸ್ತ ನಖದಿ ಉದರ ಬಗೆದ । ಆಹ
ಕಿತ್ತುತ ಕರುಳನ್ನ । ಕತ್ತಿನೊಳ್ಹಾಕುತ
ಭಕ್ತನ ಸಂಬಂಧ । ಎತ್ತಿ ತೋರ್ದ ಜಗಕೆ ೪

ಪಂಚ ಮೋಕ್ಷಪ್ರದ ಹರಿ । ಆಯ್ತು
ಪಂಚಾಮೃತಭಿಷೇಕ ಅವಗೆ । ಮತ್ತೆ
ಪಂಚಕಲಶಾರ್ಚನವು ಆವಗೆ । ಆಯ್ತು
ಪಂಚ ಕುಂಭಾಭಿಷೇಕವಗೆ । ಆಹ
ಸಂಚಿಂತಿಸುತ ಹೃ । ತ್ಪಂಕಜದೊಳು ನೋಡೆ
ಸಂಚಿಂತಾಗಮ ನಾಶ । ಕೊಂಚವು ಪ್ರಾರಬ್ಧ ೬

ಶಾಲಿಗ್ರಾಮದ ಶಿಲ ಏಕ । ಪೊತ್ತು
ಪೋದಕ ಬಾಹು ಅಲೀಕ । ಶತ
ಶಾಲೀವಾಹನವೆಂಬ ಶಕ । ದೊಳು
ಜ್ವಾಲಾ ನರಹರಿ ನಾಮಕ । ಆಹ
ಯೇಳು ಐದೊರ್ಷದ । ಭಾಳ ತಪಕೆ ಮೆಚ್ಚಿ
ಶೀಲ ದ್ವಿಜ ದಂಪತಿ । ಗೊಲಿದು ಪೇಳಿದ ಹೀಗೆ ೭

ಭೀಮಕ ರಾಜಗೆ ಪೇಳು । ತೃಣ
ಜಾಲವ ಹಾಕೆ ನೀರೊಳು । ಅಲ್ಲಿ

ಜ್ವಾಲೆ ಉದ್ಭವಿಸಲು ಬಲು । ನೀರ
ಮೇಲಕ್ಕೆ ಒಳಗಿಂದ ಬರಲು । ಆಹ
ತೋಳೆರಡಲಿ ರಾಜ । ಮೇಲೆತ್ತೆ ಬರುವನು
ತಾಳ ಮೇಳೈಭವ । ದೊಳಗೆ ಸ್ಥಾಪಿಸಲೆಂದು ೮

ಅಂಗಹೀನರೆ ಕೇಳಿ ಆವ । ನಿಮ್ಮ
ಭಂಗಿಪ ಮೂಕಾಂಧ ಭಾವ । ನೀಗಿ
ಶೃಂಗಾರ ರೂಪ ಸ್ವಭಾವ । ನರ
ಸಿಂಗ ಕೊಡುವೆನು ಸೇವ । ಆಹ
ಹಿಂಗದೆ ಕೊಡುವೆನು । ಅಂಗಜ ಪಿತ
ನರಸಿಂಗಪುರವೆಂದು । ಸಂಗೀತವಾಗಲಿ ೯

ವತ್ಸರ ಸೌಮ್ಯವು ಪುಷ್ಯ । ದಿನ
ದರ್ಶ ವ್ಯಾಸತೀರ್ಥ ಶಿಷ್ಯ । ಆ
ದರ್ಶ ದಾಸರ ದಿನ ಭವ್ಯ । ಭಕ್ತ
ವತ್ಸಲ ಸ್ವೀಕಾರ ಆಲ್ಯ । ಆಹ
ಉತ್ಸವ ಕೊಳ್ಳುತ । ಉತ್ಸಾಹವೆನಗಿತ್ತು
ಮತ್ಸ್ಯಾದಿ ದಶರೂಪಿ । ಕೃತ್ಸ್ನ ಕಾರುಣ್ಯನು ೧೦

ಪರಾಶರಗೊಲಿದ ಸುಶೀಲ । ಖಗ
ವರನು ಭೂದೇವಿಯು ಬಲ । ಎಡ
ವರಲಕ್ಷ್ಮೀ ಪ್ರಹ್ಲಾದ ಬಾಲ । ಸುರ
ವರರಿಂದ ಸ್ತುತ್ಯ ವಿಶಾಲ । ಆಹ
ಗುರು ಗೋವಿಂದ ವಿಠ್ಠಲ । ಗುರು ಬಿಂಬ ನರಸಿಂಗ
ಶರಣರ ಅಪಮೃತ್ಯು । ಹರಿಸಿ ಸಂತತ ಕಾಯ್ವ ೧೧

೫೨

ಗರುಡ ಶೇಷಾದಿ ಮನೊ ಮಾನಿ । ಪ್ರೇರಕನೆ ಹರಿಯೇ ॥
ಸಿರಿ ಜಾನಕೀ ಪತಿ । ನೀನಿವನ ಕಾಯೋ ಪ

ಮಂದ ಜನರುದ್ಧಾರಿ । ತಂದೆ ಮುದ್ದು ಮೋಹನ್ನ
ನಂದನರ ದ್ವಾರದಿಂ । ಪೊಂದಿ ಅಂಕಿತವಾ
ಅಂದ ಸತ್ಸಾಧನವು । ಮುಂದುವರಿವಲಿಕಾಂಕ್ಷೆ ।
ಯಿಂದ ಸತ್ಕಾರ್ಯ । ಪ್ರತಿಬಂಧ ಪರಿಹರಿಸೊ ೧

ಮನಸಿನ ಮೈಲಿಗೆಯ । ಅನುನಯದಿ ಪರಿಹರಿಸಿ
ಗುಣರೂಪ ಕಾರ್ಯ ತವ । ದಿನ ಪ್ರತಿದಿನ ಚಿಂತಿಪ ।
ಮನವ ನಿತ್ತಾದರಿಸೊ । ಗುಣನಿಧಿಯೆ ಪ್ರಾರ್ಥಿಸುವೆ
ಅನಘ ನಿನ್ನಯ ಪಾದ । ವನಜ ಆಶ್ರಿತಗೇ ೨

ಭಾವಜಾರಿಯ ಮಿತ್ರ । ಭಾವುಕರ ಪರಿಪಾಲ
ಗೋವಿದಾಂ ಪತಿಯೆ ಗುರು । ಗೋವಿಂದ ವಿಠಲಾ ।
ಪಾವಮಾನಿಯ ಪ್ರೀಯ । ನೀ ವೊಲಿದು ಭಕ್ತನ್ನ
ತೀವರುದ್ಧರಿಸೆಂದು । ದೇವ ಬಿನ್ನವಿಪೇ ೩

೫೩

ಗೋಪಾಲಕೃಷ್ಣ ಪಾಲಿಸೋ – ತವ ಭವ್ಯವೆನಿಪ
ಶ್ರೀಪಾದಾ ತೋರಿಸೋ ಪ

ಪಾಪಿಯ ಭವ ಕೂಪಾರ ಹರಿಸಿ
ಕೈಪಿಡಿದೆನ್ನನು ಕಾಪಾಡುವುದು ಹರೆ ಅ.ಪ.

ಸೂರ್ಯ ಕೋಟಿ ಸಂಕಾಶ । ಶ್ರೀ ರುಕುಮಿಣೀಶ
ಪ್ರೇರ್ಯ ಪ್ರೇರಕ ಸರ್ವೇಶ
ಕಾರ್ಯಾ ಕಾರ್ಯ ವನರಿಯದವನು ನಾ – ಸುಖ
ವೀರ್ಯ ಸಾರ ಔದಾರ್ಯನೆ ಪಾಲಿಸೊ
ಕಂಸಾರಿ ಬಕವೈರಿ ಮುರ ವೈರಿ । ನಿಜ ಜನ ಭವಹಾರಿ ೧

ಗೋಕುಲ ಪಾಲಾ ಹೇ ಬಾಲ – ಸತ್ಯಭಾಮೆ ಲೋಲ
ಶ್ರೀಕರ ಗುಣ ಬಹು ಜಾಲ ಶ್ರೀಕಮಲಜ ಭವ ।
ನಾಕೇಶ ವಿನುತ ಶ್ರೀಕರ ಪದ ಪಲ್ಲವನವ ।
ಲೋಕನ ಕೊಡು ಕರಿವರದ । ಧೃವ ವರದ ।
ಜಿತ ಖಲ ಕುಲ ಸರ್ವಮದ ॥ ೨

ವೇದಾಂತ ವೇದ್ಯಾ – ವೇದ ವೇದ್ಯಾ
ವೇದಾತ್ಮಿಕಾರಾಧ್ಯಾ ।
ಆದಿ ಹರಿಯೇ ಗುರು ಗೋವಿಂದ ವಿಠಲ
ಮೋದ ಪ್ರಮೋದ ಸಂ । ಮೋದವ ನೀಯೋ
ಗೋವಿಂದ । ಮುಕುಂದ । ಮುನಿ ವಂದ್ಯ ।
ಧೃತ ವ್ರಜಗಿರಿ ಆನಂದ ೩

೫೪

ಗೌತಮ ಗೊಲಿದನೆ ರಂಗನಾಥ
ದಾತನೆ ನಮಿಸುವೆ ರಂಗನಾಥ ಪ

ಕಾವೇರಿ ತೀರಗ ರಂಗನಾಥ
ಮಾವಾರಿ ಸಲಹೆನ್ನ ರಂಗನಾಥ ೧

ಭಕುತಾಭೀಷ್ಟ ಪ್ರದ ರಂಗನಾಥ
ಮುಕುತರೊಡೆಯ ಶ್ರೀರಂಗನಾಥ ೨

ವಕ್ಷದಿ ಲಕ್ಷ್ಮಿಯು ರಂಗನಾಥ
ಕುಕ್ಷಿಯೊಳ್ಬ್ರಹ್ಮಾಂಡ ರಂಗನಾಥ ೩

ರಂಗಧಾಮನೆ ಶಿರಿ ರಂಗನಾಥ
ಮಂಗಳ ಮಹಿಮಾನೆ ರಂಗನಾಥ ೪

ಅಜಭವ ಸುರವಂದ್ಯ ರಂಗನಾಥ
ನಿಜ ಗುರು ಗೋವಿಂದ ರಂಗನಾಥ ೫

೫೫

ಘನವೇನೋ ನಿನಗಿದು ಗುಣವನದೀ । ಮಾನದ ಮಾನ್ಯ ॥
ಮನವ ನಿನ್ನಲಿ ನಿಲ್ಲಿಸೋ ಪ

ತನುಮನ ಸಕಲ ಸಾಧನವೆಲ್ಲ ಎನಗಿತ್ತು
ಮನ ಆದಿ ಕರಣವ ಎನಗೊಶಪಡಿಸದೆ ಅ.ಪ.

ತತುವೇಶರೆಲ್ಲರೊಂದಾಗೀ । ಗೋವಿಂದಾ ।
ಮತಿ ಭ್ರಾಂತಿ ಬಡಿಸುವರೋ ॥
ವಿತತ ಅಚ್ಯುತ ಮೂರ್ತಿ । ಸತತ ಎನ್ನಲ್ಲಿ ಇದ್ದು
ಹಿತವ ಮಾಡಿದೆ ಎನ್ನ । ಹತಭಾಗ್ಯನೆನಿಪುದು ೧

ಹೀನ ಬುದ್ಧಿಯ ಕಳೆಯದೇ । ಮುನಿಜನ ವಂದ್ಯಾ ।
ವಾನರ ನಾನಾದೆ ಹರಿಯೇ ॥
ಶ್ವಾನ ಮತಿಯ ನೀಗಿ । ಧ್ಯಾನ ಸಾಧನ ನೀಡೋ ।
ಗಾನ ಲೋಲನೆ ನಿಧಾನ ಮಾಡಲಿ ಬೇಡ ೨

ತಂದೆ ಮುದ್ದು ಮೋಹನರೂ । ಮಂದನು ಎನ್ನ ।
ತಂದೆ ನಿನ್ನಡಿಗ್ಹಾಕಿದರೊ ॥
ಇಂದಿರೆಯರಸ ಗುರು । ಗೋವಿಂದ ವಿಠಲಯ್ಯ ।
ಛಂದಾಗೀಯೆನ್ನ ಮನ । ಮಂದಿರದೊಳು ನಿಲ್ಲೊ ೩

೫೬

ಚಿಂತಿಸೋ - ಶ್ರಿಹರಿಯ ನೀ ಚಿಂತಿಸೋ ಪ

ಚಿಂತಿಸೊ ನೀ ವೈಶ್ವಾನರನ । ಹೃದಯ
ದಂತರ ದೊಳಗಿರುವನ । ಆಹ
ಸಂತತ ಜೀವರು ಭುಂಜಿಪಗಳನೆಲ್ಲ
ಮಂಥಿಸಿ ಜಠರದಿ ಹಂಚಿಪ ಹರಿಯನು ಅ.ಪ.

ಮುಖದೊಳಾಹವ ಅಗ್ನಿಯಲ್ಲಿ । ಪ್ರಾಣ
ಮುಖನು ತಾ ಹೋತೃವು ಅಲ್ಲಿ । ಪೂರ್ವ
ಮುಖ ದ್ವಾರ ಪಾಲನೆಯಲ್ಲಿ । ಕಂಜ
ಸಖನು ಪ್ರಾಣಾಭಿಧನಲ್ಲಿ । ಆಹ
ಮುಖದೊಳಗೀಪರಿ । ಕ್ರಮವರಿತು ಮಾಡುವ
ಮಖದಿ ತೃಪ್ತನು ಆಹ । ಪ್ರಾಣಾತ್ಮ ಅನಿರುದ್ಧ ೧

ಕುಕ್ಷಿಯೊಳಗೆ ಸುರಮುಖನು । ಅವ
ದಕ್ಷಿಣಾಭಿಧ ಪಾವಕನು । ಅಲ್ಲಿ
ದಕ್ಷನು ವ್ಯಾನ ಮಾರುತನು । ಅಗ್ನಿ
ದಕ್ಷಿಣ ವ್ಯಾನ ಚಂದ್ರಮನು । ಆಹ
ಭಕ್ಷಭೋಜ್ಯಂಗಳ । ಕೊಡಲು ಈ ಪರಿಯಿಂದ
ಪಕ್ಷಿವಾಹನ ವ್ಯಾನ । ಪ್ರದ್ಯುಮ್ನ ಪೊರೆವನು ೨

ಹೃದಯದೊಳಗೆ ಗಾರ್ಹಸ್ಪತ್ಯ । ನಾಮಾ
ಭಿಧನೆಂಬ ವಹ್ನ್ಯಾಧಿಪತ್ಯ । ನೆನಿ
ಪದುಪಾನುದ್ಗಾತ್ರಾಧಿ ಪತ್ಯ । ಈತ
ಗಿಹುದು ಪ್ರತೀಚಾಧಿಪತ್ಯ । ಆಹ
ಬದಿಗನಿಗೀ ಪರಿ । ಅನ್ನವನರ್ಪಿಸೆ
ಮುದದೊಳಪಾನಾತ್ಮ । ಸಂಕರ್ಷಣ ಪಾಲಿಪ ೩

ಪೊಕ್ಕಳೆಡಗಡೆ ಅವಸಥ್ಯಾ । ಅಗ್ನಿ
ದಕ್ಕ ಪನಹರಂಗಳ ನಿತ್ಯಾ । ಅಲ್ಲಿ
ಸಿಕ್ಕಿಹ ಸಮನಾಧಿಪತ್ಯ । ಬಡಗ

ದಿಕ್ಷಮ ನಿಂದ್ರಾಧಿಪತ್ಯ । ಆಹ
ಪಕ್ಷಿವಾಹನ ಸಮಾನಾತ್ಮ ವಾಸುದೇವ
ಮಕ್ಕಳಂದದಿ ಕಾಯ್ದ ಈ ಪರಿ ಯಜಿಪರ ೪

ನಾಭಿ ಬಲಕೆ ಸಭ್ಯವೆಂಬ । ಅಗ್ನಿ
ಶೋಭಿಪನ ಧ್ವರ್ಯ ಎಂಬ । ಅನಿಲ
ಆಭಿಧ ಊರ್ಧ್ವಗನೆಂಬ । ಉದಾ
ನಾಭಿಧ ರಮ್ಯಾಶ್ರೈನೆಂಬ । ಆಹ
ನಾಭಿಜಾಪತಿ ಉದಾನಾತ್ಮಾ ನಾರಾಯಣ
ಲೋಭದಿ ಕೈಕೊಂಬ ಈ ಪರಿ ಇತ್ತುದನು ೫

ಸರ್ವ ಸದ್ಗುಣ ಪೂರ್ಣ ವೈಶ್ವಾ । ನಾಶ
ವಿರಹಿತ ನರನೆಂದು ಮೆರೆವಾ । ವೈಶ್ವಾ
ನರನೆಂದು ತಾನು ಕರೆಸುವಾ । ಸರ್ವ
ವರನೆನಿಸಿ ಅಗ್ನಿ ಎನಿಸುವಾ । ಆಹ
ವರ ಪಂಚ ಪ್ರಾಣಾಖ್ಯ ಯಜ್ಞಾಭಿಧನು ವಾಯು
ಸುರ ಮೊಗಸ್ಥಿತ ಹರಿಯನ್ಯಜಿಪ ನೀ ಪರಿಯೆಂದು ೬

ಮರುತ ಪಂಚಾತ್ಮಕ ಅನಿಲಾ । ಜೀವ
ವರರಿಗಾಗಿ ಇತ್ತ ಸಕಲಾ । ಭೋಜ್ಯ
ಹರಿಯ ಪಂಚರೂಪ ಅನಿಲಾ । ಕೊಂಡು
ಪರಿಪಾಲಿಪನೆಂಬ ಸೊಲ್ಲಾ । ಆಹ
ಪರಿಪರಿ ಚಿಂತಿಸೆ ವೈಶ್ವಾನರ । ಗುರು
ಗೋವಿಂದ ವಿಠ್ಠಲ ಸಲಹದೆ ಬಿಡನೆಂದು ೭

೫೭

ಚಿಕ್ಕ ತಿರುಪತಿವಾಸ – ಶ್ರೀ ವೆಂಕಟೇಶ ಪ

ಅಕ್ಕರದಿ ನೀನೆನ್ನ – ತಕ್ಕೈಸಬೇಕೋ ಅ.ಪ.

ಕಕ್ಕಸದ ಭವದೊಳಗೆ । ಸಿಕ್ಕಿ ಬಲು ನೊಂದೆನೋ
ರಕ್ಕಸಾಂತಕ ಕೃಷ್ಣ । ಚಕ್ರಧರ ದೇವಾ
ಚೊಕ್ಕ ಮೂರುತಿ ಅಜನ । ಪೊಕ್ಕಳಾದಲಿ ಪಡೆದು
ಲಕ್ಕುಮಿಗೆ ಮೀರ್ದ ಪೊಂ । ಬಕ್ಕಿ ಧೇರನ ಕಾಯೋ ೧

ಸಪ್ತ ಪ್ರಕಾರದಲಿ । ಆಪ್ತ ನೀ ನೆಲಿಸಿದ್ದು
ಗುಪ್ತ ಮಹಿಮನೆ ಜಗಕೆ । ವ್ಯಕ್ತನಾಗದಲೇ ।
ಕ್ಲುಪ್ತಿಯಿಂದದಿ ಹವಿ । ಭೋಕ್ತೃ ಯಜ್ಞನಿವೊಲಿದು
ವ್ಯಕ್ತನಾದೆಯೊ ಜಡದಿ । ಅವ್ಯಕ್ತ ಮೂರ್ತೇ ೨

ಕ್ಷಿತಿಪ ಜನಮೇಜಯನು । ವಿಸ್ತರಿಸಿ ಮಂಟಪವ
ಕ್ಷಿತಿಯ ಮರರೊಡಗೂಡಿ । ಅತುಳ ವಿಭ್ರವದಲೀ
ಕೃತಿಪತಿಯೆ ನಿನ್ನನೂ । ಸ್ತುತಿಗೈದು ಗತಿ ಪಡೆದ
ವಿತತ ಮಂಗಳ ಮೂರ್ತಿ । ಪ್ರತಿರಹಿತ ದೇವಾ ೩

ಭೂಮಿಪತಿ ವರಾಹ । ಸ್ವಾಮಿ ಪುಷ್ಕರಿಣ್ಯಾದಿ
ಆ ಮಹಾ ತೀರ್ಥಗಳ । ವಿಮಾನ ಸ್ಥಿತನಾ ।
ಈ ಮನೋರೂಪದಲಿ । ನೇಮಾನು ಸಂಧಾನ
ಕಾಮಿಸುವೆ ಶ್ರೀರಮಣ । ಭೂಮಿಗ್ವಲ್ಲಭನೇ ೪

ಸರ್ವಜಗ ಸೃಜಿಸುವನೆ । ಸರ್ವವನು ಲಯಿಸುವನೆ
ಸರ್ವಕುತ್ತಮನೆನಿಪೆ । ಶರ್ವವಂದ್ಯಾ
ಸರ್ವ ಪ್ರೇರಕ ನೀನೆ । ಸರ್ವ ಚೇಷ್ಟಕ ನೀನೆ
ಸರ್ವ ಸುಂದರ ಗುರು । ಗೋವಿಂದ ವಿಠಲಾ ೫

೫೮

ಚಿತ್ತಾವೆ ಚಿಂತಿಸು ಶ್ರೀ ಹರಿಯನ್ನ ।
ಗುಣಗಣ ಮಣಿಯನ್ನ ಪ

ಧ್ರುತ : ಕೃತ್ತಿವಾಸನುತ ಹೃತ್ಕಮಲಸ್ಥನ ।
ಸುಸ್ಥಿರ ಚಿತ್ತದಿ ನೀ ನಿಲಿಸುತ್ತ ಅ.ಪ.

ನಾರಾಯಣ ಪರ ವೇದಗಳೆಲ್ಲಾ । ಪ್ರತಿಪಾದಿಪುದೆಲ್ಲಾ
ನಾರಾಯಣಾಂಗಜ ದೇವತೆಯೆಲ್ಲ । ಆಶ್ರಿತರಿಹರೆಲ್ಲಾ ।
ನಾರಾಯಣ ಪರ ಲೋಕಗಳೆಂದು
ನಾರಾಯಣ ಪರ ಮಖಗಳೆಂದು ೧

ನಾರಾಯಣ ಪರಯೋಗಗಳೆಲ್ಲ । ಅಷ್ಟಾಂಗಗಳೆಲ್ಲಾ
ನಾರಾಯಣ ಪರ ತಪಸುಗಳೆಲ್ಲ । ತದ್ವಿಷಯವು ಎನುತೆಲ್ಲ ।
ನಾರಾಯಣ ಪರ ಜ್ಞಾನಗಳೆಂದು ।
ನಾರಾಯಣ ಪರ ಗತಿಗಳಿಗೆಂದು ೨

ನಾರಾಯಣನೊಬ್ಬೊಬ್ಬರಲಿ ನಿಂದು । ಪೂಜ್ಯ ಪೂಜಕನೆಂದೂ
ನಾರಾಯಣ ಸೇವ್ಯ ಸೇವಕನೆಂದು । ಪ್ರೇರ್ಯ ಪ್ರೇರಕನೆಂದೂ ।
ಕಾರಣ ಕಾರ್ಯಗಳಲಿ ನಾರಾಯಣ ।
ಪೂರಣನಹುದೆಂದು ನೀ ನಮಿಸುತ್ತ ೩

ಸೃಷ್ಟ್ಯಾದ್ಯಷ್ಟಕ ಕಾರಣ ಕರ್ತ । ಇಚ್ಛಾ ಮಾತ್ರ ಸಮರ್ಥ
ಶಿಷ್ಟೇಷ್ಟ ಪುಷ್ಟ ಮಹಿಮನು ಎನುತ ।
ಹೃಷ್ಟ ನೀನಾಗೊ ಸತತಾ । ಕಷ್ಟ ಕ್ಲೇಶಹರ ಭೃತ್ಯಾಭೀಷ್ಟದ ।
ವೃಷ್ಣಿಕುಲೇಶನ ನಿಷ್ಠೆಯಲಿಂದ ೪

ಉಂಬೂವ ಉಡುವ ಕ್ರಿಯೆಗಳನೆಲ್ಲ । ಹಂಬಲಿಸುವುದೆಲ್ಲ
ಚುಂಬಿಸಿ ಮಕ್ಕಳ ಮುದ್ದಿಪುದೆಲ್ಲ । ಬಿಂಬನದೆಂಬ ಸೊಲ್ಲ ।
ಬಿಂಬನು ಗುರು ಗೋವಿಂದ ವಿಠಲ – ಸೂ
ಕ್ಷ್ಮಾಂಬರದಲಿ ಮಾಡಿ ಮಾಡಿಪನೆಂದು ೫

೫೯

ಜಯ ಮಂಗಳಂ ನಿತ್ಯ । ಶುಭ ಮಂಗಳಂ ಪ

ಇಂದು ಭಾಗನಿವಾಸ । ಮಂದಜಾಸನೊಲ್ಲಾಸ
ಮಂದಿ ಜನ ಭಾಗವತ । ಬಂದು ಶ್ರೀ ಶ ।
ಕಂದರ್ಪ ಪಿತನಲ್ಲಿ । ಸಂದೇಹ ಪಡುವರಿಗೆ
ಬಂಧ ಸಿಂಧುವಿನಲ್ಲ । ಸಂಧಿಸುವಗೇ ೧

ಶಿಷ್ಟಜನ ಶ್ರೇಷ್ಠರಿಗೆ । ಅಟ್ಟುಳಿಯ ಕಳೆಯುವಗೆ
ಭ್ರಷ್ಟರಿಗೆ ಅತಿಕಷ್ಟ । ದಾತ ಅನಿವಿಷ್ಟ ।
ಶಿಷ್ಟವರ ಕೊಟ್ಟಂಥ । ಇಟ್ಟಂಗಿ ಪೀಠವನು
ಮೆಟ್ಟಿನಿಂತಿಹ ದೇವ । ವಿಠ್ಠಲನಿಗೇ ೨

ಪಂಢರಾಪುರಿ ಶ್ರೀದ । ಪುಂಡಲೀಕನಿಗೊಲದ
ಅಂಡಜ ವರವಾಹ । ತೊಂಡವರದ ।
ಗಂಡು ಗೊಡಲಿಯ ಪಿಡಿದ । ಭಂಡ ಕ್ಷತ್ರಿಯರಳಿದ
ಕುಂಡಲಿಯಶಯ್ಯ ಬ್ರ । ಹ್ಮಾಂಡ ದೊಡೆಯಗೆ ೩

ದಾಸವರ ಪುರಂದರಗೆ । ಮೀಸಲೆಂದೆನಿಪನಿಗೆ
ದೋಷಾತಿ ದೂರನಿಪ । ಶೇಷಶಯ್ಯನಿಗೆ
ಈಶ ಜೀವೈಕ್ಯವನು । ಸೂಸಿ ಪೇಳುವನಿಗೆ
ನಾಶವಿಲ್ಲದ ತಮದಿ । ಕ್ಲೇಶವೀವನಿಗೆ ೪

ಗೋವರ್ಧನೋದ್ಧಾರಿಗೆ । ಭಾವುಕರ ಅಘಹರಗೆ
ತಾವಕರನೆಂದೆಂದು । ಕಾವ ಹರಿಗೆ
ಗೋವುಗಳ ಕಾವ ಗುರು । ಗೋವಿಂದ ವಿಠಲಗೆ
ಮಾವಾರಿ ಎಂದೆನಿಪ । ಶ್ರೀವರನಿಗೇ ೫

೬೦

ಜಯ ಮಂಗಳಂ ನಿತ್ಯ ಶುಭ ಮಂಗಳಂ ಪ

ಮತ್ಸ್ಯಾವತಾರಿಗೆ । ವೇದ ಉದ್ಧಾರಿಗೇ
ಪೊತ್ತ ಬೆನ್ನಲಿ ಗಿರಿಯ । ಮುದ್ದು ಕೂರ್ಮನಿಗೇ ೧

ದನುಜ ಸಂಹಾರಿಗೇ । ಮಧು ಕೈಟಭಾರಿಗೇ
ವನದಿ ವಸನೆಯ ಪೊತ್ತ । ವರಹಾವತಾರಿಗೇ ೨

ಘೋರನ್ನ ಪೋಷಕಗೆ । ಧಾರುಣಿಯ ಬೇಡ್ಡವಗೆ
ಮೂರು ಲೋಕವನಳೆದ । ಮೂರ್ವಿಕ್ರಮ ನಿಗೇ ೩

ಕೊಡಲಿಯ ಪಿಡಿದಗೇ । ಅಡವಿಯನೆ ಸೇರ್ದಗೇ
ಮೃಡ ಸಖನು ಕಾಳೀಯ । ಹೆಡೆಯ ಮೆಟ್ಟಿದಗೇ ೪

ಬೆತ್ತಲೆ ನಿಂತವಗೆ । ಬುದ್ಧಾವತಾರಿಗೇ
ಉತ್ತಮ ಕಲ್ಕಿ ಗುರು । ಗೋವಿಂದ ವಿಠಲಗೇ ೫

೬೧

ಜ್ವರಹರಾಹ್ವಯನೆ ಶ್ರೀನಾರಸಿಂಹ
ಘೋರನಾಮಯ ಕಳೆದು – ಆರೋಗ್ಯವೀಯೊ ಪ

ರೋಗ ಹರ ನೀನೆಂದು _ ಆಗಮವು ಪೇಳುವುದು
ಯೋಗ ಭೋಗದ ರೂಪಿ _ ಭೋಗಿ ಗುರು ಬಿಂಬಾ ।
ವಾಗೀಶ ಮುನಿವಂದ್ಯ _ ಭೋಗಿ ಶಯನನೆ ದೇವ
ರೋಗ ಹರಿಸುವುದರಿದೆ _ ರೋಗಾರ್ತ ಶಿಶುಗೇ ೧

ನಾಗ ಗಿರಿಯಲಿ ವಾಸ – ನಾಗಭೂಷಣ ಸೇವ್ಯ

ನಾಗಾರಿ ವಾಹನನೆ – ಯೋಗಿ ವಂದ್ಯಾ ।
ಶೀಘ್ರದಲಿ ಶಿಶುವ ನಿ – ರೋಗಿಯೆನಿಸುವುದಯ್ಯ
ಬಾಗಿ ಬೇಡುವೆ ಹರಿಯೆ – ಭಾಗವತ ಪ್ರಿಯ ೨

ಈ ವಸುಮತಿಯ ಸಕಲ – ಜೀವರಂತರ್ಯಾಮಿ
ದೇವ ನರಹರಿ ಜ್ವರ ಹ – ರಾಹ್ವಯನು ಯೆನಿಸೀ ।
ಕಾವುತಿರೆ ಭಯವೇನು _ ತೀವ್ರ ಪಾಲಿಪುದಿವನ
ಗೋವ ಪಾಲಿಪ ಗುರು – ಗೋವಿಂದ ವಿಠಲ ೩

೬೨

ತನು ತೇರನಾಶ್ರಯಿಸುತ್ತ ನೀನು
ಮಾನಿಗಳಿಗಾಜ್ಞೆ । ಮಾಡಿ ನಡೆಸುತಾ ಪ

ಗುಣವೆ ವಾಕು ಮಾನಿ । ರೋಹಿಣೀ ಶಕಾಂಕ
ಕರ್ಣದೋಳು ತಾವು । ಪಾಶಪಾಣಿಯಾಗಿ ಅ.ಪ.

ಅಶ್ವರೂಪರಾಗಿ । ಸೂರ್ಯ ಸಂಜ್ಞೆದೇವಿ
ಅಶ್ವಿನೇಯ ಸಮ । ಗಣಪತಾತ ಸೂತ
ಅಶ್ವಮೊಗನು ತಾ । ಪ್ರಾಣ ನಾಮಕಾ
ಅಶ್ವ ಐದು ಎರಡ । ಚೋದಿಸೂವ ಹರಿಯೇ ೧

ಕರ್ಮಾಅನಾದಿಗನು । ಗುಣ್ಯವಾಗಿ ನೀನು
ಕಾರ್ಮಿಕನು ಆಗಿ । ಜೀವ ಋಣವನೂ
ಧರ್ಮ ಮಾರ್ಗದಿಂದ । ತಿದ್ದಿ ಭೋಗವಿತ್ತು
ನಿರ್ಮಲನ್ನ ಗೈದು । ಪೇರ್ಮೆಯಿಂದ ಪೊರೆವೆ ೨

ಜೀವರೂಪನಾಗಿ । ಜೀವ ಕರ್ಮ ಮಾಡಿ
ಶಾತ್ವೀಕರ ಸಹ । ಜೀವನಿಂದಲೂ

ದೇವಗೈಸಿ ಗುರು । ಗೋವಿಂದ ವಿಠಲ
ಶಾಶ್ವತದ ಸುಖ । ವೀವ ಕಾರುಣೀಕ ೩

೬೩

ತನು ಸದನದಿ ಪೀಠವಯ್ಯ । ಭಾನು ಕುಲೋದ್ಧೀಪಕ ಪ

ಅನಿಲನೆ ಜೀವನಾ ಮಹಾ । ಮಂಚನವು ರಮಾ ಶಯ್ಯಕೆ ಬಾ ಅ.ಪ.

ಸುರ ಪರಿವೃತನಾಗಿ ಹರಿಯೆ । ಸಾರಾಮೃತ ತವ ಸುನಾಮ
ಶರಣರೀಗೆ ಉಣಿಸುತ ದಯಾ । ಪರಿಪೂರ್ಣ ಪೊರೆವುದು ॥
ನಿರತಿಶಯಾನಂದ ಮೂರ್ತಿ । ಕರವ ಪಿಡಿದೂರ್ಮಿಗ
ಳೆರಡು ಮೂರನು ಪರಿಹರಿಸು ಹರಿಯೆ । ವರ ರಮಾರ್ಚಿತ ಪಾದ ೧

ಮಧು ವಿರೋಧಿ ವೇದಾಂತ । ವೇದ್ಯ ಸುಧಾ ಕಲಶ ಪಾಣಿ
ವಿಧಿ ಭವಾದಿ ವಂದ್ಯ ಚರಣ । ಅದುಭುತ ಚರ್ಯ ಹರಿಯೆ
ಪದದಿ ಸುರನದಿಯ ಪಡೆದವ । ನದಿಸುತ ಗೊಲಿದ ಮಹಿಮ
ಯದುಕುಲೋತ್ತಮ ಶ್ರೀ ಕೃಷ್ಣನೇ ಹದುಳದಲಿ ಪೊರೆ ಬಾ ೨

ತರಳ ದ್ರೌಪದಿಗೊಲಿದವನೆ । ಶೌರೀ ವರ ಅಹಲ್ಯಾ ವರದ
ಗುರು ಮಡದಿ ತಾರಾವರದ । ಶರಣರ್ಗೆ ಸುರಧೇನು ॥
ಪರಮ ಪಾತಕಿಯಾದವರ । ಪೊರೆದ ಮಹಾದಯವಂತ
ಪರಿಸರಾಂತರ್ಗತನೆ ಪೊರೆಯೊ । ಗುರು ಗೋವಿಂದ ವಿಠಲ ೩

೬೪

ತಮ್ಮಾ ನೀ ನೋಡಿದ್ಯಾ । ಒಮ್ಮನದಿಂದ
ಬೊಮ್ಮ ಮೂರುತಿ ಶ್ರೀ । ವಲ್ಲಭ ರಂಗನಾ ಪ

ಹಿಂಡು ದೈವರ ಗಂಡ । ಚಂಡ ವಿಕ್ರಮ ನಮ್ಮ
ಕೊಂಡಜ್ಜಿ ಬಳಿಲಿರುವ । ಪುಂಡರೀಕಾಕ್ಷನ ೧

ನೂಪುರ ಗೆಜ್ಜೆಪೆಂಡ್ಯ । ಆಪಾದ ಸೊಬಗಿಂದ
ಶ್ರೀಪತಿ ಮೆರೆಯುವ । ಭೂಪತಿ ವರದನ ೨

ಇಕ್ಷು ಚಾಪನ ಪಿತನ । ಅಕ್ಷಯ ಫಲದವನ
ವಕ್ಷದೋಳ್ ಧರಿಸೀಹ । ಲಕ್ಷ್ಮೀ ಉಳ್ಳವನ ೩

ಕೊರಳಲ್ಲಿ ಕೌಸ್ತುಭ । ಕರ್ಣದಿ ಕುಂಡಲ
ಶಿರದಲ್ಲಿ ಕಿರೀಟ । ಧರಿಸಿ ಮೆರೆವವನ ೪

ಪವನಾಂತರಂಗನ । ಪಾವನ ಚರಿತನ
ಭುವನ ಮೋಹನ ಗುರು । ಗೋವಿಂದ ವಿಠಲನ ೫

೬೫

ತಾರಕ – ಹರಿ – ಪೊರೆಯೋ । ಹೇ ನರಹರಿ
ತಾರಕ – ಹರಿ – ಪೊರೆಯೋ ||ಪ||

ಸಾರಾಸಾರವ ಕಾಣೆನೊ ನರಸಿಂಗ
ಸಾರಿದೆ ತವ ಪದ ಸರಸಿಜ ರಂಗ ಅ.ಪ.

ಆರಿಗ್ಯಾರೆಲೊ ದೇವ । ಭಾರ ಕರ್ತೃವೆ ಹರಿ
ಭರಿಸುವೆ ಸಕಲರ । ಭರ್ತೃವೆಂದೆನಿಸೀ
ಹರಣ ಬಾಂಧವರನ । ಪೊರೆವೆನೆಂಬ ಹಮ್ಮತಿಯ
ಹರಿಸಿ ಎನ್ನಯ ದುಷ್ಟ । ಕಾರಕ ಭ್ರಮ ಬಿಡಿಸೊ ೧

ಇತ್ತು ಇಂದ್ರಿಯಗಳ । ತತ್ವರ ಜೋಡಿಸಿ
ಹೊತ್ತು ಹೊತ್ತಿಗೆ ತುತ್ತು । ಇತ್ತು ರಕ್ಷಿಸುತಿರೇ ।

ಮತ್ತೆ ಮದಿಂದ್ರಿಯವೇ । ಕರ್ತೃ ಎಂತೆಂದೊಂಬ
ಮತಿ ಭ್ರಮ ಬಿಡಿಸುತ್ತ । ಹರಿಸೊ ಕ್ರಿಯಾ ಭ್ರಮ ೨

ಕಾಯ ಬಂಧುಗಳೆಲ್ಲ । ಪ್ರೀಯರೆನಿಸಿಗೊಂಬ
ದ್ರವ್ಯ ವಿಭ್ರಮ ಬಿಡಿಸೋ । ಕಾಯಜ ಪಿತನೇ
ದಿವ್ಯ ಮೂರುತಿ ಗುರು । ಗೋವಿಂದ ವಿಠಲನೇ
ಭವ್ಯ ರೂಪವ ತೋರಿ । ದರ್ವಿ ಜೀವನ ಕಾಯೊ ೩

೬೬

ತಾಸು ಬಾರಿಸುತಿದೆ ಕೇಳೋ ಮನುಜ
ತಾಸು ಬಾರಿಸುತಿದೆ ಕೇಳೋ ಪ

ಮೋಸ ಹೋಗಲು ಬೇಡ । ಆಶಪಾಶಕೆ ಶಿಲ್ಕಿ
ವಾಸುದೇವನ ಮನ । ಒಲಿಸುವುದೆಂದೂ ಅ.ಪ.

ಶ್ರೀ ತರುಣೇಶನ ಜಗಕೇಕನೆನಿಪನ
ಮಾತು ಮಾತಿಗೆ ನೆನೆ ಮನುಜಾ ।
ಗಾತುರಗೋಸುಗ ಆತುರ ಪಡದಲೆ
ಪ್ರೀತಿ ಬಿಡಿಸೊ ಸಂಕೀರ್ತಿಸಿ ಎಂದು ೧

ಕಾಲಾಖ್ಯ ಮಹ ವ್ಯಾಳನು ಕಾದಿಹನೂ
ಹಾಳು ಹರಟೆಲಿ ಕಾಲ ಕಳೆಯ ಬೇಡ ॥
ವ್ಯಾಳ ಶಯ್ಯ ಶ್ರೀ ವೆಂಕಟ ನಿಲಯನ ।
ವ್ಯಾಳೆ ವ್ಯಾಳೆಕೆ ನೆನೆ ಅಲಸದಲೆಂದು ೨

ಹೆಣ್ಣು ಹೊನ್ನು ಮಣ್ಣುಗಳ ನೆಚ್ಚಿ
ಬನ್ನ ಬಹಳವ ಪಡವಿಯೊ ಮನುಜ
ಮುನ್ನವೆ ಯೋಚಿಸಿ ಎಚ್ಚರದಲ್ಲಿ ।
ಪನ್ನಗಶಯ್ಯನ ನೆನೆವುದೆಂದೂ ೩

ನಂದತೀರ್ಥಮತ ಸಿಂಧುವಿನೋಳ್ ನಲಿಯೊ
ಎಂದೆಂದಿಗು ಭವ ಸಿಂಧುವ ಕಳೆಯೋ
ನಂದವನೀಯುವ ಇಂದಿರೆಯರಸನ
ಚಂದದ ಚರಣಾರವಿಂದತುತಿಪುದೆಂದು ೪

ತನುವು ಅಸ್ಥಿರ ಮನವು ಚಂಚಲವೊ
ಧನವೂ ಸಾಧನಗಳು ಒಲು ದುಷ್ಟಾ ।
ಘನ ಮಹಿಮನು ಗುರು ಗೋವಿಂದ ವಿಠಲನ
ದಿನ ದಿನ ನೆನೆದು ಸುಖಿಸುವುದೆಂದೂ ೫

೬೭

ದಯ ಬಾರದೇಕೋ ಹರೀ । ಹೇ ಮುರಾರೀ ಪ

ದಯಾ ಪೂರ್ಣನೆಂದೂ । ತ್ರಯ ಪೇಳ್ವುದಯ್ಯ ಅ.ಪ.

ಕಾಮದಿಂದಲೀ ಹತ । ನಾಗಿಹೆ ತಾತ ।
ಸೋಮಶೇಖರ ನುತ । ಬಕ ವೈರಿ ಪ್ರೀತ ॥
ಯಾಮ ಯಾಮಕೆ ತವ । ನಾಮ ಸ್ಮೃತಿಯನಿತ್ತು
ಕಾಮ ಜನಕ ಸಾರ್ವ । ಭೌಮನೆ ಕಾಯೋ ೧

ವಸ್ತುವೆಂದರೆ ನೀನೆ ಸರಿ । ನೀನೆ ದೈತ್ಯಾರಿ
ಸ್ವಸ್ತಿವಾಚಕ ಶ್ರೀ ಹರೀ । ಹೇ ಶೌರೀ ॥
ವಾಸ್ತು ದೇವರೊಳು । ಶಿಸ್ತಿಗೆ ಬಿಂಬಿಸೆ
ವಾಸ್ತು ನಿರ್ಮಾಣಕೆ । ಅಸ್ತು ಎಂದೆನಿಸೋ ೨

ಧಾನ್ಯದನಾಗೀಹ । ಧಾರುಣಿ ಎನಿಸೀಹ
ಮಣ್ಣಿಗೆ ಪರ್ಯಾಯ । ಹೊನ್ನನಿತ್ತಿಹೆ ಜೀಯ
ನಿನ್ನರ್ಚನೆಯ ಗೃಹ । ವನ್ನೂ ನಿರ್ಮಿಸಿ ಪೊರೆ
ಮಾನ್ಯ ಮಾನದ ಗುರು । ಗೋವಿಂದ ವಿಠಲನೆ ೩

೬೮

ದಯ ಬೀರೋ । ದಯಾ ನಿಧೆ । ದಯ ಬೀರೋ ಪ

ದಯ ಬೀರೆ ದುರ್ಭವ । ಭಯ ಪರಿಹರ ನಿರ್
ಭಯನಾಮಕ ಹರಿ । ಹಯಮುಖ ಕೃಷ್ಣಯ್ಯ ಅ.ಪ.

ಪಾಪಿ ನಾನಹುದೋ । ಹೇ ಪಾವನ ಮೂರ್ತೇ
ನೀ ಪೋಷಿಸದಿರೆ । ಕಾಪಾಡೋರ್‍ಯಾರೋ ೧

ದಿನದಿನಕನೇಕ । ಲಂಕಾರ ಭೂಷಿತ
ದಿನ ಮಣಿ ಅಮಿತಾಭ । ಘನ ಮಹಿಮನೆ ಕೃಷ್ಣ ೨

ದಶಮತಿ ಮುನಿ ಕರ । ಬಿಸಜ ಸಂಪೂಜ್ಯನೆ
ಹಸಗೆಡಿಸುವ ದುರ್ । ವಿಷಯವ ಹರಿಸೀ ೩

ನಿರ್ಮಲ ಮಹಿಮ ಕು । ಕರ್ಮಗಳೆಲ್ಲ ಸು
ಕರ್ಮವೆಂದೆನಿಸಯ್ಯ । ಕರ್ಮ ನಾಮಕನೇ ೪

ಕಡಗೋಲು ನೇಣನು । ಪಿಡಿದು ಭಕ್ತೀ ಎಂಬ
ಮುಡುಪ ಕೊಳ್ಳುವ ಗುರು । ಗೋವಿಂದ ವಿಠಲಯ್ಯ ೫

೬೯

(ಕಂಗಳಿದ್ಯಾತಕೋ........ ಎಂಬಂತೆ)

ದಾಸನೆಂದೆನಿಸೊ ಎನ್ನಾ । ಶ್ರೀಶ ಹೇ ಸರ್ವೇಶ ಪ

ಹೇಸಿ ವಿಷಯದಿ ಬಹು । ಕ್ಲೇಶಗಳಿಗೊಳಗಾಗಿ
ಘಾಸಿ ಪಟ್ಟಿಹೆನೊ ಹರಿ । ಪೋಷಿಸೂವುದು ಧೊರಿ ಅ.ಪ.

ಏಸು ಜನ್ಮದ ಸುಕೃತದಿಂಗಲಿ
ಲೇಸಾದ ಮಧ್ವ ಮತದಿ ಬಂದು ॥
ಭಾಸುರ ತತ್ವ ಪ್ರಕಾಶಿಸಿ ಪಾಹಿ
ದಾಸ ದಾಸರ ಪ್ರೀಯ ಪಿಡಿಕೈಯ್ಯ ೧

ಜ್ಞಾನ ದಾನವ ಬೇಡ್ವೆ । ಭಾವವನ
ಜ್ಞಾನದಿಂದಲೆ ಕಡಿವೆ ಹರಿಯೆ ॥
ಮೌನಿಕುಲ ಸನ್ಮಾನ್ಯ ಮಾನವ
ಜ್ಞಾನಾನಂದನೆ ವ ಪುಷ ಕಾಯೊ ೨

ಬಾದರಾಯಣ ಭವ್ಯ ರೂಪಾ
ಪಾದಕೆ ನಮಿಪೆನೊ ಶ್ರೀಪಾ
ಮೋದಮುನಿಯ ನುತ । ಪ್ರಮೋದನೆ
ಮೋದವೀಯೋ ಗುರು । ಗೋವಿಂದ ವಿಠಲ ೩

೭೦

ದೂರ ಮಾಡುವರೇ ಶ್ರೀಶ ಪ

ದೂರ ಮಾಡುವರೇ
ದೂರ ಮಾಡುವರೇನೋ ಶ್ರೀಶ
ದಾರಿ ಕಾಣದೆ ಮೊರೆಯನಿಡುವೆ
ಆರು ಕಾಯುವರಿಲ್ಲ ಶ್ರೀಶ
ಸಾರಸಾಕ್ಷ ಸಲಹೆ ಬೇಡುವೇ ಅ.ಪ.

ಸಕ್ತಿ ಇಲ್ಲವೋ । ನಿನ್ನೊಳಾ
ಸಕ್ತಿ ಇಲ್ಲವೋ ।
ಸಕ್ತಿ ನಿನ್ನಲ್ಲಿಲ್ಲದೇಲೇ
ಮುಕ್ತಿ ಇಲ್ಲವೆಂದು ಶೃತಿಯು
ಉಕ್ತಿ ಕೇಳಿ ಕೇಳಿದಾಗ್ಯು ವಿ–

ರಕ್ತಿ ಪುಟ್ಟಲಿಲ್ಲ ಎನಗೆ
ಭಕ್ತಿಮಾರ್ಗ ದೂರವಾಯ್ತೊ ೧

ದುಷ್ಟ ವಿಷಯದೀ । ಮನವು
ಅಟ್ಟಿ ಪೋಗೋದೋ ।
ಎಷ್ಟು ಪೇಳಿದಾರೂ ಮನವು
ನೆಟ್ಟಗಾಗೋ ಪರಿಯ ಕಾಣೆ
ಸೃಷ್ಟಿಗೀಶ ಮನವ ಅಭಿಧ
ಸೊಟ್ಟ ಮನವ ಸರಿಯ ಪಡಿಸಿ ।
ಶ್ರೇಷ್ಠ ನನ್ನ ಮಾಡದ್ಹಾಂಗೆ ೨

ಕೈಯ್ಯ ಬಿಡುವರೇ । ದಯಾಳು ವಿಷಯ
ಧುಯ್ಯಲು ಕಳೆಯದೇ ।
ಪ್ರೇರ್ಯ ಪ್ರೇರಕನಾಗಿ ನೀನು
ಮಯ್ಯ ಮರೆಸಿ ಧೈರ್ಯಗೆಡಿಸೆ
ಆರ್ಯರಿದನ ಸಯ್ಯೆಂಬೊರೇನೋ
ಅಯ್ಯ ಕೈಯ್ಯ ಬಿಡದೆ ಕಾಯೋ ।
ಗುರು ಗೋವಿಂದ ವಿಠಲ ೩

೭೧

ಧನ್ವಂತ್ರಿ ನಾ ನಿನ್ನ ಅಣುಗನೋ – ತ್ರೈ
ಗುಣದೂರ ಅಣುಗಣು ಘನಘನಾ ಪ

ಆಲಯ ತ್ಯಜಿಸೆಂದು ಧನ್ವಂತ್ರಿ । ಚಿಕಿ
ತ್ಸಾಲಯ ಪೋಗೆಂದು ಧನ್ವಂತ್ರಿ
ವ್ಯಾಳೆ ನೋಡಿ ಪೇಳ್ದೆ ಧನ್ವಂತ್ರಿ । ಎನ್ನ
ಮೇಲೆ ಕರುಣವ ಮಾಡ್ದೆ ಭವ ಹಂತ್ರಿ ೧

ಅಪಮೃತ್ ಕಳೆದೆಯೊ ಧನ್ವಂತ್ರಿ । ಬಲು
ತಪಸಿ ಮಾತೆ ಶೋಕ ಧನ್ವಂತ್ರೀ ।
ಅಪಹರಿಸಿ ಸುಖ ತೋರ್ದೆ ಧನ್ವಂತ್ರಿ । ಬಲು
ಕೃಪಣ ವತ್ಸಲನಹುದೊ ಭವ ಹಂತ್ರೀ ೨

ಸ್ನಾನ ಸಂಧ್ಯಾವಿಲ್ಲ ಧನ್ವಂತ್ರೀ । ಸೂಕ್ಷ್ಮ
ಸ್ನಾನಾನು ಸಂಧಾನ ಧನ್ವಂತ್ರೀ ।
ಜ್ಞಾನಾವೆ ಪಾಲಿಸೊ ಧನ್ವಂತ್ರೀ । ಈಸು
ಜ್ಞಾನವೇ ಸ್ಥಿರವಿರಲಿ ಭವಹಂತ್ರೀ ೩

ಸತಿಸುತರ ಪ್ರಾರ್ಥನೆಗೆ ಧನ್ವಂತ್ರೀ । ಅತಿ
ಹಿತದಿಂದ ಸಲಹೀದೆ ಧನ್ವಂತ್ರೀ ।
ಗತಿಪ್ರದ ಬಿರುದಾಂಕ ಧನ್ವಂತ್ರೀ । ಮಮ
ರತಿ ಇರಲಿ ತವ ಪದದಿ ಭವಹಂತ್ರೀ ೪

ಭವರೋಗ ಭೇಷಜ ಧನ್ವಂತ್ರೀ । ಎನ್ನ
ಅವಗುಣವೆಣಿಸೋರೆ ಧನ್ವಂತ್ರೀ ।
ಧೃವ ಬಲಿ ಕರಿವರದ ಧನ್ವಂತ್ರೀ । ಗುರು
ಗೋವಿಂದ ವಿಠಲನೇ ಧನ್ವಂತ್ರೀ ೫

೭೨

ಧ್ಯಾನ ಮಾಳ್ಪುದು ಮನಸಾ । ಹೃದಯಾರವಿಂದದಿ
ಸಾನು ಕೂಲಿಪ ಅರಸ । ವಿಸ್ತರಿಸಿ ಗುಣಗಳ
ಮೌನಿಯಾಗುತ ಸಹಸ । ಚಿಂತಿಸೆಲೊ ಅನಿಶಾ ಪ

ಸಾನು ರಾಗದಿ ರೂಪಗುಣಗಳ ।
ಮಾನಮೇಯ ಜ್ಞಾನ ಸಹಿತದಿ
ಏನು ಫಲದನು ರಾಗವಿಲ್ಲದೆ ।
ಶ್ರೀನಿವಾಸನ ಭಕುತಿಯಿಂದಲಿ ಅ.ಪ.

ಮೃಗದ ಚರ್ಮವ ಹಾಸಿ । ಕುಶದುಪರಿ ಅನ್ಯವ
ಒಗೆದ ವಸನವ ಹಾಸಿ । ಪದುಮಾಸನಾದಲಿ
ಒಗೆಯ ಸುಖಪ್ರದವೆನಿಸಿ । ಇರುವಂಥ ಆಸನ
ಹಗರಣಿಲ್ಲದೆ ರಚಿಸಿ । ಅಲ್ಲಿ ಸುಖವಾಸೀ ॥
ಕೈಗಳ್ಕೆಡಿಡುತಲ್ಲಿ ತನ ಉ । ತ್ಸಂಗ ವಾಶ್ರಯಿಸುತ ಸಮತನು
ಕಂಗಳೆರಡರ ನಡುವೆ ನತ ನಾ । ಸಾಗ್ರದಲಿ ದೃಷ್ಟಿಯನೆ ಇಡುತ ೧

ಪ್ರಾಣ ಪ್ರಾಣನ ಪ್ರೀತಿ । ಇಚ್ಛಿಸುವ ಮಾನವ
ಪ್ರಾಣ ನಿಯಮನ ವಾರ್ತೆ । ತಿಳಿಯುತ ಮನದಲಿ
ಪ್ರಾಣ ರೇಚಕ ನೀತಿ । ಪೂರಕವು ಕುಂಭಕ
ಜಾಣ ತನದಲಿ ಪೂರ್ತಿ । ಗೈದೋಂಕಾರ ಕೀರ್ತಿ ॥
ಪ್ರಾಣ ನಿರುತದಿ ಮಾಳ್ಪ ಅನು ಸಂಧಾನ ತಿಳಿದಾ ಚರಿಸೆ ವಿಹಿತದಿ
ಪ್ರಾಣ ಸಂಯವ ಭಕ್ತಿ ಪೂರ್ವ ವಿ । ಧಾನ ಮಾಡಲು ವೇಗ ವಲಿದನು ೨

ಹತ್ತು ಸಲ ಪ್ರತಿಸವನ । ಪ್ರಾಣನ್ನ ಸಂಯವ
ಕರ್ತೃ ಹೀಗೆ ತ್ರಿಸದನ ಮಾಸಕ್ಕೆ ಮುಂಚೆಯೆ
ಭರ್ತೃವಾಗಿಹ ಪ್ರಾಣ । ವಶನ ಹನು ಅವಗೆಂದು
ಉಕ್ತವಿದು ಸನ್ಮಾನ । ತಿಳಿದಾ ಚರಿಸು ಧ್ಯಾನ ॥
ಪೊತ್ತು ಕದಳಿಯ ಮೊಗ್ಗಿನಾಕೃತಿ । ಮತ್ತೆ ನಡು ಸತ್ಕರ್ಣಿಕವು ಇಹ
ಹೃತ್ಸ ಅಷ್ಟದಳಾಖ್ಯ ಕಮಲವ । ಎತ್ತುವುದು – ಉದಯಾರ್ಕ ಮಂತ್ರದಿ ೩

ಚಿಂತೆ ಕರ್ಣಿಕೆಯಲ್ಲಿ । ಮಾರ್ತಾಂಡ ಮಂಡಲ
ಅಂತೆ ಅದರುಪರೀಲಿ । ತಾರೇಶ ಮಂಡಲ
ಚಿಂತೆ ತದ್ದುಪರೀಲಿ । ಮಂಡಲ ವಿಭಾವಸು
ಅಂತೆ ತನ್ನಡುವೀಲಿ । ಹರಿಪದಾಜ್ಜಾಳಿ ॥
ಯಂತೆ ಚಿತ್ತ ಸ್ಥೈರ್ಯದಿಂದಲಿ । ಚಿಂತಿಸುತ ಗುಣರೂಪ ಕ್ರಿಯೆಗಳ
ಕ್ರಾಂತನಾಗುವ ಹರಿಯ ಚರಣದಿ । ಶಾಂತ ಸತ್ಸಮಾಧಿಯನು ಪಡೆ ೪

ಸಾರತಮ ಸುಂದರ । ಮಂದಸ್ಮಿತಾನನ
ವೀರ ಚತುರ್ಭುಜಾಧಾರ । ಬಾಹುಗಳು ಧೀರ್ಘವು

ಚಾರು ಕಂಬು ಕಂಧರ । ಸುಂದರ ಕಪೋಲವು
ಚಾರು ಕುಂಡಲ ಮಕರ । ಶೋಭಿ ಕರ್ಣಾಪಾರ ॥
ಮಾರಪಿತ ಶಿರಿವತ್ಸ ಲಾಂಛನ । ಶ್ರೀ ರಮಾಪತೆ ಶ್ಯಾಮಸುಂದರ
ಕಾರಣಿಕ ಕನಕಾಂಬರಾಧರ । ಹಾರ ಸುಮನ ವಿಶಾಲ ವಕ್ಷನ ೫

ಹಸ್ತ ಬಲ ಮೇಲ್ ಗದವು । ಎಡದಲ್ಲಿ ಪದ್ಮವು
ಮತ್ತೆ ಕಂಬು ಚಕ್ರವು । ವನಮಾಲೆ ಭೂಷಿತ
ಕೌಸ್ತುಭದ ಪ್ರಭೆಯುತವು । ನೂಪುರ ಸಂಶೋಭಿತ
ವ್ಯಕ್ತ ಪ್ರಭೆಯುತ ಪದವು । ಸರ್ವ ಸುಂದರವೂ ॥
ಮಸ್ತಕದಿ ಕಿರೀಟ ಕಾಂತಿಯು । ಹಸ್ತದಲಿ ಆಭರಣ ಕಟಕ
ಮತ್ತೆ ಕಟಿ ಸೂತ್ರಾಂಗದ್ಯೆರ್ಯುತ । ವಸ್ತು ಸರ್ವಾಧಾರ ಹೃದ್ಯನ ೬

ಧ್ಯಾನ ಬಹು ದುರ್ಭಾವ್ಯ । ಶ್ರೀಹರಿ ವಿಭೂತಿಯು
ಮನಕೆ ದುರ್ವಿಜ್ಞೇಯ । ಪೆಸರಿಹುದು ಕಾರಣ
ಅನಘನಂಗವು ದೇಹ । ಒಂದೊಂದು ಸ್ಥಿರ ಪಡೆ
ಪುನಹ ಸರ್ವಾವಯದ ಸ್ಥಿರ ತೆರದಿ ಧೇಯ ॥
ಎಣಿಸು ಪ್ರತ್ಯಾಹರಣ ಕಾರ್ಯವ । ವಿನಹವಿದು ಮನಸ್ಥೈರ್ಯವಾಗದು
ಅನಿಲದಯ ಸಂಪಾದಿಸುತ್ತಲಿ । ಗುಣಿಸು ನೈರಂತರ್ಯವೀತೆರ ೭

ಶಿಷ್ಟನಾಗುತಲಿನ್ನು । ಅನ್ಯತ್ರ ಮನವನು
ಸುಷ್ಠು ಸೆಳೆಯುತಲಿನ್ನು । ಹರಿಪಾದ ವನಜದಿ
ಘಟ್ಟಿ ಇಡುತಲಿ ಮುನ್ನ । ಸುಸ್ಥಿರದ ಚಿತ್ತದಿ ॥
ಪ್ರೇಷ್ಟ ತಮ ಅವನೆನ್ನು । ಸರ್ವಕಧಿಕೆನು
ನಷ್ಟವಾಗುತ ಭ್ರಾಮಕ ತ್ರಯ । ಶ್ರೇಷ್ಠ ಧ್ಯಾನಾಸಕ್ತನಾಗಲು
ದೃಷ್ಟಿಸುತಲಿ ತತ್ವಪತಿಗಳ । ಇಷ್ಟ ಮೂರ್ತಿಯ ಕಾಂಬೆ ಕೊನೆಗೆ ೮

ಯೋಗವಿಹುದು ಸಮಾಧಿ । ಅಭ್ಯಾಸ ಸಾಧ್ಯ ನಿ
ಯೋಗಿಸಿದನ ನಿರುತದಿ । ಸುಸ್ಥಿರದಿ ಚಿತ್ತವ
ಯೋಗಿಸ್ಥರಿ ಚರಣದಿ । ಏನೊಂದು ಬೇಡದೆ
ವೇಗ ಹರಿ ರೂಪದಿ । ನೋಡವನ ದಯದಿ ॥

ಆಗಮೈಕ ಸುವೇದ್ಯ ಭಕ್ತಿಯ । ಯೋಗ ಕೊಲಿಯುತ ಸಾಧಕಂಗೆ
ಯೋಗಿ ಗುರು ಗೋವಿಂದ ವಿಠ್ಠಲ । ವೇಗತನ ದರ್ಶನವ ಪಾಲಿಪ ೯

೭೩

ನಮಿಸು ಮನವೆ ನೃಹರಿ ರೂಪವಾ ।
ರೋಗ ಹರಣನಾ ಪ

ಅಮಿತ ಮಹಿಮ ದಾನವ ಹರಣ ।
ಸುರಪ ಪಾಲಕನಾ ಅ.ಪ.

ಸಕಲ ಸುರರ ದನುಜ ಭಾದಿಸೆ । ಹರಿಗೆ ಮೊರೆಯಿಡೇ
ಅಕಳಂಕ ಮಹಿಮ ಅಭಯವಿತ್ತು । ಅವರ ಕಳುಹಿದಾ ೧

ಹಿರಣ್ಯಕಶಿಪುನುದರದಲ್ಲಿ । ಭಕುತ ಜನಿಸಲೂ
ಶರಣ್ಯ ಶ್ರೀಹರಿಯ ತುತಿಸಿ । ಸುರರು ಪಾಡಿದರೂ ೨

ಪಿತನು ತನ್ನ ಸುತನ ಭಾದಿಸೆ । ಹರಿಯೆ ಚರಣವಾ
ಸತತ ನಮಿಸಿ ಭಜಿಸಿ ಭರದಿ । ಕಂಬದಿ ಕರೆದನೂ ೩

ಭೃತ್ಯನ್ನೊಚನ ಸತ್ಯ ಮಾಡೆ । ಸ್ತಂಭವ ಸೀಳುತಾ
ವ್ಯತ್ಯಸ್ತವಾಗೆ ಸಕಲರ್ ಹೃದಯ । ಘಡ ಘಡೀಸುತಾ ೪

ದೈತ್ಯನುದರ ಬಗೆದು ಕರುಳ । ಮಾಲೆ ಧರಿಸುತಾ
ನೃತ್ಯವಾಡಿ ತನ್ನ ಪ್ರಳಯ ರೂಪವ ತೋರಿದಾ ೫

ಅಕ್ಷರಜ್ಞೆ ಲಕುಮಿ ದೇವಿ । ಪಕ್ಷಿವಾಹನನಾ
ಲಕ್ಷಣ ವೀಕ್ಷಿಸಿ ಕುಕ್ಷಿಯ ಬಿಡುತ । ವತ್ಸನ ನೂಕಿದಳು ೬

ಮುದದಿ ಅವನ ತೊಡೆಯಳಿಟ್ಟು । ಮೋದ ಪಡಿಸುತಾ
ಸದಯದಿಂದ ಗೈದ ಅವನ । ಭಕ್ತ ಶ್ರೇಷ್ಟನಾ ೭

ಭಕುತಾ ಜನರ ಭೀಷ್ಟವೀವ । ಅಕುಟಿಲಾತ್ಮನೂ
ಪ್ರಕಟ ಕರಿಗಿರೀಯ ಹರಿಯು । ರುಕುಮಿಣೀ ಪತಿ ೮

ಪುರುಹುತನೂ ಪ್ರಹ್ಲಾದವರದ । ತೋರೊ ತವ ರೂಪಾ ।
ಗುರು ಗೋವಿಂದ ವಿಠಲ ಭಜಿಪೆ । ಹರಿಸೊ ಭವ ಕೂಪಾ ೯

೭೪

ನರಸಿಂಗಪುರ ವಾಸ । ಕಯಾಧು ಶಿಶುಪೋಷ
ಕರುಣಾಮಯ ಸುವಪುಷ । ಪರಿಪಾಲಿಸು ಮೇಶ ಪ

ಶರಧಿಜೆ ಲಕುಮೀಶ ಮೃತ್ಯುಂಜಯಗೆ ಬಿಂಬ
ಶರಣ ಜನಾಬ್ಧಿ ಭೇಶ । ಸರಸಿಜ ಭವಾದೀಶ ಅ.ಪ.

ಕೃಷ್ಣಾತೀರ ವಾಸ । ಕೃಷ್ಣೆಯ ಮಾನ ಪೋಷ
ಜಿಷ್ಣು ಸಾಹಸ ಭಾಸ । ವೃಷ್ಣಿ ಕುಲಕೆ ಭೂಷ ೧

ಪಾಲಸಾಗರ ಶಾಯಿ । ಅರಳೆಲೆ ಮಾಗಾಯಿ ।
ವ್ಯಾಳದ ಮೇಲೆ ಶಾಯಿ । ಕೋಳ ನೃಹರಿ ಕಾಯಿ ೨

ಕೋಮಲ ಶುಭ ಕಾಯ । ಹೇಮ ಕಶಿಪು ಕಾಯ
ನೇಮದೊಳಗೆ ಶೀಳ್ದ । ಕಾಮಿತ ಫಲಪ್ರದ ೩

ಕಾಡುವ ರಕ್ಕಸನ । ಒಡಲ ಶೀಳಲು ಬಾಹು
ಷೋಡಶ ಧರಿಸಿದ । ಗಾಢ ಕಾರಣವೇನೊ ೪

ದರ್ಶದಿನದೊಳಾ । ದರ್ಶ ದಾಸರ ದಿನ
ದರ್ಶನ ನೀನಿತ್ತು । ಸ್ಪರ್ಶ ಪೂಜೆಯ ಕೊಂಡೆ ೫

ಜ್ವಾಲಾ ನೃಕೇಸರಿ । ಹಾಲಾಹಲವು ಭವ
ಜಾಲ ದೊಳ್ದಾಕದಿರು । ಕೇಳುವೆ ವರ ನಿನ್ನ ೬

ಗೋವರ್ಧನೋದ್ಧರ । ಗೋವ್ಗಳ ಪಾಲ ಗುರು
ಗೋವಿಂದ ವಿಠಲನೆ । ಭಾವದೊಳಗೆ ತೋರೊ ೭

೭೫

ತೊರವಿ ನರಸಿಂಹನ ಸ್ತೋತ್ರ

ನರಹರೀ । ಪಾಲಿಸೊ ಎನ್ನ । ನರಹರೀ ಪ

ನರಹರೀ । ನಮಿಸೂವೆ ನಿನ್ನ । ಚಾರು
ಚರಣ ಕಮಲಕ್ಕೆ ಮುನ್ನ । ಅಹ
ತೊರವಿ ಕ್ಷೇತ್ರದಲ್ಲಿ । ಪರಿಪರಿ ಭಕುತರ
ಮೊರೆಯ ಕೇಳ್ಕರುಣದಿ । ವರವ ನೀಡುತಲಿಹ ಅ.ಪ.

ಪೂರ್ವ ಸಾಲಿಗ್ರಾಮ ರೂಪ । ದಲ್ಲಿ
ದೂರ್ವಾಸ ಪೂಜಿತ । ರೂಪ । ಇದ್ದು
ಓರ್ವ ಭಕ್ತನಿಗೆ ಸಲ್ಲಾಪ । ತೇಜ
ಗೈವದ ಕೇಳ್ವದು ಅಪರೂಪ । ಅಹ
ಊರ್ವಿಯೊಳ್ ಚಿಮ್ಮಲಗಿ । ಸರ್ವಾಧಿಕವು ಕ್ಷೇತ್ರ
ಇರ್ವೆ ನಾನಲ್ಲೀಗ । ತರ್ವೋದು ತೊರವೀಗೆ ೧

ಸೊಲ್ಲ ಲಾಲಿಸಿ ಗಾಢ ಭಕ್ತ । ಎದ್ದು
ಚೆಲ್ಲೀದ ವಾರ್ತೆ ಸರ್ವತ್ರ । ಜನ
ರಲ್ಲಸ ಗೊಳದೆ ಮುಂದತ್ತ । ಹಸಿ
ಹುಲ್ಲನು ತೆಂಕದಿಶಿಯಿತ್ತ । ಅಹ
ಚೆಲ್ಲುತ ಪೋಗುತಿರೆ । ಜ್ವಲೀಸಿತದುಚಿ
ಮ್ಮಲ್ಲಿಗಿ ಊರ್ಬಳಿ । ಒಳ್ಳೆ ಕೃಷ್ಣಾತೀರ ೨

ಸ್ವಪ್ನ ಸೂಚಿತ ತಾಣ ಬಗೆದು । ನೋಡೆ
ಅಪ್ಪ ನೃಹರಿ ಕಂಡನಂದು । ಭಕ್ತ

ರಪ್ಪಿ ಆನಂದಾಶ್ರು ಬಿಂಧು । ಕೈ
ಚಪ್ಪಾಳೆ ಬಡಿದುಘೇಯೆಂದು । ಆಹ
ಅಪ್ಪಾರ ಮಹಿಮನ । ಗೊಪ್ಪಾದ ಘನಮೂರ್ತಿ
ಉಪ್ಪರಿ ತಂದಿಡುತ । ದರ್ಪದಿ ನಿಂತರು ೩

ಶಿರಿ ಹಾಗೂ ಪ್ರಹ್ಲಾದರಾಯ । ಯುಕ್ತ
ಹಿರಣ್ಯಕನ ತನ್ನ ತೊಡೆಯ । ಮೇಲೆ
ಇರಿಸಿ ಉದರ ಸೀಳ್ದ ಬಗೆಯ । ಕೇಳಿ
ಕರುಳನು ಮಾಲೆಯ ಪರಿಯ । ಆಹ
ಧರಿಸುತ್ತ ತೋರ್ದನು । ಹಿರಣ್ಯಕಶಿಪೂಜ
ತರಳ ಭಕ್ತನ ತೆರ । ತರಳನರಿದಿಷ್ಟೆಂದು ೪

ಶಿಷ್ಟ ಮತ್ಸ್ಯಾವತಾರ । ಯುಕ್ತ
ಶ್ರೇಷ್ಠ ಪ್ರಭಾವಳಿಹಾರ । ಸುವಿ
ಶಿಷ್ಟದಿ ನರ ಮೃಗಾಕಾರ । ನಾಗಿ
ಅಷ್ಟವು ಭುಜಯುಕ್ತಾಕಾರ । ಆಹ
ಶಿಷ್ಟ ಭಕ್ತರಿಂದ ಕಷ್ಟವಿಲ್ಲದೆ ತೆರಳಿ
ಶ್ರೇಷ್ಠ ತೊರವಿಯಲ್ಲಿ ಇಷ್ಟನಾಗಿ ನಿಂದ ೫

ಮುನ್ನಿದ್ದ ನೃಹರಿಯ ಶಿಲೆಯ । ಕೊಂಡು
ಚೆನ್ನ ತೀರ್ಥದಿ ನರಹರಿಯ । ಇಡಲು
ಕೃಷ್ಣೆಗೆ ಪೋಗುವ ಪರಿಯ । ಪೇಳೆ
ಘನ್ನ ಮೂರ್ತಿಯ ಒಯ್ದು ಬಗೆಯ । ಆಹ
ಇನ್ನು ಮುನ್ನು ಪೇಳ್ವ । ನನ್ನೆಯ
ಜನರಿಹರು ಮನ್ನಿಸುತೀವಾರ್ತೆ ಚಿನ್ಮಯನ ಕೊಂಡಾಡಿ ೬

ಗುಪ್ತಾವು ಗಂಗಾ ಸನ್ನಿಹಿತ । ತೀರ್ಥ
ಉತ್ತಮ ದಿಂದಭಿಷೇಚಿತ । ನಾಗಿ
ನಿತ್ಯವು ಪವಮಾನ ಸೂಕ್ತ । ಪಂಚ
ಯುಕ್ತವು ಪೂಜಾದಿ ಕೃತ । ಆಹ

ಭಕ್ತಿ ಪೂರ್ವಕವಾದ । ಉತ್ತಮ ಸೇವೆಯ
ನಿತ್ಯ ಕೈಗೊಳ್ಳುತ । ಭಕ್ತರಭೀಷ್ಟದ ೭

ಸತ್ಸಂಗ ಪ್ರತಿವರ್ಷ ಮಾಸ । ಎರಡು
ಉತ್ಸವ ವೈಭವ ಘೋಷ । ಕೇಳಿ
ಕುತ್ಸಿತ ಜನರೊಲ್ಲ ಈಶ । ಅಂತೆ
ಸಚ್ಛಾಸ್ತ್ರ ಪ್ರವಚನ ಪೋಷ । ಆಹ
ವತ್ಸಾರಿ ದುರುಳನ । ಕುತ್ಸಿತ ಉದರವ
ವಿಸ್ತೃತ ನಖದಿಂದ । ಕುತ್ತಿದ ಚಿಂತಿಸು ೮

ನರಹರಿ ನಾಮಕ ಕವಿಯು । ಇಲ್ಲಿ
ತೊರವಿಯ ನರಹರಿ ಸನಿಯ । ಚೆಲ್ವ
ವರರಾಮ ಕಥೆಯನ್ನು ಬರೆಯು । ಅವ - ಕು
ವರ ವಾಲ್ಮೀಕಿಯೆ ಮೆರೆಯು । ಆಹ
ತೊರವೆ ರಾಮಾಯಣ । ವಿರಚಿತ ವಾಯ್ತಿಲ್ಲಿ
ಹರಿಯನುಗ್ರಹ ಜಾತ । ವರ ಕವಿತೆ ಉಲ್ಲಾಸ ೯

ಹೃದಯ ಗುಹೆಯಲ್ಲಿ ವಾಸ । ಉಪನಿ
ಷದು ಪೇಳ್ವದು ಅಂತೆಲೇಸ । ಬಲು
ಮುದದಿಂದ ಮಾಳ್ಪದ ವಾಸ । ಅಂಥ
ಬುಧಜನಕಹುದು ಸಂತೋಷ । ಆಹ
ವಿಧವು ಈ ಪರಿಯೆಂದು । ವಿಧಿಸಲು ಜಗತೀಗೆ
ಹದುಳದಿ ತೊರವಿ ಸ । ನ್ನಿಧಿ ಗುಹೆಯೊಳುವಾಸ ೧೦

ಓದಿತುತಿಪತಿಗೆ ಸಾರತರ । ಹರಿ
ಕಾವನು ಶರಣರ್ಗೆ ವಿಭವ । ದಿಂದ
ಲೀವನು ಮುಕ್ತಿಯ ಸುಖವ । ಈತ
ಕೈವಲ್ಯಾಕಧಿಪತಿ ಇರುವ । ಆಹ
ತಾವಕನಾಗಿ ಗುರು । ಗೋವಿಂದ ವಿಠಲನ
ಭಾವದಿ ನೆನೆವಂಗೆ । ತೀವರ ವರವೀವ ೧೧

೭೬

ನಾಥಾ ನಮಿಪೆ ನಿನಗೇ । ಶ್ರೀ ಬದರೀ
ನಾಥಾ ನಮಿಪೆ ನಮಿಪೆ ನಿನಗೆ ಪ

ನಾಥಾ ಜಗಕೆ ಸರ್ವಾ । ನಾಥ ಜನರ ಪಾಲ
ಭೀತಿ ರಹಿತ ಬದರಿ । ನಾಥ ವಿಚಿತ್ರ ಶಕ್ತಾ ಅ.ಪ.

ಸರ್ವ ಪ್ರಾಭವ ಶಕುತೀ । ರಕ್ಷಣ ಲಯ
ಸರ್ವ ವಿಚಿತ್ರ ಶಕುತೀ ॥
ಪರ್ವ ಪರ್ವಗಳಲ್ಲಿ । ಸರ್ವಾಸ್ಥಿ ಮಜ್ಜದಲಿ
ಸರ್ವ ದೇಹದಿ ನಿಂತು । ಸರ್ವ ಕಾರ್ಯವ ಮಾಳ್ವೇ ॥
ದ್ರುತ :- ಪರ್ವತ ಸುತೆ ಪ್ರಿಯ । ಶರ್ವನೊಡೆಯ
ಪವಮಾನನಾದಿ ಸುರ । ಸರ್ವವಂದ್ಯ ಹರಿ
ಉರ್ವಿಲಧಿಕ ಮ । ತ್ತೋರ್ವರ ಕಾಣೆನೊ
ದುರ್ವಿಭಾವ್ಯ ಸಮ । ಸರ್ವೋತ್ತಮನೆ ೧

ಏಕಮೇವನೆ ತಪವ । ಆಚರಿಸುತ್ತ
ಲೋಕರಕ್ಷಕ ಕಾರ್ಯಮ ॥
ಅನೇಕಾ । ವಿಚಿತ್ರರೂಪ । ಸಾಕಾರಿ ಪ್ರಭು ನಿ–
ರ್ವಿಕಾರಿಯಾಗಿ ಆ । ನೇಕಾ ಬಗೇಲಿ ಮಾಳ್ಪೆ
ದ್ರುತ : ನಾಕ ಜಪಿತಭುವ । ನೈಕಾರಾಧ್ಯನೆ
ಏಕ ಗುಣದಲಿ । ಏಕದೇಶ ರಮೆ
ಲೋಕೇಶಾದಿ ಪಿ । ನಾಕಿಗಳ್ಗಲ್ಲರೆ
ಪ್ರಾಗ್ದೇವತೆ ಹರ । ಸಾಕುವುದೆಮ್ಮ ೨

ಚಿತ್ಸುಖಮಯ ವಪುಷ । ಧೇನುಕ ಮತ್ತೆ
ವತ್ಸಾರಿ ಗೋಪ ಹರುಷ ॥
ವತ್ಸರದವಗುಣ । ಕುತ್ಸಿತ ಜನ ಹರ
ಮತ್ಸ್ಯಾದಿರೂಪ ಶಿರಿ । ವತ್ಸ ಲಾಂಛನನೇ ॥

ದ್ರುತ : ಮತ್ಸ್ಯ ಧ್ವಜಪ ಪುರು । ಕುತ್ಸ ಭೋಜಪ ಗೋ
ವತ್ಸ ಧ್ವನಿಗೆ ಬಹ । ಉತ್ಸಹ ಉಳ್ಳನೆ
ಚಿತ್ಸುಖ ಪ್ರದ ಶರ । ಣ್ಯೋತ್ಸಲ ಗುರು ಗೋ-
ವಿಂದ ವಿಠಲ । ಮಾಂ ಪಾಹಿ ಪಾಹೀ ೩

೭೭

ನಿನ್ನಂಥ ಕರುಣಿಗಳಿನ್ನುಂಟೆ ಭುವಿಯಲ್ಲಿ _ ಧನ್ವಂತರೇ ಪ

ಚೆನ್ನ ಪ್ರಸನ್ನ ನೀನಾಗುತ ಇವಗಿನ್ನು
ಘನ್ನ ರೋಗವ ಕಳೆದುನ್ನುತ ಸುಖವೀಯೋ ಅ.ಪ.

ಮೃತ್ಯುವಿಗೆ ನೀನು _ ಮೃತ್ಯುವಾಗಿರುವೆ
ದೈತ್ಯರ ಉಪಟಳ - ಕತ್ತರಿಸು ಶೀಘ್ರದೀ
ಹಸ್ತ ಕಲಶಾಮೃತ - ಸ್ರವಿಸಿ ವೇಗದಿ ಅಪ
ಮೃತ್ಯುವ ಹರಿಸಯ್ಯ - ಭಕ್ತಳ ಭರ್ತುವಿನ ೧

ಆರ್ತರುದ್ಧಾರಿಯೆ - ಭಕ್ತರ ಪರಿಪಾಲ
ಕರ್ತ ಸಂಹರ್ತ - ಮೂರ್ಜಗಕೆಲ್ಲ ನೀನೇ
ನಿತ್ಯಾನಿತ್ಯದ - ಜಗಕೆಲ್ಲ ಸ್ವಾಮಿಯೆ
ಭೃತ್ಯಳ ಮಾಂಗಲ್ಯ - ಘಟ್ಟಿಯೆಂದೆನಿಸೋ ೨

ಪ್ರಾಣ ಗುರು ಜಯ - ವಿಠಲ ದಾಸಿಯ
ಪ್ರಾಣನಾಥನ ಪ್ರಾಣ - ಉಳಿಸುವುದೆನುತ
ಪ್ರಾಣ - ಪ್ರಾಣನೆ ಎನ್ನ - ಬಿನ್ನಪವ ಜಗ
ತ್ರಾಣ ಗುರು ಗೋವಿಂದ ವಿಠಲ - ಸಲ್ಲಿಸೋ ೩

೭೮

ನಿನ್ನ ಕರುಣಕೆಯ ಕಾಣೆನಾ । ವಿಠಲರಾಯ

ಮನ್ನುಜನ್ನ ರೂಪ ಧರಿಪನಾ
ಅನ್ನ ವಸನವಿತ್ತು ಪಿತಗೆ । ಚನ್ನ ಸೇವೆ ಮಾಳ್ಪದೇವೆ
ಘನ್ನ ಸಾಧ್ಯ ಸಾಧನವೆಂದು । ಮನ್ನಣೆಯ ತೋರ್ದ ಜಗಕೆ ಅ.ಪ.

ಪಂಥ ಜನರ ಸಂದಣೀಯಲಿ । ಮೆರೆಯುತ್ತಿದ್ದ
ಪಂಢರಪುರದ ಸುಪ್ರದೇಶದಿ
ಪುಂಡರೀಕ ನಯನ ಭಕ್ತ । ಬಂಡುಣೀಯ ಮನವ ನೋಡೆ
ಅಂಡಾ ನಂತಕೀಶ ಮನುಜ । ದಿಂಡು ಧರಿಸಿ ಬಂದು ನಿಂತ ೧

ಇಂದು ಭಾಗ ಸರಿತು ತೀರದಿ । ಪುಂಡಲೀಕ
ತಂದೆ ಪಾದಸೇವೆ ಭರದಲಿ ।
ಬಂದ ಮನುಜ ವೇಷ ಹರಿಗೆ । ನಿಂದಿರೆಂದು ಪ್ರಾರ್ಥಿಸುತ್ತ
ಅಂದ ಅನ್ಯ ಪೀಠವಿರದೆ । ಒಂದು ಇಟ್ಟಗಿ ಪೀಠವಿತ್ತ ೨

ಇಷ್ಟ ದೈವ ಇಟ್ಟಗಿ ಪೀಠದೀ । ನಿಂತು ಆಗ
ಶಿಷ್ಟರಿಂದ ವಿಠೋಬ ನಾಮದೀ ।
ವಿಠಲ ವಿಠಲ ವಿಠೋಬ ಎಂದು । ನಿಷ್ಠರಿಂದ ಸ್ತುತಿಸಿ ನಿಂದು
ಪ್ರೇಷ್ಟ ಜನರ ಭವದ ಸಿಂಧು । ಸುಷ್ಠು ಒತ್ತಿಪ ದಯಾಸಿಂಧು ೩

ಶಾಸ್ತ್ರ ಬಹಳ ಶೃತನು ಎನುತಲೂ ।
ಶುದ್ಧಮೇಧ ಶಕ್ತಿ ಬಹಳ ಯುತನು ಎನುತಲೂ ।
ಯುಕ್ತಿಗಾಗ್ಯ ವಲಿವನಲ್ಲ । ಮುಕ್ತಿದಾತ ಲಕ್ಷ್ಮೀನಲ್ಲ
ಭಕ್ತಿ ಮುಡುಪು ಯಿತ್ತು ತುತಿಪ । ಭಕ್ತ ಜನರ ಬಿಡದೆ ಪಾಲಿಪ ೪

ಭಾವ ದ್ರವ್ಯ ಕ್ರಿಯವು ಎಂಬುದಾ । ಮಹತು ಎನಿಪ
ಈ ವಿಧ ದ್ವೈತತ್ರಯಗಳಾ ।
ಭಾವದಲ್ಲಿ ಚರಿಸುವಂಥ । ಭಾವವಿತ್ತು ಸಲಹೊ ಗುರು
ಗೋವಿಂದ ವಿಠಲ ಭಕ್ತಿಪಂಥ । ದೇವನೆಂದು ಮೆರೆವ ವಿಠಲ ೫

೭೯

ನಿನ್ನನೇ ನಂಬಿಹೆನೋ ಶ್ರೀನಿವಾಸಾ
ಪನ್ನಗ ನಗಧೀಶ ಉದಯಾದ್ರಿ ವಾಸಾ ಪ

ಭೃತ್ಯ ಜನ ಸಂತೋಷ ನಿತ್ಯ ನೂತನ ಮಹಿಮ
ಎತ್ತ ನೋಡಿದರತ್ತ ಮುಕ್ತ ಜನ ಸೇವ್ಯಾ ।
ಕೀರ್ತಿ ಭವ್ಯ ವಿಶಾಲ ವರ್ತಿಪುದು ಸದಾಕಾಲ
ಆರ್ತವರಿಗಪವರ್ಗ ಮೋಕ್ಷಮಾರ್ಗಾ ೧

ಸೇವ್ಯ ಸೇವಕ ಭಾವ ದಿವ್ಯ ಸುಜ್ಞಾನವನು
ಪ್ರೀತಿಯಿಂದೆನಗಿತ್ತು ಕಾಯಬೇಕೋ ।
ಪ್ರೇರ್ಯ ಪ್ರೇರಕ ನೀನೇ ಕಾರ್ಯ ಕಾರಣ ಕರ್ತೃ
ಭಾರ್ಯರಿಂದೊಡಗೂಡಿ ವೀರ್ಯಪ್ರದನಾಗೋ ೨

ಸೃಷ್ಟಿ ಸ್ಥಿತಿ ಸಂಹಾರ ಅಷ್ಟಕರ್ತೃಸ್ವಾಮಿ
ನಷ್ಟ ಗೈಸಜ್ಞಾನ । ಇಷ್ಟ ಮೂರ್ತೇ
ದಿಟ್ಟ ಗುರು ಗೋವಿಂದ । ವಿಠಲನೆ ಮದ್ ಹೃದಯ
ಅಷ್ಟ ಕಮಲದಿ ತೋರೋ । ಶಿಷ್ಟಜನಪಾಲಾ ೩

೮೦

ನಿನ್ನ ನೋಡಿ ಧನ್ಯನಾದೆನೋ । ಶ್ರೀವೇದ ವ್ಯಾಸ
ನಿನ್ನ ನೋಡಿ ಧನ್ಯನಾದೆನೋ ಪ

ನಿನ್ನ ನೋಡಿ ಧನ್ಯನಾದೆ ।
ಯಜ್ಞಕುಂಡ ದೇಶದಲ್ಲಿ
ಘನ್ನ ಮಹಿಮ ಪೂರ್ಣ ಸಂ ।
ಪನ್ನ ಮೂರುತಿ ಬಾದರಾಯಣ ಅ.ಪ.

ಯಾದವಾರ್ಯ ಮೌನಿಶಿಲ್ಪಿ ।
ಶ್ರೀದ ನಿನ್ನ ನವ ಸುಮೂರ್ತಿ
ಮೋದದಿಂದ ರಚಿಸಿ ತಿದ್ದಿ ।
ಪಾದ ಭಜಿಸಿ ಅರ್ಚಿಸಿರುವ ೧

ನವಸುಮೂರ್ತಿಗಳಲಿ ನಿನ್ನ ।
ನವ ಸುಭಕ್ತಿಗಳನು ಬೇಡೆ
ನವ ಸುಮಹಿಮೆ ತೋರೆ ಕರಗ ।
ಳವಲಂಬನದಿ ದಯವ ತೋರ್ದ ೨

ಅಷ್ಟು ಮೂರ್ತಿಗಳಲಿ ತಮ್ಮ ।
ಇಷ್ಟ ಮೂರ್ತಿಯನ್ನೆ ಇರಿಸಿ
ಅಷ್ಟದಿಗಿಭದಂತೆ ಮೆರೆದ ।
ಅಷ್ಟ ಶಿಷ್ಟರಿಗಿತ್ತ ಮುನಿಯು ೩

ಗುರ್ಜರೀ ಬಂಕಾಪುರಂ ।
ಮರ್ಜಿ ಕಾಡಣೀಯು
ಘರ್ಜಿಪ ಉದ್ಗಾವಿ ಕಲ್ಲಾಪುರ ।
ನಿರ್ಜರ ಅಂಘೇರಿ ಮಣೂರ ೪

ತರ್ಕ ಮುದ್ರ ಅಭಯ ಹಸ್ತ ।
ಅರ್ಕಾನಂತ ಭಾಸ ಗಾತ್ರ
ಶರ್ಕರಾಕ್ಷ ಮುಖರ ವಿನುತ ।
ವಕ್ರ ಮನದ ಜನಕೆ ಅಮಿತ್ರ ೫

ಯೋಗ ಪಟ್ಟಕ ವಸನ ಚೆಲ್ವ ।
ಯೋಗದಾಸನ ಕೂರ್ಮದುಪರಿ
ನಾಗನಂತೆ ಪೋಲ್ವ ಜಟಾ ।
ಸೋಗಿನಿಂದ ಮೆರೆವ ದೇವ ೬

ಯಜ್ಞ ಕುಂಡ ಕ್ಷೇತ್ರ ಮೂರ್ತಿ ।
ಯಜ್ಞ ಭೋಕ್ತ ತ್ರಯ ಸುಮೂರ್ತಿ
ಯಜ್ಞ ಗುರು ಗೋವಿಂದ ವಿಠಲ ।
ಭಗ್ನ ಗೈಸೊ ಮಾಯ ಪಟಲ ೭

೮೧

ನಿನ್ನ ಪದ ತಾಮರಸ ಇನ್ನು ಕಾಂಬುವದೆಂದು
ಪನ್ನಗಾತನ ವಾಹನಾ ಪ

ಕಣ್ಣು ಕಾಣದ ಹೀನ ಮಾನವನು ನಾನಾದೆ
ಉನ್ನಂತ ಗುಣ ಪೂರ್ಣ ಕಾಯೋ ಯೆನ್ನ ಅ.ಪ.

ಕರಿರಾಜ ಸಿಲುಕಿ ತಾ । ಸರಸಿಯಲಿ ನೆಗಳಿಗೇ
ಪರಿಪರೀಯಲಿ ಸೆಣಸಲೂ ।
ಹರಣ ಬಾಂಧವರೆಲ್ಲ । ಹರಹಿಕೊಂಡಿದಿರಾಂತು
ಪರಿಹರಿಸಿದರೆ ಅದರ ಎಡರಾ ।
ವರುಷ ಸಾವಿರ ಸಾಗಿ । ಕರಿ ಮಕರಿ ಸೆಣಸ್ಯಾಡಿ
ಹರುಷ ಕುಗ್ಗುತ ಮರುಕದೀ ।
ಹರಿ ಹರಿ ಹರಿ ಎಂದು । ಕರಿರಾಜ ಮೊರೆಯಿಡಲು
ತ್ವರದಿಂದ ನೀಯವನ । ಎಡರ ಹರಿಸಿದೆ ದೇವ ೧

ಕುರುರಾಜ ಸಭೆಯಲಿ । ತರುಳೆ ದ್ರೌಪದಿ ಸೀರೆ
ಕೌರವಾನುಜ ಸೆಳೆಯಲೂ ।
ನಾರಿಮಣಿ ನಿಜಪತಿಗಳ್ಳೈ । ವರಲಿ ಮನ ತಿಳಿದು
ಹಿರಿಯ ಸಭಿಕರಿಗರುಹಲೂ । ವರ ವೃದ್ಧ ಭೀಷ್ಮಾದಿ ।
ಬಹುಮಂದಿ ಇರುತ ಕಾಲವ ಕಳೆಯಲು ।
ಆರಾದರೂ ಬಂದು ಪಾರು ಮಾಡಿದರೇನೊ
ಶೌರಿ ನಿನ್ನನು ಕರೆಯೆ । ಪಾರು ಮಾಡಿದ ದೇವ ೨

ಪಾರುಗಾಣಿಸೊ ಎನ್ನ । ಮೂರು ವಿಧ ತಾಪಗಳ
ಮಾರ ಜನಕನೆ ಪ್ರಾರ್ಥಿಪೇ ದೂರ ಮಾಡಿಸೊ
ಹರಿಯೆ । ಮೂರು ಗುಣದಿಂದೆನ್ನ
ಬಾರಿ ಬಾರಿಗು ಬೇಡುವೆ ।
ದುರುಳ ತತ್ವರ ಕಾರ್ಯ । ಕಡೆಗೈಸಿ ಶ್ರೀ ಹರಿಯೆ
ಸುರರ ಸಹಕಾರ ನೀಡೊ ।
ಗುರುಗಳಂತರ್ಯಾಮಿ । ಗುರು ಗೋವಿಂದ ವಿಠಲನೆ
ಕರುಣದಲಿ ತವ ಚರಣ । ಸರಸಿಜವ ತೋರೋ ೩

೮೨

ನೀರೇರುಹಾನಯನ । ವಾರನಿಧಿ ನಡುಶಯನ
ತೋರೆನಗೆ ತವ ಚರಣ । ಸುಗುಣ ಗಣ ಪೂರ್ಣ ಪ

ಕೇಶಾಮರೇಂದ್ರನುತ । ಭಾಸುರ ಸುಚರಿತ್ರ
ಶ್ರೀಶ ವೇದ ವ್ಯಾಸ । ಅಮಿತ ಶಶಿ ಭಾಸಾ ॥
ಕಾಸುವೀಸಕೆ ಮನ । ಕ್ಲೇಶ ಗೊಳಿಸದಂತೆ
ನೀ ಸಲಹೋ ಎನ್ನ । ಶೇಷಾದ್ರಿ ವಾಸಾ ಪರೇಶಾ ೧

ಲಿಂಗಕುಪಚಯಿಸಿ ಭವ । ಸಂಗದೊಳಗಿರಿಸೀ
ಭಂಗ ಪಡಿಸುವಿ ದೊರೆಯೆ । ಶೃಂಗಾರ ನಿಧಿಯೇ ।
ಸಂಗ ವಿಷಯದಿ ಹರಿಸಿ ನಿ । ಸ್ಸಂಗನೆಂದೆನಿಸಿ
ಲಿಂಗಾಂಗ ಕಳೆಯೊ ಹರಿ । ರಂಗ ಭವಹಾರಿ ೨

ಸಾಮಸನ್ನುತ ಚರಣ । ಭೂಮಗುಣಿ ಸುಸ್ತವನ
ಪ್ರೇಮದಲಿ ಗೈವ ಮನ । ನೇಮವೀಯೆಲೊ ವಾಮನ ।
ಈ ಮಹಾ ಕಲಿಯುಗದಿ । ನಾಮ ನಿಸನ್ನದೆ ಗತಿಯೆ
ಶ್ರೀಮಹೀ ಸೇವಿತನೆ । ರಾಮ ಗುಣಧಾಮ ೩

ತ್ರೈಗುಣಾತೀತ ವಿ । ಖ್ಯಾತ ಭಾರ್ಗವಿಪ್ರೀತ
ಭೋಗಿ ಭೂಷಣ ಸಖನೆ । ಭೋಗಿಶಯ್ಯಾ ।
ಆಗಮ ಸುವೇದ್ಯ ಭವ । ರೋಗ ವೈದ್ಯನೆ ಎನ್ನ
ರೋಗ ಹರಿಸುವುದರಿದೆ । ಇದು ನಿನ್ನ ಬಿರುದೇ ೪

ಗುರುವಂತರಾತ್ಮ ಗುರು । ಗೋವಿಂದ ವಿಠ್ಠಲನೆ
ನಿರುಪಮನೆ ನಿರಪೇಕ್ಷ । ನಿರವದ್ಯ ಆದ್ಯಾ
ಅರುಹಲೇನಿಹುದಿನ್ನು । ಸರ್ವಜ್ಞ ನೀನಿನ್ನು
ಒರೆವೆನೆಂಬಪರಾಧ । ಮರೆದು ಪಾಲಿಸು ಶ್ರೀಶ ೫

೮೩

ನೋಡಿರೇ ಬೇಲೂರ ಕೇಶವನ ನೋಡಿರೇ ಪ

ನೋಡಿ ನೀವವನ ಕೊಂಡ್ಯಾಡಿ । ತನು
ವೀಡ್ಯಾಡಿ ಅವನ ಚರಣದಿ । ಆಹ
ಜೋಡಿಸಿ ಕರಗಳ । ಬೇಡಲು ವರಗಳ
ಖೋಡಿ ದೈವರ ದೇವ ಗಾಢ ದಯವ ತೋರ್ವ ಅ.ಪ.

ಗೆಜ್ಜೆ ಕಾಲ್ಗಡಗದವು ಚರಣ । ಪೊನ್ನ
ಗೆಜ್ಜೆ ಉಡಿದಾರಾಭರಣ । ಮತ್ತೆ
ಸಜ್ಜೆ ಕೊರಳ ಹಾರ ರತುನ । ಕಣ್ಣು
ಕಜ್ಜಲ ತಿಲಕ ಪಣೆ ಸದನ । ಆಹ
ವಜ್ರಿಯ ಮೊರೆ ಕೇಳಿ । ನಿರ್ಜರರ ಸಲಹಿದ
ಕಜ್ಜಗಳಮಿತದಿ । ಸಜ್ಜನರ ಪೊರೆದನ ೧

ಕೇಳೆಡ ಕರದಲ್ಲಿ ಗದ । ನೋಡಿ
ಮೇಲ್ಹಸ್ತದಲಿ ಚಕ್ರ ಬಲದ । ಮತ್ತೆ
ಮೇಲ್ಕರ ಶಂಖದ ನಿನದ । ಇನ್ನು
ಕೀಳು ಕರಾಭಯ ಮಧ್ಯದ । ಆಹ

ಶೀಲ ಭೂವರಹನ । ಶಾಲಿಗ್ರಾಮವ ನೋಡಿ
ಲೀಲ ರೂಪದಿ ಘೋರ । ಕಾಲ್ಯವನನ ಕೊಂದ ೨

ಶ್ರೀವಿಷ್ಣು ಸಮುದ್ರದಿ ಸ್ನಾನ । ಮಾಡಿ
ಭಾವಿ ಬ್ರಹ್ಮಾಂತರ್ಗತನ । ಗುರು
ಗೋವಿಂದ ವಿಠಲ ಕೇಶವನ । ಚರಣ
ಓದಿ ಭಜಿಸೂವಂಥ ಸುಜನ । ಆಹ
ಆವಾವ ಕಾಲಕ್ಕೂ । ನೋವು ರಹಿತ ಧಾಮ
ಆ ವೈಕುಂಠವ ಪೊಕ್ಕ । ಶಾಶ್ವತ ಸುಖ ಪೊಂದ್ವ ೩

೮೪

ನೋಡಿದೇ ಶ್ರೀ ವಿಠಲನ ನೋಡಿದೆ ಪ

ನೋಡಿದೆ ಲೀಲಾ ಮಾನುಷನ – ಕೊಂ
ಡಾಡಿದೆ ಕರುಣ ಸಾಗರನ _ ಆಹ
ನಾಡೊಳಗಾವೆಡೆ । ಈಡು ಇಲ್ಲದ ದೈವ
ಗಾಡಿಕಾರನು ಕೃಷ್ಣ । ಜೋಡು ಕುಂಡಲ ಧರನ ಅ.ಪ.

ದಾಸರಂದದಿ ಕಾವಿ ವಸನ । ಹೊದ್ದು
ಭಾಸೀಸುತಿಹ ಸಿರಿವರನ । ವಸನ
ಮೀಸಲನವನು ತೆಗೆಯಲದನ । ಕಂಡೆ
ಲೇಸಾದ ಶಾಲು ಹೊದ್ದವನ । ಆಹ
ಕಾಶಮೀರದ ಶಾಲು । ಭಾಸುರ ಜರೆ ಖಚಿತ
ಭೂಷಿತ ಹರಿ ಕುಳಿತು । ತೋಷಿಪ ಭಕುತರನ ೧

ಸುತ್ತಿಹ ಪಾವಡೆ ಶಿರಕೇ । ಬಲು
ಸುತ್ತು ಸುತ್ತಿರುವುದು ಅದಕೆ । ಹರಿ
ಮಸ್ತಕ ಛಂದ ಕಾಂಬುದಕೆ । ನೋಡಿ
ಭಕ್ತ ಸಂದಣಿಯ ತೋಷಕ್ಕೆ । ಆಹ

ಸುತ್ತಿಹುದನು ಬಿಚ್ಚೆ । ತುತ್ತಿಸುತಿರಲಾಗ
ಕೃತ್ತಿವಾಸನ ತಾತ । ನೆತ್ತಿ ನೈಜವ ಕಂಡೆ ೨

ಪೂಜಾರಿ ತೆಗೆಯಲು ಜರಿಯ । ಶಾಲು
ಮಾಜಾದೆ ವಿಠಲನ ಪರಿಯ । ಕಂಡೆ
ನೈಜದ ಶ್ರೀವರನ ದ್ವಯ । ಹಸ್ತ
ಯೋಜಿಸಿ ಕಟಿಲಿಹ ಪರಿಯ । ಆಹ
ಸೋಜಿಗತನರೂಪ । ನೈಜದಿ ತೋರುತ
ಪೂಜಾದಿ ಸ್ವೀಕಾರ । ವ್ಯಾಜಾವ ಕಂಡೆನು ೩

ನಿರ್ಮಲಾಕೃತಿ ಪೊದ್ದ ಹಾರ । ತುಳಸಿ
ಕಮ್ಮಲ ಸೂಸುವಧಾರಾ । ಕಾರ
ಒಮ್ಮೇಲಿ ತೆಗೆದರಪಾರ । ದಯ
ಸುಮ್ಮನ ಸರಿಗೀವ ಪೋರ । ಆಹ
ಆಮ್ಮಹ ದೈವನ । ಇಮ್ಮಡಿ ಪ್ರಭೆ ಕಂಡ
ನಿರ್ಮಾಲ್ಯ ತೆಗೆಯುವ । ಕರ್ಮಾಚರಿಸೂವಲ್ಲಿ ೪

ಲೌಕಿಕ ಪೂಜೆಗಳ ಮಮ । ಪರ
ಲೋಕೈಕನಾಥಗೆ ಪರಮ । ಪ್ರೀತಿ
ವಾಕು ಭಕ್ತಿಯುತ ಮರ್ಮ । ತಿಳಿ
ಪ್ರಾಕೃತ ಕೊಳ್ಳುವ ನಮ್ಮ । ಆಹ
ಶ್ರೀಕರಾರ್ಚಿತ ಪಾದ । ಸ್ವೀಕರಿಸುವ ಭಕ್ತ
ತೋಕನ ಬಿಂಬೋದ । ಶ್ರೀಕರ ದಳ ತುಳಸಿ ೫

ನಾಕ್ಹತ್ತು ಭುವನಗಳ್ಜೋತಿ । ಮತ್ತ
ನೇಕಾನೇಕಾಕಾರ ಜ್ಯೋತಿ । ಗಳೊ
ಪ್ರಕಾಶ ಪ್ರದ ಪರಂಜ್ಯೋತಿ । ಮುಕ್ತಿ
ಪ್ರಕಾರ ದೊಳಗಿವನೆ ಜ್ಯೋತಿ । ಆಹ
ಏಕಮೇವ ಹರಿಗೆ । ಕಾಕಡಾರುತಿ ಮಾಳ್ಪ
ಲೋಕರ ಪೂಜೆಯ । ಸ್ವೀಕರಿಪುದ ಕಂಡೆ ೬

ಪಂಚ ಮೋಕ್ಷ ಪ್ರದ ಹರಿಗೆ । ಆಯ್ತು
ಪಂಚ ವಿಧಭಿಷೇಕ ಆವಗೆ । ಶೇಷ
ಮಂಚಿಕೆ ಕ್ಷೀರಾಬ್ಧಿಶಯಗೆ । ಮಧು
ಸಂಚನ ಮದ್ವಿದ್ಯ ಹರಿಗೆ । ಆಹ
ಪಂಚಾಮೃತಭಿಷೇಕ । ಸಂಚಿಂತಿಸುವನೀಗೆ
ಸಂಚಿತ ಕರ್ಮವ । ಕೊಂಚವ ಮಾಡುವ ೭

ಮಂಗಳ ಮಹಿಮಗ ಸ್ನಾನಾ । ಅವ
ಗಂಗಾ ಪಿತನೆಂಬುದೆ ಮಾನ । ಹಾಗೂ
ಅಂಗಜನಯ್ಯಗೆ ಸ್ನಾನಾ । ಆಯ್ತು
ಹಿಂಗದೆ ಲೋಕ ವಿಧಾನಾ । ಆಹ
ಸಂಗೀತಲೋಲ ಸ । ತ್ಸಂಗವು ತುತಿಸಲು
ಸ್ವಾಂಗಾಯನಾಮ ಶು । ಭಾಂಗನು ಮೆರೆದನು ೮

ವಸ್ತ್ರದಿಂದಲಿ ಕಾಯ ವರೆಸಿ । ಬಹು
ಶಾಸ್ತ್ರೋಕ್ತಿ ಉಡಿಗೆಯ ಉಡಿಸಿ । ಮತ್ತೆ
ರತ್ನಧ್ಯಾಭರಣವ ತೊಡಿಸಿ । ಚೆಲ್ವ
ಕಸ್ತೂರಿ ತಿಲಕವನಿರಿಸಿ । ಆಹ
ವಿಸ್ತೃತೀಪರಿಯಲಿ । ಸತ್ಯ ಷೋಡಶ ಪೂಜೆ
ಚತ್ತುರ ಮೊಗನಿಂದ । ಕೃತ್ಯಾನು ಸಂಧಾನ ೯

ವೇದ ಘೋಷ ಪೂಜಾ ಮಂತ್ರ । ಬಹು
ನಾದ ವಿಠಲ ನಾಮ ಮಂತ್ರ । ತುಂಬಿ
ಮೋದ ಪೂರೈಸಿತು ತಂತ್ರ । ಘಂಟೆ
ನಾದದಿಂದಾರುತಿ ಕೃತ । ಆಹ
ಆದರದಿಂದ ಪ್ರ । ಸಾದವು ಸ್ವೀಕೃತ
ಮೋದದಿ ವಿಠಲನ । ಪಾದಾಲಿಂಗಾಂತ್ಯವ ೧೦

ಉತ್ಕೃಷ್ಟ ಸುಕೃತದ ಭೋಗ । ಹರಿ
ಇತ್ತನು ಅನುಗ್ರಹ ಯೋಗ । ಸ್ವಂತ

ಹಸ್ತದಿ ಪೂಜಾದಿ ಯೋಗ । ಮಾಳ್ಪ
ಕೃತ್ಯ ಸಂಧಿಸಿದನು ಈಗ । ಆಹ
ಚಿತ್ತಜ ಪಿತ ವಿಠಲ । ಭಕ್ತವತ್ಸಲ ದೇವ
ನಿತ್ತಕಾರುಣ್ಯವ । ತುತ್ತಿಸಲೆನಗಳವೇ ೧೧

ಪಿತೃ ಸೇವಕ ಪುಂಡಲೀಕ । ತನ್ನ
ಕೃತ್ಯದೊಳಿರೆ ನಿರ್ವಲ್ಕೀಕ । ಹರಿ
ವ್ಯಕ್ತ ತನ್ಭಕ್ತ ಪರೀಕ್ಷಕ । ನಾಗೆ
ಭಕ್ತನು ಮನ ಸ್ಥೈರ್ಯಾಲೋಕ । ಆಹ
ಇತ್ತ ಇಟ್ಟಿಗೆ ಪೀಠ । ಮೆಟ್ಟಿ ನಿಂತಿಹ ದೇವ
ಕೃತ್ತಿ ವಾಸಾದ್ಯರಿಂ । ಸ್ತುತ್ಯ ಶ್ರೀ ವಿಠಲನ ೧೨

ದಾಸೀಗೆ ಕಂಕಣವಿತ್ತು । ಹರಿ
ದಾಸರ ರೂಪೀಲಿ ನಕ್ತ । ಕಳೆ
ದಾಶು ದಾಸರ ಶಿಕ್ಷಕರ್ತ । ಮತ್ತೆ
ದಾಸರ ನಿರ್ದೋಷ ವಾರ್ತ । ಆಹ
ದಾಸನೋರ್ವಾ ವೇಶ । ಭೂಷಣ ಕೇಳುತ್ತ
ವಾಸುಕಿ ಶಯನೊಲಿದ । ದಾಸ ಪುರಂದರಗೆ ೧೩

ಮುಯ್ಯಕೆ ಮುಯ್ಯ ತೀರಿತು । ಜಗ
ದಯ್ಯ ವಿಠಲನ್ನ ಕುರಿತು । ಪೇಳಿ
ಕಯ್ಯನೆ ಮುಗಿದರು ತ್ವರಿತು । ದಾಸ
ಮೈಯ್ಯ ಬಿಗಿದ ಕಂಬ ಒಳಿತು । ಆಹ
ತ್ರಯ್ಯ ಲೋಕದಿ ದಾಸ । ಅಯ್ಯನ ಪೆಸರಾಯ್ತು
ತ್ರಯ್ಯ ಗೋಚರ ಹರಿ । ಪ್ರೀಯ್ಯನಿಗೊಲಿದಂಥಾ ೧೪

ಅಂಡ ಬ್ರಹ್ಮಾಂಡಗಳೊಡೆಯ । ಭಕ್ತ
ಪುಂಡಲೀಕನಿಗೊಲಿದ ಭಿಡೆಯ । ರಹಿತ
ಚಂಡ ಕಿರಣಾನಂತ ಪ್ರಭೆಯ । ಹರಿ
ಮಂಡಿತಿಂದು ಭಾಗ ತಡಿಯ । ಆಹ

ಹಿಂಡು ದೈವರ ಗಂಡ । ಪುಂಡರೀಕಾಕ್ಷನೆ
ಪಿಂಡಾಂಡದೊಳಗಿಹ । ಗಂಡನೆಂದೆನಿಸಿಹಗೆ ೧೫

ಪುರಂದರ ವಿಜಯ ಭಾಗಣ್ಣ । ಮತ್ತೆ
ವರ ಜಗನ್ನಾಥವರ್ಯ । ಬಹು
ಪರಿಠವಿಸಿತ್ತೆ ಮೃಷ್ಟಾನ್ನ । ದಾಸ
ವರರ ಸೇವಕ ಸೇವಕನ್ನ । ಆಹ
ಪುರಂದರದಾಸರ ದಿನ । ದರುಶನ ವಿತ್ತಿಹೆ
ಅರಿದಾಯ್ತೆನ್ನಯ ಕುಲ । ಪರಮ ಧನ್ಯವೆಂದು ೧೬

ಇಂದು ಭಾಗದಿ ವಾಸ ಜಯ । ಸಿರಿ
ಇಂದಿರೆ ಲೋಲನೆ ಜಯ । ದಾಸ
ಮಂದಗಭೀಷ್ಟದ ಜಯ । ಎನ್ನ
ತಂದೆ ತಾಯಿ ಬಂದು ಜಯ । ಆಹ
ಸುಂದರ ಗುರು ಗೋವಿಂದ ವಿಠಲ ಹೃ–
ನ್ಮಂದಿರದೊಳು ತೋರಿ । ಬಂಧನ ಬಿಡಿಸುವ ೧೭

೮೫

ಪಂಕಜಾಕ್ಷನೆ ನಿನ್ನ । ಪಾವನ್ನ ತವಪದ
ಪಂಕಜವ ತೋರೈಘನ್ನ । ನಿನ್ನಂಘ್ರಿ ಶರಣರ
ಶಂಕೆ ಕಳೆ ಕಾರುಣ್ಯಾ । ಸಿಂಧುವೆ ವರೇಣ್ಯಾ ಪ

ಶಂಕರಾಭರಣಾದ್ರಿ ವೆಂಕಟ ।
ಪಂಕಜಾಸನ ವಂದಿತಾಂಘ್ರಿಯೆ
ಶಂಕೆ ಇಲ್ಲದೆ ಭಜಿಪ ಭಕುತರ ।
ಪಂಕಕಳೆ ಅಕಳಂಕ ಮೂರುತಿ ಅ.ಪ.

ಬಂದುದಾಯಿತು ಭವದೀ । ನಿನ್ನಂಘ್ರಿ ನೀರಜ
ದ್ವಂದ್ವ ಬೇಡುವೆ ಮನದೀ । ಅನ್ನಂತ ಮಹಿಮನೆ

ಇಂದ್ರಸೂನುವ ರಣದೀ । ಕಾಯ್ದೆಂದಲಿ ಈ
ಮಂದನನು ಬಹು ದಯದೀ । ಸಲಹಯ್ಯ ಭರದೀ ॥
ಅಂದಮೀನಗೆ ಮಂದರ ಧೃತ । ಸಿಂಧುಗತ ಹಿರಣ್ಯಾಕ್ಷ ಸಂಹೃತ
ಕಂದನನು ಪಿತನಿಂದ ಸಲಹಿದ । ಇಂದ್ರಗವರಚುಪೇಂದ್ರ ಹರಿಯೇ ॥
ತಂದೆ ವಚನಕೆ ತಾಯ ಕಡಿದನೆ । ತಂದೆ ನುಡಿಗಡವಿಯನೆ ಸೇರ್ದನೆ
ತಂದೆ ತಾಯ್ಗಳ ಬಂಧಹರ ಮುದ । ದಿಂದ ಮೋಹಕ ತುರಗವೇರ್ದ ೧

ಮೇಲು ಗಿರಿಯಲ್ಲಿರುವಾ । ಸಿರಿ ಭೂಮಿ ರಮಣನೆ ।
ಕಾಲಕಾಲಕೆ ಬರುವಾ ಆಧಿ ವ್ಯಾಧಿಯ
ಮೂಲ ಸಹ ಕಿತ್ತೊಗೆವಾ । ಕರುಣಾಳುವೇ ತವ ।
ಶೀಲಗುಣರೂಪ ಕ್ರಿಯವಾ । ಸತತ ಸ್ಮರಿಸೂವಾ ॥
ಶೀಲ ಮನ ದಯಪಾಲಿಸುತ ಹರಿ । ಕಾಲ ಗುಣ ಕರ್ಮ ಸ್ವಭಾವಗ
ಳಾಲಯನು ನೀನೆನಿಸಿ ಲಕ್ಷ್ಮೀ । ಲೋಲ ಜಗದುತ್ಪತ್ತಿ ಸ್ಥಿತಿಲಯ
ಮೂಲ ಕಾರಣನೆಂಬ ಜ್ಞಾನವ । ಕಾಲಕಾಲಕೆ ತಿಳಿಸಿ ಹೃತ್ಕೀ
ಲಾಲಜದಿ ತವ ಪಾದ ಪಲ್ಲವ । ಓಲೈಪ ಭಾಗ್ಯವ ಪಾಲಿಸೂವುದು ೨

ಕಾರಣಾಹ್ವಯ ದೇವಾ । ತಿಳಿವು ಕರ್ಮಕೆ
ಪ್ರೇರಕನು ಬೇರಿನ್ನಾವಾ । ತತುವರೊಳು ನೆಲಸಿ
ತೋರುತಿಹೆ ಕ್ರಿಯೆ ಸರ್ವಾ । ತ್ರಿಗುಣ ಮಯ ದ್ರವ್ಯಾ
ಕಾರ ನಾಮದಲಿರುವಾ । ತದ್ಭಿನ್ನನೆನಿಸೂವಾ ॥
ಮಾರಮಣ ಬಹುರೂಪದಿಂದಲಿ । ವಾರಿರುಹ ಭವನಧಿ ಕರಿಸಿ ಜಗ
ಕಾರಿಯಂಗಳಗೈದು ಜೀವರ । ಅಪಾರ ಕ್ರಿಯೆಗಳ ಋಣವ ತಿದ್ದುತ
ಪ್ರಾರಂಭದ ಕರ್ಮಂಗಳುಣಿಸಿ । ಘೋರ ಭವ ಕೂಪಾರ ದಾಟಿಪ
ಧೀರ ಗುರು ಗೋವಿಂದ ವಿಠಲನ । ಅಪಾರ ಕರುಣವ ತುತಿಸಲಾಪನೆ ೩

೮೬

ದರ್ಭಶಯನ ಶ್ರೀರಾಮದೇವರ ಸ್ತೋತ್ರ

ಪಂಕಜಾಕ್ಷ ಮನ । ಪಂಕ ಕಳೆಯೊ ಎನ್ನ ।

ಕರುಣಾರಸ ಪೂರ್ಣ ಪ

ಲಂಕೇಶನನು ಜಗ್ಹೊಲಿದ ಹರಿಯೇ ।
ಆಶ್ರಿತರಿಗೆ ಧೊರೆಯೇ ಅ.ಪ.

ನವಗ್ರಹ ಪೂಜೆಗಳ್ವೊಪ್ಪಿತ್ತೇನೊ ನಿನಗೇ । ಸರ್ವಾಧಾರಕಗೇ।
ತವ ಚರಣಾಬ್ಜ ಸ್ತವನ ಮಾಳ್ಪನರನೂ । ಭವ ವಿಮುಕ್ತನಹನೂ
ಕವಿ ಜನ ನುತ ಸತ್ವವರ ನಿನ್ನ ಲೀಲಾ । ಲೋಕ ಶಿಕ್ಷೆಗನುಕೂಲ ।
ತವಕದಿ ಗೈದೆ ವಿವಿಧ ಪೂಜೆಗಳನ್ನ । ನವ ಪಾಷಾಣಗಳನ್ನ ೧

ಸರ್ಪ ಶಯನ ಪರಿವಾರದೊಡನೆ ಬಂದು । ಶರಧಿ ತೀರದಿ ನಿಂದು ।
ಅಪ್ಪಣೆ ನಡೆಸದ ಸಿಂಧು ಪತಿಯ ನೋಡೀ । ದರ್ಭಶಯನ ಮಾಡೀ
ಕಪ್ಪುಗೊರಳ ಸಖ ಕುಪಿತನಾಗೆ ನೀನೂ । ಬೆದರಿ ಬಿನ್ನವಿಸಿದನೂ
ಒಪ್ಪಿ ಬಂಧಿಸಿದೇ ಸೇತುವೆಯನ್ನಾ । ಭಕ್ತರಿಗೆ ಪ್ರಸನ್ನಾ ೨

ಘಾತಿಸುತಲಿ ಬಲು ಯಾತುಧಾನರನ್ನಾ । ರಾವಣಾದಿಗಳನಾ ।
ಸೀತೆಯೊಡವೆರಸಿ ತೆರಳಿ ನೀನೂ । ಸಲಹಿದೆ ಅನುಜನನೂ ।
ಸೇತು ಬಂಧ ಸಿರಿ ಮಾಧವ ಶ್ರೀನಲ್ಲಾ । ಗುರು ಗೋವಿಂದ ವಿಠ್ಠಲ ।
ಮಾತು ಮಾತಿಗೆ ಕೊಡು ತವ ಲೀಲಾ । ಉಚ್ಚರಿಸುವ ಸೊಲ್ಲಾ ೩

೮೭

ಪಂಡರಿಯ ಪುರನಾಥ । ಭಕುತರ ದಾತಾ ।
ಅಂಡಲೆದು ಜನುಮಗಳ । ಬೆಂಡಾದೆ ಹರಿಯೇ ಪ

ಶ್ವಾನ ಸೂಕರ ಖರದ । ಹೇನು ಹಕ್ಕಿಯ ಮೃಗದ
ಯೋನಿ ಯೋನಿಯ ಚರಿಸಿ । ಬೇನೆಗ್ವೊಳಗಾದೇ
ಮಾನನಿಧಿ ಕಾರುಣ್ಯ । ವೇನ ಬಣ್ಣಿಪೆನಯ್ಯ
ಮಾನವನ ಮಾಡೆನ್ನ । ನೀನಾಗಿ ಪೊರೆದೇ ೧

ಕರ್ಮ ಕೋಟಿಗಳಲ್ಲಿ । ಮರ್ಮಗಳ ಮರೆತಲ್ಲಿ
ಒಮ್ಮನದಿ ಸೂತ್ರಗಳ ತದ್ಭಾಷ್ಯಂಗಳಾ ॥
ಪೇರ್ಮೆಯಲಿ ನೋಡದಲೆ । ಕರ್ಮಚರಿಸಿದೆನಲ್ಲೆ
ಭರ್ಮ ಗರ್ಭನನಯ್ಯ । ನಿರ್ಮಮನ ಮಾಡಯ್ಯ ೨

ಸಕಲ ಶಾಸ್ತ್ರಾರ್ಥಗಳ । ಸಕಲ ಸಾರನೆ ಅಖಿಳ
ಭಕುತ ಜನ ಸಂಸೇವ್ಯ । ಮಧ್ವಮುನಿ ವಂದ್ಯ ॥
ಸಕಲಾತ್ಮಕನೆ ಗುರು । ಗೋವಿಂದ ವಿಠಲಯ್ಯ
ಸಕಲಕೂ ನೀನೇ ಚೇ । ಷ್ಟಕನೆಂದು ತಿಳಿಸೊ ೩

೮೮

ಪಂಪತಟಗನ ಹೃದಯ । ಸಂಪುಟದಲಿಹ ಸದಯ
ಶಂಫಲಿಯ ಪುರವಾಸಿ । ಭಕುತ ಜನ ತೋಷೀ ಪ

ಬಾದರಾಯಣ ಪೂರ್ಣ । ಬೋಧ ತೀರ್ಥರ ಸದನ
ಮಾಧವನೆ ಹಯವದನ । ಸುಗುಣ ಗಣಪೂರ್ಣಾ ॥
ಹೇ ದಯಾಂಬುಧೆ ಚೆನ್ನ । ಯಾದವೇಶನೆ ಎನ್ನ
ಕಾದು ಕೊಳ್ಳೆಲೊ ಘನ್ನ । ಶೀಲ ಸಂಪನ್ನಾ ೧

ಕೃಷ್ಣ ಪದ ಸರಸಿಜವ । ನಿಷ್ಠೆಯಲಿ ಭಜಿಸಿದವ
ಜಿಷ್ಣು ಸಖನಿಗೆ ಪ್ರೀತ । ಮಧ್ವಮುನಿ ಭ್ರಾತಾ ॥
ವಿಷ್ಣು ತೀರ್ಥರ ಹಸ್ತ । ಇಷ್ಟ ಪೂಜೆ ಸಮಸ್ತ
ಅಷ್ಟ ವಿಭವದಿ ಗೊಂಡ । ಶ್ರೀಲಕುಮಿ ಗಂಡಾ ೨

ಕಶಿಪುತನಯನ ಪಾಲ । ಎಸೆವ ಕರುಳಿನ ಮಾಲ
ಕುಸುಮಶರ ಹರ ಪಾಲ । ಕಲಿಕುಲಕೆ ಬಹು ಕಾಲ ॥
ವಸುಮತಿಯ ಶ್ರೀಲೋಲ । ಕಿಸಲಯಾವಳಿ ಮಾಲ
ವಸುದೇವ ಮುದ ಬಾಲ । ಪರಿಪಾಹಿ ಕೋಲಾ ೩

ನಿಜಭೃತ್ಯ ಭಾಷಿತವ । ನಿಜವ ಮಾಡಲು ದೇವ
ನಿಜ ವ್ಯಾಪ್ತಿ ಸ್ತಂಭದಲಿ । ನಿಜದಿ ತೋರುತಲಿ
ಸುಜನ ಜನರುದ್ಧರಣ । ಕುಜನರಸು ವಿಹರಣ
ಅಜ ಜನಕ ವಿಶ್ವೇಶ । ಕರುಣಿಸೆಲೊ ಶ್ರೀಶಾ ೪

ನಿಟಿಲ ನೇತ್ರನ ಬಿಂಬ । ಪಟುವು ವಡವೆಗಳೆಂಬ
ಕಟು ಸವಿಯನುಂಬುವನು । ಸಕಲ ಕ್ರಿಯಗಳನೂ
ಧಿಟ್ಟ ಗುರು ಗೋವಿಂದ । ವಿಠಲ ನಿನ್ನಾನಂದ
ದಿಟವೆಂಬ ವರ ಮತಿಯ । ಪಾಲಿಸೆಲೊ ಜೀಯ ೫

೮೯

ಪನ್ನಗಾಚಲ ವಾಸ – ಪದುಮಿನೀಶಾ ಪ

ಬನ್ನ ಬಡಿಸುವ ರೋಗವನ್ನು ಕಳೆ ಶ್ರೀಶಾ ಅ.ಪ.

ತನುವ ರಥವನೆ ಮಾಡಿ ತತ್ಸೂತ ನೀನೆನಿಸೀ
ಮನ ಆದಿ ಕರಣವೆಂಬಶ್ವಗಳ ಬಿಗಿಸೀ ॥
ಗುಣವೆನಿಪ ವಾಗಭಿ – ಮಾನಿಯನೆ ಬಂಧಿಸೀ
ಚನ್ನ ರಥವನು ಚರಿಪೆ ಜೀ । ವನ್ನ ಕುಳ್ಳಿರಿಸೀ ೧

ಸೂತ್ರಾಂತರಾತ್ಮಕನೆ । ಸೂತ್ರಧಾರಿಯೆ ನೀನು
ಮಾತ್ರಾದಿ ಸುಖ ದುಃಖ । ಸಮವೆಂದು ತಿಳಿಸೋ ॥
ಧಾತೃ ಪಿತ ನೀನಹುದೊ । ಮಾತರಿಶ್ವ ಪ್ರಿಯನೆ
ಗಾತ್ರ ಬಳಲಿಸ ಬೇಡ । ಪ್ರಾರ್ಥಿಸುವ ನಿನ್ನಾ ೨

ಘನ್ನ ಮಹಿಮನೆ ನಿನ್ನ । ಏನು ಬೇಡಲಿ ನಾನು
ನಿನ್ನ ನಾಮ ಸ್ಮರಣೆ । ಅನ್ನಂತ ವೀಯೋ
ನಿನ್ನೊಲಿಮೆ ಉಳ್ಳನಕ । ಇನ್ನಾವ ಭಯವಯ್ಯ
ಪನ್ನಂಗ ಶಯನ ಗುರು । ಗೋವಿಂದ ವಿಠಲಾ ೩

೯೦

ಕರಿಗಿರಿ ನರಹರಿ ಸ್ತೋತ್ರ

ಪರಾಕೆಂಬೆ ಕರಿಗಿರೀಶ । ಪರಾಕೆಂಬೆನೋ ಪ

ಪರಾವರನೆ ಅರೀಧರನೆ ।
ಹರಾದಿನುತ – ವಿರೋಧಿ ಹತ ಅ.ಪ.

ಹತನು ದಿತಿಜ । ಉದರ ದ್ವಿಜ । ಕೃತನು ವಿರಜ
ನುತ ಕಶಿಪುಜ । ನುತ ಭೂಭುಜ । ಪ್ರತಿರಹಿತಜ ಸ್ತುತ
ವ್ರತತಿಜ । ಸುತ ಕಮಲಜ । ಕೃತ ಕಾರ್ಯಜ ವತತಾಚ್ಯುತ
ಹಿತ ಭಾಗ್ವತ । ಕ್ರತು ಶತಗತ – ಸಿತ ಫಲದಾತ ೧

ಮದನತಾತ । ವಿಧಿಯು ಪೋತ । ಸದಮಲಹಿತ ಬುಧ
ಸುವ್ರಾತ ಸದಯ ಚರಿತ । ಮಧು ಅಹಿತ ಹತ
ಸದೆಯ ವಿಧೃತ ಹೃದಯ ಶೋಭಿತ
ಬುಧ ಜನಾಪ್ತ ವದಗೊ ಅಚ್ಯುತ ೨

ದೇವಜಾಲ । ಕಾವಲೀಲ । ಭಾವ ಶೀಲ
ಭೂವಿಲೋಲ । ಭಾವುಕ ಪಾಲ । ಈವ ವರಗಳ
ಲಾವುಕ ಜನ । ತೀವರ ಹನ ।
ಶ್ರೀವರ ಗುರು ಗೋವಿಂದ ವಿಠಲ ೩

೯೧

ಪಾರ್ಥಿವ ವತ್ಸರ ಸಾರ್ಥಕವಾಗಲಿ
ಪಾರ್ಥ ಸಖನ ಗುಣ ಕೀರ್ತಿಸುತಾ ಪ

ಅರ್ಥಿಯಿಂದ ಹರಿಕೀರ್ತನೆ ಮಾಡಲು
ಆರ್ತೇಷ್ಟದ ಸಕಲಾರ್ಥವ ಕೊಡುವ ಅ.ಪ.

ತಾರಣ ವತ್ಸರ ಸಾರಿತು ಹಿಂದೆ
ಸಾರಿತು ನಮ್ಮಾಯುವು ಮುಂದೇ ।
ವಾರಿಜಾನಾಭನ ಸೇರಿ ಭಜಿಸಲು
ಸೇರಲಿಲ್ಲ ನಾವ್ ದಿನ ಒಂದೇ ೧

ತಂದೆ ವೆಂಕಟನ ಪ್ರೇಮದ ದಾಸರು
ಸಂದೇಶವನೆ ಕಳುಹಿಸದರೂ
ಇಂದಿರೆಯರಸನ ಭಕ್ತ ವೃಂದದಿ
ಛಂದಸದಿ ಭಜಿಸೆಂದರುಹಿದರೂ ೨

ಇಂದಿನಿಂದಾದರು ಒಂದು ಗೂಡುತ
ನಂದಕಂದನನು ಭಜಿಸುವ ಬನ್ನಿ
ಸುಂದರ ಗುರು ಗೋವಿಂದ ವಿಠಲನ
ದ್ವಂದ್ವ ಚರಣವನು ವಂದಿಸೆ ಬನ್ನಿ ೩

೬೨

ಪಾರು ಮಾಡೋ ಕೃಷ್ಣಾ । ಪಾರು ಮಾಡೋ ಪ

ಸಾರತರರೊಳು ನೀನು । ಸಾರತಮನೆಂದು ಕೇಳಿ
ಸಾರಿದೇ ನಿನ್ನ ಚರಣ । ಸಾರಸಾಕ್ಷ ಎನ್ನ ಭವ ಅ.ಪ.

ಜಗದೊಳು ರಸವಾರು । ಬಗೆಯೆಂದು ಪೇಳುವರು
ಖಗಗ ನಾಲ್ಕರಡನೆ । ಬಗೆಯುವ ನೀನೆಂದೂ ।
ಪೊಗಳುತಿದೇ ಶ್ರುತಿ । ನಿಗಮ ಗೋಚರ ತವ
ಬಗೆ ಬಗೆ ಮಹಿಮಗಳವಗತ ಮಾಡುತ ೧

ರಸವೆನಿಪುದು ಭೂ । ವಸುಮತಿ ಪಂಚಕೆ
ರಸವಹುದದರಿಂದ । ರಸವೆನಿಪಾಪಾ ।

ರಸವಾಚ್ಯ ವರುಣ ನಾ । ರಸವೆನಿಸುವ ಸೋಮ
ಔಷಧಿ ದೇವನಿಂದ । ರಸವೆನಿಸುವ ರುದ್ರ ೨

ಈಶಗಿಂದಧಿಕ ವಾ । ಗೀಶನ ಭಾರ್ಯೆಯು
ಈ ಸರಸ್ವತಿಯಿಂದ । ಆಸಾಮನಾಮಾ ।
ಆ ಸಾಮುಖ್ಯನಿಲಗು । ಈಶ ಉದ್ಗೀಥನೆ
ಹೇ ಸರ್ವೋತ್ತಮೋತ್ತಮ । ಭಾವಿಸಿ ಮನದಲಿ ೩

ರಸವಾದೊಡೆ ಭೂ । ರಸತಮ ವರುಣನು
ರಸತಮ ಚಂದ್ರ ಪರಮ । ರಸತಮ ಶಂಭೋ ।
ಅಸುಸತಿ ಪರಮ ಪರ । ರಸತಮ ವೆನಿಪಳು
ಸುಸಮ ಪರಮ ಪರರ್ಥ । ರಸತಮ ಪದ ಪಡೆದ ೪

ಮರುತನಾ ರಮಾ ಪರಮ । ಪರಾರ್ಥರಸತಮ
ಹರಿ ಗುರು ಗೋವಿಂದ । ವಿಠಲನೆ ಪರಮಾ ।
ಪರಾರ್ಧ್ಯ ರಸತಮ । ಪರಾರ್ಧಿಯುತನಾಗಿ
ದರುಶನ ಪಾಲಿಸೀ । ಪರಿಹರಿಸುತ ಭವ ೫

೯೩

ಪಾಲಿಸೋ ಕೃಷ್ಣ - ಇವಳ ಪಾಲಿಸೋ ಪ

ಪಾಲಿಸೊ ಪಾಲಿಸೊ - ಭಕ್ತ ಪರಿಪಾಲ
ಪೇಳಬೇಕೇನೋ - ಸರ್ವಜ್ಞ ಸುಶೀಲ ಅ.ಪ.

ಸಂತಾನ ಕಾಂಕ್ಷಿತೆ - ಸಂತತ ನಿನ ಪಾದ
ಚಿಂತಿಲಿಹಳ ಲಕ್ಷ್ಮೀ - ಕಾಂತನೆ ಪಾಲಿಸೊ ೧

ಸಾಂದೀಪ ಗುರುವಿಗೆ - ಕಂದನ ತಂದಿತ್ತೆ
ನಂದ ಗೋಪನ ಕಂದ - ಕಂದನ ಪಾಲಿಸೊ ೨

ಕಂದಿ ಕುಂದಿಹಳು ಸು – ನಂದಳು ಚಿಂತೇಲಿ
ಕಂದನ ಕೊಡು ಗುರು – ಗೋವಿಂದ ವಿಠಲ ೩

೯೪

ಪಾಲಿಸೋ ಮಗುವ ನೀ । ಪಾಲಿಸೋ ಪ

ಪಾಲಿಸದಿದ್ದರೆ । ಬಿಡೆ ನಿನ್ನ ಪಾದವ
ಶೈಲಜ ಪತಿ ಸಖ । ಕಾಲಿಗೆ ಬೀಳುವೆ ಅ.ಪ.

ಖಿನ್ನ ಮನದಿ ಬಾಲ । ಇನ್ನೆಲ್ಲಿ ಪೋದನೊ
ಬಿನ್ನವಿಸುವೆ ಕೃಷ್ಣ । ಬನ್ನ ಬಡಿಸ ಬೇಡ ೧

ನಿನ್ನ ಪ್ರಾರ್ಥನೆ ಬಿಟ್ಟು । ಅನ್ಯ ಗತಿಯ ಕಾಣೆ
ಪನ್ನಗ ನಗಪತಿ ಆ । ಪನ್ನ ಪರಿಪಾಲ ೨

ಭಯ ಕೃದ್ಭಯ ನಾಶ । ದಯೆ ಪರಿಪೂರ್ಣ ನಿ
ಭಯವ ನೀನಿತ್ತೀಗ ಅ । ಭಯವ ಪಾಲಿಸೋ ೩

ಮಗುವಿನ ಮನದೊಳು । ಹಗುರವ ಮಾಡಿದೆ
ಹಗರಣವೇಳಿನ್ನೂ । ನಿಗಮಾದಿ ಪ್ರತಿ ಪಾದ್ಯ ೪

ಮೊರೆಯನಿಡುವ ತಾಯ । ಮೊರೆಯ ಕೇಳಿಸದೇನೊ
ತ್ವರಿತದಿ ಕಾಯೊ ಶ್ರೀ । ಕರಿರಾಜ ವರದಾ ೫

ವತ್ಸನ ಕರೆ ತಂದು ಉತ್ಸಾಹ ಕೊಡು ಭೃತ್ಯ
ವತ್ಸಲನುಬಂಧ । ಬಿರಿದುಳ್ಳ ದೇವನೇ ೬

ಪೋರನಸುವ ಕಾಯ್ದು । ಭಾರ ನಿನ್ನದೊ ಹರಿ
ನಾರಸಿಂಹನೆ ಗುರು । ಗೋವಿಂದ ವಿಠ್ಠಲ ೭

೯೫

ಪಾಲಿಸೊ ಮನ್ಮಾನಸಾ । ಮಂದಿರ
ಶ್ರೀಲೋಲ ಭಕ್ತ ಪೋಷ ಪ

ಕಾಲಕಾಲಕೆ ಹೃದಯಾಲಯದಲಿ ತೋರೊ
ವಾಲೀ ಭಂಜನ ರಾಮ । ಗಾಳಿ ಸುತಗೆ ಪ್ರೇಮ ಅ.ಪ.

ದೈತ್ಯ ಜನರು ಬಹಳಾ । ಎನ್ನ ತಮ್ಮ
ಭೃತ್ಯನ ಮಾಡಿ ಜಗಳಾ ॥
ನಿತ್ಯವಾಡುತಲೆನ್ನ । ಕೃತ್ಯಾಗಳಿಗೆ ದೋಷ
ಎತ್ತಿಸುತಿಹರಯ್ಯ ದೈತ್ಯ ನಿಷೂದನ ೧

ಸಂಚೀತಾಗಾಮಿ ನಾಶಾ । ಗೈ ಭವ
ವಂಚೀತನಿಹೆ ಶ್ರೀಶಾ ॥
ಹೆಂಚು ಹಾಟಕ ಸಮ । ಸಂಚಿಂತನೆಯ ಕೊಟ್ಟು
ಕೊಂಚ ಮತಿಯ ಕಳೆ । ವಾಂಛಿತಾರ್ಥದ ಹರಿ ೨

ಜನ್ಮಾಜನ್ಮವು ಬರಲೀ । ತವಸ್ಮೃತಿ
ಕರ್ಮಾಕರ್ಮದೊಳಿರಲೀ ॥
ಭರ್ಮ ಗರ್ಭನಯ್ಯ । ಸುಮ್ಮನಸರ ಪ್ರೀಯ
ನಿರ್ಮಲ ಭಕ್ತಿಯಿತ್ತು । ಹರ್ಮ್ಯದೊಳಗೆ ತೋರೊ ೩

ಚರಾಚರದಿ ವ್ಯಾಪ್ತಾ । ಜಗದೊಳು
ಸುರರು ಭೂಸುರ ಗೋಪ್ತಾ ॥
ಖರಾರಿ ಜಗ ಭೋಕ್ತ । ಹರಾದಿ ಸುರನುತ
ಪರಾವರೇಶ ತವ । ಸ್ಮರಣೆ ಭಂಜನ ಭವ ೪

ಗುರು ಗೋವಿಂದ ವಿಠಲಾ । ತವಸ್ಮೃತಿ
ಹರಿಸೋಮ ಮಾಯ ಪಟಲ ॥

ಚಾರು ಚರಿತ ಭವ । ವಾರೀಧಿ ತವನಾಮ
ಪಾರು ಮಾಡಯ್ಯ ಭವ । ಕಾರುಣ್ಯಾತ್ಮಕ ದೇವ ೫

೯೬

ಪ್ರಾಣಾಂತರ್ಗತ ಜ್ಞಾನಾನಂದಾ । ಮಯ
ಶ್ರೀನಿವಾಸನೆ ಗೋವಿಂದಾ ಪ

ಗಾನಲೋಲನೆ ನಿನ್ನ । ಧ್ಯಾನ ಪಾಲಿಸಿ ಇನ್ನು
ಜ್ಞಾನವಂತರ ಸಂಗ । ಸಾನು ಕೂಲಿಸಿ ಕಾಯೋ ಅ.ಪ.

ಅರುಣಾಬ್ಜೋಪಮ ಚಾರು ಚರಣಾ । ರಂಭ
ತೆರನಂತೆ ಊರುಗಳ್ಹಸನಾ ।
ಕರಿಯೆ ಸೊಂಡಲು ಪೋಲ್ವ । ಚತುರ್ಭುಜಗಳು
ಅರಿದರಾಭಯ ಸುಂ । ದರ ಹಸ್ತ ಶೋಭಿತ
ದ್ರುತ – ಕರಿಯ ವೈರಿಯ ಮಧ್ಯವೊಪ್ಪುವ ।
ವರ ಕಟಿಯು ಸುಳಿನಾಭಿ ತ್ರಿವಳಿಯು
ದರ ಹಾರಾ ಕೌಸ್ತುಭದಿ ಬಹು ।
ಮೆರೆಯುತಿಹ ವರ ಕಂಬು ಕಂಠಾ ೧

ಅಕ್ಷಿಗಳರವಿಂದ ವಿಸ್ತಾರಾ । ಲಕ್ಷ್ಮಿ
ವಕ್ಷದಿ ಮೆರೆವ ಗಂಭೀರ ।
ಲಕ್ಷ್ಮಣಾಗ್ರಜ ಸ । ಲ್ಲಕ್ಷಣ ಪುರುಷ ಲೋಕಾ
ಧ್ಯಕ್ಷ ಪಾಂಡವ । ಪಕ್ಷ ಸಜ್ಜನ ತೋಷಾ ।
ದ್ರುತ – ಅಕ್ಷರಗಳ ಕ್ಷರ ಪೂಜ್ಯ ಚರಣನೆ ।
ಅಕ್ಷಯಾಂಬರ ತರಳೆಗಿತ್ತವ
ಅಕ್ಷರಳ ಲೆಕ್ಕಿಸದೆ ಬ್ರಹ್ಮನ
ಕುಕ್ಷಿಕಮಲದಿ ಸೃಷ್ಟಿಸಿದ ಮಹಿಮ ೨

ತಿರುಪತಿ ವೆಂಕಟರಮಣಾ । ಬಲು
ಶರಣರ ಪಾಲಿಪ ಕರುಣಾ । ಪರಮ
ಪೂರುಷ ಮಿತಿ । ವಿರಹಿತ ರವಿಶಶಿಪ್ರ
ಖರನಂತಾ ಕೋಟಿ । ಸ್ಮರ ತೇಜ ಗುಣಪೂರ್ಣಾ
ದ್ರುತ – ಗುರು ಗೋವಿಂದ ವಿಠಲನೆ ನಿನ್ನಯ ।
ಚರಣ ನೀರೇರುಹವ ಕಾಂಬುವ
ಪರಮ ಸುಖ ಸಂದೇಹವೆಂದೋ ।
ಪರಮ ಪಾತಕಿಯಾದ ಎನಗೆ ೩

೯೭

ಬಂದ ಕೃಷ್ಣ ಚಂದದಿಂದ । ಕೊಳಲನೂದುತ ಪ

ಮಂದಹಾಸ ಬೀರಿ ಸುಜನ । ವೃಂದ ನೋಡುತ ಅ.ಪ.

ಹೃದಯದಾರ್ತಿ ನೀಗಿ ಮನಕೆ । ಮುದವ ತೋರುತ
ಸದಯ ಹೃದಯ ಬದಿಗನಾಗಿ । ಅಭಯ ನೀಡುತ ೧

ತುಡಗ ತಾನು ಪಿಡಿದ ಕೊಳಲ । ಬೆಳಕ ಮಾಡುತ
ಹುಡುಗ ತಾನು ಕಂಡು ಕಾಣ । ಧಾಂಗೆ ತೋರುತ ೨

'ಸೇವ್ಯ ಮಾನ ಮಾನಸಾಂದ । ಮಾನ ಸಾಂಡಂ'
ಕಾವ್ಯ ಭೋದಿ ಗುರು ಗೋವಿಂದ । ವಿಠಲ ವ್ಯಕ್ತಂ ೩

೯೮

ಬಂದಾ ನೋಡೇ – ವಿಠಲಾ ಮನೆಗೇ
ಬಂದಾ ನೋಡೇ – ವಿಠಲಾ ಪ

ನಂದನ ಕಂದನ ಯಶೋದೆಯಾನಂದ ಅರ
ವಿಂದ ನಯನ ಗೋವಿಂದ ಮುಕುಂದನು ಅ.ಪ.

ಇಂದು ಭಾಗದಿ ವಾಸಾ । ಧೂರ್ಜಟಿ ।
ಇಂದು ಮೌಳಿಯ ಪೋಷಾ ॥
ತಂದೆ ಸೇವಕ ಭಕ್ತ । ನಿಂದಿರೆ ಪೇಳಲು
ಅಂದ ಇಟಗಿ ಮೇಲೆ । ನಿಂದ ಆನಂದದಿ ೧

ಪಂಢರ ಪುರೆಯಲ್ಲಿಹ । ತನ್ನಯ ।
ತೊಂಡ ಜನರ ದೋಷ । ಅಪ ।
ಪಾಂಡವ ಪ್ರಿಯ ಪದ । ಬಂಡುಣಿಯೆನಿಸಿಹ
ಪುಂಡಲೀಕನಿಗೊಲಿಯೆ । ಗೊಂಡು ಮಾನುಷ ವೇಷ ೨

ಕುಂಡಗೋಳಕರ ಸಖಿ । ಅವರ್ಗಳ ।
ದಿಂಡುಗಳ ಪೋಷಕ । ಅಪ
ಭಾಂಡಕಾರಕ ಮಣ್ಣು । ಉಂಡು ಒಡವೆಗಳ
ಗೊಂಡು ಅವನ ಕಾಯ್ದು । ಪುಂಡರೀಕಾಕ್ಷ ಶ್ರೀಶ ೩

ಗೊಂಡು ಮತ್ಸ್ಯದ ಕಾಯ । ಬೆನ್ನಲಿ ।
ಅಂಡ ಪೊತ್ತಿಪ ರಾಯ ॥
ಭೂ _ ಮಂಡಲ ಪೊತ್ತೆದಾಡೆ । ತೊಂಡ ಪ್ರಹ್ಲಾದ ವರದ
ದಂಡ ಕಮಂಡಲಜಿನ । ಭಂಡ ಕ್ಷತ್ರಿಯರ್ದನನ

ಪೆಂಡತಿಗಾಗಿ ತಿರುಗಿ । ಕಾನನ ।
ಕೌರವರಸು ನೀಗಿ ॥ ಅಪ
ಶೌಂಡನು ತ್ರಿಪುರರ । ಪೆಂಡರ ವಂಚಿಸ್ಯು
ದ್ದಂಡ ಹಯವನೇರಿ । ರುಂಡ ಮ್ಲೇಂಛರ ತರಿದೆ ೫

ಮಕರ ಕುಂಡಲಧಾರೀ । ಶೋಭಿತ ।
ಪ್ರಖರ ಕಿರೀಟ ಮೌಳೀ ॥

ವಿಖನಸಾಂಡಾಧಿಪ । ವಿಕಸಿತ ಕೌಸ್ತುಭ
ಪ್ರಕಟ ಕೊರಳ ಮಾಲೆ । ನಿಕಟ ಶ್ರೀವತ್ಸಕೆ ೬

ಕೊರಳೊಳು ವೈಜಯಂತೀ । ರೂಪದಿ ।
ಶಿರಿಯೇ ಶೋಭಿತ ಕಾಂತೀ ॥
ಧರಸಿಹ ತುಳಸಿಯ । ಪರಿಪರಿ ವನಮಾಲೆ
ಬೆರಳೊಳು ಉಂಗುರ । ವರ ರತ್ನ ಖಚಿತವು ೭

ಗೆಜ್ಜೆ ಸರಪಳಿ ಸುಂದರ । ಸೊಂಟವು ।
ಗೆಜ್ಜೆ ಕಾಲಲಿ ನೂಪುರ ॥
ಕಜ್ಜಲ ಕಂಗಳು ಗೆಜ್ಜೆ ನಾದದಿ ಒಪ್ಪ
ಬೊಜ್ಜೇಲಿ ಬ್ರಹ್ಮಾಂಡ । ಸಜ್ಜಗೊಳಿಸಿ ಇಹ ೮

ಚಕ್ರಶಂಖವು ಶೋಭಿತ । ಕೈಗಳು ।
ನಕ್ರ ಹರಗೆ ಕಟಿತಟ
ವಕ್ರ ಮನದವರ । ಸೊಕ್ಕನು ಮುರಿಯುತ
ಅಕ್ಕರ ಭಜಿಪರ । ಸಿಕ್ಕನು ಬಿಡಿಸುವ ೯

ಮಾಸ ಮಾರ್ಗಶೀರ್ಷವು । ನವಮಿ ತಿಥಿ ।
ಅಸಿತ ತಾರೆಯು ಚಿತ್ತವು ॥
ವಾಸರ ಭಾರ್ಗವ । ನಿಶಿಯೊಳ್ನಗುತ ಪ್ರ-
ವೇಶಿಶಿದನು ಗೃಹ । ವಾಸವಾನುಜ ಶ್ರೀಶ ೧೦

ಭಾವುಕರ ಪರಿಪಾಲ । ಬಂಡಿಯ ।
ಬೋವನಿದ್ದ ಸುಶೀಲ ॥ ಆಹಾ
ದೇವಾದಿ ದೇವನು । ಮಾವಿನೋದಿಯು ಗುರು
ಗೋವಿಂದ ವಿಠಲನು । ತೀವ್ರ ಫಲಪ್ರದ ೧೧

೯೯

ಬಂದ ಬಂದ ವಾಯು ಪೆಸರಿನವ – ರಿಂದ
ಅನಿಮಿತ್ತ ಬಂದು ವೆಂಕಟ ನಿಲಯ ಪ

ದೃತ – ಇಂದಿರೆ ಸುತನೆನೆ । ಸುಂದರನೂ ಮಮ । ಮಂದಿರ ಸೇರಲು
ನಂದದಿ ಬಂದನು । ಚಂದ್ರ ಭಾಗ ತಟ । ಸುಂದರ ವಿಠಲನು
ಮುಂದೆ ಬರುವ । ನೆಂದೆಂಬುದ ಸೂಚಿಸೆ ಅ.ಪ.

ರತುನ ಖಚಿತ ವರ ಕಿರೀಟ । ಅತುಳ ಪ್ರಭೆಯ ಮಕರ ಕುಂಡಲ
ವಿಸ್ತಾರದಿಂದಲಿ ಮೆರೆವ । ತಿಲಕ ಕಸ್ತೂರಿ ಫಣೆಯಲ್ಲೊಪಿ ಧರಿಸಿಹ ॥
ಪೊತ್ತು ಮುಗುಳು ನಗೆ । ನಿತ್ಯಾನಂದನು
ಕತ್ತಿ ನೊಳ್ಹಾರಗಳ್ । ಮುತ್ತು ನೀಲಮಣಿ
ಯುಕ್ತವಾಗಿರುತಿರೆ ಮುತ್ತು ಕೌಸ್ತುಭ
ಬ್ರಹ್ಮಾ ಧಿಷ್ಠಿತವಾಗಿರೆ ಹೃತಮ ಕಳೆ ಹರಿ ೧

ಹೇಮದಾಮ ದುಡಿಯ ಗೆಜ್ಜೆ । ಕಾಮನಯ್ಯನು ಧರಿಸಿ ಮೆರೆವ
ಸೋಮಕುಲ ಸುಭೂಷ ದಿವ್ಯ । ಧಾಮದಲ್ಲಿ ಶೋಭಮಾನ ॥
ಶ್ರೀ ಮಹಿಳೆಯು ಎಡ । ಪದ್ಮ ಹಸ್ತ ಬಲ
ಭೂಮಾಂಬೆಯು ಬಲ । ಪದ್ಮ ಹಸ್ತ ಎಡ
ಭೂಮಾರ್ಣವ ಗುಣ । ಸ್ತೋಮ ತುತಿಸುತಲಿ
ಆ ಮಹ ದಿವಿಜರ । ಸ್ತೋಮ ನಿಚಯವಿರೆ ೨

ವರ್ಷವು ಪರಿಧಾವಿಯಲ್ಲಿ । ವಿಶಿಖ ಮಾಸ ದಾಸರ ಸೌಮ್ಯ
ದಶಮಿ ದಿನದಿ ಅಸಿತ ಪಕ್ಷ । ಬಿಸರುಹಾಂಬಕ ಬಂದ ಮನೆಗೆ ॥
ಕುಸುಮನಾಭ ಸಿರಿ । ಶೇಷಗಿರೀಶನು
ಒಸೆದು ಹಸ್ತ ಎಡೆ । ಎಸೆವ ಕಟಯಲಿಟ್ಟು
ವಸುದೇವ ಸುತ ಬಲ । ಹಸ್ತ ಅಭಯ ತೋರಿ
ಬಸುರಿಲಿ ಬೊಮ್ಮನ । ಪ್ರಸವಿಸಿರವ ಹರಿ ೩

ಇಷ್ಟ ದೈವ ತಾನು ತನ್ನ ಕಟಿಯಲಿಟ್ಟು ಎಡದ ಹಸ್ತ
ಕಟುತರ ಸಂಸಾರ ಶರಧಿ । ಕಟಿಯ ಮಿತವು ಭಕುತಗೆಂದ ॥
ವಿಠಲಾಗಮನವು । ದಿಟವೆನೆ ಸೂಚಿಸಿ
ಎಟಿ ಪಾದವು ಸುರ । ತಟನಿಗೆ ಕಾರಣ
ಪಟುಘಟರೆನಿಸುವ । ನಿಟಿಲ ನಯನ ಸುರ
ಕಟಕವ ಪಾಲಿಪ । ಧಿಟ ದೊರೆ ವೆಂಕಟ ೪

ಕುಲದ ದೈವ ವೆಂಕಟಾದ್ರಿ । ನಿಲಯ ಬಂದ ಮೇಲೆ ಅಭಯ
ದೊಲವಿನಿಂದ ಹಲವು ಕಾರ್ಯ । ವಿಲಸಿತಾಮಲ ಪ್ರೇಮದಿಂದ ॥
ಬಲು ತತ್ವರ ಸಹ । ಕೆಲಸಕ್ಕಾಸ್ಪದ
ಬಲ ಹಸ್ತದಿ ಅರಿ । ಪೊಳೆವ ಶಂಖ ಎಡ
ನಿಲವು ಮಾಟವಿಗೆ । ಗೆಲವು ಸುರರಿಗೆನೆ
ಕಳೆ ಕಳೆ ನಗು ಗುರು । ಗೋವಿಂದ ವಿಠಲ ೫

೧೦೦

ಬಂದ ಬಂದ ಹಿಮದ ಗಿರೀ । ಯಿಂದ ಅನಿಮಿತ್ತ ಬಂಧು ।
ಬದರಿವಾಸ । ಬಂದ । ಬಂದ ಪ

ದ್ರುತ – ಇಂದಿರೆ ಅಜ ಭವ । ಇಂದ್ರ ಮುಖ್ಯ ಸುರ
ವೃಂದ ಪೊಗಳುತಿರೆ । ಸುಂದರ ಪಲ್ಲಕಿ
ಚೆಂದ ಪೀಠ ಕ್ಷಿತಿ । ವೃಂದಾರಕ ವಹ
ಬಂದನು ತಾ ಮಮ । ಮಂದಿರಕಿಂದೂ ಅ.ಪ.

ವರ ಕಿರೀಟ ಕರ್ಣಕುಂಡಲ । ಧರಿಸಿ ಕಸ್ತೂರಿ ತಿಲಕ ಫಣಿಯ
ಮೆರೆವ ಉಂಗುರ ತೋಳ ಬಾಪುರಿ । ಕೊರಳ ಕೌಸ್ತುಭ ಹಾರ ಸುಂದರ ॥
ವರ ವಿಸ್ತರ ಉರ । ಸಿರಿ ವತ್ಸಾಂಕಿತ
ಸುರಚಿರೋದರವು । ಮೆರೆವ ತ್ರಿವಳಿಯಿಂ
ವರ ಪಟ್ಟೆಕ ವಸನವು । ತರ್ಕ ಚಿಹ್ನಿತಕರ
ಸುರ ಭೂಸುರರಿಗೆ । ವರ ಜ್ಞಾನದ ಹರಿ ೧

ತಟಿತ ಕೋಟಿ ನಿಭದ ಕಾಯ । ಪಟುತರಾಂಗ ಸುಮನ ಗೇಯಾ
ಕುಟಿಲ ರಹಿತರೆನಿಪ ಭಜಕ । ಕಟಕ ಪಾಲಿಪ ವ್ರತವು ಸಂತತ ॥
ಜಟಿ ಭೂಷಾಂಚಿತ । ನಟಿಸುತ ನರರೊಲ್
ತೃಟಿಯು ಬಿಡದೆ ಕರ । ಪುಟದಲಿ ಜಪಮಣಿ
ಕಟಕ ಧರಿಸಿ ಸುರ । ತಟನಿ ತೀರಗ ಸುರ
ಕಟಕವೆರಸಿ ಉತ್ । ಕೃಷ್ಟನು ಮಮ ಮಂದಿರಕೆ ೨

ವಿಜಯ ದಶಮಿ ಹೇವಿಳಂಬಿ । ನಿಜಗುರೂ ಪ್ರಸಾದದಿಂದ
ತೈಜಸ ರೂಪಿ ಬದರಿ ವಾಸ । ಬಿಜಯಗೈಸಿ ಕರುಣ ತೋರ್ದ॥
ಭಜಕಾಭೀಷ್ಟದ । ಸುಜನ ಸುರದ್ರುಮ
ಕುಜನಾರಾತಿಯು । ರಜಮಾರನು ಸುರ
ವ್ರಜವು ಪೊಗಳುತಿರೆ । ಮಝು ಭಾಪೆಸೆ ಮಮ
ರಜವ ಕಳೆಯೆ ಗುರು ಗೋವಿಂದ ವಿಠಲ ೩

೧೦೧

ಬಂದಾಳು – ಬಂದಾಳು ಕನ್ನಿಕೆಯಾಗ ॥
ಮೋಹನ್ನ ರೂಪದಿ ಪ

ಇಂದಿರೆ ಪತಿ ಸುರವೃಂದ ಪೊರೆಯಲು
ಮಂದರಧರ ಆನಂದವ ಬೀರುತ ಅ.ಪ.

ಕರದಲಿ ಕಂದುಕ ಪುಟ ನೆಗೆಸುತ್ತ । ಅತ್ತಿತ್ತಲಿ ಬರುತ ।
ಸುರರು ಅಸುರರೆಲ್ಲರು ಬಡಿದಾಡುತ್ತ । ಇಹಸ್ಥಲ ಗಮಿಸುತ್ತ ॥
ಕಿರುನಗೆ ನೋಟದಿ । ಬರ ಸೆಳೆಯಲು ಮನ
ವೆರಗಿತು ಹೆಣ್ಣಲಿ । ಪರಿ ಪರಿ ಭಾವದಿ ೧

ಘಲು ಘಲ್ಲು ಘಲಿರೆನ್ನಲು ಗೆಜ್ಜೆಯನಾದ । ಅಸುರರಿಗುನ್ಮಾದ ।
ಕೆಲಸಾರಿ ಕೆಲ ಸಾರೆನ್ನುತಲೀ ನಾದ । ಆಯಿತು ವಿವಾದ ॥

ಘಳಿಗೆಯೊಳಮೃತದ । ಕಲಶ ಕನ್ನಿಕೆ ಕರ
ತಲದೊಳಗಿರಿಸುತ । ಬಲು ಬಲು ವಂದಿಸೆ ೨

ಸಾಲು ಸಾಲಾಗಿ ಕುಳ್ಳಿರಲಾಗ । ಕಣ್ಮುಚ್ಚಿರೆಂದಳಾಗ
ಕಾಲಾಲಂದಿಗೆ ಝಣಿ ಝಣಿಸುವ ಸೋಗ । ಹಾಕಿದಳ್
ತಾನಾಗ । ಕೈಲಿ ಕಲಶ ಸೌಟು । ಚಾಲಿಸುತಲಿ ಸುರ
ಪಾಳಯ ಕುಣಿಸುತ । ಜಾಲ ಮಾಡಿದ ಹೆಣ್ಣು ೩

ದಿವಿಜಾರ ಮಧ್ಯದಿ ರಾಹುವು ತಾನು । ಎತ್ತಲು ತನ ಗೋಣು
ರವಿಯು ಚಂದ್ರಮರ ಸೂಚನೆಗಳನು । ಅನುಸರಿಸುತ ಪೆಣ್ಣು
ಹವಣಿಸಿ ಚಕ್ರದಲವನ ಕೊರಳನೂ
ಜವದಿ ಕಡಿಯೆ ಗ್ರಹವೆರಡೇರ್ಪಟ್ಟವು ೪

ಸಾಧನ ಸಾಧ್ಯವು ಸಮವಿಬ್ಬರಿಗೇ । ಸುರರು ಅಸುರರಿಗೇ ।
ಆದಾವು ಫಲ ಬೇರೊಬ್ಬಬ್ಬರಿಗೆ । ಸ್ವರೂಪ್ಯೋಗ್ಯತೆಗೇ ॥
ವೇದ ವೇದ್ಯ ಗುರು ಗೋವಿಂದ ವಿಠಲನು
ಸಾಧು ಪೆಣ್ಣು ಸಮ ವೈಷಮ್ಯ ರಹಿತ ೫

೧೦೨

ಬಯಸೋದು _ ಉತ್ತಮ ಸಂಗ – ಬಯಸೋದು ಪ

ಬಯಸೂವುದುತ್ತಮ ಸಂಗ । ಭವ
ಭಯ ಪರಿಹರಿಸೂವ ಸಂಗ । ಆಹ
ಭಯ ದೂರಾಭಯಪ್ರದ । ದಯ ಪೂರ್ಣ ಹರಿಯ ಹೃ–
ದಯ ವ್ಯಾಪ್ತವಾದಂಥ । ವಿಯದೊಳು ಕಾಂಬಂಧ ಅ.ಪ.

ಭುವನ ತ್ರಯಂಗಳ ವಿಭವ । ಹೇತು
ಇವರೆಂದು ಖ್ಯಾತಿಲಿ ಇರುವ । ಬೊಮ್ಮ

ದಿವಿಜೇಡ್ಯ ವೈಕುಂಠನವ । ಮೃಗ್ಯ
ನವರಿಂದನಾಗುತಲಿರುವ । ಆಹ
ಅವನ ಪದ ಕಮಲದಿ । ಧೃವ ಚಿತ್ತ ಉಳ್ಳವ
ರವರಿಗೆಂಬರು ವೈ । ಷ್ಣವಾಸ್ಯರೆಂದೆನುತಲಿ ೧

ಉರುತರ ವಿಕ್ರಮ ಚರಣ । ಅವರ
ಬೆರಳಿನ ನಖಮಣಿ ಕಿರಣ । ಚಂದ್ರ
ಕಿರಣದಂತೆ ತಾಪ ಶಮನ । ಸೇವಿ
ಪರ ಹೃದಯಾಂತಃಕರಣ । ಆಹ
ದಿರುತ ತೋರಿಕೊಳ್ಳೆ । ತಾರೇಶನಂದದಿ
ಪರಿತಾಪವಿನ್ನುಂಟೆ । ಮರಳಿ ಅಂಥವನಿಗೆ ೨

ಶುದ್ಧಾಂತಃಕರಣರ ಭಕ್ತಿ । ಪಾಶ
ಬದ್ಧನಾಗಿಹ ಹರಿಮೂರ್ತಿ । ಇಂಥ
ಶುದ್ಧರ ವಸ ಹರಿಕೀರ್ತಿ । ಇಂದ
ದಗ್ದ ಪಾಪದ ಮೂಟೆ ಭರ್ತಿ । ಆಹ
ಊರ್ಧ್ವ ಪುಂಡ್ರವು ಶಂಖ । ಮುದ್ರಾದಿ ಚಿನ್ಹಿತ
ಶಬ್ದರಿವರು ಪ್ರ । ಸಿದ್ಧ ಭಾಗ್ವತರೆಂದು ೩

ಕಾಮ ಕಾರ್ಮಾಅವಿದ್ಯದಿಂದ । ದೇಹ
ಭೂಮಿಯೊಳುತ್ಪನ್ನದಿಂದ । ಜಾತಿ
ಬ್ರಾಹ್ಮಣಾಹಂಭಾವದಿಂದ । ಶೂನ್ಯ
ಶ್ರೀಮನೋಹರ ಜೀವರಿಂದ । ಆಹ
ಸಾಮಸನ್ನುತ ಭಿನ್ನ । ನೇಮ ತಿಳಿದು ತಾರ–
ತಮ್ಯವ ತಿಳಿದವ । ಪ್ರೇಮ ಭಕ್ತನವನು ೪

ನೋವು ಸಂತೋಷಗಳೆಂಬ । ದ್ವಯ
ಭಾವಗಳ್ಸಮತೇಲಿ ಉಂಬ । ಜ್ಞಾನಿ
ದೇವ ದೇವಗೆ ಪ್ರಿಯನೆಂಬ । ಬುದ್ಧಿ
ಲೋಪಿ ಅವರ ಭಜಿಸೆ ತುಂಬ । ಆಹ

ಗೋವ ಪಾಲಕ ಗುರು । ಗೋವಿಂದ ವಿಠ್ಠಲ
ಕಾವನು ಬೆಂಬಿಡದೆ । ಈ ವಿಧ ಭಕುತರ ೫

೧೦೩

ಬರಬಾರದೇನೋ ಹರಿಯೇ । ಹೇ ದೊರೆಯೆ ಪ

ಕರೆದು ಚೀರುತಲಿರೇ । ಮರೆಯಲಿಪ್ಪುದು ಥರವೇ ಅ.ಪ.

ತರಳೆ – ದ್ರುಪದನ ತನುಜೇ । ಮೊರೆ ಇಡೆ ನಿನಗಂದೂ
ವರವ ಅಕ್ಷಯ ಹಾಕೀ । ಭರದಿ ಸಲಹಿದೆ ಅಂದೂ ೧

ಸರಿ ಅಧಿಕರು ನಿನಗೇ । ನರ ಸುರರಲಿ ಯಾರೂ
ಇರರು ಎಂಬುದ ತಿಳಿದು । ಗರುವ ಮಾಡುವಿ ಏನೊ ೨

ಬಂಧು ನೀನಲ್ಲವೇನೋ । ಎಂದೆಂದಿಗೂ ನೀನು
ಇಂದು ಎನ್ನಯ ಕಣ್ಣಾ । ಮುಂದಕೆ ಬಂದು ನಿಲ್ಲೋ ೩

ದೇಹದಿ ಜೀವಾಂತರದೀ । ಬಹಿರಂತರದಿ ವ್ಯಾಪ್ತ
ಮುಹುರ್ಮುಹು ಪ್ರಾರ್ಥಿಸುವೇ । ಮಹ ಮಹಿಮನೆ ಬಾರೊ ೪

ಗುರು ಗೋವಿಂದ ವಿಠಲಾ । ಸುರ ಶತೃಗಳು ಪಟಲಾ
ಹರಿಸೆನ್ನ ವಿದ್ಯಾಪಟಲಾ । ತೋರೋ ನಿನ್ನ ಮುಖ ಕಮಲಾ ೫

೧೦೪

ಬಾ ಗೋಪತಿ ಗೋಪನೆ ಮನ್ಮನಕೆ ।
ತಡಮಾಡುವುದ್ಯಾಕೆ
ಭೋಗಿ ಮದಾಪಹ । ಆಗಮ ವೇದ್ಯನೆ ।
ನಮಿಸುವೆ ತವಪದಕೆ ಪ

ನೀಗುವುದೆನ್ನೆಯ ಘಾವಳಿ ನಿಜಯವ
ಬಾಗುತ ಬೇಡುವೆ ಯೋಗಿ ವರೇಣ್ಯಾ ಅ.ಪ.

ದ್ವಾರಾವತಿವಾಸ ಗೋಪೀಶ । ಆನತ ಜನ ಪೋಷಾ
ಸಾರಾ ಅಸಾರ ಜಗದಾಧೀಶ । ತಾರೇಶ ಭಾಸಾ ।
ವಾರಾಶಿಜೆ ಲಕುಮಿಯು । ನೀರಜ ಸಂಭವ
ಮುರಾರಿಗಳಿಂದಲಿ ಆರಾಧಿಪ ಪದ ೧

ನವನೀತ ಚೋರ । ಪಾವನ ಚರಿತ । ಸ್ವರತ ಅನವರತ
ಭುವನೈಕ ವಂದ್ಯ ವಿಶೋಕದಾತ । ಸಮಅಧಿಕ ರಹಿತ
ಅವನಿಜೆ ವಲ್ಲಭ । ತ್ರಿವಿಧರಿ ಗೋಸುಗ
ವಿವಿಧ ರೂಪಂಗಳ । ತಾಳುವ ಖ್ಯಾತ ೨

ಹಂಸ ಡಿಬಿಕ ಶಕಟಾರಿ ಮುರವೈರಿ । ಮುಷ್ಠಿಕಮಲ್ಲಾರಿ
ಕಂಸಾರಿ ವತ್ಸಾರಿ ಪರಮ ಉದಾರಿ । ಬಾಬಾರೆಲೊ ಶೌರಿ
ಶಿಂಶುಮಾರ ಸುರ ಸಂಶಯ ಹರಿಸಲು ।
ಸ್ವಾಂಶದಿ ಜನಿಸುತ ಭಕ್ತರುದ್ಧರಿಸಲು ೩

ಕರುಣ ವನದಿ ಶರಣಾಗತ ಪರಿಪಾಲ ॥ ಶಿರಹರ ಶಿಶುಪಾಲ
ತರಳ ಧೃವಾದಿಯ ಪೊರೆವುದು ತವಶೀಲ । ಪಾಲಿಸು ಶ್ರೀಲೋಲ
ಕರಣ ನಿಯಾಮಕ ವರ್ಣ ವೇದ್ಯತವ
ಚರಣ ಬಯಸುವೆ ಹೃದಯ ಸದನಕೇ ೪

ಪುಂಡಲೀಕ ಪ್ರೀಯ ಪಾಂಡವ ವರದಾ । ಅನತ ಜನ ಫಲದ
ಚಂಡ ವಿಕ್ರಮ ತೋಂಡ ಮಾನಗೊಲಿದ । ಭಂಡ ಜನರ ಮುರಿವ
ಬಂಡಿ ಬೋವ ಗುರು ಗೋವಿಂದ ವಿಠಲ
ತೋಂಡ ವರದ ಕಳೆ ಮಾಯಾ ಪಟಲ ೫

೧೦೫

ಬಾರನೇಕೆ ಬಾಲಕೃಷ್ಣನೂ । ಎನ್ನ ಮನಕೆ
ಪೋರ ಶೀಲ ಗೋಪ ಕೃಷ್ಣನೂ ಪ

ಸಾರಿ ಸಾರಿ ಕೂಗಿದಾರೂ । ದೂರವಿರುವನಂತೆ ನಟಿಸಿ
ತೋರಗೊಡನು ತನ್ನ ರೂಪ । ಅರಿಗ್ಹೋಗಿ ಪೇಳಲಮ್ಮ ಅ.ಪ.

ಗೊಲ್ಲರೊಡನೆ ತಾನು ಸೇರುತಾ । ಗೋವುಗಳ
ನೆಲ್ಲಮೇಯ್ಯೆ ವನವ ಸಾರುತಾ ॥
ಚೆಲ್ವ ಕೃಷ್ಣ ಗೋಪಿ ಕೊಟ್ಟ । ಕಲ್ಲಿ ಬುತ್ತಿಯೊಡನೆ ಪೋಗಿ
ಹಳ್ಳ ಕೊಳ್ಳದಲ್ಲಿ ಕುಳಿತು । ಮೆಲ್ಲುತಿರುವನೇನೊ ಅಮ್ಮ ೧

ಚೆಂಡು ಬುಗರಿ ಚಿಣ್ಣಿ ಕೋಲನೂ । ಆಡಲ್ಹೋಗಿ
ಕಂಡ ಕಂಡ ಬೀದಿ ವನವನೂ ॥
ಹಿಂಡು ಹಸುಳೆರೊಡನೆ ಸಾರಿ । ಗುಂಡು ಗೋವಿಯಂತೆ ಆಡಿ
ಭಂಡು ಮಾಡಿ ಗೋಪಿ ಜನರ । ಕಂಡು ಕಾಣಧಾಂಗೆ ಇಹನೆ ೨

ತಂದೆ ಮುದ್ದು ಮೋಹನ ಗುರುಗಳೂ । ನಿನ್ನ ರೂಪ
ತಂದು ತೋರಿ ಮನದಿ ನಿಲ್ಲಲೂ ॥
ಅಂದು ಕೇಳಿಕೊಂಡು ಇಹರು । ಅಂದ ವಚನ ಮರೆತೆಯೇನೋ
ತಂದೆ ಗುರು ಗೋವಿಂದ ವಿಠಲ । ಇಂದೆ ನೀನೆ ಮನಕೆ ಪೊಳೆಯೊ ೩

೧೦೬

ಬಾರೊ ಬಾರೊ । ಕರುಣಾಕರ ರಂಗನೆ ಬಾರೊ ॥
ತೋರೊ ತೋರೊ ಚರಣಾರ ವಿಂದವನೆ ಪ

ಮಂದರ ಗಿರಿಧರ ಬಾರೋ ।
ಇಂದಿರೆ ರಮಣನೆ ಬಾರೊ

ಸಿಂಧು ಶಯನ ಅರವಿಂದ ನಯನ । ಎನ್ನ
ತಂದೆ ತಾಯಿ ಬಾರೊ ೧

ಸರ್ಪಶಯನ ಬಾರೊ ।
ಕಂದರ್ಪನಯ್ಯಾ ಬಾರೋ
ಶೂರ್ಪಕರ್ಣ ಪ್ರಿಯ ಭ ।
ಕ್ತಾರ್ಪಿತಾಲ್ಪಕೊಳ್ವ ಬಾರೋ ೨

ದೋಷ ದೂರ ಬಾರೊ ।
ಮಧ್ವೇಶ ವದಗಿ ಬಾರೋ
ಶ್ರೀಶ ಮುದ್ದು ಮೋಹಾಭಿಧ ।
ಗುರು ಗೋವಿಂದ ವಿಠ್ಠಲ ಬಾರೋ ೩

೧೦೭

ಬೇಡ ಬಂದೆನೊ ನಾನು । ನಿನ್ನಯ ಕರುಣ
ಕೇಡು ಇಲ್ಲವೊ ಇನ್ನೂ । ಪ

ಬೇಡ ಬಂದೆನೊ ನಾನು । ಜೋಡು ಕುಂಡಲಧಾರಿ
ಗಾಡಿಕಾರನೆ । ಗೂಢ ಮಹಿಮನೆ
ದೂಡದಲೆ ಮನ । ಮಾಡಿ ಕಾವುದು
ಪಾಡುವವರ ಬಿಟ್ಟಗಲ ಶೀಲ । ನಾಡು ದೈವರ ಕಾಲ
ಶ್ರೀಲಕುಮಿಲೋಲಾ । ಸುರ ತರುವ ಪರಿ ಶೀಲಾ
ಮೂಡಲಗಿರಿವಾಸನೆ ಎನ್ನನು । ಕಾಡುವ ಭವ ಕಳೆ ಶ್ರೀ ಹರೇ ಅ.ಪ.

ರುದ್ರಾದಿಸುರ ಸೇವಿತ । ಪಾದಾಬ್ಜಗಳ
ಕದ್ರುಜ ಶಿರ ಘಟ್ಟಿತ
ಭದ್ರ ಮೂರುತಿ ಸ । ಮುದ್ರಜೆ ರಮಣನೆ
ಅದ್ರಿಯುದ್ಧರ । ಮುಗ್ಧರಾರ್ತಿಹ
ಕ್ಷುದ್ರ ಸುರಪನ । ವ ಭದ್ರ ಗರ್ವಹರ

ಶುದ್ಧ ನಿಜಾನಂದ ಪೂರ್ಣ । ಶ್ರದ್ಧೆ – ಜನರ ಘ ಚೂರ್ಣ
ನಿರ್ದಯ ನೀನಲ್ಲಘನ । ಸುಪ್ರಬುದ್ಧ ಗುಣಪೂರ್ಣ ॥
ವೃದ್ಧ್ಯಾದಿಗಳೊರ್ಜನೆ ಎನ್ । ಹೃದ್ಗುಹದಲಿ ನಿಂದುದ್ಧರಿಸೊ ದೇವಾ ೧

ಕನಕಾಕ್ಷಹನ ಹಯಮುಖ । ಕಪಿಲಕೋ
ಲಾನಕ ದುಂದುಭಿ ಬಾಲಕ ॥
ಮನುಸು ತೆಗೆ ತತ್ವ । ಖಣಿಬೋಧಕಪಿಲಾತ್ಮ
ಘನಸು ಕಂಬದಿ ಖಣಿಲು ಖಣಿಲೆಗೆ
ಅನಘ ನರಹರಿ । ತನುಭವಾಕ್ಷಣ
ಕನಕ ಕಶಿಪುವಿನ್ನನನ । ವನಜಾಸನನ ವಚನ
ಭೃತ್ಯ ನುಡಿದುದನ । ಸತ್ಯವ ಗೈದಾಕ್ಷಣ
ಅಣುಗನು ಹರಿ ಅಂಕದಿ ಕುಳ್ಳಿರೆ । ಋಣ ನಿಧಿ ಆದೆಯೊ ಶಾಂತ ೨

ಪರಿಪರಿಯಲಿ ಪ್ರಾರ್ಥಿಪೆ । ಶ್ರೀಹರಿ ನಿನ್ನ
ಚರಣಾಬ್ಜವನು ಸೇವಿಪೆ ।
ಪರಮ ಮಂಗಳ ಮೂರ್ತಿ । ಅರವಿಂದನಾಭನೆ
ಶರಣ ಸುರಜನ । ತರುವೆ ಶ್ರೀಹರಿ
ಪರಮ ಸುಖ ಪರಿ । ಪೂರ್ಣ ಮೋಕ್ಷದ
ನಿರವದ್ಯ ಹರಿ ಅರಿಧರ । ದುರಿತೌಘಗಳ ಪರಿಹರ
ಸಿರಿಭೂಮಿ ಲಕುಮಿಧರ । ವರವೀವ ಶ್ರೀಧರ
ಕರಿವರ ವರದ ಪರೋಕ್ಷವ ।
ಕರುಣಿಸು ಗುರು ಗೋವಿಂದ ವಿಠಲಾ ೩

೧೦೮

ಬೇಡುವೆನು ಶ್ರೀಕೃಷ್ಣ । ಕಾಡುತಿಹ ಭವರೋಗ
ಓಡಿಸುವುದು ತಡೆಯದೇ ಪ

ನಾಡಾಡಿ ದೈವಗಳ । ಬೇಡ್ವನಲ್ಲವೊ ಕೃಷ್ಣ
ನೋಡೆನ್ನ ದಯದಿಂದ । ಸಾರ್ವಭೌಮಾ ಅ.ಪ.

ಬಿಂಬ ತಾ ಕರ್ತೃ ಪ್ರತಿ । ಬಿಂಬರಿಗೆ ಫಲವುಣಿಪ
ವೆಂಬಂಥ ಸುಜ್ಞಾನವ ॥
ಬಿಂಬ ಸ್ವತಂತ್ರ ಪ್ರತಿ । ಬಿಂಬ ಪರ ತಂತ್ರ ತಮ
ವೆಂಬಂಥ ಸುಸಾಧನ ॥
ಹಂಬಲಿಪೆ ನಿನ್ನಲ್ಲಿ । ಕಂಬು ಚಕ್ರಾಂಕಿತನೆ
ನಂಬಿಹೆನೊ ನಿನ್ನ ಪದವ ॥
ಕುಂಭಿಣಿಯ ಪರಿಪಾಲ । ಅಂಭ್ರಣಿಯ ಸುವಿಲೋಲ
ಇಂಬಿಟ್ಟು ವದಗಿಸುತ । ಸಂಭ್ರಮದಿ ಕಾಯೋ । ಕರುಣೀ ೧

ಪ್ರೇರ್ಯ ಪ್ರೇರಕ ನೀನೆ । ಬಾಧ್ಯ ಬಾಧಕ ನೀನೆ
ಸೇವ್ಯ ಸೇವಕನೆ ಹರಿಯೇ ॥
ವಾಪ್ಯ ವ್ಯಾಪಕ ಸ್ವಾಮಿ । ಪೋಷ್ಯ ಪೋಷಕ ರೂಪಿ
ಕಾರ್ಯ ಕಾರಣ ರೂಪನೇ ॥
ಭಾವ್ಯನೇ ನಿನ್ನಿಂದ । ಧಾರ್ಯ ಈ ಜಗವೆಲ್ಲ
ವೀರ್ಯ ಔದಾರ್ಯ ಶೌರ್ಯ ॥
ಪೂಜ್ಯ ಪೂಜಕನೆನಿಪ । ಬಹಿರಂತರಾತ್ಮಕನೆ
ಪ್ರಾಪ್ಯ ಪ್ರಾಪಕ ನಿನ್ನ । ಪ್ರಾಪ್ತಿಯನೆ ತಿಳಿಸೋ । ಸ್ವಾಮಿ ೨

ತಾರತಮ್ಯ ಜ್ಞಾನ ಸದ್ । ವೈರಾಗ್ಯ ಹರಿ ಭಕುತಿ
ಬಾರಿ ಬಾರಿಗೆ ಬೇಡುವೇ ॥
ಸೂರಿ ಸಂಗವ ನೀಯೊ । ದೂರಗೈ ದುಸ್ಸಂಗ
ಮಾರಪಿತ ದಯಾಪಾಂಗನೆ ॥
ಕಾರುಣಿಕ ನೀನೆಂದು । ಸಾರಿರುವ ತವಪಾದ
ದೂರ ಮಾಡಲಿ ಬೇಡವೊ ॥
ಆರು ಕಾಯುವರಿಲ್ಲ । ವಾರೀಜ ಜಾಂಡದೊಳು
ಧೀರ ಗುರು ಗೋವಿಂದ । ವಿಠಲ ಬಹು ಆಪ್ತಾ । ಗೋಪ್ತಾ ೩

೧೦೯

ಭ್ರಷ್ಟ ಸಂಕಲ್ಪನ್ನ । ಮಾಡದಿರೆಲೋ ।

ಇಷ್ಟ ದೈವವೆ ಎನ್ನ । ಕಷ್ಟದೊಳು ಹಾಕಿ ಪ

ನಿಗಮ ವೇದ್ಯನ ಮಹಿಮೆ । ಖಗ ವರಧ್ವಜ ದಾಸ
ಮಿಗಿಲಾಗಿ ಪೇಳ್ವೆನೆಂದ । ವಘಡಿಸೀ ನುಡಿಸೀ
ಹಗರಣದಿ ಹರಿದಿನದಿ । ಸುಗುಣ ತಾ ಬರದಿರಲು
ಖಗಗಮನ ನಿನ್ವಚನ । ಲಘುವಾಗಲಿಲ್ಲೇ ೧

ಅಪ್ಪ ವಿಜಯಾರ್ಯ ಪದ । ವಪ್ಪಿ ಪೂಜಿಸಿ ಪೋಗಿ
ಚಿಪ್ಪಗಿರಿಯಲಿ ನೋಡೆ । ಒಪ್ಪಿದವ ಬರದೇ
ಅಪ್ಪಾರ ಮನನೊಂದು । ಅರ್ಪಿಸಿಹೆ ನಿನ್ನಡಿಗೆ
ಕೃಪ್ಪೆಯಿಂ ಬರಮಾಡೊ । ಗೊಪ್ಪ ಶಿಷ್ಯನ್ನಾ ೨

ಮಾನಾಪಮಾನಗಳು । ಯೇನೊಂದು ನಿನ್ನೊಳಗೊ
ಮಾನನಿಧಿಯೆ ಕೇಳೊ । ಮೌನಿ ವರದಾ
ದೀನ ಜನಪಾಲ ಗುರು । ಗೋವಿಂದ ವಿಠ್ಠಲನೆ
ಮಾನ್ಯ ಮಾನದನೆಂಬ । ಸೂನೃತವ ಸಲಿಸೋ ೩

೧೧೦

ಮಂಗಳಂ ಮಂಗಳಂ ರಂಗನಿಗೇ । ಜಯ
ಮಂಗಳವೆನ್ನಿ ಶ್ರೀ ವೆಂಕಟಗೇ ಪ

ಬುಧನು ಭೃಗುವು ಪತಿ । ಎದೆಗೆ ತಾಡಿಸಿ ಲಕ್ಷ್ಮಿ
ಯೆದೆಯೋಳಾವಾಸಳು । ಕ್ರೋಧ ನಟಸಿ ಪೋಗಲು
ಮುದುಪ್ರದ ಬುಧನಿಗೆ । ಹದುಳದಿ ಗಿರಿ ವಿರಿ
ವದಗಿ ಪುತ್ತವ ಸೇರ್ದ । ಮಾಧವ ಹರಿಗೇ ೧

ನೀರಜಜ ಗೋರೂಪಿ । ಸಾರಿ ಪುತ್ತಾಶ್ರಿತಗೆ
ಕ್ಷೀರಾಭಿಷೇಚಿಸಿ । ಸಾರುತಿರೆ ನೃಪ ಗೃಹ ।

ಮಾರನೆ ದಿನ ಗೋ । ಚಾರ ಕೊಡಲಿ ಹತಿಗೆ
ದೂರ ಸರಿಸಿ ಗೋವ । ಶಿರವನೊಡ್ಡಿದಗೇ ೨

ಬಗೆ ಬಗೆ ನಾಮದಿ । ಯುಗ ನಾಲ್ಕರಲಿ ಮೆರೆವ
ನಗ ಅಂಜನಾಚಲ । ಹಾಗೂ ವೃಷಶೈಲವು
ನಾಗಾಚಲವು ಮತ್ತೆ । ನಗ ವೆಂಕಟಾದ್ರೀಲಿ
ಅಘಹರ ಲೀಲೆಗಳ್ । ಸೊಗಸಾಗಿ ತೋರ್ವಗೇ ೩

ಆವಾವ ಬಗೆಯಿಂದ । ಜೀವನಧ್ಯಾತ್ಮದಿ
ಓಧಿ ಸಾಧನೆಗೈದು । ದೇವನ ಪದ ಸಾರುವ
ಭಾವವನರುಹಲು । ಊರ್ವಿಯೊಳವತರಿಸಿ
ಮಾವಾರಿ ನಟಿಸುತ್ತ । ಜೀವರ ಪೊರೆವಗೇ ೪

ದೇವ ದೇವ ನಮ್ಮ । ಗೋವ ಪರಿಪಾಲಕ
ಮಾವಿನೋದಿಯು ಗುರು । ಗೋವಿಂದ ವಿಠಲ
ಭೂವೈಕುಂಠಸ್ಥನು । ಕಾವ ಭಕ್ತರನೆಲ್ಲ
ಈ ವಿದಧಿ ತುತಿಪರ್ಗೆ । ಭಾವದಿ ಒದಗುವಗೇ ೫

೧೧೧

ಮಂಗಳಂ ಮಧುಕೈಟ ಭಾರಿಗೇ – ಜಯ
ಮಂಗಳ ಯದುಕುಲಾಂಬುಧಿ ಚಂದ್ರಗೇ ಪ

ಗೋಕುಲದೊಳು ಪುಟ್ಟಿ ಗೋಗಣಂಗಳ ಕಾಯ್ದು
ರಾಕೇಂದು ವದನೇರ ಕೂಡಿದ ಸರಸಿಗೇ ೧

ಸೃಷ್ಟಿ ಪಾಲನ ಲಯ । ಒಟ್ಟಾಗಿ ಮಾಳ್ಪಂಥ
ಕೃಷ್ಣೆ ಗಕ್ಷಯಫಲ ಕೊಟ್ಟಂಥ ಹರಿಗೇ ೨

ಬೃಹತೀ ಸಹಸ್ರನ್ನ ಬಹುವಾಗಿ ಉಂಡಗೇ
ಮಹ ಋಷಿಗ್ವರಪಿತ್ತ । ಶ್ರೀ ಉಪೇಂದ್ರಗೆ ೩

ಲಕ್ಕುಮಿಯನು ತಾನು । ಲೆಕ್ಕಿಸದಲೆ ವೇಗ
ಪೊಕ್ಕುಳಿಂದಲಿ ಅಜನ । ಪಡೆದ ಶ್ರೀಹರಿಗೇ ೪

ಗರುಡ ಗಮನನಾಗಿ । ಕರಿಯ ಕಾಯಲಿ ಬಂದು
ಹರುಷವ ಪಡಿಸೀದ । ಗುರು ಗೋವಿಂದ ವಿಠಲಗೇ ೫

೧೧೨

ಮಂಗಳ ಕರಿಗಿರಿ ನರಹರಿಗೇ । ಜಯ
ಮಂಗಳ ಶರಣರ ಪೊರೆವನಿಗೇ ಪ

ಕಣ್ಣ ತೆರದು ಗಿರಿ ಬೆನ್ನೊಳು ಪೊತ್ತಗೆ
ಮಣ್ಣನು ಅಗಿಯುತ ಚಿಣ್ಣಗೊಲಿದಗೇ ೧

ಚಿನ್ನ ವಟುವು ಆದ ಘನ್ನ ಪರಶುಧರ
ಮನ್ನು ಜರೂಪಗೆ ಕೃಷ್ಣ ಮೂರುತಿಗೇ ೨

ಬೆತ್ತಲೆ ನಿಂತಗೆ । ಉತ್ತಮ ಕಲ್ಕಿಗೇ
ಹತ್ತಾವತಾರ ಗುರು ಗೋವಿಂದ ವಿಠಲಗೇ ೩

೧೧೩

ಮಂಗಳಗಿರಿ ನರಕೇಸರೀ । ಕಾಯೊ
ಶೃಂಗಾರ ಮೂರುತಿ ನರಹರಿ ಪ

ಅಂಗಜ ಪಿತನೆ ಕಾ । ಳಿಂಗಮರ್ಧನ ಸಾದು
ಸಂಗ ಪಾಲಿಸಿ ಭವ । ಭಂಗವ ಬಿಡಿಸಯ್ಯ ಅ.ಪ.

ಮಣವಕನಾಗಿ ಬಲಿಯಾ । ಭೂಮಿ
ದಾನಬೇಡಿ ಶಿರ ತುಳಿದೆಯಾ ॥
ದೀನ ವತ್ಸಲ ರಂಗ । ಮೌನಿ ಧ್ಯಾನಗಮ್ಯ
ಪಾನಕ ಕುಡಿದು ಸು । ಜ್ಞಾನವ ಪಾಲಿಸು ೧

ಭಕ್ತ ಪ್ರಹ್ಲಾದನ ಪೋಷಕಾ । ತಪ
ಶಕ್ತಿ ಹಮ್ಮಿನ ಕಶಿಪು ಮಾರಕಾ ।
ಕರ್ತ ನೀನೇ ಎಂಬ । ಉಕ್ತಿ ಸ್ಫುರಿಸಿ ವಿ
ರಕ್ತಿ ಪಾಲಿಸೊ ರಂಗ । ಭಕ್ತರುದ್ಧರಣ ೨

ಗೋವುಗಳೊಳಗೆ ಉದ್ಗೀಥಾ । ಗುರು
ಗೋವಿಂದ ವಿಠಲ ವರದಾತಾ ।
ಜೀವರ ಹೃದಯದೊ । ಳಾವಾಗು ನೆಲಿಸುತ್ತ
ಕಾವನೆಂದೆಂಬರ । ಕಾವಾದೆ ಬಿಡನಯ್ಯಾ ೩

೧೧೪

ಮಂಗಳ ಮೂರ್ಜಗದೊಡೆಯನಿಗೇ । ಶುಭ
ಮಂಗಳ ಸ್ಟ್ರಷ್ಟ್ಯಾದಿ ಕರ್ತನಿಗೇ ಪ

ಮಂಗಳ ರವಿಕುಲ ತಿಲಕನಿಗೇ । ಶುಭ
ಮಂಗಳ ಹನುಮನ ಒಡೆಯನಿಗೇ ॥
ಮಂಗಳ ಭೀಮನ ಸಲಹಿದಗೇ । ಶುಭ
ಮಂಗಳ ಮಧ್ವ ಹೃದಾಂಬುಜ ರವಿಗೇ ೧

ಮಂಗಳ ದಶಗ್ರೀವ ಛೇದಕಗೇ । ಶುಭ
ಮಂಗಳ ಕೌರವ ಹಂತಕಗೇ
ಮಂಗಳ ವ್ಯಾಸರ ಸೇವಕನೆನೆ । ನಮ್ಮ
ಮಂಗಳ ದಶಮತಿ ಪೋಷಕಗೇ ೨

ಮಂಗಳ ಸೀತೆಯ ತೋಷಕಗೇ । ಶುಭ
ಮಂಗಳ ರುಕ್ಮಿಣಿ ಅರಸನಿಗೇ
ಮಂಗಳ ಮಧ್ವರ ಪೊರೆದವಗೇ । ಶುಭ
ಮಂಗಳ ಗುರು ಗೋವಿಂದ ವಿಠಲಗೇ ೩

೧೧೫

ಮಂಗಳಾರುತಿ ತಂದು ಬೆಳಗಿರೆ ।
ಅಂಗನೇಯರು ರಂಗಗೇ ॥ಪ॥

ತುಂಗ ಮಹಿಮ ಶುಭಾಂಗ ಕರುಣಾ ।
ಪಾಂಗ ಶ್ರೀನರಸಿಂಗಗೇ ಅ.ಪ.

ಪ್ರಳಯ ಜಲಧಿಯೊಳಾಲದೆಲೆಯಲಿ ।
ಮಲಗಿ ಬೆರಳು ಸವಿದಗೇ
ಶ್ರೀಲತಾಂಗಿಯು ಸ್ತೋತ್ರ ಗೈಯ್ಯಲು ।
ಒಲಿದು ಜೀವರ ಸೃಜಿಸಿದವಗೆ ೧

ಮೂಲಕಾರಣ ಮಾಡಿ ಪ್ರಕೃತಿಯ ।
ನಾಲಕ್ಕಿಪ್ಪತ್ತು ತತ್ವದಾ
ಲೀಲೆಯಿಂದಲಿ ಸೃಜಿಸಿ ಬೊಮ್ಮನ
ಚೆಲುವ ತನುವನೆ ಮಾಡ್ದಗೇ ೨

ಮತ್ತೆ ವಾರಧಿ ಶಯ್ಯನಾಗುತ ।
ತತ್ವಮಾನಿ ಬೊಮ್ಮನ
ಪೆತ್ತು ತನ್ನಯ ಪೊಕ್ಕಳಿಂದಲಿ ।
ಕೀರ್ತಿಯನು ಪಡೆದಾತಗೇ ೩

ನೀರೊಳಾಡಿ ನಗವ ನೆಗಹಿ ।
ಕೋರೆದಾಡೆಯ ತೋರ್ದಗೇ

ನರಸಿಂಹಗೆ ದಾನ ಬೇಡ್ದಗೆ ।
ಧೀರ ಪರಶುರಾಮ ರಾಮಗೇ ೪

ಗಿರಿಯ ನೆಗಹಿ ನಗಗಳ್ವೈರಿಯ ।
ಮರುಳು ಮಾಡಿದ ಚೆಲುವಗೇ
ಬರಿಯ ಮೈಯ್ಯಗೆ ತುರಗನೇರಿದ ।
ಗುರು ಗೋವಿಂದ ವಿಠಲಗೇ ೫

೧೧೬

ಮಂದೇಹರ ಹರವೂ । ಕಾಲದಿ ।
ಸಂಧ್ಯಾ ವಂದನವೂ ಪ

ಎಂದೀಪರಿಯನು । ಸಂಧ್ಯಾನವ ತಿಳಿ
ಮುಂದಾಗ್ವಂದು ಶುಭ । ವೆಂದ್ಹೇಳುವುದು ಅ.ಪ.

ಶಚಿ ನೀನಾಗಿರಲೂ । ಕಾಯೋ । ಽಶುಚೀ ಎನಿಸಿರಲೂ ॥
ಶುಚಿಯೆನಿಸುವಿ ಕಿವಿಯು । ಪಚರಿಸುತಲ್ಹರಿ
ವಚ ನುಡಿಸುತ ಶ್ರೀ । ತಾಚಮನದಲೀ ೧

ಕಾಲ ಮುಖ್ಯ ತಿಳಿಯೋ । ಸೂರ್ಯಗೆ ಕಾಲ ಅರ್ಘ್ಯ ಕೊಡಲೋ ।
ಕಾಲಾಕಾಲದ ಕೀಲು ತಿಳಿದು ಸತ್
ಕಾಲದಲ್ವಂದಿಸು ಕಾಲ ಮೂರ್ತಿಯನು ೨

ಯುಕುತಿ ತಿಳಿದು ನೀನು । ಆರ್ಯರ । ಉಕುತಿ ಪಾಲಿಸಿನ್ನೂ
ಮುಕುತಿದಾಯಕ ಗುರು ಗೋವಿಂದ ವಿಠಲನು
ಭಕುತಿಗೊಲಿದು ನಿಜ ಭಕುತರ ಪಾಲಿಪ ೩

೧೧೭

ಮಧ್ವೇಶ – ಮಧ್ವೇಶಾ ಪ

ಸಿದ್ಧ ಮುನಿಯಲಿಂ । ದುದ್ಭವಿ ಶಾಸ್ತ್ರಗ
ಳಬ್ಧಿಯ ರಚಿಸುತ । ಉದ್ಧರ ಸುಜನರ ಅ.ಪ.

ವೇದ ವಿಭಾಗಗ । ಳಾದರದಿಂದಲಿ
ಗೈದು ಋಷಿಗಳಿಗೆ । ಭೋದಿಸಿರುವೆ ಹರಿ ೧

ನಿತ್ಯ ವೇದಾರ್ಥದ । ಸತ್ಯವನರಿಯಲು
ಕೃತ್ಯ ಮೀಮಾಂಸದ ಶಾಸ್ತ್ರ ನಿನ್ನೆಂದೆ ೨

ಸೃಷ್ಟೀಗೀಶ ಹರಿ । ಅಷ್ಟಾದಶವೆನೆ
ಸುಷ್ಠು ಪುರಾಣಗ । ಳಷ್ಟು ವಿರಚಿಸಿದೆ ೩

ಈಶ ಮುಖ್ಯದಿವಿ । ಜೇಶ ನಮಸ್ಕೃತ
ವ್ಯಾಸಾಭಿಧ ಹರಿ । ಪೋಷಿಸು ಎಮ್ಮನು ೪

ಉಂಬುವುಡುವುದು । ಕೊಂಬ ಕೊಡುವದನು
ಬಿಂಬ ಕೃತಗಳನೆ । ನಂಬಿಗೆ ಈಯೋ ೫

ಮನಚಂಚಲ ತವ । ಗುಣ ರೂಪಗಳನು
ಗುಣಿಸಲಸಾಧ್ಯವು । ಮನದಿ ನೆಲಸೊ ಹರಿ ೬

ಕೀಟನಿಂದ ಭುವಿ । ರೋಟಿಸಿದ ಪ್ರಭು
ಸಾಟ ರಹಿತ ಹರಿ । ಕೋಟಿ ತಟಿತ್ಪ್ರಭ ೭

ಸಪ್ತಧಾತು ತನು । ಸಪ್ತ ಕಮಲದಲಿ
ಆಪ್ತನಿದ್ದು ನಿ । ರ್ಲಿಪ್ತನೆಂದೆನಿಸಿದೆ ೮

ಭಾವುಕ ಪ್ರಿಯ ಗುರು । ಗೋವಿಂದ ವಿಠಲನೆ
ವೊಲಿಯದೆ ಭವ । ನೋವನು ಕಳೆಯನು ೬

೧೧೮

ಮನ್ನೀಸಯ್ಯಾ – ಮನಸಿಜನಯ್ಯಾ ।
ಮೌನಿಜನರ ಪ್ರಿಯ ಪಂಡರೀರಾಯಾ ಪ

ತನು ಸದನದಿ ನಿನ್ನ ಚಿನುಮಯ ರೂಪವ
ಅನುಭವಿಸುವ ಪರಿ । ಅನಘ ನೀ ಕರುಣಿಸಿ ಅ.ಪ.

ಎರಡು ನಾಲ್ಕರಿಂದ । ಮೆರೆದು ಗರ್ವಿತನಾಗಿ
ಪರಿಪರಿ ಮೋಹದಿ ಮುಕುಂದಾ ।
ಶಿರ ಸುಜನರ ಪದ । ಸರಸಿಜ ಕೆರಗದೆ
ಜರೆದೆನವರ ಹರಿಯೇ – ಹೇ – ದೊರೆಯೇ ॥
ಪರಿಪರಿಯವಗುಣ । ಭರಿತನಾಗಿರುವೆನ್ನ
ಕರಪಿಡಿದೆತ್ತದೆ – ಕೊಸರಿಪುದುಚಿತವೆ
ತುರುಕರು ಕೂಡದ । ಪರಿ ಏನಿದು ಹರಿ
ಮೊರೆ ಕೇಳೆನನ್ನದು । ಪೊರೆವುದು ಜೀಯಾ ೧

ತಾಪತ್ರಯ ಬಲು । ದೀಪನವಾಗಿದೆ
ನೀ ಪರಿ ಪೋಷಿಸು । ನಿನಗ್ವಶನೂ ॥
ಗೋಪರಿ ಪಾಲಕ । ಗೋಪಿ ಜನರ ಪ್ರಿಯ
ದ್ರೌಪತಿ ಗೋಪ್ತಾ । ಬಲು ಆಪ್ತಾ ।
ಕೈಪಿಡಿಯುವುದೀ । ಪಾಪಿಯಾದೆನ್ನನು
ಶ್ರೀಪತಿ ಶ್ರೀಹರೇ । ಮುರಾರೇ ॥
ಲೇಪಿಸು ಕೀರ್ತಿಕ । ಲಾಪಗಳ್ನಿನ್ನ ಸು–
ರಾಪಗಪಿತ ಶ್ರೀ ಪಾವನ ಮೂರ್ತೇ ೨

ಭವ ಶರ ನಿಧಿಯಲಿ । ಭವಣೆಯ ಪಡಲಾರೆ
ಭವ ಜನಕನ ಪಿತಾ । ಹೇ ದಾತಾ ।
ಹವಣೆಯು ದಾವುದು । ಭವವನುತ್ತರಿಸಲು
ತವಪದ ಸ್ಮರಿಸುತಾ । ಸ್ಮರಿಸುತ್ತಾ ॥
ಸವನ ಮೂರರೊಳು । ಅವಶದಿ ಕೀರ್ತಿಸಿ
ಬೆವರೆಂಬ ವಿರಜೆಯ । ಅವಗಾಹಿಸುವನು
ಭವವ ಕೊಡಿಸು ಹರಿ । ಅವನಿಜೆ ವಲ್ಲಭ
ಪವನ ವಂದಿತ ಗುರು । ಗೋವಿಂದ ವಿಠಲಾ ೩

೧೧೯

ಮಲಗಲೇತಕೆ ಹರಿಯೆ । ಚಲುವ ಚನ್ನಿಗ ದೊರೆಯೆ ಪ

ಎಲರುಣೀವರ ಶಯ್ಯ । ಬಳಲಿಕೇಕಯ್ಯಾ ಅ.ಪ.

ವೇದ ಕದ್ದನ ಹರನೆ । ಭೂಧಾರಿ ಗಿರಿಧರನೆ
ಭೂದರಿಸಿ ಭೊಮ್ಮನಿಗೆ । ಆದರದಿ ಕೊಟ್ಟವನೇ ।
ಭಾದಿಸೇ ಭಕ್ತ ಪ್ರ । ಹ್ಲಾದನನ ಕಾಯ್ದವನೆ
ಮೋದದಿಂದಲಿ ಬಲಿಯ । ಪಾದವಾ ಮೆಟ್ಟಿದನೆ ೧

ಗಂಡು ಗೊಡಲಿಯ ಪಿಡಿದು । ಭಂಡ ಭೂಭುಜ ತರಿದು
ಲಂಡ ರಾವಣ ಶಿರ । ಚೆಂಡಾಡಿದ ಧೊರೆಯೇ
ಕಂಡ ಕಂಡವರ ಮನೆ । ಗಂಡಲೆದು ಪಾಲ್ಗೊಸರ
ಉಂಡುಂಡು ಚೆಲ್ಲಾಡಿ । ಭಂಡು ಮಾಡಿದೆ ಕೃಷ್ಣ ೨

ಮುಪ್ಪೊರರ ಸತಿಯರನು । ಅಪ್ಪಿ ವ್ರತ ಭಂಗವನು
ತಪ್ಪದೇ ಮಾಡಿ ಹಯ । ವಪ್ಪಿ ಏರ್ದವನೇ
ಇಪ್ಪರಿಯ ಚರ್ಯ ದಿಂ । ಸೊಪ್ಪಾಗಿ ಮಲಗಿದೆಯೋ
ಗುಪ್ತ ಮಹಿಮನೆ ದೇವ । ಅವ್ವ ಶ್ರೀರಂಗ ಪುರಗ ೩

ಬದರಿ ಯಾತ್ರೆಯ ಗೈಸೊ । ಮುದದಿಂದ ತಕ್ಕೈಸೊ
ವಿಧಿ ಭವಾದಿಗಳೊಡೆಯ । ಪದ ತೋರೊ ಜೀಯ
ತ್ರಿದಶ ವಂದಿತ ಮಹಿಮ । ಬದಿಗ ನೀನಿರೆ ಯೆಮ್ಮ
ಎದುರಾಳಿ ತತ್ವೇಶರ್ । ಬಡಿಸ ಬಲ್ಲರೆ ಕ್ಲೇಶ ೪

ಪೂರ್ವ ವಾಹಿನಿ ಎನಿಪ । ಕಾವೇರಿ ತೀರಗನೆ
ಪೂರ್ವದಿವಿಜರ ಹರನೆ । ಸಾರ್ವಭೌಮಾ
ಊರ್ವಿ ಯೊಳ್ಪೆಸರಾದ । ಪಾರ್ವ ಗೌತಮ ವರದ
ಕೋರ್ವೆ ತವ ಚರಣ ಗುರು । ಗೋವಿಂದ ವಿಠಲಾ ೫

೧೨೦

ಮಾನಸಾಂಡದಿ ಕಾಂಬೊನ್ಯಾರೇ । ನಮ್ಮ
ಮೌನಿ ಧ್ಯಾನಾಗಮ್ಯ ಕೃಷ್ಣಮೂರುತಿಯೇ ಪ

ಗುಂಗುರು ಕುಂತಲ ಶೋಭಾನೇ । ನಮ್ಮ
ಗಂಗಾ ಜನಕ ಗೋಪಿರಂಗಾನೇ ।
ಮಂಗಳ ಮಹಿಮ ಶುಭಾಂಗಾನೇ । ಹೃದ-
ಯಾಂಗಣದಲಿ ನಿಂತು ಕುಣಿವಾನೇ ೧

ಕೊಳಲ ಕೈಯಲಿ ಧರಿಸ್ಯಾನೇ । ಚಂದ್ರ
ಬೆಳಕಾಮಿತದಲಿ ಕುಣಿದಾನೇ ।
ಕಲಕುತ್ತಲೆನ್ನಯ ಮನವಾನೇ । ಹರಿ
ಚಳಕದಿ ಕುಣಿವಂತೆ ಮಾಡ್ಯಾನೇ ೨

ಅಗಣಿತ ಮಹಿಮ ಲಾವಣ್ಯಾನೇ । ಹರಿ
ಸುಗುಣಿ ಕಾಲಲಿ ಗೆಜ್ಜೆ ಕಟ್ಯಾನೇ
ಝುಗಿ ಝುಗಿಸುವ ಹಾರ ಪದಕಾನೇ । ಕೃಷ್ಣ
ಮಘವನಾರ್ಚಿತ ದಿವ್ಯ ಚರಣಾನೇ ೩

ಯಾದವರೊಡೆಯನು ಬಂದಾನೇ । ಗುರು
ವಾದಿರಾಜರ ಮಾತು ಸಲಿಸ್ಯಾನೇ
ಸಾದರದಲಿ ಕೈಯ್ಯ ಪಿಡಿದಾನೇ । ಎನ್ನ
ಮೋದದಿ ಕುಣಿವಂತೆ ಮಾಡ್ಯಾನೇ ೪

ಗೋವಳರೊಡೆಯನು ನಗುತಾನೇ । ಹೃದಯ
ನೋವನು ಕಳೆಯಲು ಬಂದಾನೇ
ಪಾವನೀಪರಿ ಕರುಣಿ ಕಳೆದಾನೇ । ಗುರು
ಗೋವಿಂದ ವಿಠಲ ಹಯಾಸ್ಯಾನೇ ೫

೧೨೧

ಮುದವ ಬೀರುವುದೊ । ಬದರಿಯ ನಿಲಯನೇ ಪ

ಮುದವ ಬೀರುವುದು । ಬದರಿಯ ನಿಲಯ ಶ್ರೀ
ವಿಧಿ ವಿಬುಧಾದ್ಯರ । ಮುದಕೆ ಕಾರಣನೇ ಅ.ಪ.

ಕೆಂದಾವರ್‍ಯಂದಾದಿ । ಚೆಂದುಳ್ಳ ನಿನ್ನ ಪಾದ
ದ್ವಂದ್ವಾ ಶೋಭಿಪವೊ । ಗೋವಿಂದ ॥
ಕಂದನೆನಿಸಿ ಪಾದ । ದಿಂದಾ ನೀ ಶಕಟನ್ನ
ಕೊಂದು ಮಂಗಳಪ್ರದ । ಗೋವಿಂದ ॥
ವಿಂಧ್ಯಾವಳಿ ಪತಿಯ । ಬಂಧೀಸಿ ಭಕ್ತಗೆ
ಬಂಧೀತನಾದ್ಯೋ । ಗೋವಿಂದ ॥
ಇಂದೀವರಾಕ್ಷಿ ಉರ । ಮಂದೀರದಲಿ ಧರ
ಸುಂದರಾಂಗನೆ । ಗೋವಿಂದ ೧

ಇಂದ್ರ ನಿನ್ನಯ ತಪ । ಕುಂದೀಸೆ ಅಪ್ಸರ
ವೃಂದಾ ಕಳುಹೆ । ಗೋವಿಂದ ॥
ಚೆಂದಾದುಡಿಗೆ ಉಟ್ಟ । ಅಂದಾಭರಣ ತೊಟ್ಟ
ಮಂದಾಗಮನೆರೆಲ್ಲ । ಗೋವಿಂದ ॥

ಅಂದಿಗೆ ಕಾಲ್ಗೆಜ್ಜೆ ದಂಧಣಿರೆನ್ನ ಕುಣಿದು
ನೊಂದು ಶ್ರಮಗಳಿಂದ । ಗೋವಿಂದ ॥
ಕಂದರ್ಪ ಪಿತ ತನ್ನ । ಸುಂದರೂರುವಿನಿಂದ
ಸುಂದರಿಯನ್ನೆ ಕೊಟ್ಟ । ಗೋವಿಂದ ೨

ಮಂದಗಮನೆರೆಲ್ಲ । ಸುಂದರಿಯನ್ನೆ ಕೊಂಡು
ಇಂದ್ರಂಗೆ ಇತ್ತರು । ಗೋವಿಂದ ॥
ಎಂದೆಂದು ಕಾಣದ । ಸುಂದರಾಕೃತಿ ಕಂಡು
ಕಂದೀತು ಇಂದ್ರ ಮುಖ । ಗೋವಿಂದ ॥
ವೃಂದಾರಕೇಂದ್ರನು । ಅಂದು ಪರಾಶರಜ
ಗೊಂದಿಸಿ ಕ್ಷಮೆಯನು । ಬೇಡಿದ ॥
ಇಂದ್ರಾವರಜ ಗುರು । ಗೋವಿಂದ ವಿಠಲನ
ದ್ವಂದ್ವ ಪಾದಂಗಳ್ಗೆ । ಶರಣೆಂದ ೩

೧೨೨

ಮುದ್ದು ಮೋಹನರೇಯ । ಅಸ್ಮದ್ಗುರೋರ್ಗುರು
ಮುದ್ದು ಮೋಹನ ಪ್ರೀಯ । ಲೋಕೈಕ ವಂದ್ಯನೆ
ಮಧ್ವಮುನಿ ಸಂಪ್ರೀಯ । ಕಾಯಯ್ಯ ಜೀಯ ಪ

ಉದರ ವಾಸಿತ ಸೃಜ್ಯ ಜೀವರ । ಸದಯದಿಂದಲಿ ಸೃಜಿಸಲೋಸುಗ
ಮುದದಿ ಬಯಸುತ ಶ್ರೀಧರ ಪ[illegible]ವಾಗಿ ಚತುರ ವ್ಯೂಹ ರಚಿಸಿದ ಅ.ಪ.

ಮಾಧವಗೆ ಪ್ರಿಯೆ ಅಂಭ್ರಣೀ । ಪ್ರ[illegible] ಶಯನನ
ಆದರದಿ ತ್ರಯಕಭಿಮಾನಿ । ತುತ್ತಿಸಲು ಜಗವನು
ಮೋದದಲಿ ಸೃಜಿಸುವ ಹವಣೀ । ಶ್ರೀಹರಿಯು ತಾನು
ಗೈದು ರೂಪ ಸುಧಾರಣೀ । ವಾಸುದೇವಭಿಧಾನಿ ॥
ಆದಿ ಸೃಷ್ಟಿಯ ಮಾಡಲೋಸುಗ । ಆದಿ ಮಾಯಾತ್ಮಿಕೆಯು ಲಕ್ಷ್ಮಿಯ
ಮೋದದಿಂದಲಿ ಕೂಡುತಲೆ ತಾ । ಸಾಧಿಸಿದ ತಾರತಮ್ಯ ಸೃಷ್ಟಿಯ ೧

ದ್ವಿತಿಯ ವ್ಯೂಹಕೆ ಮನಸ । ತಾಳ್ದನು ಜಯದೇವಿ
ಪತಿಯ ರೂಪವ ಲೇಸ । ಸಂಕರುಷಣಾತ್ಮ
ಸೂತ್ರನ್ನ ಸೃಜಿಸ್ಯುಲ್ಲಾಪ । ಸೃಷ್ಟಿಯನು ಮುಂದೆ
ವಿತತಾಧೀನ ಸುವಿಶೇಷ । ಪ್ರಾಪ್ತ್ಯಭಿಧಾನ ಲೇಸ ॥
ದ್ವಿತಿಯ ಸೃಷ್ಟಿಯ ಗೈದ ನಂತರ । ಕೃತಿ ಪತಿಯು ಆಗುತ್ತ ವೇಗದಿ
ತೃತಿಯ ಸೃಷ್ಟಿಯ ರಚನೇಗೇ ಪ್ರ । ಕೃತಿ ಶ್ರದ್ಧೆಯರಾಗ ಸೃಜಿಸಿದ ೨

ಪುರುಷ ಪ್ರಕೃತಿಗಳಿಂದ । ಜೀವಾಭಿಮಾನಿಯು
ಉರಗ ಮೂರುತಿ ಛಂದಾ । ಸೃಜಿಸುತ್ತ ಶ್ರೀಹರಿ
ವರ ಸೂತ್ರ ಶ್ರದ್ಧೆಯರಿಂದ । ಕಾಲಮಾನಿಯ ನಂದ
ಗರುಡನ್ನ ಸೃಜಿಸುತ ನಂದ । ಬೆರೆದು ಶಾಂತಿಯಲಿಂದ ॥
ಧೀರ ಗುರು ಗೋವಿಂದ ವಿಠಲನು । ಶೂರ ಅನಿರುದ್ಧಾಭಿಧಾನದಿ
ನಾರ ವಾಣಿ ಬ್ರಹ್ಮರಿಂದಲಿ । ಮೂರು ವಂದರ ವ್ಯೂಹ ರಚಿಸಿದ ೩

೧೨೩

ಮುರವೈರಿಯೇ ಮೊರೆ ಹೊಕ್ಕೆ ನಿನ್ನ
ಕರಿಯ ಕಾಯ್ದುಹಲ್ಯೆಯ । ವರದನೆಂದರಿತು ಪ

ಸರಸಿ ಜಾಂಡದೊಳು । ಅರಸಿ ಅನ್ಯ ಕಾಣೆ
ಕರುಣಿ ಕಂಜನಯನ । ಪರಿಪೋಷಿಸೆನ್ನ ಅ.ಪ.

ಭಕ್ತಾಭೀಷ್ಟದಾ । ಮುಕ್ತಿದಾಯಕಾ
ಶಕ್ತನಾಗಿ ಇರಲು । ವ್ಯಕ್ತನಾಗದಿರೆ ।
ಸೂಕ್ತವೇನೊ ನಿನಗೆ । ಯುಕ್ತಿ ಪೂರ್ಣ ಪುರುಷ
ಸೂಕ್ತ ಮೇಯ ನೀನು । ವ್ಯಕ್ತನಾಗೊ ಮನದಿ ೧

ಕಣ್ಣು ಬಿಟ್ಟು ಗಿರಿಯ । ಬೆನ್ನಿಲ್ಹೊತ್ತರೇನು
ಮಣ್ಣ ಹಲ್ಲಿಲಗಿದು । ಚಿಣ್ಣನನ್ನೆ ಪೊರೆದು

ಸಣ್ಣ ವಟುವೆ ಪಿಡಿದೆ । ಚೆನ್ನ ಪರಶುವನ್ನ
ಘನ್ನ ಧನುವ ಮುರಿದ । ಕನ್ಯೆ ಸೀತೆ ಪತಿಯ ೨

ಗೊಲ್ಲರೊಳು ಪುಟ್ಟಿ । ಮಲ್ಲರನು ಕುಟ್ಟಿ
ಚೆಲ್ವ ಕನ್ಯೆ ಕೂಡಿ । ಕೊಲ್ಲಿಸಿ ತ್ರಿಪುರರ
ಚೆಲ್ವ ಹಯವನೇರಿ । ಕೈಲಿ ಖಡ್ಗ ಪಿಡಿದು
ಚೆಲ್ವ ಕಲ್ಕಿ ಗುರು ಗೋವಿಂದ ವಿಠಲ ೩

೧೨೪

ಮೃತ್ಯುವಿಗೆ ಶ್ರೀನರಕೇಸರೀ ॥ಅ॥

ಭೃತ್ಯನ್ನ ಪಾಲಿಪುದು ಅತಿಶಯವೆ ನಿನಗೆ ಅ.ಪ.

ಬಾದರಾಯಣ ದಾಸ । ತಾಯಿ ಭೋಧಕೆ ಅಹಿತ
ಸಾಧಿಸುವೆನೆಂದೆನುತ । ಪೋದನಲ್ಲೋ ।
ಕಾದುಕೋ ಶ್ರೀ ಹರಿಯೆ । ಮೋದ ಪಡಿಸುತಲವನ
ಬಾಧೆ ಪಡಿಸದೆ ಮನದಿ । ಐದಿಸೋ ಮನೆಗೆ ೧

ಸರ್ವ ಪ್ರೇರಕನೆಂದು । ಸರ್ವ ವಿಧ ಬೇಡುವೆನೊ
ಪರ್ವ ಕಾಲದಿ ಕೈಯ್ಯ । ಬಿಡದೆ ಸಲಹೋ ।
ಶರ್ವಾದಿ ಸುರವಂದ್ಯ । ಸರ್ವಜ್ಞ ಶ್ರೀ ಹರಿಯೆ
ದುರ್ವಿಭಾವ್ಯನೆ ದೇವ । ದರ್ವಿ ಜೀವನ ಕಾಯೋ ೨

ಅತಿ ದಯಾ ಪರನೆಂದು । ಮತಿಯಿಂದ ಮೊರೆಯಿಡುವೆ
ಹಿತದಿಂದ ಸಲಹುವುದು । ಪ್ರತಿ ರಹಿತ ದೇವಾ ।
ಗತಿ ಗೋತ್ರನಾದ ಗುರು । ಗೋವಿಂದ ವಿಠ್ಠಲನೆ
ಯತನ ನಮ್ಮದು ಕಾಣೆ । ನೀನಾಗಿ ಪೊರೆಯೋ ೩

೧೨೫

ಯತಿ ಕುಲ ಶಿರೋರನ್ನ – ಪತಿತ ಜನ ಪಾವನ್ನ
ಮತಿ ವಿಕಳ ನಾದೆನ್ನ – ಉದ್ಧರಿಸೊ ರನ್ನ ಪ

ಸರಿದ್ಯಮುನೆ ಕೂಲಸ್ಥ – ವರ ಪರಾಶರ ಭವನೆ
ವಿರಚಿಸುತ ಬಹು ಗ್ರಂಥ – ತೋರ್ದೆ ಸತ್ಪಂಥ
ವರ ಕುವರ ಶುಕಮುನಿಗೆ – ಒರೆದು ಶ್ರೀ ಭಾಗವತ
ಶರಣ ಜನ ಭವ ಜನಿತ – ದುಃಖಗಳಹರ್ತಾ ೧

ವೇದರಾಶಿಯನ್ನೆಲ್ಲ – ಪರಿ ಪರೀಯಲಿ ಬಲ್ಲ
ವೇದ ವೇದಾಂತ ವೇದ್ಯ – ಅನವದ್ಯಾ ॥
ವೇದ ಮುಖ ಸುರವೃಂದ । ವೇದವಾಣೀ ವಂದ್ಯ
ಸಾಧು ಜನರಘಹರಣ – ತೋರೊ ತವ ಚರಣ ೨

ಗೋವುಗಳೊಳುದ್ಗೀಥ – ಗೋವಿಂದಾಂ ಪತಿ ಖ್ಯಾತ
ಪಾದಿನಾಮದ ಹರ್ತ – ಲೋಕಕರ್ತಾ ॥
ನೋವಿಲ್ಲದವನೆ ಗುರು – ಗೋವಿಂದ ವಿಠಲ ಹರಿ
ಭಾವದಲಿ ತವರೂಪ – ತೋರ್ವ ಬಹುರೂಪ ೩

೧೨೬

ಯಾಕೆ ದಯ ಬಾರದೋ । ಕೃಷ್ಣಾ ।
ಯಾಕೆ ದಯಾ ಬಾರದೋ ॥ ಪ

ಕಾಕು ಜನರ ಸಂಗ ಕಳೆದು । ವ್ಯಾಕುಲ ನೀಗುವುದಕ್ಕೆ ಅ.ಪ.

ಮಾನ ಅಪಮಾನವೆಲ್ಲ । ಮಾನ ನಿಧಿಯಾಧೀನವೆಂದು
ಸಾನುರಾಗದಿ ಧೇನಿಸುವನ । ಧೀನನ ಪರಿಪಾಲಿಸಲೂ ೧

ಅರ್ಥಕಾಮ ವೆರಡರಲ್ಲಿ । ವ್ಯಾಪ್ತ ನೀನೆ ಇರಲು ದೇವ
ಪ್ರಾಪ್ತಿಗೈಸುವ ಭಾರ । ಸತತ ನಿನಗಲ್ಲದಲೇ ೨

ಪರರಿಗೆ ಶಿರವ ಬಾಗಿ । ಕರವನೊಡ್ಡಿಸದಲೇ
ಶರಣರ ಸಲಹೊ ಗುರು । ಗೋವಿಂದ ವಿಠಲನೆ ೩

೧೨೭

ಯಾಕೇ ನಿನೀಪರಿ । ಶೋಕ ಸಂಶಯವೀವೆ
ರಾಕೇಂದು ವದನನೆ । ಏಕಮೇವನೆ ಹರಿಯೇ ಪ

ಮಾ ಕಮಲಾಸನದಿ । ವೌಕಸ ವಂದ್ಯನೆ
ತೋಕನೆನಿಸಿ ಎನ್ನ । ಸಾಕುವುದೆಲೊ ಘನ್ನ ಅ.ಪ.

ನಿನ್ನ ನಾಮಗಳನ್ನ । ಮನ್ನದಿ ನೆನೆಯದೆ
ಮನ್ನ ಮಾಡಿದುದಕ್ಕೆ । ಯನ್ನ ನೀ ಪರಿಯಾ ।
ದಣ್ಣಿಸೋದೊಳಿತಲ್ಲ । ಮನ್ನ ನಾಮಕನಾಗಿ
ಮನ್ನವನೀಯದೆ । ಅನ್ಯಾಯ ಗೈಯುತ ೧

ಭ್ರಾಂತಿ ಬಿಡಿಸಿ ಮಾಯಾ । ಕಾಂತಾರ ಗೆಲಿಸಯ್ಯ
ಕಾಂತೇರ ವಿನುತ ಶ್ರೀ । ಕಾಂತ ಮೂರುತಿಯೇ ।
ಅಂತು ನಿನ್ನಯ ಪಾದಾ । ಕ್ರಾಂತನಾಗಿರುವೆನೊ
ಸ್ವಾಂತರಂಗದಲ್ಲಿ । ಶಾಂತೀಶ ನೆಲೆಸಯ್ಯ ೨

ಮಂದಿಯ ಕೈಯಲ್ಲಿ । ನಿಂದಿಸಿ ಕುಂದಿಸಿ
ಮಂದ ಭಾಗ್ಯನ ಮನ । ಸಂದೇಹ ಕಳೆಯಯ್ಯ
ಕಂದರ್ಪಪಿತ ಗುರು । ಗೋವಿಂದ ವಿಠಲಯ್ಯ
ಕುಂದೆಣಿಸದೆ ಕೈಯ್ಯಾ । ಇಂದೆ ನೀ ಪಿಡಿಯಯ್ಯ ೩

೧೨೮

ಯಾರಿಗೆ ಯಾರು । ಯಾರಿಗು ಯಾರು
ಯಾರಿಲ್ಲಾ । ಯಾರಿಲ್ಲ ಪ

ನಾರಾಯಣನೊಬ್ಬ । ಸಾರುವ ಸಮಯಕೆ
ಬೇರೊಬ್ಬರಿಲ್ಲ ಕಂಡ್ಯಾ ಜೀವವೇ ಅ.ಪ.

ತಂದೆ ತಾಯಿ ಸುತ । ಬಂಧು ಬಳಗ ಜನ
ಮಂದಿಯೊಬ್ಬರು ಬರರೊ ॥
ಸಂದೋಹದಿಂದ ಜೀವ । ನೊಂದು ಪೋಗುವ ವೇಳೆ
ಬಂಧು ಬಳಗ ರೋದನಾ । ಬಲು ರೋದನ ೧

ಅಂದಾದರವನ್ಹಿಂದೆ । ಪೋಗೋರೊಬ್ಬರ ಕಾಣೆ
ಸಂದೋಹ ಸುಟ್ಟು ಬರುವರೋ ॥
ಬಂದು ಮಶಣದಿಂದ । ಮಿಂದು ಮೆಲ್ಲದೆ ಇರುವ
ಮಂದಿಯೊಬ್ಬರ ಕಾಣೆನೋ । ಎಲ್ಲು ಕಾಣೆನೊ ೨

ಕಾಲ ಕಳೆಯುತ ಬರೆ । ಮೇಲಾದ ದುಃಖ ಮರೆ
ಕಾಲಾ ನಾಮಕ ಲೀಲೆಯೋ ॥
ವ್ಯಾಳಾ ವ್ಯಾಳಕೆ ಮೆದ್ದು । ಜೋಲು ಮುಖವ ಬಿಟ್ಟು
ಲೀಲಾ ವಿನೋದ ಮಾಡರೇ । ಅದ ಬಿಡುವರೇ ೩

ಶ್ರದ್ಧೆಯಿಂದಲಿ ವೇದ । ಅಧ್ವಾನ ತೊರೆಯದೆ
ಮದ್ವಾ ಸಮಯ ನೋಡೋ ॥
ಬುದ್ಧಿಯಲಿಂದ ಯೋಗ । ಬದ್ಧ ಸುಮಾರ್ಗದಿ
ಅಧ್ವಾನ ದೇವ ಪಥ ಸೇರೋ । ಅದ ಸೇರೋ ೪

ಬಂದದ್ದು ಹೋದದ್ದು । ಮುಂದೆ ಬರುವುದನು
ದ್ವಂದ್ವಕರ್ಮಗಳೆಲ್ಲವಾ ॥

ಸುಂದರ ಗುರು ಗೋ । ವಿಂದ ವಿಠಲ ಪಾದ
ದ್ವಂದ್ವ ಕರ್ಪಿಸೊ ಬಿಡದೇ । ಮರೆಯದೇ ೫

೧೨೯

ರಜತ ಪುರೀಶಾ ಪಾಲಿಸೋ । ನಿನ್ನ ಶ್ರೀಪಾದ
ಭಜನೆಯೋಳಿರಿಸೋ ಪ

ಅಜ ಜನಕನೆ ಹರಿ । ನಿಜ ಜನರಿಗೆ ನೀ
ವಿಜಯದ ತವ ಪದ । ರಜದವನೆನಿಸೋ ಅ.ಪ.

ಪಾರ್ಥಸಖ ತ್ವಂ ಪಾಲಯ । ಉಡುಪಿಯ ನಿಲಯ
ಆರ್ತಜನ ಮನೋ ನಿಲಯ
ಆರ್ತಸ್ವರದಿ ನಿನ । ಪ್ರಾರ್ಥಿಸೆ ಮಂಗಳ
ಕೀರ್ತನೆ ಗೈಸಿ ದು । ರ್ವಾರ್ತೆಯ ಕಳೆವೇ
ಶೈಲಧರಾ । ಮುರನಹರಾ । ಮುರುಳಿಧರಾ
ನೃಪ ಕೃತ ಕ್ರತು ಕುವರಾ ೧

ಹೃದಯಾಬ್ಜವಾಸ ಈಶ । ಉದಯಾರ್ಕ ಭಾಸಾ
ನಿಧನ ನಾಮಕ ಸರ್ವೇಶಾ ॥
ವಿಧಿ ಭವ ಮುಖನುತ । ಪತ ಸರಸಿಜ ಯುಗ
ಹೃದಯದಿ ಪೊಳೆಯುತ । ಮುದವನೇ ಬೀರೋ
ಶ್ರೀಹಂಸಾ । ಯದು ವಂಶಾ । ಖಲಧ್ವಂಸಾ
ಕೃತ ಕುರುಕುಲ ನಿರ್ವಂಶಾ ೨

ಸರ್ವೇಶಾ ಸಲಿಲ ಲೋಲಾ । ಉರುತಮವ ಕುಡಿದ ಬಾಲ
ಗುರು ಗೋವಿಂದ ವಿಠಲ ॥
ಹರಿಸುತಲೆನ್ನೆಯ । ಉರುತರ ಸಂಶಯ
ಪರಿಹರಿಸುತ ಭವ । ಕರುಣಾ ನಿಧಿ ಪೊರೆ
ಗೋವಿಂದ ಎನಗಾನಂದಾ ೩

೧೩೦

ರಾಮ – ರಕ್ಕಸ ಸಂಕಲ ಭೀಮ
ಮುನಿದರೆ ಲೋಕ ವಿರಾಮ । ಸಾಮಸನ್ನುತ ನಿಸ್ಸೀಮ ಪ

ಕಾಮಿತಾರ್ಥ ಸುಮಹೋದಧೆ – ನಿ
ಷ್ಕಾಮನ ಮಾಡೆಲೊ ವಾಮನ ಮೂರ್ತಿ ಅ.ಪ.

ಶ್ಯಾಮಾ – ರವಿ ಕುಲವಾರಿಧಿ ಸೋಮ । ಕಟ್ಟದೆ ಕಡಲಲಿ ಧಾಮ ।
ಸುರಪಗುಂಟು ತವ ಪ್ರೇಮ । ನಿರ್ಜತ ವೈರಿ ಸುತ್ರಾಮ ॥
ಕಾಮನಯ್ಯ ಕಮ । ನೀಯ ಮೂರುತಿಯೆ
ಕಾಮಿಪೆ ನಿನ್ನನು । ಭೂಮ ಗುಣಾರ್ಣವ ೧

ದಾತಾರಮ್ಮೆಗು ನಿಲಕ ವಿಖ್ಯಾತ । ಬೊಮ್ಮನ ಪೆತ್ತನು ಸ್ವರತ
ಭಕುತರ ನಡತೆಗೆ ಪ್ರೀತ । ಜಡ ಜಂಗಮದಲಿ ವಿತತ ॥
ವೀತಿ ಹೋತ್ರ ಸಖ । ಮಾತರಿಶ್ವ ಪ್ರಿಯ
ಪೂಥಣಿ ಮಾರಕ । ಪಾತಕ ಕಳೆಯೋ ೨

ಬಾಲಾ – ಕೆಡಿಸಿದೆ ಗೋಪೆರ ಶೀಲಾ । ಜನನಿಗೆ ತೋರಿದೆ ಲೀಲಾ
ವದನದಿ ಲೋಕ ವಿಶಾಲಾ । ಮಾವ ಕಂಸಗೆ ನೀ ಕಾಲಾ ॥
ಪಾಲು ಮೊಸರು ಬೆಣ್ಣೆ । ಲೀಲೆಯಿಂದಲಿ ಮೆದ್ದು
ಜಾಲತನದಿ ನಿಮ್ಮ । ಬಾಲರೆಂದ್ಹೇಳಿದೆ ೩

ಶ್ರೀತಾಕೇಶಿ ನಿಷೂದನ ವೃಷ್ಣೀಶ । ಸೋಜಿಗವೇನಿದು ಸರ್ವೇಶ
ಸಂತತ ಭಜಿಪರ ಅಘನಾಶ । ದಾಸ ಜನರ ಹೃತ್ತೋಷ ॥
ವಾಸವ ಮುಖ ದೇ । ವೇಶ ನಿನ್ನಯ ಪಾದ
ಆಶ್ರಯ ದೊಳಗಿಟ್ಟು । ಪೋಷಿಸು ಎನ್ನ ೪

ಕರ್ತಾ – ರಕ್ಷಿಸೆನ್ನ ತ್ರಿಜಗದ್ಭರ್ತ । ನೀ ಲೋಕೈಕ ಸಮರ್ಥ
ಗುರು ಕರುಣದಿ ನಾನು ಕೃತಾರ್ಥ । ಒರೆವೆನೊ ನಾನೊಂದು ವಾರ್ತಾ

ಆರ್ತೇಷ್ಟದ ಗುರು । ಗೋವಿಂದ ವಿಠಲ
ಮೂರ್ತಿ ನೆಲಸೊ ಮಮ । ಹೃತ್ಕಮಲದಲಿ ೫

೧೩೧

ವನರುಹ ನಯನಾ । ವನಜೇಕ್ಷಣ ಪ್ರಿಯ
ವನರುಹ ನಯನಾ । ಪ

ತನುಮನ ಧನಗಳಾ । ನಿನಗರ್ಪಿಸುವಂಥ
ಜನರ ಮನೋರಥ । ಅನುನಯದಿಂದಲೀವೆ ೧

ಮನಸಿಜ ಜನಕನೇ । ಫಣಿಶೈಲ ಸದನನೇ
ಅನಲಾಕ್ಷನ ಪ್ರಿಯ । ಗುಣ ಪರಿಪೂರ್ಣ ೨

ಮನೆ ಮಗ ಮಡಧ್ಯಬಿ । ಮಾನವು ಪೋಗಲಿಲ್ಲ
ಘನ ವಿಷಯಕೆ ಮನ । ಅನುಸರಿಸುವುದಯ್ಯ ೩

ಕನಸು ಮನಸಿನೊಳು । ನಿನಪದ ಧ್ಯಾನವ
ಅನುನಯದಿಂದಲಿತ್ತು । ಜನುಮ ಸಾರ್ಥಕ ಮಾಡೊ ೪

ಗುರು ಗೋವಿಂದ ವಿಠಲಾ । ವರ ವ್ರಜ ಪರಿಪಾಲ
ಪರಮ ದಯಾ ನಿಧೆ । ಪೊರೆಯೆನ್ನ ಕರ ಪಿಡಿದು ೫

೧೩೨

ವಾಸುದೇವ ಪರಿ । ಪೋಷಿಸು ನೀ ಎನ್ನ ।
ಕರುಣಾರಸ ಪೂರ್ಣಾ ಪ

ಶ್ರೀಶ ನೀನಲ್ಲದೆ । ಪೋಷಿಸುವರ ಕಾಣೇ ।
ಹುಸಿಯಲ್ಲ ಯನ್ನಾಣೆ ಅ.ಪ.

ಆಪದ ಹರಿಸಿದೆ । ಗೋಪಿ ಜನರ ಪ್ರೀಯ ।
ಸುಮ್ಮನಿ ಜನ ಗೇಯಾ
ಹೇ ಪರಮ ಪುರುಷ ತವ । ರೂಪ ಕಾಂಬುದೆಂದೂ ।
ಬಿನ್ನಪ ಸಲಿಸಿಂದೂ ॥
ಕಾಪಥ ಐಸದೆ । ಸುಪಥವ ನೀ ತೋರೋ ।
ಭಕುತ ಪೋಷ ಬಾರೋ ।
ದ್ರೌಪತಿಗಕ್ಷಯ । ವಸನವ ನೀನಿತ್ತು । ಕಳೆದೆಯೋ ಆಪತ್ತು ೧

ಕಡಲ ಶಯನನೇ । ಮಡದಿ ಮಕ್ಕಳನ್ನ ।
ನಿನ್ನಡ್ಡಿಗ್ಹಾಕಿದೆನಿನ್ನ
ಒಡಲಿಗಾಗಿ ದೈನ್ಯ । ಪಡಲಾರೆನೊ ಹರಿಯೇ ।
ಕೇಳೆನ್ನ ದೊರೆಯೇ ॥
ಮಡುವಿಲಿ ಮಕರಿಯ । ಬಿಡದೆ ಕಾಯ್ದ ಹರಿಯೇ ।
ಕರಿರಾಜನ ಪೊರೆಯೇ
ಒಡಮೂಡಿ ಕಂಬದಿ । ದೃಡ ಭಕುತ ಜಂಗುಳಿಯ ।
ಪರಿಹರಿಸಿದೆ ಜೀಯ ೨

ಶ್ರೀಪದ್ಮಜಾದಿ ಶಿರ । ಘಟ್ಟಿತ ಪಾದ ।
ಲೀಲೆ ಬಹು ವಿನೋದ ।
ಪಾಪಿಯು ನಾ ನಿಜ । ಪಾವನ ನೀ ಕೇಳೋ ।
ನಾ ನಿನಗಡಿಯಾಳೋ ॥
ಗೋಪ ಗೋಪಿಯರ ಸ । ಲ್ಲಾಪಕೊಲಿದ ದೇವ ।
ಹೇ ಮಹಾನುಭಾವ
ತಾಪ ಮೂರುಗಳ ಗುರು । ಗೋವಿಂದ ವಿಠಲ ।
ಪರಿಹರಿಪುದು ನಲ್ಲ ೩

೧೩೩

ವಿಕ್ರಮಾ – ಪಾಹಿ – ತ್ರಿವಿಕ್ರಮಾ ಪ

ವಿಕ್ರಮ ನಮಿಪೆ ನಾ ನಿನ್ನ । ನೀನು
ಚಕ್ರವ ಪಿಡಿದೊಂದು ದಿನ್ನ । ಆಹ
ನಕ್ರನುದ್ಧರಿಸಿದ । ಪ್ರಕ್ರಿಯ ನಾನರಿತು
ರುಕ್ರಮ ಶರಣೆಂಬೆ । ವಕ್ರ ಮನವ ಕಳೆ ಅ.ಪ.

ಪುಟ್ಟ ರೂಪವನೆ ತಾಳುತ್ತಾ । ಬಲಿಯ
ಇಷ್ಟಿಯೊಳವನ ಬೇಡುತ್ತಾ । ದಾನ
ಕೊಟ್ಟೆನೆಂದವನು ಪೇಳುತ್ತಾ । ಬರೆ
ಶಿಷ್ಟ ಶುಕ್ರನು ಬೇಡೆನ್ನುತ್ತಾ । ಆಹ
ಕಟ್ಟಲು ಗಿಂಡೀಯ । ದಿಟ್ಟ ಶುಕ್ರನ ಕಣ್ಣ
ಪುಟ್ಟ ದರ್ಭೆಲಿ ಚುಚ್ಚಿ ಮೆಟ್ಟಿ ನಿಂತೆಯೊ ಬಲಿಯ ೧

ಘೋರ ರೂಪದೊಳು ಅಂಬರಾ । ಹಬ್ಬಿ
ಧಾರುಣಿ ಅಳೆದ ಗಂಭೀರ । ಮತ್ತೆ
ಮೂರನೇದಕೆ ಬಲಿಯ ಶಿರ । ವತ್ತಿ
ಭಾರಿ ಪಾತಾಳಕ್ಕೆ ಧೀರಾ । ಆಹ
ಪೌರೋಚನಿಯನ್ವತ್ತಿ । ದ್ವಾರವ ಕಾಯುತ್ತ
ತೋರಿದೆ ಕರುಣವ । ಭೋರಿ ದೈವರ ಗಂಡ ೨

ಬ್ರಹ್ಮಾಂಡ ಖರ್ಪರ ಹರಿದೂ । ಜಲ
ಬ್ರಹ್ಮನ ಲೋಕಕೆ ಪರಿದೂ । ಬರೆ
ಬೊಮ್ಮತಾ ನಿನ ಪಾದ ತೊಳೆದೂ । ಬಿಡೆ
ಬ್ರಹ್ಮಾಂಡದೊಳು ತಾನು ಬಂದೂ । ಆಹ
ಸುಮ್ಮನಸರ ಲೋಕ । ಕ್ರಮ್ಮಿಸುತಲಿ ಬರುವ
ಅಮ್ಮಹ ಗಂಗೆ ಪೆ । ತ್ತೆಮ್ಮನುದ್ಧರಿಸಿದಾ ೩

ಬಾದರಾಯಣ ಬಳಿ ಭವ್ಯಾ । ನಾಗಿ
ಮೋದ ತೀರ್ಥರಿಂದ ಸೇವ್ಯಾ । ನೀನು
ವಾದಿರಾಜರಿಗೊಲಿದು ತ್ವರ್ಯಾ । ಬಂದು
ಸ್ವಾದಿ ಪುರದಿ ನಿಂದು ಸ್ತವ್ಯಾ । ಆಹ

ಮೋದದಿ ನೆಲೆಸುತ್ತ । ಕಾದುಕೊಂಡಿಹೆ ನಿನ್ನ
ಪಾದವ ಪೊಗಳೂವ । ಸಾದು ಸಂತತಿಯನ್ನ ೪

ಹೀನ ಮಾನವನೆಂದು ಎನ್ನಾ । ಉದಾ
ಸೀನ ಮಾಡುವಿಯೇನೊ ಘನ್ನ । ಕೇಳೊ
ನೀನು ತ್ರೈಭುವದಿ ಪಾವನ್ನಾ । ನೆಂದು
ಗಾನದೋಳ್ ತವ ಪಾದವನ್ನಾ । ಆಹ
ಆಗಮಿಸುತ ಬಂದ । ಮಾನವನೆನ್ನನು
ಧೀನನೆಂದೆನಿಸಾರೆ । ಜ್ಞಾನವ ನೀಡೆನಗೇ ೫

ಪ್ರತಿ ಪ್ರತಿ ವತ್ಸರದೊಳು । ಮಾಸ
ಹತ್ತೆರಡು ಪೂರ್ಣಿಮದೊಳು । ತವ
ರಥದೊತ್ಸವ ಕಾರ್ಯಗಳೂ । ಬಲು
ಹಿತದಿ ತವ ದಾಸರುಗಳೂ । ಆಹ
ಅತಿ ವೈಭವದಿಂದ । ವಿತರಣೆಯಿಂದಲಿ
ಪ್ರತಿಯಿಲ್ಲವೆಂದೆನ್ನೆ । ವಿಸ್ತರಿಸುವರಯ್ಯ ೬

ಮರುದಿನದವ ಭೃತ ಸ್ನಾನಾ । ಬಲು
ನೆರೆದಿಹ ಸಾದು ಸಜ್ಜನಾ । ಧವಳ
ಸುರನದಿಯೊಳು ಗೈದು ನಿನ್ನಾ । ಮಹಿಮೆ
ಪರಿ ಪರಿ ಪೊಗಳುತ ಚೆನ್ನಾ । ಆಹ
ಗುರು ಗೋವಿಂದ ವಿಠ್ಠಲ । ಪರಮ ಪುರುಷನೆಂದಾ
ನರ್ತನಗೈಯುತ । ನರರೇನು ಧನ್ಯರೋ ೭

೧೩೪

ವಿಠ್ಠಲ ವಿಠ್ಠಲ ವಿಠ್ಠಲ ಎನು ಮನವೇ ಪ

ವಿಠ್ಠಲ ಎನೆ ಹೃದದಿಷ್ಠಿತನಾಗುವ
ದುಷ್ಟ ಕುಲಾಂತಕ ಕಷ್ಟವ ನೀಗುವ ಅ.ಪ.

ಲಿಂಗ ಶರೀರವ । ಭಂಗಿಸೆ ಸಜ್ಜನ
ಸಂಗ ಮಾಡು ದು । ಸ್ಸಂಗವ ನೀಗೋ ।
ಅಂಗನೆಯರ ಬೆಳದಿಂಗಳ ನಗೆಗೆ
ಮಂಗನಾಗಿ ಭವ । ಭಂಗಕೆ ಸಿಲುಕದೆ ೧

ಹಸಗೆಡಿಸುವ ದು । ರ್ವಿಷಯದಾಸೆಯ ಬಿಡು
ಬಿಸಜನಾಭನ ಪದ । ಬಿಸಜವ ನೆನೆಯೋ ।
ಶಶಿ ಶತ ನಿಭ ಹರಿ । ವಶವ ಮಾಡೆ ಮನ
ಎಸೆವ ಪದ ಪ್ರದ । ಹರ್ಷವ ಪಡಿಸುವ ೨

ಗರ್ವ ಬಿಟ್ಟು ನೀ । ಗುರ್ವಂತರ್ಗತ
ಶರ್ವ ವಂದ್ಯನನು । ಪರ್ವ ಪರ್ವ ನೆನೆಯೋ
ದರ್ವಿ ಜೀವಿ ನಿನ । ಸರ್ವದ ಪೊರೆಯುವ
ದುರ್ವಿ ಭಾವ್ಯ ಗುರು । ಗೋವಿಂದ ವಿಠಲ ೩

೧೩೫

ವಿಠಲಯ್ಯ – ವಿಠಲಯ್ಯ ಪ

ಧಿಟನಿಹೆ ನೀ । ಷ್ಕುಟಿಲ ಗುರು ಗೋವಿಂದ ಅ.ಪ.

ಜಿಗಿದು ಜಲದಿ ನಗ ಮಂದರ ನೆಗಹುತ
ವಿಗಡಾಸುರ ಹಯಮೊಗನನ ಕಡಿದೆ ೧

ಪಟುತರ ನರಮೃಗ । ವಟು ವೇಷದಿ ನಿನ್
ಎಟುಪದದಂಗುಟ ಸುರ । ತಟನಿಗೆ ಕಾರಣ ೨

ನೃಪಕುಲ ಛೇದನ । ವಿಪಿನದಿ ಶಬರಿಯ
ಸುಫಲವ ಮೆ । ದ್ದ ಪವರ್ಗಗಿತ್ತೆ ೩

ಕ್ರೂರರ ತರಿದು । ವರ ಸತಿಯರ ವ್ರತ
ನೆರೆ ಅಳಿಸುತ ತಾ । ತುರಗವನೇರ್ದಾ ೪

ಭಾವದಿ ಮೈಮರೆ । ದಾವನು ತವಪದ
ಸೇವಿಸೆ ಸಲಹುವಿ । ಗುರು ಗೋವಿಂದ ೫

೧೩೬

ವಿಠಲಾ ಕಳೆಮದವಿದ್ಯಾ ಪಟಲಾ ।
ನಿಟಲಾಕ್ಷನ ಸಖಸಂ । ಕಟ ಕಳೆ ನಿಮ್ನಟಲನ ಮಾಡುತ ಪ

ತುರಗ ಗ್ರೀವಾಭಿಧನೆಂಬಸುರಾ । ವೇದಾಪಹಾರ
ನೆರೆವೇರಿಸೆ ಸ್ವೀಕರಿಸವತಾರಾ । ಹಯಮುಖನಾಕರ ।
ಅರಿಶಿರ ಸರಸದಿ ತತ್ತರಿಸುತ ನೀ
ಸುರರುಗಳನು ಬಹು ಪರಿಪೋಷಿಸಿದ್ದೆ ೧

ಧರೆಯನಪಹರಿಸಲು ಸುರವೈರೀ । ವರಾಹಾವತಾರಿ
ತ್ವರದಿ ಹಿರಣ್ಯಾಕ್ಷನ ಸಂಹಾರೀ । ನೀನಾದೆ ಮುರಾರಿ ।
ಧರಣಿಯ ಕೋರೆಯ ದಾಡಿಯಲೆತ್ತುತ್ತ
ಸುರ ಜೇಷ್ಠಗೆ ತಂದೊಪ್ಪಿಸಿದ್ಯೆಯ್ಯ । ೨

ತುರಗವ ನೀನೇರುತ ಬಂದೂ । ನಿನಪುರದೊಳಂದು
ಇರೆ ಧೇನೂಪಲಾರ್ಯರು ಅಂದು । ನೋಡಿ ಚಕಿತರಂದೂ
ಗುರು ಗೋವಿಂದ ವಿಠಲಾಲೇನಾಹಿ ಎಂದು
ಬರಿದೋಡಿದೆ ನೀ ದರುಶನ ಕೊಡದೇ ೩

೧೩೭

ವಿತತ ಮಹಿಮನೆ ಘನ್ನ – ಯತಿಕುಲ ಶಿರೋರನ್ನ
ಪ್ರತಿ ರಹಿತ ಸಂಪನ್ನ – ಸರ್ವ ಗುಣ ಪೂರ್ಣ ಪ

ಅಚ್ಚ ಕರುಣಿಯೆ ರಂಗ – ಕೊಚ್ಚಿ ಕುಜನರ ಸಂಗ
ಸ್ವಚ್ಛ ಸುಜನರ ಸಂಗ – ಈಯೊ ಕರುಣಾಪಾಂಗ ॥
ಮಚ್ಚ ಮೂರುತಿ ಹರಿಯೆ – ಭವ ಕರಿಗೆ ನೀ ಹರಿಯೆ
ಕುತ್ಸಿತನ ಸೊಲ್ಲನ್ನ – ಲಾಲಿಸುದು ಘನ್ನ ೧

ವೇದ ವಿಭಜನೆ ಗೈದೆ – ಮೋದದಲಿ ಭೋದಿಸಿದೆ
ಹೇ ದಯಾಂಬುಧೆ ವ್ಯಾಸ – ಕಾಯೊ ಮಹಿದಾಸ ॥
ಬಾದರಾಯಣ ಪೂರ್ಣ – ಭೋದಾರ್ಯನುತ ಚರಣ
ಸಾಧನದಿ ಸಂಪನ್ನ – ಎನಿಸೆನ್ನ ಘನ್ನಾ ೨

ಸಾವಧಾನದಿ ಕೈಯ್ಯ – ಪಿಡಿಯನ್ನ ಅಹಿಶಯ್ಯ
ಜೀವ ಬಹು ಪರತಂತ್ರ – ನೀನೆ ಸ್ವಾತಂತ್ರ ॥
ಗೋವ ಕಾಯುವ ಗುರು ಗೋವಿಂದ ವಿಠಲನೆ
ನೀ ವೊಲಿದು ಕಾಯದಿರೆ – ಕಾವರಿನ್ನಾರೋ ೩

೧೩೮

ವೆಂಕಟರಮಣ ಶ್ರೀ ವೆಂಕಟರಮಣ ಶ್ರೀ
ವೆಂಕಟರಮಣನೇ ॥ಪ॥

ಪಂಕಜೋದ್ಭವ ಪಿತ ಪಿಳ್ಳಂಕೇರಿಯ ವಾಸ
ವೆಂಕಟರಮಣನೇ ಅ.ಪ.

ಭದ್ರ ಮೂರುತಿ ಸಣ್ಣ । ಅದ್ರಿಯಾಶ್ರಯಿಸಿ ನಿಂ
ತಿದ್ದಿ ಕಾರಣವೇನೋ ।
ಶುದ್ಧ ಜನರು ಮಾಳ್ಪ । ಶುದ್ಧ ಸೇವೆಯ ಗೊಂ
ಡುದ್ಧರಿಸಲು ಯೋನೋ ೧

ನೀರೊಳು ಮುಳು ಮುಳಿಗಿ । ಭಾರಿ ಗಿರಿಯ ಪೊತ್ತು
ಕೋರೆಹಲ್ಲನು ತೋರೇನೋ ।

ಧೀರ ಕಂದನ ಕಾಯ್ದ । ನಾರಸಿಂಹನೆ ಬಲಿಯ
ದ್ವಾರ ಕಾಯ್ದಿಹದೇನೋ ೨

ಕ್ರೂರ ನೃಪರ ಸವರಿ । ನಾರಿ ಚೋರನ ಕೊಂದು
ಜಾರ ಗೋಪೆರ ಕೂಡೇನೊ ।
ಸಾರಿ ತ್ರಿಪ್ಪುರವನ । ನಾರೇರ ವ್ರತ ಕೆಡಿಸಿ
ವೀರ ರಾವುತನಾದದ್ದೇನೋ ೩

ಪಂಚ ರೂಪದಿ ಪ್ರ । ಪಂಚವ ವ್ಯಾಪಿಸಿ
ಪಂಚಾತ್ಮಕ ನಾದದ್ದೇನೋ ।
ಅಂಚೆ ಗಮನನಾದಿ । ಪಂಚ ಪಂಚರಲ್ಲಿ
ಸಂಚು ಗೊಳಿಪುದೇನೋ । ೪

ಇಂದ್ರಾ ವರಜ ದೇ । ವೇಂದ್ರ ಗಭೀಷ್ಟದ
ಬಂದಲ್ಲಿ ನಿಂದಿರ್ಪುದೇನೋ
ಇಂದು ಕುಲಜ ರಾ । ಜೇಂದ್ರ ಜನಮೇಜಯ
ಗಂದು ಒಲಿದು ನಿಂತಿಲ್ಲೇನೋ ೫

ಪಾಂಡವಭೀಷ್ಟದ । ಪುಂಡರೀಕಾಕ್ಷನೆ
ತೊಂಡರಾಶ್ರಯದಾತಾ ।
ಭಾಂಡಕಾರಕ ಭೀಮ । ತೊಂಡ ಮಾನಾನಂದ
ಅಂಡಜವಾಹ ವಿಖ್ಯಾತಾ ೬

ಭಾವ ಶುದ್ಧೀಲಿ ಸ್ತವನ । ದೇವ ಶರ್ಮನು ಮಾಡೆ
ಭಾವಕ್ಕೊಲಿದು ಮೋಕ್ಷವಿತ್ಯೋ ।
ಗೋವ ಕಾವ ಗುರು । ಗೋವಿಂದ ವಿಠಲ ಭಕ್ತಿ
ಭಾವ ನಿನ್ನಯ ಪದದಲ್ಲಿಯೋ ೭

೧೩೯

ವೆಂಕಟೇಶ – ಭವ – ಸಂಕಟ ಕಳೆ – ವೆಂಕಟೇಶ ||ಅ||

ಶಂಕೆ ಇಲ್ಲದೆ ನಿಷ್ಕಂಚನ ಜನ ।
ಪಂಕ ಕಳೆವ ಸಿರಿ ವೆಂಕಟೇಶ ಅ.ಪ.

ಮಹ ವೇದಗಳನು ಕದ್ದ ದೈತ್ಯನ ಕೊಂದೆ ವೆಂಕಟೇಶ
ಮಹ ಮೀನನಾಗಿ ನೀ ಸತ್ಯವ್ರತಗೆ ಒಲಿದೆ ವೆಂಕಟೇಶ ೧

ಸಿಂದು ಮಥನದಿ ಕೂರ್ಮ ನೀನಾಗುತ – ವೆಂಕಟೇಶ
ಮಂದರಗಿರಿ ಪೊತ್ತು ಭಕ್ತರ ಸಲಹಿದೆ ವೆಂಕಟೇಶ ೨

ಮತ್ತರಾದ ಮಧುಕೈಟಭರ – ಕೊಂದೆ ವೆಂಕಟೇಶ
ಮತ್ತೆ ಭೂ ಚಾಪೆಯ ಮಾಡಿದವನ ಕೊಂದೆ ವೆಂಕಟೇಶ ೩

ಕನಕ ಕಶಿಪು ಬಾಧೆ ಕಳೆಯಲು – ತರಳಗೆ ವೆಂಕಟೇಶ
ಕ್ಷಣದಿ ಕಂಭದಿ ಬಂದು ದುರುಳನ ಸವರಿದೆ ವೆಂಕಟೇಶ ೪

ಮೂರು ಪಾದವ ಬೇಡಿ – ಬಲಿಯ ಭಂಜಿಸಿದೆ ವೆಂಕಟೇಶ
ಪಾರಗಾಣದ ಮಹಿಮೆ ಬಾಗಿಲ ಕಾಯ್ದೆ ವೆಂಕಟೇಶ ೫

ಕೊಡಲಿಯಿಂದಲಿ ದುಷ್ಟ ಕ್ಷತ್ರೇರ ತರಿದ್ಯೊ ವೆಂಕಟೇಶ
ಪೊಡವಿಯ ದ್ವಿಜರಿಗೆ ಹಂಚಿ ಮೆರೆದೆ ವೆಂಕಟೇಶ ೬

ಮಡದಿಯ ಕದ್ದೊಯ್ದ ದೈತ್ಯನನ್ನಳಿದೆ ವೆಂಕಟೇಶ
ಧೃಢ ಭಕುತಗೆ ಲಂಕೆಯ ಪಟ್ಟಣವಿತ್ತೆ ವೆಂಕಟೇಶ ೭

ಗೋಪಿ ಜನರ ಪ್ರಿಯ । ಸುಪರ್ಣವರವಾಹ ವೆಂಕಟೇಶ
ಪಾಪಿ ಕೌರವ ಕುಲಹರ ಧರ್ಮ ಸ್ಥಾಪಿ ವೆಂಕಟೇಶ ೮

ಬೆತ್ತಲೆ ನೀ ನಿಂತು ಕುತ್ಸಿತ ಅಸುರರಸದೆದ್ಯೋ ವೆಂಕಟೇಶ
ಕುತ್ಸಿತ ಅಸುರರ ಮೋಹಿಸುತಳಿದೆಯೊ ವೆಂಕಟೇಶ ೯

ತುರಗನೇರಿ ಕಲ್ಕಿ ಎನಿಸಿಕೊಂಡೆಯೊ ವೆಂಕಟೇಶ
ಉರಗಾದ್ರಿ ವಾಸ ಗುರು ಗೋವಿಂದ ವಿಠಲ ವೆಂಕಟೇಶ ೧೦

೧೪೦

ವೆಂಕಟೇಶ ಸಂಕಟಹರ ನಿರ್ಭೀತ ।
ಕುಂತಿಯಸುತ ಸೂತ । ಭವ ವನಧಿಯ ಪೋತ ಪ

ಬಿಂಕದಿಂದ ಪೊರೆ । ಕಿಂಕರ ಎನ್ನನು
ಮಂಕುಮತಿಯ ಕಳೆ । ಪಂಕಜ ಪಾಣಿಯೆ ಅ.ಪ.

ಮಂದರೋದ್ಧಾರಿ ಸುಂದರ ಮುರವೈರಿ । ಬಾರಯ್ಯ ಶೌರಿ
ಎಂದೀಗೆ ಕಾಂಬೆನೊ ಕಂಸಾರೀ । ದನುಜ ಸಂಹಾರೀ ॥
ಸಿಂಧುಶಯನ ಅರ । ವಿಂದ ನಯನ ಹೃ
ನ್ಮಂದಿರದಲಿ ಆ । ನಂದವನೀಯೋ ೧

ಬಿಂಬಾನೆ ಭವ ಬಂಧನವ ಬಿಡಿಸೊ । ಸ್ಮರಿಸುವರಘ ಹರಿಸೋ
ಶಂಬರಾರಿಯ ಪಿತ ಮನವನೆ ನಿಲಿಸೋ ನಿನ್ನೊಳು
ನೆಲೆಗೊಳಿಸೋ ಶಾಂಭವಿ ಧನುವನು ಭಂಜಿಸಿದಾತನೆ
ಶಂಭು ನಿಶುಂಭರ ಸವರಿದ ರಾಮನೆ ೨

ಬಿಂಬಾನೆ ಗುರು ಗೋವಿಂದ ವಿಠಲಯ್ಯ । ನೀಯನ್ನ ಸಲಹಯ್ಯ।
ತುಂಬೀಹ ಷಡ್ವೈರಿಯ ಕಳೆಯಯ್ಯ । ನಿನ್ನಯ ಮಹಿಮೆಯ ॥
ಹಂಬಲ ಹೃದಯಾಂಬರದೊಳು ತುಂಬಿಸಿ
ಪೊಂಬರಿಸಯ್ಯನೆ ತವಪದ ತೋರಿಸೊ ೩

೧೪೧

ವೇಣು ಗಾನಪ್ರಿಯ – ಗೋವಿಂದ ನಮ್ಮ
ಮಾನ್ಯ ಮಾನದನೇ – ಗೋವಿಂದ ಪ

ದಕ್ಷಿಣಾಕ್ಷಿಯಲಿಹ – ಗೋವಿಂದ । ನಮ್ಮ ।
ಪಕ್ಷಿಯ ವಾಹ – ಮುಕುಂದ ॥
ಕುಕ್ಷಿಲಿ ತ್ರಿಭುವನ – ಗೋವಿಂದ । ನಮ್ಮ ।
ಅಕ್ಷರ ಕ್ಷರವರ _ ಮುಕುಂದ ೧

ಪೂರ್ಣ ಗುಣಾರ್ಣವ – ಗೋವಿಂದ । ನಮ್ಮ ।
ಪೂರ್ಣ ಭೋದನುತ ಮುಕುಂದ
ಪೂರ್ಣಾನಂದ ಪ್ರದ – ಗೋವಿಂದ । ಕುಭ ।
ವಾರ್ಣವ ದಾಟಿಸು ಮುಕುಂದ ೨

ರಾಜ ರಾಜಾಪ್ತನೆ – ಗೋವಿಂದ । ವಾದಿ ।
ರಾಜರದ್ವರದನೆ – ಮುಕುಂದ
ಭೋಜಕುಲೋದ್ಭವ – ಗೋವಿಂದ । ಭವ ।
ಗೋಜನೆ ಬಿಡಿಸೊ – ಮುಕುಂದ ೩

ಕಾರಣ ಕಾರಣ – ಗೋವಿಂದ । ಜಗ ।
ಕಾರಣ ನೈಮಿತ್ಯ – ಮುಕುಂದ
ಈರಣ ಜಗಕೆಲ್ಲ – ಗೋವಿಂದ ।
ಮದ ವಾರಣ ಮಾರಣ – ಮುಕುಂದ ೪

ಶಿರಿ ಹಯವದನನೆ – ಗೋವಿಂದ । ನಮ್ಮ ।
ಶಿರಿ ಕೃಷ್ಣ ರಾಮನೆ – ಮುಕುಂದ
ಶಿರಿ ವೇದವ್ಯಾಸ – ಗೋವಿಂದ । ಕಾಯೊ ।
ಗುರು ಗೋವಿಂದ – ವಿಠಲ ಮುಕುಂದ ೫

೧೪೨

ಶರಧಿ ತೀರಗ ಸಿಂಹಪುರಿ ನಿಲಯ ದೇವಾ ।
ಪರಮ ಕರುಣಾ ಸಿಂದು ಹರಿಸೊ ಭವ ನೋವಾ ಪ

ಹರಿಯೆ ಪರದೈವ ವೆಂ । ಮೊರೆಯುತಿಹ ಬಾಲಕನ
ಪರಿ ಪರೀ ಹಿಂಸಿಸಲು । ಪರಿಚರರಿಗ್ವೊರೆಯೇ
ತರಳ ಪ್ರಹ್ಲಾದವನ । ಕರದೊಯ್ದು ಕಬ್ಬಿಯಲಿ
ಹೊರದೂಡಿ ಪರಿಶಿಲೆಯ । ಶಿರದ ಮೇಲಿಡಲೂ ೧

ವರಹ ಲಕ್ಷ್ಮೀನರ । ಹರಿಯ ರೂಪದಲಿಂದ
ಭಾರವಾದ್ ಶಿಲೆಯ ನೊ । ತ್ತರಿಸುತಲಿ ನೀನೂ
ವರ ಭಕ್ತನನು ಕಾಯ್ದೆ । ಸರುವ ವ್ಯಾಪಕ ದೇವ
ಕರುಣಿಸು ಗುಣಾನಂತ । ವರಲಕ್ಷ್ಮಿಕಾಂತ ೨

ಹರಿಗೆ ನಿನ್ನಯ ರೂಪ । ವಿರದೆಂಬ ಸುಜ್ಞಾನ
ಮರೆಸಿ ಮೋಹಕನಾಗಿ । ಸುರ ವಿರೋಧಿಗಳಾ
ನರಕ ಭಾಜನರೆನಿಸಿ । ಪರಿ ಪರಿಯ ಹಿಂಸೆಗಳಿ
ಗೆರವು ಮಾಡುವೆ ಗುರೂ । ಗೋವಿಂದ ವಿಠಲಾ ೩

೧೪೩

ಶರಣು ಭಾರ್ಗವರಾಮ । ಶರಣು ಭಕುತ ಪ್ರೇಮ
ಶರಣು ಭವ ಭಯ ಪರಿಹರಾ ಪ

ಸನಕಾದಿ ಮುನಿವಂದ್ಯ । ಕನಕ ಗರ್ಭಜ ಜನಕ
ಅನುನಯದಿ ಗೀತೆ ಫ । ಲ್ಗುಣಗೆ ಭೋಧಿಸಿದೇ
ಎಣೆಯೆ ತವ ಕರುಣ । ಘನವರ್ಷಣಕೆ ಹರಿ
ಅನಘ ನಿನ್ನಡಿ ನೆಳಲ । ನಾಶ್ರಯಿಪೆ ಎಂದೆಂದೂ ೧

ಭುವನ ಮೋಹನ ದೇವ । ಭವಗು ಮೋಹಿಪ ಭಾವ
ದಿವಿಭವರು ತವರೂಪ । ಯುವಗಳಿಕ್ಕದಲೇ ।
ಸುವನ ತ್ರಯದಲಿ ಕಂಡು । ಪವನಾಂತರಾತ್ಮಮಾ
ಧವನೆ ಹಿಗ್ಗುತಲಿ । ಹವಿಷನರ್ಪಿಪರೋ ೨

ಸರ್ವಶಬ್ದಾಭಿಧನೆ । ಸರ್ವ ದೇವೋತ್ತಮನೆ
ಪರ್ವ ಪರ್ವದಿ ಇದ್ದು । ಪರ್ವ ವಾಚ್ಯಾ ।
ದರ್ವಿಯಂದದಲಿಪ್ಪ । ಜೀವನ್ನ ಪೊರೆಯುವ
ಸರ್ವಭಾರವು ನಿನ್ನದೊ । ಶರ್ವನೊಡೆಯಾ ೩

ಬಿಂಬನೆಂದೆನಿಸಿ ಪ್ರತಿ । ಬಿಂಬರುಗಳ ಜ್ಞಾನ
ಧಂಬಲವ ಕೊಡಿಸುತ್ತ । ಇಂಬು ನಿನ್ನಡಿ ಕಮಲದಿ ।
ಕಂಬು ಅರಿ ಗದಧರನೆ । ತುಂಬಿ ಎನ್ನೊಳು ನೀನು
ಸಂಭ್ರಮದಿ ಕಾಯುವುದು । ಕುಂಭಿಣಿಯ ರಮಣಾ ೪

ವಿಶ್ವರೂಪಿಯ ನಿನ್ನ । ನಿಶ್ವಸನ ವೇದಗಳು
ಸ್ವಸ್ವರೂಪದಿ ಮುಖ್ಯ । ತವ ಮಹಿಮೆ ಪ್ರತಿಪಾದ್ಯವೂ ।
ವಿಶ್ವ ತೈಜಸ ಪ್ರಾಜ್ಞ । ತ್ರೈಯವಸ್ಥೆ ಪ್ರವರ್ತಕನೆ
ವಿಶ್ವ ವ್ಯಾಪಿಯೆ ಗುರು । ಗೋವಿಂದ ವಿಠಲಾ ೫

೧೪೪

ಶ್ರೀಕರ ಮೂರ್ತಿ ಕೃಪಾಕರ ಈ
ತೋಕನಿಗೊಲಿಯೆ ಬಿನ್ನೈಸುವೆ ಹರಿಯೆ ಪ

ಲೋಕದೊಳುಳ್ಳಖಿಳಜನಾಳಿಗೆ
ಬೇಕೆನಿಸಿದ ವರ ನೀ ಕೊಡೊದಿಲ್ಲನೆ ಅ.ಪ.

ಮಲ್ಲರ ದಲ್ಲಣ – ವಲ್ಲಭ ಲಕುಮಿಗೆ
ಸೊಲ್ಲನು ಲಾಲಿಸಿ ಕಾಯೊ ಕೃಪಾಳು ೧

ಆರ್ತೇಷ್ಟದ ಹರಿ – ಅರ್ಥ ಸಾಧನವ್ಹೋ ಕಾಮ
ರೂಪ ವರ್ತಿಸಲ್ಯೆಕ್ಯವು – ಆವುದಸಾಧನೆ ೨

ಬಿಸಜ ಸಂಭವ ಪಿತ – ವಶವಿರೆ ಜಗವೆಲ್ಲ
ಹಸುಳೆಯ ಕಾಯ್ವ – ದಸಾಧ್ಯದೆ ನಿನಗೆ ೩

ನಿಗಮಾವಳಿ ನಿನ್ನ – ಅಗಣಿತ ಮಹಿಮೆಯ
ಪೊಗಳುವುದನು ಕೇಳೀ – ಮಿಗೆ ಶರಣೆಂಬೆನೊ ೪

ಗೋವತ್ಸ ಧನಿ ಕೇಳಿ – ಆವು ಧಾವಿಸುವಂತೆ
ನೀ ವೊಲಿಯೋ ಗುರು – ಗೋವಿಂದ ವಿಠಲ ೫

೧೪೫

ಸ್ತ್ರೀರೂಪಿ ಶ್ರೀ ಗಾಯತ್ರೀ ನಾಮಕನ ಸ್ತೋತ್ರ

ಶ್ರೀಗಾಯತ್ರೀ – ನಮಸ್ತುಭ್ಯಂ – ಗತಿಪ್ರದೇ
ಉ– ದ್ಗೀಯೇಕಪದೇ – ದ್ವಿಪದೇ ।
ತ್ರಿಪದೇ – ಚತುಷ್ಪದೇ ಪದೇ ಪ

ನಾಗಹ – ರಥಿಕಾ – ನಾಗಶಯನಾ – ಹಿರಣ್ಯಾ ವರ್ಣಾ
ಗಗನಮಣಿ ಕೋಟಿ ಭಾಸಮಾನಾ – ಭಕ್ತ ಶರಣ್ಯಾ
ನೀಗುವ ಭವರೋಗವ । ಹೃತ್ಕಮಲದಿ ತೋರು
ಬಾಗುವ ಜನ ಕಾಯುವ । ಶ್ರೀ ಹರಿ ಮುದ ಬೀರುವ ಅ.ಪ.

ಜ್ಯೋತಿರ್ಮಯಾವ್ಹಾ – ಮಂಡಲದಿಂ – ತವರೂಪ
ಜ್ಯೋತಿಯಲಿ ಮುಸುಕಿಹುದು – ಭಕ್ತಗದೂ
ನೀ ತೋರ್ವುದು – ಮಹ ಮಹಿಮನೆ – ಹೇ ಪೂರ್ಣ
ಈ ತೋಕನ ಸ್ವಾರೂಪಿಕ – ಜ್ಞಾನಧನ ಪ್ರಾಪಕ

ದ್ರುತ – ಪಾತಕಾ ಭೇದ ನಿಪುಣಾ – ಪ್ರಾಣ ಸನ್ನುತ ಚರಣ
ಭೌತಿಕ ವಿಶರಣ ಧನ । ಪಾಲಿಸು ಸುಮನಾ ೧

ವೇದಮಾತೆಯೇ – ಆದಿಕರ್ತ್ರೇ ಗುಣಾಪಾರೇ
ಮೋದ ದಕ್ಷಿಣ ಪಕ್ಷೇ – ಪ್ರಮೋದ ಉತ್ತರ ಪಕ್ಷೇ
ಭೇದಾದಿರಹಿತೇ – ಅವಯವಾದಿಯಲಿ – ಸುಮಹಾರೇ
ಭೋದಿಪೆ ಬ್ರಹ್ಮಾದಿಗೆ ಕಪಿ । ಲಾದಿ ರೂಪಿ ಪರೇ

ದ್ರುತ – ಕಾದುಕೋ । ಅಭಯಕರೇ । ಪುಸ್ತಕ ಭೂಷಿತ ಕರೆ
ಸಾಧುಗಳಘಗಳ್ಹರೇ– ಕಾಯುವುದೆನ್ನ ಶ್ರೀಹರೇ ೨

ಗಾಯತ್ರೀ – ಭೂತ – ವಾಕೊ । ಪೃಥಿವೀ ಶರೀರಾ – ಹೃ–
ದಯ ಭೇದದಿಂದಲಿ । ಷಡ್ವಿದ ನಾಮಕೇ
ಈ ಯಾವ ಭೂತೇಶ ಪದ । ಮಾ ಸ್ವಾರೂಪದ
ಆ ಯಾವ ವೈಕುಂಠ ಪದ । ಶ್ವೇತ ದ್ವೀಪಾದಿ ಪದ

ದ್ರುತ – ಗೇಯ ಗುರು ಗೋವಿಂದ ವಿಠಲ । ಸೂರ್ಯನೋಳ್ದೇಯ
ನೆಲ ಗಾಯ ಕರ್ಮಾಯ ಪಟಲ । ಪರಿಹರಿಸುವ ವಿಠಲ ೩

೧೪೬

ಶ್ರೀವರನೆ ದಯ ಮಾಡೋ ನಿನ್ನ ।
ಸೇವಕ ಸೇವಕನ ನೋಡೋ ಪ

ಚಾಚುವೆ ಶಿರ ತವ ಪದಕೆ ಶ್ರೀಹರಿ ।
ಖೇಚರೋತ್ತಮ ಪ್ರಾಣಗೆ ಪೇಳಿ
ನೀಚ ಭವ ಕೂಪಾಕಿ ದಾಟಿಪ ।
ಮೋಚಕೇಚ್ಛೆಯ ನೀ ಮಾಡಿಸೊ ೧

ಹೆತ್ತ ತಾಯಿಗೆ ತೊತ್ತು ಭಾರವೇ ।
ಪೆತ್ತು ಈ ಜಗವನ್ನೆಲ್ಲ ಪೊತ್ತು
ಕರ್ತನೆಂದೆನಿಸಿದವಗೆ ನಿನ್ನ ।
ಭೃತ್ಯನ ಪಾಲಿಪ ಕೃತ್ಯ ನಿನದಲ್ಲೇ ೨

ಭಾವುಕ ಜನ ಪರಿ ಪೋಷಕ ಗುರು ।
ಗೋವಿಂದ ವಿಠಲರೇಯ ಎನ್ನ
ಭಾವದೊಳಗೆ ತೋರಿಕೊಂಡು ಭವ ।
ನೋವ ಕಳೆವುದೆಂದು ಬಿನ್ನವಿಪೆ ೩

೧೪೭

ಶೃತಿನಾಥ ಸ್ಮೃತಿಯಿತ್ತು ಸತತ ಪೊರೆಯೋ
ಗತಿ ಗೋತ್ರ ನೀನೆಂದು । ಸತತ ತುತಿಸುವೆನೋ ಪ

ಸ್ವಚ್ಛ ಭಕುತಿಲ್ಲದವ । ಮೆಚ್ಚಿಪುದು ಎಂತೋ ನಿನ್ನ
ಅಚ್ಚ ಕನ್ನಿಕೆ ರಮಣ । ಲಕ್ಷ್ಮೀಲೋಲಾ ।
ಮುಚ್ಚ ಕಾಣಿಕೆ ಕೊಡಲು । ಕುತ್ಸಿತನು ನಾನಿಹೆನು
ಉಚ್ಚ ಭಕುತಿಯನಿತ್ತು । ನಿಚ್ಚ ಸೇವೆಯ ಕೊಳ್ಳೋ ೧

ಧ್ಯಾನ ಶೂನ್ಯನು ನಾನು । ಮಾಣದಲೆ ಪೊರೆಯೆನ್ನ
ಮೌನಿ ಜನ ಸನ್ಮಾನ್ಯ । ದಾನ ಪತಿ ಸಖನೇ ।
ನ್ಯೂನಾತಿರೇಕಗಳ । ನೀನಾಗಿ ಮನ್ನಿಸುತ
ಮಾನನಿಧಿ ಗುಣಪೂರ್ಣ । ನೀನೆನ್ನ ಪೊರೆಯೋ ೨

ಭಾವದಲಿ ನೀನಿರಲು । ಅವ ಭಯವಿಲ್ಲೆನಗೆ
ಶ್ರೀವರನೆ ಸರ್ವೇಶ । ಸರ್ವಜ್ಞ ಮೂರ್ತೇ ।
ಕಾವ ಕರುಣಿಯೆ ಗುರು । ಗೋವಿಂದ ವಿಠಲ ಬಾ
ಗೋವತ್ಸ ಧ್ವನಿ ಕೇಳಿ । ಧಾವಿಸುವ ಪರಿಯಂತೆ ೩

೧೪೮

ಶೃತಿ ಪ್ರತಿಪಾದ್ಯನೆ । ಕೃತಿದೇವಿ ರಮಣನೆ
ವಿತತ ವಿಶ್ವದಪಾಲ । ಮೃತ ಶಿಶು ಪರಿಪಾಲ ಪ

ಮರ್ತ್ಯರ ಬೀಷ್ಟವ । ಸಾರ್ಥಕಗೊಳಿಸುವ
ಪಾರ್ಥ ಸಾರಥಿಯೆ । ಕೀರ್ತಿಸಲರಿಯೆ
ಮೂರ್ತಿಯ ಕಾಣುವ । ವಾರ್ತೆ ಇರಲಿ ದೇವ
ಸೂಕ್ತ ಮೇಯ ಅ । ಸಕ್ತಿ ಪ್ರದಾತಾ ಅ.ಪ.

ಗುರು ಬಿಂಬ ಸುಲೀಲ । ಸ್ಮರಿಸುವ ಗುಣಶೀಲ ।
ಕರುಣಿಸು ಶಿರಿಲೋಲ । ಕೀರ್ತಿ ವಿಶಾಲಾ
ಪರಿ ಪರಿ ಗುಣ ಜಾಲ । ದರಿವನೆ ಕೊಡು ಕೋಲ
ಧರಿಸಿಹೆ ವನಮಾಲಾ । ಶರಣರ ಪಾಲ ೧

ತರಳ ಪ್ರಹ್ಲಾದನ । ವರಧ್ರುವ ಬಾಲನ
ದುರುಳನೆನಿಸಿದನ । ವರ ಅಜಾಮಿಳನ
ಕರೆಯಲು ಬಂದನ । ನರವರ ಅಕ್ರೂರನ
ಪರಿ ಪರಿ ಭಕ್ತರನ । ಪೊರೆದ ಮೋಹನ್ನ ೨

ಪಟು ಭಟಗಾನಂದ । ಘಟಿಸಲು ಮುಕುಂದ
ಕುಟಿಲ ರಹಿತ ಛಂದ । ಪಟುತರ ವ್ಯಾಪ್ತಿಂದ
ಛಟ ಛಟ ಕಂಬದಿಂದ । ಪುಟ ನೆಗೆಯುತ ಬಂದ
ದಿಟ ಗುರು ಗೋವಿಂದ । ವಿಠಲ ಆನಂದ ೩

೧೪೯

ಶೇಷಾದ್ರಿ ವಾಸಾ ಪಾಲಿಸೋ । ನಿನ್ನ ಶ್ರೀಪಾದ
ದಾಸ ಜನರೊಳಗಾಡಿಸೊ ಪ

ಕ್ಲೇಶ ಪಡಿಪ ಭವ । ಪಾಶಗಳಳಿಯುತ
ವಾಸಿಸೊ ಮನದಾ । ಕಾಶದೊಳಗೆ ಶ್ರೀಶಾ
ವೃಷ್ಣೀಶ ಸರ್ವೇಶ – ಕೃತ ಖಳಕುಲ ಬಹುನಾಶ ಅ.ಪ.

ಮದನ ಕೋಟಿ ಲಾವಣ್ಯಾ । ಶ್ರೀ ಭೂ ವರೇಣ್ಯಾ
ಪದುಮೆ ಮನಮೋಹನಾ ।
ಮುದ ಮನದಲಿ ಮನದವಕಾಶದಿ ಪೊಳೆ
ಸುರಭೂಜ । ರವಿತೇಜ । ಮಹ ಓಜ ವೈರಾಜಾ ೧

ತರುಜಾತಿ ಫಲ ಸುಮನಾ । ಸುರರೀ ಭವನಾ
ಧರಿಸಿ ಮೆರೆವ ಸುಜನಾ ।
ಗಿರಿಯೊಳು ನೆಲೆಸುತ – ಸುರರ ಸೇವೆ ವಿಸ್ತಾರ
ಗಂಭೀರ ಮನೋಹಾರ – ಕೃತಕ್ರತು ಸಮ ಅಪಾರ ೨

ಭಾರತೀಶ ಪ್ರಾಣಾಂತರ್ಗತ । ಕಾಮಿತದಾತಾ
ಸಾರ ಸದ್ಗುಣ ಭರಿತಾ ॥
ನೀರಜಾಕ್ಷ ಗುರು । ಗೋವಿಂದ ವಿಠಲನೆ
ಮೈದೋರೊ । ಮುದಬೀರೊ । ನಿನಗೆಲ್ಲು ಸರಿಯಾರೋ ೩

೧೫೦

ಸಪ್ತ ಗಿರಿಯ ವಾಸ । ಶ್ರೀ ವೆಂಕಟೇಶ । ನಿನ್ನ
ಮರೆತವಗೀವೇ ಬಹುತರ ಕ್ಲೇಶ ಪ

ಅಸ್ಥಿತ್ವಕ್ಚರ್ಮಾದಿ ಮಾಂಸ । ಧಾತು
ಸಪ್ತಾವರಣ ಕಾಯದೊಳಗೆ ಆ ವಾಸ ।
ಲಿಪ್ತನಾಗದೆ ಇದ್ದು ಶ್ರೀಶ । ಜೀವ
ರಾಪ್ತ ಸಾಧನ ಮಾಡಿ ಮಾಡಿದೆ ಅನಿಶಾ ೧

ಸಪ್ತವು ದಶದ್ವಯ ಸಹಸಾ । ನಾಡಿ
ಸಪ್ತಾಬ್ಜದೊಳು ಸನ್ನಿವಾಸ ।
ಭಕ್ತರಿಗೊಲಿವೆಯೊ ಮೇಶ । ನಿನ್ನ
ಗುಪ್ತ ಮಹಿಮೆ ನೀನೆ ತಿಳಿಸೊ ಸರ್ವೇಶ ೨

ಸುಪ್ತಿ ಸ್ವಾಪವು ಮತ್ತೆ ಜಾಗ್ರತ । ತ್ರಯಾ
ವಸ್ಥೆ ಪ್ರೇರಕನಿಹೆ ಗುಣಗಣ ಭರಿತ । ಮತ್ತೆ
ಚತ್ತುರಾವಸ್ಥೇಯ ಭೋಕ್ತ । ನಾಗಿ
ಮುಕ್ತಾನಂದದಲಿದ್ದು ಮೆರೆವೆ ವಿಧಾತಾ ೩

ಆರ್ತನಾಗುತ ಬೇಡ್ವೆ ಹರಿಯೇ । ನಿನ್ನ
ವ್ಯಾಪ್ತಿ ತೋರೋ ಸರ್ವ ಲೋಕದ ಧೊರೆಯೆ
ಮೂರ್ತಿ ನಿಲ್ಲಲಿ ಮನದಿ ಹರಿಯೇ । ನಿನ್ನ
ಕೀರ್ತಿ ಕೊಂಡಾಡಿಸು ಸತತದಿ ಶೌರೀ ೪

ತಪ್ತ ಕಾಂಚನದಂತೆ ಹೃದಯ । ದಲ್ಲಿ
ದೀಪ್ತನಾಗಿದ್ದರು ಕಾಣದ ಪರಿಯೆ ।
ಸುಪ್ತಿಯ ಕಳೆ ತವ ಮೂರ್ತಿಯ । ತೋರೊ
ಗೋಪ್ತ ಗುರು ಗೋವಿಂದ ವಿಠಲಯ್ಯ ೫

೧೫೧

ಉಗಾಭೋಗ

ಸಲ್ಲದಭಿಮಾನವನು ।
ಎಲ್ಲರೊಳುಪೆಚ್ಚಿಸುವೆ ಸಿರಿ
ನಲ್ಲ ಈ ಮಮಕಾರ
ವಳಿಸಿ ಪರಿವಾರದಲಿ ಇದು
ಇಲ್ಲವೆಂದಬರಿವಿತ್ತು ಕರುಣಿಸೋ
ಗುರು ಗೋವಿಂದ ವಿಠಲಾ ೧

೧೫೨

ಸರ್ವತಂತ್ರ ಸ್ವತಂತ್ರ । ನಿರ್ವಿಕಾರನೆ ದೇವ
ಅವ್ವ ಲಕುಮಿಗು ಪ್ರೇರಕ ಪ

ದುರ್ವಿಭಾವ್ಯನೆ ಜಗಕೆ । ದರ್ವಿ ಜೀವನ ಕಾವ
ಹವಣೆ ನಿನದಲ್ಲೇ ಸ್ವಾಮಿ ಅ.ಪ.

ಆಯುರ್ಯಜ್ಞದಿ ಪ್ರಥಮ । ಸವನಾಧಿಪತಿ ನಿನ್ನ
ಗಾಯಿತ್ರಿ ಪ್ರತಿಪಾದ್ಯದ ।
ವಾಯು ವಂದಿತ ರೂಪ । ದಿಂದೆನ್ನ ರಕ್ಷಿಸಿದೆ
ಭಾರ್ಯಳಿಂದೊಡಗೂಡುತ ।
ಅಯುರ್ಯಜ್ಞದಿ ದ್ವಿತೀಯ । ನಿಯಮ ನವ ಮಾಳ್ಪುದಕೆ
ಜಾಯೆಯಿಂದೊಡಗೂಡಿ । ಕಾಯ ರಕ್ಷಿಸಿದೇ ೧

ಮಾಧ್ಯಂದಿನದಿ ದೇವ । ಅಭಿಮಾನಿ ತ್ರಿಷ್ಟುಪು
ಆಯಾಯ ದಿವಿಜರಲ್ಲಿ
ನೀ ಯಜ್ಞಭುಕು ಎನಿಸಿ । ವರ್ಷ ನಾಲ್ವತ್ನಾಲ್ಕು
ಆಯೆತಾಪತ್ತು ಹರಿಸೀ ।
ಕಾಯ ಭವನಿಗೆ ವೈರಿ । ದೇವತೆಗಳಿಂದೆನ್ನ
ಕಾಯವನು ರಕ್ಷಿಸುತಲೀ ॥
ಜಯದೇವಿ ಪತಿ ನೀನೆ । ಜಾಯೆಯಿಂದೊಡಗೂಡಿ
ಗೇಯ ಸಂಕರುಷಣನೆ । ಆಯತನ ಪೊರೆದೇ ೨

ಸಾಯಮಭಿಧಾನದ । ಸವನ ಮೂರಲಿ ದಿವ್ಯ
ಗಾಯಿತ್ರಿ ದ್ವಯ ಮಾತೃಕಾ ।
ಆಯತನದೊಳಗಿದ್ದು । ಆದಿತ್ಯ ದೇವಕಿಂ
ಆಯುರ್ಹವಿಷವ ಗೊಳ್ಳುತಾ ।
ಜೀಯ ನೀ ಪೊರೆಯುತಿರೆ । ಧಾತು ಸಪ್ತಕ ತನುವ
ಧಾರ್ಯವಾಗಿಹುದೊ । ದ್ಯುಮ್ನ ।

ಗೇಯ ಗುರು ಗೋವಿಂದ । ವಿಠಲನೆ ತವ ಪದಕೆ
ಕಾಯ ಇದನರ್ಪಿಸುವ । ದೇಯ ಕೊಡು ಸತತ ೩

೧೫೩

ಸ್ಮರಿಸಿ ಬದುಕಿ ಸಾರ್ಥಕೆನಿಸಿ ।
ವ್ಯರ್ಥ ಆಯು ಕಳೆಯದಂತೆ
ಕರುಣೆಯಿಂದ ಶರಣರನ್ನ ।
ಪೊರೆವ ಹರಿಯನು ಪ

ಅಜಭವಾದಿ ವಂದ್ಯ ಪಾದ ।
ದ್ವಿಜ ಸುಧಾಮಗೊಲಿದ ಪಾದ
ಭಜನೆ ಮಾಳ್ಪ ಸಾಧು ಜನರ ।
ನಿಜದಿ ಪೊರೆಯುವಾ ೧

ಭೂಮಿಯಳೆದು ಬಲಿಯ ತುಳಿದ ।
ಸುಮನದಿಂದ ಬಾಗಿಲಕಾಯ್ದ
ಭೂಮಿರಮಣನಾದ ಹರಿಯ ।
ಭೂಮಗುಣನ ಭವ್ಯ ಪಾದವಾ ೨

ಮುನ್ನ ಪದದಿ ಕಲ್ಲ ತುಳಿದ ।
ಮುನಿಯ ಸತಿ ಅಹಲ್ಯ ಶಾಪ
ವನ್ನು ಮೋಚಿಸೀದ ಪಾದ ।
ವನ್ನೂ ಬಿಡದೆ ಸತತಾ ೩

ರಕ್ಕಸಾರ ಸೊಕ್ಕ ಮುರಿದ ।
ತರ್ಕಕೆ ಗೋಚರಿಸಲೊಲ್ಲ
ಪಕ್ಷಿವಾಹ ಪನ್ನಗಶಯನ ।
ಮಕ್ಕಳ ಮಾಣಿಕ್ಯ ಪಾದವ ೪

ಪರಮ ಭಕ್ತರೆನಿಸಿಕೊಂಡು ।
ಸುರರು ತಮ್ಮ ಹೃದಯದಲ್ಲಿ
ಹರುಷದಿಂದ ಪೂಜಿಪಾ ।
ಗುರು ಗೋವಿಂದ ವಿಠಲನಾ ೫

೧೫೪

ಉಗಾಭೋಗ

ಸಾಧನದ ದೇಹವಿದು । ನೀ ದಯದಿ ಕೊಟ್ಟಿದ್ದು ।
ಬಾಧೆಗೊಳಗಾಗಿಹುದು ।
ಆದಿಮೂರುತಿಯೇ । ಸಾಧನಕೆ ಪ್ರತಿಬಂಧ ।
ವೇದಗೋಚರ ಹರಿಯೇ ।
ನೀದಯದಿ ನೀಗೆಂದು । ಮಾಧವನೆ ಭಿನ್ನೈಪೆ ।
ಅನ್ಯ ಸಾಧನೆ ಕಾಣೆ ।
ನಿನ್ನ ಸ್ಮೃತಿ ಹೊರತಿನ್ನೂ । ನನ್ನೆಯಿಂ ಕೈ ಪಿಡಿಯೊ ।
ಪನ್ನಂಗ ಶಯನಾ ।
ಜೀರ್ಣವಾಯಿತು ದೇಹ । ಮುನ್ನಾವ ಗತಿಯೆನಗೆ ।
ಕಣ್ಣಿಗೇ ಕಾಣೊ ಗುರು । ಗೋವಿಂದ ವಿಠಲಾ ೧

೧೫೫

ಸಿಂಧು ಶಯನ ಬಾರೆಲೋ – ಮಂದರೋದ್ಧಾರೀ
ಇಂದಿರೆಯರಸ ಮುಕುಂದನೇ ಪ

ದ್ರುತ – ಸುಂದರ ಅರವಿಂದ ನಯನ
ಗೋ – ವಿಂದ ಎನಭವ ಬಂಧ ಬಿಡಿಸೆಲೊ
ಬಿಂದು ಮಾಧವ ಹೇ ದಯಾಂಬುಧೆ –
ವಂದಿಸುವೆ ತ್ವತ್ಪಾದ ದ್ವಂದ್ವಕೇ ಅ.ಪ.

ಹೃದಯ ಮಧ್ಯದಿ ಮಂಟಪಾ – ಬುಧ ಜನ ವಂದ್ಯ
ಸಿದ್ಧವಾಗಿಸುವು – ಮಾಧವಾ ।
ಸಿದ್ಧ ಸಾಧನ ಪವನ – ಉದಾನಾದಿಗಳೆಲ್ಲ
ಹೆದ್ವಾರಗಳ ಕಾದಿಹರೋ ॥
ಮಧು ವಿರೋಧಿಯೆ ನಿನ್ನ ಪದ –
ಸದ್ವನಜ ಕೀರುತಿ ಸುಧೆಯ ಸವಿಯುವ
ಮುದವ ಕರುಣಿಸು ಶ್ರೀದ ನರಹರಿ –
ಹೃದಯ ಸದನಕೆ ವದಗಿ ಬೇಗ ೧

ಚಿತ್ತ ಸಿಂಹಾಸನವೂ – ಚಿತ್ತ ಜನಯ್ಯಾ
ಸ್ತೋತ್ರ ರತುನ ಖಚಿತವೂ ॥
ಉತ್ತಮ ಮತಿ ಸುದತೇರೂ – ಛತ್ರಿ ಚಾಮರಗಳ
ಎತ್ತಿ ಬೀಸುತಲಿಹರೋ ॥
ಕೃತ್ತಿವಾಸನ ಸಖನೆ ಪರಮ ಸು –
ಹೃತ್ತಮೋತ್ತಮ ಚಿತ್ಸುಖ ಪ್ರದ
ಚಿತ್ತವಿಸು ಚಿತ್ತಾಖ್ಯ ಪೀಠಕೆ –
ಸತ್ಯಕಾಮ ಶರಣ್ಯ ಶಾಶ್ವತ ೨

ಕಾಯಾ ವಾಚಾ ಮನಸಾ – ಮಾಡಿದ ಸರ್ವ
ಕಾರ್ಯವೆಲ್ಲವು ನಿನ್ನಯಾ ।
ಪ್ರೀಯ ಸೇವೆಯು ಎಂಬ ಭಾವನ ಕೊಟ್ಟು
ಕಾಯೊ ಶ್ರೀಧರ ಶ್ರೀವರಾ ॥
ಕಾಯ ಭವ ಪಿತ ತೋಯ ಜಾಕ್ಷನೆ –
ದಾಯ ನಿನ್ನದು ಎನ್ನ ಗತಿಗೇ
ಪ್ರೇರ್ಯ ಪ್ರೇರಕ ಶ್ರೀಗುರು –
ಗೋವಿಂದ ವಿಠಲನೆ ಕಾಯೊ ಬೇಗ ೩

೧೫೬

ಸಿತಗಿರೀಶ ಶ್ರೀಪತಿಯೆ ಕಾಯೋ ಯನ್ನಾ ।
ಕರುಣಾರಸ ಪೂರ್ಣ ಪ

ಶೃತ ವಸಿಷ್ಠ ಮುನಿಗ್ವಿತದಿ ಒಲಿದ ರಂಗಾ ।
ಆಶ್ರಿತ ಭವ ಭಂಗಾ ಅ.ಪ.

ಬಂದೆ ಬಳಲಿ ಬಹು ಜನ್ಮ ಧರಿಸಿ ಇಂದೂ । ಮನುಜನಾಗಿ ನಿಂದೂ ।
ಸಂದವು ಆಯುಷ ಷಟ್ದಶೇಕ ವರುಷಾ । ಕಾಣಲಿಲ್ಲ ಹರುಷಾ ॥
ಇಂದಿರೇಶ ತವ ಚರಣ ಸನ್ನಿಕರ್ಷಾ । ಎಂದಾಗುದೊ ಶ್ರೀಶಾ ॥
ವಂದಿಸೂವೆನೊ ನಾನು ನಿನ್ನ ಅನಿಶಾ । ಶ್ವೇತಾದ್ರಿ ವಾಸಾ ೧

ಪನ್ನಗಾರಿ ವಹನ್ನ ನಿನಗೆ ಶರಣೂ । ಆಶ್ರಿತ ಸುರಧೇನೂ ॥
ಎನ್ನ ಮನದ ಅಭಿಲಾಷೆ ಸಲ್ಲಿಸಯ್ಯಾ । ತ್ರೈಲೋಕಗಳೊಡೆಯಾ ॥
ಘನ್ನ ಮಹಿಮನೆ ಸರ್ವಾಂತರ್ಯಾಮೀ । ಮದಂತರ್ಯಾಮೀ ।
ನಿನ್ನ ಪದ ಕಮಲ ಕಾಂಬುವಂಥ ಹದನಾ । ತೋರಿಸೊ ಜಿತ ಮದನಾ ೨

ಸುರುಚಿರಾಂಗ ಶ್ರೀ ಬಿಳಿಗಿರಿಯ ರಂಗಾ । ಎನ್ನಂತರಂಗಾ ॥
ಮುರ ವಿರೋಧಿ ಸುರ ಸಾರ್ವಭೌಮ ಹರಿಯೇ । ಕರಿರಾಜನು ಕರಿಯೇ ॥
ತ್ವರದೊಳುದಿಸ್ಯವನ ಕಾಯ್ದ ದೊರೆಯೇ । ಹೀಗೆನ್ನ ಪೊರೆಯೆ ॥
ಗುರು ಗೋವಿಂದ ವಿಠಲ ಶ್ರೀಹರಿಯೇ । ನಿನ್ನುಪಕೃತಿ ತಾ ಮರೆಯೆ ೩

೧೫೭

ಹಯವದನಾ ಪಾಲಿಸೋ । ಹಯ ದೈತ್ಯ ನಿಧನಾ ಪ

ಭಯಕೃತು ಭಯಹರ । ದಯದೃಶ ತೋರಯ್ಯ ಅ.ಪ.

ಅಜ ಜನಕನೆ ಹರಿ । ದ್ವಿಜವರ ವಂದ್ಯನೆ
ನಿಜಪದ ಹೃದಯಾಂ । ಬುಜದಲಿ ತೋರುತ ೧

ವಾದೀಭ ಮೃಗರಾಜ । ವರ ವಾದಿರಾಜರ ಕರ
ಆದರದಲಿ ಪಿಡಿ । ದಾದರಿಸಿದನೇ ೨

ಅರಿದರ ವರ ಗ್ರಂಥ ಜಪಸರ ಧರ
ವರ ಉರಗಾತಪ । ಧರಿಸಿಹೆ ಶಿರಿಯನು ೩

ಶತಾನಂದ ಕೌಸ್ತುಭ । ಶತ ಪತ್ರಾಸನ
ಶತ ಪತ್ರ ಕರ ಪಾದ । ಶತ ಪತ್ರ ನೇತ್ರಾ ೪

ಭಾವಕೆ ಒಲಿವನೆ । ಭಾವದೊಳಗೆ ನಿಲ್ಲು
ಗೋವಿದಾಂಪತಿ ಗುರು । ಗೋವಿಂದ ವಿಠಲಾ ೫

೧೫೮

ಹರಿಯೆ । ಕರುಣ ವಾರಿಧಿಯೆ । ಧೊರೆಯೇ ।
ವರ ಚರಣ ಸೇವೆಯನು ಕೊಡು ಹರಿಯೇ ಪ

ಸರಸಿಯಲಿ ಕರಿರಾಜ । ಕರೆಯಲಂದೂ
ತ್ವರದಿಂದ ನೀ ಬಂದು । ಪೊರೆದೆ ಮುಂದೂ ॥
ಧುರದಲ್ಲಿ ಗಾಂಗೇಯ । ಶರದಿ ಸೆಣಿಸಲು ಅಂದು
ಸರಸದಲಿ ನೀ ಅವನ । ಪೊರೆಯಲಿಲ್ಲವೆ ಎಂದು ೧

ದುರುಳ ದುಶ್ಯಾಸನ । ಸೀರೆ ಸಭೆಯಲಿ ಸೆಳೆಯೇ
ತರಳೆ ಪಾಂಚಾಲೆ । ಓಲೆ ಕಳುಹಿದಳೆ ಹರಿಯೆ
ತರುಳೆ ಕೈಗಾಯ ಬೇಕೆಂದು । ನಿನ್ನ ಧೊರೆಯೇ
ಎರಳಾಕ್ಷಿಗಕ್ಷಯ್ಯ । ವಸನಿತ್ತೆ ಹರಿಯೇ ೨

ಅಂದು ಬಲತಾಯಿ ಬಾಲಕನ । ತೊಡೆಯಿಂದ ನೂಕೇ ।
ಬಂದು ಕಾನನಕೆ ತಪಗೈದ । ತರಳನನು ಕಾಯ್ದೇ ।
ಇಂದು ನಾ ಮಾಡಿದಪರಾಧ । ವೇನಯ್ಯ ಹರಿಯೇ ।
ಕಂದನಪರಾಧ ಎಣಿಸುವಳೆ । ತಾಯಿ ಧೊರೆಯೇ ೩

ಗೌತಮರ ಮಡದಿಯನು । ಕಾಯಲಿಲ್ಲವೆ ಹರಿಯೆ
ಔತಣವ ಕೊಟ್ಟು ಬರ । ಹೇಳಿದಳೆ ಧೊರೆಯೇ ॥
ವೀತಶೋಕನೆ ಎನ್ನ । ಮೊರೆ ಕೇಳಿಸದೆ ಹರಿಯೇ
ಓತಪ್ರೋತ ನೀನೆಲ್ಲವನು । ತಿಳಿದಿರುವೆ ಧೊರೆಯೇ ೪

ಬಲಿಯ ಯಾಚಿಸುತ । ನೀ ಅವನ ವಂಚಿಸಿದಿ ಹರಿಯೆ
ತಲೆ ಬಾಗಲಲಿ ನಿಂದು । ನೀ ಅವನ ಪೊರೆದೆ ಧೊರೆಯೆ
ಸಲೆ ಬೀದಿ ಬೀದಿಯಲಿ । ನಾ ಕೀರ್ತಿಸುವೆ ಹರಿಯೇ
ಬಲು ದಯಾಪರ ಗುರು । ಗೋವಿಂದ ವಿಠಲೆಂದು ಧೊರೆಯೆ ೫

೧೫೯

ಹರಿಯೆ ನಿನಗೆ ಮೊರೆಯನಿಡುವೇ ಪ.

ದುರಿತ ಪರಿಹಾರ ನಿನ್ನ । ಸ್ಮರಣೆ ಎನಗೀಯೋ ಅ.ಪ.

ಜ್ಞಾನ ಜ್ಞೇಯ ಜ್ಞಾತೃವೆಂಬಭಿ
ಧಾನದಿಂದ ಕರೆಸುವಿಯೋ
ನಾನು ನನ್ನದು ಎಂಬ ದುರಭಿ ।
ಮಾನವನ್ನೆ ಪರಿಹರಿಸೋ ೧

ಅನಘ ತ್ರಿಜಗಕ್ಕೊಡೆಯ ನೀನು ।
ಕ್ಷಣಕೆ ಜನಿ ಸ್ಥಿತಿ ಮೃತಿಯ ನೀನೆ
ಮನುಜನ ದಣಿದಣಿಪುದಿನ್ನ ।
ಘನವೆ ನಿನಗೆ ಪಾವನ ಮೂರ್ತಿ ೨

ಆಳು ನಿನ್ನವನೆಂದು ತಿಳಿಯೋ ।
ಪಾಲಿಸೊಲಿಮೆ ನಿನ್ನ ಪದದಿ
ಪಾಲ ಸಾಗರ ಶಯ್ಯ ಕೃ ।
ಪಾಲು ಗುರು ಗೋವಿಂದ ವಿಠಲ ೩

೧೬೦

ಹರಿಯೆ ನಿನ್ನ ಭಜಿಸುವಂಥ । ಶರಣ ಸಂಗವಾ
ನಿರುತ ಇತ್ತು ಕಾಯೊಯೆನ್ನ । ಅಘವ ಕಳೆಯುವ ಪ

ಮೇರುಗಿರಿಯ ಪೋಲ್ವದುರಿತ । ರಾಶಿ ನಿಚಯವಾ
ಸಾರಿ ತೂಲರಾಶಿಗನಳ । ಪರಿಯ ಮಾಡುವಾ ।
ಸೂರಿ ಜನ ಸಂಗ ಫಲವ । ಪೇಳಲಳವಾ
ತೋರಿ ಪೊರೆ ಅಂಥವರ । ದೇವರ ದೇವಾ ೧

ನಿನ್ನ ಸಂಕಲ್ಪಾನುಸಾರ । ನಡೆವ ಭಕ್ತರ
ಮನ್ನುಜರು ಅವರೆಂದು । ತಿಳಿವ ಕುಜನರ
ಇನ್ನ ತನಯ ಶಿಕ್ಷಿಸುವ । ಬಿಡದಲವರ
ಬೆನ್ನು ಹುರಿಯ ಕೀಳಿಸುವ । ಮನ್ಯುಲವರ ೨

ತನುವು ಮನ ಧನ ನಿನಗೆ । ಅರ್ಪಿಸುವರೋ
ಗಣನೆ ಮಾಡರೊ ನಿಂದ್ಯಾನಿಂದ್ಯ । ಎಂದಿಗವರೋ
ತೃಣಕೆ ಬಗೆದು ಧನ ಧಾನ್ಯ । ದಾನ ಮಾಡುವರೋ
ಘೃಣಿಯೆ ನಿನ್ನ ಧ್ಯಾನಿಸುತ । ಕಾಲ ಕಳೆವಾರೋ ೩

ಸತಿಸುತಿರೊಡನೆಯಿದ್ದು । ಮಮತೆ ದೂರರೋ
ಹಿತವು ಅಹಿತವೆರಡು ಸಹಿಸಿ । ನಿನ್ನಿಂದೆಂಬೋರೋ ।
ಕ್ಷಿತಿಯೊಳುಳ್ಳ ತೀರ್ಥಕ್ಷೇತ್ರ । ಪಾವಿಸುವರೋ
ಗತಿಯು ನೀನೆ ಸತತ ಎಂದು । ಅನ್ಯ ಬಗೆಯಾರೋ ೪

ದರ್ವಿಯಂತೆ ಜೀವನೆಂದು । ಅರಿತು ಅನುದಿನ
ದುರ್ವಿಭಾವ್ಯ ವ್ಯಕ್ತಾಅವ್ಯಕ್ತ । ಅನಂತಗುಣ
ಶರ್ವ ವಂದ್ಯನಾದ ಗುರು । ಗೋವಿಂದ ವಿಠಲನ
ಸರ್ವಕಾಲ ತುತಿಸುತ್ತ । ತಿಳಿವರಾಧೀನ ೫

೧೬೧

ಹರಿಹರಾ । ಪಾಲಿಸೊ ಎನ್ನ । ಭವಹರಾ ಪ

ಹರಿಹರ ಪಾಲಿಸೊ ಎನ್ನಾ । ತವ
ಶರಣರ ಪೊರೆವುದು ಚೆನ್ನಾ । ಆಹ
ಉರುಗಾಯನೆಂದೆನುತ । ಸುರರು ಭೂಸುರರೆಲ್ಲ
ಕರವ ಮುಗಿದು ನಿನ್ನ ವರಗಳ ಬೇಡೋರು ಅ.ಪ.

ದಿತಿಜರಿಗರಸು ರಕ್ಕಸನೂ । ಗುಹ
ನತುಳ ಪರಾಕ್ರಮ ಯೂತನೂ । ಪಶು
ಪತಿಯ ಪಾದಕೆ ನಮಿಸಿದನೂ । ವರ
ವತುಳ ತಾನೇ ಬೇಡಿದನೂ । ಆಹ
ಚತುರ ಮೊಗನು ಸಿರಿ । ಪತಿಯು ಮತ್ತೆ ಪಶು
ಪತಿಯಿಂದಲೂ ತಾನೂ । ಹತನಾಗದವನಂತೆ ೧

ಕೊಟ್ಟನು ಹರನು ತಾನ್ವರವ । ಬಲು
ದಿಟ್ಟರಕ್ಕಸ ತಾಳ್ದ ಮುದವ । ಅತಿ
ಕಷ್ಟವೀಯಲು ಸುರನಿವಹ । ಬಂದು
ಘಟ್ಯಾಗ್ಹಿಡಿದರು ಹರಿಪದವ । ಆಹ
ಜಿಷ್ಣು ಸಖನೆ ಪರ । ಮೇಷ್ಠಿ ಪಿತನೆ ನಮ್ಮ
ಕಷ್ಟವ ಕಳೆದು ಸಂ । ತುಷ್ಟಿಯ ಪಡಿಸಯ್ಯ ೨

ಸುರರ ಭೂಸುರರ ಜಂಗಳಿಯ । ನೋಡಿ
ಪೊರೆವೆನೆಂದವರಿಗೆ ಅಭಯ । ವಿತ್ತು
ಹರಿಯು ತಾನೇ ರೂಪದ್ವಯ । ದಿಂದ
ಹರಿಹರಾಭಿಧತಾನೆ ಖರೆಯ । ಆಹ
ಸುರರು ರೂಪವ ನೋಡಿ । ಉರುತರದಾಶ್ಚರ್ಯ
ಭರವಾ ಮೈಮರೆಯುತ । ಕರವನೆ ಮುಗಿದರು ೩

ಕಾಲ ನಿರೀಕ್ಷಿಸುತ್ತಿದ್ದು । ಬಲ್ಕ
ರಾಳ ರೂಪನ ತಾನು ಗೆದ್ದು । ತಲೆ
ಕಾಲಿನೊಳಗೆ ಮೆಟ್ಟುತಿದ್ದೂ । ಪಾ-
ತಾಳಕ್ಕವನ ತಾನು ಒದ್ದು । ಆಹ
ಕಾಲಮೀರುವ ಮುನ್ನ । ಕೇಳಲೊ ವರವನ್ನೆ
ಫಾಲಾಕ್ಷ ಹರಿಯನ್ನು । ಕೇಳಿದನೀಪರಿ ೪

ನಿಲ್ಲಲಿ ಹರಿಹರ ರೂಪಾ । ಭೇದ
ಸೊಲ್ಲಿನಿಂದಲಿ ದ್ವಯ ರೂಪಾ । ಕ್ಷೇತ್ರ
ಚೆಲ್ವ ಕಾಶಿಗೆ ಮಿಗಿಲೆನಿಪಾ । ಭಕ್ತ
ರೆಲ್ಲರ ಕಾಯೂವ ರೂಪಾ । ಆಹ
ಮಲ್ಲಮರ್ದನ ಗುರು । ಗೋವಿಂದ ವಿಠಲನು
ಸಲ್ಲೀಸೂವ ಭಕ್ತ । ರೆಲ್ಲರಭೀಷ್ಟವ ೫

೧೬೨

ಹೇಮವತಿಯ ತೀರವಾಸನೇ । ನಾರಸಿಂಹ
ಪ್ರೇಮದಿಂದ ಕಾಯೋ ಬೇಗನೇ ಪ

ನಾಮಮಾತ್ರ ಸಲಹುತಿರುವ ।
ಸ್ವಾಮಿ ನಿಮ್ಮ ಕಂಡು ಭಜಿಸೆ
ಕಾಮಿತಾರ್ಥವಿತ್ತು ಪೊರೆವೆ ।
ಕಾಮ ಜನಕ ಕಮಲನಾಭ ಅ.ಪ.

ಭವದೊಳಾನು ಬಳಲಿ ಬಂದೆನೋ । ಭವ್ಯರೂಪಿ
ಪವಣೆ ತಿಳಿಸಿ ಭವವ ಕಳೆಯಲೋ
ಪವನ ಮತದಿ ಉದಿಸಿಹೇನು । ಭುವನ ಧರಿಸಿ ಮೆರೆಯುವಾನ
ರವಿಯ ಕಂಡು ಹಾರಿದವನ । ಪವನರಾಯನ ಕಾಣೆ ನಾನು ೧

ತನುವು ಮನವು ಧನದ ಆಶೆಯೂ । ಪೋಗಲಿಲ್ಲ
ಘನ ಸುಜ್ಞಾನ ಭಕ್ತ್ಯಿ ಭಾವವೂ
ಕನಸಿಲಾದರೊಮ್ಮೆ ಎನ್ನ । ಮನಸ್ಸು ನಿಮ್ಮ ಚರಣ ದ್ವಂದ್ವ
ವನಜದಲ್ಲಿ ನೆಲೆಸಲಿಲ್ಲ । ಅನಘ ನೀನೇ ದಯವ ಬೀರೊ ೨

ವರ ಸುಕಂಜ ಗದೆಯು ಶಂಖವಾ । ಚಕ್ರಧಾರಿ
ವರ ಸುಪಟ್ಟಿಕ ಯೋಗ ಚಿನ್ಹಿತಾ ।
ನೆರೆ ಸುಜ್ಞಾನ ಭಕ್ತಿ ನಿನ್ನ । ಚರಣದಲ್ಲಿ ಸ್ಥಿರದಿ ಕೊಟ್ಟು
ಪೊರೆಯೊ ಕರುಣ ವನಧಿ ಹರಿಯೆ । ಗುರು ಗೋವಿಂದ ವಿಠ್ಠಲಾನೆ ೩

೧೬೩

ಹೇಸಿಕಿಲ್ಲವೊ । ಎನಗೆ ಹೇಸಿಕಿಲ್ಲವೋ ಪ

ಮೀಸಲೆನಿಸಿ ಮನವ ನಿನ್ನ । ಆಶೆಯಲ್ಲಿ ಇರಿಸದಾಲೆ ಅ.ಪ.

ಸವನ ದ್ವಯದಿ ಮೃತ್ಯುವದಗೆ । ಪವನನಯ್ಯ ನೀನೆ ಕಾಯ್ದು
ಸವನತ್ರಯದಿ ದೇಹವಿರಲು । ಶಿವನ ವೈರಿ ಕಾಡುತಿಹನು ೧

ವಿಷಯದಾಶೆ ಪೋಗಲಿಲ್ಲ । ಹಸಿವು ತೃಷೆಯು ಮೀರಲಿಲ್ಲ
ಕುಸಿಯುತಿದೆ ದೇಹವೆಲ್ಲ । ಎಸೆವ ವ್ರತವ ಚರಿಸಲಿಲ್ಲ ೨

ನಾನು ನನ್ನದೆಂಬ ಮಮತೆ । ಹೀನವೆಂದು ತಿಳಿದು ತಿಳಿದು
ಗೇಣು ಎಂಟು ದೇಹಕಾಗಿ । ಹೀನ ವಿಷಯದಾಶೆ ಇಹುದು ೩

ಸಂದು ಪೋದ ಜನ್ಮ ತಿಳಿಯೆ । ಮುಂದೆ ಬಾಹುದೆಂತೊ ಕಾಣೊ
ಇಂದಿರೇಶ ನೀನೆ ಗತಿಯೊ । ಮಂದಹಾಸ ಬೀರಿ ಪೊರೆಯೊ ೪

ನಿನ್ನ ಕಾಣಧಾಂಗೆ ದೇಹ । ಇನ್ನೂ ಪೋಗದಂತೆ ಮಾಡಿ ।
ಘನ್ನ ಮಹಿಮ ರೂಪ ತೋರೊ । ಚೆನ್ನ ಗುರು ಗೋವಿಂದ ವಿಠಲ ೫

೧೬೪

ಕ್ಷಿತಿಭಾರ ಹರಣನೇ ಶ್ರೀಜಾನಕೀ ಪತಿಯೇ ।
ಶಿತಿಕಂಠ ಸಖ ಹರಿಯೇ ಪ

ಅತಿ ವಿಮಲನಂತಾರ್ಕ ನಿಭ ಪದಾ
ಗತಿ ವಹನೆ ಪೊರೆ ಶ್ರೀರಾಮಚಂದ್ರಾನೇ ಅ.ಪ.

ಪರಮ ಮಂಗಳ ನಾಮ । ಪರಿಹರಿಸಿ ಸಂಸೃತಿಯ
ನಿರುತ ಮಹದಾನಂದ । ಪ್ರದವೆನಿಪುದೋ ॥
ಮರುತಾಂತರಾತ್ಮ ತವ । ನಾಮ ಸುಧೆ ಸುಖ ಸವಿದು
ಇರುವಂತೆ ಮಾಡಯ್ಯ । ಕರುಣ ನಿಧಿಯೇ ೧

ಕಮಲ ಸಂಭವನಯ್ಯ । ಸುಮನಸರಿಗತಿ ಪ್ರೀಯ
ಕಮಲದಳ ನೇತ್ರನೇ । ಕಾಮಿತ ಪ್ರದನೇ ॥
ಭ್ರಮ ಮೂರ ಪರಿಹರಿಸೊ । ಕಮಲಾಪ್ತ ಕುಲಜನೇ
ಶಮದಮಾನ್ವಿತನೆನಿಸಿ । ವಿಮಲ ಮತಿ ಈಯೋ ೨

ದಶಕಂಠ ಹರ ನಿನ್ನ । ಯಶವನ್ನೆ ಪೊಗಳಲು
ಶೇಷ ವಿಪ ರುದ್ರಾದಿ । ಗಸದಳವು ಇಹುದೂ ।
ಕಸರು ಕರ್ಮಾದಿಗಳ । ಕೆಸರು ಕಳೆ ಪ್ರಾರ್ಥಿಸುವೆ
ಅಸಮ ಮಹಿಮನೆ ಗುರು । ಗೋವಿಂದ ವಿಠಲಾ ೩

೧೬೫

ಕ್ಷೀರಸಾಗರ – ಶಯನ । ಕ್ಷೀರಾಬ್ದಿಜೆಯ ರಮಣ
ಮಾರ ಜನಕ – ಸಿರಿ । ಉರಗಾದ್ರಿ ವಾಸಾ ಪ

ಸಾರ ಶ್ರುತಿನುತ । ಧೀರ ಕರುಣಾ ।
ಪಾರಮಹಿಮಾ । ಸಾರಿದೆನೊ ತವ

ಚಾರು ಚರಣವ । ಭೋ ದಯಾನಿಧೆ ।
ತಾರಿಸೋ ಭವ । ವಾರಿಧೀಯ ಅ.ಪ.

ಕಮಲನೇತ್ರನೆ ರಾಮ । ಕಾಮಿತ ಫಲದಾತ
ಕಮಲ ಭವನ ಪಿತ । ಕಮನೀಯ ರೂಪಾ ॥
ಧೃತ – ಶ್ಯಾಮಸುಂದರ । ಭೂಮ ಗುಣ ಗಣ ।
ಸ್ತೋಮ ವಾರಿಧೆ । ಶ್ರೀ ಮನೋರಮ
ಸೀಮೆಗಾಣದೆ । ರಮ್ಮೆ ತುತಿಪಳು
ಭೌಮ ಹರ ಸುತ್ರಾಮ ವಂಧ್ಯಾ ೧

ಭಕ್ತ ವತ್ಸಲ ಕೃಷ್ಣ । ಮುಕ್ತಿದಾಯಕ ಹರಿಯೆ ।
ಸಕ್ತವಾಗಿಸು ನಿನ್ನ ಪ್ರಸಕ್ತಿಲೀ ।
ದೃತ – ಭೋಕ್ತೃ ಭೋಗ್ಯಗ ಮುಕ್ತರಾಶ್ರಯ ।
ಭಕ್ತಿ ಪುಟ್ಟಿಸಿ ನಿನ್ನ ಪದದಲಿ
ಯುಕ್ತ ರೀತಿಲಿ ವ್ಯಕ್ತವಾಗ್ವುದು ।
ಭಕ್ತವತ್ಸಲ ಅವ್ಯಕ್ತ ಮೂರ್ತೇ ೨

ಊರು ಒಂದೆನಗಿಲ್ಲಾ । ಗಾರಗಳ್ಮಿತಿಯಿಲ್ಲ
ಮರಳಿ ಬರುವ ರೋಗ । ಪಾರ ಗಾಣಿಸೊ ದೇವ ॥
ದೃತ – ಬಾರಿ ಬಾರಿಗೆ । ಮೊರೆಯ ನೀಡುವೆನು ।
ಧೀರ ಗುರು ಗೋವಿಂದ ವಿಠಲನೆ
ಸೂರಿಗಮ್ಯ । ಸುಖಾತ್ಮ ಚಿನುಮಯ
ಚಾರು ರೂಪವ । ತೋರೊ ಬೇಗ ೩

೧೬೬

ಕ್ಷೇತ್ರವೆಂದರೆ ಉಡುಪಿ ಕ್ಷೇತ್ರ ಪ

ಸೂತ್ರಾಂತರಾತ್ಮ ಹರಿ ಯಾತ್ರೆ ಮಾಳ್ಪನಿಗೆ ಅ.ಪ.

ವಾಸುದೇವ ಮುನಿಯು ಪುಟ್ಟಿ ಪಾಜಕದಲ್ಲಿ
ವಾಸುದೇವ ಕೃಷ್ಣನ್ನ ನಿಲ್ಲಿಸಿಹರೋ ॥
ಕಾಸು ವೀಸಕೆ ವರದನಲ್ಲವೊ ಭಕುತಿ
ಪಾಶಗಳಿಗೇ ಒಲಿವ ಶ್ರೀ ಕೃಷ್ಣ ನಿಲಯಾ ೧

ವಟುತನ ದೊಳಾಶ್ರಮ ಸ್ವೀಕರಿಸಿ ಸನ್ಯಾಸಿ
ಅಷ್ಟ ಮಠದವರಿಂದ ಇಷ್ಟ ಪೂಜೆಗಳಾ ॥
ಸೃಷ್ಟಿಯೊಳಗಪ್ರತಿಮ । ಕೃಷ್ಣಕೊಳ್ಳುತ ಮನ
ಮುಟ್ಟಿ ಭಜಿಸುವರ । ಇಷ್ಟಾರ್ಥಗಳ ಕೊಡುವಾ ೨

ದಿನಕನೇಕಲಂಕಾರ । ಅನವರತ ಸಂಪೂಜೆ
ಎಣಿಸಲೆನ್ನಳವಲ್ಲ ರುಕುಮಿಣಿಯನಲ್ಲಾ ॥
ದೀನನಾಥ ನಾಥ ಗುರು । ಗೋವಿಂದ ವಿಠ್ಠಲನ
ಮನದಣಿಯ ನೋಳ್ಪುದಕೆ । ಘನವಾದ ಸದನಾ ೩

ಶ್ರೀಮಹಾಲಕ್ಷ್ಮೀದೇವಿಯರು

೧೬೭

ಅಜಭವಾದಿ ವಂದ್ಯ ಚರಣೇ । ತಾಯಿ
ನಿಜ ಜನರ ಪೊರೆವ ಕರುಣೇ ಪ

ರಜತಮನ ಕಳೆವ ಹೊಣೇ ।
ಅಜನಮ್ಮ ನಿನ್ನ ಹವಣೇ ಅ.ಪ.

ಪದ್ಮಜಾದಿ ದಿವಿಜ ಪದದೇ । ಪದ್ಮನಯನೆ ಆಯು ಕಳೆವೇ
ಪದ್ಮಜಾತೆ ಮೋಕ್ಷಪದವೇ । ಪದ್ಮಗಂಧಿನಿ ಭಕ್ತವರದೇ ॥
ಪದ್ಮಾನನೇ । ಪದ್ಮಭವೇ । ಪದ್ಮನಿಲಯೇ । ಪದ್ಮಾಕ್ಷೀ
ಸದ್ಮದ ಹೃ । ತ್ಪದ್ಮದಿ ಪತಿ । ಪದ್ಮ ಪದಹವ । ನುದ್ಭವ ಗೈ ೧

ಗುಣ ಮೂರ ಮಾನಿನಿಯೆ । ಗುಣ ದೂರೆ ಅಂಭ್ರಣೀಯೆ
ಗುಣ ಜಡವ ಕಳೆಯದಿರೆಯೆ । ಘನವೇನೆ ನಿನಗೆ ತಾಯೇ ॥
ವಾನರನು । ನಾನಾ ದುರ್ । ಯೋನಿಯಲಿ । ಜನೀಸಿಹೆ
ಮಾನೀಸನು । ಧ್ಯಾನಿಲ್ಲವು । ಏನುಗತಿ । ನೀನೇ ಪೊರಿ ೨

ಯುಕ್ತಾ ಅಯುಕ್ತವರಿಯೆ ಭಾಮೆ । ಮುಕ್ತಾ ಅಮುಕ್ತ ಜನರ ಪ್ರೇಮೆ
ವ್ಯಕ್ತಾ ಅವ್ಯಕ್ತ ನಿನ್ನ ಮಹಿಮೆ । ಭಕ್ತನೆನಿಸಿ ಎನ್ನ ರಮೇ
ಭಕುತಿಲ್ಲವು । ಶಕುತಿಲ್ಲ ವಿ । ರಕುತಿಲ್ಲವು । ಯುಕುತಿಲ್ಲವು
ಮುಕುತಿಚ್ಛೆಗೆ । ಪ್ರಕಟಿಸಿ ದಯ । ಭೀಕರ ಭವ ನೀ ಕಳೆರಮೆ ೩

ಅವ್ಯಕ್ತಾಭಿಮಾನಿ ಕಾಯೋ ಭವ್ಯಮೂರ್ತಿ ಹರಿಯ ಜಾಯೇ ।
ತ್ರಯ್ಯ ಗೋಚರ ಶ್ರೀ ಹರಿಯೇ । ಗಮ್ಯನೆಂಬುದ ತೋರಿ ಪೊರೆಯೆ
ಶ್ರೋತವ್ಯನ । ಮಂತವ್ಯನ । ಧ್ಯಾತವ್ಯನ । ಸ್ಮರ್ತವ್ಯನ
ಅಗಮ್ಯನೆ । ಪೂಜ್ಯನನೆ । ಶ್ರೀ ಸ್ತವ್ಯನ । ತೋರಯ್ಯೆನ ೪

ಪುರುಷ ಸೂಕ್ತ ಮೇಯನೆನಿಪ । ಸಿರಿಯೆ ನಿನ್ನ ಭರ್ತೃ ಎನಿಪಾ
ಗುರು ಗೋವಿಂದ ವಿಠಲ ರೂಪ । ತೋರಿ ಕಳೆಯೆ ಹೃದಯ ತಾಪ ॥
ಸಿರಿ ಇಂದಿರೆ । ಸಿರಿ ಭೂಮಿಯೆ । ಸಿರಿ ದುರ್ಗೆಯೆ । ಸಿರಿ ಶಾಂತಿಯೆ
ಸಿರಿ ಕೃತಿಯೆ । ಸಿರಿ ಜಯೆಯೆ । ಸಿರಿ ಮಾಯೆ । ಶ್ರೀ ಪೊರೆಯೇ... ೫

೧೬೮

ಕನ್ಯೆ ಕುವರಿ ಕರುಣಿಸೆಮ್ಮನೂ । ಕಮಲನಯನೆ
ಅನ್ಯ ದೇವತೆಯನ್ನ ಭಜಿಸೆನೇ ಪ

ಮನ್ಯು ಮಿಕ್ಕ ದೋಷ ಹರಿಸಿ ।
ನಿನ್ನ ಪತಿಯ ಚರಣ ಕಮಲ
ವನ್ನೆ ಭಜಪ ಮತಿಯ ಕೊಟ್ಟು ।
ಘನ್ನ ಪದಕೆ ದಾರಿ ತೋರೆ ಅ.ಪ.

ಕುಂಭ ಬಾಣರೆಂಬ ದೈತ್ಯರೂ । ಅಜನ ಒಲಿಸಿ
ಕುಂಭಿಣೀಯೆಲ್ಲಜೇಯರಾದರೊ ॥
ಕಂಬು ಚಕ್ರಧರನ ಪದವಿ । ಇಂಬು ಇಟ್ಟ ನಿನಗೆ ಅನ್ಯ
ಬೆಂಬಲಾರು ಸರ್ವರಿಂದ । ಡಿಂಬ ಪೋಗದವರವ ಪಡಿಯೆ ೧

ಖುಲ್ಲ ಕಂಸ ತನ್ನ ಭಗಿನಿಯ । ಒಯ್ದು ಬೇಗ
ನಲ್ಲನೊಡನೆ ಗೈದ ಖೈದಿಯ ।
ಅಲ್ಲಿ ಉದಿಸೆ ಚೆಲ್ವ ಕೃಷ್ಣ । ನಲ್ಲೇ ನೀನು ದುರ್ಗೆ ಎನಿಸೆ
ವಲ್ಲದವರ ಬಿಡದೆ ನೀನು । ಕೊಲ್ವೆನೆಂದು ಹಾರಿ ಪೋದೆ ೨

ದಂತಿಗಮನೆ ಮತ್ತೆ ಧರೆಯೊಳ್ । ವ್ಯಕ್ತವಾಗೆ
ಎಂತು ತಪದ ಸಿದ್ಧಿ ನೋಡಲೂ ॥
ಅಂತಕರು ಯುದ್ಧಗೈದು । ಅಂತೆ ತನುವ ನೀಗಿ ಪೋಗೆ
ಕಂತು ಮಾತೆ ತೆಂಕ ಶರಧಿ । ನಿಂತೆ ಅಲ್ಲಿ ಕನ್ಯೆಯಾಗಿ ೩

ಮದುವೆ ನಿನಗೆ ಮಾಳ್ಪ ಮನದೊಳೂ ವರುಣ ಬೇಡೆ
ರುದ್ರ ಅಜರು ಬಂದು ನಿಲ್ಲಲೂ ॥
ಒದಗಿ ಕಲಿಯ ಯುಗವು ಆಗ । ವಿಧಿಯು ಹರರು ತಾವು ಬೇಗ
ಸುಧಿಯ ಇಂದ್ರ ಪುರದಿ ನಿಲ್ಲೆ । ಮುದದಿ ನಿಂತೆ ಶರಧಿಯಲ್ಲೇ ೪

ಬಂದು ಹರಿಯ ಭಕ್ತ ಜನಗಳೂ । ತೀರ್ಥನವದಿ
ಮಿಂದು ನಿನ್ನ ಪತಿಯೆ ತುತಿಸಲೂ ॥
ಬಂದು ಗುರು ಗೋವಿಂದ ವಿಠಲ । ಇಂದಿರೆ ತವ ಮಾತಿನಂತೆ
ಬಂಧ ಹರಿಸಿ ಮುಕ್ತಿ ಸುಖವ । ಛಂದದಿಂದ ಕೊಟ್ಟು ಕಾಯ್ವ ೫

೧೬೯

ಕಮಲೋದ್ಭವನ ತಾಯೇ । ನಮಿಸುವೆನ್ನನು ಕಾಯೇ
ಕಮಲಾಕ್ಷ ಹರಿ ಪ್ರೀಯೆ । ಚಿತ್ರಕೃತೇ ಪ

ಓಂಕಾರ ವಾಚ್ಯನ । ಶಂಕೆ ಇಲ್ಲದೆ ಭಜಿಸೇ
ಸಂಖ್ಯೆ ರಹಿತ ರೂಪಳೇ ।
ಯಂಕಾಮಯೇ ತಂತಮು । ಗ್ರಂ ಕೃಣೋಮೆಂದು
ಬಿಂಕದಿ ಶ್ರುತಿ ಪೇಳ್ವುದೇ ೧

ಆಪಾಂಗ ವೀಕ್ಷಣ ಸೃಷ್ಟಿ । ವ್ಯಾಪಾರಂಗಳ ಹರಿ
ಕೃಪೆಯಿಂದ – ಗೈಯ್ಯುವಳೇ ।
ಅಪವಿತ್ರರಿಗೆ ಯೋಗ್ಯ । ವಿಪರೀತ ಮತಿಯಿತ್ತು
ಕುಪಥಾಂಧಂತದು ಪ್ರಾಪಕೇ ೨

ಕಂಬು ಚಕ್ರಾಂಕಿತನ । ಅಂಬುಜಾಕ್ಷನ ಹೃದ
ಯಾಂಬರದಲಿ – ತೋರಿಸೇ ।
ಇಂಬಿಟ್ಟು ಮನ ಬಯಕೆ । ತುಂಬಿಸುವುದು ಅನ್ಯ
ಹಂಬಲ ನೀ ಕೊಡದೇ ೩

ತ್ರ್ಯಕ್ಷಾದಿ ಸನ್ನುತ । ಮೋಕ್ಷದಾಯಕ ಪರ
ಮಾಕ್ಷರ ಶ್ರೀ ಹರಿಯ ।
ಈಕ್ಷಿಪ ಸುಖ ಕೊಡು । ಪೇಕ್ಷಿಸದಲೆ ತಾಯಿ
ಲಕ್ಷಣವಂತೇ – ಗುಣವಂತೇ ೪

ಕರವೀರ ಪುರದರಿಸಿ । ಶರದಿ ಸಂಭವೆ ಎನಿಸಿ
ವರವ ನೀಡುತ ಪೊರೆವೇ
ಗುರು ಗೋವಿಂದ ವಿಠ್ಠಲ । ಚರಣ ನೀರೇರುಹ
ಕರುಣಿಸಿ ಸಲಹೇ – ಮಾತೇ ೫

೧೭೦

ಕಾಯೇ – ಕಮಲಾಲಯೆ ಶ್ರೀ ಲಕುಮೀ ।
ಭಕುತ ಸುಪ್ರೇಮಿ ಪ

ಕಾಯಜ ಜನನಿಯೆ । ಮಾಯ ಭವದೊಳೆನ್ನ
ಕಾಯ ಮುಳಗದೂ । ಪಾಯವ ಕಲ್ಪಿಸಿ ಅ.ಪ.

ಪುಟ್ಟೀದೆ ದ್ವಿಜ ಜನ್ಮದಲ್ಲಾನು । ಎಟ್ಟೆ ಮಾನವನು
ಕೊಟ್ಟು ಪುಣ್ಯಂಗಳಗಳಿಸಾಲೇನು । ಹುಟ್ಟು ದರಿದ್ರನು
ನಷ್ಟ ಸ್ಮೃತಿ ಇರೆ ಸಾಧನವೇನು । ಮಾರ್ಗವರಿಯೆ ನಾನು
ಕೃಷ್ಣನ ಸತಿ ಸತ್ಯ ರುಕ್ಮಿಣಿ ಯನ್ನನು ।
ಶಿಷ್ಟ ಜನರೊಳಿಟ್ಟು ಶ್ರೇಷ್ಠ ಸಾಧನವೀಯೆ ೧

ಯಾತ್ರೆ ತೀರ್ಥಂಗಳ ಮಾಡರಿಯೇ । ಕೈ ಮುಗಿವೆನು ಸಿರಿಯೇ
ಪಾತ್ರಾ ಪಾತ್ರಂಗಳ ನಾನರಿಯೇ । ದಾನೆಂಬುದನರಿಯೇ
ಮಾತ್ರಾ ಸ್ಪರ್ಶಂಗಳ ಗೆಲಲರಿಯೇ । ಮನನಿಲ್ಲದು ಸರಿಯೇ ।
ಗಾತ್ರಗಳಿಸಿತಿದು ವಿಧಾತೃಜನನಿಯೇ ।
ಸೂತ್ರಗತನ ಈ । ಗಾತ್ರದಿ ತೋರಿಸಿ ೨

ಸಿಂಧೂ ಜಾತೆಯೆ ಹೇ ಸೀತೇ । ಸದ್ಗುಣ ಗಣವ್ರಾತೇ
ಮಂದರೋದ್ಧಾರಿಯ ಸುಪ್ರೀತೆ । ತ್ರಿಭುವನಗಳ ಮಾತೆ
ಮಂದಜಾಸನ ಮುಖಸುರ ವಿನುತೆ । ನಿಂದಿತ ಜನಹಂತ್ರೆ
ಕುಂದುಗಳೊಂದನು ಎಣಿಸದೆ ಪಾಲಿಸೆ ।
ಇಂದಿರೆ ಗುರು ಗೋವಿಂದ ವಿಠಲನರಸಿ ೩

೧೭೧

ಕೊಲ್ಹಾಪುರದ – ವಾಸಿನೀ । ಹೇ ಮಹಾಲಕ್ಷ್ಮಿ
ಸೊಲ್ಲ ಲಾಲಿಸೇ ಮಾನಿನೀ ಪ

ಬಲ್ಲವರಲ್ಲಿಗೆ ನಿಲ್ಲದೆ ತೆರಳಿಸೆ
ಖುಲ್ಲರ ದಲ್ಲಣ । ನಲ್ಲರಿಸೆ ಮನ ಅ.ಪ.

ಭೃಗುಮುನಿಯೂ ತಾ ಬರುತಾ । ವಕ್ಷಘಾತ
ವಾಗಲು ತವ ತಾಣ – ತಾಡಿತ ।

ಅಗಡ ಮುನೀಗೆ ಪ್ರೀತಾ । ನಾಗುತ
ಲಕುಮಿಗೆ ಅವನು – ಆದ್ರುತ
ದೃಗಜಲಜಿಗಿಸುತ । ಹಗರಣಗೆಯ್ಯುತ
ಜಗಳವ ನಟಿಸುತ । ನಗಧರನಲಿ ನೀನು
ಜಗದೊಡೆಯನ ಮನ । ಬಗೆಯನು ತಿಳಿಯುತ
ಸೃಗಾಲ ಪುರಕಾಗಿ ಆಗಮ ನಿನ್ನದೂ ೧

ಇಂಥಹ ನಿಮ್ಮ ಆಟವೂ । ಭಕ್ತರ ಮುಕ್ತಿ
ಪಂಥವೆನಿಪ – ಮಾರ್ಗವೂ
ಸಂತರ ಅಂತರಂಗವೂ । ನಿರ್ಮಲಿನ ಮುಕ್ತಿ
ಕಾಂತೆಯೊಡನೆ ಆಟವೂ ।
ಅಂತರಂಗದಲಿಪ್ಪ ಗ್ರಂಥಿಸು ಭೇದನ
ಸಂಚಿತಗಳು ನಾಶ । ಮುಂಚೆನ ನಿರ್ಲೇಪ
ಅಂತರಂಗದಿ ಹರಿ । ಕಾಂತಿಯ ದರ್ಶನ
ಎಂತು ನಾ ಪೇಳಲಿ । ಪಂಥಕೀರ್ತಾಳೀ ೨

ಲೋಲ ಕುಂಡಲ ಕಪೋಲೆ । ಕಿರೀಟ ಮೌಳೇ
ತಿಲಾಲಜ ಕರೆ ಕೋಮಲೇ ॥
ಕೇಳಿಲಿ ಯಮುನಾ ಕೂಲೇ । ಹರಿಯೊಡನೆ ಲೀಲೇ
ತೂಳಿದಾನಂದ ಸುಜಾಲೇ ॥
ಕಾಲಕೂಟ ಸಮ । ಕೀಳು ವಿಷಯದಲಿ
ಬೀಳುವುದೆನ ಮನ । ಲಾಲಿಸು ಹೇ ತಾಯೇ
ಶೀಲನೆನ ಹರಿ ಗುರು । ಗೋವಿಂದ ವಿಠಲನ ॥
ಲೀಲೆಯ ತೋರು । ವಿಶಾಲ ಹೃದಯಳೇ ३

೧೭೨

ಚಾರು ದೇಷ್ಣನ ಜನನಿಯೇ । ಪಾಹೀ
ಅಂಭ್ರಣಿಯೆ । ಪರಿ ಪೋಷಿಸುತ ಎನ್ನ ಪ

ಕುಕ್ಷಿಯೊಳು ಜಗ । ರಕ್ಷಕನ ಸತಿ ।
ಅಕ್ಷರಳೆ ಕೃಪೆ ಈಕ್ಷಣೇಯಲೆ
ತ್ರ್ಯಕ್ಷ ಸುರಮುಖ । ರಕ್ಷೆ ಭಕುತಿಯ ।
ಬಿಕ್ಷೆ ಪಾಲಿಸಿ । ರಕ್ಷಿಸೆನ್ನನು ೧

ಸ್ತವ್ಯನನ ಶ್ರೋ । ತವ್ಯನನ ಧ್ಯಾ ।
ತವ್ಯನನ ಮಂ । ತವ್ಯ ಭವ್ಯನನ ।
ಅವ್ಯಯನ ಅನ । ವದ್ಯ ರೂಪನ ।
ಸುವ್ಯಕ್ತಿಗೈ । ಅವ್ಯಕ್ತಮಾನಿಯೆ ೨

ಭಾವ ಜಾರಿಯ । ಭಾವ ಕೊಲಿದು ವಿ ।
ಭಾವ ಸುಪ್ರಭೆ । ಭಾವ ತೋರಿದೆ
ಗೋವಳನು ಗುರು । ಗೋವಿಂದ ವಿಠಲನ ।
ತಾವಕಗೆ ತೋರೂವುದೆಲೆ ತಾಯೆ ೩

೧೭೩

ತಾಯೆ ಲಕ್ಷುಮಿ ದೇವಿಯೇ । ನೀನೇ ಗತಿ
ತಾಯೆ ಲಕ್ಷುಮಿ ದೇವಿಯೇ ಪ

ಕಾಯ ಮಮತೆಯ ಕಳೆದು ಬೇಗನೆ ।
ತೋಯಜಾಕ್ಷನ ತೋರಿ ಪೊರೆಯುವ
ದಾಯ ನಿನ್ನದು ತಾಯೆ ಶ್ರೀಹರಿ ।
ಪ್ರೀಯೆ ನಿನ್ನನು ನಮಿಸಿ ಬೇಡುವೆ ಅ.ಪ.

ಗೋಪಿ ನಂದನೆ ಹೇ ದುರ್ಗೇ । ಕಠೋರೆ ಉಗ್ರೆ
ತಾಪತ್ರಯಗಳ ವಿನಾಶೇ । ಮೋಕ್ಷ ಪ್ರದಾತೇ ॥
ಶ್ರೀಪತಿಯ ಪಾದಾಬ್ಜ ಮಧುಪೆ ।
ಪಾಪಹರ ತವ ಪತಿಯ ನಾಮವ

ಪ್ರಾಪಿಸುತ ದಿನದಿನದಿ ಯನ್ನನು ।
ಕೈ ಪಿಡಿದು ಕಾಪಾಡು ದೇವಿ ೧

ಸರಸಿಜ ಭವ ವಂದಿತೇ । ತ್ರಿಜಗನ್ಮಾತೆ
ಹರಿಗೆ ಸಮಾಸಮವ್ಯಾಪ್ತೆ । ಹರಿಯಂಕ ಸಂಸ್ಥೇ ॥
ಅರಿದರಾಂಕುಶ ಪರಶು ಶಕ್ತಿ ।
ಧರಿಸಿ ಮೆರೆಯುವ ಹರಿಯ ರಾಣಿಯೆ
ವಾರೆ ನೋಟದಿ ಬ್ರಹ್ಮ ಭವರಿಗೆ ।
ವರ ಸುಪದವಿಗಳಿತ್ತು ಪೊರೆವಳೆ ೨

ಮಾರ ಜನನಿ ಸುಂದರೀ । ಎನ್ನನು ಪೊರೆವ
ಭಾರ ನಿನ್ನದು ಅಸುರಾರೀ । ಕೇಳಮ್ಮ ದೇವೀ ॥
ಕ್ರೂರ ದೈತ್ಯರ ಬಾಧೆ ಹರಿಸಿ ।
ಘೋರ ಭವ ದುರಿತಾಬ್ಧಿ ದಾಟಿಸಿ
ಧೀರ ಗುರು ಗೋವಿಂದ ವಿಠಲನ ।
ಚಾರು ಚರಣವ ತೋರು ಎನಗೆ ೩

೧೭೪

ಪದ್ಮಾಕ್ಷಿ – ಪದ್ಮಾಕ್ಷಿ ಪ

ಪದ್ಮಜ ಜನನಿಯೆ । ಪದ್ಮಾನನೆ ಶಿರಿ
ಪದ್ಮ ಭವೆಯೆ ಹೃ । ತ್ಪದ್ಮದಿ ನೆಲೆಸೈ ಅ.ಪ.

ಗುಣಕಾರ್ಯಗಳನು । ಕ್ಷಣ ಬಿಡದಲೆ ನೀ
ವಿನಿಮಯ ಗೈಧರಿ । ಗನುಕೂಲೆನಿಸಿದೆ ೧

ನೀ ವೊಲಿಯಲು ತವ । ಭ್ರೂ ವಿಲಾಸದಲಿ
ಆ ವಿಪ ಮುಖರಿಗೆ । ತೀವ್ರ ಪದಪ್ರದೆ ೨

ನಂದ ನಂದನೇ ಆ । ಬೃಂದಾರಕ ಮುನಿ
ವಂದಿತ ಪದಯುಗೆ । ವಂದಿಪೆ ಪಾಲಿಸು ೩

ಸಿಂಧು ಶಯನ ಹರಿ । ವಕ್ಷೋನಿವಾಸಳೆ
ಕುಂದನು ಎಣಿಸದೆ । ನಂದವ ನೀವುದು ೪

ಅಸಮನೆನಿಪ ಗುರು । ಗೋವಿಂದ ವಿಠಲಗೆ
ಬಿಸರು ಹಾಂಬಕೆ ಸ । ಮಾಸಮಳೆನಿಪಳೆ ೫

೧೭೫

ಪಾಲೀಸೆ ಕೃಷ್ಣ ರಮಣೀ । ರುಕ್ಮಿಣಿ
ಪಾಲೀಸೆ ಕೃಷ್ಣ ರಮಣಿ ಪ

ಲೋಲಾ ಲೋಚನೆ ಸೀತೆ । ಕೀಲಾಲ ಜಾತನುತೆ
ವಾಲೀ ಭಂಜನ ಪ್ರೀತೆ । ಫಾಲಾಕ್ಷಪಿತ ಮಾತೆ ಅ.ಪ.

ಆರೀಗುಸುರಲಿ ನಾನೂ । ಕಳೆಯಲಿ
ಭಾರಿ ಭವಣೆಗಳನ್ನೂ ॥
ಸಾರಸಾಕ್ಷಿ ನಿನ್ನ । ಚಾರು ಚರಣ ಸ
ರೋರುಹ ಕೆರಗುವೆ । ಚಾರುಮತಿಯ ಕೊಡೆ ೧

ಮೂರು ಗುಣಾಭಿಮಾನೀ । ಮಾಳ್ಪುದು
ಮೂರು ಗುಣಗಳ್ಹಾನೀ ॥
ವಾರೀಸಿ ತ್ರೈಗುಣ । ಪಾರು ಮಾಡಿಸು ಭವ
ತಾರಕೆ ನೀ ನೆಂದು । ಬಾರಿ ಬಾರಿಗೆ ಪೇಳ್ವ ೨

ಗುರು ಗೋವಿಂದ ವಿಠಲಾ । ನಿನ್ನೊಡ
ವೆರಸಿ ಸೃಜಿಪ ಜಗಗಳಾ ॥
ಎರಡೆರಡು ವ್ಯೂಹಕಾಗಿ । ಎರಡೆರಡು ರೂಪ ತಾಳೆ
ಎರಡೆರಡು ನೀನು ಆಗಿ । ಹರಿ ಕಾರ್ಯಕನುವಾದೆ ೩

೧೭೬

ಮಲ್ಲಮರ್ಧನ ರಾಣಿ – ಮಹ ಲಕ್ಷುಮೀ ಪ

ಖುಲ್ಲ ಜನರೆದೆದಲ್ಲಣೆಯೆ । ಕೊಲ್ಲಾಪುರ ನಿಲಯೆ ಅ.ಪ.

ಪ್ರಕೃತಿ ಚೇತಾತ್ಮೆ ಜಡ । ಪ್ರಕೃತಿ ದ್ರವ್ಯದ ಕಾರ್ಯ
ವಿಕೃತಿ ಗೊಳಿಸುತ ಮೊದಲು । ವೈಕೃತವು ತದನಂತರಾ ।
ವ್ಯಕುತಿ ಗೈಯುತ ಲಿಂಗ । ಪ್ರಕೃತಿ ಕಾರ್ಯವ ಮಾಡಿ
ಸುಕೃತ ತ್ರಿವಿಧರ ಸಹಜ । ಪ್ರಕೃತಿ ಶಬ್ದನಿಗೀವೇ ೧

ಕಾಮಾದಿ ಮಾತ್ಸರ್ಯ । ಸ್ತೋಮ ಪರಿಭವ ಕಾರ್ಯ
ನೀ ಮಾಳ್ಪೆ ಪ್ರಜ್ಞಾಂತ । ಪ್ರೇಮ ರೂಪದಲೀ
ಈ ಮಹತ್ತುಪಕಾರ । ಸಾಮಸನ್ನುತ ಹರಿಯ
ನೇಮದಿಂದಲಿ ಗೈವ । ಭಾಮೆಗಾ ನಮಿಪೇ ೨

ಹರಿಕಾರ್ಯ ಸತ್ಸಾಧ್ಯೆ । ವಿರಜೆ ರೂಪದಿ ಹರಿಯೆ ॥
ವರ ಮಂದಿರಾವರಣ । ನೆರೆ ವಿರಚಿಸೀ ।
ಸರುವ ಸಜ್ಜೀವ ತವ । ಸರಿತದೋಲ್ ಅವಭೃತವ
ವಿರಚಿಸಲು ಜಡ ಪ್ರಕೃತಿ । ಹರಿಸುವೆಯೆ ದಯದೀ ೩

ಶ್ರೀ ಸಿತ ದ್ವೀಪಾದಿ । ಆ ಸುರೂಪವ ತಾಳಿ
ವಾಸುದೇವನ ಸೇವೆ । ಆಶೆಯಲಿ ಗೈವೇ ।
ಈಸು ತವ ಮಹಿಮೆಯನು । ತೋಷದಲಿ ಸ್ತುತಿಪರಭಿ
ಲಾಷೆ ಸಲಿಸುತ ತೋರ್ಪೆ । ವಾಸುದೇವನ ರೂಪ ೪

ಅಮ್ಮ ತವ ಮಹಿಮೆಯನು । ಬ್ರಹ್ಮಾದಿ ಸುರ ನಿಕರ
ನಿರ್ಮಮದಿ ಪೊಗಳುತ್ತ । ಶ್ರಮ್ಮಿಪರು ಜಗವಾ ।
ಅಮ್ಮಹ ದೈವ ಗುರು । ಗೋವಿಂದ ವಿಠಲನ
ಧರ್ಮ ಸತಿ ಮನ್ಮನದಿ । ನಿಮ್ಮ ಪತಿ ತೋರೇ ೫

೧೭೭

ವಾರಿಜ ನಯನಳಿಗೇ । ನಾರೇರು
ಆರುತಿಯನು ಬೆಳಗೇ ಪ

ಕ್ಷೀರಸಾಗರ ಭವೆ । ಹಾರ ಪಿಡಿದು ಕೈಲಿ
ಮಾರ ಪಿತನು ಹರಿ । ಸರ್ವೋತ್ತಮಗ್ಹಾಕಿದ ಅ.ಪ.

ಪಟುತರಾಂಗ ಹರಿಯ । ಪ್ರಳಯದಿ
ಎಟಪದದುಂಗುಟ ಸವಿದೂ ॥
ನಟನೆಗ್ಯೆಯ್ಸೆ ನಿದ್ರೆ । ವಟದೆಲೆ ಹಾಸಿಕೆ
ತೃಟಿಯಲಿ ಜಲನಿಧಿ । ಕಟುತರ ತಮರೂಪಿ ೧

ಮಾಯೆ ಜಯೆ ಕೃತಿ ಶಾಂತೇ । ರೂಪದಿ
ಭಾರ್ಯಳಾಗಿ ವ್ಯಕ್ತೇ ॥
ಕಾರ್ಯವ್ಯೂಹ ಆ । ಯಾಯ ಸೃಷ್ಟಿಯಲಿ
ಗೈಯ್ಯುತ ಹರಿಯೊಡ । ಕಾರ್ಯ ಸಾಧಕೆಗೇ ೨

ಅಂಭ್ರಣೀಯೆ ಯಶಸೇ । ಜೀವರ
ಸಂಭ್ರಮದಲಿ ಸೃಜಿಸೇ ।
ಅಂಭ್ರಣಿ ಗೀತೆಗೆ । ಇಂಬಿನೊಳ್ ಸೃಜಿಸಿದ
ಕುಂಭಿಣಿ ಪತಿ ಗುರು । ಗೋವಿಂದ ವಿಠಲಾ ೩

೧೭೮

ವಾ – ರಿಜ – ನಿಲಯೇ – ಕ್ಷೀರ
ವಾರಿಧಿ – ತನಯೆ ಪ

ಸಾರಿ ನಿನ್ನ ಪದ – ವಾರಾಶಿಜರಜ
ಧಾರುಣಿಯಲಿ ಭವ – ಭಾರ ಕಳೆಯುವೇ ಅ.ಪ.

ಮಾಯಾ – ಕೃತಿಯೇ – ಶಾಂತಿಯೆ
ಜಾಯಾ – ದ್ವಿತಿಯಗೇ ॥
ತಾಯಿ ಅಜಗೆ ಪತಿ ಪ್ರೀಯೆ ತ್ರೈಗುಣ
ಕಾರ್ಯ ಪ್ರವರ್ತಕೆ ಕಾಯುವುದೆನ್ನ ೧

ನಿತ್ಯಾ – ಅನಿತ್ಯಾ ಜನಕೆ – ಆಧಾರಳೆ
ಮುಕ್ತಾ – ಮುಕ್ತಾವಿನುತೆ ॥
ವ್ಯಕ್ತಾ ಅವ್ಯಕ್ತಳೆ – ಗುಪ್ತ ಮಹಿಮೆ ಜಗ
ವ್ಯಾಪ್ತೆ ನಿರ್ಲಿಪ್ತಳೆ – ಭೃತ್ಯಾಭಿಷ್ಟದೆ ೨

ಸತ್ಯಾ – ಪ್ರಿಯಳೇ – ವರನಂದಾ
ಸ್ಥಿತ್ಯಾ – ಅನಂತೇ – ಪ್ರಜ್ಞಾನೀ ॥
ಮತ್ಸಾರಾಂತ ಅರಿ ವೃತ್ತಿಗಳನು ಹರಿ
ಸುತ್ತಲೆನ್ನ ತವ – ಭೃತ್ಯನೆಂದೆನಿಸೇ ೩

ಪೊಂಬಸಿರ – ಮಾತೆಯೇ – ಕೊಡು ಪತಿ
ಹಂಬಲದ – ನೀತಿಯೇ ॥
ಉಂಬುಡುವೋ ಕ್ರಿಯ – ಬಿಂಬ ಮಾಡಿಸೆ ಪ್ರತಿ
ಬಿಂಬಕುಂಟೆಂಬುವ – ಬಿಂಬ ಕ್ರಿಯಜ್ಞೆ ೪

ನಂದಾ – ತನಯಳೇ – ದೇವಾದಿ
ವೃಂದಾ – ವಂದ್ಯಳೇ ॥
ಬಂಧಕ ಮೋಚಕ । ಸಿಂಧು ಶಯನ ಹರಿ
ಸುಂದರ ಗುರು ಗೋವಿಂದ ವಿಠಲ ಸತಿ ೫

೧೭೯

ಸಮಾಸಮಳೆ ಸೀತೆ । ಹರಿಗೆ ಭುವಿ ಜಾತೆ
ಬ್ರಹ್ಮೋದ್ಭವನ ಧನು । ಹಮ್ಮೀನ ನೃಪ ಮಂದಿ
ದಮ್ಮು ಹಿಡಿದು ಎತ್ತೇ । ಹಮ್ಮು ಅಡಗಿತು ಪ

ಅಮ್ಮಾ ನಿಮ್ಮಯ್ಯನ । ಒಮ್ಮನ ಪಣವನು
ಬ್ರಹ್ಮರ್ಷಿ ವಿಶ್ವಮಿತ್ರ । ಹಿಮ್ಮೇಳನಾಗಿ ಬಂದ
ರಮ್ಮೆರಮಣ ರಾಮ । ಒಮ್ಮೇಲಿ ಪೂರೈಸಿದ ಅ.ಪ.

ಬಾಲೆರಡ ಬಲ । ಮೇಳವಿಸಿ ಬರೆ
ಮಾಲೆ ಪೂವಿನ । ಕೈಲಿ ಧರಿಸುತ
ನೀಲವೇಣಿ ವಿ । ಶಾಲ ಕೀರ್ತಿಯ
ಬಾಲ ಕೊರಳೊಳು । ಹಾಕಿ ನಿಂತಳು ೧

ಕೃತಿವಾಸನಾ । ದತ್ತಧನು ಮೇ
ಲೇತ್ತ ಲಾಗದ । ಪೊತ್ತು ಮುರಿದುದ
ಇತ್ತ ಹರ ಕೇ । ಳುತ್ತ ಯುದ್ಧಕೆ
ವತ್ತಿ ಬರೆ ಕ್ಷಣ ದೃಷ್ಟಿಗವ ಸ್ಥಾಣು ೨

ಮಾರ್ಗ ನಡು ಬರೆ । ಭಾರ್ಗವನು ರಣ
ಮಾರ್ಗ ವ್ಯಾಜ ಅ । ಮಾರ್ಗ ಅತುಳನ್ನ
ಮಾರ್ಗಣದಿ ಹನ । ಗೈದು ಸುಜನಕೆ
ಭಾರ್ಗವೈಕ್ಯವ । ತೋರ್ದ ತನ್ನೊಳಗೆ ೩

ಕಾನನಕೆ ಪಿತ । ನಾಣತಿಗೆ ರಾಮ
ಮಾಣದಲೆ ಸತಿ । ಸಾನುಜ ಪೊರಟ
ಏಣತೆರ ಕ್ರೂರ । ಕಾಣಿಸಲು ಸತಿ
ತಾನಪೇಕ್ಷಿಸೆ । ಬಾಣ ಪಿಡಿಧ್ಹೋದ ೪

ಮಾರೀಚ ವಂಚಿಸಿ । ಚೀರೆ ಲಕ್ಷ್ಮಣನ
ದೂರುತ್ತ ಕಳಿಸಿ । ರಾಮನಾ ಬಳಿಗೇ
ಕ್ರೂರ ಯತಿ ವೇಷ । ಧಾರಕನು ಬಂದು
ನಾರಿ ಸೀತಾ ಕೃತಿ । ಸೇರಿ ಮರಕ್ಹೊರಟ ೫

ವಾತ ಅಬ್ಧಿ ವೇ । ಗಾತಿಶಯ ಹಾರಿ
ಮಾತೆಗುಂಗುರವಿತ್ತು । ವಾರ್ತೆ ಪೇಳೆ ಪ್ರಭು

ಸೇತು ಕಟ್ಟುತ । ಖ್ಯಾತ ಖಳ ಹನ
ಸೀತೆಯೊಡ ಸೇರಿ । ಭ್ರಾತನನು ಪೊರೆದ ೬

ಸಂಚಿ ಚರರ್ಹನ । ಸಂಜೀವ ಗೊಲಿಯುತ
ಕಂಜ ಸಂಭವ ಪದ । ಅಂಜನಿ ಸುತಗಿತ್ತು
ಮಂಜುಳ ಸತಿ ಸಹ । ರಂಜಿಸಿ ರಾಜ್ಯ ಪ್ರ
ಭಂಜನ ಗುರು ಗೋ । ವಿಂದ ವಿಠಲ ಮೆರೆದ ೭

೧೮೦

ಸೀತೆ ಸದ್ಗುಣ ಗಣಗಳ
ವ್ರಾತೇ ಪರಿಪಾಲಿಸು ಮಾತೇ ಪ

ವಾತ ಜನನಿ ನಿರ್ಧೂತ ಕಲ್ಮಷೇ ।
ಪ್ರೀತಿಲಿ ತವ ಭರ್ತಾರನ ತೋರೇ ಅ.ಪ.

ನೀರೋಳು ಓಲ್ಯಾಡುತ ಹರಿ ಬರಲೂ । ವೇದಾಭಿಧೆ ಇರಲೂ
ವಾರಿಜಾಕ್ಷನು ಭಾರವನ್ನೊರಲೂ । ವೇದವತಿ ನೀನಿರಲು
ಭೂರಿ ವರಹ ರೂಪವ ಕೊಳ್ಳಲು । ಧಾತ್ರಿ ರೂಪಿ ಇರಲು
ಸಾರಸಾಕ್ಷಿ ನೀ ಲಕುಮಿ ರೂಪದಲಿ ।
ನಾರಸಿಂಹನನ ಆರಾಧಿಸಿದೇ ೧

ಬಲಿಯನ್ನು ವಂಚಿಸಿ ಹರಿ ಬಂದೂ । ಸುಖಾಭಿಧೆಯಂದೂ
ತಲೆಯ ಗಡಿಕಾನು ಅವನೆಂದು । ಹರಿಣಿಯಾದೆ ಅಂದೂ
ತಲೆ ಹತ್ತರವನ ಅಳಿಯಲು ಬಂದು । ಜನಕಾತ್ಮಜೆ ಅಂದೂ
ಕಳುವಿನಿಂದಪಾಲ್ ಬೆಣ್ಣೆಯಮೆಲ್ಲುವ ।
ಗೊಲ್ಲನ ವಲಿಸಿದಿ ಚೆಲ್ವ ರುಕ್ಮಣೀ ೨

ತ್ರಿಪುರರ ವ್ರತವನಳಿದವಗೇ । ವಲ್ಲಭೆ ದೇವತಿಯಾಗೇ
ಸುಫಲಾ ರಾವುತನಾದವನಿಗೇ । ರಾಣಿ ಪ್ರಭಾ ಆಗೇ

ವಿಪುಳ ರೂಪಗಳ ತೋರ್ದವಗೇ । ವಿಪುಳ ರೂಪಿಯಾಗೇ
ಚಪಲಾಕ್ಷಿಯೆ ಗುರು ಗೋವಿಂದ ವಿಠಲನ ।
ಸಫಲಗೈಸು ಮಮ ಹೃತ್ಕಮಲದಲಿ ೩

ಶ್ರೀ ಬ್ರಹ್ಮದೇವರ ಸ್ತವನ

೧೮೧

ಬ್ರಹ್ಮಾ ಮಾಂ ಪಾಲಯ
ಸುಬ್ರಹ್ಮಣ್ಯ ಪಿತನ ಪಿತನೇ ಪ

ಲೋಕೇಶಾ ಲೋಕನದಾ । ವಾಕು ಲಾಲಿಸೊ ವರಪ್ರದಾ
ಶ್ರೀಕರ ಹರಿಯವ ಲೋಕನ ಮಾರ್ಗವ
ನೀ ಕೊಡುತೆನಗೆ ವಿವೇಕವ ತೋರೋ ೧

ಸುಳಿ ನಾಭೀ ಪದುಮ ಭೂ । ಕಲಿಮಲಘ್ನ ಸ್ವಯಂಭೂ
ಅಳಿಕುಲ ದೇಣಿ ವಾಣಿ ಸಂಸೇವ್ಯನೆ ।
ಅಳಿದ ಅವಿದ್ಯಗಳ ಸಲಹೊ ಸುರಜೇಷ್ಟಾ ೨

ಋಕು ಯಜು ಸಾಮಾ ಅಥರ್ವಾ । ಭೃಕಟಿ ಭವ ತವ ಶರ್ವಾ
ವ್ಯಕುತಿಗೈದು ಮುಖ ನಾಲ್ಕರಿಂದ
ಸುಖಿಪೆ ಚತುರ ಮುಖ ಪರಮೇಷ್ಟೀ ೩

ದಶದಶಾನಂದಾ ಶೃತ ಧೃತೀ । ಯಶ ಪೊಗಳಲಳವೆ ಸಕಲ ಮತೀ
ವಿಷಧರನುತ ಮಮ ಧೀ ಪ್ರಸರಣ
ವಿಷಯ ವಿರಲಿ ತವ ಮನಸಿನೊಳಗೇ ೪

ವಿಧಾತಾ ವಿಶ್ವ ಸೃಜನೇ । ಬುದ್ಧ್ಯಾಭಿಮಾನಿ ವಂದಿತನೆ
ಮಧು ವೈರಿಯ ಪದ ಸೇವಕ ವಿಧಿ
ಮಧುಕರ ತವ ಪದ ಪಲ್ಲವ ತೋರೋ ೫

ವಾಂಛಿತದಾತಾ ವಿರಂಚೀ । ಸಂಚಿತ ದುರಿತ ವಿಷೂಚೀ
ಅಂಚೆ ಗಮನ ಹರಿಮಂಚ ಯೋಗ್ಯನುತ ।
ಮುಂಚೆ ಮನವ ಹರಿಚಿಂತನೆಲಿರಸೋ ೬

ಋಜುನಿಕರಕ್ಕಧಿಕನೇ । ನಿಜ ವೈಭವದಿ ಮೆರೆವನೇ
ಅಜ ಗುರು ಗೋವಿಂದ ವಿಠಲನ ಪದಬಿ
ಸಜ ಕಾಂಬ ಋಜು ಮಾರ್ಗದಲ್ಲಿಡು ೭

೧೮೨

ವಾಯು ದೇವರು

ಈರಾ – ಹರಿಪದ ಸೇವಕ ಧೀರಾ ।
ಹರಿರಿಪುವನ ಪಾವಕ ಘೋರಾ ।
ಭಾರತೀಶ ಮಹ ಶೂರಾ ಪ

ಅರಿಕರಿ ಸಂಕುಲ ಕೇಸರಿ ರೂಪನೆ
ಶರಣೆನ್ನುವೆ ತವ ಚರಣಾಬ್ಜಗಳಿಗೆ ಅ.ಪ.

ಪ್ರಾಣಾ–ಜಗಧರ ಕೂರ್ಮ ಸತ್ರಾಣ । ಮಾನ ಪ್ರಮೇಯದಿ ನಿಪುಣ
ಪಠಿಸಿ ಮೆರೆದ ನವ ವ್ಯಾಕರಣ । ಜಡ ಜೀವ ನಿಯಾಮಕ ಪ್ರಾಣ
ಜ್ಞಾನ ಜ್ಞೇಯ ಜ್ಞಾತ್ರ ಅಭಿಧಾನದ
ಕ್ಷೋಣೀಶಗೆ ಕರ್ತೃ ಕರ್ಮ – ಕರಣ ೧

ಭೀಮಾ – ಕೌರವರಳಿದ ನಿಸ್ಸೀಮ । ಪ್ರಥಮಾಂಗ ಹರಿಗೆ ಸುಧಾಮ
ಅಸಮ ನಿನ್ನೊಳು ಹರಿಪ್ರೇಮ । ನಿನಗೊಂದಿಪೆ ಮುಂದಿನ ಬೊಮ್ಮ
ಶ್ಯಾಮಸುಂದರ ಹರಿ ಪ್ರೇಮ ಸಂಪೂರ್ಣ
ನಿರ್ಮ್ಮೋಲಗೆ ಬಯಸುವೆ ಭೂಷ ಲಲಾಮ ೨

ಮಧ್ವಾ – ಬಹುಶ್ರುತಿ ಪ್ರತಿಪಾದ್ಯ । ಮಧ್ವಾಖ್ಯ ತ್ರತ್ಯತಿ ಸಿದ್ಧ
ಶುದ್ದ ಸತ್ವಾತ್ಮಕ ತನು ಬದ್ಧ । ಬದ್ದ ತ್ವವು ನಾಮಮಾತ್ರ ಸಿದ್ದ
ಅದ್ವಿತೀಯ ಗುರು ಗೋವಿಂದ ವಿಠಲನ
ಸಿದ್ಧಾಂತಿಸಿ ಬಹು ಹಳಿದೆ ವಿರುಧ್ಧ ೩

೧೮೩

ಎಂಥಾ ದಯವಂತ ನೀತನೊ । ಭಾರತಿ ಕಾಂತ
ಅಂತರ್ಬಹಿ ವ್ಯಾಪ್ತನೋ ಪ

ಸಂತತ ಶ್ವಾಸೋಚ್ಛ್ವಾಸ । ಮಂತ್ರ ತಾ ಜಪಿಸುತ
ಶಾಂತೀಶ ಪಾದದಲ್ಲಿ । ಕ್ರಾಂತನಾಗಿಹ ನೀತ ಅ.ಪ.

ಆರ್ಮೂರೆಡಡೊಂದು ಸಾವಿರ । ಷಟ್ಯತ ಮಂತ್ರ ।
ಸರುವರಲ್ಲಿದ್ದು ಜಪಿಸುವ ॥
ಸರುವ ತಾಮಸರಲ್ಲಿ । ರುವ ಜಪಿಸಿ ಮಂತ್ರ
ಹರಿಗೆ ಅರ್ಪಿಸುತಿಪ್ಪ । ಪರಮ ಪುರುಷ ಪ್ರಿಯ ॥
ಆರು ನಿನಗೆ ಸರಿ । ಮೂರು ಜಗದ ಧೊರೆ ।
ವೀರ ಮಾರುತ ಹರಿ ಚರಣಾರಾಧಕ
ಸೂರಿಗಮ್ಯ ಸರ್ವೋತ್ತಮ ಹರಿಯನು
ಸೂರ್ಯ ಕೋಟಿ ಸಂಕಾಶದಿ ಪರಿಕಿಪ ೧

ಪ್ರಾಣಾ – ಅಪಾನ – ಸಮಾನ । ಮತ್ತೆರಡು ।
ವ್ಯಾನಾ ಉದಾನರಲ್ಲಿರುತಾ ॥
ಪ್ರಾಣಿಗಳೊಳಗಿದ್ದು । ಜಾಣ ತನದಿ ತಾನು
ನಾನಾ ಕರ್ಮವ ಮುಖ್ಯ । ಪ್ರಾಣಾ ತಾನೇವೆ ಮಾಳ್ಪ ॥
ಪ್ರಾಣನ ಮಹಿಮಾನಂತವೆ ।
ವಾಣಿ ಮುಖಾದ್ಯರು ಎಣಿಸಲಸು ಅಳವೇ
ನಾನಾ ರೂಪದಿ ಶ್ರೀನಿವಾಸ ಪದ
ಧ್ಯಾನಾರಾಧಕ ನೆನಿಸುತ ಮೆರೆವಾ ೨

ಸುರರಾ ಮೊರೆಯ ಕೇಳುತ । ಪರಿಸರ ।
ಹರಿಯ ಮತವ ಸಾರಿದ ॥
ಗುರು ಗೋವಿಂದ ವಿಠಲ । ಸರ್ವಾಧಿಕನು ಎಂದು
ಸರ್ವ ಶಾಸ್ತ್ರವ ನಿರ್ಣ । ಯವ ಮಾಡಿದ ನೀತ ॥
ಸರ್ವನಾಮಾಭಿಧ । ಸರ್ವ ನಿಯಾಮಕ ।
ಸರ್ವ ವ್ಯಾಪ್ತಹರಿ । ಕರುಣವಿಲ್ಲದಲೆ
ಹರಿ ಚರಣಾಂಬುಜ । ದೊರಕದೆಂದನುತಲಿ
ಸರ್ವಾಗಮಗಳ । ಸಾರವ ನ್ನೊರೆದ ೩

೧೮೪

ಎದುರ್ಯಾರೋ ಗುರುವೇ ಸಮರ್ಯಾರೋ ಪ

ವಿಧಿ ಪದ ಅರ್ಹನೆ । ಮಧುಸೂದನ ಸುತ ॥ಅ. ಪ॥

ಕೇಸರಿಯ ಸತಿಯಲಿ ಉದಿಸಿದ ವೀರ । ರವಿಜಗೊಲಿದಧೀರ
ದಾಶರಥಿ – ಚರಣಕೆ ಮಣಿದ ಗಂಭೀರ । ವಾಲಿಯ ಸಂಹಾರ ॥
ಸಾಸಿರ ದೈವತ್ತು । ಗಾವುದ ಸಾಗರ
ಗೋಷ್ಪದ ಗೈಯುತ । ವಸುಧಿಜೆಗೆರಗಿದ ೧

ಹರಿಯ – ಸೇವಕತನ ಮಾದರಿಯ । ತೋರಿದ ಹೊಸ ಪರಿಯ
ಅರಿಯಾ – ಲಂಕೆಯ ದಹಿಸಿದ ಪರಿಯ । ಸೇತು ಬಂಧನ ದೊರೆಯಾ ॥
ಅರಿ ಕುಲ ಸವರಿ ಸಂ । ಜೀವನ ಗಿರಿ ತಂದು
ಧುರವ ಜಯಿಸಿ ಹರಿ । ಮಡದಿಯ ತಂದಗೆ ೨

ಪ್ರಥಮಾಂಗನು ಕುಂತಿಯ ಸುತನೆನಿಸೀ । ದ್ರುಪದಾತ್ಮಜೆ ವರಿಸೀ
ಅತಿಖ್ಯಾತ ಜರೆಸುತನನ ವಧಿಸೀ । ಕೌರವರನು ಅಳಿಸೀ ॥
ತತುವ ಮತವ ಸಂ । ಸ್ಥಾಪಿಸುತವನಲಿ
ವಿತತ ಮಹಿಮ ಹರಿ । ರತಿಯನೆ ಪಡೆದಗೆ ೩

ಆರೂ – ಅಕ್ಷೋಹಿಣಿ ಸೈನ್ಯವ ತರಿದೂ । ಅರಿ ಉರವನೆ ಬಗಿದೂ
ನಾರೀಯ – ತುರಬನು ಬಿಗಿದೂ । ನರ ಮೃಗನಂತೆಸೆದೊ ॥
ನೀರೊಳು ಅಡಗಿದ । ಕೌರವ ಮೇಲ್ಬರೆ
ಊರು ತಾಡನದಿಂದ । ಮಾರಕನಾದಗೆ ೪

ಕಲಿಯೂ ಹೆಚ್ಚಿದ ಕಲಿಯುಗದಲ್ಲಿ । ಮಣಿಮಾನನು ಇಲ್ಲಿ
ಮಲಿನವ ಮಾಡಲು ಬಲು ವೇದದಲೀ । ಕಲುಷಿತ ತರ್ಕದಲೀ॥
ಅಲವ ಬೋಧರಾಗಿ । ಹುಲುಮತವಳಿಯುತ
ಕಲುಷಹ ಗುರು ಗೋ । ವಿಂದನೆ ಪರನೆಂದೆ ೫

೧೮೫

ಮೋತಂಪಲ್ಲಿ ಪ್ರಾಣದೇವರ ಸ್ತೋತ್ರ

ಏನು ಕರುಣವೊ ನಿನಗೆ ಮೋತಪಲ್ಲಿಶಾ ॥
ದೀನ ದ್ವಿಜಗೊಲಿದು ಬಂದಿಲ್ಲಿ ನಿಂತೇ ಪ

ವಿಪ್ರವರ ತಪಗೈಯ್ಯೆ । ನೀನೊಲಿದು ಅವನಿಗೆ
ಕ್ಷಿಪ್ರದಿಂ ಕಿಂಪುರುಷ । ಖಂಡದಿಂಧ್ದೊರಟೂ ।
ಅಪ್ರತರ್ಕ್ಯೊರು ಸ । ದ್ಗುಣ ಪೂರ್ಣ ಹರಿದೂತ
ಸುಪ್ರಸನ್ನನು ಆಗಿ ಬಂದಿಲ್ಲಿ ನಿಂತೇ ೧

ಮುಸಲರ್ಗಾವಳಿಯಲ್ಲಿ । ತಸ್ಕರರು ಬಂದಿಲ್ಲಿ
ಅಸುಪತಿಯೆ ನಿನಗಧಿ । ಷ್ಠಾನವೆಂದೆನಿಸಿದಾ ।
ಅಶ್ಮವನ್ನೊಡೆದು । ಪುಷ್ಕರಣಿಯೊಳಗವರು
ಎಸೆದು ಪೋದುದ ತಿಳಿದು । ಸುಜನ ಜನರಂದೂ ೨

ದ್ವಿಜರೆಲ್ಲ ಸೇರಿ ಸ । ತ್ಸಭೆಯ ತಾವೆ ರಚಿಸಿ
ಭಜಿಸುತಿರೆ ತವ ಪಾದ । ಪದ್ಮಯುಗವಾ ॥

ದ್ವಿಜಗುರೂ ಪ್ರಾಣಪತಿ । ತೈಜಸನು ತಾನಾಗಿ ।
ಭಜಕರಿಗೆ ಪೇಳಿದನು । ಸ್ವಪ್ನ ಸೂಚಿಸುತಾ ೩

ಭಿನ್ನವಾಗಿದ್ದಂಥ । ಅಂಗಗಳ ಜೋಡಿಸುತ
ನನ್ನೆಯಿಂ ತೈಲವನು । ಪೂಸೆನ್ನುತಾ ।
ತನ್ನ ಸದನದ ಕದವ । ನಾಲ್ವತ್ತು ಮತ್ತೊಂದು
ದಿನ್ನ ತೆಗೆಯದೆ ಲವಣ । ವ್ರತ ಮಾಳ್ಪುದೆಂದಾ ೪

ಮೈಮರೆಯುತರ್ಚಕನು । ದಿನ ಒಂದು ಉಳಿದಿರಲು
ಆ ಮಾರುತಿಯ ಸದನ । ಕದ ತೆಗೆಯುತಿರಲೂ ।
ನೇಮ ಮೀರಿದ ಫಲವು । ತೋರುವನೊ ಎಂಬಂತೆ
ಕೀಮು ರಕ್ತವ ಸ್ರವಿಸೆ । ವಕ್ಷದಲಿ ಕಂಗಳಲೀ ೫

ತಪ್ಪು ತಪ್ಪೆಂದವನು । ದವಡೆಯನೆ ತಟ್ಟುತ್ತ
ಅರ್ಪಿಸಲು ತನುಮನವ । ಭಕುತಿಯಿಂದಾ ।
ವಪ್ಪಿಕೊಳ್ಳುತ ಹನುಮ । ಸ್ವಪ್ನದಲಿ ಪೇಳಿದನು
ಅರ್ಪಿಸುವುದಲ್ಲಿಲಿ । ಶಾಲಿಗ್ರಾಮಗಳಾ ೬

ಹರಿಮಹಿಮೆ ಕೊಂಡಾಡಿ । ಬರದಂತೆ ತಾವ್ ಮಾಡಿ
ನರಸಿಂಹ ವಸುದೇವ । ಸುತ ಶಾಲಿಗ್ರಾಮಗಳಾ ।
ಸ್ಥಿರಪಡಿಸಲಲ್ಲಿಲಿ । ಕರುಣದಿಂದಲಿ ದಿವ್ಯ
ವರ ರೂಪದಿಂ ನಿಂತೆ । ಗುರು ಮಾರುತೀಶಾ ೭

ಎಂಟೊಂದನೇ ಮಾಸ । ಎಂಟೈದನೇ ದಿನದಿ
ನೆಂಟರೆಲ್ಲರು ಸೇರಿ । ಬಹು ಉತ್ಸವಗಳಾ ।
ಭಂಟರಾಮರ ನಿನಗೆ ಉಂಟು ಮಾಡಲು ಭಕ್ತ
ಕಂಟಂಕಗಳ ನೀಗಿ । ವಾಂಛಿತವ ನೀನೇ ೮

ಗುರುಗೋವಿಂದ ವಿಠಲ । ಪರಮ ಸೇವಕ ಹನುಮ
ಪರಿ ಪರೀಯಲಿ ನಿನ್ನ । ಚರಣ ಯುಗ್ಮಗಳಾ ।

ಪರಮ ಭಕ್ತಿಲಿ ಸೇವೆ । ನೆರೆ ಮಾಳ್ಪ ಸುಖವಿತ್ತು
ಪರಮ ಪುರುಷನ ಕಾಂಬ । ವರ ಮಾರ್ಗ ತೋರೋ ೬

೧೮೬

ಏಳಯ್ಯ ಏಳಯ್ಯ ಬೆಳಗಾಯಿತೂ ಪ

ವ್ಯಾಳಾದ್ರಿ ನಿಲಯ ಸುಳಿ । ನಾಭಿ ಸಂಭವ ಸುತನೆ ಅ.ಪ.

ಸಾಮಗಾನ ಪ್ರೀಯ । ಸಾಮಜ ವರದ ಶ್ರೀ
ರಾಮ ಬಂದಿಹನಯ್ಯ । ಭೂಮಿಜೆಯ ಪುಡುಕಲ್ಕೆ ।
ನೇಮದಿಂದಲಿ ನೀನು । ಶ್ಯಾಮಲಾಂಗನ ಕಂಡು
ಭೂಮ ಗುಣನಿಧಿ ಸು । ಪ್ರೇಮ ಪಡೆ ಹೊತ್ತಾಯಿತು ೧

ತಾಲಸಪ್ತವ ಹಣಿಸು । ವಾಲಿ ಮಥನ ಗೈಸು
ನೀಲ ಜಾಂಬವ ಸುಷೇ । ಣಾದಿಗಳ ಕರೆ ಕಳಿಸು ।
ಶ್ರೀಲೋಲನಾಜ್ಞೆಯಲಿ । ಕಾಲಮೀರುವ ಮುನ್ನ
ಲೋಲ ಲೋಚನೆ ವಾರ್ತೆ । ತಿಳುಹ ಬೇಕಯ್ಯಾ ೨

ತೆಂಕ ಶರಧೀಯನ್ನು । ಲಂಘಿಸಲಿ ಬೇಕೂ
ಲಂಕಿಣಿ ರಕ್ಕಸಿಯ । ಬಿಂಕ ಮುರಿಯಲಿ ಬೇಕು ।
ಲಂಕಾಪುರದೊಳು ಮಾತೆ । ಗಂಕವೀಯಲಿ ಬೇಕು
ಅಂಕಕಾರನು ರಾಮ । ನಂಕೆ ಸಲಿಸಲಿ ಬೇಕು ೩

ಶರಧಿ ಬಂಧಿಸಬೇಕು । ಧುರವ ಜೈಸಲು ಬೇಕು
ವರ ಭೂಮಿ ಜಾಕೃತಿಯ । ತ್ವರ ತರಲಿ ಬೇಕು
ವರ ವಿಭೀಷಣನಿಗೆ । ಅರಸುತನ ಕೊಡಬೇಕು
ಮರಳಿ ಅಯೋಧ್ಯಗೆ । ತೆರಳ ಬೇಕಯ್ಯಾ ೪

ಕುರು ಕುಲದಿ ಉದ್ಭವಿಸಿ । ಜರೆಸುತನದ ಸೀಳ್ಬೇಕು
ಧುರದೊಳರ್ಜುನಗೆ ನೀ । ನೆರವಾಗಲೀ ಬೇಕು
ದುರುಳ ದುಶ್ಯಾಸನನ । ಉರ ರಕ್ತ ಕುಡಿಬೇಕು
ಧರಣಿ ಭಾರವ ನಿಳುಹಿ । ತರುಣಿ ಶಿಖೆ ಬಿಗಿಬೇಕು ೫

ಮಧ್ಯಗೇಹರ ಗೃಹದಿ । ಮುದದಿ ಜನಿಸಲಿ ಬೇಕು
ಭೇದಮತವನೆ ಸಾರಿ । ಅದ್ವೈತ ಗೆಲಬೇಕು
ಬುದ್ಧಿಪೂರ್ವಕವಾಗಿ । ಸಿದ್ದ ಮುನಿ ಜನರಿಂದ
ಮುದ್ದುಕೃಷ್ಣನ ಪೂಜೆ । ವಿಧಿಸಲೀ ಬೇಕೂ ೬

ಆಮೂರ್ಾರು ಯೆರಡೊಂದು । ಸಾರ ಗ್ರಂಥವ ರಚಿಸಿ
ಮೂಮೂರ್ಾರು ಭಕುತಿಲಿ । ಹರಿಯ ಪೂಜಿಸಬೇಕು ।
ಮೂರ್ಲೋಕ ದೊರೆ ಗುರು । ಗೋವಿಂದ ವಿಠಲನ
ಸಾರ್ವಕಧಿಪತಿಯೆಂದು । ಸಾರಲೀ ಬೇಕೂ ೭

೧೮೭

ಕದರ ಉಂಡಲಿಗಿಯ ಹನುಮಾ । ಕಾಯೊ
ಉದಧಿ ಶಯನಗೆ ಬಲು ಪ್ರೇಮಾ ಪ

ಸದಮಲಾಂತಃಕರಣದೊಳು ತವ ।
ಪದವನಜ ದ್ವಯ ಸೇವಿಸೂವರ
ಮುದದಿ ಪಾಲಿಪ ಗುರು ದಯಾಕರ ।
ವದಗಿ ಭಾಸಿಸೊಮ ಮಹೃದಾಗರ ಅ.ಪ.

ಪ್ರಥಮಾಂಗ ಹರಿಗೆ ನೀನೆನಿಸೀ ।
ಜೀವ ತತಿಯೊಳಂತರ ಬಾಹ್ಯ ನೆಲಸೀ ।
ತತುವ ಮಾನಿಗಳ್ಕಾರ್ಯ ನಡೆಸೀ ।
ಹರಿಗೆ ಪೃಥಕ್ಪೃಥಕ್ಕವುಗಳರ್ಪಿಸೀ ।

ವಿತತ ಹರಿ ಸತ್ಪಾತ್ರನೆನಿಸುತ । ಯತನ ಜ್ಞಾನೇಚ್ಛಾದಿ ನಡೆಸುತ
ಸತತ ವಿಶ್ವವ ಪಾಲಿಸುವ ಶ್ರೀ । ಪತಿಯ ಪದಕರ್ಪಿಸುತಲಿರುವ ೧

ಶರಧಿ ದಾಟುವ ಲಂಕಾಪುರವ । ಸೇರಿ
ವರ ಮಾತೆಗಿತ್ತೆ ಉಂಗುರವಾ ।
ಪುರದೊಳಗಶೋಕ ವನವಾ । ಕಿತ್ತು
ತರಿಯಲಕ್ಷನು ತೆತ್ತ ದೇಹವ
ಉರು ಪರಾಕ್ರಮಿ ಇಂದ್ರ ಜಿತುವಿನ ವರಸುಅಸ್ತ್ರಕೆ ತಾನೆ ಸಿಲುಕುತ
ಪರಿಪರಿಯಲಸುರನನು ಹಿಂಸಿಸಿ । ಉರಿಸಿ ಲಂಕೆಯ ಹರಿಗೆ ಎರಗಿದ ೨

ಹದಿನೆಂಟು ಕ್ಷೋಹಿಣಿ ಬಲವಾ । ನೆರಸಿ
ಸದೆದು ಹಾಕಿದ್ಯೊ ದೈತ್ಯಕುಲವಾ ।
ಮುದದಿ ದ್ರೌಪದಿಗಿತ್ತ ವರವಾ । ಸಲಿಸಿ
ವಧಿಸಿದ್ಯೋ ದುರಳರ ಕುಲವಾ ।
ಮಧುಮಥನ ನರಹರಿಯ ಸ್ಮರಿಸುತ । ಅದುಭುತವು ಎಂದೆನಿಪ ಕಾರ್ಯವ
ವಿಧಿಸಿ ಭೂಭಾರವನೆ ಕಳೆಯುತ । ಮುದದೊಳಚ್ಯುತಗಿತ್ತೆ ಭೀಮ ೩

ವೇದ ವಾದಿ ಜನ ಕೊರಗೀ । ಹರಿ
ಪಾದದ್ವಯವು ವನಜಕೆರಗೀ ।
ಮೋದದಿ ಸ್ತುತಿಸೈವ ಮರುಗೀ ।
ಕಳುಹೆ ವೇದಗಳುದ್ಧಾರಕ್ಕಾಗೀ ।
ಬೋಧಿಸುತ ಬುಧ ಸ್ತೋಮಗಳಿಗಾ । ವೇದಗಳ ಸಾರಾರ್ಥವೆಲ್ಲವ
ವಾದಿಗಳ ಜೈಸುತಲಿ ಪೂರ್ಣ । ಭೋದಯತಿ ಪಾಲಿಸುವುದೆಮ್ಮ ೪

ಶಾಂತ ಸಾಧುಗಳನುದ್ಧರಿಸೇ । ನೀನು
ಕಾಂತೇಶನೆನುತಲ್ಲಿ ವಸಿಸೇ ।
ಭ್ರಾಂತರಮನ ಪಂಕ ಹರಿಸೇ । ನೀನೇ
ಕಾಂತತತ್ವಗಳ ಭೋದಿಸೇ
ಪ್ರಾಂತಗಾಣದೆ ಕರ್ಮ ಪಂಕದಿ । ಶ್ರಾಂತರಾಗಿಹರನ್ನೆ ಪೊರೆಯುವ
ಕಾಂತ ಗುರು ಗೋವಿಂದ ವಿಠಲನ । ಸ್ವಾಂತ ದೊಳಗನವರತ ಕಾಣುವ ೫

೧೮೮

ಖೇಟ ಕುಕ್ಕುಟ – ಜಲಟಾ । ತ್ರೈರೂಪಿ
ನಿಶಾಟ ಸಂಕುಲ ರೋಟಾ ಪ

ಸಾಟಿಯುಂಟೆ ವೈರಾಟದಿ ಹರಿ ಕೈಟಭಾರಿ ಪದ ಓಲೈಸುವಗೆ ಅ.ಪ.

ಪವಮಾನ ಸತ್ರಾಣಾ । ಜೀವೋತ್ತಮ । ಸವನಾಭಿಧ ಪ್ರಾಣ
ಜೀವರೊಳ್ಕರ್ತೃ ಕರ್ಮ ಕರಣಾ ॥
ರಾವಣ ಮದ ಭಂಜನ । ಭವ ಬಂಧನ । ನಿರ್ಮೋಚನ
ಪಾವನ ಪದ ಪೂಜಕ । ಅಘ ಶೋಧಕ । ಶುಚಿ ಶರಣೂ ೧

ಭುವನತ್ರಯವನಳೆದಾ । ದಿವ್ಯವಾದ । ಪಾವನ್ನ ಪಾದಾ ॥
ಆ ವ್ಯೋಮವೆಲ್ಲಕೆ ವಾಮಪಾದಾ ॥
ಸುವ್ಯಾಪಿಸಿ ಬಲಿ । ಭಾವಕೆ ಒಲಿದಿಹ ಸಿರಿ ಹರಿ
ತ್ರೈವಿಕ್ರಮ ಪದ ಪೂಜಕ । ನಿಷ್ಕಾಮಕ । ಸೇವಕ ಶರಣೂ ।೨

ಹರಿ ಪಾದಾಂಗುಷ್ಠದುಗುರೂ । ಖರ್ಪರದೊಳೂ । ಮಾಡೆ ಡೊಗರೊ
ಹರಿಯಿತು ಹೊರ ಜಲಜಾಂಡದೊಳೊ ॥
ಕರುಣಾರ್ಣವ ಗುರು । ಗೋವಿಂದನ । ಪದ ತೊಳೆದನ
ವರ ಪದವನ । ಸಾರುವನ । ಚರಣವನ । ಶರಣೂ ೩

೧೮೯

ಗಾಡಿ ಪಾಳ್ಯ ಹನುಮಾ । ತವ ಪದ
ಬೇಡಿ ಭಜಿಪೆ ಭೀಮಾ ಪ

ಈಡು ರಹಿತ ತವ । ಮಹಿಮೆಗಳನು ಕೊಂ–
ಡಾಡ ಬಲ್ಲನೇ । ಪಾಮರನು ನಾ ಅ.ಪ.

ಅತಿಶಯದೊಳಗಿರಲೂ । ವಿಪ್ರನು । ಸತಿ ಸಹ ವಿಹಿತದಲೂ ॥
ಶತ ಮತ್ತರೆ ಶತ । ವತ್ಸರ ಪೂರ್ವದಿ
ಹಿತಧಾಗಮನವ । ಸೂಚಿಸಿ ಸ್ವಪ್ನದಿ ೧

ದ್ವಿಜ ಬಿಂದ್ವಾಚಾರ್ಯಾ । ಸತಿ ಸಹ । ನಿಜ ನಿದ್ರೆಯೊಳಿಹ ಚರ್ಯಾ ॥
ಗಜ ಬಜಿಸೇಳುತ ತೈಜಸ ಪೇಳಿದ
ನಿಜ ಭಾವವ ತಾ । ಸುಜನರಿಗ್ಹೊರೆದು ೨

ಹುಣಸೂರೊಳು ಬುಧನೂ । ಕನ್ಯಾ । ಮಣಿ ಸಹ ವಿರಲವನೂ ॥
ಘನ ಸಂತಾನವು ಇರದಿರೆ ದಂಪತಿ
ಮನವನು ಹರಿಪದ । ವನಜದಲಿರಿಸೀ ೩

ಒಡಗೂಡಿ ಸೇವಕರಾ । ತರಿದನು । ಗಿಡ ಗಂಟಿಯ ವಿವರಾ ॥
ಅಡವಿಯೊಳೊಡ । ಮೂಡಿದ ಬರಿ ಶಿಲೆ
ಕಂಡು ಮನದಿ ಬಯ । ಲಾಶೆಯೊಳಿರಲೂ ೪

ಮಲಗಿರೆ ಮನನೊಂದೂ । ಸ್ವಪ್ನದಿ । ಬಲ ಹನುಮಂತನು ಬಂದೂ ॥
ಚೆಲುವ ತನ್ನಯ ರೂಪ । ತೋರಿಸಿ ಪೇಳಲು
ಒಲಿಸಿ ಗಂಧದಲಿ । ಲಿಖಿಸಿ ಪೂಜಿಸಿದ ೫

ಮೊಗವನು ದಕ್ಷಿಣಕೆ । ತಿರುಗಿಸಿ । ನಗವನು ಮೇಲಕ್ಕೇ ॥
ನೆಗಹಿ ತನ್ನ ಎಡ । ಹಸ್ತದೊಳಗೆ ಬಲ
ಭಾಗ ಕೈಯ್ಯ ತಾ । ನಿರಿಸಿಹ ಕಟಿಯಲಿ ೬

ಯಾರಗೊಡವಿಯೇಕೇ । ಎಂದು । ಊರ್ಹೊರಗಿರಲಿಕ್ಕೆ ॥
ಸಾರ ಸುಜನರೆಲ್ಲ ವಾರ ವಾರಕ್ಕೆ ನಿನ್ನ
ಸಾರಿ ಭಜಿಸುವರು । ಚಾರು ಮತಿಯಲಿ ೭

ಸ್ಥಿರ ಚರ ಸುವ್ಯಾಪ್ತಾ । ಮರುತ । ಶರಣ ಜನರ ಆಪ್ತಾ ॥
ಸುದತರು ಭಕುತರ । ಹರಕೆ ಪೂರೈಸುವೆ
ನಿರುತ ಹರಿಯ ಪದ । ರತಿಯನೆ ಕೊಡುವುದು ೮

ಕೋವಿದರರಸನ್ನಾ । ಗುರು । ಗೋವಿಂದ ವಿಠಲನ್ನಾ ॥
ಓವಿ ತೋರೊ ಮಮ । ಹೃದ್ವನಜದೊಳಗೆ
ಪಾವಮಾನಿಯೆ ಮ । ತ್ಪ್ರಾರ್ಥನೆ ಸಲಿಸೀ ೯

೧೯೦

ಸುಂದರ ಕಾಂಡ ರಾಮಾಯಣ

ಗುರು ಭಕ್ತಿದ್ವಾರ ಸಿರಿ । ಹರಿಭಕ್ತಿ ಉದಯಿಸಲು
ಗುರು ಜಗದ್ಗುರು । ಸಿರಿ ಹನುಮನಾ ॥
ಮೆರೆವ ಸಚ್ಚರಿತೆ ಮಮ । ಗುರುವೆ ನುಡಿಸೀದಷ್ಟು
ಒರೆವೆ ಕೇಳ್ವುದು ಸಜ್ಜನಾ ಪ

ಗೃಹ ಮೇಧಿ ಇರುವ ಬಗೆ । ಬಹು ಪರೀಯಲಿ ತೋರಿ
ಗುಹ ವನಂಗಳನೆ ಚರಿಸೀ ।
ಗೃಹಿಣಿಯನು ಕಾಣದಲೆ । ಬಹು ನಟಿಸಿ ನರರಂತೆ
ಮಹ ಮಹಿಮ ರಾಮ ಬರಲೂ ೧

ಪ್ರಥಮಾಂಗ ಮಾರುತನೆ । ಸುತನಾಗಿ ಅಂಜನಿಗೆ
ದ್ವಿತಿಯುಗದಿ ಅವತರಿಸುತಾ ॥
ಪೃಥಿವಿ ಪತಿ ದಶರಥನ । ಸುತನ ಕಂಡೆರಗಿ ರವಿ
ಸುತಗೆ ರಾಜ್ಯವನೆ ಕೊಡಿಸೀ ೨

ರಾಮನಾಣತಿ ಪೊತ್ತು । ಭೂಮಿಜೆಯ ವಾರ್ತೆಯನು
ನೇಮದಲಿ ತರುವೆ ನೆನುತಾ ॥
ಆ ಮಹಾ ಶರಧಿಯನು । ಧೀಮಂತ ಲಂಘಿಸುತ
ಭೂಮಿಜೆಯ ಕಂಡು ಎರಗೀ ೩

ರಾಮಾಂಗುಳೀಯಕವ । ತಾ ಮುದದಿ ತೆಗೆದು ಸಂ
ಪ್ರೇಮದಲ್ಲಿ ಮುಂದಿಡುತಿರೇ ॥

ಭಾಮಿನಿಯು ಕೊಂಡು ಪತಿ । ರಾಮನ್ನ ಕಂಡ ಪರಿ
ಆಮೋದದಲ್ಲಿರುತಿರೇ ೪

ಶ್ರೀ ಲೋಲ ರಾಮನಿಗೆ । ಆಳಾಗಿ ಇರಲೊಂದು
ವಾಲುಳ್ಳ ಕಪಿಯು ಬಂದೂ ॥
ಕೇಳುವರು ಇಲ್ಲದಲೆ । ಪೋಲಾಗಿ ಹೋಯ್ತೆಂಬ
ಕೀಳು ನುಡಿಗವಕಾಶ ಕೊಡದೇ ೫

ವಂದೆರಡು ಹಣ್ಣಾನು । ತಿಂದ್ಹೋಗುವೇನೆಂದು
ಇಂದೀವರಾಕ್ಷಿಯ ಬೇಡುತಾ ॥
ನಂದೀಸಿ ಅಶೋಕ । ನಂದನ ವನವ ಮದ
ಸಿಂಧೂರ ನಂತೆಸಗಿದೇ ೬

ಕೋಟ್ಯಶೀತಿಯು ನಿ । ಶಾಟ ಯೂಥಪ ಸಹ
ಸಾಷ್ಟ ಕಾಯುತ ಮುಖ್ಯರಾ ॥
ಖೇಟ ರಾವಣ ಸೇನೆ । ಕೂಟ ಮೂರರಲೊಂದು
ರೋಟಿಸುತ ನೀ ಮೆರೆದೆಯೋ ೭

ಅಕ್ಷೋಹ್ಣಿ ಬಲ ಸಹಿತ । ರಾಕ್ಷಸಾಧಿಪ ಸುತನು
ಅಕ್ಷಯ್ಯ ಕುವರ ಬರಲೂ ॥
ಪಕ್ಷೀಂದ್ರ ತೆರ ಪಿಡಿದು । ಈ ಕ್ಷಿತಿಗೆ ಅಪ್ಪಳಿಸೆ
ತಕ್ಷಣದಲಸು ನೀಗಿದಾ ೮

ಮಂದಜಾಸನ ವರದಿ । ಇಂದ್ರಜಿತು ಮದವೇರಿ
ಬಂದೆಸೆಯೆ ಬ್ರಹ್ಮಾಸ್ತ್ರವಾ ॥
ಛಂದದಲ್ಯೋಚಿಸುತ । ಬಂಧನಕೆ ನೀನಾಗಿ
ನಂದದ ಲ್ವೊಳಗಾದೆಯೋ ೯

ತೆತ್ತೀಸ ಕೋಟಿ ದೇ । ವತ್ತೀಗಳಿಗೆಲ್ಲಾ
ಉತ್ತೂಮನಾದ ನೀನೂ ॥

ಸುತ್ತೀಸಿ ಬಾಲವನು । ಹತ್ತೂತಲೆಯವನ
ನೆತ್ತೀಯ ಮೇಲ್ ಕುಳಿತೆಯೋ ೧೦

ನಾರೀಯ ಚೋರ ನಿ । ನ್ನಾರೆಂದು ಕೇಳಾಲು
ಮಾರುತ್ತರವಿತ್ತು ಜರಿದೇ ॥
ಮಾರೀಚ ಮೊದಲಾದ । ನೂರಾರು ರಕ್ಕಸರ
ದೂರೋಡಿಸೀದವನ ದೂತಾ ೧೧

ಕೋಟಲೆಗಳ ಕೊಟ್ಟ । ತಾಟಕಾದೀ ದೈತ್ಯ
ಕೂಟಗಳ ಸಂಹರಿಸಿದಾ ॥
ಕೂಟಸ್ಥ ಲೋಕಗಳ । ನೋಟದಲಿ ದಹಿಪ ವೈ
ರಾಟ ಪ್ರಭುವಿನಾಳೂ ೧೨

ಕೇಳೆಲೋ ರಾವಣನೇ ತಿಳಿಯಯಾ ನೀನು ನಿನ್
ಹುಳುವೆಂದು ನಿಜ ಬಾಲದೀ ।
ಸಿಲುಕಿಸಿ ಜಲನಿಧಿ । ನಾಲಕ್ಕು ಮುಳುಗಿದ
ವಾಲಿ ಪೆಸರನು ಮರೆತೆಯಾ ೧೩

ತಾಲಮರಗಳ ಶೀಳಿ । ವಾಲೀಯನೆ ಕೊಂದರ್ಕ
ಬಾಲಗೇ ರಾಜ್ಯ ಕೊಡಿಸೀ ॥
ಕೋಲಿನಿಂ ನಿಮ್ಮೆಲ್ಲ । ಹೂಳುವ ರಾಮನ
ಆಳು ನಾನೆಂದು ತಿಳಿಯೋ ೧೪

ರಕ್ಕಸ ಪತಿಯಾಜ್ಞೆ । ಇಕ್ಕಿ ತಲೆಯಾ ಮೇಲೆ
ರಕ್ಕಸರೆಲ್ಲ ತವ ಪುಚ್ಛ ॥
ಕಿಕ್ಕಲೂ ಉರಿ ಲಂಕೆ । ಪೊಕ್ಕು ಪುರವನೆ ದಹಿಸಿ
ಅಕ್ಕರದಿ ವನದಿ ಹಾರೀ ೧೫

ಪ್ರಾಯೋಪವಿಷ್ಟ ಕಪಿ । ಕಾಯ ಸಹಿತರ ನೋಡಿ
ಪ್ರೀಯ ದ್ವಾರ್ತೆಯ ನರುಹಲೂ ॥

ಗೇಯ ಹನುಮನ ತುತಿಸಿ ॥ ರಾಯಗೆರಗುವ ವನದಿ
ಕಾಯ ಕುಪ್ಪಳಿಸುತಿರಲೂ ೧೬

ಕಾತುರತೆಯ ಕಪಿ । ಜಾತೆಗಳ ಸಂತೈಸಿ
ಪ್ರೀತಿಯಿಂ ಮಧುವನವನಳಿದ ॥
ಸೀತೆಯನು ಕಂಡಂಥ । ವಾರ್ತೆಯನು ಪೇಳೆ ರಘು
ಜಾತ ನಿನ್ನನು । ಅಪ್ಪಿದಾ ೧೭

ಎರಡೇಳು ಭುವನದೊಳು । ಇರುವರೇ ನಿನ್ಹೊರತು
ಹರಿಗೆ ಪ್ರೀತ್ಯಾಸ್ಪದನು ಎನಿಸೀ ॥
ಮೆರೆವ ಭಕ್ತಾಗ್ರಣಿಯೆ । ಎರಗುವೆನು ತ್ವತ್ಪದಕೆ
ಹರಿಭಕ್ತಿ ಕರುಣಿಸಯ್ಯಾ ೧೮

ಉದಯಕಾಲದಲೆದ್ದು । ಮುದದಿಂದಲೀ ಪದವ
ಸದಯ ಹೃದಯರು ಪಠಿಸಲೂ ॥
ಬದಿಗ ಗುರು ಗೋವಿಂದ । ವಿಠಲನೋಳ್ ಸದ್ಭಕ್ತಿ
ವದಗಿ ಪಾಲಿಪ ಹನುಮನೂ ೧೯

೧೯೧

ನಮೋ ನಮೋ ಭೀಮಾ ।
ಜೀವೋತ್ತುಮಾಪ್ತ ಜನ ಪ್ರೇಮಾ ಪ

ಕುಮಾನ ಜನ ಸುಪ್ರಮೋದ ವಿನಾಶಕ
ಶಮಾದಿ ಗುಣನಿಧೆ । ಕ್ಷಮಾಪಣಂ ಕುರು ಅ.ಪ.

ಕುಂತಿಯವರ ಕುವರಾ । ಕುರು ಕುಲ । ಕಾನನ ಸುಕುಠಾರ ॥
ಭ್ರಾಂತ ದುಶ್ಯಾಸನ । ಅಂತ್ಯವ ಕಾಣಿಸಿ
ಕಾಂತಾ ಮಣೀಯನು । ಸಂತೋಷ ಪಡಿಸಿದೆ ೧

ಸಿಂಧೂರ ಪುರಿ ನಿಲಯ । ಗೋಪಿ । ನಂದಾನಗತಿ ಪ್ರೀಯ
ವಂದೀಸಿ ಬೇಡುವೆ । ಕುಂದೂಗಳೆನ್ನಯ
ನೊಂದಾನು ಎಣಿಸಿದೆ । ನಂದನ ಪಾಲಿಸೊ ೨

ಪವಿ ಸಮಾನ ಕಾಯ । ನಿರುತ । ಭವ ಮುಖಾದಿ ಗೇಯ ॥
ಅವಿರತದಿ ಗುರು । ಗೋವಿಂದ ವಿಠಲನ
ಸ್ತವನ ಗೈವನ । ಭವವ ಕಳೆಯುವ ೩

೧೯೨

ನಿನ್ನ ನಾನೇನೆಂದೆನೊ । ಗುರುವೆ ಜಗದ್ಗುರು
ನಿನ್ನ ನಾನೇನೆಂದೆನೋ ಪ

ನಿನ್ನ ನಾನೇನೆಂದೆ ನಿಖಿಲ ಜೀವರ ಒಡೆಯ
ಪನ್ನಗ ನಗಧೀಶ ಪತಿತೋದ್ಧಾರನ ದೂತ ಅ.ಪ.

ವಾರಿಧಿಯನೆ ದಾಟಿ । ನಾರಿ ಚೋರನ ಜರೆದು
ನಾರಿಗೋಸುಗ ಕೌರವರ ಸವರೀ ॥
ಮಾರಮಣನೆ ಸಾರತಮನೆಂಬ ವೇದಾಂತ
ಸಾರ ಪೇಳ್ದಗೆ ಶರಣೆಂದೆನು ಅಲ್ಲದೇ ॥
ಭಾರಿ ಕೋತಿಯು ಎಂದೆನೆ - ಕುಪ್ಪುಸ ತೊಟ್ಟು
ನಾರಿಯಾದವನೆಂದೆನೆ - ಕಾವಿಯನುಟ್ಟು
ಪೋರಯತಿಯು ಎಂದನೆ - ಕುಭಾಷ್ಯಗ
ಆರು ಮೂರೆರಡೊಂದರರಿ ಎಂದೆನಲ್ಲದೆ ೧

ನೆರಹಿ ಕಪಿ ಸೈನ್ಯವ । ಶರಧಿಯ ಬಂಧಿಸಿ
ದುರುಳ ರಕ್ಕಸರ ಸಂಹರಿಸೀ ॥
ಜರೆಯ ಸುತನ ಸೀಳಿ ಬದರೀಗೆ
ತೆರಳೀದವಗೆ ನಮೋ ಎಂದನು ಅಲ್ಲದೇ ॥

ಗಿರಿಯ ಪೊತ್ತವನೆಂದನೆ – ರಕ್ಕಸಿಯ
ಬೆರೆದ ನೆಂದವನೆಂದನೆ – ಕೌಪೀನವ
ಧರಿಸಿದವನು ಎಂದನೆ – ಸುಜನರ್ಗೆ
ಪರತತ್ವ ಪೇಳವನೆಂದೆನು ಅಲ್ಲದೆ ೨

ಕಾಚವ ಧರಿಸಿ ನಿ । ಶಾಚರ ಸಂಹಾರಿ
ಯಾಚಕನಾಗಿ ಭಿಕ್ಷಾನ್ನವ ಮೆಲ್ಲುತ ।
ಈ ಚರಾಚರಕೆಲ್ಲ ಕರ್ತು ಹರಿಯೆ ಎಂದು
ನೀಚೋಚ್ಚ ತರತಮ ಪೇಳ್ದೆ ಎಂದೆಲ್ಲದೆ ॥
ಖೇಚರ ನೀನೆಂದನೆ – ವಿರಾಟನೊಳ್
ಪಾಸಚಕ ನೀನೆಂದನೆ – ಭವಾಟವಿ
ಮೋಚಕನೇ ಗುರು ಗೋವಿಂದ ವಿಠಲ
ಅರ್ಚಕನೆಂದು ಸ್ತುತಿಗೈದೆನಲ್ಲದೆ ೩

೧೯೩

ಪವಮಾನ – ಪವಮಾನ – ಪವಮಾನ ಪ

ಪ್ರಾಣೋಪಾನ । ವ್ಯಾನೋದಾನ । ನೀನೆ ಸಮಾನ
ಭಾರತಿರಮಣ । ಹರಿಯ ಗುಣಂಗಳ ಧೇನಿಪ ಸಜ್ಜನ
ಮಾನಸ ಸರಸಿಜ । ಜ್ಞಾನಾರ್ಕನೆ ಗುರು ।
ಜ್ಞಾನ ಸುಪೂರ್ಣ ಪ್ರಧಾನ ಮರುತ ನಿ ।
ನ್ನಾಧೀನವು ಜಗ ನಿನ । ಗೇನು ಬೇಡೆ
ಸುಜ್ಞಾನ ವೀವುದೆಂ । ದಾ ನಮಿಸುವೆನೊ ।
ಗಾನ ಲೋಲ ಹರಿಗಾನಕೆ ಮನ್ಮನ ।
ಪೋಣಿಸುತನುದಿನ । ಪಾಲಿಸು ಪ್ರಾಣಾ ಅ.ಪ.

ಪಂಚ ದ್ವಾರಪ । ಪಂಚರ ಪಾಲಿಪ । ಬಹು ಬಹು ರೂಪ
ಹರಿಯೆ ಸುಚಾಪ । ಕೀರ್ತಿ ಪ್ರತಾಪ । ಹಾರಿದೆ ಆಪ

ಸೀತೆ ಗುಂಗುರ । ಕೊಟ್ಟೆ ಕಪಿವರ । ಫಲಮೆಲ್ಲೆ ಮರ
ಕಿತ್ತಿದೆ ಬೇರ । ಅಕ್ಷ ಕುಮಾರ । ಯುದ್ಧಕೆ ಬರೆ
ಮೃತಿ ಹೊಂದೇ । ರಾಕ್ಷಸ ಗಣ ಭಯ ಪೊಂದೇ ॥
ನಿನ್ನಿಂದೇ । ನಿನ್ನಿಂದೇ ॥ ಇಂದ್ರ ಜಿತವು ಶತ
ಮೋಹನಾಸ್ತ್ರ ಬಿಡೆ ಸಿಕ್ಕಿದೆ ನೀನೆ ನಿನ್ನಿಂದೇ ॥
ಸ್ಥಿರ ಚರ ಜೀವರೊಳಂತರ ಚೇಷ್ಟಕ ಕಾರ್ಯವೆಲ್ಲ ನಿನ್ನದು
ತಂದೇ । ದಣಿಯೆ ಕಾರ್ಯವ ಸಾಧಿಸೆ ಈ ಪರಿ
ಆಲೋಚನೆಯಿಂದ ನೀನೀಂದೆ । ನೀನಿಂದೆ ।
ಭಕ್ತ ವಿಭೀಷಣ । ನುಕ್ತಿಗೆ ರಾವಣ । ನಿತ್ತನು ಆಜ್ಞೆಯ
ಸುತ್ತುವುದರಿವೆಯ । ಪುಚ್ಛಕೆನುತ್ತೆನೆ ।
ಮತ್ತೆ ಬೆಳೆಸೆ ಬಾಲ ಪ್ರಸ್ತಕೆ ಮನ ಮಾಡ್ದೇ ।
ಇಕ್ಕಿಲು ಉರಿ ನೀ ಭಕ್ತಿಯಿಂದ ರಾಮನಿಗೆ ನಮನಗೈದೇ
ಮಾಲೋಲ್ವೈರಿಯ । ಧಾಳಿಗೆದುರು ತನ ಸ। ಬಾಲ ವಹ್ನಿವೈ
ಹಾಳಿಲಿ ಪುರ ಸ್ವಹ । ಲೋಲಗಿತ್ತು । ನೀಲಾಳಕೆ ಸೀತೆಗೆ
ಪೇಳಲು ಮಣಿ ಕೊಡೆ । ಲೀಲೆಯೊಳ್ ಜಲನಿಧಿ
ಕಾಲ್ಗೊಳೆಯಂದದಿ ಹಾರ್ದೆ । ರಕ್ಕಸ ವಧೆ ಸೂಚಿಸಿ
ಸೇತುವೆ ಬಂಧಿಸಿದೇ ॥ ಹರಿ ಕಾರ್ಯವ ನೀ ಸಾಧಿಸಿದೇ ॥
ಭಳಿರೇ ನೀನಜ ಪದವಿಯ ಪಡೆದೇ ।
ಗುಣನಿಧೇ । ಗುಣನಿಧೇ ॥
ಕಂದುಗೊರಳ ಸುರವಂದ್ಯ ಜೀವರ ಭವ
ಸಿಂಧು ಒತ್ತಿಪ ಶತನಂದನೆ ಮಂದನ
ಕುಂದು ಗಳೆಣಿಸದೆ । ಇಂದಿರೆ ಲೋಲನ
ಅಂದ ಪದಾಬ್ಜಾನಂದದಿ ತುತಿಪಾ
ನಂದೈಶ್ವರ್ಯವ ಇಂದೆ ಪಾಲಿಸಿ ಪೊರಿ
ಮಂದಜಾಸನ ಸರಿ । ವಂದೇ ಅಸುರಾರಿ ೧

ಪಾಂಡು ಕುಮಾರ । ವಜ್ರ ಶರೀರ । ಗರ ಆಹಾರ
ಜೀರ್ಣ ಸಮೀರ । ಅರಗಿನ ಮಂದಿರ । ಉರುಹಿದ ವೀರ
ಧರ್ಮಾದ್ಯೈವರ । ವನದಿ ನಿಲುವರ । ಘಟೋತ್ಕಚ ಕುವರ
ಏಕಚಕ್ರ ವರ ನಗರಿಗೆ ಸಾರ್ದೆ । ಬಕನನು ತರಿದೆ ।

ಸ್ವಯಂವರ ಸಾರ್ದೆ । ನೃಪರನು ತರಿದೆ । ದೃಪದಜೆ ವಧಿಸಿದೆ
ಹರಿದಯದಿಂದೆ । ನಿನ್ನಿಂದೇ । ನಿನ್ನಿಂದೇ ॥
ಅಸುವನೀಗೆ ಆ ಜರೆಯೆಳ ಸುತನು । ಅಧ್ವರ ಗೈಯಲು
ಧರ್ಮಜನೂ । ಮಾನವನೀಗಿದ ಕೌರವನೂ
ಶಕುನಿ ಸಾಧಿಸಿದ ದ್ಯೂತವನೂ । ಹರಿಚಿತ್ತ । ಹರಿಚಿತ್ತ
ಮನಕೆ ತಂದು ಸಹ ಧರ್ಮಿಣಿ ಅಗ್ರಜ । ಅನುಜರೊಡನೆ
ವನವೆತ್ತೆ । ಧೌಮ್ಯ ನುಡಿಗಗ್ರಜನಿಂ ರವಿ ಸೇವಿಸಿ
ಅಕ್ಷಯ ಪಾತ್ರೆಯ ಪಡೆಯುತ್ತ । ಮಥಿಸಿ ಕಿಮ್ಮೀ
ರಾದಿಗಳಾರಣ್ಯದಲಿ । ಸತಿಗಡ್ಡೈಸಿದ ಸೈಂಧವ
ನಟ್ಟುತ ಸೌಗಂಧಿಕ ತಂದಿತ್ತ ॥ ತಂದಿತ್ತ
ಪಾಚಕನೀನಿರೆ ಕೀಚಕಾಂತಕ ಸೂಶರ್ಮನ
ಬಿಗಿಯುತ್ತ । ರಣದೊಳು ಗುರು ಸುತನುರು
ವಣಿಗಳಿಗ್ವೊಕರಿಸುತ್ತ ನೆಗೆಯುತ್ತ ನೆಗೆಯುತ್ತ
ಸತಿ ತುರುಬು ಪಿಡಿದ । ಮತಿ ವಿಕಳನುರರ ।
ಕುತ ಚೆಲ್ಲಿ ಕುರು ತತಿಯ ಸವರಿ ಹರಿಗಿತ್ತೆ ।
ಪ್ರಥಮಾಂಗನೆ ಹರಿ ಮತ ಸಾಧಕ ಧರೆ ।
ಯತಿ ಭಾರವ ನಿಳುಹಿದ ಧೀರಾ ॥
ನಿರ್ಜರ ಮಣಿಯೆ ಸು । ಸಜ್ಜನರಘಹರ ಅರ್ಜುನಗೊಲಿದು ।
ಧ್ವಜಾಗ್ರದಿ ನಿಲ್ಲುತ ಮೂರ್ಜಗ ಬೆದರೆ ।
ಗರ್ಜನೆ ಗೈದೆ ತವಾಬ್ಜಪದದರಜ । ಮಜ್ಜನದಲಿ ಭವ
ವರ್ಜಿತ ನೆನೆಪುದು ಜೀಯ ॥ ಭರ್ಜಿಸೆ ದುರುಳರ ।
ಸಜ್ಜುಗೈದೆ ರಥ ಕರಿ ಹಯ ಆಯುಧ ಆಶ್ಚರ್ಯ ।
ಬಹುಪರಿ ಸಾಧಿಸಿದೆ ಹರಿಕಾರ್ಯ ಭಳಿರೆ । ಭಳಿರೆ ।
ಪೃಕ್ಷೋವಪುಷಿ ಪಿಡಿಕೈಯ್ಯ । ನೃಪವರ್ಯ ।
ನೃಪವರ್ಯ ಅಂಗಜ ಪಿತ ಪದ । ಸಂಗಿ ಜನರ ಭವ
ಹಿಂಗಿಸಲೂ ಸಿರಿ । ರಂಗ ಪದಾಂಬುದಿ ಭೃಂಗ ಜ್ಞಾನ ಕಿರ ।
ಣಂಗಳಿತ್ತು ತಮ ಅಂಗಜನರುಗಳ ।
ಲಿಂಗ ಶೀಳಲು ಕರಂಗಳಲೀಗದೆ । ಹಿಂಗದೆ ಪಿಡಿದಿಹ
ಮಂಗಳ ಎನ್ನಂತ । ರಂಗದಲಿಹ ಸಿರಿ ರಂಗನ ತೋರಿಸು
ಎಂಬೆನು ಜೀಯಾ । ನಮಿಸುವೆನು ಹರಿಪ್ರಿಯಾ ೨

ಕಲಿ ಪ್ರಾಬಲ್ಯ । ದೈತ್ಯರು ಎಲ್ಲ ವೈರಂಗಳೆಲ್ಲ
ಸಾಧಿಸೆ ಬಲ್ಲ । ಮಣಿಮನ ಸೊಲ್ಲ । ಕೇಳುತಲೆಲ್ಲ
ಬರುತಿಲ್ಲೆಲ್ಲ । ದುರ್ಮತಗಳ ಬೀರುತ ಬರುತಿರಲು ।
ಜಗಮುಸಿ ಎನಲು । ದೇವರಿಲ್ಲೆನಲು । ಐಕ್ಯ ಪೇಳಲು
ಜ್ಞಾನವಳಿಯಲು । ಸಜ್ಜನ ನೋಯಲು । ಮನವು ಕರಗಲು
ಹರಿಯು ಪೇಳಲು । ನೀ ಬರೊಸೊಲ್ಲು । ಎಲ್ಲೆಲ್ಲು । ಎಲ್ಲೆಲ್ಲು ॥
ತಪವನು ಮಾಡಲು । ನಡುಮನೆ ದ್ವಿಜನು
ವರ ಕೊಟ್ಟನು ತಾನನಂತೇಶ್ವರನು
ಕಂಬದ ಮೇಲೇ ರೋರ್ವ ಪೇಳಿದನು
ನಿನ್ನವತಾರ ವಿಚಾರವನು ।
ನೀನರಿದಂದೇ । ನಿನ್ನಿಂದೇ । ನಿನ್ನಿಂದೇ ॥
ದ್ವಿಜನಲಿ ಬಂದೆ । ಹುರಳಿಯ ತಿಂದೆ ।
ತಿಂತ್ರಿಣಿಯಿಂದೆ ಋಣ ತೀರಿ ತೆಂದೆ । ಹರಿ ಪ್ರೇಕ್ಷರಿಂದೆ ।
ಸನ್ಯಾಸ ಪೊಂದೆ ಗಂಗೆಯ ತಂದೆ ।
ಎನ ತಂದೆ । ಎನ ತಂದೇ ॥
ವ್ಯಾಸರ ಕಂಡುಪದೇಶವಗೊಂಡೆ । ಹೇ ಸಮೀರ ದು–
ರ್ಭಾಷ್ಯವ ಖಂಡಿಸಿ ಶ್ರೀಶ ಸರ್ವೋತ್ತಮ
ಆ ಶಿವ ಮುಖ ಹರಿ । ದಾಸರೆಂದು ಮ ।
ತೀ ಸಮಸ್ತ ಜಗ ಲೇಸು ಸತ್ಯವೆಂದುಪ
ದೇಶಿಸಿದೆ ಗುರುವರ್ಯ । ಗುರುವರ್ಯ ॥
ಇಪ್ಪತ್ತು ಒಂದೆ । ಕು ಭಾಷ್ಯವ ಜರಿದೆ
ಮುವತ್ತಾರೊಂದೆ । ಗ್ರಂಥವ ಮಾಡ್ದೆ
ಶಿಷ್ಯರಿಗ್ವೇಳ್ದೆ । ಮಾಯವ ಜರಿದೆ
ಉಡುಪಿಗೆ ಬಂದೆ । ಗೋಪಿಯಲಿಂದೆ
ಕೃಷ್ಣನ ತಂದೆ । ಇಲ್ಲೆ ನಿಲಿಸಿದೆ
ಅಷ್ಟ ಯತಿಗಳಿಗೆ । ಪಟ್ಟವಗಟ್ಟುತ । ಕೃಷ್ಣನ
ಪೂಜೆ ನಿರ್ದಿಷ್ಟದಿ ನಡೆಸಿದೆ । ದುಷ್ಟಾದ್ವೈತವ
ಕುಟ್ಟಿ ಸುಜನರುಗ । ಳಟ್ಟುಳಿ ಕಳೆಯೆ ವ ।
ರಿಷ್ಟರನೆಲ್ಲರ । ಕಟ್ಟಾಳೆನಿಸಿದೆ ॥

ದಿಟ್ಟ ಮೂರುತಿ ಜಗಜಟ್ಟಿ ಭೀಮ
ಆನಂದತೀರ್ಥ ಗುರು ಗೋವಿಂದ ವಿಠಲನ
ಹೃದದಿಷ್ಟಾನದಿ ತೋರಿಸೆಂದು ತವ
ಪಾದಾಬ್ಜಕೆ ಶಿರ ಇಟ್ಟು ಬೇಡ್ವೆ ಋಜುವರ್ಯ
ಗುರುವರ್ಯ । ಔದಾರ್ಯ । ಔದಾರ್ಯ ೩

೧೯೪

ಪಾವಮಾನಿಯೆ ತವ । ಯಾವ ಮಹಿಮೆಯೊಳೇಕ
ಭಾವ ಪೊಗಳಲು ಆವ । ದೇವತೆಗಳಿಗಳವೇ ಪ

ಶ್ರೀವರನಂಘ್ರಿಯ । ಸೇವೆಗೈವಲಿ ಬಹು । ಧಾವಿಸೀ ।
ಬಹು ಎಚ್ಚರದಿ ಸೇವಿಸೀ ॥
ನಿರುತ ಭಕ್ತಿಯ । ಭಾವದಲಿ ದುರಿ । ತಾವಳಿ ವಿಭಾವಸು
ನೀ ವೊಲಿದು ಭೃ । ತ್ಯಾವಳಿಯ ಪಾಲಿಪೆ । ಸಾರ್ವಕಾಲ ಮ–
ತ್ತೋರ್ವರಿಲ್ಲವೊ । ದೇವರೊತ್ತಮ । ದೇವ ನೀನೇ ಅ.ಪ.

ಕೇಸರಿ ಗೃಹದಿ ನೀ ಲೇಸಾಗಿ ಉದಿಸುತ
ಲೇಸು ರಾಹುಗ್ರಸ್ತ । ಆ ಸೂರ್ಯ ಮೋಚನ ।
ಆಶಿಸುತಲಿ ಹಾರಿ । ದೋಷವ ಕಳೆಯಲು ।
ಯತ್ನಿಸೆ ಆ ಸುಮಹದಾಕಾರ ಶೃಣಗೈದೀ
ವಾಸವನು ನಿನ ಘಾತಿಸಲು ಕುಲಿಶದೀ ಅದಕಂಡು ತವ ಪಿತ
ಶ್ವಾಸಗಳ ಬಲು ಪರಿಯ ರುದ್ಧಿಸಲು । ಮೂಲ್ಲೋಕ ತಪಿಸೇ
ಅಸುರರು ವಿಧಿವಿಧದಿ ಮೊರೆ ಇಡಲೂ । ಆಲೈಸ ನಾಲ್ಮೊಗ
ಶ್ವಾಸ ಸತಿಯನು ಸೂಸಿ ಸೂಚಿಸಲೂ । ಅದಕೇಳಿ ಮತ್ತೆ
ಲೇಸುಗೈಯ್ಯಲು ಮನವ ಮಾಡಲೂ ವಾಸವಾದ್ಯರ
ಶ್ವಾಸ ಮಾಡುವ ತೆರನ ಮಾಡೆಯ್ದೊ
ಕ್ಲೇಶನಾಶನ ಶ್ವಾಸಮಾನಿ ಮಹಾ ಕೃಪಾಳೊ ೧

ಕೋತಿ ರೂಪದಿ ರವಿ । ಜಾತಗೊಲಿದು ರಘು
ಜಾತನ ಸಖ್ಯ ಸು । ಪ್ರೀತಿಲಿ ಗೈಸೀ ॥
ನೀತಿಯಿಂದಲಿ ಸುರಪ । ಜಾತನಸುವ ಹಾನಿ । ಗೈಸೀದೆ ।
ರಾಜ್ಯ ರವಿಜಗೆ ಕೊಡಿಸೀದೆ ಅಂಗದನ ಯುವರಾಜನೆನಿಸೀದೆ ।
ಕಪಿ ಸೈನ್ಯನೆರಹಿ ಮಾತೆ ಸೀತೆಯ ನೀನೆ ಅರಸೀದೆ ।
ಶರಧಿಯನೆ ಹಾರುತ ಯಾತು ಧಾನೀ ಪುರಕೆ ಗಮಿಸೀದೆ ।
ವನಕಿತ್ತು ಖಳಕುಲ ವ್ರಾತ ನಾಶನ ನೀನೆ ಮಾಡೀದೆ ।
ಉರಿಯಿಡಲು ಬಾಲಕೆ ವೀತಿ ಹೋತ್ರಗೆ ಪುರಿಯ ಉಣಿಸೀದೆ ।
ಖ್ಯಾತ ಮಣಿ ರಘು । ಜಾತಗಿತ್ತೆಯೊ । ಮಾತರಿಶ್ವಾ ೨

ಪಾಂಡು ಸುತನೆ ಉ । ದ್ದಂಡ ಗದೆಯನೆ ಪಿಡಿದು
ಚಂಡ ಮಾಗಧನ । ದಿಂಡನೆ ಶೀಳೀ ॥
ತೊಂಡ ವತ್ಸಲ ಶಿರಿ । ಪುಂಡರೀಕಾಕ್ಷ ನಿ ಗರ್ಪಿ । ಸೀ ।
ಮಹಾಧ್ವರವ ಪೂರೈಸೀ ।
ಹರಿಪರ ದೈವವೆನ ಸ್ಥಾಪೀಸಿ । ದುಶ್ಯಾಸನನ
ಮಂಡೆಯ ಪಿಡಿದು ಉರವಣಿಸೀ । ಉರ ಬಗೆದು ಕರುಳ
ಕೊಂಡು ಕೊರಳಲಿ ಧರಿಸೀ । ನರ ಮೃಗನ ಲೀಲೆ
ಕಂಡು ದ್ವಯೆ ಬಲ ತಪಿಸೀ । ಅರಕ್ಷೋಹಿಣಿ ಮುಂ–
ಕೊಂಡು ನೀನೆ ಸಂಹರಿಸೀ । ಕೌರವನ ತೊಡೆ
ಖಂಡಿಸುತವನ ಛೇದಿಸೀ ।
ಅಂಡಜಾಧಿಪವಹಗೆ ಅರ್ಪಿಸಿ । ನಿಂದೆ ಭೀಮಾ ೩

ತೋಯಜಾಕ್ಷನ ಆಜ್ಞೆ। ಪ್ರೀಯದಿಂ ಧರಿಸುತ್ತ
ಕಾಯ ಧರಿಸಿ ಮಧ್ಯ । ಗೇಹರ ಗೃಹದೀ ।
ತಾಯಿ ತಂದೆಗೆ ಅಸ । ಹಾಯಕನೆಂದು । ತೋರಿಸೀ ।
ಬಾಲ್ಯದಲಿ ಸನ್ಯಾಸ ಸ್ವೀಕರಿಸೀ ।
ಪುಷ್ಕರಿಣಿಗೆ ಗಂಗೆಯನು ಕರೆ ತರಿಸೀ । ಅದ್ವೈತ ಸಿದ್ಧಿಲಿ
ಹೇಯ ಬಹಳವ ನೀನೆ ತೋರಿಸೀ । ಬದರಿಯಲಿ ಬಾದ
ರಾಯಣರಿಂದ ಉಪದೇಶೀಸಿ । ಮತ್ತಿಲ್ಲಿ ಬರುತಲಿ
ಧೇಯ ಸಾಧಿಸೆ ಗ್ರಂಥ ಬಹು ರಚಿಸೀ । ಕುಭಾಷ್ಯಗಳ ಬಹು

ಹೇಯತ್ವವನೆ ಸಾಧಿಸೀ । ವಾದ ಕಥೆಯಲಿ
ಮಾಯಿಗಳ ಬಲುಪರಿಯ ಸೋಲಿಸೀ ।
ಕಾರ್ಯ ಸರ್ವವ । ರಾಯ ಕೃಷ್ಣಗೆ ಅರ್ಪಿಸಿದೆ ಮಧ್ವಾ ೪

ಪ್ರಾಪಕ ಸ್ಥಾಪಕ । ರೂಪಾದಿಯಲಿ ಜಗ ।
ವ್ಯಾಪಾರಂಗಳ ಗೈದು । ಕಾಪಾಡ್ವನೇ ॥
ಹೇ ಪ್ರಥಮಾಂಗನೆ ತವ । ರೂಪ ತೋರಿಸು ಎಂಬೆನೇ ।
ಎರಡೊಂದು ಕೋಟಿ ರೂಪಧಾರಕನೆ ।
ಪ್ರತಿರೂಪ ರೂಪಕೆ ಭೇದ ವಿರಹಿತನೆ । ನಿಸ್ಸೀಮ ಗುಣಗಣ
ಶಾಪವರಗಳ ಭೀತಿರಹಿತಾನೆ । ಒಳ ಹೊರಗೆ ಎಲ್ಲ
ವ್ಯಾಪಿಸುತ ಬ್ರಹ್ಮಾಂಡವೆಲ್ಲವನೇ । ಪ್ರಾಣ ದಶವಿಧ
ರೂಪವಧ್ಯಾತ್ಮಾಧಿ ದೈವಗನೇ । ಪ್ರಾಣ ಪಂಚಕ
ರೂಪ ಪಂಚಾತ್ಮಕನ ಪರಿ ವ್ಯಾಪ್ತನೆ । ಅಧ್ಯರ್ಧ ರೂಪಿ
ಅಪ್ರಾಪ್ಯ ಅಶಕ್ತಿ ರಹಿತಾನೇ ।
ವ್ಯಾಪಿಸುತ ಜಗ । ವೀಪರೀಯಲಿ । ಮಾಳ್ಪೆ ಪ್ರಾಣಾ ೫

ಮೋಕ್ಷಾಧೀಚ್ಛೆಯ ವರ್ಜ । ಅಚ್ಛಿನ್ನ ಭಕುತಾನೇ
ದಕ್ಷಿಣಾಕ್ಷಿ ಗೋ । ವತ್ಸ ರೂಪಾನೇ ॥
ಅಕ್ಷಿಯೊಳಿಹ ತ್ರಿದಶಾ । ದ್ವಕ್ಷರಿಂದಲಿ ಸಂ । ಸೇವ್ಯಾನೇ ।
ಕಂಠದಲಿ ನೀ ಹಂಸೋಪಾಸಕನೇ ।
ಶಬ್ದಗಳ ನುಡಿದು ನುಡಿಸುತಿರುವಾನೆ । ಕೂರ್ಮರೂಪಿ ಸ
ಲಕ್ಷಣದಿ ಬ್ರಹ್ಮಾಂಡ ಧಾರಕನೆ । ಸಪುತ ಸ್ಕಂದಗತ
ಇಚ್ಛೆಯಲಿ ಲೋಕಧಾರಕನೆ । ಬೃಹತಿ ಸಾಸಿರ
ವಾಚ್ಯನೆಂದೆನಿಸುತ್ತ ಸ್ತುತ್ಯಾನೆ । ಪತ್ಯಬಿಂಬ ಮುಖ್ಯನೆ
ಈಕ್ಷಿಸುವೆ ಸರ್ವತ್ರ ಹರಿಯನ್ನೆ । ಮುಂದಿನಜ ಅಪ
ರೋಕ್ಷವನು ಪಾಲಿಸೆಂಬೇನೆ ॥
ಮೋಕ್ಷದನೆ ಕರುಣಾ ಕಟಾಕ್ಷದಿ । ಈಕ್ಷಿಪುದು ಪವನ ೬

ಜೇಷ್ಠ ಶ್ರೇಷ್ಠನೆ ಸ । ಮಷ್ಟಿ ರೂಪನೆ ಪವನ ।
ವ್ಯಷ್ಟಿರೂಪದಿ ಜಗದಿ । ವರೀಷ್ಟನೇ ॥

ನಿಷ್ಠೇಲಿ ಭಜಿಪರಿ । ಗಿಷ್ಟಾರ್ಥವನೆ । ಸಲಿಸೂವೇ ।
ಅತಿರೋಹಿತ ವಿಜ್ಞಾನಿ ಎನಿಸಿರುವೆ ॥
ಸಕಲ ಗುಣಗಣ ಭೋಕ್ತೃವೆನಿಸಿರುವೆ । ಸಕಲ ಜ್ಞಾನೋಪ
ದೇಷ್ಟನೆಂದೆನಿಸಿ ಕರೆಸೂವೆ । ಶಿವ ಶೇಷ ಖಗಪರಿ
ನಿಷ್ಟ ಗುರು ನೀನೆ ಎನಿಸಿರುವೆ ಸಜಾತಿ ಗುಣ ಅಯುತ
ವರಿಷ್ಟನು ನೀನು ಆಗಿರುವೆ । ವಿಜಾತ್ಯನಂತ ಗುಣ
ಗರಿಷ್ಟ ರೂಪಿ ಎನಿಸಿರುವೇ । ವೇದಾನುಕ್ತ ಗುಣ
ವಿಶಿಷ್ಟ ರೂಪದಲಿಂದ ಮೆರೆಯುವೇ ॥
ಇಷ್ಟ ಗುರು ಗೋವಿಂದ ವಿಠ್ಠಲ । ಪ್ರೀತಿ ಪಾತ್ರನು ಆದ ಪ್ರಾಣ ೭

೧೯೫

ಪಾಲೀಸೊ ಪವಮಾನ । ಜಯಪತಿ
ಬಾಲಾನೆ ಜಗತ್ರಾಣಾ ಪ

ಕಾಳೀರಮಣ ಹೃತ್ಕೀಲಾಲಜದಿ ತೋರೊ
ಲೀಲಾಮಾನುಷನ । ಬಾಲ ಗೋಪಾಲನ ಅ.ಪ.

ಶ್ವಾಸ ರೂಪಕ ಪ್ರಾಣಾ । ತತುವರಿ ।
ಗೀಶಾ ಭಕ್ತ ಪೋಷಣ ॥
ವಾಸೀಸಿ ತ್ರಿವಿಧರೊಳ್ । ತಾಸೀಗ್ವಂಭೈನೂರು
ಶ್ವಾಸ ಜಪಂಗಳ । ಲೇಸಾಗಿ ನೀ ಗೈದೆ ೧

ಸಕಲ ಜಗವು ವ್ಯಾಪ್ತಾ । ಜೀವರ ।
ಅಖಿಲ ಕರ್ಮದಿ ಶಕ್ತಾ ॥
ಸೃಕು ಸೃವಾದ್ಯಂಗ । ಪ್ರಕಾರದೊಳಗಿ
ದ್ಯುಕುತಿಯಲಿ ಯಜ್ಞ । ಭೋಕ್ತೃವ ಸೇವಿಸುವ ೨

ಕೂರ್ಮರೂಪಿ ಜಗಭಾರ । ಪೊತ್ತಿಹೆ ।
ಪೇರ್ಮೆಯಲಿಂದ ಸಮೀರ ॥

ಧರ್ಮನನುಜ ಸೂ । ಶರ್ಮಾನ ಬಿಗಿದು ಗೋ-
ಧರ್ಮಾ ಕಾಯ್ದ ಭಾವಿ । ಬ್ರಹ್ಮನೆ ಸಲಹೆನ್ನ ೩

ಬೃಹತೀ ನಾಮಕಗನ್ನಾ । ನಾಗುತ ।
ಮಹಾ ಪುರುಷ ಸೇವೆಯನ್ನಾ ॥
ವಿಹಿತ ಮಾರ್ಗದಿ ಗೈದೆ । ಮಹಾ ಮಹಿಮ ವಾಯು
ಸಹೋಬಲೌಜ ಭ್ರಾಜ । ಪಾಹಿ ತೇಜೋರೂಪಿ ೪

ತರಾತಮದ ಸೊಲ್ಲಾ । ಶ್ರೀಹರಿ ।
ಗುರು ಗೋವಿಂದ ವಿಠಲಾ ॥
ಪರಮ ಪರಾರ್ಧ್ಯನುತ । ಪರಮ ರಸನು ಎನು
ತೊರೆವ ಮರುತ ಪದ । ಸರಸೀರುಹಕೆ ನಮೊ ೫

೧೯೬

ಪ್ರಾಣಾ - ದೇವನೇ । ಸಕಲ ಜಗ । ತ್ರಾಣ ನಾದನೇ ಪ

ಗೋಣು ಮುರಿವ ಜನ । ಶ್ರೇಣಿ ಸವರಿ ಯೆನ್ನ
ಪ್ರಾಣ ಪ್ರಾಣ ಪದ । ರೇಣು ವಂತಿರಿಸೊ ಅ.ಪ.

ಪಂಚ - ರೂಪನೇ । ಪ್ರಾಣಾದಿ । ಪಂಚ ಕಾರ್ಯನೇ ।
ವಂಚಿಸಿ ದೈತ್ಯರ । ಸಂಚುಗೊಳಿಸಿ - ನಿ-
ಷ್ಕಿಂಚಿನ ಜನಪ್ರಿಯ ಸಂಚಿಂತನೆ ಕೊಡು ೧

ಹಂಸ ನಾಮವಾ । ಪ್ರತಿದಿನ । ಶಂಸಿಪೆ ಪವನಾ ।
ಹಂಸ ಮಂತ್ರವೇಕ । ವಿಂಶತಿ ಸಾಸಿರ
ಶಂಸಿಸಿ ಷಟ್ಶತ । ಹಂಸನಿಗೀವೆ ೨

ಸರ್ವವ್ಯಾಪಕಾ । ವಿಹಿತಾ ವಿಹಿತ ಸರ್ವ ಪ್ರಾಪಕಾ ।
ಸರ್ವ ಜೀವ ವಿಧಿ । ಪೂರ್ವಕ ಸಾಧನ
ನಿರ್ವಹಿಸುವ ತೆರ । ತೋರ್ದನು ನೀನೇ ೩

ವಿಶ್ವ–ವ್ಯಾಪಕಾ । ಹರಿಗೆ ಸಾ । ದೃಶ್ಯ ರೂಪಕಾ ।
ಅಶ್ವರೂಪ ಹರಿ । ವಶ್ಯನೆನಿಸಿ ಬಹು
ವಿಶ್ವಕಾರ್ಯ ಸ । ರ್ವಸ್ವ ಮಾಳ್ಪೆಯೊ ೪

ದೇವ–ಋಷೀ–ಪಿತ । ನೃಪರು–ನರ । ರೈವರೊಳಗಿರುತಾ ।
ಜೀವರುಗಳ ಸ್ವ । ಭಾವ ವ್ಯಕುತಿಗೈ
ದೀವಿರಿಂಚಾಂಡವ । ನೀ ವಹಿಸಿದೆಯೋ ೫

ಶುದ್ಧ–ಸತ್ವಾತ್ಮದ । ದೇಹದೊ । ಳಿದ್ದರೂ ಲಿಂಗದ ।
ಬದ್ಧ ವಿಹೀನನೆ । ದಗ್ಧ ಪಟದ ಪರಿ
ಸಿದ್ಧ ಸಾಧನ ಅನ । ವದ್ಯ ನೆನಿಸುವೇ ೬

ಹೀನ–ಸತು ಕರ್ಮವಾ । ಪವಮಾನ । ತಾನೇ ಮಾಡುವಾ ।
ಜ್ಞಾನದಿಂದಲೇ । ನೇನು ಮಾಳ್ಪುದನು
ಪ್ರಾಣಪಗೊಂಡು ಕು । ಯೋನಿಯ ಕಳೆವ ೭

ಖೇಟಾ–ಕುಕ್ಕುಟಾ । ಜಲಟ ತ್ರಿ । ಕೋಟಿ – ರೂಪಕಾ
ಕೈಟಭಾರಿ ಪುರ ಕ । ವಾಟ ಅಹಿಪವಿಪ ಲ–
ಲಾಟ ನೇತ್ರಗೆ । ಸಾಟಿ ಮೀರ್ದನೇ ೮

ವಾಙ್ಮನೋ–ಮಾಯನೇ । ದೇವ । ಸ್ತೋಮ ದೊಳಗಿಹನೇ ।
ಶ್ರೀ ಮಹಿನುತ ಶ್ರೀ । ರಾಮಚಂದ್ರ ಗುಣ
ಸ್ತೋಮ ಪೊಗಳ ನ । ಮ್ಮಾಮಯ ಹರ ೯

ಮೂಲೇಶ ಪದವ । ಪಿಡಿದಿಹ । ಪ್ರಾಣನ ಚರಣಾ
ಕಿಲಾಲಜವನು । ಓಲೈಸುತಲಿಹ
ಕಾಲ ಕರ್ಮದಿಹ । ಕೀಳು ಜೀವನ ಪೊರೆ ೧೦

ಭಾವಿ ಬ್ರಹ್ಮನೇ । ಜೀವರ । ಸ್ವಭಾವ – ವರಿತನೇ
ಕಾವ ಕಾಲ್ಪ ಗುರು । ಗೋವಿಂದ ವಿಠಲನ
ಪಾವನ ಚರಣವ । ಭಾವದಿ ತೋರ್ರೈ ೧೧

೧೯೭

ಪ್ರಾಣ ಬಾರೊ ಜಗ । ತ್ರಾಣ ಬಾರೋ ।
ಪ್ರಾಣಿ ಸಕಲ ಕರ್ಮ ಮಾಳ್ಪ । ಜಾಣ ಬಾರೋ ಪ

ಪಂಚ ರೂಪದಿ ಪ್ರಾ । ಪಂಚ ವ್ಯಾಪ್ತ ಬಾರೋ ।
ಹಂಚಿಕೇಲಿ ದೈತೇಯರ । ವಂಚಕನೆ ಬಾರೋ ೧

ಪಾಯುಪಸ್ಥ ಕರ್ಮ । ಗೈವಾಪಾನ ಬಾರೊ ।
ವಾಯುವ ನೀ ನಿರೋಧಿಸೆ । ಕಾಯ್ವರ‍್ಯಾರೋ ೨

ಗೋಣು ಮುರಿವ ಭಾರ ಹೊರೆವ ॥ ವ್ಯಾನ ಬಾರೋ ।
ಪ್ರಾಣ ಪಂಚವ್ಯೂಹ ಮುಖ್ಯ । ವ್ಯಾನ ಬಾರೊ ೩

ಉದಕ ಅನ್ನಕ್ಕವಕಾ । ಶುದಾನ ಬಾರೊ ।
ಮುದದಿ ಶ್ವಾಸಮಂತ್ರ ಜಪ । ಜಾಣ ಬಾರೋ ೪

ವೈದಿಕ ಲೌಕಿಕ ಶಬ್ದ । ನುಡಿಸೆ ಬಾರೊ ।
ಊರ್ಧ್ವಗತಿ ದಾತನೆ । ಉದಾನ ಬಾರೋ ೫

ಪಾನ ಅನ್ನಗಳ್ಹಂಚೆ ಸ । ಮಾನ ಬಾರೊ ।
ಧ್ಯಾನ ವಿಂತು ಈವ ಮುಖ್ಯ । ಪ್ರಾಣ ಬಾರೊ ೬

ಕರುಣಸಾಗರ ದೇಹ ವೀಣೆ । ಚರಿಸೆ ಬಾರೊ ।
ಗುರು ಗೋವಿಂದ ವಿಠಲಾಧಿಷ್ಠಿತ । ಗುರುವೆ ಬಾರೋ ೭

೧೯೮

ಪ್ರಾಣೇಶ ಭಾವಿ ಬ್ರಹ್ಮಾಣಿ ಪತಿ ಎನಿಸಿ ।
ವೀಣೆಯನು ಪಿಡಿಯುತ್ತಲೀ ॥

ಕ್ಷೋಣಿ ಬೆಳಗಾವಿ ಬ್ರಾಹ್ಮಣ ।
ಶ್ರೇಣಿಯಲಿ ನೀ ನಿಂತೆಯೋ ॥
ಕಾಣೆನೊ ನಿನಗೆಣೆಯ । ಕಾಣೆ ಕರುಣಿಗಳರಸ
ಜ್ಞಾನಿ ಜನ ಮನೊವಾಂಛಿತಾ ।
ಮಾಣದಲೆ ನೀ ನೀವೆ । ಪ್ರಾಣ ಪದಕನೆ ಹನುಮ
ಜ್ಞಾನ ಭಕುತಿಯ ಬೇಡುವೇ ೧

ಲಾತವ್ಯರೆಂದೆನಿಸಿ । ವಾತ ಪದ ಅರ್ಹ ಋಜು ।
ಖ್ಯಾತರಂ ತುತಿಸುತಲಿ ಮೆರೆವಾ ॥
ದೂರ ವೆಂಕಣ್ಣಾರ್ಯ । ಪ್ರೀತಿಂದ ನಿನ ನಿಲಿಸಿ ।
ಪೋತ ಭಾವದಿ ಮೆರೆದರೂ ॥
ವಾತ ಸುತ ನಿನ ಕರುಣ । ವ್ರಾತ ಕಿನ್ನಣೆಯುಂಟೆ
ಮಾತುಳಾರಿಯ ದೂತ ಜಯೆ ಜಾತಾ ॥
ಸೋತು ಬಲು ಭವದೊಳಗೆ । ಆರ್ತನಾಗುತ ನಿನ್ನ
ಕಾತುರೆತಲಿಂ ಪ್ರಾರ್ಥಿಪೇ ೨

ವೃಂದಾವನಾರ್ಯರಿಂದ್ವಂದಿತವು ಎಂದೆನಿಪ
ವೃಂದಾವನಿಲ್ಲಿ ಇಹುದೂ ।
ವೃಂದಾರ ಕೇಂದ್ರ ಜನ । ಬಂದಿಲ್ಲಿ ರಾಜರ ।
ವೃಂದಾವನರ್ಚಿಸುವರೋ ।
ನಂದನನು ದಶರಥಗೆ । ನಂದನನು ದೇವಕಿಗೆ ।
ನಂದನನು ಸತ್ಯವತಿಗೇ ।
ಒಂದೊಂದು ಹಯಶೀರ್ಷ । ಅಂದರೂಪಗಳಿಂದ
ನಂದನನು ಭಕ್ತ ಜನಕೇ ೩

ಜೀವಾಂತರಂಗದಲಿ । ಜೀವಾಂತರಾತ್ಮನನ
ದ್ವೈವಿಧ್ಯ ರೂಪ ಸೇವಾ ।
ತಾವಕದಿ ನೀ ಮಾತರಿಶ್ವಾಖ್ಯನೆಂದೆನಿಸಿ
ಸೇವಿಸುವೆ ಘರ್ಮೋಕ್ತದಿ ॥

ಜೀವ ಸಕಲೋತ್ತಮನೆ । ದಾವ ಶಿಖಿ ಭವವನಕೆ
ದೇವ ಬಲಿಭುಜ ಮಾರುತೀ ।
ದೇವಾದಿ ವಂದ್ಯ ಗುರು । ಗೋವಿಂದ ವಿಠ್ಠಲನ
ಭಾವದಲಿ ತೋರಿ ಪೊರೆಯೊ ೪

೧೯೯

ಪಿಳ್ಳಂಕೇರಿಯ ವಾಸ ದಾಸ । ಕಾಯೊ
ಮಲ್ಲಾರಿ ಮಹಿದಾಸ ದಾಸಾ ಪ

ಎಲ್ಲ ಸಚರಾಚರದಿ ವ್ಯಾಪ್ತನು ।
ನಲ್ಲ ಕೃಷ್ಣನ ಸೇವೆ ಬಹಳದ
ಸಲ್ಲಿಸಲು ಬಹುರೂಪ ತಾಳ್ದ ಪ್ರ ।
ಫುಲ್ಲ ವದನಾಂ ಭೋಜ ಹನುಮ ಅ.ಪ.

ದಕ್ಷಿಣಾಕ್ಷಿಯ ವತ್ಸರೂಪಾ । ಸುರ
ತ್ರ್ಯಕ್ಷಾದಿ ಸಂಸೇವ್ಯ ಭೂಪಾ ।
ಕ್ಷೋಭ್ಯತೀರ್ಥ ಶ್ರೀ ಯತಿಪಾ । ಗೊಲಿದು
ಅಕ್ಷಾರಿ ತೋರ್ದೆ ಈ ರೂಪಾ ।
ಕುಕ್ಷಿಯಲಿ ಪಾಪಾತ್ಮ ಪುರುಷನ ।
ಶಿಕ್ಷಿಸುತ ಶೋಭಿಸುತ ನಿತ್ಯ
ಪಕ್ಷಿವಾಹನನಂಘ್ರಿ ಕಮಲವ ।
ಈಕ್ಷಿಸಲು ಸಹಕರಿಪ ಪ್ರಾಣಾ ೧

ಬೃಹತಿ ನಾಮಕ ಮುಖ್ಯ ಪ್ರಾಣಾ ಹರಿ
ಬೃಹತಿ ನಾಮಕ ಗಧಿಷ್ಠಾನಾ
ಮಹತಿ ನಾಮಕ ಬೃಹದ್ವೀಣಾ । ಪಾಣಿ
ಮಹಮುನಿ ವಂದಿತ ಚರಣಾ ।
ಕುಹಕ ಕ್ಷತ್ರಿಯ ಕುಲ ವಿನಾಶಕ ।
ವಹಿಸಿ ಸ್ತ್ರೀ ರೂಪವನು ನಿಶಿಯಲಿ

ಮಹ ದುರುಳ ಅವನನ್ವಯದ ।
ಸಹಜಾತರನು ವಧಿಸಿ ಮೆರೆದ ಸ ೨

ಘೋರ ರೂಪದಿ ತವ ಹಸ್ತಾ । ವೆತ್ತಿ
ನಾರಿ ಚೋರನ ಗುದ್ದಿ ರಕ್ತಾ ।
ಕಾರುವಂತೆಸಗಿ ನೀ । ಮತ್ತಾ । ರಾದ
ಭಾರಿ ರಕ್ಕಸ ಹಾರಿ ಶಕ್ತಾ ।
ಶೌರಿ ಯಾಜ್ಞಧಿ ದುರುಳರಾ ।
ಕೌರವರ ಸಂಹರಿಸಿ ಧುರದಲಿ
ಚಾರು ಮಾಯ್ಗಳ ಗೆಲಿದು ವಾದದಿ ।
ಸಾರ ಸಜ್ಜನರನ್ನು ಪೊರೆದ ೩

ಹಂಸನಾಮಕ ಹರಿ ದ್ವಂದ್ವಾ । ಪಾದ
ಪಾಂಸುವ ಧರಿಸಿ ಮೆರೆಯುವಾ ।
ಹಂಸಾಖ್ಯ ಜಪ ದಿನ ದಿನವಾ । ಪಟ್ಸತ
ವಿಂಶತ್ಯೇಕ ಸಾಸಿರವಾ ।
ಹಂಸವಾಹನ ತಾತನೆನಿಸುವ ।
ಕಂಸಮರ್ದನ ಚರಣಕರ್ಪಿಸಿ
ಸ್ವಾಂಶರೂಪವನಂತ ಧರಿಸುತ ।
ಶಂಸಿಸುವೆ ವೇದೋಕ್ತ ಅನುಕ್ತದಿ ೪

ದೇವ ದೇವರ ದೇವ ದೇವಾ । ಗುರು
ಗೋವಿಂದ ವಿಠ್ಠಲ್ಲ ದೇವಾ ।
ಕಾವ ಕೊಲ್ಲುವ ಸ್ಥಿರ ಚರವಾ । ನಂಬು
ದಾವ ಬಲ್ಲನಿವನ ಮಹಿಮವಾ ।
ಭಾವಿ ಬೊಮ್ಮನೆ ರಮೆಯ ಮುಖದಿಂ ।
ಶ್ರೀವರನ ಮಹಿಮೆಗಳ ತಿಳಿದು
ಭಾವ ಶುದ್ಧಿಯ ಗೈದು ಸುಜನರ ।
ಸ್ವಾವಲಂಬಿಗಳೆನಿಸಿ ಪೊರೆವ ೫

೨೦೦

ಬಂದನು ಹನುಮಂತ ಗೃಹಕೇ । ಕಾರ್ಯ
ಸಂಧಿಸಲು ಅನುಗ್ರಹಕೇ ಪ

ಮಂದಿರವು ಒಂಟೀಲು ವಂಶ ಸಿ ।
ಕಂದರಾಬಾದಿನಿಂದಲಿ
ಸುಂದರನು ಬಹುನಂದ ವೀಯುತ ।
ಮಂದವಾರದಿ ಬಂದ ಹನುಮ ಅ.ಪ.

ವರ್ಷ ಪರೀಧಾವಿ ಶುಭಾ । ಮಾಸ ।
ವೈಶಾಖ ನಿಜ ವಿಶಾಖಾಭಾ
ದಾಸನ ಮನೆಗತಿ ಪ್ರಭಾ । ಯುತ ।
ಆ ಸಮೀರನು ಅಸ್ಮಲ್ಲಾಭಾ ॥
ಹರ್ಷದಲಿ ಹನುಮಂತರಾಯರ ।
ವಶದಿ ಇದ್ದವನಲ್ಪ ಕಾಲದಿ
ವಶವ ಪಡಿಸಲು ವೆಂಕಟಾರ್ಯಗೆ ।
ನಸುಕಿಲೀ ನಸನಗುತ ಬಂದ ೧

ಧರಿಸೀಹ ತುಲಸೀಯ ಮಾಲಾ ।
ಮತ್ತೆ ಪರಿ ಪರಿ ಪುಷ್ಪಗಳ್ಮಾಲಾ
ಶಿರದಿ ಕಿರೀಟವು ಬಹಳಾ । ಮಣಿ ।
ವರ ಖಚಿತ ರತ್ನ ವಿಶಾಲಾ
ಪರಿ ಪರಿಯ ಆಭರಣ ಭೂಷಿತ ।
ಸುರ ವಿರೋಧಿಗಳ್ಹನನ ಶಕುತ
ನೆರೆ ಸುವಾನರ ಸೈನ್ಯ ಪರಿವೃತ ।
ಹರಿಯಲಿಂ ಪಟ್ಟಾಭಿಷಕ್ತ ೨

ಭಕ್ತಿರಿಂ ಭೂಷಿತಿಸ ರಜತ । ಕವಚ ।
ಉತ್ತಮ ಪರಿಯಾಲಂಕೃತ

ಸುಸ್ಥಿರ ದಾಸರ ಆಗತ ।
ನವರಾತ್ರಿ ಅಷ್ಟಮಿಲಾದ್ರುತ
ಕೃತ್ತಿವಾಸಾದ್ಯಮರ ವಂದಿತ ।
ಭೃತ್ಯ ದಶರಥ ಸುತಗೆ ಎನಿಸುತ
ಕರ್ತೃ ಗುರು ಗೋವಿಂದ ವಿಠಲನ ।
ನಿತ್ಯ ಸೇವಾಸಕ್ತ ಮಾರುತ ೩

೨೦೧

ಬೃಹತಿ ನಾಮಾ ಪ್ರಾಣ ಕಾಯೊ ಯೆನ್ನಾ ಪ

ಮಹತಿ ಧಾರೀ ಸ್ತುತ್ಯ ಗುರು ಮುಖ್ಯ ಪ್ರಾಣಾ ಅ.ಪ.

ಕೂರ್ಮರೂಪದಿ ಜಗವ । ಪೇರ್ಮೆಯಿಂದಲಿ ಪೊತ್ತೆ
ನಿರ್ಮಮನೆ ಸಲಹೆನ್ನ । ಧರ್ಮಗೋಪ್ತಾ ।
ಭರ್ಮ ಗರ್ಭನ ಪಿತನ । ಕೂರ್ಮೆ ಎಂತುಂಟೊ ನಿನಗೆ
ನಿರ್ಮಲಾತ್ಮನೆ ಕಳೆಯೊ । ಕರ್ಮ ಬೀಜವನೂ ೧

ಅನಂತ ಜಡ ಜೀವ । ಗಣಗಳನೆ ಧರಿಸುತ್ತ
ಗುಣಾರ್ಣವನು ಸಿರಿ । ಅನ್ನ ನಾಮಕಗೇ ।
ಅನ್ನ ದನ್ನಾದನಿಗೆ । ಅನ್ನ ನೆನಿಸುತ ನೀನು
ಲೀನ ಗೈಸುವಿ ಜಗವ । ಮಾನ ನಿಧಿ ಪ್ರಾಣಾ ೨

ವ್ಯಾಪ್ತೋಪವಾಸಿ ನಿ । ರ್ಲಿಪ್ತ ಬಲದೇವ ಸಂ–
ತಪ್ತ ಸುಜನರ್ಗೆ । ಆಪ್ತ ಬಂಧೋ ।
ಗೋಪ್ತ ನಾಮಕ ಗುರು । ಗೋವಿಂದ ವಿಠಲನ
ಪ್ರಾಪ್ತ ಮಾಡಿಸೊ ದೇವ । ದೀಪ್ತ ಮಾರುತಿಯೇ ೩

೨೦೨

ಭಾರತೀಯ ರಮಣ ಪ್ರಾಣಾ । ಜಗ
ಭಾರ ನಿನ್ನದಯ್ಯ ಪವನಾ ಪ

ಘೋರದುರಿತ ಅಟವಿ ದಹನಾ ।
ಮಾರನಯ್ಯನ ತೋರೊ ಕರುಣ ಅ.ಪ.

ದುರಿತಾಂಬು ನಿಧಿಯ ಘಟಜ ।
ಮೊರೆ ಹೊಕ್ಕೆ ಪಾದ ವನಜ
ಮುರವೈರಿ ಪಾದ ಬಿಸಜ ।
ತೋರಯ್ಯ ಧರ್ಮನನುಜ ॥
ವಾರಿಧಿ ಭವ । ತಾರಿಸೆ ದಯ ।
ವಾರಿಧಿ ತವ । ಕಾರುಣ್ಯವ
ಕೋರುವೆ ಮುರ । ವೈರಿಯ ಪದ ।
ತೋರುತ ಉ । ದ್ಧಾರವಗೈ ೧

ಶ್ವಾಸ ಜಪಗಳ ಮಾಡುತಾ ।
ಈ ಸಮಸ್ತ ಜಗತು ಭರಿತಾ ।
ಈಶಾದಿ ದಿವಿಜ ವಿನುತಾ ।
ನೀ ಸಲಹೊ ಸಕಲ ವ್ಯಾಪ್ತಾ ॥
ವೀಶ ಶೇಷ । ಈಶಾ ಸುರ ।
ಪೇಶಾ ರವಿ । ಭಾಸಾ ಸ್ವಪ್ರ
ಕಾಶಕ ಜಗ । ಪೋಷಕ ಚಿ ।
ತ್ತಾಕಾಶದಿ । ಭಾಸಿಸನಿಲ ೨

ಗುರುವರೇಣ್ಯ ರವಿಜ ಕಪಿಪ ।
ದ್ರುಪದೀಗೆ ತಂದೆ ಪುಷ್ಪ ।
ಗುರು ಗೋವಿಂದ ವಿಠಲ ರೂಪ ।

ತೋರೆಸೋ ಹರಿಪದಾಬ್ಜ ಮಧುಪ ॥
ಅರಿಗಳ ಸಂ । ಹರಿಸಲು ಕರಿ ।
ತುರಗಾಯುಧ । ಸರಿಯಿಲ್ಲವು
ಮರುತನಿಗೆಂ । ದೊರೆವುದು ಶೃತಿ ।
ಪರಿ ಪರಿಯಲಿ । ನಿರಂತರ ೩

೨೦೩

ಮುದ್ದು ಮುಖದಾತ । ಹನುಮಂತ ವಿಖ್ಯಾತ
ಪೊದ್ದಿಹೆನು ನಾ ನಿಮ್ಮ ಭಾವಿ ಬೊಮ್ಮ ಪ

ಉಲಿವ ಘಂಟೆಗಳಿಂದ । ಬಾಲವೂ ಬಲು ಛಂದ
ಚೆಲುವ ಮೂರುತಿ ಭಾವ । ಸುಂದರ ಪ್ರಭಾವ ।
ಕಲಿಮಲವ ಕಳೆವಂಥ । ನಿನಗಿಹುದು ಸತ್ವಂಥ
ಗುರ್‍ವೊಸೂರಲಿ ವಾಸ । ಭಕುತ ಜನ ತೋಷಾ ೧

ಕೃದ್ಧನಾಗದಲೆನ್ನ । ದೋಷ ದುಷ್ಕೃತವನ್ನ
ತಿದ್ದಿ ಸಲಹುದು ಚೆನ್ನ । ಮುದ್ದು ಮೋಹನ್ನ ।
ವಿದ್ವದಾರ್ಯರ ಸ್ನೇಹ । ವಿತ್ತೆನ್ನ ಭವ ಮೋಹ
ಪ್ರಧ್ವಂಸವೆನಿಸಯ್ಯ । ಮಧ್ವಮುನಿ ಜೀಯಾ ೨

ಸತ್ಯಪರೆಯಣ ತೀರ್ಥ । ಮಲಪ್ರಭೆಯ ತೀರಸ್ಥ
ಮೃತ್ಯುಜಯನಿಂ ಸ್ತುತ್ಯ । ನಿನ್ನಂತರಸ್ಥಾ ।
ಸತ್ಯ ಗುರು ಗೋವಿಂದ । ವಿಠ್ಠಲನ ಪದ ದ್ವಂದ್ವ
ಪ್ರತ್ಯಹರ್ ಅರ್ಚಿಸುವ । ನಿತ್ಯ ಮುದಗೊಳ್ವ ೩

೨೦೪

ರಥವಾನೇರಿದ ಶ್ರೀ ಹನುಮಂತ । ಭೀಮ ಬಲವಂತ ಪ

ಗತ ಶೋಕನ ಪದ । ರತಿ ಇಚ್ಛಿಪರಿಗೆ
ಹಿತದಿಂದಲಿ ಸದ್ । ಗತಿಯ ಕೊಡುವೆನೆಂದು ಅ.ಪ.

ತತುವಾಭಿಮಾನಿ ದಿವಿಜರಲ್ಲಿ । ಕಲಹ ಬರಲಲ್ಲಿ
ಉತ್ತಮರ್‍ಯಾರೆಮ್ಮೊಳು ಎಂಬಲ್ಲಿ । ಅದ ಪರಿಹರಿಪಲ್ಲಿ ॥
ವಿತತ ಮಹಿಮ ತಾ । ಗತನಿರೆ ದೇಹದಿಂ
ದಿತರರ ನಿಯಮನ । ಪತಿ ಕರಿಸೆನ್ನಲು ।
ಪ್ರತಿ ಪ್ರತಿ ತತುವರು । ಗತ ವಿಭವದಲಿರೆ
ಪ್ರತಿ ನಿನಗಿಲ್ಲೆಂದೆ । ನುತಲಿ ತೋರಿದ ೧

ದಿತಿ ಕುಲ ಕದಳೀವನ ಕುಠಾರ । ಪರಿಹರಿಸಿದೆ ಸುರರ
ಅತಿಶಯ ಮತಿ ಭ್ರಮೆಯಿಂದವರ । ಶರಧಿಯ ಮಥಿಸುವರ ॥
ಮೃತಿಪಥಕೊಯ್ಯುವ । ಗರ ಉದುಭವಿಸಲು
ಹಿತದಿಂದಲಿ ಜಗ । ಪತಿಯಾಣತಿಗಳ ।
ಪತಿ ಕರಿಸುತ ನೀ । ಪಾತ್ರಗ ಗರವನು
ಮತಿ ವಂತನೆ ಕುಡಿ । ದತಿಶಯ ತೋರಿದೆ ೨

ಮೂರು – ಕೋಟಿಯ ರೂಪ – ಧರನೆ । ಮೂರ್ವಿಕ್ರಮ ಸೇವಕನೆ
ಮೂರು ಲೋಕಂಗಳ ವ್ಯಾಪಕನೆ । ರಕ್ಕಸಾಂತಕನೆ ॥
ಆರು ಮೂರುಗಳು । ಎರಡೊಂದನೆ ದಶ
ನೂರು ಮೇಲೆ ಆ । ನೂರ್‌ರ್ ಜಪಗಳ ।
ಮೂರು ಭೇದ ವಿಹ । ಜೀವರುಗಳಲಿ
ವಾರ ವಾರಕೆ ನೀ । ಗೈಯ್ಯುವೆ ಗುರುವೇ ೩

ದಕ್ಷಿಣಾಕ್ಷಿಯಲಿ ದಕ್ಷನೆ ವತ್ಸ । ರೂಪದಿ ನೀ ಸ್ವೇಚ್ಛಾ
ತ್ರ್ಯಕ್ಷಾದ್ಯರಿಗದ್ಯಕ್ಷನೆ ಮಾತರಿಶ್ವ । ನಿನ್ನಿಂ ಸೇವಿತ ವಿಶ್ವ ॥
ಮೋಕ್ಷಪದೇಚ್ಛಿಸಿ । ಸೇವಿಪ ಜನರನು
ಈಕ್ಷಿಸಿ ಕರುಣ ಕ । ಟಾಕ್ಷದಿ ಅವರನು ।
ಸಾಕ್ಷಿ ಮಾಡುತಲಿ । ಕರ್ಮ ಸಮೂಹವ
ಸಾಕ್ಷಾತ್ತಾಗಿ ತಾನೆ । ಗೈಯ್ಯುವೆನೆಂದು ೪

ಪ್ರಾಣಾ ಪಾನ ವ್ಯಾನ ಉದಾನ । ಸಮಾನ ರೂಪಕೆ – ವಿ–
ಜ್ಞಾನ ಬಲ ಆನಂದ ಸುಪೂರ್ಣ । ಅಮೃತಾಭಿಧಾನ ॥
ಮಾನಿನಿ ದ್ರೌಪದಿ । ಆನನ ಕಮಲಕೆ
ಭಾನುವೆನಿಸುತಲಿ । ದುಶ್ಶಾಸನನ
ಗೋಣ ಮುರಿದುರದಿ । ಕೋಣನ ವಿರಚಿಸಿ
ಶೋಣಿತ ಕುಡಿದಂತೆ । ಕಾಣುವೆನೆಂದು ೫

ವಂಭತ್ತು ಎಂಟು ಸಾವಿರದಲ್ಲಿ । ನಾಡೀ ನದಿಯಲ್ಲಿ
ಅಂಬುಜ – ನಾಭನಿಗೆ ನೀನಲ್ಲೀ । ಗೋಳಕನಾಗ್ಯಲ್ಲಿ ॥
ಕಂಬು ಚಕ್ರಧರ । ಅಂಬುಜ ನಯನನ
ಬೆಂಬಿಡದಲೆ ನೀ । ಸಂಭಮ್ರದಲಿ ನಿನ ।
ಅಂಬಕದಲಿ ನಿನ । ಬಿಂಬನ ಕಾಣುತ
ತ್ರ್ಯಂಬಕನಿಂ ಸಂ । ಭಾವನೆ ಗೊಳ್ಳುತ ೬

ಮಾಘ ಶುದ್ಧವು ನವಮಿಯ ದಿನದಿ । ಪಾರ್ಥಿವ ವತ್ಸರದಿ
ಸಾಗರ ಕಟ್ಟೆ ಯತಿ ಸಮ್ಮುಖದಿ । ಕುಳ್ಳಿರುತಲಿ ರಥದಿ ॥
ನಿಗಮಗಳಿಗೆ ಸಿಗ । ದಗಣಿತ ಗುಣಮಣಿ
ಖಗವರ ಗುರು ಗೋ । ವಿಂದ ವಿಠ್ಠಲನ ।
ಸುಗುಣ ಗಣಂಗಳ । ಬಗೆ ಬಗೆಯಿಂದಲಿ
ಪೊಗಳುವರಘಗಳ । ನೀಗುವೆನೆನ್ನುತ ೭

೨೦೫

ವಾಯುವೆ ತವಚರಣ । ಸುರಶಿರ ಭೂಷಣ
ಉರು । ಗಾಯನ ದರ್ಶನ । ದಾಯವ ನೀವನೆ
ರಾಯ ರಾಜ್ಯವಾಳ್ದ ॥ ಭೋ ಯತಿವರ ॥ಅ॥

ಗೇಯ ಶ್ರೀ ಹರಿಪದ । ದ್ವಯವನು ತೋರಯ್ಯ
ಜೀಯ ಬೇಡಿಕೊಂಬೆ । ಕಾಯ ಶೈಥಿಲ್ಯದಿ
ದಾಯ ವರಿಯದಲೆ । ಮೊರೆ ಹೊಕ್ಕೆ ನಿನ್ನ ಅ.ಪ.

ರಾಮರಾಜ್ಞೆಲಿ । ಆ ಮಹಾಬ್ಧಿಯ ।
ಸೀಮೆ ಮೀರಿ ನಿ । ಸ್ಸೀಮ ಮುದ್ರಿಕೆ
ಭೂಮಿ ಜಾತೆಗೆ । ಇತ್ತು ನಿಶಿಚರ
ಸ್ತೋಮ ಸಂಹರ । ಹೇ ಮಹಾದ್ಭುತ ೧

ಪಾಂಡು ಕುವರ ಅ । ಜಾಂಡ ಸೃಜಿಪನೆ ।
ಹಿಂಡು ಕೌರವ । ದಿಂಡುಗಳ ಶೀಳಿ
ಪಾಂಡುರಂಗಗೆ । ಮಂಡಿಸುತ ಬ್ರ ।
ಹ್ಮಾಂಡ ಭಾರವ । ಗೊಂಡ ಪ್ರಚಂಡನೆ ೨

ಶೌರಿ ಯಾಜ್ಞದಿ । ಕ್ರೂರಿ ಮಾಯ್ಮತ ।
ಭಾರ ಕಳೆದು ವಿ । ಹಾರ ಗೈದೆಯೊ
ಶೌರಿ ಗುರು ಗೋ । ವಿಂದ ವಿಠಲನ ।
ಚಾರು ಚರಣವ । ತೋರಿ ನೀ ಪೊರೆ ೩

೨೦೬

ವ್ಯಾಸತೀರ್ಥರಿಗೊಲಿದು । ವಶನಾಗಿ ನಿಂದಿರುವ
ದಾಸಾಂಜನೇಯ ಪದ । ಬಿಸಜ ಕಾನಮಿಪೇ ಪ

ವಾತಸುತನೆನ್ನಿಸುತ । ಸೀತೆ ರಮಣನ ಕಂಡು
ಸೀತೆ ವಾರ್ತೆಯ ನರುಹಿ । ಖ್ಯಾತ ನೀನಾದೇ ।
ಮಾತರಿಶ್ವನೆ ಹರಿಯ । ಪ್ರೀತಿ ನಿನ್ನೊಳಗೆಂತೋ
ಪೋತ ಭಾವ ದೊಳಾಂತೆ । ಪ್ರೀತಿ ಅಪ್ಪಿಗೆಯಾ ೧

ಮಡದಿ ಶಿಖೆ ಪಿಡಿದೆಳೆದ । ಕಡು ದುರುಳನನು ಪಿಡಿದು
ಕೆಡಹಿ ಅವನನು ಧುರದಿ । ಘುಡಿ ಘುಡಿಸಿ ಬಗೆದೊಡಲನು
ಒಡನೆ ಉರ ರಕ್ತವನು । ಕುಡಿದಂತೆ ತೋರಿ ಜಗ
ನಡುಗುವಂತೆಸಗಿವೆಯೊ । ಕಡುಗಲಿಯ ಭೀಮಾ ೨

ಸನ್ಯಾಸದಾಶ್ರಮವ ಅ । ನ್ಯಾಯದಲಿ ಗೊಂಡು
ಶೂನ್ಯ ಮತ ತತ್ವ ಪ್ರ । ಚ್ಛನ್ನದಲಿ ಪೇಳ್ದಾ
ಅನ್ಯಾಯ ಕಳೆವುದಕೆ । ಜನ್ಯನಾಗುತ ಮಧ್ವ
ಚೆನ್ನ ಪೆಸರಲಿ ಪೇಳ್ದ । ಘನ್ನ ತತ್ವಗಳಾ ೩

ಆರು ಕೋಣ್ಬು ಪರಿಯಾ । ಕಾರದಲಿ ವಲಯಾ
ಮೂರು ಕೋಟಿಯ ಸಂಖ್ಯೆ । ವಾನರಾಕೃತಿ ಬದ್ಧವೂ ।
ಚಾರು ಯಂತ್ರದಿ ಸೌಮ್ಯ । ದಾಕಾರದಲಿ ಜಪದ
ಹಾರ ಪಿಡಿಯುತ ವ್ಯಾಸ । ತೀರಥಿರಿಗ್ವೊಲವೇ ೪

ವಕ್ರ ಮನವನು ತ್ಯಜಿಸಿ । ಚಕ್ರತೀರ್ಥದಿ ಮಿಂದು
ವಕ್ರ ಬಕರಿಪು ನಿನ್ನ । ಚೊಕ್ಕ ರೂಪವ ಸೇವಿಸೀ
ಅಕ್ರೂರ ವರದ ಗುರು । ಗೋವಿಂದ ವಿಠ್ಠಲನ
ಅಕ್ಕರದಿ ಭಜಿಸುವಗೆ । ಚಕ್ರಿಪುರ ವೀವೇ ೫

೨೦೭

ಶ್ವಾಸಮಾನಿಯೆ ನಿನ್ನ - ಆಶ್ರಯಿಸಿರುವವನ
ಕೋಶದೊಳಿರುವಂಥ - ದೋಷಗಳಳಿಯೋ ಪ

ಹಂಸೋಪಾಸನೆಯಿಂದ । ಶಂಸಿಸಿ ಹರಿಪದ
ಪಾಂಸುವ ಧರಿಸುವನೇ ॥
ವಿಂಶತ್ಯೇಕವು ಸಾ । ಹಸ್ರದಾರುನೂರು
ಹಂಸ ಮಂತ್ರ ಗಳ್ಜಾಪಕಾ ೧

ಶ್ವಾಸೋಚ್ಛ್ವಾಸಾಶ್ರಯ । ಕೋಶಗತಗಳಾದ
ದೋಷಗಳನೆ ಕಳೆದೂ ॥
ವಾಸರ್ವಾಸರಕ್ಷಯ । ದೋಷಕಾರಣ ಕ್ರಿಮಿ
ನಾಶವ ಗೈಯ್ಯುವುದೋ ೨

ಜಾಣೆ ಕೋಮಲ ಭಾವಿ । ವಾಣಿಯ ಪತಿ ನಿನ್ನ
ಅಣತಿಯಿಂ ಸುರರೂ ॥
ತ್ರಾಣ ಪೊಂದುತ ಜಗ ತ್ರಾಣರಾಗಿಹರಯ್ಯ
ಪ್ರಾಣ ಭಕ್ತನ ಪೊರೆಯೋ ೩

ಮೊರೆ ಹೊಕ್ಕಿರುವನನ್ನ । ಪೊರೆವಂಥ ಸಂಪನ್ನ
ಮರಳಿ ಅನ್ಯರ ಕಾಣೆನೋ ।
ಮರುತ ಪ್ರಾಣಗಳೊಡೆಯ । ನಿರುತಿಹೆನೀನೆಂದು
ಅನು ಮೊರೆಯನಿಡುವೆನೋ ೪

ನೊಂದಿಹ ಶರಣನ್ನ । ಚಂದದಿ ಸಲಹಯ್ಯ
ನಂದ ಕಂದನ ದೂತನೋ ॥
ಸುಂದರ ಗುರು ಗೋ । ವಿಂದ ವಿಠ್ಠಲ ಭಕ್ತ
ಮಂದಾರ ಸುರ ತುರುವೇ ೫

೨೦೮

ಸತ್ಯ ಭಕ್ತೇಶ । ನತೋಸ್ಮ್ಯಹಂ । ಸತತಂ ಪ

ಪ್ರತ್ಯುಹರರ್ಥಿತ ಸಜ್ಜನ ನಿವಹಂ
ಸ್ತುತ್ಯ ಸದ್ವೈಷ್ಣವ ಸನ್ನತ ಪ್ರಚುರಂ ।
ದೈತ್ಯಹರಂ । ಪೃಥೆ ಕುವರಂ ॥ ಆರ್ತಿದ ಮಾಯ್ಮತ ಧ್ವಂಸಕರಂ
ಪ್ರಾರ್ಥಿತ ಫಲ್ಗುಣ ರಥ ಸ್ಥಿತಂ । ಭೋ ಸುಮತಿ ಜ್ಞಂ ಅ.ಪ.

ಕೇಸರಿ ಗೃಹ ಗರ್ಭಾಂಬುಧಿ ಸೋಮಂ ।
ನೀರುತೇಕ್ಷಿತ ಶ್ರೀ ರಾಮಚಂದ್ರಂ ।
ವಾಯು ಕುಮಾರಂ । ಜ್ಞಾನ ಸ್ವರೂಪಂ ।
ನರಹರಿ ಚರಣ ಸರೋರುಹ ಮಧುಪಂ ।
ಕಪಿವರ ರೂಪಂ ವಿಪನ ಸಂಚಾರಂ ।

ಮತ್ತೇಭಾಹ್ವಯ ಪಂಚಸುಆಸ್ಯಂ । ದೈತ್ಯ ಧ್ವಂಸಕಂ ।
ದುರ್ಗಮ ಭವ ಭಯ ನಿರ್ಗಮೋಪಾಯಂ ।
ಕರ್ಗಳು ಶೀರ್ಷ ಸಮಗ್ರೋಪಾಂಗ ನಿ ।
ರರ್ಗಳ ವ್ಯಾಪ್ತ ಶ್ರೀ ಹರಿ ರೂಪಂ ॥
ವಿತತ ಸಂದರ್ಶನ ಸಚ್ಚಿತ್ಸುಖಮಯ ದೇಹಂ ।
ನಮಾಮಿ ಧರ್ಮಂ ೧

ಕುಂತೀ ಕುಲ ಕುಮುದೋದಯ ಚಂದ್ರಂ ।
ಕರಧೃತ ಅರಿಭಂಜನ ಸುಗದಂ ।
ಜೀರ್ಣತಗರ ಚೂರ್ಣಿತ ಶತ ಶೃಂಗಂ ।
ಕೀಚಕ ಬಕ ಜರೆಜಾದ್ಯಸುರ ಛೇದಂ ।
ಅರ್ಜುನಾಗ್ರಜಂ । ಹತಕುರುಸಕುಲಂ
ಆಯುತ ಹಸ್ತಿ ಸುಬಲಾಢ್ಯ ಶರೀರಂ । ಪ್ರಫುಲ್ಲ ಗುಣಂ
ಸಜ್ಜನ ಪೋಷ ಅಸಜ್ಜನ ನಾಶನ ।
ಆರ್ಜರೂಪಧರ ಋಜುಗಣದೊಳ್ವರ ।
ಭರ್ಜ ಭವಾರ್ಣವ ಊರ್ಜಿತ ಸ್ವಜನ
ಗರ್ಜನೆ ಮಿಶ್ರರ ಲಿಂಗಪಸರಣಂ ।
ಕಲಿವಪು ಹರಣಂ । ಭೋಪ್ರಥಮಾಂಗಂ ೨

ರಜತ ಪೀಠ ಪುರವರ ದಾಸಂ ।
ಹೃತ್ಸರೋಜದೃತ ವೇದವ್ಯಾಸಂ ।
ತತ್ವ ? ವಿಚಾರೆ ಅಸದೃಶ ಮಹಿಮಂ ।
ಭಕ್ತಾಭಯ ಪ್ರದ ವಿತತ ತ್ರೈಭುವಂ ।
ಕರ್ಮೆಂದೀಂದ್ರಂ । ಮುಕ್ತ ಸುಸೇವ್ಯಂ
ದೋಷ ರಹಿತ ಹರಿ ತೋಷಿತ ಹೃದಯಂ । ಸದ್ಗುಣಾರ್ಣವಂ ।
ವಿತತಾತಥ್ಯ ಸಚಾದ್ಧ ಜೈನ । ದುರ್ಮತನಿವಹ ವಿಧ್ವಂಸನ ಶೀಲಂ ।
ಆಸ್ತಿಕ ಹರಿಮತ ಸುಸ್ಥಿರ ಸ್ಥಾಪಿಸು
ವ್ಯಕ್ತ ಭಕ್ತ ಹೃತ್ಸರಸಿಜ ಪೀಠ ವಿನ್ಯಸ್ತ । ಸುರೂಪ ।
ಗುರು ಗೋವಿಂದ ವಿಠಲಜ । ಮಹಿಮಾ ಗಾಧಂ । ಸ್ತೋತ್ರಾ ಸೌಧ್ಯಂ ೩

೨೦೯

ಸಮೀರ ಶುಭಗಾತ್ರ । ರಮಾಧವನ ಪುತ್ರ
ನಿಮ್ಮ ತಾಯಿ ಎನೆ । ಸಮಾಸಮಳ ಪದ
ಕಮಲ ಭಜಿಸುತ ॥ ಬೊಮ್ಮ ಪದವಿ ಕೊಂಡೆ ಪ

ಕೂರ್ಮರೂಪನಾಗಿ । ಬೊಮ್ಮಾಂಡ ಧರ ಪರ
ಬೊಮ್ಮನ ಪರಿಮಿತ । ಪೇರ್ಮೆ ನಿನ್ನೊಳೆಂತೂ
ಅಮ್ಮಮ್ಮ ನಿನಸಮ । ಸುಮ್ಮನಸರೊಳಿಲ್ಲ ಅ.ಪ.

ವೇದದಲ್ಲಿ ಪ್ರತಿ । ಪಾದ್ಯ ಮುಖ್ಯದಿ ।
ನಾದ ಮೂರ್ತಿ ಸು । ಪಾದ ಭಜಕ ವಿ
ನೋದ ದಿಂದಲಿ । ಭೋದಿಸುವೆ ಶೇ ।
ಷಾದಿಗಳಿಗೆ ಅ । ಗಾಧ ಮಹಿಮನೆ ೧

ಗಾನಲೋಲನ । ಗಾನ ಮಾಡ್ವ ಮ ।
ಹಾನುಭಾವ ಸು । ಶ್ವಾಸ ರೂಪದಿ
ಮೌನಿ ಸುರರಿಗೆ । ಗಾನ ಅನು ಸಂ ।
ಧಾನ ಗೋಪ್ಯದಿ । ಪ್ರಾಣ ಸಲಹೋ ೨

ವ್ಯಾಪ್ತ ಜಗಹರಿ । ವ್ಯಾಪ್ತಿ ಎಲ್ಲೆಡೆ
ಪ್ರಾಪ್ತ ನಿನ ಸಮ । ಆಪ್ತರಿಲ್ಲವೊ
ಗೋಪ್ತ ಗುರು ಗೋವಿಂದ ವಿಠಲನ
ವ್ಯಾಪ್ತಿ ತಿಳಿಸು ಸು । ದೀಪ್ತ ಮಾರುತಿ ೩

೨೧೦

ಸುಂದರೇಶ ಸಲಹೊ ಕರಿಗಿರಿವಾಸ ।
ಸುಜನರ ಪರಿ ಪೋಷ ಪ

ಇಂದಿರೆಯರಸನ ದ್ವಂದ್ವ ಪಾದದಲಿ
ಅಂದ ಭಕುತಿಯಿತ್ತು ಛಂದದಿ ಸಲಹೋ ಅ.ಪ.

ಆರೂ ಕಾಯುವರಿಲ್ಲವೊ ದೊರೆಯೇ ।
ನಾ ನಿಗೊಂದ್ದೊರೆಯೇ
ಮೂರು ಜಗಗಳ ಪೊತ್ತಿಹೆ ಧೊರೆಯೇ । ನಿನಗಾರೆಣೆಯೇ ॥
ಅಪಾರ ಗುಣಗಳಿಂದ । ಸಾರಿ ಭಜಿಸುವಂತೆ ೧

ತಂದೇ ಮುದ್ದು ಮೋಹನರಿಂದ । ಆರಾಧನೆ ಛಂದ
ದಿಂದ ಕೈಗೊಳ್ಳುತ ಆನಂದ । ತೀರ್ಥರೆ ನಲವಿಂದ ॥
ಬಂದ ಸುಭಕುತರ । ವೃಂದಕೆ ಪರಮಾ
ನಂದವ ಕೊಡುತಲಿ । ಛಂದದಿ ಮೆರೆವ ೨

ಪರ್ವತವ ನೆಗಹಿ ತುರು ಕರು ಪೊರೆದ । ಸುರರೊಡೆಯನ ಗರ್ವ
ಪರಿಹರಿಸೀ ವ್ರಜ ಜಂಗುಳಿ ಕಳೆದ । ಸರ್ವೋತ್ತಮನಾದ ॥
ಗುರು ಗೋವಿಂದ ವಿಠಲನ । ಚರಣ ಸರೋಜದಿ
ಉರುತರ ಭಕುತಿಯ । ಕರುಣಿಸಿ ಕಾಯೋ ೩

೨೧೧

ಹನುಮಂತಾ । ಮದ್ಗುರುವೆ । ಹನುಮಂತ ಪ

ಹನುಮಂತ – ಗುಣಗಣ ನಿಲಯ । ಮುನಿ
ಸನಕಾದಿ ಜನ ಮನಾಲಯ । ಆಹ
ಮನ ಆದೀಂದ್ರಿಯ ನಿಯ । ಮನವನೆ ಮಾಡುತ್ತ
ಅನುನಯದಿಂದಲಿ । ಪಾಲಿಪೆ ಸರ್ವರ ಅ.ಪ.

ಅಂಜನೆ ಕುವರನೆ ಹನುಮ । ಚಿಣ್ಣ
ಕಂಜ ಸಖಗೆ ಹಾರ್ದನಮ್ಮಾ । ಇಂದ್ರ

ಸಂಜಯನನ ಹೊಡೆದನಮ್ಮಾ । ಶಿಶು
ಅಂಜಲಿಲ್ಲವು ನೀ ನೋಡಮ್ಮಾ । ಆಹ
ಸಂಜಯಪಿತ ತನ್ನ । ಶ್ವಾಸ ನಿರೋಧಿಸೆ
ಅಂಜಲು ಮೂರ್ಜಗ । ಕಂಜಾಕ್ಷ ಸಲಹೀದ ೧

ರಾಮರ ಭಂಟ ಧೀಮಂತಾ । ಬಲ
ಭೀಮ ಭಯಂಕರ ಅಮಿತಾ । ರೂಪ
ನಾಮಗಳ್ ಪೊಂದುವ ಸತತಾ । ನೋಡು
ಕಾಮನಯ್ಯನ ಕಾಣ್ವ ನಿರತಾ । ಆಹ
ಭೀಮ ಪ್ರಾಣಾನಂದ । ಮುನಿಯೆಂದು ಕರೆಸುತ್ತ
ಬೊಮ್ಮನ ಪದವಿಯ । ಸಮ್ಮುದದಿ ಪಡೆವಂಥ ೨

ಹರಿಯೆ ನೀನು ಪ್ರತಿಬಿಂಬಾ । ಪುರ
ಹರಿಗೆ ನೀನು ಗುರು ಬಿಂಬಾ । ಸುರಾ
ಸುರರ ನೀದಂಡಿಪಾ ಡಿಂಬಾ । ನಿನ್ನ
ವರಣ ವರ್ಣಿಸುವುದು ಗುಂಭಾ । ಆಹ
ಹರ ಮುಖಾದ್ಯರು ನಿನ್ನ । ನಿರುತದಿ ಸುತ್ತಿಸುತ್ತ
ಪರಿಪರಿ ಗುಣರೂಪ । ಕ್ರಿಯೆಗಳ ನೋಳ್ಪರು ೩

ನಿನಗೆಣೆ ಯಾರೊ ಸಮೀರ । ಮಹ
ವನಧಿಯ ದಾಟಿದ ಧೀರ । ದೈತ್ಯ
ಜನರ ನೀ ಸವರಿದ್ಯೋ ವೀರ । ದಶಾ
ನನನ ನೀ ಸದದೆಯಾ ಶೂರ । ಆಹ
ಜನಕಜ ರಮಣನ । ನೆನೆ ನೆನೆ ನೆನೆಯುತ
ಅನುಗಾಲ ಕಿಂಪುರುಷ । ಖಂಡದಲಿರುವಂಥ ೪

ಕುರುಕುಲ ವನಕೆ ಕುಠಾರ । ದುಷ್ಟ
ಜರೆಯ ಸುತನ ಸೀಳ್ದ ಧೀರ । ಸತಿ
ತರಳೆ ದ್ರೌಪದಿ ಕಾಯ್ದ ವೀರ । ದುರುಳ
ದುರ್ಯೋಧನನ ಅಸು ಹರ । ಆಹ

ಕುರುವಂಶಕನಳನೆ । ಧರಣಿ ಭಾರವ ನಿಳುಹ
ನರಮೃಗ ಲೀಲೆಯಂ । ದರಿಗಳ ತರಿದಂಥ ೫

ಯತಿಕುಲ ಕುಮುದಕೆ ಸೋಮ । ದಶ
ಮತಿಯೆ ಮಾಯ್ಗಳ ತರಿದ ಭೀಮ । ಅಹಂ
ಮತಿಯ ಕಳೆ ಸಾರ್ವಭೌಮ । ಜಗ
ತ್ಪತಿಗೆ ನೀ ಸುಪವಿತ್ರ ಧಾಮಾ । ಆಹ
ವಿತತ ಶ್ರೀ ಹರಿಯೆ ಸ । ರ್ವೋತ್ತಮನೆಂಬಂಥ
ಸೂತ್ರಾರ್ಥ ರಚಿಸಿ ಸ । ಚ್ಛಾಸ್ತ್ರವನರುಹಿದ ೬

ಪವಮಾನ ಪೊಗಳುವೆ ನಿನ್ನ । ಭವ
ಭವಣೆಯ ಪಡಲಾರೆ ಘನ್ನ । ಗುರು
ಗೋವಿಂದ ವಿಠಲಾನ । ಚರಣ । ತೋರೊ
ತವಕದಿ ನಿನ್ನೊಳು ಪವನ । ಆಹ
ನವ ವಿಧ ಭಕುತಿಗೆ । ನೆಲೆಯು ನೀನಾಗಿಹೆ
ತವಕೀರ್ತಿ ಪೊಗಳಲು । ಶಿವನಿಗು ಅಳವಲ್ಲ ೭

೨೧೨

ಹನುಮಂತ – ಹನುಮಂತ ಪ

ಗುಣನಿಧಿ ಹರಿಪದ । ವನಜ ಸದಾರ್ಚಕ ಅ.ಪ.

ಅಂಜನಿ ಕುವರ ಧ । ನಂಜಯ ರಕ್ಷಕ
ಭಂಜಿಸಿ ದೈತ್ಯ ಪ್ರ । ಭಂಜನಾಖ್ಯ ೧

ಬಕ ಮುಖ ಹನ ಕೀ । ಚಕ ಧ್ವಂಸಕ
ವಿಕಳರ ಗೈದರಿ । ದುಷ್ಕುಲ ನಾಶಕ ೨

ಮತ್ತ ಮಾಯಿಗಜ । ಕುತ್ತಿದ ಕೇಸರಿ
ವತ್ತಿ ಪೇಳ್ದೆ ಹರಿ । ಉತ್ಕರ್ಷಗಳನು ೩

ಇನಜನ ಪಾಲಕ । ಇನಜ ಗರ್ವ ಹರ
ಮಣಿಮನ ಮತ । ವನ ಅನಲ ದಾವಾಖ್ಯ ೪

ಹರಿ ಪ್ರಥಮಾಂಗನೆ । ಉರಗ ವಿಪ ಗುರು
ಗುರು ಗೋವಿಂದ । ವಿಠಲನ ಸೇವಕ ೫

ಸರಸ್ವತಿದೇವಿ

೨೧೩

ಗಾಯಿತ್ರಿ – ಶುಭಗಾತ್ರಿ ಪ

ಮಾಯಾಭಿಧೆ ಪತಿ । ವೀರ್ಯಜಾತ ಶುಭ
ಕಾಯ ಮಮಾಭಿಧ । ಆರ್ಯನ ಪ್ರಿಯಸತಿ ಅ.ಪ.

ವೀಣೆ ಧರಳೆ ಹರಿ । ಗಾನ ಗುಣಂಗಳ
ಜಾಣೆಯೆ ಈ ತನು । ವೀಣೆಯಂತೆಸಗು ೧

ನೀರಜಾಕ್ಷಿ ನಿನ । ಗಾರಿಲ್ಲವು ಸಮ
ಮೂರು ಲೋಕದಲಿ । ಮುರಾರಿಯನುತೆ ೨

ಕಾವ ಕೊಲ್ವ ಗುರು । ಗೋವಿಂದ ವಿಠಲನ
ಓವಿ ಹೃದಂಬರ । ತಾವಿಲಿ ತೋರಿಸು ೩

೨೧೪

ದೇವಿ ಶ್ರೀಸರಸ್ವತಿಯೆ ಕಾಯೇ ಪ

ಮಾವಿನುತ ಹರಿನಾಮ ಸಂತತದಿ । ನುಡಿಸೀ ಅ.ಪ.

ಶೈಲಜೆಯ ಪತಿ ಮಾತೆ । ನಾಲಗೆಯಲೀ ನಿಂತು
ಕಾಲ ಕಾಲಕೆ ಹರಿಯ । ಲೀಲಾತಿಶಯವಾ ।
ಪೇಳಿಸುತ ಜಿಹ್ವಾಂಗ । ಸಾರ್ಥಕೆನಿಪುದು ಎಂದು
ಕೇಳುವೆನು ವರ ನಿನ್ನ । ಪಾಲಿಪುದು ಅದನ ೧

ವಿದ್ಯೆಗಳಿಗಭಿಮಾನಿ । ಬುದ್ಧಿ ಪೂರ್ವಕ ಬೇಡ್ವೆ
ತಿದ್ದಿ ಎನ್ನಲಿ ಇಹ ಅ । ವಿದ್ಯೆಗಳನೆಲ್ಲಾ ।
ಮದ್ವೇಶ ಹರಿಯೊಲಿವ । ಶುದ್ಧ ಸಾಧನವಿತ್ತು
ನಿದ್ರೆಯಿಂದೆಚ್ಚರಿಸಿ । ಬುದ್ಧಿ ಪ್ರದಳೆನಿಸೇ ೨

ಅಜನ ಅರ್ಧಾಂಗಿನಿಯೆ । ಪ್ರಜ್ವರವ ಕಳೆವಂಥ
ಸುಜನ ಸಂಗವನಿತ್ತು । ರಜ ದೂರನೆನಿಸು ।
ಅಜನ ಜನಕನು ಗುರು । ಗೋವಿಂದ ವಿಠಲ । ಪದ
ಅಬ್ಜವನು ತೋರವ್ವ । ನಿಜ ಹೃದಾಬ್ಜದಲೀ ೩

೨೧೫

ಬಾಲಕನ ಮೊರೆಕೇಳು । ಸಿರಿ ಸರಸ್ವತಿಯೇ ಪ

ಏಳಲವ ಮಾಡದಲೆ । ಭಕುತಿ ಭಿಕ್ಷೆಯ ನೀಡೇ ಅ.ಪ.

ಹೃದಯ ಬರಿದಾಗಿಹುದು । ಮಧುಮಥನಸೂನಾಮ
ಸುಧೆಯನುಣಿಸುತ ದಿವ್ಯ । ಯದುವರನ ರೂಪಾ ।
ಸದಯದಲಿ ನಿಲ್ಲಿಸುವುದು । ಹೃದಯ ಗಹ್ವರದಲ್ಲಿ
ವಿಧಿ ಸತಿಯೆ ಹರಿಸುತೆಯೆ । ಬುಧಜನಾನತೆಯೆ ೧

ನಾರಿಮಣಿಯೇ ಕೇಳು । ಮೂರಾರು ವಿಧ ಭಕುತಿ
ವಾರಿಜಾಕ್ಷನ ಪಾದ । ವಾರಿಜ ದೊಳಿರಿಸೀ ।
ಸಾರ ತತ್ವವ ತಿಳಿಸಿ । ಘೋರ ಭವ ಉತ್ತರಿಸು
ಮಾರಾರಿ ವಂದಿತಳೆ । ಚಾರುತರ ಗಾತ್ರೇ ೨

ಅರಸಿ ನೋಡಲು ನಿನಗೆ । ಸರಿಯುಂಟೆ ಭುವನ ಮೂ–
ರರ ವಳಗೆ ಗುಣಶ್ರೇಣಿ । ವರ ನೀಲವೇಣೀ ।
ಗುರುವಂತರಾತ್ಮ ಗುರು । ಗೋವಿಂದ ವಿಠ್ಠಲನ ।
ಪರಿಪರಿಯ ಚರಿತೆಗಳ । ಸ್ಫುರಿಸುವುದು ಸತತಾ ೩

೨೧೬

ಶಾರದೆ ಪೊರೆಯೆನ್ನಾ – ಮಾತೆಯೆ
ತೋರಿಸಿ ತವ ಚರಣಾ ಪ

ಶಾರದೆ ತವ ಪದ । ಸಾರಿ ಭಜಿಸುವೆನು
ದೊರಗೈವುದೆನ್ನ । ಭಾರಿ ಅಜ್ಞಾನವ ಅ.ಪ.

ವೀತ ದುರಿತೆ ಖ್ಯಾತೇ । ಶಿವ
ಮಾತೆಯೆ ಸದ್ಗುಣ ಗಣ ವ್ರಾತೇ ॥
ಶಾತಕುಂಭೋಧರ । ಪ್ರೀತಿ ವಿಷಯ ಜಗನ್
ಮಾತೆಯೆ ಹರಿಗುಣ । ಗಾಥೆಯ ಗೀತೆಯೆ ೧

ಜಯಾ ತನುಜೆ ವಾಣೀ । ವೇದಾತ್ಮಿಕೆ
ಗಯಾ ಅ । ಸುರಾರೀ ಭಜನೀ ॥
ಪ್ರಯಾಸರಹಿತದಿ । ಕ್ರಿಯಾ ಸು ಪೂರ್ಣಳೆ
ನಿಯೋಜಿಸೆನ್ನ ಮತಿ । ಹಯಾಸ್ಯ ಪದದಲಿ ೨

ಈಶಾಹಿ ವಿಹಗೇಂದ್ರಾ । ಸ್ವರ್ಗಾ
ಧೀಶಾಧಿಪರು ಛಂದಾ ॥
ಮೀಸಲು ಮನದಲಿ । ಕ್ಲೇಶಗಳಿಲ್ಲದೆ
ತಾಸು ತಾಸಿಗೆ ನಿನ್ನೆ । ಸೂಸಿ ಭಜಿಸುವರು ೩

ನರಹರಿ ಗುರುಭಕ್ತೆ । ಬ್ರಾಹ್ಮೀ
ಸರಸ್ವತಿ ಗಾಯಿತ್ರೀ ॥

ಅರ ವಿದೂರ ನರ । ಹರಿಯನು ಭಜಿಸುವ
ಸುರ ಚಿರ ವಾಣಿಯ । ಕರುಣಿಸು ವಾಣೀ ೪

ಕಾವ ಕರುಣಿ ನಮ್ಮಾ । ಗೋಗಳ
ಕಾವ ಹರಿಯು ಪರ ಬೊಮ್ಮಾ ।
ಭಾವಜ ಪಿತ ಗುರು । ಗೋವಿಂದ ವಿಠಲನ
ಓವಿ ಭಜಿಸುವಂಥ । ಭಾವವ ನೀಯೇ ೫

೨೧೭

ಶಾರದೇ ಮಜ್ಜನನಿಯೆ - ಶಾರದೇ ಪ

ಶಾರದೆ ಶರಣೆಂಬೆ ನಿನ್ನ । ಚರಣ
ನೀರಜ ದ್ವಂದ್ವಕೆ ಯನ್ನ । ಆಹ
ಕಾರುಣ್ಯದಲಿ ಹೃದಯ । ವಾರಿಜದೊಳು ಮೆರೆವ
ಮಾರಮಣನ ದಿವ್ಯ । ಮೂರುತಿ ತೋರಿಸು ಅ.ಪ.

ವಾಣಿ ನಿಲ್ಲುದು ಎನ್ನ ವದನಾ । ದಲ್ಲಿ
ನೀ ನುಡಿಸೇ ಹರಿ ಗಾನಾ । ಕರ
ವೀಣೆ ನುಡಿಪಂತೆ ಯೆನ್ನಾ । ದೇಹ
ವೀಣೆ ನುಡಿಸೇ ನೀ ಮುನ್ನಾ । ಅಹ
ವೇಣಿ ಮಾಧವನಾದ । ಶ್ರೀನಿವಾಸನ ಕಾಂಬ
ಜ್ಞಾನಾನು ಸಂಧಾನ । ಮಾಣದೆ ಎನಗೀಯೇ ೧

ಅಜ್ಞರೊಳಾಗ್ರಾಣಿ ನಾನು । ಇಂಗಿ
ತಜ್ಞಳೆ ನಾ ಪೇಳ್ವುದೇನೂ । ಆ
ಭಿಜ್ಞರೊಳಿರಿಸುವುದಿನ್ನೂ । ಸರ್
ವಜ್ಞರ ಮತ ತಿಳಿಸಿನ್ನೂ । ಆಹ
ವಿಜ್ಞಾನ ಸುಸಖ ಬ್ರಹ್ಮ । ಯಜ್ಞಾನೆ ಜಗಕೆಂಬ
ಸುಜ್ಞಾನ ಸುಖವಿತ್ತು । ಪ್ರಾಜ್ಞನ ಕಾಣಿಸೇ ೨

ವ್ರತನೇಮ ಉಪವಾಸ ಒಂದೂ । ಮಾಡಿ
ಕೃತಕೃತ್ಯನಲ್ಲಮ್ಮ ಬಂಧೂ । ಕೃತಿ
ಪತಿಯೆ ಎನಗೆ ಗತಿ ಎಂದೂ । ದ್ವಂದ್ವ
ಕೃತಿಗಳ ನರ್ಪಿಪ ಸಂದೂ । ಆಹ
ಹಿತದಿ ತಿಳಿಸಿ ಗುರು । ಗೋವಿಂದ ವಿಠಲನ
ಸುತನಾಗಿ ಮೆರೆವಂಥ । ಚತುರಾಸ್ಯ ಪ್ರಿಯರಾಣಿ ೩

೨೧೮

ಶ್ರದ್ಧಾ ಪಾಲಿಸೇ ಮಾತೇ । ನಂಬಿದೆ ಶೇಷಾ
ರುದ್ರಾದಿ ಸುರ । ವಿನುತೇ ಪ

ಉದ್ಧರಿಸುವುದೆನ್ನ । ಅವಿದ್ಯವ ನೀಗಿ ಹೇ
ಬುದ್ಧ್ಯಭಿಮಾನಿ ಸ । ದ್ಬುದ್ಧಿ ಪ್ರದಾತೇ ಅ.ಪ.

ವೇದಾದಿಗಳ ಮಾನೀ । ಚತುಃ ಷಷ್ಟಿಕಲಾ
ವಿದ್ಯಾದಾಯಿನಿ । ಮಧು ಪಾನೀ ॥
ಮೋದತೀರ್ಥ ಮತ । ಭೋದಿಸಿ ಎನ್ನ ಕು
ಮೋದ ಕಳೆದು ಸ । ನ್ಮೋದವ ಪಾಲಿಸು
ಎಂಬೆ ಸುನಿತಂಬೆ । ಜಗದಂಬೆ । ಚಿನ್ನ ಪುತ್ಥಳಿ ಬೊಂಬೆ ೧

ಮಂದಸಗಮನೆ ಕೃತಿ ಕುಮಾರಿ । ಬ್ರಹ್ಮಮಾನಸ
ಮಂದಿರೆ ಸಜ್ಜನೋದ್ಧಾರಿ ॥
ಚಂದಿರೆ ಎನ ಮನ । ಮಂದಿರದಲಿ ಬಲು
ಸುಂದರ ಶ್ರೀ ಗೋ । ವಿಂದ ಪಾದಾಬ್ಜವ
ತೋರೆ – ಹೇ ನೀರೆ – ವೈಯ್ಯಾರೆ । ಸದ್ಗುಣಗಣ ಗಂಭೀರೆ ೨

ಚತುರವದನನ ರಾಣೀ । ದೀರ್ಘಾಹಿ ವೇಣೀ
ಧೃತ ವೀಣಾ ಪಾಣಿ – ನಿತ್ಯ ಕಲ್ಯಾಣೀ ॥
ಚತುರ ಮೂರುತಿ ಗುರು । ಗೋವಿಂದ ವಿಠಲನ

ಸತತ ಭಜಿಪ ಮತಿ । ಸುಸ್ಥಿರದಲಿ ಕೊಡು
ನೀನೆ – ಬಲು ಜಾಣೆ : ಎನ್ನಾಣೆ । ಪತಿತ ಪಾವನ್ನೇ ೩

೨೧೯

ಸರೋಜದಳ ನೇತ್ರೀ । ಅಜಸತಿ ಗಾಯತ್ರೀ
ಪದ । ಸರೋರುಹವ ನಮಿಪೆ । ಸುರ ಜೇಷ್ಠನ ಪ್ರಿಯೆ
ಮುರಾರಿ ಪದ ತೋರು ॥ ಕರುಣವ ನೀ ಬೀರು ಪ

ಭಕ್ತ್ಯಾಭಿಮಾನಿಯೆ । ಚಿತ್ತವ ವ್ಯಾಪಿಸಿ
ಭೃತ್ಯನ ಪೋಷಿಸು । ನಿತ್ಯ ಹರಿಯ ಪದ
ಚಿತ್ತದೊಳಗೆ ಇರಸು । ಗುಣವ ಪೊಗಳಿಸು ಅ.ಪ.

ವೀಣೆ ಹಸ್ತಳೆ । ಗಾನಲೋಲ ಪ–
ದಾನುರಾಗದಿ । ಗಾನ ಗೈವೆ ವೇ ।
ದಾನುಸಾರ ಬ್ರ । ಹ್ಮಾಣಿ ತುತಿಸುತ
ವೇಣುಗೋಪನ । ಪ್ರೀಣ ನವ ಗೈವೇ ೧

ಹಂಸವಾಹಳೆ ಹಂಸ ಹರಿಪದ
ಪಾಂಸು ಶಿರದಿ ಅ । ಸಂಶಯದಿ ಧೃತ
ಅಂಶ ಅವತಾ ರಾಂಶದೊಳು ನಿ–
ಸ್ಸಂಶಯಳೆ ಪದಸ । ಪಾಂಸು ಯಾಚಿಪೆ ೨

ನಾಲಿಗಿಂದಲಿ । ಬಾಲ ಗೋಪನ ।
ಶೀಲ ಗುಣಕ್ರಿಯ ಜಾಲ ನುಡಿಸು ವಿ
ಶಾಲಫಣೆ ಕಮ । ಲಾಸನನ ಪ್ರಿಯೆ ।
ಪೇಳಲಳವೆ ವಿ । ಶಾಲ ತವಗುಣ ೩

ವೇದವಾದ ವಿ । ನೋದಿ ಸರ್ವದ
ಮೋದತೀರ್ಥರ । ಭೋದದಲಿ

ಸನ್ಮೋದವಿತ್ತು ಭ । ವಾಬ್ಧಿ ದಾಟಿಸು
ಹೇ ದಯಾಂಬುಧೆ । ಪಾದ ನಂಬಿದೆ ೪

ಕಾವ ಕೊಲ್ವನು । ಮಾವಿನೋದಿಯ
ಭಾವ ಬಲ್ಲಳೆ । ದೇವ ಮಾತೆಯ ।
ಭಾವದೊಳು ಗುರು । ಗೋವಿಂದ ವಿಠಲನ
ಪಾವನದ ಪದ । ಭಾವವನು ಕೊಡು ೫

೨೨೦

ಹಂಸವಾಹನ ಜಾಯೆ ಕಾಯೆ ಪ

ವಿಪಾಂಸಗನ ಪದಪಾಂಸು ಧರಿಸುವಳೆ
ಮನ ಸಂಶಯವ ಕಳೆ ಅ.ಪ.

ವಿಜ್ಞಾನ ತತ್ವಭಿಮಾನಿ ಸತಿ । ಅ–
ಜ್ಞಾನ ನೀಗಿ ಸುಜ್ಞಾನ ವೀಯುತ ।
ಜ್ಞಾನ ಪೂರ್ಣ ಪ್ರಜ್ಞಾನ ಘನಗುಣ
ಗಾನ ಮಾಳ್ಪ ವಿಜ್ಞಾನ ವೀವುದು ೧

ಭಕ್ತಿರೂಪಿ – ಸುವ್ಯಕ್ತಿಗೈ ಹರಿ
ಸಭಕ್ತಿಯನು ಗುರುಭಕ್ತಿಯೆನ್ನಲ್ಲಿ ।
ಶಕ್ತಿ ಕೊಟ್ಟಾಸಕ್ತಿಯಲಿ ವೇ–
ದೋಕ್ತದಲಿ ಎನ ಯುಕ್ತ ನೆನಿಸಮ್ಮ ೨

ವಾಣಿಯೇ ಬ್ರಹ್ಮಾಣಿಯೇ ವೇ–
ದಾಣಿಯೇ ಸುಜ್ಞಾನಿಯೇ ಪೊರೆ
ವೀಣೆ ಧರಿಸಿಹ ಪಾಣಿಯೇ ಸು–
ಶ್ರೋಣಿಯೇ ಚತು । ರಾನನ ಪ್ರಿಯೆ ೩

ನೆಲಸಿ ರಸನದಿ । ವಿಲಸಿತಾಮಲ
ಲಲಿತ ಹರಿಗುಣ । ಫಲಿಸಿ ಕೀರ್ತಿಸು
ಅಲವ ಭೋದರ । ಲಲಿತ ಉಕ್ತಿಲಿ
ಪುಳಕ ಪುಳಕದಿ । ನಿಲಿಸು ಮನ್ಮನವಾ ೪

ಋಕ್ಷ ಸನ್ನುತ । ರಾಕ್ಷಸೀ ಪ್ರಿಯ
ಶೀಕ್ಷಕಾಂತರ । ಸಾಕ್ಷಿರೂಪನನ
ಮೋಕ್ಷದನ ಗುರು । ಗೋವಿಂದ ವಿಠಲನ
ಈಕ್ಷಿಸಲು ಕ । ಟಾಕ್ಷ ತೋರಿಸು ೫

ಭಾರತಿದೇವಿ

೨೨೧

ಕೃತ್ತಿವಾಸ ಪೂಜ್ಯ ಚರಣೇ । ಮಹ
ತತ್ವಮಾನಿ ಸತಿಯೆ ಸುಗುಣೆ ॥ಪ॥

ಭೃತ್ಯ ಭೀಷ್ಟ ದಾನ ಜಾಣೇ ।
ನಿತ್ಯ ನೀಡೆ ಹರಿಯ ಸ್ಮರಣೆ ಅ.ಪ.

ವಿಧ್ಯುದ್ವಾಕ್ ದಿಜೌಮಾನಿಯೆ । ಹೇದ್ಯುಪೃಥಿವಿ ಭಾರತೀಯೇ
ಪ್ರದ್ಯುಮ್ನ ಕೃತಿಗೆ ಕುಮಾರಿಯೆ । ಬುಧ್ಯಾಭಿಮಾನಿಯೇ ಕಾಯೆ
ವಿದ್ಯುತಿಸ್ಥಿತಿ । ಬುಧ್ಯಾಬ್ಧಿಯೆ । ವಿಧ್ಯೇತರ । ಅವಿಧ್ಯೆಯ ಕಳೆ
ಸದ್ಯೋಜನ । ಶ್ರದ್ದಾಂಬಾ । ಮದ್ದೇಹದಿ । ಸಿದ್ಧಿಸು ಹರಿ ೧

ಇಂದ್ರಸೇನೆ ದ್ರೌಪದೀಯೇ । ಕಂದು ಗೊರಳ ಖಗಪ ತಾಯೇ
ಚಂದ್ರ ಪ್ರಕಾಶೆ ಕುಂದರದನೆ । ಮಂದ ಭಾಗ್ಯನ ನೀನೆ ಪೊರೆಯೆ ॥
ಇಂದೀವರ । ಮಂಸದಿರೆಯಳ । ನಂದನೆ ಎನ । ಕುಂದೆಣಿಸದೆ
ಸಿಂಧುಜೆ ಪತಿ । ಸುಂದರ ಪದ । ಸಂಧಿಸು ಮನ । ಮಂದಿರದಲಿ ೨

ಭಕುತಿ ಭಿಕ್ಷೆ ನೀಡೆ ತಾಯೇ । ಯುಕುತಿ ಶಾಸ್ತ್ರ ಒಂದನರಿಯೇ
ಸೌಖ್ಯ ತೀರ್ಥ ಮತವನ್ನೊರೆಯೇ ಮುಕುತಿ ಮಾರ್ಗ ತೋರಿ ಪೊರೆಯೇ ॥
ತೋಕನು ಎನೆ । ಸ್ವೀಕರಿಸುತ । ಲೋಕರುಗಳ । ವಾಕನು ದೂ–
ರೀಕರಿಸು ಪ । ರಾಕೆನ್ನುವೆ । ಭೀಕರಭವ । ನೀ ಕರಗಿಸು ೩

ಕಡಗ ಕಂಕಣ ದ್ವಾರ ಧಾರೆ । ಜಡಿತ ದುಂಗುರ ದೋಷ ದೂರೆ
ಮುಡಿದ ಮಲ್ಲಿಗೆ ಕುಂಚುಕಧಾರೆ । ಉಡುಗೆ ಬಿಳುಪಿನಂಬರೆ ನೀರೇ ॥
ಒಡ ನಡುವು । ನಿಡಿತೋಳೂ । ತೊಡೆಕದಳೀ । ಬಡುವು ಪರೀ ।
ಅಡಿಗೆರಗುವೆ । ಪೊಡ ವೀಶನ । ಧೃಡ ಭಕುತಿ । ತಡೆಯದೆ ಕೊಡು ೪

ಶರಣು ಮುಂದಣ ವಾಣಿ ಕರುಣ । ಗುರು ಗೋವಿಂದ ವಿಠಲ ಚರಣಾ ।
ಭರಣವೆನಿಪ ಸುಗುಣ ಗಣಾ । ಒರೆದು ಕಳೆಯೆ ಭವದ ಬಂಧನ ।
ಮಾರಯ್ಯನ । ಆರಾಧನೆ । ಚಾರೀಸದೆ । ಧಾರಾಣಿಗೆ
ಭಾರಾದೆನು । ಕಾರುಣ್ಯವ । ತೋರೂವುದು ಭಾರತಿಯೇ ೫

೨೨೨

ಕೊಡುಮತಿ ದಿವ್ಯಮತಿ ಭಾರತೀ ಪ

ಮೃಡನ ಸಖನ ಪಾದ । ಬಿಡದೆ ಭಜಿಪ ಮತಿ ಅ.ಪ.

ಅಜ್ಞಾನ ತಮದೊಳು । ಪ್ರಜ್ಞೆ ರಹಿತನಾದೆ
ಸುಜ್ಞಾನ ಕರುಣಿಸೀ । ತಜ್ಞನೆನಿಸೆ ತಾಯೇ ೧

ನೊಂದೆನೀ ಭವದೊಳು । ಮಂದ ಜನರ ಸೇರಿ
ಕುಂದು ನೋಡದೆ ಕಾಯೇ । ಗಂಧವಾಹನ ಜಾಯೇ ೨

ಕೋವಿದರೊಡನಾಡೀ । ಕಾವ ಕರುಣಿ ಗುರು
ಗೋವಿಂದ ವಿಠಲನ । ಭಾವದಿ ನೋಡುವ ೩

೨೨೩

ಭಕ್ತಿಗಭಿಮಾನಿ ಭಾರತೀದೇವಿ ಪ

ಶಕ್ತಿ ಕೊಟ್ಟು ಶುದ್ಧ । ಭಕ್ತಿ ಮಾರ್ಗದಲಿರಿಸೇ ಅ.ಪ.

ಕೃತ್ತಿವಾಸನ ತಾಯೆ । ಶಕ್ತಿ ನಿರ್ಭಯ ವೀಯೆ
ಎತ್ತು ಭವದಿಂದೆನ್ನ । ಇತ್ತು ಜ್ಞಾನಾನ್ನ ।
ಉತ್ತಮೋತ್ತಮ ಹರಿಯ । ಚಿಂತೆ ಮಾಡುವ ಪರಿಯ
ಬಿತ್ತರಿಸಿ ಮನದಲ್ಲಿ । ಹರಿಯ ತೋರಲ್ಲೀ ೧

ವೇದಾಣಿ ಸತಿ ನಿನ್ನ । ಪಾದಕಮಲಗಳನ್ನ
ಸಾಧು ಸಮ್ಮತವೆನಿಪ । ಮಾರ್ಗದಲಿ ಭಜಿಪ ।
ಹಾದಿ ತೋರಿಸು ತಾಯಿ । ವೆಸೂದ ಮುನಿ ಮತದಾಯಿ
ಕಾದು ಕೋ ನೀ ನಿನ್ನ । ಕಂದ ನೆಂದೆನ್ನ ೨

ಭಾವುಕನ ಮಾಡೆನ್ನ । ಭಾವದಲಿ ತೋರಿನ್ನ
ಭಾವಿ ಬೊಮ್ಮನ ರಾಣಿ । ಅಪರೋಕ್ಷ ಮಾನಿ ।
ಭಾವ ಜನಯ್ಯ ಗುರು । ಗೋವಿಂದ ವಿಠಲನ
ಪಾವನವು ಪದ ದ್ವಂದ್ವ । ತೋರು ಆನಂದ ೩

೨೨೪

ಭಾರತಿ ವಂದಿತೆ ಮನಸಿಜ ಮಾತೇ ।
ಕೋರುವೆ ತವಪದ ವನಜ ವಿಖ್ಯಾತೇ ಪ

ಕೀರುತಿ ನಿನ್ನದು ತ್ರೈಭುವಿ ವ್ಯಾಪ್ತೇ
ವಾರೆ ನೋಟದಿ ಪದವಿ ಪ್ರದಾತೆ
ವಾರಿಧಿ ಶಯ್ಯಗೆ ನೀನು ಸುಪ್ರೀತೆ
ತೋರು ಪತಿಯ ಪದ ನೀರಜ ಜಾತೆ ಅ.ಪ.

ಹರಿ ಮಡದಿಯೆ ಪತಿ । ನಿರುತ ಸೇವೆರತಿ
ಪರಿ ಪರಿ ವಿಧ ಗತಿ । ಅರುಹಲು ಮನ್ಮತಿ
ಬರಡಾಗೊದು ಸತಿ । ತೆರೆಗೊಳಗಣ್ಣತಿ
ಕರುಣವ ತೋರೆ ಕೃತಿ । ಪ್ರದ್ಯುಮ್ನನ ಸತಿ ೧

ಅಗಣಿತ ಮಹಿಮಳೆ ಖಗ ಗಮನನ ಪ್ರಿಯೆ
ಬಗೆ ಬಗೆ ಹರಿಲೀಲೆ । ಲಗು ಬಗೆಯಲಿ ಪೇಳೆ
ಸುಗುಣ ಮಣಿಯಮಾಲೆ । ಮಿಗಿಲು ಪೇಳೆ ಸುಶೀಲೆ ೨

ಚಿನುಮಯ ಪ್ರಕೃತಿಯೆ । ಅಣು ಮಹದ್ರೂಪಿಯೆ
ಇನಯನಗನುಸಾರಿ । ಕುಣಿಯುವೆ ಸುಂದರಿ ।
ಪ್ರಣತರ ಪಾಲ ಗುರು । ಗೋವಿಂದ ವಿಠಲನ
ಗುಣಮಣಿ ಮಾಲೆ ಸದಾ । ಎಣಿಸುವೆ ಮೋದಾ ೩

೨೨೫

ಭಾರತೀ ನೀ ಪರಿಪಾಲಿಸೇ ಪ

ನಾರಿ ಶಿರೋಮಣಿ । ನಿರುತ ನಿನ್ನಯ ಪದ
ವಾರಿಜ ಭಕುತಿಯ । ಗಾರು ಮಾಡದೆ ಕೊಡು ಅ.ಪ.

ಉರು ವಿಕ್ರಮನಲಿ । ವರ ಭಕ್ತ್ಯುದಯಕೆ
ಪರಮ ಕಾರಣಳೆಂ । ದರಿತು ನಿನ್ನ ಪದ ।
ಸರಸಿಜ ಭಜಿಸುವೆ । ಪರಮ ಕೃಪಾಕರೆ
ತ್ವರ ಹರಿ ಭಕುತಿಯ । ಪಾರಿಪಾಲಿಪುದು ೧

ವಿಪರೀತದ ಮತಿ । ಅಪಹರಿಸುತ ಬಲು
ಕೃಪೆಗೈದೆನ್ನಲಿ । ಅಪ ವರ್ಗದ ಹರಿ
ವಿಪಗಮನನ ಸ । ದ್ದಪರೋಕ್ಷವ ಕೊಡು
ವಿಪ ಅಹಿಪತಿ ನುತೆ । ಅಪ್ರತಿ ಮಾತೆಯೆ ೨

ಭೂವಲಯದಿ ನಿನಗಾವರಿಲ್ಲ ಸಮ
ನೀ ವೊಲಿಯದಲಿ । ನಿನ್ನಾವರ ಕಾಣೆನು
ಮಾ ವಿನೋದಿ ಗುರು । ಗೋವಿಂದ ವಿಠಲನ
ಪಾವನ ಪದವನು । ತೀವರ ತೋರಿಸು ೩

೨೨೬

ಭಿಕ್ಷಾವ ನೀಡ್ವುದು ತಾರ್ಕ್ಯನ ಮಾತೇ । ಹರಿ ಭಕುತಿ ಎಂಬ
ಭಿಕ್ಷಾವ ನೀಡ್ವುದು ತಾರ್ಕ್ಯನ ಮಾತೇ ಪ

ತ್ರ್ಯಕ್ಷಸು ಸನ್ನುತೆ । ಮೋಕ್ಷದ ಶ್ರೀಹರಿ
ಶಿಕ್ಷಿಸುಭಕುತಿಯ । ಪಕ್ಷಿಯ ಮಾತೇ ಅ.ಪ.

ವಿಷಯಂಗಳ ಆಸೆಯನೇ ಬಿಡಿಸು । ವಿಷ ಭಾವವ ಕೊಡಿಸು
ನಿಶಿಯಾಚರರ । ವಶವನೆ ಬಿಡಿಸು । ತತುವರೊಲಿಮೆ ಕೊಡಿಸು
ವಿಷಧಿಜೆ ಪತಿ ಸಿರಿ । ವಸುದೇವ ಸುತನನ
ಯಶವ ನುಡಿ ಪದ । ಬಿಸಜದಿ ಭಕುತಿಯ ೧

ಜ್ಞಾನ ಭಕುತಿ ವೈರಾಗ್ಯದ ಮೂರ್ತಿ । ಕೇಳ್ವುದು ಶರಣಾರ್ತಿ
ಮಾನಾಭಿಮಾನ ನಿನ್ನದು ಗಾಯತ್ರಿ । ನರಹರಿ ಗುರು ಭಕ್ತಿ ॥
ಕ್ಷೋಣಿಯೊಳಗೆ ಸ । ತ್ರಾಣಿ ಭಾರತಿಯೆ
ಮಾಣದೆನಗೆ ಜಗ । ತ್ರಾಣನ ಭಕುತಿಯ ೨

ಮೂರೇಳು ಸಾಸಿರದ ಆರ್ನೂರೂ । ಜಪಗಳ ದಿನದಿನವೂ
ವಾರೀಜ ಜಾಂಡವ ಮೂರ್ಬಗೆಯರಲೀ । ಗೈವನ ಸತಿ ಕಾಳೀ॥
ಸಾರತ ಮನು ಗುರು । ಗೋವಿಂದ ವಿಠಲನ
ಚಾರು ಚರಣ ಸ । ದ್ಭಕುತಿಯು ಎಂಬ ೩

೨೨೭

ಮಾರುತ ಸತಿ ಮದ್ವಾರ ನಿನ್ನದಮ್ಮಾ । ಕರುಣದಿ ಪೊರೆಯಮ್ಮ ಪ

ಸರಸಿಜಾಕ್ಷ ಹರಿಭಕುತಿ ನೀಡೆ ತಾಯೇ । ಆರತರನು ಕಾಯೇ ಅ.ಪ.

ಕಾಳಿ ದ್ರೌಪತಿ ಶಿವಕನ್ಯೆ । ಮನ್ಮನದಲಿ ನಿಲು ಘನ್ನೆ
ಫಾಲಾಕ್ಷನ ಪ್ರಿಯ ಜನನೀ । ದಯದಲಿ ಪೊರೆ ಕರುಣೀ ॥
ನಳನಂದಿನಿ ಇಂದ್ರಸೇನೆ ತಾಯೇ । ಕಲಿ ಕಲ್ಮಷ ಕಳೆಯೇ
ಏಳಲ ಮಾಡದೆ ನೀಲವರ್ಣನ ತೋರೇ । ಕರುಣಾರಸ ಬೀರೇ ೧

ತುತಿಸುವ ನಿನ್ನನು ಪನ್ನಗಾರಿದೇವಿ । ವೇದಾತ್ಮಿಕ ದೇವೀ ।
ಶೃತಿ ಪುರಾಣತತಿಗಳ ನ್ನೊರೆಯೆ । ಭವ ತಾಪವ ಕಳೆಯೇ ॥
ಸತತ ನಿನ್ನ ಪದರತಿ ಕೊಡುಮಾತೆ । ಖಗ ಪನ್ನಗ ಮಾತೇ
ವಿತತ ಮಹಿಮ ಹರಿ ಚ್ಯುತಿ ರಹಿತನ ತೋರೆ ಅಘಹರೆ ಭವ ದೂರೇ ೨

ಕೃತಿ ರಮಣನ ಪ್ರಿಯ ಪುತ್ರಿ । ನರಹರಿ ಗುರುಭಕ್ತೀ
ಪ್ರಥಮಾಂಗನ ಪ್ರಿಯರಾಣೀ । ನಮಿಸುವೆ ಬ್ರಹ್ಮಾಣಿ ॥
ಪತಿತನ ಪಾಲಿಸೆ ಪರಮ ಕಲ್ಯಾಣಿ । ಪಾವನೆಯ ಭಾವಿವಾಣಿ
ಗತಿಪ್ರದ ಗುರು ಗೋವಿಂದ ವಿಠಲನ್ನ । ಪದ ತೋರಿಸೆ ಘನ್ನ ೩

೨೨೮

ಯಾಕೆ ಮರುಳಾದೆಮ್ಮ ಎಲೆ ಭಾರತೀ ।
ಸಾಕಲಾರದೆ ವಿವಿಧ ರೂಪ ತಾಳ್ದನಿಗೇ ಪ

ಕಂಜಾಕ್ಷಿ ಸೀತೆಯನು । ಅರಸಲ್ಕೆ ಅಬ್ಧಿಯನು
ಅಂಜದಲೆ ಉತ್ತರಿಸಿ । ಶತ್ರು ಮಧ್ಯಾ ।
ಸಂಜೆಯಲಿ ಕಂಡು । ಕಂಜಾಕ್ಷಿ ಗುಂಗುರವ
ಅಂಜದಲೆ ಇತ್ತಿಹ ಪ್ರ । ಭಂಜನಗೆ ನೀನು ೧

ವಿಷದ ಲಡ್ಡಿಗೆಯನ್ನು । ಹಸನಾಗಿ ತಿಂದವನು
ವಿಷಧಿಯೊಳು ಮುಳುಗಿರಲು । ವಿಷಗಣವು ಕಡಿಯೇ ।
ವಿಷಗಣವು ಪಲ್ಮುರಿದು । ಅಸುವ ನೀಗಲು ಕ್ಷಣದಿ
ವಿಷ ಮರೆದೆ ಕಲಕುತಲಿ । ವಸುಧೆಯಾಳ್ದನಿಗೇ ೨

ಮಧ್ಯಮನೆ ದ್ವಿಜನಲ್ಲಿ । ಉದ್ಭವಿಸಿ ಪಾಜಕದಿ
ಶುದ್ಧ ಸಾತ್ವಿಕರ ಅ । ವಿಧ್ಯೆಯನು ಕಳೆಯೇ ।
ಮಧ್ವ ಶಾಸ್ತ್ರವ ರಚಿಸಿ ಸ । ದ್ಬುದ್ಧಿ ಪ್ರದನೆನಿಸಿ
ಅದ್ವೈತಮತ ವಿಪಿನ । ಪ್ರಧ್ವಂಸಕಾನಳಗೇ ೩

ಖೇಚರನು ತಾನು ನೀ । ಶಾಚರರ ಸಂಹರಿಸಿ
ಪಾಚಕನು ಮತ್ತಾಗಿ । ಕೀಚಕರ ಸವರೀ ।
ಯಾಚಿಸುತ ಭಿಕ್ಷಾನ್ನ । ವಾಚಿಸುತ ಸಚ್ಛಾಸ್ತ್ರ
ಮೋಚಕನು ಆದವಗೆ । ಯೋಚಿಸಿಯು ಕೈಪಿಡಿದೇ ೪

ಎಂಜಲೆಡೆಯನು ಕೊಂಡು । ಅಂಜದಲೆ ಮರಕ್ವಾರಿ
ಸಂಜೆ ಚರಳೆರ ಕೊಂದಧ । ನಂಜಯ ನಿ ಗೊಲಿದ ।
ಕಂಜಾಕ್ಷನಾದ ಗುರು । ಗೋವಿಂದ ವಿಠಲ ಪದ
ಕಂಜ ಭಜಿಸುವ ಭಾವಿ । ಕಂಜ ಸಂಭವಗೇ ೫

೨೨೯

ವಿಪಾಹಿ ಶಿವ ನುತೆ । ಭಾರತಿ ಮಾತೆ
ವಿಪಗಮನು ಎನೆ । ಅಪವರ್ಗ ಪ್ರದಹರಿ
ಸುಪವಿತ್ರ ಪದ ತೋರು ॥ ಕರುಣವ ನೀ ಬೀರು ಪ

ಅಪರೋಕ್ಷ ಮಾನಿಯೆ । ವಿಪರೀತ ಮತಿಕಳೆ
ಗುಪಿತ ಸಾಧನ ಗೈಸಿ । ಸಫಲ ಮಾಡಿಸಿ ಜನ್ಮ
ಅಪರೋಕ್ಷ ಕೊಡಿಸಮ್ಮ । ನಮಿಪೆ ಪದವು ನಿಮ್ಮ ಅ.ಪ.

ದೇವ ಮಾನಿ ಸ । ದಾನು ರಾಗದಿ ।
ಹಾದಿ ತೋರಿ ಸ । ದಾಗಮಜ್ಜಳೆ
ಭೇದಿಸುತಲಜ್ಞಾನ ನಿಚಯವ ।
ಭೋದಿಪುದು ಸದ್ಬೋಧ ಭಾರತಿ ೧

ಸಾರವೆನಿಪ ಸ । ಮೀರ ಸತಿ ಜಗ ।
ಭಾರ ನಿಳುಹಲು । ವೀರ ಹರಿ ಅವ
ತಾರ ಅಂಶ ವಿ । ಚಾರದಲ್ಲೈನ ।
ಪಾರವೆನಿಪ ಅ । ಜ್ಞಾನ ಕಳೆಯಮ್ಮಾ ೨

ಭಾವಿ ವಾಣಿ ಸು । ಭಾವ ದೊಳು ಹರಿ ।
ಮಾವಿನೋದಿಯ ಭಾವತೋರ್ವುದು
ದೇವ ಗುರು । ಗೋವಿಂದ ವಿಠಲನ ।
ಭಾವ ತಿಳಿದಿಹ । ದೇವಿ ಪಾಲಿಸು ೩

೨೩೦

ಶಿವಕನ್ಯೇ ಗುಣರನ್ನೇ ಪ

ತವಪದ ಪದುಮವ । ಜವದಲೆ ತೋರಿಸು ಅ.ಪ.

ಕಾಲಕೆ ಮಾನಿಯೆ । ಓಲೈಸುವೆ ಪದ
ಕೀಲಾಲಜವನು । ಪಾಲಿಸು ಎನಗೇ ೧

ಪವನ ಮತಾನುಗ । ರವನೆಂದೆನಿಪಗೆ
ಭವ ಪರಿಹಾರಿಕ । ನವ ಭಕುತಿಪ್ರದೆ ೨

ಮುಕುತಿಗೆ ಮಾರ್ಗವ । ಭಕುತಿಗೆ ಆಕರೆ
ವ್ಯಕುತಿಯಗೈ ಹರಿ । ಭಕುತಿಗಳೆನ್ನಲಿ ೩

ಸ್ತವ ಪ್ರಿಯ ನರಹರಿ । ಸ್ತವನವ ಗೈಯ್ಯುವ
ಹವಣೆಯ ತೋರಿಸು । ಭವನಿಗೆ ಜನನಿಯೆ ೪

ಗೋವ ಕಾವ ಗುರು । ಗೋವಿಂದ ವಿಠಲನ
ಭಾವದಿ ತೋರಿಸು । ನೀ ಒಲಿದೆನಗೆ ೫

ಗರುಡದೇವರು

೨೩೧

ಕಾಲಾಭಿಮಾನಿಯೇ ಕೇಳೆನ್ನ ಬಿನ್ನಪವಾ ಪ

ಕೀಲಿಸಿತು ಯೆನ್ನಾಯು । ಕಾಲಾತ್ಮಕನ ತೋರೋ ಅ.ಪ.

ಖೇಟಪತಿ ನೀ ನನ್ನ ಪಾ । ಪಾಟವಿಯ ಕುಡಿ
ನೋಟದಿಂದಲೆ ದಹಿಸಿ । ಶ್ರೇಷ್ಠ ನೆನಿಸೋ ।
ಸಾಟಿಯುಂಟೇ ನಿನಗೆ ಮೂ । ರ್ಕೋಟಿ ರೂಪಧರ
ಖೇಟ ಮುಖ್ಯ ಪ್ರಾಣ । ಪ್ರೇಷ್ಟ ಸುತನೆನಿಸಿ ೧

ಬಲಿಯು ವಂಚನೆಯಿಂದ । ಹರಿಯ ಮುಕುಟಾಭರಣ
ಸುಲಭದಲಿ ಕದ್ದು ತಾ । ಕೆಳ ಲೋಕ ಪೋಗಲು ।
ಬಲದೊಳವನನ ನೂಕಿ । ಕಲಿತನವ ತೋರ‍್ಯವಗೆ
ಲಲಿತ ವಹ ಶಿರದೊಡವೆ । ಸುಲಭದಲಿ ತಂದೇ ೨

ವರ ಕಶ್ಯಪಾತ್ಮಜನೆ । ಹರಿಗೆ ವಾಹನನಾಗಿ
ಚರಿಪೆ ತ್ರೈಜಗವನ್ನು । ಶರಣ ಪರಿಪಾಲಾ ।
ಗುರು ಗೋವಿಂದ ವಿಠಲನ । ಕರುಣ ನಿನ್ನೊಳಗೆಂತೊ
ಹರಿಯೊಡನೆ ನೀನಾಗಿ । ದರುಶನವನೀಯೊ ೩

೨೩೨

ಖಗವರನೇ ಪಾಲಿಸೋ ಪ

ಪೊಗಲೊಳು ಹರಿಯನು । ಮಿಗೆ ಭಕುತಿಲಿ ಪೊತ್ತು
ನಗಧರ ಬಿಂಬವ । ನಗುತ ನಖದಿ ನೋಳ್ಪ ಅ.ಪ.

ವೇದೋದಿತ ಕ್ರಿಯ । ಕಾದ್ಯಭಿಮಾನಿಯೆ
ವೇದಮಯನೆ ಹರಿ । ಗಾದೆಯೊ ವಾಹನ
ಸಾಧಿಸಿ ಶ್ರೀಹರಿ । ಪಾದಾಂಬುಜಗಳ
ಹಾದಿಯ ತೋರೊ ಅ । ಗಾಧ ಮಹಾತ್ಮಾ ೧

ಸಾಸಿರ ಬೃಹತಿಯ । ಸೂಸಿ ನೀ ಪೊಗಳುತ
ಸಾಸಿರ ನಾಮನು । ಕೇಶವ ನೊಲಿಮೆಯ
ಪೋಷಿತ ನಾಗಿಹೆ । ಆಶುಗ ಹೃದಯಾ
ಕಾಶದೊಳಿರುತಿಹ । ಶ್ರೀಶನ ತೋರಿಸಿ ೨

ಪಾವಮಾನಿಸುತ । ಪಾವಿಸಿ ಮನ್ಮನ
ಭಾಶಿಪಶಿ । ಗೋವಿಂದ ವಿಠಲನ ।
ಪಾವನ ನಾಮ ಸು । ಭಾವನ ಉಣಿಸುತ
ಕೋವಿದ ಸಂಗತಿ । ಈವುದು ನೀ ಸದ ೩

೨೩೩

ಗರುತ್ಮಂತ – ಗರುತ್ಮಂತ ಪ

ಸೂತ್ರಾಭಿಧನಿಗೆ । ಪುತ್ರನೆಂದೆನಿಸಿದ ಅ.ಪ.

ಅಮೃತಕಲಶಾಮೃತ । ಹಸ್ತವು ನಿನ್ನದು
ಕೃತಕೃತ್ಯನ ಗೈ । ಸುತ ಕಶ್ಯಪಗೇ ೧

ಹರಿಪದ ಯುಗ್ಮವ । ಕರದಲಿ ಧರಿಸಿರೆ
ವರ ತವ ನಖದಲಿ । ಹರಿ ಬಿಂಬೋದ್ಭವ ೨

ಓಂಕಾರಾಭಿಧ । ಏಕಾತ್ಮನ ವಹ
ನೀ ಕಾಯ್ದುದು ಎನ । ಓಕರಿಸದಲೆ ೩

ಖಗವರ ಪನ್ನಗ । ನಗಧೀಶಾಖ್ಯಗೆ
ಬಗೆ ಬಗೆ ಸೇವೆಯ । ಲಕುಮಿಗೆ ಗೈವೆ ೪

ವೇದೋದಿತ ಕ್ರಿಯ । ಕಾದ್ಯಭಿಮಾನಿಯೆ
ಪಾದ ಭಜಕ ಗುರು । ಗೋವಿಂದ ವಿಠಲನ ೫

೨೩೪

ದೇವರಾಜ ನುತನೆ ಖಗಪಾ । ಬಲ । ದೇವ ಚರಣ ಮಧುಪ ಪ

ಭಾವಜಾರಿ ಸಮನು ಎನಿಪ । ತಾವಕನ್ನ ಸಲಹೊ ಕಾಶ್ಯಪ ಅ.ಪ.

ಸುರಮುರದಿಂ ಸುಧೆಯ ತರಲೂ । ತ್ವರಿತ ದಿಂದ ಹಾಕುತಿರಲೂ ।
ಉರು ವಿಶಾಲ ಜಲಧಿ ಪೊಗಲೂ । ಗರುವ ನಿಷಾಧರ ನುಂಗಲೂ ॥
ಸೇರಲು ಬಡ । ಹಾರುವ ತನ । ಭಾರ್ಯಳ ಸಹ । ಗಾರುಡ
ಮುಖ ಕಾರುಣ್ಯದಿ । ಹೊರಡೂಡುತ । ಹಾರಿದೆ ವಿ । ಸ್ತಾರಾಮೆಗೆ ೧

ಕರಿಯು ಕೂರ್ಮ ದ್ವೇಷದಿಂದಾ । ನೆರೆಹೊರೇಯ ದುಃಖದಿಂದಾ ।
ಇರಲು ಕಳೆಯೆ ಗರುಡನಿಂದಾ । ವರಮುನಿ ಪೇಳ್ದ ಮುದದಲಿಂದಾ ॥
ಭಾರಿಲಿ ಇಹ । ಕೂರಮ ಕರ್ಯ । ಹರವ ಮೇಲೆ । ಘೋರದ
ತರುಕ್ಷಾರಲದೂ । ದಾರಿತ ವಿ । ಸ್ತಾರದ ಮಹಿ । ಮೋರುಗುಣಿ ೨

ಗುರು ಗೋವಿಂದ ವಿಠಲನಿಂದಾ । ಸರ್ವವೇದ್ ಬಲದಲಿಂದಾ ॥
ತರದು ದೇವ ಸೈನ್ಯ ವೃಂದಾ । ಕರದಿ ಅಮೃತ ಕಲಶ ತಂದಾ ॥
ಕಾರುಣಿ ದಿತಿ । ಜಾರಿಗೆ ಮಾತೆ । ಕಾರಾಗೃಹ । ತಾರಣ ಮುರ
ವೈರಿಯ ವಹ । ತೋರ್ರೈ ಹೃ । ದ್ವಾರಿಜದಿ । ಶ್ರೀಹರಿಪದ ೩

೨೩೫

ಪೃಥುಧರನೆ ಸೂತ್ರ ಸುತ ಪ್ರಥಿವ ದೇವ ಪ

ಪೃಥುವ್ಯಾಖ್ಯ ಸೌಪರಣಿ ಪ್ರಿಯ ಗರುಡ ದೇವಾ ಅ.ಪ.

ವಿನತೆಯಲಿ ಜನಿಸಿ ನೀ । ಅವಿನೀತೆ ಕದ್ರುವಿನ
ತನಯರನು ಭಕ್ಷಿಸುತ । ದಿನವ ಕಳೆದೂ ।
ಪಣದ ವ್ಯಾಜದಿ ಪೋಗಿ । ಘನ ಅಮೃತ ಕಲಶವನು
ಸನುಮತದಿ ನೀ ತೋರಿ । ನಿನ ತಾಯ ಸೆರೆ ಕಳೆದೇ ೧

ಗರುಡದೇವನೆ ನೀನು । ಹರಿಗೆ ವಾಹನನಾಗಿ
ಹರಿಯ ಪಾದಗಳ್ ಧರಿಶಿ ಕಶಿಶಿಡರಲೀ ।
ಹರಿಬಿಂಬ ಕಾಣುತ್ತ । ಚರಣ ನಖ ಪಂಕ್ತಿಯಲಿ
ಹರಿಯ ಸ್ತೋತ್ರವ ಮಾಳ್ಪ । ಸುರ ಕುಲಾಗ್ರಣಿಯೆ ೨

ಕಾಲಾಭಿಮಾನಿಯೇ ಕಾಲ ನೀಗಿದೆ ನಾನು
ಕಾಲ ನೀಯಾಮಕನ । ಫಾಳಿಗೆ ಸ್ಮರಿಸದಲೆ
ಕಾಲಾತ್ಮ ಗುರು ಗೋ । ವಿಂದ ವಿಠಲನ ಸಾರ್ವ
ಕಾಲದಲಿ ನೆನೆವಂಥ । ಶೀಲ ಮನವೀಯೋ ೩

೨೩೬

ಭೋಗಿವರನೇ ಪಾಲಿಸೋ ಪ

ಆಗಸದೊಳು ನೀನಾಗಮಿಸುತಲಿ ಸ–
ದಾಗತಿ ಭೋದವ ಭೋಗಿಸಿ ನಿಂದೇ ಅ.ಪ.

ಪಾದೋದರ ತ್ವಚ । ಮೋದದಿ ತ್ಯಜಿಸುತ
ಅಗಾಧ ಶಕ್ತಿಯಲಿ । ಮೋದಿಪ ಪರಿ ಪ್ರಾ ।
ರಬ್ಧವ ಭೋಗವ । ನಾದರದನುಭವ
ಸಾಧನವೀವುದು । ಹೇ ದಯವಂತ ೧

ಹೃದಯಾಬ್ಜಾಮಲ । ಸದನದಿ ಸುರತರು
ಹದುಳ ದೊಳಾಶ್ರಿತ । ಬದಿಗನಿನಾದೆಯೊ ।

ಸದಮಲ ಶಯ್ಯನೆ । ಇದಿರಾವನು ತವ
ಪದವಿಗೆ ಸುರರೊಳು । ಬುಧಜನ ವಂದ್ಯ ೨

ಪೂರ್ವ ತ್ರಿಯಂಬಕ । ಭುವಿಧರಭಿಧನೇ
ಕಾವುದು ಸಿತ ಕೇ । ಶಾವೇಶಿತ ಬಲ ।
ದೇವನೆ ಬೇಡುವೆ । ಕೋವಿದ ಪತಿ ಗುರು
ಗೋವಿಂದ ವಿಠಲನ । ಭಾವದಿ ಕಾಣಿಸಿ ೩

೨೩೭

ಸೂತ್ರಾತ್ಮ ಜಾತ ನಮೋ । ಸಿರಿಹರಿ
ಪೌತ್ರ ಕೃಪೆಯ ಪಾತ್ರ ನಮೋ ಪ

ಸ್ಮರ್ತವ್ಯ ಹರಿ ಪಾದ । ಕೀರ್ತನೆಗಾಗಿ ವೇದ
ಶಾಸ್ತ್ರಕಭಿಮಾನಿ । ಸ್ತೋತ್ರಕ್ಕೆ ಪಾತ್ರನಾದೆ ಅ.ಪ.

ಸರ್ಪಾರಿ ಸ್ವರೂಪನೆ । ಭಕ್ತರು
ಅರ್ಪಿಪ ಸದ್ಭಾವನೆ ॥
ಕಪ್ಪಾವ ಕೊಂಡು ಭವ । ಸರ್ಪಾರಿ ಎನಿಸುತ್ತ
ಸರ್ಪಶಯ್ಯನು ಕೃಷ್ಣಂಗರ್ಪಿಸಿ ಮುದಭೀರ್ವೆ ೧

ವಿಕಾರ ರಹಿತಾತ್ಮಕಾ । ತಿಮಿರಾದ್ರಿ
ಪ್ರಖರಾ ಸಮ ರೂಪಕ
ಓಂಕಾರ ವಾಚ್ಯ ಪಾದ ಸ್ವೀಕೃತ ಹಸ್ತದ್ವಯ
ಏಕಮೇವನ ವಾಹ । ನೀ ಕಾಯೊ ವಿಹಂಗಮ ೨

ಶ್ರೀವರ ಶಯ್ಯ ಸಮರೂಪಕ । ಸಿರಿ ಗುರು
ಗೋವಿಂದ ವಿಠಲಾರ್ಚಕ ।
ಭಾವಿ ಬ್ರಹ್ಮನ ಸುತ । ದೇವರಾಜ ನುತ
ಸಾವಧಾನದಿ ಕಾಯೊ । ಮಾವಾರಿ ಸುಪ್ರೀತ ೩

೨೩೮

ಸೌಪರ್ಣಿ ಪತಿ ನಿನ್ನ । ಸುಪಾದ ಭಜಿಸುವೇ
ತಾಪಸ ಪ್ರೀಯೆ ಹರಿಯ । ಸುಪಾದ ತೋರೋ ಪ

ಶ್ರೀಪತಿ ವಹ ಎನ್ನ । ಕೈಪಿಡಿಯುತಲಿನ್ನ
ಕಾಪಥಕ್ಕೆಳೆಯುವ । ಪಾಪವ ಕಳೆಯೋ ಅ.ಪ.

ವೇದಾಣಿಪತಿ ಎನಿಪ । ಸಾಧು ವಾಯೂ ಸುತನೆ
ಸಾಧನ ಸಾಧ್ಯವೆನಿಪ । ವೇದ ಸತ್ಪ್ರತಿಪಾದ್ಯಗೆ ।
ವೇದೋದಿತ ಕ್ರಿಯೆಗಳ । ಮೋದದಿ ಅರ್ಪಿಸಿ
ಆದೆಯೊ ಸುವಾಹನ । ಶ್ರೀದಗೆ ನಿರುತಾ ೧

ಸೌಂಶಿರ್ಯ ಶ್ಯೈಕಶಿ ಸುಂದರ ಹರಿಪಾದ
ನಂದದಿ ಕೈಲಿ ಧರಿಸಿ । ಮುಂದಾಗಿ ಹಾರುತಿರಲು ।
ಸುಂದರ ಹರಿಪದ । ಮಂದಜ ನಖದೊಳು
ಇಂದಿರೆ ಬಿಂಬನ । ನಂದದಿ ನೋಳ್ಪ ೨

ಇಂದೀವರಾಭನಯನ । ನಂದ ಕಂದನ ದಯದಿ
ಮಂದರಗಿರಿ ಪೊತ್ತೆ । ಗಂಧ ವಾಹಜ ನೆವದಿ ।
ಇಂದ್ರಪ ಗುರು ಗೋ । ವಿಂದ ವಿಠಲ ದಯ
ಪೊಂದಿದವನೆ ಹೃ । ನ್ಮಂದಿರಗನ ತೋರೋ ೩

ಶೇಷದೇವರು

೨೩೯

ಚಕ್ಷು ಶ್ರ್ಯವನೆ ಶೇಷಾ – ಪಾಲಯ ಪ

ಕುಕ್ಷಿಯೆ ಪಾದವೆಂಬ ಲಕ್ಷಣ ನಿನದಯ್ಯ ।
ಈಕ್ಷಿಸೊ ಕರುಣ ಕ । ಟಾಕ್ಷದಿ ನಾಗನೆ ಅ.ಪ.

ಅಕ್ಷಾರಿಪದಪಾಂಸು ಧರನೇ । ವಾಯು
ಪುಚ್ಛಾಶ್ರಯಿಸಿ ಜಗಧಾರನೇ ॥
ಪಕ್ಷಿ ವಾಹಗೆ ಶಯ್ಯ । ಪಕ್ಷೀಯ ಸಮ ಪೂರ್ವ
ತ್ರ್ಯಕ್ಷನೆ ಸೋಮರ್ಕ । ಅಕ್ಷಿ ಅನಲ ಕಾಯೊ ೧

ತಾಮಸಾಹಂ ತತ್ವ ಮಾನಿಯೇ ॥ ಕಾಯೊ
ಭೂಮಿ ಧರನೆ ಬಹು ಮಾನಿಯೇ ।
ಆಮಹ ಪಂಚರಾ । ತ್ರಗಮಗಳ್ ಮಾನಿ
ಕಾಮಿತ ಪಾಲಿಸೊ । ಸ್ವಾಮಿ ನಿಮಗೆ ನಮೊ ೨

ವಾಸವ ವಂದಿತ ವಾತಾಶನಾ । ನಿನ್ನ
ಆಸನ ಮಾಡಿಹ ರಮೇಶನಾ ॥
ಹಾಸಿಗೆ ಎನಿಸುತ್ತ । ಲೇಸು ಸೇವಿಸಿ ಹರಿ
ಸಾಸಿರ ನಾಮನ । ದಾಸನೆಂದೆನಿಸಿದೆ ೩

ಮುಕ್ತಿಗೆ ಯೋಗ್ಯರ ಮಾರ್ಗದಾ । ಹರಿ
ಭಕ್ತಿಯ ಪಾಲಿಸೊ ದೀರ್ಘದಾ ॥
ಸಕ್ತಿಯಾಗಲಿ ಮನ । ಸೂಕ್ತಮೇಯನಲ್ಲಿ
ಉಕ್ತಿ ಇದೊಂದನ । ಇತ್ತು ಪಾಲಿಸು ಶೇಷ ೪

ಕಾಳೀಯ ಮಡುವಿಗೆ ಹಾರ್ದನ । ಮತ್ತೆ
ಕಾಳೀಯ ನೆಡೆಯಲಿ ಕುಣಿದನಾ ॥
ಕಾಳಿರಮಣ ಗುರು । ಗೋವಿಂದ ವಿಠಲನ
ಭಾಳ ತುತಿಪ ಮನ । ಪಾಲಿಸೊ ಶೇಷ ಗುರು ೫

೨೪೦

ಜೀವ ಮಾನಿ ಸಂಕರುಷಣ ಪಾಹಿ । ಜೀವ ಮಾನೀ ಪ

ಜೀವಮಾನಿ ವರ ಶ್ರೀವರ ಶಯ್ಯನೆ
ತೀವರ ಪಾಲಿಸು ಪಾವನ ಗಾತ್ರ ಅ.ಪ.

ಶ್ರದ್ದೆಯ ಸುತ ನೀ । ನಿದ್ದುದೆ ಸರಿ ಹರಿ
ಶ್ರದ್ದೆಯ ನೀಯುತ । ಉದ್ದರಿಸೆಮ್ಮ ೧

ಬಲನೆನಿಸುತ ಗೋ । ಕುಲದೊಳಗುದಿ ಸುತ
ಅಲವ ಪೂರ್ಣ ಹರಿ । ಒಲವನು ಪಡೆದೇ ೨

ತಾಮಸ ಹರ ಪಿತ । ತಾಮಸ ಕಳೆ ಸು–
ತ್ರಾಮ ವಂದ್ಯ ತ್ರೈ । ಧಾಮಗೆ ಪ್ರೀಯ ೩

ರಾಮಾಭಿಧ ಹರಿ । ಸೋಮಾಸ್ಯನ ಸಂ–
ಪ್ರೇಮಾಸ್ಪದ ಗುರು । ಸೌಮಿತ್ರೀಯೆ ೪।

ಮಾವ ವೈರಿ ಗುರು । ಗೋವಿಂದ ವಿಠಲನ
ಭಾವವ ನೋಳ್ಪ ಸು । ಭಾವವ ನೀಯೋ ೫

೨೪೧

ಪೋಷೀಸೊ ಹರಿ ಮಂಚಕ । ಪೆಡೆಗಳು
ಸಾಸೀರಶುಭೂಷಶಿಪ॥

ಶಿಷ ಎನ್ನ ದೋಷ ನಿ । ಶ್ಯೇಷವ ಗೈಸುತ
ಸಾಸೀರ ನಾಮವ ಮನಾ । ಕಾಶದೊಳು ತೋರಿ ಅ.ಪ.

ಬೇಡೂವೆ ವಾತಾಶನಾ । ಎನ್ನನ್ನು
ಕಾಡೂವ ವ್ಯಜಿನಾಹನಾ ।
ಮಾಡಿ ಮನ್ಮಾನಸದಿ । ರೂಢಿಗೊಡೆಯ ಹರಿಯ
ನೋಡುವ ಸುಖ ತಡ । ಮಾಡದೆ ಕೊಟ್ಟು ಕಾಯೋ ೧

ಚಕ್ಷುವೆ ಶ್ರವ ಕಾಯಾ ಪೂರ್ವದ
ತ್ರ್ಯಕ್ಷನೆ ಸುರಗೇಯಾ ।
ಕುಕ್ಷೀಯೆ ಪಾದವೆಂಬ । ಲಕ್ಷಣ ಶಿರದಲ್ಲಿ
ಲಕ್ಷೀಸದಲೆ ಜಗ । ಸರ್ಪಪಾಯಿತ ನಿನಗೆ ೨

ಜೀವ ನಾಮಕ ನೆನಿಪೆ । ಹರಿಯನು
ಸೇವಿಸುತಲಿ ಸುಖಿಪೆ ॥
ಕಾವಕೊಲ್ಲುವ ಗುರು । ಗೋವಿಂದ ವಿಠಲನ
ತೀವರ ತೋರ್ಪುದು । ನೀ ವೊಲಿದೆನಗಿನ್ನು ೩

೨೪೨

ಹರಿಶಯ್ಯ - ಹರಿಶಯ್ಯ ಪ

ಪೂರ್ವ ತ್ರಿಯಂಬಕ । ಜೀವರ ಮಾನಿಯೆ ಅ.ಪ.

ವಾರುಣಿ ಪತಿ ನಿನ । ಚಾರು ಚರಣವನು
ಆರಾಧಿಪೆ ಭವ । ವಾರಿಧಿ ದಾಟಿಸು ೧

ದಾತನೆ ಪ್ರಾರ್ಥಿಪೆ । ವಾತೋದ್ಭವ ಎನ
ಪ್ರೀತಿಲಿ ಕರಪಿಡಿ । ವಾತಾಶನ ಗುರು ೨

ಶೇಷ ಶೇಷ ಎನ । ದೋಷ ನಿಕರ ನಿ-
ಶ್ಯೇಷ ಗೈಸಿ ಸಿರಿ । ಕೇಶವನಲಿ ಬಿಡು ೩

ಖಗವರ ಸಮ ಪ । ನ್ನಗ ಜಗಧರ ಹರಿ
ನಗಧರ ಮಂಚನೆ । ಬಗೆ ಹರಿಸೀ ಭವ ೪

ಪಕ್ಷಿಯ ವಹ ಹರಿ । ಪಕ್ಷಸಾಧಕ ಗುರು
ಚಕ್ಷುಶ್ರ್ಯವ ಎನ । ಈಕ್ಷಿಸು ಕರುಣದಿ ೫

ಸ್ವಪ್ನದಿ ಇತ್ತಿಹ । ಆಜ್ಞೆಯಂತೆ ಗುರು
ಸ್ವಪ್ನಾಖ್ಯಾನದಿ । ಪ್ರಜ್ಞೆಯ ನಿರಿಸೋ ೬

ಸಾವಿರ ಮುಖದಲಿ । ಭುವಿಧರಭಿಧ ಗುರು
ಗೋವಿಂದ ವಿಠಲನ । ಸೇವಿಪೆ ಭಕುತಿಲಿ ೭

ಶ್ರೀಮಹರುದ್ರದೇವರು

೨೪೩

ಅಂಬಾ ರಮಣ ಶಂಭೋ – ಪಾಲಯ ಪ

ಬಿಂಬ ನೃಹರಿಪಾದ । ಬೆಂಬಿಡದಲೆ ಭಜಿಪ ।
ಶಂಭೋ ನಿನ್ನಯ ಚರಣಾಂಭೋಜ ವಂದಿಪೆ ಅ.ಪ.

ವಾಸ ಮಶಣ । ವಿಭೂತಿ ಭೂಷನೆ
ಈಶ ಗಿರಿ ಕೈಲಾಸ ವಾಸನೆ
ಹೇಸದಾ ಶಿವ । ಪಾಹಿ ವೃಷಭಧ್ವಜ
ನೀ ಸದಾ ಗತಿ । ಪ್ರಾಣ ಶಿಶುಪಾಹಿ ೧

ತ್ರ್ಯಕ್ಷ ಸುರಾಧ್ಯಕ್ಷ । ವೃಷಭೇಕ್ಷಾ
ಪಕ್ಷಿ ವಹ ಪ್ರಿಯ । ದಕ್ಷ ಯಜ್ಞಹ
ಅಕ್ಷಿ ಇನ ಅನಲೇಕ್ಷಣ ಸೋಮೇಕ್ಷ
ಪಕ್ಷಿ ಸಮಪದ । ಹರ್ಯಕ್ಷ ಗುರುಪಾಹಿ ೨

ಈಂಟಿ ನೀ ವಿಷ । ವಿಷಕಂಠನೆನಿಸಿದೆ
ಭಂಟನಿಹೆದಶ । ಕಂಠ ಹರನಿಗೆ
ನೆಂಟ ಗುರು ಗೋ । ವಿಂದ ವಿಠಲನ
ಭಂಟನ ಗೈದು ಭವ । ದಾಂಟಿಸೋ ಹರನೇ ೩

೨೪೪

ಅಂಬಾರಮಣ ಶಿವನೇ । ಚತುರಾಸ್ಯ ಭವನೆ ।
ನಂಬಿ ಬಂದಿಹೆನಯ್ಯ । ಕಂಬು ಕಂಧರ ಹರಿಯ
ಬೆಂಬಿಡದಲೆ ಕಾಂಬ ॥ ಹಂಬಲ ನೀ ತುಂಬು ಪ

ಮನಸೀನ ಅಭಿಮಾನಿ । ಕನಸು ಮನಸಿನಲಿ
ಅನಘ ಅನಂತನ । ಗುಣಗಣ ಪೂರ್ಣನ
ನೆನಸುವಂತೆನ್ನನು । ಮಾಳ್ಪುದಯ್ಯ ಸ್ಥಾಣು ಅ.ಪ.

ಮಂಗಳ ಸನ್ಮುಖ । ಅಂಗಜ ಪಿತ ಸಖ
ಶಿಶಿಳ್ಳ ಶಿಖ । ತವಸುತ ಷಣುಖಿ
ಭಂಗಶಿಪ ದುಃಖ । ಶಿಸು ಭವ ದುಃಖ
ಇಂಗಿತಜ್ಞರ ಪ್ರಮುಖ । ಸಂಗದಿ ಕೊಡು ಸುಖ ೧

ಭೂಷಿತ ವಿಭೂತಿ । ನೊಸಲು ನಿನ್ನದು ಖ್ಯಾತಿ
ಭಾಸಿಸುತಿಹ ಜ್ಯೋತಿ । ಈಶ ಚಕ್ಷು ಜ್ಯೋತಿ
ಲೇಸು ಸದಾಗತಿ । ಆ ಸಮೀರನ ಪ್ರೀತಿ
ವಸು ನಿನ್ನೊಳತಿ । ಈಶ ಪಾಲಿಸೊ ಗತಿ ೨

ಗರ್ವರಹಿತ ದೇವ । ದರ್ವಿ ಜೀವನ ಕಾವ
ಸರ್ವ ಭಾರವು ದಾವ । ಶರ್ವ ನಿನ್ನದೊ ಭವ
ಗುರ್ವಂತರಾತ್ಮಗುರು । ಗೋವಿಂದ ವಿಠಲನ
ಸರ್ವದ ಸ್ಮರಿಸೂವ । ಶಿವ ಕೊಡು ಈ ಭಾವ ೩

೨೪೫

ಅರ್ಚಿಸೊ – ಮನುಜ – ನೀನರ್ಚಿಸೊ ಪ

ಅರ್ಚಿಸೊ ಮನುಜ ನೀ ಶಿವನಾ । ನಮ್ಮ
ಅಚ್ಯುತ ಪ್ರಿಯ ಸಖ ಹರನಾ । ಆಹ
ಪೆಚ್ಚ ಪೇರ್ಮೆಲಿ ನಮ್ಮ । ಅಚ್ಯುತಾನಂಘ್ರಿ ಸ–
ದಾರ್ಚಿಪ ಗುಣನಿಧಿಯೆ । ನಿಚ್ಚಟ ಮರೆಯದೆ ಅ.ಪ.

ವಾರಿಧಿ ಮಧ್ಯದಿ ಅಂದೂ । ಮಹಾ
ಗರಳ ಉದ್ಭವಿಸಿತು ಮುಂದೂ । ನೋಡು
ಸುರಾಸುರರೆಲ್ಲರು ಬಂದೂ । ಭಾಳ
ಮೊರೆಯ ನಿಟ್ಟರು ಕೇಳೊ ಅಂದೂ । ಆಹ
ಭರದಿಂದ ಬರುತಲೆ । ಗುರು ಪವನನ ಪಾದ
ಸ್ಮರಿಸದೆ ಗರಳವ । ಭುಜಿಸಲು ಬಂದನ ೧

ಉದುಭೂತ ವಿಷದ ಪಾತ್ರೆಯನೂ । ಹರ
ಮುದದಿ ಹಸ್ತದಿ ಕೊಂಡು ಅವನು । ನೋಡಿ
ಅದುಭೂತ ವಿಷದ ಜ್ವಾಲೆಯನು । ತಾನು
ಬೆದರಿ ಯೋಚಿಸಿದನು ಶಿವನು । ಆಹ
ಅದನರಿತು ಶಿರಿಯರಸ ಪದುಮಾಕ್ಷ ಕೃಷ್ಣನು
ಮುದದಿ ಅಭಯವಿತ್ತು । ಸದಯವ ತೋರಿದ ೨

ಅಂತರಂಗವ ತಿಳಿದು ದಿವ್ಯ । ರಾಮ
ಮಂತ್ರವನರುಹಿದ ಭವ್ಯ । ರೂಪಿ
ಚಿಂತಿತ ಫಲದನೊ ಸೇವ್ಯ । ಕೇಳೊ
ಮಂತ್ರೋದ್ಧಾರಗೆ ಪೇಳ್ದತ್ವರ್ಯ । ಆಹ
ಮಂತ್ರಿ ಹನೂಮಂತ । ಮರ್ಧಿಸಿ ಇತ್ತಂಥ
ಸ್ವಂತ ವಿಷವನುಂಡು । ಪಂಥವಗೆಲಿದನ ೩

ಕಂಟಕ ಕಳೆದನು ಶಿವನು । ವಿಷ
ಕಂಠನೆನೀಸಿದನವನು । ದಶ
ಕಂಠ ಹರನ ನಾಮವನ್ನು । ಅವ
ಕುಂಠಿತನಾಗದೆ ಇನ್ನು । ಆಹ
ಕುಂಟಿಸಿ ಈಂಟಿಸಿ । ಧಿಮಿಧಿಮಿಕೆನ್ನುತ
ಸೊಂಟದಿ ಕೈಯಿಟ್ಟು । ನಾಟ್ಯವನಾಡ್ವನಾ ೪

ಪವನ ಮತಾಬ್ಧಿಲಿ ಚರಿಪ । ಗುರು
ಗೋವಿಂದ ವಿಠಲನಾಶ್ರಯಿಪ । ಗೌರಿ
ಧವನ ಸಂಜೆಯಲ್ಲಿ ಭಜಿಪ । ನರ
ಭವವ ಕಳೆದು ಹರಿ ಸಮೀಪ । ಆಹ
ಜವದಿ ಸೇರುವ ಅವ । ಸಂದೇಹ ಸಲ್ಲದು
ಸವನ ತ್ರಯಾದಲ್ಲಿ । ಶಿವನ ಈ ಪರಿ ಸ್ಮರಿಸೆ ೫

೨೪೬

ಅರಣೀ ಗರ್ಭದಿಂ ಸಂಭವ । ಸುರ ಜೇಷ್ಠ ಭ್ರಾತಾ
ಸುರಪತಿ ನುತ ವೈಭವ ಪ

ಶರಣರ ವರಪ್ರದ । ಪರಾಶರ ಭವ ಭವ
ಸಿರಿವರ ವರ ಪ್ರಿಯ । ಪರಿ ಹರಿಸಾಮಯೆ ಅ.ಪ.

ಅಂಬಾರ ಮಣಾ – ಶಂಕರಾ । ಗೌರಿವರಾ ।
ಜಂಭಾಸುರ ಹರ – ಸುರ ವರ ॥
ಅಂಬುಜಾಸನ – ಕುವರಾ – ಗಂಗಾಧರಾ ।
ಹಂಬಲಿಸುವ – ಭಕ್ತರ ॥
ಶುಂಭ ನಿಶುಂಭರ । ಸಂಹರ ರಾಮನ
ಅಂಬುಜ ಪದ ದ್ವಯ । ನಂಬಿದ ಭಕ್ತನೆ ।
ತುಂಬಿದ ಭಕುತಿಯ । ಹಂಬಲ ಹರಿಯಲಿ
ಸಂಭ್ರಮದಲಿ ಕೊಡು । ಶಂಭು ವಂದಿಸುವೆ ೧

ಪ್ರಮಥರ ಪೋಷ–ಭೂತೇಶ–ಭುವನೆಶಿ
ವ್ಯೋಮಕೆಶಿ–ಉಗ್ರೇಶ ॥
ಸಶಿಭನಸ ಮುನೀಶ – ಕೈಲಾಸ ವಾಸೇಶ
ಅಮರಾರಿ ನಾಶ ಸತೀಶ ॥
ಕುಮತಿಗಳ್ಮೋಹಕ । ಕುಮತವ ವಿರಚಿಸಿ
ರಮೆಯರಸಗೆ ಬಹು । ಪ್ರಮುದವ ಪಡಿಸಿದೆ ।
ಅಮರೋತ್ತಮ ನಿಮ । ವಿಮಲ ಪದಾಬ್ಜಕೆ
ನಮಿಸುತ ಬೇಡುವೆ ಸನ್ಮತಿ ಪ್ರದನೇ ೨

ವಟು ವೇಷವಾ ಧರಿಸೀ – ಭಸ್ಮವ ಪೂಸಿ
ಕುಟಿಲರಹಿತ ತೇಜಸೀ ॥
ಜಟೆ ನಿಚಯವ ಧರಿಸಿ – ಮಂಜುವಾಸೀ
ಹಸ್ತದಿ ಪುಸ್ತಕ ಭೂಷೀ ॥
ರಚಿಸುತ ವೇದವ । ಕಟಗಳ ಧೂರ್ಜಟಿ
ನಿಟಿಲಾಕ್ಷ ಸ್ವಪ್ನದಿ । ಎಟಕರ ಬೀಸುತ
ಕುಟಿಲರಹಿತ ಗುರು । ಗೋವಿಂದ ವಿಠಲನ ।
ವಟುವೆನಿಸಿಹ ಶುಕ । ಶುಕಿ ಭವನೆನಿಸೀ ೩

೨೪೭

ಉಮಾರಮಣ ಶಂಭೋ – ಪಾಲಯ
ಉಮಾರಮಣ ಶಂಭೋ ಪ

ರಮಾ ರಮಣ ಪದ । ಕಮಲ ಮಧುಪನೆ
ಯಮ ನಿಯಮ ಶಮ । ದಮಾದಿ ಗುಣ ಕೊಡು ಅ.ಪ.

ಕಮಲ ಭವ ಭವ ಶಂಕರಾ ।
ವಿಮಲ ರೂಪಳು ಗಂಗಾಧರಾ
ಅಮರ ಸನ್ನುತ ಹರ ಹರಾ ।
ನಮೊ ನಿನ್ನ ಪದ ಪುಷ್ಕರಾ ೧

ದೂರ್ವಾಸ ಮಹ ಮುನಿ ರುದ್ರನೆ ।
ಪೂರ್ವ ದಿವಿಜ ಪ್ರಿಯ ಉಗ್ರನೇ
ಮೌರ್ವಿ ಪಿನಾಕಿಧರ ಶೂರನೇ ।
ಶರ್ವಾನೆ ತುತಿಸಲಾಪನೇ ೨

ಗುರು ಗೋವಿಂದ ವಿಠಲಾ ।
ಪೊರೆವನೆಂಬಂಥ ನಿಶ್ಚಲಾ
ವರಮತಿಯನೀಯೊ ತ್ರೈಶೂಲ ।
ಧರ ಹರಿಸೊ ಮಾಯ ಪಟಲಾ ೩

೨೪೮

ಏನು ಸೋಜಿಗವಯ್ಯ ಪಂಪಾಪತೇ ಪ

ನೀನೆ ಪರನೇಂಢ್ಹೇಳ್ವ । ದೀನ ಜನಗಳನೆರಹೀ ಅ.ಪ.

ಹರಿಯಾಜ್ಞೆಯನುಸರಿಸಿ । ದುಶ್ಯಾಸ್ತ್ರ ಬಿತ್ತರಿಸಿ
ಹರಿಪರನು ಎಂತೆಂಬ । ವರ ಜ್ಞಾನ ಮರೆಸೀ ।
ಸರ್ವ ತಮೋ ಯೋಗ್ಯ । ನರರಿಗ್ವರಗಳನಿತ್ತು
ಉರುತರೈಹಿಕ ಸುಖದಿ । ಮೆರೆಸುವಿಯೊ ಪರವಾ ೧

ಜಂಗಮರು ಜೋಗಿಗಳು । ಲಿಂಗಗಳ ಧರಿಸಿಹರು
ಮಂಗಳಾತ್ಮಕ ನಿನ್ನ । ಅಂಗದೊಳಗೈಕ್ಯಾ ।
ಮಂಗನಂದದಿ ಬಯಸಿ । ಮಂಗಳವ ಕಳಕೊಂಡು
ಭಂಗ ಪಡುವರು ಪರದಿ । ಶೃಂಗಾರ ಮೂರ್ತೇ ೨

ಹರಿಕಾರ್ಯ ಸಾಧಕರಶಿಲೆರಡನೇ ಯಶಿನಾಗಿ
ಪರಮ ವೈಶಿವನೆನಿಸಿ । ಭೂ ಭುಜರಿಗೇ
ಹರಿ ಪುರದ ದಾರಿಯನು । ತೋರಿಸುತ ಮೆರೆಯುತಿಹ
ವಿರೂಪಾಕ್ಷ ನಿನಚರಣ । ಸರಸಿಜಕೆ ನಮಿಪೇ ೩

ಮರುತಾತ್ಮ ಸಂಭೂತ । ವೈರಾಗ್ಯನಿಧಿ ಶಿವನೆ
ಗಿರಿಜೆಯಳ ಪರಿಗ್ರಹಿಪ । ಕಾರ್ಯ ನಿರ್ವಹಿಸೀ ।
ಶರಣ ಜನ ಸಂದೋಹ । ನೆರಹಿ ವೈಭವದಿಂದ
ಪರಮ ಮುದವನು ಈವೆ । ಹರಿಯ ಭಕುತರಿಗೆ ೪

ಬಿಂದು ಮಾಧವ ಗುರು । ಗೋವಿಂದ ವಿಠ್ಠಲನ
ಸಂದರ್ಶನಾದಿಯಲಿ । ಛಂದದಲಿ ಗೈದೂ ।
ಬಂದು ನಿನ್ನಂಘ್ರಿಗಳ । ದ್ವಂದ್ವ ಕೆರಗುವ ಭಕ್ತ
ವೃಂದಗಳಿಗೀವೆಯಾ । ನಂದ ಸಂದೋಹ ೫

೨೪೯

ಓಂಕಾರಾ ಕಾರಾ ಶಿವನೇ । ಪಾಲಯ ಮಾಂ ಪ

ವೈಕಾರಿಕಾದಿ ತ್ರ್ಯಾಕಾರ ಹರನೆ
ಸ್ವೀಕರಿಸುವುದೀ ತೋಕನ ಬಿನ್ನಪ ಅ.ಪ.

ನರ್ಮದೆ ಕಾವೇರೀ ಸಂಗಮಾ । ಶೈಲವಾಸಾ ।
ಹರ್ಮ್ಯ ದೊಳಗೆ ಇಹ । ಬೊಮ್ಮನಯ್ಯಾ ಪದ
ಕಮ್ಮಲ ಕಾಂಬ ಸು । ಹಮ್ಮ ನೀಯೊ ಹರ ೧

ಜ್ಯೋತೀ ರೂಪಕಾ – ರುದ್ರನೇ । ಕೈಲಾಸವಾಸಾ ।
ಖ್ಯಾತಿ ಕೇಳಿ ಸುರ । ವ್ರಾತ ತುತಿಸೆ ಬಲು
ಪ್ರೀತಿಲಿ ತ್ರಿಪುರಾ । ರಾತಿ ಎನಿಸಿದೇ ೨

ಬದರೀಯಾ ವಾಸವಾ । ನಾರಾಯಣನಾ ।
ಪದದ ಉದಕ । ಅಭಿಷೇಚಿಸುವೆನು
ಮುದದಿ ಕೊಳ್ಳೊ ಗುರು । ಗೋವಿಂದ ಪೌತ್ರಾ ೩

೨೫೦

ಕರಿಗೊರಳಾ ಪಾಲಿಸೋ ಪ

ಕರಿವರದನ ದಯ । ನಿರುತ ನಿನ್ನೊಳಗಿದೆ
ಸುರಜೇಷ್ಠಾನುಜ । ಶರಣನ ಕರಪಿಡಿ ಅ.ಪ.

ಅಸುರಾಮರ ತತಿ । ವಿಷಧಿಯ ಮಥಿಸಲು
ವಿಷ ಉದ್ಭವಿಸಲು । ಅಸುಪತಿ ಸಂಸ್ಕೃತ ।
ವಿಷವ ನುಂಡ । ವಿಷಕಂಠನಾದೆ
ಅಸಮ ಸಾಹಸಿಯೆ । ಪಶುಪತಿ ಎನಿಸಿಹೆ ೧

ಆರು ನಿನಗೆ ಸರಿ । ವೈರಾಗ್ಯಾಧಿಪ
ಕೋರುವೆನೋ ತವ । ಕರುಣಾ ರಸವನು
ಭೂರಿ ದಯದಿ ಮಮ । ಕಾರವ ಹರಿಸುದು
ಬೇರೊಂದನೊಲ್ಲೆ । ಕಾರುಣ್ಯಾಂಬುಧಿ ೨

ದೇವ ದೇವ ಹರಿ । ದಾವಾಗ್ನಿಯ ಭಯ
ತೀವರ ಹರಿಸುತ । ಗೋವ್ಗಳನುಳುಹಿದ ।
ಭಾವಜ ಪಿತ ಗುರು । ಗೋವಿಂದ ವಿಠಲನ
ಪಾವನ ಪದ ದ್ವಯ । ಭಾವದಿ ತೋರಿಸಿ ೩

೨೫೧

ಕಾಮಾರಿ ಕಾಮಿಪೆ ಕಾಮನ ಪಿತನಾ ।
ಕಮನೀಯ ರೂಪನ ಪ

ಉಮೆಯರಸನೆ ಮಮ ವಿಷಯ ಸ್ತೋಮವ
ನೀ ಮಾಣಿಪುದಲೊ ಹೇ ಮಹದೇವ ಅ.ಪ.

ಗೌರೀ ವರ ತವ ಸುಂದರ ಚರಣಾ । ಸ್ಮರಿಸುವೆ ಪ್ರತಿದಿನಾ
ವೈರಾಗ್ಯ ಹರಿಭಕ್ತಿ ಜ್ಞಾನಾ । ಹರಬೇಡುವೆ ನಿನ್ನಾ ।
ಮಾರಹರನೆ ಮುರವೈರಿಯ ಪ್ರೀಯನೆ
ಶೌರಿಯ ತೋರಿಸೊ ಹೃದ್ವಾರಿಜದಲಿ ೧

ಮೈನಾಕಿ ಹೃತ್ಕುಮುದಕೆ ಚಂದ್ರಾ । ಗುಣಗಣ ಸಾಂದ್ರಾ
ವಾಣ್ಯಾದ್ಯರ ಪೂಜಿಪ ಫಣೀಂದ್ರ । ಗುಣಸಾಮ್ಯವೀಂದ್ರ
ಫಣಿಯ ಕುವರ ನೀ ಫಣಿ ಪದ ಯೋಗ್ಯನೆ
ಫಣಿಯ ಶಯ್ಯನ ಕಾಣಿಸೊ ಬೇಗನೆ ೨

ವೈಕಾರಿಕ ತಾಮಸ ತೈಜಸ ಹರನೇ । ಸುಖಕರ ಶಿವನೇ
ವಾಕು ಲಾಲಿಸು ಗಜ ಚರ್ಮಾಂಬರನೇ । ಶಿಖಿವಾಹನ ಪಿತನೇ ।
ಶ್ರೀಕರ ಗುರು ಗೋವಿಂದ ವಿಠಲನ
ಸಖ ಸ್ವೀಕಶಿನ್ನನು ಓಕರಿಸದ ೩

೨೫೨

ಗೌರೀವರನೇ ಪಾಲಿಸೋ – ನಿನ್ನ ಶ್ರೀಪಾದ
ವಾರಿಜವ ತೋರಿಸೋ ಪ

ಘೋರವೆನಿಪ ಭವ ವಾರಿಧಿ ಯೊಳು ನಾ
ಪಾರವ ಕಾಣದೆ ಧೀರನೆ ಶರಣು ಅ.ಪ.

ಪ್ರಮಥ ಗಣಗಳ ಪೋಷಾ – ಪಾರ್ವತೀಶಾ ಉಮಾದೇವಿಯ ಪ್ರಾಣೇಶ ॥
ಅಮರೋತ್ತಮ ಶಿವ । ಅಮರೇಂದ್ರ ವಂದ್ಯ
ರಮೆಯರಸನ ಹೃ । ದ್ವ್ಯೋಮದಿ ತೋರೋ ।
ಸತಿ ಸದನ । ಪಂಚ ವದನ । ಜಿತಮದನ ಕೃತ – ಅಧ್ವರ – ಭಂಜನ ೧

ಪಕ್ಷಿವಾಹನ ಮಿತ್ರಾ – ಸುಚರಿತ್ರಾ ಯಕ್ಷಪತಿ ಧನಪ ಮಿತ್ರಾ ॥
ದಕ್ಷಿಣಾಕ್ಷಿ ಅಧ್ಯಕ್ಷ ಸೇವಕ ಗೋ–

ವತ್ಸ ಭಕ್ತಿ ದಯದೀಕ್ಷಿಸೆನ್ನ ಶಿವನೇ ।
ಮರುತ ಸುತಾ ಜಿಷ್ಣು ಹಿತಾಪಾಶುಪತಾ ವರ ಅಸ್ತ್ರಸುದಾತಾ ೨

ಮಹದೇವ ಮೋಹ ಶಾಸ್ತ್ರಾ – ಸುಕರ್ತಾ
ಅಹಿಶಯ್ಯ ಪ್ರೀತಿ ಪಾತ್ರ ॥
ಅಹಿ ಪದಕೆ ಯೋಗ್ಯ । ಮಹ ಮಹಿಮ ಹೃ–
ದ್ಗುಹದಿ ಗುರು । ಗೋವಿಂದ ವಿಠಲನ
ತೋರೆಂಬೆ – ಗುರುವೆಂಬೆ – ದಯ ಉಂಬೆ
ತವದಯದಿ ಹರಿ ಕಾಂಬೆ ೩

೨೫೩

ತ್ರಿಶೂಲಧರ ಶಿವನೆ । ತ್ರಿಪುರಾಂತಕ ಹರನೇ
ತವ । ವಶ ಮಾಡಿಕೊ ಎನ್ನ । ಪಶುಪತಿ ಶಂಭೋ ।
ಅಸುಪತಿಯನೆ ತೋರೋ ॥ ಕರುಣವ ನೀ ಬೀರೋ ಪ

ಮನಸೀನ ಒಡೆಯನೆ । ಕನಸು ಮನಸಿನಲಿ
ಅನಘ ಹರಿಯ ಪದ । ನೆನೆವ ಮತಿಯನಿತ್ತು
ಎಣಿಸು ಭಕ್ತನೆಂದು ॥ ಬೇಡುವೆ ಇನಿತೆಂದು ಅ.ಪ.

ಮಾಹಿತಾಂಘ್ರಿಯ । ವಾಹಕನ ಸಮ
ಮೋಹಶಾಸ್ತ್ರ ಪ್ರ । ವಾಹ ರಚಿಸುತ ॥
ದ್ರೋಹಿಗಳ ಬಲು । ಮೋಹ ಪಡಿಸುತ
ಶ್ರೀ ಹರಿಯ ಸಖ । ಪಾಹಿ ಸುಖಪ್ರದ ೧

ಸರ್ಪ ಶಯ್ಯ ಪ್ರಿಯ । ಸರ್ಪ ಭೂಷಣ
ಸರ್ಪ ಕಟಿ ಸೂತ್ರ । ಒಪ್ಪೊತವ ಸುತ ॥
ಸರ್ಪಾರಿ ಸಮಪದ । ಕಪ್ಪೊಗೊರಳ ಹರ
ತಪ್ಪೊಗಳನು ಎಲ್ಲ । ಒಪ್ಪಿಕೊಳ್ಳಯ್ಯ ೨

ಕೈಲಿ ಕರ್ಪರ । ಮೈಲಿ ಭಸ್ಮವು ।
ಶೂಲ ಪಾಣಿಯೆ । ಶೈಲಜಾಪತೆ ॥
ಕಾಲಕಾಲಕೆ । ಕಾಲನಾಮನ
ಶೀಲ ಸ್ಮೃತಿಯನು । ಪಾಲಿಪುದು ಹರ ೩

ವಾಸ ಮಶಣವು । ಕೇಶ ವ್ಯೋಮವು
ಹೇ ಸದಾಶಿವ । ನೀ ಸಲಹೊ ಎನ್ನ ॥
ಮೀಸಲದ ಮನ । ಕಾಶಿಸುವೆ ಹರ
ಹೇ ಸದಾಗತಿ ಕೂಸು ನೀ ನಲ್ಲೆ ೪

ದೇವ ವರ ಶಿವ । ಮಾವ ವೈರಿಯ
ಹಾವ ಭಾವಕೆ । ಓದಿ ಮೋಹಿಸುತ ॥
ಧಾವಿಸಲು ಹರಿ । ತೀವ್ರ ಕಾಯ್ದನು
ಗೋವಳನು ಗುರು । ಗೋವಿಂದ ವಿಠಲ ೫

೨೫೪

ನಂದಿವಾಹನಾ ಪಾಲೀಸೊ ನೀ । ಕಂದ ನೆಂದನಾ ಪ

ಕಂದು ಗೊರಳ ಮೌ । ಳೆಂದು ಶಿಖರ ಅಮ
ರೇಂದ್ರ ಮುಖರು ಸುರ । ವೃಂದ ವ್ಯಂದ್ಯ ಪದ ಅ.ಪ.

ನಂದ – ನಂದನಾ – ಪ್ರಿಯ ಸಖ । ಮಂದಜಾಸನಾ
ಕಂದ ನೆನಿಸಿ ದುರ್ । ವೃಂದ ತ್ಯಜಿಸಿ ತವ
ತಂದೆ ಯಾಜ್ಞೆಯಲಿ । ನಿಂದು ಸರಿದ ಹರ ೧

ವಾಮದೇವನೇ – ದಿತಿಸುತ । ಸ್ತೋಮ – ಪ್ರೀಯನೇ ॥
ಶಾಮ ಸುಂದರ ಹರಿ । ಪ್ರೇಮಾನ್ವಿತ ಸುತ
ಕಾಮಾರಿಯೆ ಹರ । ಸಾಮಜವಾಸಾ ೨

ಭವ್ಯ - ರೂಪನೇ - ಶೇಷನ ಪದ । ದಿವ್ಯ ಯೋಗ್ಯನೇ ॥
ಅವ್ಯಯಾತ್ಮ ಸುರ । ಸೇವ್ಯ ನಂಘ್ರಿ ದಶ
ದಿವ್ಯ ಕಲ್ಪ ತಪ । ಗೈಯ್ಯೆ ಶಯ್ಯನಾದೆ ೩

ನಾಗ - ಭೂಷಣಾ - ಪರಮ ವಿ । ರಾಗ - ಭಾವನಾ ॥
ಜೈಗಿಷವ್ಯ ಮಹ । ಯೋಗಿ ರೂಪ ಭವ
ರೋಗ ವೈದ್ಯ ಹೃ । ದ್ರೋಗ ಕಳೆಯೊ ಶಿವ ೪

ಗೌರಿ ಮನೊ - ಹರಾ - ಕೈಲಾಸವಾಸ । ಕೈರಾತಾ ಕೃತಿಧರಾ ॥
ಗಿರಿ ಇಂದ್ರ ಕೀಲದಿ । ಘೋರ ತಪಸಿ ನರ
ಸಾರೆ ನಿನ್ನ ಪದ । ಶೂರ ಪಡೆದ ಶರ ೫

ಗಂಗೆಯ - ಧರನೇ - ಶ್ರೀ ಶುಕ । ಲಿಂಗಾಕಾರನೇ ॥
ತುಂಗ ಮಹಿಮ ನಿ । ಸ್ಸಂಗ ಹರಿಯ ದ್ವಿತಿ
ಯಂಗ ಡಮರು ಶೂ । ಲಿಂಗಳ ಪಿಡಿದಿಹ ೬

ವೈಕಾರಿಕಾ - ತೈಜಸ - ತಾಮಸ । ಸಾಕಾರಿ - ಓಜಸಾ ॥
ನೀ ಕುಶಾಸ್ತ್ರದಲಿ । ಭೀಕರರನು ಅವಿ
ವೇಕರ ಮಾಡ್ದೆ । ಪಿ । ನಾಕಿ ಧರ ಹರ ೭

ರುಂಡ - ಮಾಲನೇ - ಮುನಿಜ ಮೃ । ಕಂಡ - ಪಾಲನೇ ॥
ಅಂಡಜ ಮಹ ಬ್ರ । ಹ್ಮಾಂಡ ದೊಡೆಯ ಪದ
ಪುಂಡರೀಕದೊಳು । ಬಂಡುಣಿ ಎನಿಸಿಹೆ ೮

ಶಂಭೊ - ಶಂಕರ - ಧೂರ್ಜಟೆಯೆ । ಅಂಚೆ - ಮನೋಹರಾ ॥
ಕಂಬು ಪಾಣಿ ಪದ । ಹಂಬಲಿಸುವೆ ಹೃದ
ಯಾಂಬರದೊಳು ಎನ । ಬಿಂಬನ ತೋರಿಸು ೯

ಸೋಮರ್ಕಾನಲ - ಈಕ್ಷಣಾ । ಭೀಮ - ಕೈಕಪಾಲ ॥
ಭೀಮ ಭವಾಟವಿ । ಧೂಮಕೇತು ಸಿರಿ
ರಾಮ ಪದಾಶ್ರಿತ । ವೈಮನ ಕಳೆಯೊ ೧೦

ಭಾವ – ಜಾರಿಯೇ – ಮುರುಹರ । ರಾವಣಾದಿ – ಪ್ರಿಯಾ ॥
ಸಾವಧಾನದೊಳು । ಭಾವ ಶುದ್ಧಿಸುತ
ತೋರ್ವುವೆನಗೆ ಗುರು । ಗೋವಿಂದ ವಿಠಲನ ೧೧

೨೫೫

ನೀಲಕಂಠ । ನೀಲಕಂಠ । ನೀಲಕಂಠ । ಪಾಲಯ ಪ

ಗಾಳಿದೇವನ ಒಲಿಮೆ ಯಿಂದ
ಕಾಲಕೂಟ ಮೆದ್ದ ಶಿವನೇ ಅ.ಪ.

ಭಕುತಾಭೀಷ್ಟ ಪ್ರದನು ಎನಿಸಿ ।
ಸುಕೃತ ಉಳ್ಳ ಜನರ ಕರೆಸಿ ॥
ಪ್ರಕಟಗೈವೆ ನಿನ್ನ ರೂಪ ।
ಭೃಕುಟಿ ಭವನೆ ಕಳೆವೆ ಪಾಪ ೧

ಕಾವೇರಿಕೆ ನರ್ಮದೇಗಳ್ ।
ಸೇರ್ವ ಸನಿಯ ಶೈಲದಲ್ಲಿ ॥
ಭಾವ ಜಾರಿ ನಿನ್ನ ಪ್ರಭವ ।
ತೋರ್ವೆ ಜ್ಯೋತಿರೂಪ ಭಾವ ೨

ನಿರುತ ಗಂಗೆ ಧರಿಪಗೇ ಜಲ ।
ಎರೆವೆವೆಂಬ ನರರ ಉಕುತಿ
ಸುರರು ನಗುವ ಪರಿಯು ಅಲ್ಲವೆ ।
ಶರಣ ಜನರ ಪೊರೆಯೆ ಸ್ವೀಕರ ೩

ದೂರದಿಂದ ಬಂದಿಹೇವೊ ।
ಸಾರಿ ನಿನ್ನ ಚಾರು ಚರಣ
ಘೋರ ಭವವ ತಾರಿಪ ಓಂ ।
ಕಾರ ಪ್ರತಿಮ ಕಾಯೊ ಎಮ್ಮ ೪

ಹರಿಯ ಪದದ ನೀರನೀಗ ।
ಹರಿಯ ದ್ವಾರದಿಂದ ತಂದೂ
ಹರಿಯ ದ್ವಾರ ತೋರ್ಪ ಭಾವಿ ।
ಹರಿಂಶಿಶಯ್ಯಗೆ ಎರೆವೆನಯಿಶಿ ೫

ಮನವ ಆಳ್ವನೆ ಮೊರೆಯ ಕೇಳಿ ।
ಮನದ ಮಲಿನ ತ್ವರದಿ ತಳ್ಳಿ
ಮನದಾಭಿಧನ ಚಿಂತೆಯಲ್ಲಿ ।
ಮನವನಿರಿಸೊ ಕೃಷ್ಣನಲ್ಲಿ ೬

'ದೂಃ' ಎಂತ ಮರುತ ನಿನ್ನ ।
ಶರೀರದೊಳಗೆ ಇರುವನಲ್ಲಿ
ದೂರುವಾಸ ತೋರೊ ಶ್ರೀಪ ।
ಗುರು ಗೋವಿಂದ ವಿಠಲ ರೂಪ ೭

೨೫೬

ನೇತ್ರ – ತ್ರಯನೇ । ಅಹಿಪದ ಪಾತ್ರಾ ॥
ಗೋತ್ರಾರಿ ಪಂಕೇರುಹ ಮಿತ್ರಾ । ಸ್ತೋತ್ರ ಪಾತ್ರ ಶತಪತ್ರ ಪ

ಚಿತ್ರ ಚರಣ ಭುವನತ್ರಯ ದೊಳಹಂ
ತತ್ವ ವ್ಯಾಪ್ತ ಗೌರವ ಗಾತ್ರಾ ಅ.ಪ.

ಯಕ್ಷ ಪತಿಯ ಸಖನೆ ವಿರೂಪಾಕ್ಷ ।
ವೃಷ ಘೋದಾರ ಹರ್ಯಕ್ಷ ।
ಅಂಧಕ ಹರ ಮನ ಕಕ್ಷ ।
ನಿಯಾಮಕ ಲೋಕಾಧ್ಯಕ್ಷ ॥
ದಕ್ಷ ಭಗ್ನ ರುದ್ರಾಕ್ಷಮಾಲ ಹರಿ ।
ಪಕ್ಷ ಸ್ಥಾಣು ವೃಷಭೇಕ್ಷಣ ನೀರಕ್ಷ ೧

ಈಶಾ ಸಿತ ಕಂಠ ಅವ್ಯಕ್ತ ಕೇಶಾ ।
ವೀರಭದ್ರ ವ್ಯೋಮಕೇಶಾ ।
ದಯಾ ಸಮುದ್ರ ಗೌರೀಶ ।
ವೀರಾಗ್ರಣಿಯೆ ಕೈಲಾಸ ।
ವಾಸ ಶರ್ವ ಪ್ರಮಥೇಶ ಪಾವಕ ಸಂ ।
ಕಾಶ ಶ್ವೇತ ಗಿರೀಶ ಉಗ್ರೇಶ ೨

ಶೂಲ – ಪಾಣಿ ಗಂಗಾಧರ ನೀಲ
ಕಂಠ ಹಿಮೆ ಗಿರಿಜೆ ಲೋಲ ।
ಗುರು ಗೋವಿಂದ ವಿಠಲಾ ।
ಬಾಲ ಗಾಳಿಸುತ ಬಾಲ ಎನ್ನ ಹೃತ್ಕೀ
ಲಾಲಜದಲಿ ಸಿರಿ ಲೋಲನ ತೋರ್ವುದು ೩

೨೫೭

ನೇತ್ರಾವತಿಯ ವಾಸಾ । ಪ್ರಮಥ ಪೋಷಾ
ಸೂತ್ರತನಯನೆ ಕಾಯೊ । ಭಕ್ತ ಜನ ಪೋಷಾ ಪ

ಲೌಕಿಕ ಕುಕರ್ಮಗಳ । ನಾಚರಿಸಿ ಬಲು ವಿಧಧಿ
ಕಾಕು ಜನರಾ ಸಂಗ । ಬಳಸಿ ಭವದೀ ।
ಏಕಮೇವನ ಚರಣ । ತೋಕನೆಂದೆನಿಸದಲೆ
ನೂಕಿ ಎನ್ನಾಯುಗಳ । ವ್ಯರ್ಥ ಕಳೆವೇ ೧

ಕೃತ ತ್ರೇತ ದ್ವಾಪರದಿ । ವ್ಯಕ್ತನಾಗುತ ನೀನು
ಚತುರದೊಳಗೇ ಮಂಜು । ನಾಥನೆನಿಸೀ ।
ಕೃತಿಪತಿಯ ಸಚ್ಚರಣ । ಶತಪತ್ರ ಭಜಿಪರಿಗೆ
ಗತಿ ತೋರಿ ಸನ್ಮುಕುತಿ । ಪಥಕೆ ಕೊಂಡೊಯ್ವೇ ೨

ಯತಿವಾದರಾಜರಿಂ । ಹಿತದಿ ಕದರೀಯಿಂದ
ಪೃಥುಕು ನೃಹರಿಯ ಶಿಲೆಯು । ಸ್ಥಿತ ಧರ್ಮಸ್ಥಳದೀ

ಕೃತವು ವೈಷ್ಣವ ಪೂಜೆ । ಚತುರಯುಗ ಮೂರುತಿಯೆ
ವಿತತ ಮಹಿಮನ ತೋರ್ವ । ಮತಿಮಾಡೊ ಶರ್ವಾ ೩

ವೈಕಾರಿಕಾದಿ । ಸಾಕಾರಿ ಮಹದೇವ
ಕೈಕೊಳುತ ಮನ್ನಾತ । ನೋಕರಿಸದೇ ।
ಪ್ರಾಕ್ಕು ಕರ್ಮವ ಕಳೆದು । ನೀ ಕೊಡುವುದ್ಧರಿ ಭಕುತಿ
ನಾಕಪತಿ ವಂದ್ಯ ಸ । ನ್ನಾಕನದಿ ಧರನೇ ೪

ಗುಣ ಪೂರ್ಣನಾದ ಗುರು । ಗೋವಿಂದ ವಿಠಲ ಪದ
ವನಜ ಬೇಡುವೆ ಮನದಿ । ಕರುಣಾನಿಧೇ ।
ಅನಲಾಕ್ಷ ನಿನ್ನೊಲಿಮೆ । ಇಲ್ಲನಕ ಗತಿಯಿಲ್ಲ
ಬೆನಕ ಪಿತ ಮನಮಾನಿ । ಎನಗೊಲಿಯೊ ಶಿವನೇ ೫

೨೫೮

ಪಂಪಾಪತಿಯೆ ಶಂಭೋ – ಪಾಲಿಯ ಪ

ಶಂಫಲಿ ಪುರಗ ವಿರಂಚಿ ಪಿತ ಪದ
ನೋಂಪಿಗ್ಯೆವ ಮನ । ಇಂಪಾಗಿ ಕೊಡು ಹರ ಅ.ಪ.

ಪಂಚ ಬಾಣಾರಿ ಮಹದೇವಾ । ತ್ವರ್ಯ
ಸಂಚುಗೊಳಿಸೊ ಹರಿ ಭಾವಾ ।
ಹೆಂಚು ಹಾಟಕ ಸಮ । ಸಂಚಿಂತನೆಯ ಕೊಟ್ಟು
ಸಂಚಿತಾಗಾಮಿ ಕಳೆ । ವಾಂಛಿತಾರ್ಥವ ಶಿವ ೧

ಸಯಿಶಿೂ ಮನಕಭಿಮಾನಿಯೆ ಶಿಾವಿ
ಶಯ್ಯ ಹರಿಗೆ ಎಂಬೊ ರೂಪಿಯೇ ॥
ಸ್ಥೈರ್ಯ ವನದಿ ಹರಿ । ಪ್ರೀಯ ಪಾಲಿಸಿನ್ನು
ಕೈಯ್ಯ ಪಿಡಿದು ಕಾಯೊ । ಅಯ್ಯ ನಿನಗೆ ಶರಣು ೨

ದೂರೆಂಬ ಅನಿಲಗೆ ನಿಲಯನೇ । ಅಂತೆ
ದೂರ್ವಾಸಾಭಿಧ ಮಹದೇವನೇ ॥
ಪಾರ್ವತಿರಮಣನೆ । ಪೂರ್ವ ದಿವಿಜ ಪ್ರಿಯ
ಸರ್ವಾರ್ಪಣೆಂಬ ಮನ । ಭಾವವ ಪಾಲಿಸು ೩

ಕಂದರ್ಪ ಮದಹ ಪುರಾಂತಕ । ನಂದ
ನಂದನ ಪದ ದ್ವಂದ್ವಾರ್ಚಕ ॥
ಇಂದು ಮೌಳಿಧರ । ಬಿಂದು ಮಾಧವ ಪ್ರಿಯ
ಚಂದ್ರಾರ್ಕಾನಲ ಚಕ್ಷು । ತಂದೆ ಕಾಯೋ ಹರ ೪

ಗೋವ್ಗಳ ಪರಿ ಪರಿ ಪಾಲಕಾ ಗುರು ।
ಗೋವಿಂದ ವಿಠಲನ ಅರ್ಚಕಾ ॥
ತೀವರದಲಿ ಮನ । ಮಾವಾರಿ ಪದ ಸ್ಮೃತಿ
ಭಾವದಲಿಡು ಶಿವ । ಆವ ದನ್ಯವನೊಲ್ಲೆ ೫

೨೫೬

ಪಂಪಾಪುರದ ನಿವಾಸನೆ ಶಿವನೇ
ಇಂಪು ಕೊಡುತ ಮನ । ಕಂಪನ ಕಳೆಯೋ ಪ

ಶಂಫಲಿ ಪುರದ ನಿ । ವಾಸನ ಸಖ ಹಸ
ಗಂಪನು ಕೊಡುತಲಿ । ಇಂಪನೆ ತೋರೋ ಅ.ಪ.

ಬಿಂದು ಮಾಧವನ । ಸನ್ನಿಧಿ ನಿಲಯನೆ
ಸುಂದರ ಮೃಗಧರ । ನಂದಿವಾಹನನೇ ।
ಇಂದುಧರನೇ ಭವ । ಬಂಧ ವಿಮೋಚಕ
ಕಂದು ಗೊರಳ ಹರ । ಸಂದರುಶನ ವೀಯೋ ೧

ಅಂಬರ ಕೇಶಿಯೆ । ಅಂಬೆಯ ರಮಣನೆ
ಶಂಬರಾರಿಯ ಹರ । ನಂಬಿ ವಂದಿಪೆನೊ

ಉಂಬುವುದುಡುವುದು । ಹಂಬಲಿಸುವುದೆಲ್ಲ
ಬಿಂಬನ ಕ್ರಿಯವೆಂಬ । ನಂಬುಗೆ ಈಯೋ ೨

ದಶ ಶಿರ ಮದ ಹರ । ವಾಸವ ವಂದಿತ
ನಸುನಗೆ ಮೊಗ ಗುರು । ಗೋವಿಂದ ವಿಠಲನಾ
ಆಶಿಪೆ ಮಧ್ವದಯಾ । ಕಾಶದೊಳಗೆ ತೋರಿ
ಹೇ ಸದಾಶಿವ ಶಂಭೋ । ಪೋಷಿಸು ಈ ಪರಿ ೩

೨೬೦

ಪಾಲಿಸಯ್ಯ ಪವನ ಕುವರನೇ । ಪಾವನ್ನ ಮೂರ್ತಿ
ಶೀಲರೂಪಿ ಶೈಲ ಸದನನೇ ಪ

ಬಾಲ ಗೋಪಾಲ ಗುಣವ । ತೈಲಧಾರೆಯಂತೆ ಮನದಿ
ಕಾಲಕಾಲ ಸ್ಮರಿಪ ಸುಖ । ಕೈಲಾಸವಾಸ ಕೊಟ್ಟು ಕಾಯೊ ಅ.ಪ.

ಪಂಪಾಪುರ ನಿವಾಸ ಈಶನೇ ಜೈಗೀಷ ಔರ್ವ
ಪೊಂಪೆ ಎಂಬ ಗಿರಿಜೆ ರಮಣನೇ ॥
ಲಂಪಟಾವ ಬಿಡಿಸಿ ಜ್ಞಾನ । ಸಂಪದಾವನಿತ್ತು ಸಲಹೋ
ನೋಂಪಿ ಗೈವೆ ನಿನ್ನ ಪದದಿ । ಇಂಪನೀಯೊ ಹರಿಯ ಪದದಿ ೧

ಕೃತ್ತಿವಾಸ ಕೃಪಣ ವತ್ಸಲಾ । ದ್ರೌಣಿ ವ್ಯಾಧ
ಚಿತ್ತ ಕಲುಷ ಕಳೆದ ನಿರ್ಮಲಾ ॥
ಭಕ್ತಿ ಕೊಟ್ಟು ಹರಿಯ ಪದದಿ । ಎತ್ತು ಭವ ಸಮುದ್ರದಿಂದ
ಮತ್ತೆ ಪುಟ್ಟಿ ಭಯವು ಕಾಣೆ । ಚಿತ್ತದಲ್ಲಿ ಹರಿಯು ಇರಲು ೨

ವೈಕಾರಿಕವು ತೈಜಸ ತಾಮಸಾ । ತ್ರಯವು ಅಹಂ
ಸಾಕಾರಿ ಶುಕನೆ ದುರ್ವಾಸಾ ।
ಲೌಕಿಕಗಳೆಲ್ಲವು ವೈ । ದೀಕ ವೆನಿಸೊ ತತ್ಪುರೂಷ
ಕಾಕು ಸಂಗ ಕೆಡಿಸೊ ಹರ ವಿ । ಶೋಕ ಹರಿಯ ತೋರಿ ಬೇಗ ೩

ಶೇಷ ಭೂಷ ಶೇಷಾ ನಂದನಾ । ನಿಶ್ಶೇಷ ಗೈಸೋ
ದೋಷ ನಿಕರ ವಾಯು ನಂದನಾ ॥
ವಾಸ ವಾದ್ಯಮರನುತ ಸ । ದಾಶಿವನೆ ಬ್ರಹ್ಮ ತನಯ
ಮೀಸಲೆನಿಸೊ ಮನವ ಹರಿಯ । ಆಶೆಯಲ್ಲಿ ನಿರುತ ಎನಗೆ ೪

ಮಂಗಳಾಂಗ ಗಂಗೆ ಧಾರಕಾ । ಊರ್ಧ್ವಜಟನೆ
ಅಂಗಜಹ ಮೃಕಂಡ ಪಾಲಕಾ ॥
ರಂಗ ಗುರು ಗೋವಿಂದ ವಿಠಲ । ಸಂಗಿ ಶಿವನಪೇಕ್ಷ್ವೆ ಭಕ್ತಿ
ಸಂಗವಿತ್ತು ಜಗೆ ವಿಷಯ । ಸಂಗ ಬಿಡಿಸಿ ಕಾಯೊ ರುದ್ರ ೫

೨೬೧

ಭದ್ರಾಣಿ ಪತಿ ಎನಿಪ । ರುದ್ರದೇವನೆ ನಮೋ
ಕಾದ್ರವೇಯನ ಪದ । ಭದ್ರವೋ ನಿನಗೆ ಪ

ವಿರೂಪಾಕ್ಷ ಅಧ್ಯಕ್ಷ । ಹರಿ ಪಕ್ಷ ರುದ್ರಾಕ್ಷ
ಹರ್ಯಕ್ಷ ಹನದಕ್ಷ । ಕರುಣಾ ಕಟಾಕ್ಷ
ನಿಲಕ್ಷ ನಿಟಿಲಾಕ್ಷ । ಶ್ಮಶಾನದಲಿ ದೀಕ್ಷ
ಅಕ್ಷಾರಿ ಪದದೀಕ್ಷ । ಪಕ್ಷಿವಹ ಕೃಪೆ ಈಕ್ಷಾ ೧

ವೃಷನಾಭ ವಶದರ್ಪ । ವೃಷ ಋಷಭ ವೃಷಾಂಕ
ವೃಷಶೃಂಗ ವೃಷಧ್ವಜನೆ । ವೃಷಭೇಕ್ಷಣಾ ।
ವೃಷ ಭೂತ ವೃಷ ಶರನೆ । ವೃಷಪತಿ ವೃಷಾ ವರ್ತ
ವೃಷಾಯುಧ ವೃಷೇಶ್ವರನೆ । ವೃಷಭೋದರಪಾಹಿ ೨

ದೂರ್ವಾಸ ಭೂವನೇಶ । ಸುರಪೇಶ ಉಗ್ರೇಶ
ಗೌರೀಶ ಪ್ರಮಥೇಶ । ಅವ್ಯಕ್ತ ಕೇಶಾ ।
ಚೀರ ವಾಸ ಸುವಾಸ ಸ್ವರ್ಣಕೇಶ ಭೂತೇಶ
ಈರಪತಿ ಗುರು ಗೋವಿಂದ । ವಿಠಲ ಭಜಕೇಶ ೩

೨೬೨

ಮನಕಧೀಶನೆನಿಪ ಗುರುವರಾ । ನಿನ್ನ ಪಾದ
ನೆನೆವೆ ಕಳೆಯೊ ಮಲಿನ ಸತ್ವರಾ ಪ

ಅನಿಲ ಸುತನು ಎನಿಸಿ ನೀನು । ಅನಿಲ ನೆನಿಸಿ ಪಾಪತೂಲ
ಘನ ಸುಮೇರುವನ್ನೇ ದಹಿಸೊ । ಅನಲ ಈಕ್ಷಣಾನೆ ಶಿವನೆ ಅ.ಪ.

ಗುಣಗಣಾಂಬು ನಿಧಿಯು ಹರಿಗುಣ । ನೆನಸುವಂಥ
ಮನವನೀಯೊ ನೀನು ಅನುದಿನ ॥
ಪ್ರಣತ ಕಾಮವ ನಿನ್ನ ಪಾದ । ವನಜ ಭಜಿಪ ಶರಣರೀಗೆ
ತೃಣವು ತೆರನು ಪಾಪ ನಿಚಿಸು । ಎಣಿಸಿ ಪೊರೆವುದುಚಿತಶ್ಲೆ ೧

ಗೌರಿಧವನೆ ವಿಷಯ ಮೋಹನ । ಕಳೆದು ವೇಗ
ಸೂರಿ ಜನರ ಸಂಗ ಮಾಡುವ ॥
ಸಾರ ಮನವವಿತ್ತು ಸಲಹೊ । ಕ್ರೂರಿ ಜನರ ದೂರಮಾಡೊ
ಘೋರಾಘೋರ ರೂಪಿ ಹರನೆ । ಮಾರಪಿತನ ಸಖನೆ ರುದ್ರ ೨

ಸುರಜ್ಜೇಷ್ಠ ಭ್ರಾತೃನೆನಿಪನೇ ವ್ಯಾಸ ಕುವರ
ನರಪತೀಗೆ ಭಾಗವತನೇ ॥
ಅರುಹಿ ಯೇಳು ದಿವಸದಲ್ಲಿ । ಹರಿಯ ಚರಣ ಸೇರಿಸೀದಿ
ಗುರು ಗೋವಿಂದ ವಿಠ್ಠಲಾನ । ಕರುಣ ಪಾತ್ರ ಶುಕ ವಿಭೂತಿ ೩

೨೬೩

ರಜತಾದ್ರೀ ನಿಲಯಾ । ಭುಜಗ ಭೂಷಣ ಪಾಹಿ ಪ

ತ್ರಿಜಗ ಪೂಜಿತ ಗಂಗಾಧರ । ಗಜ ಅಜಿನಾಂಬರ ಅ.ಪ.

ಗಿರಿಜೆಯ ಮನೋಹರ । ಸುರಪತಿ ಗುರುವರ
ಕರುಣದಿಂದಲಿ ತವ । ಚರಣ ಸ್ಮರಣೆ ಕೊಡು ೧

ಪಂಚಸುವದನನೇ । ಸಂಚಿತಪ ಕೆಡಿಪನೇ
ಪಂಚ ಬಾಣನ ಪಿತ । ಮಂಚ ಪದಾರ್ಹನೆ ೨

ತ್ರಿಶೂಲ ಡಮರುಗಾ । ಭಸುಮಾದಿ ಭೂಷಿತಾ
ದಶ ಶಿರ ಮದಹರ । ನಿಶಿಚರ ಗುರುವರ ೩

ಪಕ್ಷೀಂದ್ರ ವಂದ್ಯರಾ । ಅಕ್ಷಾರಿ ಹರಿವರಾ
ಕುಕ್ಷ್ಯುದ್ಭವ ಹರ । ದಕ್ಷಾದ್ವರ ಹರ ೪

ವಿಷಧಿಯೋಳುದಿಸಿದಾ । ವಿಷಗಣ ಭುಜಿಸಿದಾ
ವಿಷಕಂಠನೆನಿಸಿದ । ನಿಶಿಚರ ವರಪ್ರದ ೫

ಗಗನೇಶಾ ಜನಕಾ । ಮೃಗಾಂಕ ಶ್ರೀ ಶುಕಾ
ನಗಪಗೆ ಪೋಷಕ । ಷಣ್ಮುಖ ಜನಕಾ ೬

ತ್ರೈರೂಪಾ ತ್ರಿನಯನಾ । ಗುರು ಗೋವಿಂದ ವಿಠಲನಾ
ನಿರುತದಿ ಸ್ಮರಣಾ । ಭರಣ ಶೋಭನ ೭

೨೬೪

ರಕ್ಷಿಸೋ ಗೌರೀವರ । ತ್ರಿಪುರದ
ಶಿಕ್ಷಕ ದ್ರೋಣ ಕುವರ ಪ

ಅಕ್ಷಿ ರಕ್ತ ರೇಖ ಮಾನಿ । ಯಕ್ಷೇಶ ಪ್ರಿಯ ಮಿತ್ರ
ದಕ್ಷಾದ್ವರಘ್ನ ರುದ್ರ । ತ್ರ್ಯಕ್ಷನೆ ಲೋಕಾಧ್ಯಕ್ಷ ಅ.ಪ.

ನಭಾಳಕಾಹಿ ರಾಜಿತ । ಕಾಯವು । ವಿಭೂತಿ ಭಸ್ಮಾರ್ಚಿತ ॥

ಸು ಭಗಣೇಧೀಶ ಶಿರ । ನಭಕೇಶ ನಿನ್ನ ಸುತೆ
ವಿಭವಾ ಪೊಗಳಲಳವೆ । ಕುಭವ ಪರೀಹರ ೧

ರುಂಡಮಾಲೆಯ ಧಾರಕ । ಸುಜನರ । ಹಿಂಡು ಪರಿಪೋಷಕ
ಅಂಡಜವಾಹ ನಖ ಮೃ । ಕಂಡ ಪರಿಪಾಲ
ಕೊಂಡೆನ್ನ ಭಿನ್ನಪವ । ದಂಡಿಸೊ ದುಷ್ಟ ಮನ ೨

ಗೋವುಗಳ್ವರಿ ಪಾಲಕಶಿಗೋಪೇರ । ದಾವಾಗ್ನಿಯಿಂ ರಕ್ಷಿಶಿ
ಭಾವ ಜನಯ್ಯ ಗುರು । ಗೋವಿಂದ ವಿಠಲನ
ಭಾವದೊಳಗೆ ಕಾಂಬ ಭಾವವನೀವುದು ೩

೨೬೫

ರಾಮತಾರಕ ಮಂತ್ರ ಜಪಿಸಿ । ಸರ್ವ
ಕಾಮಗಳ ಪಡೆದವನೆ ನಮಿಸಿ । ಬೇಡ್ವೆ
ಕಾಮದುಷ್ಟಗಳ ಪರಿಹರಿಸಿ । ಹೃದ್
ಧಾಮೆ ಹರಿ ತೋರೊ ಕರುಣಿಸೀ ಪ

ಅಪವಿತ್ರ ಗಜ ಅಜಿನ ಧರಿಸಿ । ಮತ್ತೆ
ಕರ್ಪರವ ಕೈಯಲ್ಲಿ ಇರಿಸಿ । ನೀನು
ಅಪವಿತ್ರ ಅಶಿವ ನೆಂದೆನಿಸೀ । ವರಮು
ಸಫಲ ಶಿವ ಅಮಂಗಳವ ಹರಿಸೀ ೧

ಪರಮ ಸದ್ಭಾಗವತ ಮೂರ್ತೇ । ಲಕ್ಷ್ಮೀ
ನರಹರಿಯ ಆಣತಿಯ ಪೊತ್ತೇ । ವಿಷಯ
ನಿರತರನು ಹರಿವಿಮುಖ ಶಕ್ತೆ । ಕಾಯೊ
ಹರ ಸದಾಶಿವ ಭಾವ ಮೂರ್ತೇ ೨

ತಪದಿಂದ ಹರಿಯೊಲಿಸೆ ನೀನು । ಹತ್ತು
ಕಲ್ಪ ಲವಣಾಂಭುದಿಯಲಿನ್ನು । ಗೈದೆ

ತಪ ಉಗ್ರದಲಿ ಪೇಳ್ವುದೇನು । ನೀನು
'ತಪ' ನೆಂದು ಕರೆಸಿದೆಯೊ ಇನ್ನು ೩

ಶುಕಿಯಾಗಿ ಬಂದ ಅಪ್ಸರೆಯ । ಕೂಡ್ಡ
ಅಕಳಂಕ ವ್ಯಾಸಾತ್ಮ ಧೊರೆಯ । ಮಗನು
ಶುಕನಾದೆ ಶಿವನೆ ಇದು ಖರೆಯ । ನುತಿಪೆ
ಪ್ರಕಟ ಭಾಗವತಕ್ಕೆ ಧೊರೆಯ ೪

ಮಾರುತನು ನಿನ್ನೊಳಗೆ ನೆಲಿಸಿ । ಗೋಪ್ಯ
ದೂರೆಂಬ ನಾಮವನೆ ಧರಿಸಿ । ಇರಲು
ದೂರ್ವಾಸನೆಂಬ ಕರೆಸಿ । ಮೆರೆವ
ಭೂ ಭೃತರ ಮಾನವನೆ ಕೆಡಿಸಿ ೫

ನಾರಿ ಉಮೆ ಪತಿ ಸಂಗ ರಹಿತೆ । ಎನಿಸೆ
ಭಾರತಿಯ ದೇಹದಲಿ ಜಾತೆ । ಇರಲು
ಪ್ರಾರಬ್ಧ ಭೋಗಿಸುವ ಮಾತೆ । ಎನಿಸಿ
ವೀರ ಅಶ್ವತ್ಥಾಮ ಕೃಪೆ ಜಾತೆ ೬

ಧಾಮ ಈಶಾನ್ಯದಲಿ ಇದ್ದು । ನಿನ್ನ
ವಾಮದಲಿ ವಾಸುದೇವಿದ್ದು । ನೀನು
ವಾಮದೇವನ ಪೆಸರು ಪೊದ್ದು । ಧರಿಪೆ
ಸ್ವಾಮಿ ಪೂಜಕನೆಂಬ ಮದ್ದು ೭

ಕಾಲಾತ್ಮ ನಿನ್ನೊಳಗೆ ನೆಲಸಿ । ಪ್ರಳಯ
ಕಾಲದಲಿ ಜಗವ ಸಂಹರಿಸಿ । ನಿನ್ನ
ಕಾಲಾಖ್ಯ ನೆಂತೆಂದು ಕರೆಸಿ । ಮೆರೆವ
ಲೀಲಾತ್ಮ ನರಹರಿಯು ಎನಿಸಿ ೮

ಶಫರ ಹರಿದ್ವೇಷಿಗಳು ಎನಿಪ । ದೈತ್ಯ
ತ್ರಿಪುರಸ್ಥರನು ಸಂಹರಿಪಾ । ಶಿವನೆ

ವಪು ಧರಿಸಿ ಅಘೋರ ನೆನಿಪಾ । ಗೈದ
ಅಪವರ್ಗದನ ಸೇಶಿರೂಪ ೯

ಹೃದ್ಯ ಹರಿಸೇವೆಯಖಿ ಗೈವಾ । ಮನದಿ
ಬದ್ಧ ದ್ವೇಷಿಗಳೆಂದು ಕರೆವಾ । ದೈತ್ಯ
ಕ್ರುದ್ಧರ ತಪಕೆ ಸದ್ಯ ವರವಾ । ಇತ್ತು
ಸಧ್ಯೋಜಾತನೆನಿಸಿ ಮೆರೆವ ೧೦

ಹರಿಯಂಗ ಸೌಂದರ್ಯ ನೋಡಿ । ನೋಡಿ
ಪರಮಾನಂದವನೆ ಗೂಡೀ । ಇಂಥ
ಹರಿಪದ ದೊರಕೆ ಚಿಂತೆ ಗೂಡಿ । ಅತ್ತೆ
ಹರುಷದಿ ಊರು ಸುತ ಪಾಡಿ ೧೧

ಊರು ನಾಮಕ ರುದ್ರನಿಂದ । ಜಾತ
ಕಾರಣ ಔರ್ವಭಿಧದಿಂದ । ಕರೆಸಿ
ಉರ್ವರಿತ ರೋದನದಲಿಂದ । ಮೆರೆದೆ
ಮಾರಾರಿ ಔರ್ವಭಿಧದಿಂದ ೧೨

ವಿಷಯದಲಿ ಆಸಕ್ತರಾದ । ಮುಕ್ತಿ
ವಿಷಯಕೆ ಬಹುಯೋಗ್ಯರಾದ । ಜನರ
ವಿಷಯಾನುಕಂಪಿತನು ಆವ । ರುದ್ರ
ಹಸನಾಗಿ ರೋದಿಸಿದಗಾಢ ೧೩

ಕಮಲಾಕ್ಷಿ ದಕ್ಷಸುತೆ ತನ್ನ । ದೇಹ
ವಿಮಲಯೋಗಾಗ್ನಿಯಲಿ ಭಗ್ನ । ಮಾಡಿ
ಹಿಮದಾದ್ರಿ ಯೊಳಗೆ ಉತ್ಪನ್ನ । ವಾಗೆ
ವಿಮಲ ಶಿವಗೊಂಡ ವ್ರತ ಕಠಿಣ ೧೪

ಆದ್ಯಕಾಲದಲಿಂದ ಊರ್ಧ್ವ । ರೇತ
ಬುದ್ಧಿಮಾಡುತ ತಪವು ಶುದ್ಧ । ಗೈದು

ಸಿದ್ಧನಾಗಿರುತಿರಲು ರುದ್ರ । ಕೇಳಿ
ಊರ್ಧ್ವ ನೆಂಬಭಿಧಾನ ಪೊದ್ದ ೧೫

ಕಾಮಹರ ತಪದಿಂದಲೆದ್ದು । ಬಹಳ
ಪ್ರೇಮದಲಿ ಅದ್ರಿಸುತೆ ಮುದ್ದು । ಮಾಡಿ
ಕಾಮಲಂಪಟನೆಂಬ ಸದ್ದು । ಗಳಿಸಿ
ನಾಮ ಲಂಪಟ ನೆಂದು ಪೊದ್ದು ೧೬

ಹರಪೊತ್ತ ಹನ್ನೆರಡು ನಾಮ । ದಿಂದ
ಹರಿಮುಖ್ಯನಿಹನೆಂಬ ನೇಮ । ತಿಳಿದು
ಹರನ ಪೂಜಿಸೆ ಈವ ಕಾಮ । ನೆಂದು
ಗುರು ಗೋವಿಂದ ವಿಠ್ಠಲನ ನೇಮ ೧೭

೨೬೬

ರುದ್ರದೇವ । ಪಾರ್ವತಿ ಪತಿ ಪಾಹಿ । ರುದ್ರದೇವ ಪ

ರುದ್ರದೇವ ಅದ್ರಿಜೆ ರಮಣನೆ । ಭದ್ರವ ಕೊಟ್ಟುದ್ಧರಿಸೆನ್ನ ಅ.ಪ.

ಗಜಖಲ ಹರನೆ । ಭುಜಗ ಭೂಷಣ
ತ್ರೈಜಗ ಪಾವನಿ । ಗಂಗಾಧರನೇ ೧

ದಿನಮಣಿ ಸೋಮ । ಅನಲೇಕ್ಷಣನೆ
ಮನುಜ ಸಿಂಹಾಂಕಿತ । ಅನಘನ ಸೇವಿಪ ೨

ರಾಮ ತಾರಕ । ಆ ಮಹ ಮಂತ್ರವ
ಭಾಮಿನಿ ಗಿರಿಜೆಗೆ ಪ್ರೇಮದಿಂದೊರೆದೆ ೩

ಭಸಿತ ಭಸುಮಧರ । ಕುಸುಮ ಶರನ ಹರ
ಅಸಮ ಹರಿಯ ಪದ । ಕುಸುಮ ಶಿಭೃಂಗ ೪

ಸುರವರೇಣ್ಯ ಗುರು ।ಶ್ರೀಗೋವಿಂದ ವಿಠಲನ
ಕರುಣವ ದೊರಕಿಸು । ಹರ ಮಹದೇವ ೫

೨೬೭

ಲಿಂಗಾ ಅಂಗಜಹ – ಮಂಗಳ । ಗಂಗಾಧರ ಕಾಯೊ
ತುಂಗಾ ಘರಣ್ಯ ಅನಳಾ ಪ

ತಿಂಗಳ ಧರ ಹರ । ಅಂಗಜ ಪಿತ ಸಖ
ಮಂಗಳಾಂಗ ಕೃ । ಪಾಂಗ ದಯಾಳೊ ಅ.ಪ.

ಸೋಮಾರ್ಕಾನಲ ಈಕ್ಷಣ । ಭಕ್ತ ಶರಣ್ಯ
ಭೀಮ ಭವಾರಣ್ಯ ದಹನಾ ॥
ಆಮಹ ಡಮರುಗ ಕ್ವಣಃ ಕ್ವಣಾ । ದನುಜರ ದಮನ
ಭೂಮೀ ಸುರ ರೋಮ ಹರ್ಷಣ ॥
ವಾಮದೇವ ಭವ । ಭೀಮ ಮಹಾಘನ
ಕೋಮಲಾಂಗಿ ತವ । ವಾಮಾಂಗನೆಗೆ
ಆ ಮಹ ಮಂತ್ರವ । ರಾಮತಾರಕವ
ನೇಮದಿ ಪೇಳ್ದ ಸು । ತ್ರಾಮ ವಂದಿತನೆ ೧

ಗಜ ದೈತ್ಯ ಹರ । ಫಣಿಧರ । ತ್ರಿಪುರ ಹರ
ವಿಜಯನಿಗಿತ್ತೆ ತವ ಶರ ॥
ಅಜ ಶಿರ ಹರ – ಕಪಾಲಧರ । ಜಗಗಳಾಚಾರ
ನಿಜ ಸುಶ್ಮಶಾನ ವಿಹಾರ ॥
ಗಜಮುಖನಯ್ಯನೆ । ಭುಜಗ ಭೂಷಣನೆ
ಸುಜನ ಸುರದ್ರುಮ । ಗಜವರದ ಪ್ರಿಯ
ನಿಜಪತಿ ಪವನನ । ಭಜಿಸಿ ಬಹು ವಿಧದಿ
ಅಜಗರ ಪದವಿಯ । ನಿಜವಾಗಿ ಪಡದೆ ೨

ಗರಳ ಪುರೀಶ ಭೂತೇಶ । ಭಸುಮ ಭೂಷ
ವರ ವ್ಯೋಮಕೇಶ ಉಗ್ರೇಶ ॥
ಶರಣರ ತೋಷ । ವಿಶ್ವೇಶ । ಕಾಶಿ ಪುರೀಶ
ಸರಿತ್ಕಪಿಲ ತಟದಿ ವಾಸ ॥
ವರ ಗೌರೀವರ । ಪರಮ ದಯಾನಿಧೆ
ಚರಣಾಂಬುಜಗಳಿ । ಗೆರಗಿ ಬೇಡುವೆನೊ
ಗುರು ಗೋವಿಂದ ವಿಠಲನ । ಚರಣ ನೀರೇರುಹ
ನಿರುತ ಸ್ಮರಿಸುವಂಥ । ವರ ಮತಿ ಪಾಲಿಸು ೩

೨೬೮

ವಾಸವನುತಾಬ್ಜ ಪಾದಾ । ಪ್ರಮ । ಥೇಶ ಭಕ್ತ ವರದಾ ಪ

ಮೀಸಲಹುದು ಶೇಷ ಪದಾ । ಈಶ ಎನ್ನ ಪೊರೆಯೊ ಸದಾ ಅ.ಪ.

ವಿರೂಪಾಕ್ಷ ಭಗ್ನ ದಕ್ಷಾ । ಸುರ ಪೂಜ್ಯ ಹರಿಯ ಪಕ್ಷ ನಿರುತ
ಭಕ್ತ ದೇವ ವೃಕ್ಷ । ದುರಿತ ಗಿರಿಗೆ ಹರ್ಯಕ್ಷ ॥ ಧಾರುಣಿ ರಥ ।
ಸಾರಥಿ ಅಜ । ಮೇರುವೆ ಧ್ವಜ । ಧಾರುಣಿ ಧರ ಘೋರಾ ಧನು ।
ಶ್ರೀ ಹರಿ ಶರ । ಮೂರೂರುಗಳ್ । ದಾರಿತ ಹರ ೧

ವ್ಯೋಮಕೇಶ । ಪ್ರಮಥ ಪೋಷ । ಭೀಮ ನಾಶಿ । ಮಶಣವಾಸ
ಸ್ವಾಮಿ ತೀರ್ಥ ವಾಸ ದಾಸ । ಕಾಮಿತಾರ್ಥ ಸಲಿಸೊ ಈಶ ॥
ಭೂಮಿಜೆ ಪತಿನಾಮಮೃತ ಪ್ರೇಮದಸವಿ ನೆಶಿವು ತವ
ಭೌಮನ ಹರ । ಭುಮಶಿ ಹರಿ । ನಾಮ ಸ್ಮೃತಿ ನೇಮವಕೊಡು ॥

ಮರುತಾಂತರಾತ್ಮನಾದಾ । ಗುರು ಗೋವಿಂದ ವಿಠಲ ಪಾದಾ
ಪರಿಕಿಸುತ್ತ ಪಡುವ ಮೋದ । ಕರುಣಿಸೂವುದು ಭಕ್ತವರದ ।
ನರಮೃಗ ಹರಿ । ಚರಣಾಬ್ಜವ । ನಿರಂತರ । ಸ್ಮರಿಸುತ್ತಿಹ
ಗೌರೀವರ । ಚರಣಂಗಳಿ । ಗೆರಗುವೆನು । ಪಾಲಿಸು ಹರ ೩

೨೮೯

ಶಿವ ದರುಶನ ವೆನಗಾಯಿತೂ । ನಮ್ಮ
ಭವ ಭಯ ಪರಿಹರ ವಾಯಿತು ಪ

ಹತ್ತು ಮತ್ತೊಂದೆಂಬ । ಇಂದ್ರಿಯದಭಿಮಾನಿ
ಭಕ್ತರಿಗ್ಹರಿಯಲಿ । ಸಕ್ತಿಯ ಕೊಡುವಾ ।
ಉತ್ತಮ ತ್ರಯ ವೇದ । ಗ್ರಂಥವ ಪಠಿಸುತ್ತ
ಹಸ್ತಗಳಭಿನಯ । ವಿಸ್ತರಿಸಿರುವಂಥ ೧

ಕೃತ್ತಿವಾಸನ ಸಖ । ಉತ್ತಮೋತ್ತಮನೆಂಬ
ಭೃತ್ಯರ ಸತ್ಸಂಗ । ಇತ್ತು ಸಲಹೊದೂ ।
ನಿತ್ಯ ಮಂಗಳ ಮೂರ್ತಿ । ಕರ್ತು ಶ್ರೀ ಹರಿ ಎಂಬ
ಉತ್ತಮೋತ್ತಮ ಮತಿ । ಇತ್ತು ಪಾಲಿಪುದಯ್ಯ ೨

ಹರಿಪದ ಜಲ ಸದಾ । ಧರಿಸಿಹ ಹರನಿಗೇ
ಹರಹರನೆಂಬ ನರ । ದುರಿತ ನಿಚಯವ
ಪರಿಹರವರಿದಲ್ಲ । ಕರುಣಿ ಮೃತ್ಯುಂಜಯ
ಕರುಣದಿ ತೋರೊ ಗುರು । ಗೋವಿಂದ ವಿಠಲನ ೩

೨೯೦

ಶಿವ ಶಿವ ಶಿವ ಶಿವ – ಶಿವರಾಯ । ನಮ್ಮ
ಭವ ಭಯ ಪರಿಹರ ಮಹರಾಯ ಪ

ಮಂಗಳರೂಪಿ ಗೌ । ರಾಂಗನೆ ದೂರ್ವಾಸ
ತಿಂಗಳ ಧರಿಸಿಹ । ಅಂಗಜ ಮದಹಾ ।
ಭಂಗ ಬಡಿಪ ಭವ । ಭಂಗಿಸಿ ಸುಜನರ
ಸಂಗವ ಕೊಡಿಸೊ ನೀ । ಲಾಂಗನ ಪ್ರಿಯ ಸಖ ೧

ಪರಿಸರ ಸಂಸ್ಕೃತ । ಗರಳವ ಭುಂಜಿಸಿ
ಸುರರನು ಪೊರೆಯುವೆ । ಕರಿಗೊರಳಾ ।
ಮುರಳಿಯ ಧರ ಸಿರಿ । ಕರಿವರದನ ದಯ
ನಿರುತ ನಿನ್ನೊಳಗುಂಟು । ಪೊರೆಯೊ ಮೃತ್ಯುಂಜಯ ೨

ಸ್ವಾಪದಿ ಗರಸಹ । ರೂಪವ ತೋರ್ದೆ – ಸು–
ರಾಪಗಧರ ಹರ । ತಾಪಸಿ ಶುಕನೇ ।
ಗೋಪತಿ ಗುರು ಗೋ । ವಿಂದ ವಿಠಲನ
ರೂಪವ ತೋರಿಸಿ । ನೀ ಪರಿಪೋಷಿಸು ೩

೨೭೧

ಸದಾಶಿವನೆ ರುದ್ರಾ । ಕಳೆವುದ ಭದ್ರಾ ।
ಸದಾಗತಿಯ ಪದ । ಮಧುಕರ ನೆನಿಸುತ
ಸುಧಾ ರಸವನೆರೆ ॥ ಭಜಿಸುವವರ ಪೊರೆ ಪ

ಗಜ ಅಜಿನಾಂಬರ । ಭುಜಗ ಭೂಷ ವರ
ವಿಜಯಗಿತ್ತೆ ಶರ । ವೃಜಿನ ವೃಂದ ಹರ
ಬಿಜಯಿಸಿ ಮನದಿ । ರಜವ ಕಳೆಯೊ ತ್ವರ ಅ.ಪ.

ಕೃತ್ತಿವಾಸನೆ । ಭಕ್ತರಾರ್ತಿಹ ।
ಚಿತ್ತದಲಿ ನೆಲೆ । ಸುತ್ತ ಪಾಲಿಸೋ ॥
ಎತ್ತೆ ಈ ಭವ । ತಪ್ತನಾಗಿಹ ।
ಗುತ್ತಮೋತ್ತಮ । ವಿತ್ತ ಕೊಡು ಹರ ೧

ರೂಪ ವೈಕೃತ । ರೂಪ ತೈಜಸ ।
ರೂಪ ತಾಮಸ । ಈ ಪರಿಯ ಕೊಂಡ ॥
ಶ್ರೀಪ ಪದಕ । ಲಾಪದಲ್ಲಿಡು ।
ವೈಪರೀತ್ಯ ಪ್ರ । ಲಾಪ ಕಳೆ ಶಿವ ೨

[redacted]

ಹೇ ಪವನಜನೆ । ತಾಪಸ ಪ್ರಿಯ ।
ತಾಪಕಳೆ ಗೌ । ರೀಪನೇ ಭವ
ಕೂಪ ಕಳೆವ ದ । ಯಾ ಪಯೋ ನಿಧಿ ।
ಗೋಪ ಗುರು ಗೋವಿಂದ ವಿಠಲಾಪ್ತ ೩

೨೭೨

ಹರ್ಯಕ್ಷ । ನಿಟಿಲಾಕ್ಷ ಪ.

ಹರ ರುದ್ರಾಕ್ಷನೆ ಕರುಣದಿ ರಕ್ಷಿಸು ಅ.ಪ.

ಪವನನ ಸುತ ಬಹು । ಶ್ರವಣ ಭೂಷ ಭಾ–
ಗವತವನರುಹಿದೆ । ಅವನಿ ಪಾಲಕಗೆ ೧

ದೂರೆಂದೆನಿಸಿದ । ಮಾರುತ ನಿಂದಲಿ
ಸಾರತತ್ವ ಶ್ರುತ । ದೂರ್ವಾಸಾಭಿಧ ೨

ತೈಲ ಧಾರೆ ಪರಿ । ಲೋಲಾಯತ ಮನ
ಪಾಲಿಸು ಹರಿಯಲಿ । ಶೈಲಜೆ ರಮಣಾ ೩

ದೈತ್ಯಾರಾಧಿತ । ದೈತ್ಯವರದ ಶಿವ
ತೊತ್ತಿನ ಪಾಲಿಸಿ । ಮೃತ್ಯುಂಜಯಾಭಿದ ೪

ಗುಪ್ತ ಮಹಿಮ ಗುರು । ಗೋವಿಂದ ವಿಠಲನ
ಭೃತ್ಯನ ಸುತನು । ಚಿತ್ತವ ಪಾಲಿಸು ೫

ಶ್ರೀಭೂತರಾಜರು (ಭಾವೀರುದ್ರರು)

೨೭೩

ಅಲಘು ಮಹಿಮ ಭಾವೀ । ತ್ರಿನಯನಾ
ಮಲಿನ ಮನವ ಕಳೆಯೋ ಪ

ಅಲಘು ಮಹಿಮ ಭಾವೀ ಮರುತ
ಜಲಜ ಪಾದಕ್ಕಳಿಯೆ ಮುಖ್ಯ ಅ.ಪ.

ಶಿರಸು ಭೂಷ ರಕ್ತ ವಸನ
ಕರ್ಣಗಳಲಿ ಮಣಿಯ ಕುಂಡಲ
ಕರ ಅಧರ ಪಾಣಿ ಪಾದ
ವರಸು ಕುಸುಮ ಬಂಧೂಕ ಭಾಸ ೧

ಉದಿತ ರವಿಯ ಅರುಣ ದೇಹ
ವಿಧೃತ ಚಾಪ ಶರವು ಕರದಿ
ಅದುಭುತಾತ್ಮ ನಾರಾಯಣನ
ವಿಧಿತ ಮಹಿಮನಾಗಿ ನಮಿಪ ೨

ಕರ್ಣ ಭೂತ ಮುಖ್ಯ
ಗಣಗಳಿಂದ ಕೂಡಿ ಭೂತ
ಗಣಧೀಶನಾಗಿ ನಾರಾ
ಯಣನ ನಾಮ ಧರಿಸಿ ಮೆರೆವ ೩

ಮಣಿಯನೇಕ ಚೀರ್ಣ ಮೌಳಿ
ಅನುಣಾರ್ಣವೇಂದು ಮೌಳಿ
ಕ್ವಣಿತ ಢಮರು ಕರ ತ್ರಿಶೂಲಿ
ಮಣಿವೆ ಹರಿಯ ಭಕ್ತ ಮೌಳಿ ೪

ಸ್ವಾಪ ಮುನ್ನ ಮುಂದೆ ಕುಳಿತು
ಉಪಾಂಸ್ವನೇಕ ಉಚ್ಚರೀಸಿ
ಗೋಪತಿ ಗುರು ಗೋವಿಂದ ವಿಠಲ
ಸುಪಾದ ಭಜಿಸೆ ಪೋದೆತ್ವರ್ಯ ೫

೨೭೪

ಭೂತರಾಜರ ಸ್ತುತಿ

ಭೂತಪತೇ – ಭೂತಪತೇ ಪ

ಭೂತಿ ಮಹತ್ ಶ್ರುತಿ । ಪಾದ್ಯವೆನಿಪ ಹರಿ
ದೂತ ಬ್ರಾತ ಮಹ । ಭೂತ ಗಣಾಧಿಪ ಅ.ಪ.

ಕರ್ಣ ವಿಕರ್ಣರು । ಘನ್ನ ಗುಣಸಂ–
ಪನ್ನ ಮಹಿಮ ಮನ । ಬನ್ನವ ಕಳೆಯೋ ೧

ರುಂಡ ಮಾಲೆ ಧರ । ಚಂಡ ಶಿವನ ಪದ
ಕೊಂಡೆ ವಾದಿ ಗಜ । ಸಿಂಹರೆನಿಪರಿಂ ೨

ಗುರುವಾಣತಿ ಧೃತ । ಶಿರದಿ ಬದರಿಯಿಂ
ಹರಿ ಪ್ರತಿಮೆ ಸಹಿತ । ಶಿರನೀತ ವಿಮಾನ ೩

ಬಂದುಕ ಕುಸುಮಗ । ಳಿಂದ ಅಲಂಕೃತ
ಸುಂದರಾಂಗ ಮನ । ಬಂಧಿಸುಹರಿಯಲಿ ೪

ಬಿಂಬನು ಗುರು ಗೋವಿಂದ ವಿಠಲ ಪದ
ಡಿಂಬದಿ ಕಾಂಬುವ । ಹಂಬಲವೀಯೋ ೫

ಷಣ್ಮಹಿಷಿಯರು

೨೭೫

ನಗ್ನ ಜಿತು ನೃಪ ಭಗಿನಿ ತನುಜೆ ಕಾಯೇ ।
ಲಗ್ನ ಗೈಸೆನ್ನ ಮನ ದೋಷಘ್ನನಲ್ಲೀ ಪ

ಮಿತ್ರಾಖ್ಯ ಹರಿಪ್ರಾಪ್ತಿ ನಿತ್ಯದಲಿ ಚಿಂತಿಸುತ
ಮಿತ್ರವಿಂದಾಭಿಧೆಯು ನೀನು ಆಗೀ ।
ಎತ್ತ ನೋಡಿದರತ್ತ ಶ್ರವಣ ಭಕ್ತಿಗೆ ಮುಖ್ಯ
ಪಾತ್ರವೆಂದರುಹುತ್ತ ಅಂತೆ ಆಚರಿಪೇ ೧

ಹರಿಕಥಾಮೃತ ಸರಿತು ಹರಿಯದಿಹ ಸ್ಥಳವೇನು
ಹರಿ ಪದಾಶ್ರಿತರಹಿತ ಮತ್ತೆ ಉತ್ಸವವೂ ।
ವಿರಹಿತದ ಪಾತ್ರಗಳ ತ್ವರಿತದಲಿ ತ್ಯಜಿಸುತ್ತ
ಸರಿಯುವುದೆ ಲೇಸೆಂದು ಭೋದಿಸಿಹೆ ದೇವಿ ೨

ಹರಿಕಥೆಯ ಕೇಳುವುದೆ ಕರ್ಣಕ್ಕೆ ಭೂಷಣವು
ಹರಿಕಥೆಯ ಪೇಳುವುದೆ ವಾಗ್ಭೂಷಣಾ ।
ಪರಿಪರಿಯ ಅಂಗಗಳ ಹರಿಪರವ ಗೈಯ್ಯುವುದೆ
ಪರಮ ಸತ್ಸಾಧನವು ಎಂತೆಂದು ಪೇಳ್ದೇ ೩

ಈ ಪರಿಯ ತಪದಿಂದ ಶ್ರೀ ಪತಿಯ ಮನ ಒಲಿಸಿ
ಸಾಪರೋಕ್ಷಿತೆಯಾಗಿ ಶ್ರವಣ ಭಕ್ತಿಯಲೀ ।
ಆ ಪರಮ ಪುರುಷನ್ನ ಕೈಪಿಡಿದು ಕೃತಕೃತ್ಯೆ
ನೀ ಪರಮ ಕೃಪೆಯಿಂದ ಕಾಪಾಡು ಎಮ್ಮ ೪

ಇಂದಿರಾ ರಮಣಂಗೆ ಎಂದೆಂದು ವೈರಿಗಳು
ವಿಂದಾನುವಿಂದರೆಂಬೀರ್ವ ಭ್ರಾತೃಗಳ ।

ಸಂದು ದುರ್ಯೋಧನಗೆ ನಿನ್ನನರ್ಪಿದ ಹದನ
ಮಂದಿ ಎದುರಿಲಿ ಕೃಷ್ಣ ಭಗ್ನವನೆ ಗೈದ ೫

ಶ್ರವಣ ಭಕ್ತ್ಯಭಿಮಾನಿ ಚಿತ್ತದಲಿ ನೀನಿದ್ದು
ಪವನ ಮತ ತತ್ವಗಳ ಶ್ರವಣ ಗೈಸೀ ।
ಭವವನಧಿ ಉತ್ತರಿಪ ಹವಣೆ ನೀ ತೋರಿ ತವ
ಧವಗೆ ಭಿನ್ನೈಸುವುದು ಎಮ್ಮ ಹಂಬಲವ ೬

ಸವನ ಮೂರಲಿ ಆಯು ವಿವಿಧ ಭವಣೆಗಳಿಂದ
ಪ್ರವಹಿಸುತ ಸಾಧನೆಗೆ ವಿಘ್ನವಾಗಿಹುದು
ಪವನಾಂತರಾತ್ಮ ಗುರು ಗೋವಿಂದ ವಿಠಲನ
ಪಾವನ್ನ ಪದಕಾಂಬ ಹವಣೆ ತಿಳಿಸಮ್ಮಾ ೭

೨೭೬

ದೇವಿ ಲಕ್ಷಣೆ ಎಮ್ಮ ಸಲಹ ಬೇಕಮ್ಮ
ಭಾವದಲಿ ನೀನಿದ್ದು ಭಾವನಯ್ಯನ ತೋರೀ ಪ

ಪಿತನು ಬೃಹತ್ಸೇನ ನಿನಗಾಗಿ ಸ್ವಯಂವರವ
ಹಿತದಿಂದಲೆಸಗುತ್ತ ಲಕ್ಷ್ಯವನೆ ಬಿಗಿದೂ ।
ಅತಿಶಯದ ಧನುವಿಗೆ ಸಜ್ಜಿಸುತ ಬಾಣವನು
ಚತುರತೆಲಿ ಭೇದಿಪಗೆ ಸುತೆಯ ಪಣವೆಂದ ೧

ದ್ರೌಪದಿಯ ವೈವಾಹ ಮತ್ಸ್ಯ ಯಂತ್ರವಿದಲ್ಲ
ಔಪಚಾರಿಕವೆಲ್ಲ ಸರ್ವವಿಧ ಛನ್ನಾ ।
ವೈಪರೀತ್ಯದಿ ದ್ವಾರ ಉಪರಿ ಇರುವುದು ಕೇಳಿ
ಕಾಪುರುಷಗಿದು ಕಾಂಬ ಮಾರ್ಗವೇ ಇಲ್ಲ ೨

ಸೂತನುತ ಮಾಗಧನು ಕೌತುಕದ ಕೌರವರು
ಪಾರ್ಥನೂ ಅವನಣ್ಣ ಭೀಮಸೇನಾ ।

ಆತು ಧನುವನು ಲಕ್ಷ್ಯ ಭೇದಿಸಲೆ ಬೇಕೆಂದು
ಪೃಥಿವಿಪರು ಮತ್ತಿತರು ಬಂದು ಸೇರಿದರು ೩

ಸಜ್ಜುಗೈಯಲು ಶಿನುವ ಆರಿಂದಲಾಗದಿರೆ
ಲಜ್ಜೆಯಿಂದಲಿ ಮರಳಿ ಶೀಗುವರೆ ಬಹಳ ।
ಅರ್ಜುನನು ತಾನೊಬ್ಬ ಲಕ್ಷ್ಯವೀಕ್ಷಣ ಶಕ್ತ
ಅರ್ಜುನಾಗ್ರಜ ಹರಿಗೆ ಅಪರಾಧವೆನೆ ಸರಿದ ೪

ನೆರೆದ ಸಭೆಯಲ್ಲಿ ಪುಷ್ಪಹಾರವನೆ ಪಿಡಿಯುತ್ತ
ಬರುತ ವೈಯ್ಯಾರದಲಿ ಶಿರಿ ಕೃಷ್ಣ ಕಂಠದಲ್ಲಿ ।
ಇರಿಸಿ ಪರಮಾನಂದ ಭರಿತಳಾಗಲು ಹರಿಯು
ಕರಪಿಡಿದು ಹೊರವಂಟ ತನ್ನ ದ್ವಾರಕಿಗೇ ೫

ಮೊರೆಯುತಿರೆ ಬಗೆ ಬಗೆಯ ಸುರವಾದ್ಯ ವೈಭವದಿ
ಸುರರು ಪರಿ ಪರಿ ಪುಷ್ಪ ವೃಷ್ಟಿಗಳ ಗರೆಯೇ ।
ದುರುಳರೆದುರಾಗಿ ಸಂಗರಕೆ ಬರುತಿರಲು
ಹರಿ ಭೀಮರೆದುರಿಸದೆ ದುರುಳರೋಡಿದರು ೬

ದೇವಿ ಲಕ್ಷಣೆಯ ವೈವಾಹದುತ್ಸವವ
ಆವ ವಿಬುಧರು ಕೇಳಿ ಮೋದ ಬಡುವಂಥ ।
ಧೀವರರ ಮನೋಭೀಷ್ಟ ಪೂರ್ಣವನೆ ಗೈಯ್ಯುವನು
ದೇವ ಗುರು ಗೋವಿಂದ ವಿಠಲ ಕೃಪೆಯಿಂದ ೭

೨೭೭

ದೇವಿ ಭದ್ರಾ ಎಮ್ಮ ಪಾಲಿಸಮ್ಮ ।
ದೇವ ದೇವೇಶ ಹರಿ ಮಹಿಷಿ ಎನಿಸಿಹಳೇ ಪ

ವಸುದೇವ ಭಗಿನಿ ಕೈಕೆಯೀ ಉದರದಲಿ
ಅಸುವ ನೀಧರಿಸುತ್ತ ಅವತರಿಸುತಾ ।

ವಸುಧೆಯೊಳು ಸುಗುಣ ಗಣಯುತೆಯು ನೀನಾಗಿ
ಪೆಸರಾಂತೆ 'ಭದ್ರೆ' ಎಂದೆನುತ ಅವನಿಯಲೀ ೧

ಪಿತನು ನಳನೆಂಬನಿಗೆ ಪ್ರೀತಿಯಲಿ ನೀ ಪೇಳ್ದೆ
ಹಿತವು ಶ್ರೀ ಹರಿಗೆಂದು ನುತಿಸುವ ಸುಕರ್ಮ ।
ಅತಿಶಯದೆ ಪೂಜೆಯಿಂದಧಿಕದಲಿ ಶ್ರೀ ಹರಿಯು
ನುತಿಗೆ ಪ್ರೀತಿಸುವನೆಂದೊರೆದೆ ಭಕುತಿಯಲೀ ೨

ಹರಿನಾಮ ಸ್ಮರಿಸುತ್ತ ಹರಿ ಚರಣ ನಮಿಸುವರ
ದುರಿತರಾಶಿಗಳಿರದೆ ಪರಿಹಾರವೆನುತಾ ।
ಒರೆಯುತೀಪರಿ ನಮನ ಭಕ್ತಿಗೇ ಪ್ರಾಶಸ್ತ್ಯ
ಪರಿಪರಿಯ ಪೇಳಿಹಳೆ ನಮಿಪೆ ನಿನ್ನಡಿಗೇ ೩

ಈ ಪರಿಯ ತಪಗೈದು ದ್ವಾಪರದ ಯುಗದಲ್ಲಿ
ಶ್ರೀ ಪತಿಯ ದರ್ಶನದಿ ತಾಪತ್ರಯ ಕಳೆದೂ ।
ಆ ಪರಮ ಪುರುಷನ್ನ ಕೈ ಪಿಡಿದ ಮಹ ಭದ್ರೆ
ಕಾಪುರುಷನಾದೆನ್ನ ಪಾಪ ಪರಿಹರಿಸೇ ೪

ಭದ್ರಾಣಿ ಪತಿಗಿನ್ನು ಕಾದ್ರವೇಯನು ಮತ್ತೆ
ಆದ್ರಿ ಮಂದಿರ ತಂದ ಅವಿಕಾರಿ ವಿಪಗೇ ।
ಸಿದ್ಧೈದು ಗುಣದಿಂದ ಹೀನಳೆಂದೆನಿಸುತ್ತ
ಭದ್ರ ಗುರು ಗೋವಿಂದ ವಿಠಲ ಪ್ರಿಯೆ ಪಾಹೀ ೫

೨೭೮

ಮಾರ್ಗದರ್ಶಕೆ ದೇವಿ ಮಾರ್ಗ ತೋರಮ್ಮ ।
ಸರ್ವ ಪೂರ್ವದಿ ಕವ್ಯ ಬಾಲನೆಂಬನ ಮಗಳೇ ಪ

ಹರಿದೀಕ್ಷೆ ಹರಿತತ್ವ ನಿರ್ಣಯಾದಿಗಳಿರುವ
ನರರು ಕಲಿಯುಗದಲ್ಲಿ ದುರ್ಲಭರು ಎಂದು ।

ಪರಿಪರಿಯ ಚಿತ್ರಿಸುತ ಸದ್ಬೋಧ ಮಾಡಿರುವೆ
ಹರಿ ಪದಾಬ್ಜದಿ ಭಕುತಿ ಎಷ್ಟಿಹುದೊ ನಿನ್ನಲ್ಲಿ ೧

ಶೇಷಾಚಲಕೆ ಬಂದು ಆ ಸುತೀರ್ಥವು ಕಪಿಲ
ಲೇಸಾಗಿ ಮಜ್ಜನವಗೈದು ತಪವಾ ।
ಸಾಸಿರೊರ್ಷವು ದಿವ್ಯ ಏಕ ಚಿತ್ತದಿ ಗೈದು
ಭಾಸುರ ಸ್ತೋತ್ರದಿ ಹರಿಯ ತೋಷಿಸಿದೇ ೨

ತಂದೆ ತಾಯಿಯು ನೀನು ಬಂಧು ಬಳಗವು ನೀನು
ಎಂದೆಂದಿಗಿಹಭ್ರಾತ ವಲ್ಲಭನು ನೀನೇ ।
ಇಂದಿರೇಶನ ಹೊರತು ಮಂದಿ ಬೇರಿಲ್ಲೆನಗೆ
ಎಂದು ನೀತುತಿಸಿ ಹರಿ ಸಂದರ್ಶನವ ಪಡೆದೇ ೩

ದ್ವಾಪರದಲಾ ಕವ್ಯ ಶ್ನಜಿತು ನೃಪನಾಗೆ
ರೂಪಲಾವಣ್ಯಾತಿಶಯಗಳಿಹ ।
ಭೂಪ ಕುವರಿಯು ಆಗಿ ನೀಲಾಖ್ಯೆ ಎನಿಸುತ್ತ
ಶ್ರೀ ಪತಿಯ ಕೈ ಪಿಡಿಯೆ ಮನವ ನೀ ಮಾಡ್ದೇ ೪

ದೈತ್ಯ ಸಪ್ತಕರೇವೆ ಗೂಳಿಗಳು ತಾವಾಗಿ
ಸತ್ಯ ಹರಿ ದ್ವೇಷವನೆ ಸಾಧಿಸುವೆವೆಂದೂ
ನಿತ್ಯ ಪುಷ್ಟಾಂಗದಲಿ ಬೆಳೆಯುತ್ತ ನೃಪನಲ್ಲಿ
ಕೃತ್ಯ ಸ್ವಯಂವರ ಕೇಳಿ ಹರ್ಷಿತರು ಆಗೀ ೫

ವಿಪರೀತ ಮತಿಯುಳ್ಳ ಅಪರಿಮಿತ ಬಲತೋರ್ವ
ಸಪುತ ಗೂಳಿಗಳನ್ನೆ ಆರು ಬಂಧಿಪರೋ ।
ನೃಪನೆಂದ ಸುತೆ ನೀಲೆ ಕನ್ಯೆ ಕೊಡುವೆನು ಅವಗೆ
ನೃಪ ನಿಂತು ಪಣತೊಟ್ಟ ಕೌತುಕವ ಕೇಳೀ ೬

ಆರು ಬಂದವರೆಲ್ಲ ಹೋರಿಗಳ ಪಿಡಿಯಲ್ಕೆ
ವೀರ್ಯ ಸಾಲದೆ ಮರಳಿ ಹೋಗುತಿರಲೂ ।

ಮಾರ ಪಿತ ಶಿರಿ ಕೃಷ್ಣ ಹೋರಿ ನಾಸಿಕಗಳಿಗೆ
ದಾರಗಳ ಬಿಗಿಯುತ್ತೆ ಬಂಧವನ ಗೈದಾ ೭

ದೇವಿ ಸುಂದರಿ ನೀಲೆ ದಿವ್ಯ ಹಾರವ ಪಿಡಿದು
ದೇವ ದೇವೇಶ ಶಿರಿ ಕೃಷ್ಣ ಕಂಠದಲೀ
ಹಾವ ಭಾವದಿ ಬಂದು ಅರ್ಪಿಸಲು ತಕ್ಷಣದಿ
ದೇವ ವಾದ್ಯವು ಮೊರೆಯೆ ಪೂವ ಮಳೆ ಬಿತ್ತು ೮

ಕೃಷ್ಣ ಮಡದಿಯರಾರು ಮಂದಿಯೊಳು ನೀಲಾಖ್ಯೆ
ಲಗ್ನದುತ್ಸವ ಕೇಳ್ದ ಭಕುತ ಜನರಾ ।
ಭಗ್ನ ಗೈಸುತ ಪಾಪ ಮಗ್ನವಾಹುದು ಮನವು
ಕೃಷ್ಣ ಗುರು ಗೋವಿಂದ ವಿಠಲ ಪದದಲ್ಲೀ ೯

೨೭೯

ವಿವಸ್ವಾನ್ನಾಮಕ ಸೂರ್ಯ ಪುತ್ರೀ ।
ತ್ರಿವಿಧ ತಾಪಂಗಳನು ಕಳೆವ ಶುಭಗಾತ್ರೀ ಪ

ಕಾಳಕೂಟವ ಮೆದ್ದು ದೇವತತಿ ಸಲಹಿದಗು
ಕಾಲಾಖ್ಯ ಗರುಡಂಗು ಕಾಳ ಉರಗನಿಗೂ ।
ನೀಲಾಖ್ಯೆಯಂದದಲಿ ಪಂಚಗುಣದಿಂ ನ್ಯೂನ
ಕಾಳಿಂದಿ ದೇವಿಯರಿಗಾ ನಮಿಪೆ ಸತತ ೧

ಸಂಚಿತ ಸುಪಾಪಕ್ಕೆ ಅನುತಾಪವೆಂಬುವುದು
ಚಿಂತಿಸುವ ತತ್ವಗಳ ನಿರ್ಣಯಾದಿಗಳ ।
ಇಂತಪ್ಪ ಸತ್ಕರ್ಮ ಸಂತರಿಂ ತಿಳಿಸುತ್ತ
ಚಿಂತಿಪುದೆ ಸತ್ತಪವು ಚಿತ್ತ ನಿಗ್ರಹವೆಂಬ ೨

ಹರಿಮೂರ್ತಿ ಇಹ ಕ್ಷೇತ್ರ ದರ್ಶನಕೆ ಪೋಗದಿಹ
ಚರಣಗಳು ಇದ್ದಾಗ್ಯು ದಗ್ಧವೆಂತಣಿಪೇ ।

ಹರಿ ಪ್ರತಿಮೆ ಪೂಜಿಸದ ಕರಗಳಿದ್ದರು ವ್ಯರ್ಥ
ಹರಿ ಮೂರ್ತಿ ಕಾಣದಿಹ ಕಂಗಳಿನ್ನೇಕೇ ೩

ಹರಿ ಕಥೆಯ ಕೇಳದವ ಬಧಿರನೇಸರಿ ಅವನು
ಹರಿಯೆ ನಿರ್ಮಾಲ್ಯ ಮೂಸದಿಂದ್ರಿಯ ವ್ಯರ್ಥ।
ಹರಿಯ ನೈವೇದ್ಯಗಳ ರುಚಿಸದಿಹ ನಾಲಗೆಯು
ಹರಿಯಂಗ ಸ್ಪರ್ಶಿಸದ ಇಂದ್ರಿಯವು ವ್ಯರ್ಥ ೪

ಮನ ಮೂರ್ತಿ ಧ್ಯಾನಿಸದ ಮನಿಸಿನಿಂದ್ರಿಯ ವ್ಯರ್ಥ
ಇನಿತು ದಶ ಕರಣಗಳ ವ್ಯಾಪಾರವಾ ।
ಗುಣಿಸಿ ತಪವೆಂದೆನುತ ಹರಿಯರ್ಪಣೆಂಬುವುದೆ
ಘನ ತಪವು ಎಂದೆನುತ ಚಿಂತಿಪ ಸುಗಾತ್ರೀ ೫

ಹರಿಯೆ ತವ ಮುಖ ಕಮಲ ದರ್ಶನವು ಎನಗೆಂದು
ಪರಿ ಪರಿಯ ಚಿಂತಿಸುತ ಚರಿಸಿ ಸತ್ತಪವಾ ।
ಹರಿಯ ದರ್ಶನ ಪಡೆದು ಹರಿಯನುಗ್ರಹದಿಂದ
ಹರಿ ಮಡದಿ ನೀನಾಗಿ ಹರಿಗೆ ಪ್ರಿಯಳಾದೇ ೬

ಚಿತ್ಸುಖಂಗಳನಿತ್ತು ಭಕ್ತರನು ಪಾಲಿಸಲು
ಸತ್ಸಂಗವೇ ಮುಖ್ಯ ಅದನ ಪ್ರಾರ್ಥಿಸುವೆ ।
ವತ್ಸಾರಿ ಹರಿ ಗುರು ಗೋವಿಂದ ವಿಠ್ಠಲನ
ಚಿತ್ತದಲಿ ತೋರೆಂದು ನಿತ್ಯ ಭಿನ್ನವಿಪೇ ೭

೨೮೦

ಹರಿಸೇವೆ ಕೈಂಕರ್ಯ ಪರಮ ನಿಷಾತೆ ।
ಪರಿಹರಿಸು ಭವತಾಪ ಜಾಂಬುವತಿ ಮಾತೇ ।ಪ

ಸೋಮಸುತೆ ಎಂದೆನಿಸಿ ಪೂರ್ವಸರ್ಗದಿ ನೀನು
ಸೋಮಕುಲ ಭೂಕ್ಷ ಶಿರಿ ಕೃಷ್ಣನವತರಿಸೇ ।

ಸ್ವಾಮಿ ರಾಮನ ಭೃತ್ಯ ಜಾಂಬುವಂತನ ತನುಜೆ
ಶ್ರೀ ಮಹಿಳೆಯಂದದಲಿ ಕೃಷ್ಣ ಪ್ರಿಯಳಾದೇ ೧

ಮಿಕ್ಕ ಮಹಿಳೆಯರಿಂದ ಲಕ್ಕುಮಿಯ ಆವೇಶ
ಪೊಕ್ಕು ನಿನ್ನಲಿ ಅಧಿಕ ಸರ್ವಕಾಲದಲೀ ।
ಅಕ್ಕರದಿ ಇದಕೆ ಮಿಗೆ ಲಕ್ಕುಮಿಯು ಇರಲಾಗ
ಚೊಕ್ಕ ಮಾತೆಯು ನೀನು ಶೇಷ ಸಮಳೆನಿಪೇ ೨

ಆವೇಶ ನಿನ್ನಲ್ಲಿ ಇಲ್ಲದಿಹ ಸಮಯದಲಿ
ದೇವಿಯರು ಮಿಕ್ಕೈದು ಮಂದಿ ಸಮ ನೀನು ।
ದೇವಿ ಶಿರಿ ಆವೇಶ ಅಲ್ಪವಿಹ ಸಮಯದಲಿ
ದೇವ ಕಾಮಾದಿಗಳಿಗಧಿಕ ವಿಂಶತಿ ಗುಣದೀ ೩

ನಿರ್ಮಲ್ಯೆ ಕಾಂತಿತ್ವ ವಿಮಲ ಭಕ್ತ್ಯಾದಿಗುಣ
ಅಮಮ ನಿನ್ನಲಿ ಇಹುದು ನೈಜರೂಪಾ ।
ವಿಮಲ ಸಚ್ಚಾರಿತ್ರೆ ಈ ಮಹಿಯ ಸಂಚಾರ
ನಿರ್ಮಮದಿ ಗೈದಿರ್ಪೆ ಬಧಿರಾಂಧರಂತೇ ೪

ದೇಹ ಮಮತೆಯಲಿಂದ ಮನಸೋತು ಕಷ್ಟಕ್ಕೆ
ವಾಹನಾದಿಗಳೇರಿ ತೀರ್ಥಯಾತ್ರೆಗಳಾ ।
ಬಹುವಾಗಿ ಗೈದಾಗ್ಯು ಪುಣ್ಯ ಹೀನವು ಎಂದು
ಮಹಿಳೆ ನೀ ವರ್ಣಿಸಿಹೆ ಭಕುತರುಪಕಾರೀ ೫

ದೇವಿ ಜೈಗೀಷವ್ಯ ಶಿವನಿಂದ ಕೇಳುತ್ತ
ಶ್ರೀ ವೆಂಕಟೇಶನ ಮಹಿಮೆ ಅಪರಿಮಿತವ ।
ಆವಕಾಲದಿ ಅವನ ಪಾದ ದರ್ಶನವೆಂದು
ಸಾರ್ವಕಾಲದಿ ನೀನು ಚಿಂತಿಸುತಲಿರಲೂ ೬

ಕಂಡು ಶ್ರೀಹರಿಯನ್ನು ಅಪರೋಕ್ಷದಲಿ ನೀನು
ಬಂಡುಣಿಯು ಹರಿಪಾದ ಕಮಲಕ್ಕೆ ಆಗೀ ।

ಹಿಂಡು ದೈವರ ಗಂಡ ಪಾಂಡುರಂಗನೆ ಎಂದು
ಮಂಡಿಸಿದೆ ಪರತತ್ವ ತೊಂಡರುಪಕಾರೀ ೭

ಕರದಲ್ಲಿ ಧನ್ವಂತ್ರಿ ಪಿಡಿದಮೃತ ಕಲಶದಲಿ
ಹರಿನಯನ ಆನಂದ ಜಲಬಿಂದು ಉದರೇ ।
ತುರರೂಪಿಯಾದ ಶ್ರೀ ತುಳಸಿಯಲಿ ನೀನರಲು
ಹರಿ ನಿನ್ನ ಅಗಲದಿಹ ಸರ್ವ ಪೂಜೆಯಲೀ ೮

ಶಾಂಭವಿಯುನುತೆ ದೇವಿ ಜಾಂಬುವತಿ ಶ್ರೀ ಹರಿಯ
ಕಾಂಭಂಥ ಸುಜ್ಞಾನ ಭಕುತಿ ವೈರಾಗ್ಯ ।
ಹಂಬಲದಿ ನಿನ್ನಂಘ್ರಿ ನಮಿಪೆ ತೋರ್ವುದು ಹೃದಯ
ಅಂಬರದಲಿಹ ಗುರು ಗೋವಿಂದ ವಿಠ್ಠಲನ ೯

೨೮೧

ಗರುಡ ಪತ್ನಿ ಸೌಪರ್ಣಿ

ಪದ್ಮಾದಳಾಯತಾಕ್ಷಿ । ಸೌಪರ್ಣಿ ಪತಿ ಪಕ್ಷಿ
ಪದ । ಪದ್ಮಕ್ಕೆ ಶರಣೆಂಬೆ । ಸದ್ಮದೊಳಗೆ ಹರಿ
ಪದ್ಮಪದವ ತೋರು ॥ ಕರುಣವ ನೀ ಬೀರು ಪ

ಚಿತ್ತಾಭಿಮಾನಿಯೆ । ಕತ್ತಲೆ ಕಳೆಯುತ
ಭೃತ್ಯನ ಸಲಹುದು । ನಿತ್ಯ ಹರಿಯ ಸ್ಮೃತಿ
ಯಿತ್ತು ಕಾವುದೆನ್ನ । ಬಂದ ಪ್ರಪನ್ನನ ಅ.ಪ.

ವೇದಕ್ರಿಯೆಗಳಿ । ಗಾದಿ ಮಾನಿಯೆ ।
ಮೋದ ತೀರ್ಥ ಮ । ತೋದಿ ತಾರ್ಥವ
ಬೋಧಿಸುತ್ತಲ । ನಾದ್ಯವಿದ್ಯೆಯ ।
ಗೈದು ಹನ ಹರಿ । ಪಾದ ತೋರಿಸು ೧

ಗಾನಲೋಲ ಪ । ದಾನು ರಾಗದಿ ।
ಪಾಣಿಯಲಿ ಪಿಡಿ । ಧ್ರಾರುವನ ಸತಿ
ಏನು ಬೇಡೆ ಕು । ಯೋನಿ ಬರೆ ಭಯ ।
ವೇನು ಹರಿಸ್ಮೃತಿ । ಸಾನು ಕೂಲಿಸಮ್ಮ ೯

ಪಾಪಕಂಜೆ ದ । ಯಾ ಪಯೋನಿಧಿ ।
ಗೋಪ ಗುರು ಗೋ । ವಿಂದ ವಿಠಲನ
ರೂಪತೋರೆ ಹೃ । ತ್ಕೂಪದೊಳು ಭವ ।
ಕೂಪ ದಾಟಿಸಿ ಸೌಪರ್ಣಿದೇವಿ ೩

೨೮೨

ಶೇಷ ಪತ್ನಿ ವಾರುಣಿ

ವಾರುಣೀ – ಮಜ್ಜನನಿಯೆ – ವಾರುಣೀ ಪ

ವಾರುಣಿ ಶೇಷನರ್ಧಾಂಗಿ । ಕರು
ಣಾರಸ ಪೂರಿತ ಪಾಂಗಿ । ಆಹ
ತಾರ್ಕ್ಷ್ಯಸತಿ ಸಮ । ಸೂರಿ ಸುರಪಾದ್ಯರಿಂ
ಭೂರಿ ವಂದಿತಳೆ ಸ । ಮೀರಜೆ ಪರಿ ಪಾಹಿ ಅ.ಪ.

ಶ್ರೀಯುತಳಾಗಿ ಶ್ರೀರೂಪಿ । ಮತ್ತೆ
ಪೇಯಳಾಗಿ ಮದ್ಯರೂಪಿ । ಬಲ
ಭಾರ್ಯಳೆ ರೇವತಿ ರೂಪಿ । ಹೀಗೆ
ಗೇಯಳಾಗಿರುವೆ ತ್ರೈರೂಪಿ । ಆಹ
ಧೇಯೆ ಶ್ರೀ ಹರಿಪಾದ । ತೋಯಜ ಮನದೊಳು
ಧಾರ್ಯವಾಗುವ ಪರಿ । ಕಾರ್ಯವ ಮಾಡಿಸು ೧

ಪತಿಗೆ ಶತಾವರ ಗುಣಿಯೇ । ಹರಿ
ಸತಿಯರಾರು ಮಂದಿಗೆಣೆಯೆ । ಉಕ್ತ

ಸತಿಯರಿಗೆರಡೂನ ಗುಣಿಯೆ । ಕೇಳು
ಸ್ತುತಿ ಪಂಚರಾತ್ರ ಮಾನಿಯೆ । ಆಹ
ವಿತತ ಮಹಿಮ ಹರಿ । ಅತಿಶಯ ಗುಣಗಳ
ಸತತದಿ ತುತಿಸುವ । ಮತಿಯನೆ ಕೊಡು ತಾಯೆ ೨

ಹರಿ ಗುರು ಭಕ್ತಿಗೆ ಆದೀ । ಸುತೆ
ಹರಿ ಶಯ್ಯೆಗೆ ನೀನು ಮಡದಿ । ಆಗಿ
ಪರಿ ಪರಿ ಸೇವೆಯ ಗೈದೀ । ಅದ್ಯ
ಪರಿಹರಿಸಾಪತ್ತು ದಯದಿ । ಆಹ
ಹರಿ ಗುರು ಗೋವಿಂದ । ವಿಠಲನ ಸೇವೆಗೆ
ಎರಕವಾಗಲಿ ಮನ । ಪರಿ ಪರಿ ವಿಧದಿಂದ ೩

೨೮೩

ಶ್ರೀ ತುಳಸಿ ದೇವಿ

ತಾಯಿ ಶ್ರೀ ತುಳಸೀಯೆ । ಕಾಯೆ ಭಕ್ತರ ಪ್ರೀಯೆ
ಕಾಯೆ ಶ್ರೀಹರಿ ಜಾಯೆ । ತಾಯೆ ವರವ ನೀಯೇ ಪ

ತಾಯೆ ಶ್ರೀ ಹರಿ ಪಾದ । ತೋಯಜ ಕಾಂಬುವ
ದಾಯವಿತ್ತೆನ್ನ ನೀ । ಪ್ರೀಯದಿಂದಲಿ ಕಾಯೇ ಅ.ಪ.

ಶರಧಿಮಥನದೊಳಂದು । ಧರಿಸಿ ಅಮೃತ ಕಲಶ
ಹರಿಯು ಉದುಭವಿಸಲು । ವರ ಧನ್ವಂತ್ರೀಯೂ ॥
ಹರುಷೋದ್ರೇಕದಿ ನಯನ । ವರಬಿಂದು ಉದುರಲು
ಶಿರಿ ತುಳಸಿ ಎನಿಸೀದೆ । ಶರಣರ್ಗೆ ಗತಿ ಕೊಡುವ ೧

ಶ್ರೀ ಲೋಲನಾಜ್ಞದಿ । ಮೂಲದಾಶ್ರಯದಲ್ಲಿ
ಭಾಳ ತೀರ್ಥಗಳು ಸಂ । ಮೇಳವಿಸಿಹವೂ

ಮೇಲೆ ಮಧ್ವದಿ ನದಿ । ಜಾಲ ಮತ್ತಮರರು
ಆಲಯ ಗೈದ್ಹರಿ । ಓಲಗ ಗೈವರು ೨

ದಳ ದಳ ದಳದೊಳು । ಕಲುಷ ದೂರನು ದಯದಿ
ನೆಲಸಿ ಸೇವಿಪ ಸುಜನ । ಮಲಗಳ ಕಳೆದೂ ।
ಆಲವ ಭೋದರೆ ಶಾಸ್ತ್ರ । ವಲಿಸಿ ಕೀರ್ತಿಪ ನರಗೆ
ನೆಲೆಯ ಕಾಣಿಪ ತನ್ನ । ಚೆಲುವ ವೈಕುಂಠದಿ ೩

ಕರುಣಿಸು ಹರಿಪಾದ । ವರ ಪದ್ಮ ದ್ವಯದಲ್ಲಿ
ನಿರುತ ಭಕುತಿಯನ್ನೆ । ವರಗುಣ ಸಂಪನ್ನೆ ।
ಕರವೀರ ಪುರದರಿಸಿ । ವರ ಸನ್ನಿಧಾನಕ್ಕೆ
ನಿರುತದಿ ಸತ್ಪಾತ್ರೆ । ಪರಮ ಪಾವನ ಗಾತ್ರೆ ೪

ಹಂಬಲೊಂದೆನಗುಂಟು । ಜಾಂಬುವತಿಯೆ ತುಳಸಿ
ಇಂಬಿಟ್ಟು ಸಲಹುವೆ । ನೆಂಬ ಮತಿಯು ಇರೇ ।
ಬಿಂಬನು ಗುರು ಗೋ । ವಿಂದ ವಿಠಲ ಪಾದ
ಅಂಬುಜದ್ವಯ ತೋರಿ । ಸಂಭ್ರಮದಲ್ಲಿ ಇರಿಸೆ ೫

೨೮೪

ತುಳಸಿ ದೇವಿ ನಮಿಸಿ ಬೇಡುವೇ । ನಿಮ್ಮ ಪಾದ
ಒಲುಮೆಯಿಂದ ಭಜಿಸಿ ಪಾಡುವೇ ಪ

ಅಲವ ಬೋಧರ ಹೃದಯ ವಾಸ । ಸುಲಭ ನಮ್ಮ ಹರಿಯ ರೂಪ
ಫಲಿಸಿ ಎನ್ನ ಹೃದಯದಲ್ಲಿ । ಗೆಲಿಸು ಎನ್ನ ಭವದ ತಾಪ ಅ.ಪ.

ಹರಿಯ ನಯನಧಾರೆ ಸಂಭವೇ । ಕಾಯೆ ತಾಯಿ
ಸಿರಿಯ ರಮಣ ನಮಿತ ಪ್ರೀಯಳೇ ॥
ವರ ಸುವರ್ಣ ಪುಷ್ಪವಮಿತ । ಎರಶಿಮಿಸಿ ಬೇಡಿದಾರು
ಹರಿಯು ಒಪ್ಪ ನಿಮ್ಮದಳ । ವಿರಹಿತವಾದ ಪೂಜೆಯನ್ನ ೧

ಸರಸಿಜಾಕ್ಷಿ ನಿನ್ನ ಮೃತ್ತಿಕಾ । ಫಾಲದಲ್ಲಿ
ಧರಿಸುವರ ಅಘಕೆ ಪಾವಕಾ ॥
ಕರಣ ತೀರ್ಥಾದಿಗಳಿಹ । ವರದಳಗಳ್ ದ್ವಿನವಗಳನ್ನ
ಧರಿಪ ಜನರ ಭಿಷ್ಟವಿತ್ತು । ಘೋರ ಪಾಪವನ್ನು ಕಳೆವೆ 2

ಶ್ರೀರಮಣಿ ಆವಿಷ್ಟಯೇ । ನಮಿಪೆ ತಾಯೆ
ಕರುಣಿಸೆನಗೆ ಸುಜನ ಸೇವಿತೇ ॥
ಗುರುಗಳಂತರ್ಯಾಮಿಯಾದ । ಗುರು ಗೋವಿಂದ ವಿಠಲಾನ
ಚರಣ ವನಜ ತೋರಿ ಎನಗೆ । ಹರಿಸು ಎನ್ನ ತ್ರಿವಿಧ ತಾಪ 3

೨೮೫

ತುಳಸಿದೇವಿ ಪದಕೇ । ನಾರೇರು । ಬೆಳಗಿರಿ ಆರುತಿಯಾ ಪ

ಬೆಳಗುವುದೂ ನಮ್ಮ । ಅಳಗಿರಿ ರಂಗನ
ಲಲನೆ ಶ್ರೀ ತುಳಸಿಗೆ । ಕಲಿಮಲ ಹಾಗೆ ಅ.ಪ.

ದಳಪ್ರತಿ ದಳದಲ್ಲಿ । ಶ್ರೀಹರಿ । ನೆಲಸಿಹ ತಾನಲ್ಲಿ
ಒಲಿಮೆಲಿ ಭಕುತರ । ಹಲವು ಸೇವೆಗಳಿ
ಗೊಲಿದು ಅಭೀಷ್ಟವ । ಸಲಿಸುವ ದೇವಿಗೆ 1

ಶರದಿ ಮಥಿಸೆ ಅಮೃತ । ಕಲಶವ । ಧರಿಸುತ ಧನ್ವಂತ್ರಿ
ಬರಲು ನಯನದಿಂ । ಮರುಳೆ ಆನಂದಕೆ
ವರ ಬಿಂದೋದ್ಭವೆ । ಹರಿ ಪ್ರಿಯೆ ತುಳಸೀ 2

ಜಾಂಬುವತಿಯು ದೇವಿ । ನಿನ್ನಲಿ । ಇಂಬು ತೋರಿ ಇರಲು
ಅಂಬುಜಾಕ್ಷ । ಗುರು ಗೋವಿಂದ ವಿಠಲನ ।
ತುಂಬಿ ದ್ವೈಭವದಿ । ಸಂಭ್ರಮ ಸೇವಿಪ 3

೨೮೬

ಪಾವನ್ನೆ ಪಾವನ್ನೆ ಪ

ಗೋವ ಕಾಯ್ದ ನಗ । ಗೋವರ್ಧನಧರ
ಶ್ರೀ ವರನಿಗೆ ಪ್ರಿಯೆ । ಪಾವನೆ ತುಳಸೀ ಅ.ಪ.

ದಳ ದಳ ರೂಪಂ । ಗಳ ಬಹು ಧರಿಸುತ
ನೆಲಿಸಿಹ ನಿನ್ನಲಿ । ಆಲವ ಪೂರ್ಣ ಹರಿ ೧

ತೀರ್ಥಮಾನಿ ಸುರ । ಜಾತರೆಲ್ಲ ಸಂ–
ಪ್ರೀತಿಯಿಂದ ಇಹ । ರಾತು ಮೂಲದಲಿ ೨

ಕಂಡವರಘಗಗಳ । ಖಂಡಿಸಿ ಬಹು ತನು
ದಿಂಡುಗೆಡೆಹೆ ಹರಿ । ತೊಂಡರ ಗೈಯ್ಯುವ ೩

ನೀರನೆರೆಯೆ ತರು । ಬೇರಿಗೆ ಸಂಸ್ಕೃತಿ
ಪಾರು ಮಾಳ್ಪ ಹೆ । ದ್ದಾರಿಯ ತೋರುವೆ ೪

ಭಾವಜ ಪಿತ ಗುರು । ಗೋವಿಂದ ವಿಠಲನ
ಭಾವದಿ ವಲಿಸಿಹೆ । ದೇವಿ ಜಾಂಬುವತಿ ೫

೨೮೭

ಮಂಗಳಂ ಮಂಗಳಂ ಪ

ತುಂಗ ವಿಕ್ರಮ ನಮ್ಮ । ಅಂಗಜ ಪಿತನಾದ
ಮಂಗಳ ಮಹಿಮನ । ಅಂಗ ಸಂಗಾರ್ಹಳಿಗೆ ಅ.ಪ.

ಅಕಳಂಕ ಮಹಿಮನು । ಸಕಲಾತ್ಮ ನಿನ್ನಯ

ಪ್ರಕಟ ಶಾಖೋಪ । ಶಾಖಂಗಳಲ್ಲ ।
ವ್ಯಕುತನಾಗಿಹನೆಂದು । ಸಕಲ ದೇವತೆಗಳ
ನಿಕರ ಸೇವಿಪುದಮ್ಮ । ಲಕುಮೀಶ ಪ್ರಿಯಳೇ ೧

ಗಂಗೆಯು ಮೃಡನ ಶಿ । ಖಾಂಗಜೆ ಗೋದೆಯು
ತುಂಗಭದ್ರೆ ಸರಯು । ಮಂಗಳೆ ಯಮುನೇ ।
ಹಿಂಗದೆ ಸಕಲ ಸರಿ । ದಂಗನೆರೆಲ್ಲರು
ಮಂಗಳಾಂಗಿ ನಿನ್ನ । ಅಂಗವಾಶ್ರೀತರೂ ೨

ಗೋವರ್ಧನೋದ್ಧರ । ಗೋವುಗಳ್ಪರಿಪಾಲ
ಗೀರ್ವಾಣಾದ್ಯರಿಗೇ । ತೀವರ ಒಲಿಯುವ
ದೇವ ದೇವರ ಗುರು । ಗೋವಿಂದ ವಿಠಲನ
ಪಾವನ ಪದ ವನಜ । ತೋರ್ವ ಶ್ರೀ ತುಳಸಿಗೆ ೩

೨೮೮

ಪಾರ್ವತಿ ದೇವಿ

ಉಮಾ – ನಿನಗೆ ಸರಿಯಾರೇ
ಕಮ್ಮಗೋಲ್ವೈರಿಯ ಪ್ರೇಮ ಪಾತ್ರಳಾದ ಪ

ಆಡೂವ ನುಡಿಗಳ – ಜೋಡಿಸಿ ಹರಿಯಲಿ
ಮಾಡೀಸು ಸತ್ಸಾಧನಾ ॥
ಬೇಡಿಕೊಂಬೆನು ದೇವಿ – ರೂಢಿಗೊಡೆಯನ ತಡ
ಮಾಡದೆ ತುತಿಪಂಥ – ಜೋಡಿಸು ಮನಾ ೧

ಸುರಪಾದಿ ದೇವತೆ ಕರಗಳ ಜೋಡಿಸಿ
ಶರಣೆಂದು ಪೇಳುವರೇ ॥
ಹರ್ಯಕ್ಷ ಯಕ್ಷನ ಈಕ್ಷಿಸಿ ಬರುತಿರೆ
ಹರಿ ಪೇಳೆ ಸುರಪಗೆ ಬೋಧಿಸಿದೆ ೨

ಮೃತ್ಯುಂಜಯನ ಸತಿ – ವ್ಯತ್ಯಸ್ತ ಮನವನು
ಸತ್ಯಾತ್ಮನಲಿ ನಿಲಿಸೇ ॥
ಅರ್ಥಿಲಿ ಹರಿಯ – ಅತ್ಯರ್ಥ ಪ್ರಸಾದಕ್ಕೆ
ಪಾತ್ರನೆಂದೆನಿಸಿ – ಪಾಲಿಸೇ ೩

ಪ್ರಾಣಂಗೆ ಪ್ರಾಣನ – ಗಾನ ಮಾಡಲು ಗುಣ
ಶ್ರೇಣಿಗಳ ಜೋಡಿಸೇ ॥
ಗಾನ ವಿನೋದಿ – ಪ್ರ – ದಾನ ಪುರೂಷನ
ಮಾಣದೆನಗೆ ತೋರಿಸೇ ೪

ಹಿಮಗಿರಿಸುತೆತವ – ವಿಮಲಪದಾಬ್ಜಕೆ
ನಮಿಸುವೆ ನೀ ಪಾಲಿಸೇ ॥
ಅಮಿತಾರ್ಕ ನಿಭ ಗುರು ಗೋವಿಂದ ವಿಠಲನ
ಕಮನೀಯ ಪದ ಕಾಣಿಸೇ ೫

೨೮೯

ಗೌರಿದೇವಿ ಪದಕೇ । ನಾರೇರು ।
ಆರುತಿಯನು ಬೆಳಗೀ ಪ

ಆರುತಿಯನು ನಮ್ಮ । ಕಾರ್ತಿಕೇಯನ ಮಾತೆ
ಸಾರ ಸಾಕ್ಷಿಗೇ ....। ಭೂರಿ ಕರುಣಿಗೇ ಅ.ಪ.

ಶ್ರೀ ಷಣ್ಮುಖ ಮಾತೇ । ಸುರಪತಿ ।
ಲೇಸು ಗುರುವೇ ಖ್ಯಾತೇ
ವಾಸುಕಿ ಶಯನನ । ಹಾಸಿಗೆನಿಪ ನಾಗ
ಭೂಷಣ ಪ್ರಿಯ ಸತಿ । ಪೋಷಿಸು ಸನ್ಮತಿ ೧

ಮಂಗಳಾಂಗೆ ಗೌರೀ । ಹರಿಪದ ।
ಭೃಂಗಳೆ ಮುರ ವೈರೀ

ರಂಗನ ಶುಭಗುಣ । ಹಿಂಗದೆ ಪಾಡುವ
ಮಂಗಳ ಮನವೀವ । ಶೃಂಗರ ಕಾಯೇ ೨

ಶರಧಿಜೆ ರುಕುಮಿಣಿಯಾ । ಪತಿ
ಗುರು ಗೋವಿಂದ ವಿಠ್ಠಲನಾ
ವರನಾಮ ನುಡಿಸಲು । ಪರಮ ಸಮರ್ಥಳು
ಶಿರಬಾಗಿ ನಮಿಸುವ । ಶರಣರ ಪಾಲಿಪ ೩

೨೯೦

ಚಂಪಕನಾಸೇ ವಿರೂಪಾಕ್ಷಜಾಯೆ
ನೋಂಪಿಗೈವೆನಮ್ಮ । ಕರುಣದಿಂದ ಕಾಯೆ ಪ

ಇಂಪು ಹರಿಯ ನಾಮ । ಸ್ಮರಣೆ ಕರುಣಿಸುತ್ತ
ಮಾಂ ಪಾಹಿ ಗೌರೀ । ಅನ್ಯ ಬೇಡೆ ದೇವಿ ಅ.ಪ.

ಅಂಗನಾಮಣೀ । ನುಡಿಗಭಿಮಾನೀ
ಸಂಗೀತ ಲೋಲೆ । ವಿಸ್ಮೃತ ಸುಫಾಲೆ
ಕಂಗಳು ವಿಶಾಲೆ । ಕೊರಳೊಳು ಸುಮಾಲೆ
ಅಂಗಜನ ವೈರೀ । ಶಿವ ಮನೋಹರೀ ೧

ಧವಳಗಂಗೆ ಪೊತ್ತ । ಶಿವನ ಸ್ಮರಿಸುತ್ತ
ಸವನ ಮೂರು ಕಳೆವ । ಭುವಿ ಪಾಲಿಸುವ
ಭುವಿಧರಭಿಧಶಯ್ಯೆ । ಕವನ ನುಡಿಸಮ್ಮ
ಶರ್ವಳೆ ನಿನ್ನನು । ಸರ್ವದ ಸ್ಮರಿಸುವೆ ೨

ಮಾವಾರಿ ಎನಿಪ । ಗೋವುಗಳ ಪಾಲ
ಗೋವ್ರಜ ಸುಘೋಷ । ಗೋವತ್ಸ ಧ್ವನಿಗೇ
ಧಾವಿಪಂತೆ ಗುರು । ಗೋವಿಂದ ವಿಠಲನ
ತೀವ್ರದುಪಾಸನ । ನೀ ಪಾಲಿಸಮ್ಮ ೩

೨೯೧

ಪಾರ್ವತಿ ಮತಿಯನಗೇ – ಕೊಡುವುದು
ಪರ್ವತ ಪತಿ ತನಯೇ ಪ

ಆರು ನಿನಗೆ ಸರಿ ಮೂರು ಲೋಕದೊಳು
ವೃತ್ರಾರಿಗಳಿಂದಾರಾಧಿತಳೇ ಅ.ಪ.

ಅಗಜೆ ಎನ್ನ ವದನಾ । ಮಾಡಲಿ । ನಗಧಶಿಗುಣಸ್ತವನಾ
ಖಗ ವಹ ಸಖ ಶಿವ । ಮೃಗ ಪಾಣಿಯ ಶಿಱೆ
ಹಗಲಿರುಳಲಿ ಹರಿ ಗಾಯನ ಮಾಡಿಸೇ ೧

ಮನಸಿಜಾರಿಯ ಜಾಯೇ । ಮನ್ಮನ । ಚಪಲ ಬಿಡಿಸು ತಾಯೇ
ಕನಸಿಲಿ ಮನಸಿಲಿ ಘನ ವಿಷಯಂಗಳ
ನೆನೆವ ಕೊಡದೆ ಹರಿ ಧ್ಯಾನವನೀಯೇ ೨

ಲೋಕ ಪಾವನ ಮೂರ್ತೇ । ಪಾಲಿಸು । ಏಕದಂತನ ಮಾತೇ
ನೋಕನೀಯ ಗುರು ಗೋವಿಂದ ವಿಠಲನ
ಜೋಕೆಯಿಂದ ನೆನೆ ನೆನೆಯುವ ಮಾತೇ ೩

೨೯೨

ಪಾರ್ವತೀ – ಶರ್ವನ ಜಾಯೆ – ಪಾರ್ವತೀ ಪ

ಪಾರ್ವತಿ ಸನ್ಮತಿ ದಾತೇ – ಭಕ್ತಿ
ಪೂರ್ವಕ ಭಜಿಪರ ಪ್ರೀತೆ । ಆಹ
ಪೂರ್ವ ದಿವಿಜ ಧ್ವಂಸ । ಶರ್ವಾದಿ ದಿವಿಜೇಡ್ಯ
ಸಾರ್ವಭೌಮನ ಸ್ಮೃತಿ । ಸಾರ್ವಕಾಲದಲೀಯೆ ಅ.ಪ.

ಗೌರಿ ಕಾತ್ಯಾಯನಿ ದೇವೀ । ಭಕ್ತಿ ಸಾ

ಕಾರಿ ಭಾರತಿ ಸಂಭವೀ । ಈ ಸಂ–
ಸಾರ ನುತ್ತರಿಪ ಭಾರ್ಗವೀ । ಪತಿ ಪ–
ದಾರವಿಂದವ ಉಮೆ ದೇವೀ । ಆಹ
ತೋರೂವುದು ಹೃದ । ಯಾರವಿಂದದಿ ವೇಗ
ನೀರೇರು ಹಾಕ್ಷಿ ಕು । ಮಾರ ಜನನಿ ತಾಯೇ ೧

ಸುರಪ ಗಣಪರ ಮಾತೆ ಶರ್ವೇ । ನಿನ್ನ
ವರ್ಣಿಸಿ ಪೊಗಳಲೆನ್ನಳವೇ । ನೀನೆ
ಕರುಣದಿ ಪೇಳಿಸೆ ಬರವೇ । ಎನ್ನ
ಉರುತರ ಅಜ್ಞಾನವ ಬಲ್ಲೆ । ಆಹ
ಕರಣಗಳೊಳು ನಿಂತು । ನಿರುತ ಪ್ರೇರಕಳಾಗಿ
ಹರಿಗುಣ ದ್ಯೋತಕ । ಸ್ಮರಣೆ ಸುಖವ ನೀಯೆ ೨

ಮೃಡನಂತರಂಗಳೆ ತಾಯೇ । ಎನ್ನ
ಕಡು ಕರುಣದಿಂದಲಿ ಕಾಯೇ । ಇನ್ನು
ಧೃಡ ಹರಿ ಭಕುತಿಯ ನೀಯೆ । ಅನ್ಯ
ಬೇಡೆನು ನಾ ಪಾರ್ವತೀಯೇ । ಆಹ
ಮೃಡವಂದ್ಯ ಗುರು ಗೋ । ವಿಂದ ವಿಠ್ಠಲನ
ನಡು ಹೃದಯದಿ ನೋಳ್ಪ । ಧೃಡಮತಿಯನು ಕೊಡೆ ೩

೨೯೩

ಪಾಹೀ ಪಾಹೀ ಪರ್ವತರಾಜ ಕುಮಾರೀ ಪ

ತ್ರಾಹಿ – ತ್ರಾಹಿ – ತಾಯಿ ತವ ಪದಯುಗಳಕೆ
ದೇಹ ಮಮತೆ ಕಳೆ ದಕ್ಷ ಕುಮಾರೀ ಅ.ಪ.

ಗೌರಿ ಮೃಡಾಣಿಯೆ ಬಲು ಪ್ರಖ್ಯಾತೆ
ಸುರಪತಿ ಷಣ್ಮುಖ ಗಣಪತಿ ಮಾತೆ ೧

ತನು ನಿನ್ನದು ತಾಯಿ ಮನದಭಿಮಾನಿಯೆ
ಹೊನ್ನು ಮಣ್ಣಿನಲಿ ಸಮ ಮನವೀಯೇ ೨

ಅಸಮನೆನ್ನುತ ಗುರು ಗೋವಿಂದ ವಿಠಲನ
ಬಿಸರು ಹಾಂಬಕೆ ನೀ ತುತಿಸುವೆ ಪ್ರತಿಕ್ಷಣ ೩

೨೯೪

ಭದ್ರಾಣಿ ಪರಿಪಾಲಿಸು ನೀಯೆನ್ನ । ನಾ ಬೇಡುವೆ ನಿನ್ನ ಪ

ಅದ್ರಿಯ ತನುಜೆ ಸಮುದ್ರಜ ಶಿರಧರ
ನರ್ಧಾಂಗಿಯೆ ನೀ ತಿದ್ದುತಲೆನ್ನ ಮನ ಅ.ಪ.

ಆಡೂವ ನುಡಿಗಳೊ ಸರ್ವಾ । ಮಾಡು ಶ್ರೀ ಹರಿ ಪರವಾ
ಬೇಡುವೆನಿದನೊಂದನೆ ಶರ್ವಾ । ಮಡದಿಯೆ ಮನ್ಮನವಾ ।
ಧೃಡ ಭಕುತಿಲಿ ಹರಿ । ಅಡಿಯುಗ ವನಜದಿ
ಇಡಿಸಿ ಎನ್ನ ಪೊರೆ ಮೃಡ ಪ್ರಿಯೆ ಪ್ರಾರ್ಥಿಪೆ ೧

ತತುವಾಹಂಕಾರಲಿ ನೆಲಸಿ । ಪತಿಯಾಜ್ಞೆಯ ಸಲಿಸೀ
ಹಿತರೂ ಅಹಿತಾರೊಳು ನೆಲಸೀ । ಕೃತಿ ದ್ವಿವಿಧಾಚರಿಸೀ ।
ಕೃತಕಾರ್ಯಳೆ ತವ । ತತುವವ ವ್ಯಾಪಿಸಿ
ಪತಿಯೊಳಗಿಹ ಸಿರಿ । ಪತಿ ಪದಕರ್ಪಿಸೆ ೨

ಸುರಪ ಗೌರೀಪ ಅಹಿ ಖಗಪ । ಬ್ರಹ್ಮೇಶರ ಯೋಜಿಪ ಸಾರುವ ಜಗ
ಕಾರ್ಯಗಳ ನಡೆಪ । ಸರ್ವೋತ್ತಮ ನೆನಿಪ
ಗುರು ಗೋವಿಂದ ವಿಠಲನ ದಹರಾಂಬರದಲಿ
ಪರಿಕಿಪ ಯೋಗವ ಕರುಣಿಸು ಮಾತೆ ೩

೨೯೫

ಭದ್ರಾಣಿ । ಮನೊ ಮಾನಿ ಪ

ಭದ್ರಗತಿಗೆ ಬಹು । ಭದ್ರ ಸುಸಾಧನ
ವೃದ್ಧಿಯ ಗೈವುದ । ಭದ್ರವ ಕಳೆದು ಅ.ಪ.

ಚಂಚಲ ಮನ ನಿ । ಶ್ಚಂಚಲೆನಿಸಿ ನಿ–
ಷ್ಕಿಂಚನ ನೆನಿಪುದು । ಪಂಚ ವಕ್ತ್ರ ಸತಿ ೧

ಚಂಪಕ ನಾಸಿಕೆ । ಪಂಪಾಭಿಧೆ ಹರಿ
ನೋಂಪಿಗೈವ ಮತಿ । ಗಿಂಪನು ಪಾಲಿಸು ೨

ದೋಷ ದೂರ ಹರಿ । ಕೇಶವನಲಿ ಮನ
ಮೀಸಲೆನಿಸು ಹೇ । ವಾಸವ ಸನ್ನುತೆ ೩

ಮಂಗಳ ಮೃಡನಂತ । ರಂಗಳೆ ಗೌರಿಯೆ
ಹಿಂಗಿಸುಯೆನ್ನ ಅ । ಘಂಗಳ ನಿಚಯವ ೪

ಜಲಧಿಶಯನ ಗುರು । ಗೋವಿಂದ ವಿಠಲನ
ಒಡಲೊಳು ಜಡಜದಿ । ಬಿಡದಲೆ ತೋರಿಸು ೫

೨೯೬

ಶಾರ್ವರೀಕರ ಶೇಖರನ ಸತಿ । ಹರಿ ಸ್ತುತಿಯ ಮತಿ
ಈಯೆ ಪಾರ್ವತಿಯೇ ॥ (ಮನ ಕಲ್ಮಷವ ಕಳೆಯೆ) ಪ

ದುಡುಕುವುದು ಮನ । ಜಡ ವಿಷಯದೊಳು
ಕಡೆಗೈಸುತಿದ । ಧೃಡ ಮಾಡು ಮನ ॥

ಪೊಡವಿಪತಿ ಪದ । ಜಡಜದಲಿ ತ್ವರ
ಧೃಡಮತಿಯ ಕೊಡು । ಮೃಡ ಪ್ರಿಯೆಳೆ ಪಾಹಿ ೧

ಶಂಭು ಪ್ರಿಯೆ ಸತಿ । ಅಂಬೆ ಶಚಿಪತಿ
ಬಿಂಬೆ ಹರಿಯನು । ಕಾಂಬ ಸುಜ್ಞಾನ ॥
ಉಂಬ ಉಡುವದ । ಕೊಂಬ ಕೊಡುವದ
ಬಿಂಬ ಕ್ರಿಯೆಗಳ । ಹಂಬಲವ ಕೊಡು ೨

ಸರ್ವ ಮಂಗಳೆ । ದರ್ವಿ ಜೀವಗೆ
ನಿರ್ವಿಕಾರನ । ದುರ್ವಿಭಾವ್ಯನನ ॥
ಸರ್ವೇಶ ಗುರು । ಗೋವಿಂದ ವಿಠಲನ
ಸರ್ವಕಾಲದಿ । ಸ್ಮರಣೆ ಸುಖ ಕೊಡು ೩

ನದಿಗಳ ಸ್ತೋತ್ರ

೨೯೭

ಕಾವೇರಿ

ಕಾವೇರೀ – ಕಲುಷ ಸಂಹರಳೆ ಕಾವೇರಿ ಪ

ಕಾವೇರಿ ಲೋಕೋಪಕಾರಿ । ಬಂದು
ಸೇವಿಸುವರ ದುರಿತಾರಿ । ಆಹ
ಭೂವಲಯದಿ ನಿನ । ಗಾವಲ್ಲಿ ಸರಿಗಾಣೆ
ಶ್ರೀ ವಿಧಿ ಸುತೆ ನಮ್ಮ । ಕಾವುದು ಬಿಡದಲೆ ಅ.ಪ.

ಅಮಿತಾಭ ಕವೇರ ನೃಪನು । ಪುಣ್ಯ
ಶಮದಮದಿಂದಯುತನು । ಸಾರಿ
ಹಿಮನಗ ತಪ್ಪಲುಗಳನು । ದಿವ್ಯ
ಸಮಶತದಶ ವರ್ಷಗಳನು । ಆಹ

ಸುಮನ ಸೋತ್ತಮನಾದ । ಬೊಮ್ಮನ ಧೇನಿಸಿ
ಅಮಮಸುಘೋರವು । ವಿಮಲ ತಪವ ಗೈದ ೧

ಮೆಚ್ಚುತ ತಪಸೀಗೆ ಚತುರ । ಮುಖ
ಇಚ್ಛಿಸಿದನು ಕೊಡೆ ವರ । ಭಕ್ತ
ನಿಚ್ಛೇಸಲು ಮುಕುತಿ ವರ । ಅದು
ಅಚ್ಚ್ಯುತ ಕೊಡುವಂಥ ವರ । ಆಹ
ಉಚ್ಚರಿಸಿದ ಬೊಮ್ಮ । ಅಚ್ಚ್ಯುತ ಮಾಯ ತನ್
ಇಚ್ಛೆಯ ಸುತೆ ನಿನ । ಮೆಚ್ಚು ಪುತ್ರಿಯಹಳು ೨

ಸ್ಮರಣೆ ಮಾತ್ರದಿ ವಿಷ್ಣುಮಾಯಾ । ದಿವ್ಯ
ತರುಣಿ ರೂಪದಿ ಬ್ರಹ್ಮರಾಯ । ನೆದುರು
ಕರವ ಮುಗಿದು ಪೇಳು ಜೀಯಾ । ಎನೆ
ಬರೆದನಾಶಿದು ಕವೇರ್ಕನ್ಯಾ । ಆಹ
ಸರಿತು ರೂಪದಿ ಮೋಕ್ಷ । ವರಶ್ವಿರ ವಹುದು ನೀ
ಸರುವ ತೀರಥ ಮಯಿ । ಪರಿವುದು ಈ ಪರಿ ೩

ಎರಡು ಅಂಶವು ನಿನಗಿಹುದೂ । ಒಂದು
ಸರಿತಾಗಿ ಪ್ರವಹಿಸುವೂದು । ಮತ್ತೆ
ತರುಣಿ ರೂಪದಿ ಪತ್ನಿಯಹುದು । ಮುನಿ
ವರ ಕುಂಭ ಸಂಭವಗಹುದು । ಆಹ
ಕರೆಸಿ ಲೋಪಾಮುದ್ರೆ । ಮೆರೆವುದು । ಪತಿವ್ರತೆ
ಶಿರೋಮಣಿ ಎನಿಸಿ ನೀ । ಮೆರೆವುದು ಭುವಿಯಲ್ಲಿ ೪

ವರವಿತ್ತು ಮರೆಯಾಗೆ ಅಜನು । ನೃಪ
ವರ ಸುತೆಯೊಡನೆ ಪೊರಟನು । ಕಾಲ
ಕರ ಮರತನದಿ ಕಳೆದಾನು । ಮುಂದೆ
ವೈರಾಗ್ಯದಿಂ ಪೇಳಿದಾನು । ಆಹ
ಪರಿಶುದ್ಧನಿಹೆ ನಿನ್ನ । ದರುಶನ ಮಾತ್ರದಿ
ಪರಮ ನಿಷ್ಕಾಮದ । ಕರ್ಮವನೆಸಗುತ್ತ ೫

ಹರಿಧ್ಯಾನದೊಳು ಬಲುರತ । ನಿರೆ
ನರಪತಿ ಹರಿಲೋಕ ಗತ । ನಾಗೆ
ತರುಣಿ ಕಾವೇರಿಯು ಸ್ಥಿತ । ಘೋರ
ವರ ತಪವನ್ನು ಗೈಯ್ಯುತ್ತ । ಆಹ
ಇಂತಿರಲೀ ಪರಿ । ಹರಿ ದರುಶನ ವೀಯೆ
ವರ ಮುಕ್ತಿ ಮಾರ್ಗವ । ಪರಿ ಪರಿ ಬೇಡಿದಳ್ ೬

ಸರಿದ್ರೂಪಳಾಗಿನ್ನು ಪರಿದೂ । ಹರಿ
ಶರಣರ ಪಾಪವ ತರಿದೂ । ಮತ್ತೆ
ಸರುವರ ತಾಪವ ಕಳೆದೂ । ಇನ್ನು
ಸರಿತು ಗಂಗಾದಿಗೆ ಹಿರಿದೂ । ಆಹ
ವರ ಕೀರ್ತಿಯಿಂದಲಿ । ಮೆರೆಯುತ ಲೋಕೋಪ
ಕರಳೆನಿಸಿ ಪ್ರವಹಿಸಿ । ಶರಧಿಯ ಸೇರ್ವಂಥ ೭

ಸ್ಮರಣೆ ಮಾತ್ರದಿ ಪಾಪನಾಶಾ । ಮಾಳ್ಪ
ಗಿರಿಯುಂಟು ಸಹ್ಯ ಆದ್ರೀಶ । ಅಲ್ಲಿ
ತರು ರೂಪಮಲಕ ದೊಳ್ವಾಸಾ । ನಿನ್ನ
ಚರಣ ಕಮಲವ ವಾಣೀಶಾ । ಆಹ
ವಿರಜೆ ಪುಣ್ಯದ ಜಲ । ವರ ಕಂಬುವಿಲಿ ತುಂಬಿ
ಎರದಭಿಷೇಚಿಸೆ । ಪರಿವುದದರ ಸಹ ೮

ವರ ದತ್ತಾತ್ರೇಯ ನೆಂದೆನಿಸಿ । ತವ
ಶಿರ ಸ್ಥಾನದಲ್ಲಿ ವಾಸೀಸಿ । ಎನ್ನ
ಶರಣರ ಅಘಗಳ ಹರಿಸೀ । ನಿನ್ನ
ವರ ದಕ್ಷಗಂಗೆಂದು ಕರೆಸೀ । ಆಹ
ವರ ತವೋತ್ಸಂಗದಿ । ಶಿರವಿಟ್ಟು ಮಲಗುತ್ತ
ಸರಿದ್ವರಳೆನಿಸುತ್ತ । ಮೆರೆಸುವೆ ನಿನ್ನನು ೯

ಮಂಗಳ ಜಪತಪ ಸ್ನಾನ । ಮಿಕ್ಕ
ಗಂಗಾದಿ ತೀರ್ಥಾನುಷ್ಠಾನ । ನಾಲ್ಕು

ಗಂಗಳೊಳಗೆ ಮಾಳ್ಪ ನಾನಾ । ಕರ್
ಮಂಗಳ್ತವೋತ್ಸುಂಗ ಶಿರಸ್ಥಾನ । ಆಹ
ಮಂಗಳಾಮಲಕ ಜಲಂಗಳಿಗ ಸಮ ಕ-
ಳೆಂಗಳ್ಷೋಡಶಕ್ಕೊಂದಂಗ ಸರಿ ಬರೆದು ೧೦

ಆ ಮುನಿವರನು ಅಗಸ್ತ್ಯ । ಬಂದು
ನೇಮದಿಂ ತಪಸಿನೋಳ್ ಸ್ಥಿತ । ಆಗ
ಬೊಮ್ಮನಿಂ ದ್ವರಗಳು ದಾತ । ತನ್ನ
ಕಾಮಂಡುಲಿನೊಳ್ ನಿನ್ನ ಧೃತ । ಆಹ
ನೇಮದಿಂದೊಂದಂಶ । ಲೋಪಾ ಮುದ್ರೆಯು ಆಗಿ
ಆ ಮಹ ಮುನಿಯನ್ನ । ಪ್ರೇಮದಿ ವರಿಸುವೆ ೧೧

ವರವಿತ್ತು ಮರೆಯಾಗೆ ಹರಿಯು । ಅತ್ತ
ವರ ಮುನಿ ತಪಸಿನ ಧಗೆಯು । ಕಂಡು
ಸುರಜೇಷ್ಠ ಅವನೆದುರು ಹೊಳೆಯು । ಆಗ
ಬರೆದನು ಜೀವನ ಧೊರೆಯು । ಆಹ
ಹೊರಲಾರದವ ತಾನು । ವರ ಸನ್ಯಾಸದಿ ಮನ
ವಿರಸಿರುವುದು ನಿರಾ । ಕರಿಸುತ್ತ ಪೇಳ್ದನು ೧೨

ಸಂಭ್ರಮದಲಿ ಪತಿವ್ರತೆಯಾ । ಕೂಡಿ
ಇಂಬಾಗಿ ಸಂಸಾರ ಧೊರೆಯಾ । ಪೊತ್ತು
ಅಂಬು ಜಾಂಬಕ ಪದ ಸೇವೆಯ । ಫಲದ
ಲಿಂಬಿಡದಲೆ ಗೈದುದೆಯಾ । ಆಹ
ಕಂಬು ಚಕ್ರಧರ । ತುಂಬಿದ ಮನದಿಂದ
ಹಂಬಲಿಸಿ ಕೈಗೊಂಡು । ಬೆಂಬಿಡದೆ ಸಲಹುವ ೧೩

ಮುನಿವರಗಸ್ತ್ಯನು ಅಜನ । ಮಾತ
ಮನವಿಟ್ಟು ಕೇಳುತ್ತ ವಚನ । ಪೇಳ್ದ
ಅನುಕೂಲ ಭಾರ್ಯಳಾಳ್ವುದನ । ಯೋಗ
ಅನುಕೂಲಿಸುವುದೆಂಬ ಹದನ । ಆಹ

ವನಜ ಗರ್ಭನು ತನ್ನ । ತನುಜೆಯ ಸುಕನ್ಯಾ
ಮಣಿಯ ಕಾವೇರಿಯ । ವಿನಯದಿ ವರಿಸೆಂದ ೧೪

ಜಗದನುಗ್ರಹಕಾಗಿ ನಾರಿ । ತನ್ನ
ಮಗಳಿಹಳು ತಪದಿ ಕಾವೇರಿ । ಕಂಡು
ಮಗುಳೆ ವರಗಳನಿತ್ತು ಭಾರಿ । ಸಹ್ಯಾ
ದ್ರಿಗೆಗಾಗಿ ಪೋಗುದು ಏರಿ । ಆಹ
ಅಘಹರಳ್ವೊಂದಂಶ । ನಗ ಶೃಂಗದಿರಿಸುತ್ತ
ಮಿಗೆ ಚೆಲ್ವ ಸರಿತಾಗಿ । ಪೋಗಲನುಗ್ರಹಿಸು ೧೫

ಮೊಗ ಚತುರ ಮರೆಯಾಗಲಾಗ । ಮುನಿ
ಅಗಸ್ತ್ಯನು ಚರಿಸುತ್ತ ವೇಗ । ಹಿಮ
ನಗ ಪಾರ್ಶ್ವದೊಳು ತಪಯೋಗ । ದಿಹ
ಆಘಹರಳ ಕಂಡನು ಆಗ । ಆಹ
ಮೊಗದ ಲಾವಣ್ಯಕ್ಕೆ । ಮಿಗೆ ಮೋದ ತಾಳುತ್ತ
ಸುಗುಣೆಯ ಬೆಸಸೀದ । ನಗು ಮುಖದಿಂದಲಿ ೧೬

ಹೊರ ಮುಖಳಾದಳ್ ಕಾವೇರಿ । ಮುನಿ
ವರನ ಸತ್ಕರಿಸಲು ನಾರಿ । ದ್ವಿಜ
ವರ ಪೇಳೆ ಬ್ರಹ್ಮಗನುಸಾರಿ । ಆಕೆ
ವರಗಳ ಬೇಡಲು ಭಾರಿ । ಆಹ
ಸುರಜೇಷ್ಠ ನ್ವೊರೆದಂತೆ । ವರಗಳ ನೀಯಲು
ಸುರಕನ್ಯಾಮಣಿಯಾಗ । ವರಿಸಿದಳಾ ಮುನಿಯ ೧೭

ಹಂಸ ವಾಹನ ಪತ್ನಿ ಸೇರಿ । ಶಿರಿ
ಕಂಸಾರಿ ಗರುಡನ್ನ ಏರಿ । ಕ್ರತು
ಧ್ವಂಸಿ ಉಮಾ ನಂದಿ ಏರಿ । ಇಂದ್ರ
ಶಂಸಿ ಸ್ಯೆರಾವತನೇರಿ । ಆಹ
ಸಾಂಶರು ಯೋಗ್ಯ ನಿರಂಶರು ಸೇರಿ ಪ್ರ–
ಶಂಸನ ಗೈಯುತ್ತ ವೈವಾಹ ನಡೆಸಿದರ್ ೧೮

ಮದುವೆ ವೈಭವ ಪೇಳಲಾರೆ । ಜಗ
ದುದಯಾದಿ ನಡೆಪರಿಹಾರೆ । ಹರಿ
ಮುದ ಪೊಂದಲಿನ್ನೆದುರ್‍ಯಾರೆ । ಎಲ್ಲ
ರ್‍ಯೊದಗಿ ಆಶೀರ್ವದಿಶ್ಯಾರೆ । ಆಹ
ವಿಧ ವಿಧ ದುಡುಗೊರೆ । ಅದ ಪೇಳಲಳವಲ್ಲ
ಅದುಭುತ ಜರುಗಿತು । ಉದ್ವಾಹ ಕಾರ್ಯವು ೧೯

ವೈವಾಹ ಕಾರ್ಯ ಪೂರಣ । ಸರ್ವ
ದೇವತೆಗಳು ಋಷಿ ಗಮನ । ಮತ್ತೆ
ಕಾವೇರಿ ಸಹ ಮುನಿ ಹಿಮನ । ಕೇಳ್ಕೆ
ಭಾವಿಸುತಲ್ಲೆ ಕೆಲದಿನ । ಆಹ
ಆವಾಸಿಸಿರೆ ಋಷಿ । ಸಾರ್ವರ ಮನ ತಿಳಿದು
ಆಹ್ವಾನ ವಿತ್ತಳು । ಸಹ್ಯಾದ್ರಿ ಸನಿಯಕ್ಕೆ ೨೦

ಕುಂಭ ಸಂಭವ ತನ್ನ ಪಯಣ । ಕಾಗಿ
ಅಂಬುಜಾಕ್ಷಿಗೆ ಪೇಳೆ ಅವನ । ತೀರ್ಥ
ತುಂಬಿದ ಕಾಮಂಡುಲಿನ । ಒಳಗೆ
ಸಂಭ್ರಮ ದೊಂದಂಶ ಗಮನ । ಆಹ
ಇಂಬಿಟ್ಟನ್ನೊಂದಂಶ । ಲೋಪಾಮುದ್ರೆಯು ಕುಂಭ
ಸಂಭವ ಸಹ ಸಹ್ಯ ಅದ್ರಿಗೆ ಗಮಿಸಿದಳ್ ೨೧

ಉತ್ತರ ಹಿಮನಗ ಬಿಡುತ । ವನ
ಸುತ್ತುತ ವಿಂಧ್ಯ ಮೀರುತ್ತ । ಹಾಂಗೆ
ಉತ್ತಮ ಸಹ್ಯಾಚಲೇರುತ್ತ । ಅಲ್ಲು
ನ್ನತ್ತ ಬ್ರಹ್ಮಗಿರಿ ಸಾರುತ್ತ । ಆಹ
ಉತ್ತಮ ಕ್ಷೇತ್ರದಿ ಜತ್ತಾಗಿ ಕಮಂಡಲ
ಒತ್ತಟ್ಟಿಗಿರಿಸುತ್ತ ಪತ್ನಿಗೆ ಬೆಸಸಿದರ್ ೨೨

ಇದುವೆ ಬ್ರಹ್ಮಗಿರಿ ನಾಮ । ಮತ್ತೆ
ಇದರೊಳ್ ತವೋತ್ಪತ್ತಿ ಕಾಮ । ಎಂದು

ವಿಧಿಯು ಪೇಳಿಹ ಮುನ್ನ ನೇಮ । ಕಾಲ
ಮುದದಿ ಪ್ರತೀಕ್ಷಿಸು ಭಾಮಾ । ಆಹ
ವದಗಿ ಬರಲು ಕಾಲ ಮುದದಿ ಕರಕದಿಂದ
ಅದುಭೂತವೆನೆ ಸರಿದ್ವರಳಾಗಿ ಪ್ರವಹಿಸು ೨೩

ಈ ಪರಿ ಪೇಳುತ್ತ ಸತಿಗೆ । ಸಾ
ಮೀಪದ ಶಿಷ್ಯರುಗಳಿಗೆ । ಕುಂಡ
ಜೋಪಾನದಲಿ ನೋಳ್ಪ ಹಾಗೆ । ಪೇಳಿ
ತಾಪಸಿ ಸೂವರ್ಣ ಮುಖಿಗೆ । ಆಹ
ಪ್ರಾಪಿಸಿ ಸ್ನಾನಾದಿ ವ್ಯಾಪಾರದೋಳಿರೆ
ಆ ಪರ್ವ ಕಾಲ ಸಮೀಪವಾಗಲು ಸುರಪ ೨೪

ಹರಿ ಮನೋಭಾವಾನು ಸಾರಿ । ಮಳೆ
ಗರೆಯಲನ್ಯತರುವ ಸಾರಿ । ಶಿ
ಷ್ಯರುಗಳಾಶ್ರಯಿಸಲು ಮೀರಿ । ಕುಂಡ
ಸರುವೆ ತೀರಥಗಳು ಉಸುರಿ । ಆಹ
ಪರ್ವ ಕಾಲವು ಇದು । ಪೊರಮಡು ಕಾವೇರಿ
ಪರಿವೆವು ನಿನ ಪಿಂತೆ । ತೀರ್ಥಗಳಗ್ರಣಿಯೆ ೨೫

ವಿಧಿ ಬಂದ ಹಂಸವನೇರಿ । ಆವ
ಮುದದಿಂದ ವನಗಳ್ ಸಂಚಾರಿ । ಇನ್ನು
ಅದುಭೂತಾಮಿತ ತೀರ್ಥ ಗಿರಿ । ಕಂಡು
ಒದಗಿ ಕರಕದ ಜಲ ಭಾರಿ । ಆಹ
ಮುದದಿ ಮೀಯುತ ಜಪ ಅದುಭೂತಾಷ್ಟಾಕ್ಷರ
ಪದುಮ ಸಂಭವ ಹರಿಧ್ಯಾನದಿ ರತನಾದ ೨೬

ಮಂದ ಮಾರುತ ಬೀಸೆ ವಿಮಲ । ಧಾತ್ರಿ
ಗಂಧ ವೆಂದೆನುತಲಿ ಬಹಳ । ಮುದ
ದಿಂದೆಚ್ಚರಗೊಂಡು ಕಂಗಳ । ಮುಂದೆ
ಸುಂದರಾಮಲಕಾ ಕೃತಿಗಳ । ಆಹ

ಎಂದು ಕಾಣದ ದೃಶ್ಯ । ವೆಂದೆನುತಲಿ ಮನ
ದಿಂದ ಧೇನಿಸೆ ಅದು । ಛಂದದಿ ಮರೆಯಾಯ್ತು ೨೭

ಅಚ್ಚರಿ ಗೊಳ್ಳುತ್ತ ವಿಧಿಯು । ಕಣ್ಣ
ಮುಚ್ಚಿ ಧೇನಿಸೆ ಸಿರಿ ಹರಿಯು । ಸಿರಿ
ವತ್ಸಾಂಕಿತನು ಬಾಹು ದ್ವಿದ್ವಯು । ಇಂದ
ಮೆಚುಕೊಪವ ತೋರೆ ವಿಧಿಯು । ಆಹ ।
ಸಚ್ಚರಿತೆಯ ಪಾಡೆ । ನಿಚ್ಚಳಾಮಲಕದ
ಉಚ್ಚರೂಪವ ಕಂಡು । ಅರ್ಚಿಸಿದನು ಬಹಳ ೨೮

ವಸುಧೆಯೊಳಿದು ಹರಿಕ್ಷೇತ್ರ । ಇಲ್ಲಿ
ಅಸುರಾರ್‍ಯಾಮಲಕದ ಗಾತ್ರ । ದಿಂದ
ವಸಿಸಿ ಸೇವಿಪರ ಪವಿತ್ರ । ಗೈವ
ಅಶರೀರ ವಾಕ್ಯಾಯ್ತು ಚಿತ್ರ । ಆಹ
ಕುಸುಮನಾಭನ ಪಾದ । ಬಿಸಜಗಳ್ವಂದಿಸಿ
ಬಿಸಜ ಸಂಭವ ಗೈದ । ಅಸಮ ಸಂಪೂಜೆಯ ೨೯

ಧಾತಾ ಸ್ವ ಕುಂಡಿಕಾಸ್ಥಿತ । ವಿಮಲ
ತೀರ್ಥವು ವಿರಜೆಯಿಂ ಹೃತ । ಶಂಖ
ಪೂರ್ತಿಸಿ ಪೂಜಾ ಪದಾರ್ಥ । ಪ್ರೋಕ್ಷಿಸಿ
ಪೂತಾತ್ಮಾಮಲಕದಿ ಸ್ಥಿತಿಶಿ ಆಹ
ಶ್ರೀ ತರುಣೀಶನ । ದತ್ತಾತ್ರೇಯನ ರೂಪ
ಖ್ಯಾತ ಪೂಜಿಸುತಿರಲಶರೀರ ವಾಕ್ಕಾಯ್ತು ೩೦

ಸರಿದ್ವರ ರೂಪದಿ ನಿರ್ಗಮ । ಚಿಂತೆ
ಪರಿ ಪರಿ ಗೈಯ್ಯುವ ಭಾಮಾ ಮಣಿ
ಕುರಿತು ಪೇಳಿತು ವಾಣಿ ನೇಮ । ನೀನು
ಶರಧೀ ಸೇರುವ ಮನೋ ಕಾಮಾ । ಆಹ
ಪರಿಪೂರ್ಣವಹುದೀಗ । ವರ ತುಲಾಪರ್ವದಿ
ಶರತ್ಕಾಲ ಮುಕ್ತಿದ । ಪರಿವುದು ಕಾವೇರಿ ೩೧

ತತುಕ್ಷಣ ಮುನಿಯ ಕಮಂಡ್ಲು । ದೊಳು
ಸ್ಥಿತ ಸರ್ವ ತೀರ್ಥಮಾನಿಗಳೂ । ಪೇಳೆ
ತುತುಕಾಲ ಕವೇರ ತನುಜಳೂ । ಶೀಘ್ರ
ಉತು ಪತ್ತಿ ತಾಳಿ ಪರಿದಾಳೂ । ಆಹ
ಇತರ ತೀರಥಗಳು । ಸರಿತು ರೂಪದಿ ಹಿಂದೆ
ಅತಿ ತ್ವರೆಯಲಿ ಪ್ರವ । ಹಿತರಾಗಿ ಪೋದರು ೩೨

ಋಷಿವರ್ಯ ಸ್ನಾನವ ಮಾಡಿ । ಪರಿ
ಕ್ಷಿಸಲಾಗ ವಿಸ್ಮಯ ಕೂಡಿ । ಶಿಷ್ಯರಿ
ಗುಸರಲಾಕ್ಷೇಪದ ನುಡಿ । ಅವ
ರುಸಿರಿದರ್ ಮಳೆಯ ಗಡಿಬಿಡಿ । ಆಹ
ರಸ ರೂಪದಲಿ ಪರಿವ । ಅಸಮ ಪತ್ನಿಯ ಕೂಗೆ
ಋಷಿಗೆ ಶಾಂತಿಯ ಸೊಲ್ಲ । ಒಸೆದು ಪೇಳಿದಳವಳೂ ೩೩

ಸುರವರ ಪೂಜ್ಯ ಧಾತ್ರಿಯು । ಇನ್ನು
ತರುವು ಆ ಮಲಕದ ಬಳಿಯು । ತೀರ್ಥ
ವರ ಶಂಖ ಸಂಜ್ಞಿತ ತಿಳಿಯು । ಇಲ್ಲಿ
ವಿರಜೆಯ ದೊಂದಿಹ ಕಳೆಯು । ಆಹ
ವರ ನಭೊ ಗಂಗೆಯು । ಸರಿ ಸಹ್ಯಾಮಲಕವು
ವರಣಿಸಲಳವಲ್ಲ । ಸರಿದ್ವರ ಮಹಿಮೆಯ ೩೪

ಪಿತರ ಕಾರ್ಯವು ತೀರ್ಥಸನಿಯ । ಶ್ರದ್ಧೆ
ಮತಿಯಿಂದ ಮಾಡಲು ಗಯಾ । ಶ್ರಾದ್ಧಾ
ಯುತ ಫಲ ಪಿತೃಗಳಿಗಯ್ಯಾ । ಇನ್ನೀ
ತೀರ್ಥ ಸ್ನಾನವು ವಿರಜೆಯ । ಆಹ
ಪೂತುರೆ ಫಲವಿಹುದು । ಯಾತರ ಸಂಶಯ
ಮಾತಿಗೆ ಕೈವಲ್ಯ । ದಾತನ ಒಲಿಮೆಯು ೩೫

ಗಂಗಾನದೀಗಗಳು ತಮ್ಮ । ಪಾಪ
ಹಿಂಗಿಸಲೋಸುಗವಮ್ಮ । ತುಲಾ

ಮಂಗಳ ಮಾಸದಲಮ್ಮ । ಒಂದು
ತಿಂಗಳಿಹರಿಲ್ಲಿ ಸಂಭ್ರಮ್ಮಾ । ಆಹ
ಗಂಗೆ ದಕ್ಷಿಣಾಖ್ಯೆ । ಮಂಗಳೆ ಜನಗಳ
ಘಂಗಳ ಕಳೆಯುತ್ತ । ತುಂಗೋಪಕಾರಿಯೆ ೩೬

ಕಾವೇರಿ ಪ್ರವಹಿಸಿ ಭರತ । ವರ್ಷ
ಪಾವಿಸುತಿಹಳು ತಾ ನಿರುತ । ಬಂದು
ಸೇವಿಸೂವರ ಪಾಪ ತ್ವರಿತ । ದೂರ
ಗೈವಳೆಂಬುವದೆ ನಿಶ್ಚಿತ । ಆಹ
ಈ ವಿಧ ಮಹಿಮೆಯ ಓವಿ । ಪಾಲಿಸಿದನು ।
ಶ್ರೀವರ ಶ್ರೀ ಗುರು । ಗೋವಿಂದ ವಿಠಲಯ್ಯ ೩೭

೨೯೮

ದೇವಿ ನರ್ಮದೆ ಪಾಲಿಸಮ್ಮಾ ಪ

ಕಾವನಯ್ಯನ ಚರಣ ತೋರಿ
ಕಾವುದೆಮ್ಮ ಪಾವನಾತ್ಮಕೆ ಅ.ಪ.

ದಣಿದು ಬಂದೆ ನಿನ್ನ ಅಡಿಗೆ ।
ಘನಗಿರಿ ಸಂಜಾತೆ – ದೇವಿ
ಮಣಿದು ನಿನ್ನ ತೀರ್ಥ ಸೇವನ ।
ಜನರ ಕಲುಷ ಹರಣವಮ್ಮ ೧

ವರ ವಿಸ್ತಾರ ಪಾತ್ರವಮ್ಮ ।
ನರರಾಯಾಸ ಶಾಂತವಮ್ಮ
ಅರುಣ ಉದಯದಿಂದ ನಿನ್ನ ।
ಸುರನರಾದಿ ಸೇವಿಸುವರು ೨

ವರ ಸುಜಪದಮಾಲೆ ಕರದಿ ।

ದರವು ಪದುಮ ಗ್ರಂಥಪಾಣಿ
ಗುರು ಗೋವಿಂದ ವಿಠಲ ಚರಣ ।
ನಿರತ ಧ್ಯಾನಾನಂದ ಮಗ್ನೆ ೩

೨೯೯

ಅಂಬೆ ಶಿರಿ ವಿಹಾರಾ । ಜಗದಂಬೆ ಶಿರಿ ವಿಹಾರಾ ।
ಜಯ । ಶ್ರೀ ಬಿಂಬ ಪ್ರಾಣಾದಿ ರೂಪಿ ಬಹುರೂಪಿ ಪ

ಅಂಬುಜ ಜನಿತ ದೇವ । ವೃಂದಾದಿಯ ಸೇವಿತ ಪಾದ ।
ಶ್ರೀ ಕುಮದಾಪ್ತ ಕುಲಜ । ಭೋ
ಸುದೀಪ್ತ ಅನಂತ ಅಚಿಂತ್ಯ ಔಹಿಮೋಪೇತ ಸುವ್ಯಾಪ್ತ ಅ.ಪ.

ತುಂಬಿದಾಂಗ । ಸಿಂಧುಜೆ ಶಿರಿ ಸು । ಧಶಿಾ । ಪ್ರತಿ
ಬಿಂಬ ನೆನಿಪ । ಜಂಭಾರಿಯಾ । ಪ್ರೇಮಾ । ಸ್ವದ
ಕಂಬುಧರ ಘನ । ಶ್ಯಾಮಾ ವರ್ಣ ಸ । ನ್ನಾಮಾ
ಜಾಂಬೂನದ । ದಾಮಧರ ಸು । ವೇಷಾ । ದು–
ರ್ಗಾಂಬೆ ರಮಣ । ಭಕುತ ಸಂ । ತೋಷಾ । ನೀ–
ಲಾಂಬುದಾಭ । ಸತಿರಕ್ಷಕ । ದಯೆ ಭೂಷಾ । ಭೂ
ಮಾಂಬೆ ಸುತನ । ಹರಣ ಹರ ಸು । ವಿಶೇಷಾ । ಶ್ರೀ
ಅಂಬುಜನಾಭ ಗೋವಿಂದ । ಅಂಬೆಯ ಅಗ್ರಜ ಮುಕುಂದ
ನಂಬೀದವರನು ಕಾವ । ಗುರು ಗೋವಿಂದ ವಿಠಲ ೧

ಆತ್ಮನಿವೇದನೆ

೩೦೦

ಅಭಿಮಾನ ಕಳೆವಂಥ । ಸುಲಭ ಮಾರ್ಗವನೇ ।
ಪ್ರಭುವೆ ಹರಿ ನಿನ್ನ ಸ್ಮೃತಿ । ಸರ್ಬದಲಿ ಈಯೋ ಪ

ಸೃಷ್ಟಿಯಲಿ ತಂದೆನ್ನ । ಇಷ್ಟ ಸಾಧನ ಗೈಯ್ಯೆ
ಕೊಟ್ಟು ಕಾಯವ ಕರ್ಮ । ಸೃಷ್ಟಿ ನಡೆಸುವಲಿ ।
ಇಷ್ಟು ತತ್ವೇಶರನು । ಸುಷ್ಠು ಕರ್ಮವ ನಡೆಸೆ
ಭ್ರಷ್ಟ ಎನ್ನಿಂದೆಂಬ । ಕರ್ತೃತ್ವದಲ್ಲಿರುವಾ ೧

ಅಮಿತ ಜನ ತತ್ವೇಶ । ರಮಿತ ಕರ್ಮವ ಗೈದು
ಪ್ರಮಿತರಾಗಿರಲವರು । ಕರ್ಮ ಫಲಗಳಿಗೇ ।
ಭ್ರಮಿತನಾಗುತ ಸರ್ವ । ಕರ್ಮಫಲ ಭೋಕ್ತೃತ್ವ
ಭ್ರಮವ ಪರಿಹರಿಸಯ್ಯ । ಕರ್ಮ ನಾಮಕನೇ ೨

ತನುನಿಷ್ಠ ತತ್ವೇಶರ । ಗಣಿತದ ಕರ್ಮಗಳ
ತನು ತಮ್ಮ ಇಂದ್ರಿಯದಿ । ಅನುನಯದಿ ಗೈಯ್ಯೋ ।
ಎನ ತನುವು ಇಂದ್ರಿಯವೆ । ಕಾರಣವು ಎಂಬಂಥ
ಹೀನ ಕಾರಕ ಸ್ವಾಮ್ಯ । ಮಾನವೆಂಬಂಥಾ ೩

ಹಲವು ತತ್ವರು ದೇಹ । ದಲಿ ನಿಂತು ಕರ್ಮಗಳ
ಹಲವು ಗೈಯುತ ಹರಿಗೆ । ಒಲಿದು ಅರ್ಪಿಸುತಿರೇ ।
ಫಲವು ಹಂಚಿಪ ಹರಿಯ । ಫಲಸ್ವಾಮ್ಯ ತಿಳಿಯದಿಹ
ತಿಳಿಗೇಡಿ ಯೆನ್ನ ಭ್ರಮ । ಒಲಿದು ನೀ ಕಳೆಯೋ ೪

ಅಹಿಕ ಪಾರತ್ರಿಕವು । ವಿಹಿತ ಸುಖವೆರಡರಲಿ
ಅಹಿಕ ದುಃಖದ ವಿರಲು । ಬಹುದು ಮೋಕ್ಷೆರಿ ಬಾ ।
ಅಹಿತ ಮತಿ ಕಳೆಯುತ । ಶ್ರೀಹರಿಯೆ ನಿನ್ನೊಲಿಮೆ
ಮಹಿತ ಮೋಕ್ಷದವೆಂಬ । ವಿಹಿತ ಮತಿ ಈ ಯೋ ೫

ವಿಷಯದಲಿ ಮೈ ಮರೆತು । ವಿಷಯೋಪ ಭೋಗಗಳೆ
ಅಸಮ ಪುರುಷಾರ್ಥಗಳ । ಲೇಸು ಪ್ರದವೆಂಬಾ ।
ವಿಷಯಾಭಿಮಾನಗಳು । ನಶಿಪಂತೆ ನೀ ಮಾಡಿ
ವಿಷಯಾದಿಗಳಿಗೆಲ್ಲ । ಈಶ ನೀವೆನೆ ತಿಳಿಸೋ ೬

ಕಕ್ಕಸದ ಅಭಿಮಾನ । ಷಟ್ಕಗಳ ನೀ ಕಳೆದು
ಅಕ್ಕರದಿ ತಾಯ್ತನ್ನ । ಮಕ್ಕಳನು ಪೊರೆವಂತೇ ।
ಲೆಕ್ಕಿಸದಲೆನ್ನಯ । ಲಕ್ಷ ಅಪರಾಧಗಳ ಕ್ಷಮಿಸಿ
ಚೊಕ್ಕ ಗುರು ಗೋವಿಂದ । ವಿಠ್ಠಲನೆ ಸಲಹೋ ೭

೩೦೧

ತಂದೆಯಿಂದಲಿ ತಾಯಿ ಗರ್ಭಕೆ ನೂಕಿ
ದ್ವಂದ್ವ ಜನ್ಮಕೆ ಕರ್ತ ಇಂದ್ರ ರಕ್ಷಿಪುದೆಂದೋ ಜನ್ಮದಿಂದ ।
ಇಂದ್ರಾದಿ ಪ್ರಾವರ್ತಕನಿಂದು ಪ್ರಲಯಾದಲ್ಲಿ
ನಂದಕರ ಮುಕ್ತರಿಗೆ ಮಂದಿರವು ಸಿತ ದ್ವೀಪ ಗುರು ಗೋ–
ವಿಂದ ವಿಠಲಾತ್ಮಕ ಸಂಕ್ಷೇಪ್ತ್ಯ ಶರಣು ॥
ಹರಣ ಹೋಗದ ಮುನ್ನ । ಹರಿ ನಿನ್ನ ಹಂಬಲನ್ನ
ಕರುಣಿಸಿ ಕಾವುದೆನ್ನ । ಕರುಣಾನಿಧಿಯೆ ಘನ್ನ
ಸ್ವರ್ಣ ಗರ್ಭನನಯ್ಯ । ಅರ್ಣ ಸಂಪ್ರತಿಪಾದ್ಯ
ಕರ್ಣರಹಿತ ಶಯ್ಯ । ವರ್ಣಿಸೆ ನಿನ್ನನಯ್ಯ
ಮರುತನ ಮತದಲ್ಲಿ । ಕರೆ ತಂದು ಎನ್ನನು
ತರತಮ ಜ್ಞಾನವನ್ನ । ಅರುಹುವುದೊಳಿತಲ್ಲೆ
ಹರಿಯೆ ಸರ್ವೋತ್ತಮ । ಮರುತ ಜೀವೋತ್ತಮ
ಹರ ವೈಷ್ಣವೋತ್ತಮ । ವರ ಜ್ಞಾನ ಪಾಲಿಸಿ
ಪನ್ನಗಾಚಲವಾಸ ಪ್ರ । ಸನ್ನ ರಘನಾಶ
ಘನ್ನ ಗುರು ಗೋವಿಂದ ವಿಠಲಾ ಗೋ ಪ್ರಸನ್ನ ॥

೩೦೨

ಬಂಧಕವಾಗದ ಹಾಂಗೆ । ಕರ್ಮ
ಛಂದಾಗಿ ಮಾಡಿಸೊ ಹರಿಯೆ ಪ

ತನುಕರಣ ಮನ ನಿನ್ನಾಧೀನ । ಈಸು ।
ಜ್ಞಾನವ ಪಾಲೀಸೋ ಪ್ರಾಣ ।

ನಾನನ್ಯ ನಿನಗೆ ಬೇಡೆ ತ್ರಾಣ । ದಾತ ।
ನೀನೆನ್ನ ಸಲಹೊ ಸತ್ರಾಣ ೧

ಸತಿಸುತ ಧನಧಾನ್ಯ ಅಯ್ಯ । ಎನ್ನ ।
ಮತಿ ಭ್ರಮಣೆ ಮಾಡಿದ ಪರಿಯ
ಪ್ರತಿಕ್ರಿಯೆ ನೀನೆಲ್ಲ ತಿಳಿಯ । ಎನ್ನ ।
ಹಿತದಿಂದ ಪಾಲಿಸೋ ಜೀಯಾ ೨

ಸರ್ವ ಕರ್ಮವು ಕ್ರೀಯಗಳಲಿ ।
ಅಲ್ಲಿ ಸರ್ವಸ್ವಾಮ್ಯವು ನಿನ್ನದಿರಲಿ
ಸರ್ವದ ನಾಮ ನಾಲಿಗೆಲಿ । ನಿಂತು ।
ಸರ್ವತ್ರ ಎನ್ನ ಪಾಲಿಸಲಿ ೩

ಕಾರಕ ಕ್ರಿಯ ದ್ರವ್ಯವೆಂಬ । ಭ್ರಮೆ ।
ಮೂರುಗಳನು ಕಳೆಯೆಂಬ
ಸಾರ ಪ್ರಾರ್ಥನೆ ಇದೆಯೆಂಬ । ಎನ್ನ ।
ದೂರ ವಹ್ನಿದು ಮಾಣು ಬಿಂಬ ೪

ತನು ಕರಣ ವಿಷಯಾದಿಗಳು । ಜಡ ।
ಮನದಿಂದಾಗುವ ಹರ್ಷಗಳು
ಅಣು ಜೀವಕ್ಕಾರೋಪಗಳು । ಮಾಡಿ ।
ಜನನ ಮರಣದ ಭವಣೆಗಳು ೫

ಇತ್ತೆ ನೀ ಸ್ವಾತಂತ್ರ ಎನಗೆ ।
ಎಂಬ । ಶಾಸ್ತ್ರದ ಸೊಲ್ಲಿನ ಬಗೆ
ಸುತ್ತು ಹುಟ್ಟುವ ಪರಿಯಾಗೆ । ಕಾಯೊ ।
ಭಕ್ತವತ್ಸಲ ದಯಾವಾಗೆ ೬

ಭರ್ಮ ಗರ್ಭನ ಪಿತ ಹರಿಯೆ । ಕರ್ಮ ।
ಮರ್ಮವ ತಿಳಿಸಲೋ ಧೊರೆಯೆ ।

ನಿರ್ಮಲಾತ್ಮನೆ ಮೊರೆಯಿಡುವೆ । ಎನ್ನ ।
ಕರ್ಮವ ಸುಡುವುದು ಹರಿಯೆ ೭

ಏನೇನು ಮಾಡುವ ಕರ್ಮ । ಗುರು ।
ಪ್ರಾಣಾಂತರ್ಗತಗೀವ ಮರ್ಮ
ಜ್ಞಾನಾನು ಸಂಧಾನ ಪರ್ಮ ।
ಇತ್ತು ನೀನಾಗಿ ಪಾಲಿಸೊ ಧರ್ಮ ೮

ಭಾವ ಕ್ರಿಯ ದ್ರವ್ಯಾದ್ವೈತ । ಮೂರು ।
ಭಾವಗಳಿಂದನುಷ್ಠಾತ
ಶ್ರೀವರ ಎನಿಸೆನ್ನ ತಾತ । ಗುರು ।
ಗೋವಿಂದ ವಿಠಲ ಸುಪ್ರೀತ ೯

೩೦೩

ಹಿಂಡು ಕರ್ಮಗಳ್ಯಾಕೆ । ಬಂಡಿ ದೈವಗಳ್ಯಾಕೆ
ಪಂಡರಿ ದೊರೆಯು ಇರಲು ಪ

ಕಂಡ ಕಂಡವರ ಮನೆ । ಗಂಡಲೆಯುತಲಿ ತನು
ದಿಂಡುಗಳ ಚಾಚುತ್ತಲೀ
ಭಂಡ ತೆರಳೆನುತ ಮುಂ । ಕೊಂಡು ಪೇಳುವ ನುಡಿ
ಗೊಂಡು ಮುಂದಕೆ ತೆರಳುತಾ ।
ಅಂಡಜಾಧಿಪ ವಾಹ । ಪುಂಡರೀಕಾಕ್ಷ ಪದ
ಬಂಡುಣಿಯವೋಲ್ ತುತಿಸಲಿಲ್ಲಾ । ಬಲ್ಲಾ ೧

ನರಜನ್ಮ ನೀನೆತ್ತಿ । ಧರಣಿ ಸುರ ಕುಂದಲ್ಲಿ
ಪರಿಸರನ ಮತವ ಚರಿಸೀ ।
ಅರಿ ಕಂಬು ಗದೆ ಪದ್ಮ । ಧರಿಸಿ ಅಂಗಾಂಗದಲಿ
ಹರಿಯು ಪರನೆಂದೆನ್ನೂತಾ ।

ನರನಂತೆ ನಟಿಸುತಿಹ । ನರನ ಸಾರಥಿ ಕೃಷ್ಣ
ಚರಿತೆಗಳ ಪೊಗಳುತಿರಲೋ । ಕೇಳೋ ೨

ಮಿಂದೊಮ್ಮೆಯಾದರೂ । ಇಂದು ಭಾಗದಿ ಭಕ್ತ
ಸಂದಣೀಯಲಿ ಸೇರುತಾ ।
ತಂದೆ ತಾಯಿಯ ಸೇವೆ । ಮುಂದು ಮಾಡಿದಗೊಲಿದು
ನಿಂದು ಇಟ್ಟಿಗೆ ಮೆಟ್ಟಿಹಾ ।
ನಂದ ನಂದನ ಗುರೂ ಗೋ । ವಿಂದ ವಿಠಲನ
ವಂದಿಸೆಲೊ ಮುದದಿ ಸತತಾ । ವಿತತಾ ೩

೩೦೪

ಹಿತದಿಂದ ಪೊರೆಯೆನ್ನ । ವಿತತ ಮಹಿಮ ಹರಿಯೇ
ಹಿತ ಅಹಿತವೆರಡನ್ನು । ಸಹಿಸುವಂತೇ ಪ

ಅತಿ ದಯಾಪರನೆಂದು । ಖತಿದೂರನೆಂದೆನುತ
ಶ್ರುತಿ ನಿಚಯ ಸಾರುತಿದೆ । ಗತಿ ಪ್ರದನೆ ದೇವಾ ಅ.ಪ.

ವೇದ ವೇದ್ಯನೆ ದೇವ । ಆದ್ಯಂತ ರಹಿತನೇ
ಕಾದುಕೋ ಎನ್ನನು । ಮೋದಗಳನಿತ್ತೂ ॥
ಸಾಧನ ಸುಮಾರ್ಗದಲಿ । ಹಾದಿಯನು ಕಾಣದಲೆ
ಬಾಧೆಗೊಳಗಾಗಿಹನ । ಆದರಿಸು ದಯವನಧೀ ೧

ಪ್ರಾಣಪತಿಯೇ ಎನ್ನ । ಪ್ರಾಣಗಳು ವಶವಿಲ್ಲ
ಧ್ಯಾನ ಮಾಡುವೆನೆನ್ನ । ಮನನಿಲ್ಲದ್ಹರಿಯೇ ॥
ಜ್ಞಾನ ಕರ್ಮೇದ್ರಿಗಳು । ಏನೊಂದು ನಿನ್ನಯಾ
ಧೀನವಿರಲೂ ನಾನು । ಏನು ಮಾಡಲು ಸಾಧ್ಯ ೨

ಗೋವರ್ಧನೋದ್ಧರನೆ । ಗೋವುಗಳ ಪರಿಪಾಲ
ಕಾವ ಕರುಣೀ ನಮ್ಮ । ದೇವರ ದೇವಾ ॥

ಗೋವಿದಾಂಪತಿ ಗುರು । ಗೋವಿಂದ ವಿಠಲನೆ
ನೀವೊಲಿಯದಿನ್ನಾರು । ಕಾವರನು ಕಾಣೆನಯ್ಯಾ ೩

೩೦೫

ಹುಚ್ಚು ಹಿಡಿಯಿತು ಎನಗೆ । ಹುಚ್ಚು ಹಿಡಿಯಿತು ಪ

ಸ್ವಚ್ಛ ಭಾಗವತವ ಕೇಳಿ । ಅಚ್ಯುತನ್ನ ಮಹಿಮೆ ಎಂಬ
ಮೆಚ್ಯಮದ್ದು ಶಿರಕೆ ಏರಿ । ಹುಚ್ಚು ಹಿಡಿಯಿತು ಅ.ಪ.

ಶ್ರವಣ ಸ್ತವನ ಸ್ಮರಣೆ ಸೇವೆ । ಅವನ ಅರ್ಚನೆ ವಂದನೆ ಸಖ್ಯ
ಅವ ದಾಸ್ಯ ಆತ್ಮ ಅರ್ಪಣ । ನವವು ವಿಧದ ಭಕ್ತಿಗಳಿಪ ೧

ಸಪ್ತ ದಿನದ ಕ್ಲುಪ್ತಿಯಿಂದ । ಸರ್ಪಶಯನ ಮಹಿಮೆ ಶ್ರವಣ
ಶೃತಿ ಬಧಿರ ವಾಯ್ತು ಆತ್ಮ । ರಿಕ್ತ ವಿಷಯ ಶ್ರವಣಕೆಲ್ಲ ೨

ಸ್ತವನ ಮಾಳ್ಪ ಶುಕರ ದೇಹ । ಭವಣೆ ಮರೆತು ಕೀರ್ತಿಸಿದರು
ಅವರ ಕಂಡು ಲೋಕವಾರ್ತೆ । ಸ್ತವನ ಗೈವರ ದೂಡುವಂಥ ೩

ಹರಿಯ ಸ್ಮರಿಸಿ ಪ್ರಹಲ್ಲಾದ । ಹರಿಯ ಕಂಡು ಭವವ ಗೆದ್ದ
ಸ್ಮರಿಸಿ ಸ್ಮರಿಸಿ ಅದನ ನಾನು । ನರರ ನಡುವೆ ಮೂಕನಾಗ್ದ ೪

ಪೊತ್ತನೇಕ ರೂಪ ಲಕುಮಿ । ನಿತ್ಯ ಮಾಳ್ಪ ಹರಿಯ ಸೇವೆ
ಅರ್ತುಸಂತರ ಸೇವೆ ವ್ಯತಿ । ರಿಕ್ತಕೆಲ್ಲ ಪ್ರತಿಯ ಭಟಿಪ ೫

ಅಂಬೆ ರಮಣನರ್ಚಿಸೀದ । ಕುಂಬಾರ ಭೀಮನ ಕೇಳಿ ನಾನು
ಅಂಬುಜಾಕ್ಷನರ್ಚನೆಗಲ್ಲದ । ತುಂಬಿದ್ಬೊಭವ ಚೆಲ್ಲುವಂಥ ೬

ಕೃಷ್ಣ ವಂದನ ಅಕ್ರೂರ ಗೈದು । ಸುಷ್ಠು ಹರಿಯ ರೂಪ ಕಂಡ
ಜಿಷ್ಣು ಸಖನ ನಮಿಸದವರ । ಭ್ರಷ್ಟರೆಂದು ಬೈಯ್ಯುವಂಥ ೭

ಹನುಮ ದಾಸ್ಯ ಭಕ್ತಿಗೆಲ್ಲ । ಎಣೆಯ ಕಾಣೆನೆಂದು ಜಗದಿ
ಮನದಿ ನಿತ್ಯ ನೆನೆಯದವರ । ಕ್ಷಣವು ಅವರ ಸಂಗಜರಿವ ೮

ಪಾರ್ಥ ಸಖ್ಯತನದಿ ಪರಮ । ಅರ್ಥ ಪಡೆದುದನ್ನ ಕೇಳಿ
ನಿತ್ಯ ಸಖನ ಮರೆತ ಜನರು । ವ್ಯರ್ಥರೆಂದು ಅರ್ಥಿಲಿ ನಗುವ ೯

ನಿತ್ಯ ತೃಪ್ತ ದಾನ ಬೇಡೆ । ಭೃತ್ಯ ಬಲಿಯು ತನ್ನನಿತ್ತ
ಸತ್ಯ ವಾರ್ತೆ ಕೇಳಿ ಕೇಳಿ । ಪ್ರವೃತ್ತಿ ಗೈದಿನ್ನತ ನೆದಿ ೧೦

ಸ್ವಚ್ಛ ಹರಿಯ ಭಕುತಿ ನವದ । ಹುಚ್ಚು ಬೇಕು ಎಂಬುವಂಥ
ಅಚ್ಯುತನ್ನ ದಾಸ ಗೊಲಿದವ । ನಿಚ್ಚ ಗುರು ಗೋವಿಂದ ವಿಠಲ ೧೧

ಪುರಾಣ

೩೦೬

ಚಿಂತಯಾಮಿ । ರಘುರಾಮಂ । ಸುತ ಕೌಸಲ್ಯೋದರಜಂ ।
ಸಂತತ ಶರಣರ ಕೃಪಾ । ಪಾಂಗವೀಕ್ಷಾ ಹಸಿತಂ ಪ

ಸರಿ ಗ ಸರೀ । ಮಪ ಧಪ ಧಾ ।
ರಿಸ ನಿಧ ನಿಧ । ಪಮ ಗರಿ ಸದ
ದ್ರುತ – ಸರಿಮಾ ಗರಿ । ಮಪ ದಾಪಮ ।
ಪಧಸಾ ನಿಧ । ನಿಧ ಪದಪಧ ॥
ಗರಿ ಸಧ । "ರಿ ಸ ಧಾ ಸ ।
ಧಾ ಗ ರಿ ನಿಧಮ । ಗರಿಸಧ ।

ರಾಗ – ನಾಟಕುರಂಜಿ

ರವಿ ಕುಲಾನ್ವಯತಿಲಕಂ । ಋಷಿ ವಿಶ್ವಾಮಿತ್ರ ಕೃತ
ಹವನ ಹೋಮ, ಬಾಧಾಗ್ರಸ್ತ । ವಿಮೋಚನ, ಶೀಲಂ

ಅವನಿಜೆ ವೈವಾ, ಹಕ್ಕಾನೀತಂ ।
ಲಕ್ಷ್ಮಣ ಸಹ, ವಿಧಿಲಾಗಶಿನಂ ।
ಶಿವಧನುವಂ, ಮುರಿದು ರಾಜ ।
ರುಗಳ ಗರ್ವಹರ । ಶ್ರೀರಾಮಂ ೧

ಚಿಟ್ಟೆಸ್ವರ

ಮಗ ಸಾ ನಿದ । ನಿಸಾ ರಿಗಮ ।
ನಿಧ ಮಾಗರಿ । ಗಮ ಪಗರಿಸ
ದ್ರುತ – ನಿಧನಿಸ ರಿಗಮ ಧನಿಪಧ ।
ನಿಸ ನಿಧ ನಿಸರಿಗ ಮಗಸನಿ ॥
ಗರಿಸಧ, ರಿಸ ಧಾ, ಸ ಧಾಆ, ಗರಿ ॥ ನಿದಮ । ಗರಿಸಧ ॥

ರಾಗ – ಧನ್ಯಾಸಿ :

ಕನ್ಯಾಮಣಿ । ಪಾಣಿಗ್ರಹ । ಅಹಲ್ಯಾ
ಶಾಪಹಂ । ಭಾರ್ಗವನಿಂ । ಪ್ರಕಟೈಕ್ಯ
ಅಯೋಧ್ಯಾ । ಗಮನಂ । ಪಿತೃವಚನ । ಅನುಸರಿಸುತ
ವನಗಮನಂ । ಅನುಜ ಸತಿಸಹ । ವನವಾಸಂ ।
ನಿಶಿಚರ ಹನನ । ಶೂರ್ಪನಖಿ । ನಾಸಭೇದಂ । ಚರಿತಂ ೨

ಚಿಟ್ಟೆಸ್ವರ

ರಾಗ : ಧಾನಿಸಿ : ನಿಸ ಗಾಮ ಪ ।
ಗಮ ಪಾನಿಸ । ರಿಸ ರಿನಿ ಸಪ । ಧಪಗಾರಿಸ
ನೀ ಸ ಗ ಮಪ ಗಾ ಮಪನಿಸ ।
ಪಾ ನಿಸ ಗರಿ ಸನಿಧಪ ನಿಸ
ಗರಿಸಧಾ, ಆರಿಸ ಧಾಸ, ಧಾ, ಗರಿ ನಿಧಮ ಗರಿಸದ ॥

ರಾಗ –

ಮೋಹನ ವಿರಾಧಾದಿ । ಶಾಪ ವಿಮೋಚನ ।

ತರಳೆ ಶಬರಿ ಅನುಗ್ರಹ
ಮರಳಿ ಮಾರೀಚನ ವಂಚನ । ದುರುಳನಿಂ । ಸೀತಾಪಹರಂ
ಶರಧ್ಯೋಲ್ಲಂಘಿಸಿ । ಸೀತಾ ವಾರ್ತಾನೀತರಿ ।
ಹನುಮಂತಾಲಿಂಗನ ಪರ । ಮಾನುಗ್ರಹ ಶೀಲಂ ರಾಮಂ ೩

ಚಿಟ್ಟೆಸ್ವರ

ಗಾ ಪ ಗರಿ, ಗರಿ ಸಧಸರಿ ।
ಗಾಪ ದಸದಪ ಗರಿ ಸರಿ
ಗಪಗಗ, ರಿಸ । ರಿಗ, ರಿರಿಸ ಧ ।
ಸರಿಗರಿ ನಪಗಪ ಧಪಧಸ ।
ಗರಿಸಧಾ, ಆರಿಸ ಧಾ, ಸದಾ, ಗರಿನಿಧಮ, ಗರಿಸದ ॥

ರಾಗ ಪೂರ್ವಕಲ್ಯಾಣಿ :

ಲೇಸು ಕಪಿಗಳ ನಿಚಯ ।
ಸೀತಾಕೃತಿ ಹುಡುಕುತ ।
ಆ ಸಮೀರನು । ವಾರಿಧಿಯನು ।
ಹಾರಿ ಲಂಕೆಯ ಪುರದಲ್ಲಿ
ಅಣುರೂಪದಿ ಹುಡುಕುತ ।
ಸೀತಾಕೃತಿಯ । ಕಂಡನು
ದೇಶ ಪುಚ್ಛಾಗ್ನಿಯಲಿ । ದಹಿಸಿ ಸೀತೆ ।
ವಾರ್ತೆ ಪೇಳಿದನು ೪

ಚಿಟ್ಟೆಸ್ವರ

ಗಾಮಗರಿಸ । ಧ ಸರಿ ಗಮ ।
ಪಾ ಧಪಸ । ನಿಧಪ ಮಗರಿ ।
ಗಮಪ ಮಾಪಗಾ ।
ಮರೀಗ । ಸಾರಿಗಆಮ ಪಧ ಪಸಾ ನಿ ।
ಗರಿಸಧಾ, ಆಸಧಾ ಸಧಾ ಗರಿ ನಿಧ ಮ ಗರಿಸಧ ॥

ರಾಗ : ಮುಖಾರಿ :

ಅನಘ ಹರಿ । ಸಖನೊಡನೆ । ಕಪಿವೆರಸಿ । ಬರುತಿರಲು
ಸೇತು ಬಂಧಿಸಿ । ಹನುಮನೊಡ ವೆರಸಿ । ಅರಿಪುರಸಾರ್ದಂ ।
ಘನ ಸುಯದ್ಧಹಿ । ದಶಶಿರನ ಸಂಹರಿಸುತ । ಸೀತಾ ಕೃತಿ
ನನಿತೆ ಸತಿ ಪರಿವಾರ ಪುಷ್ಪಕವಿ । ಸ್ವಪುರ ಖೊರಟ ೫

ಚಿಟ್ಟೆಸ್ವರ

ಪಾ ಮಗರಿ । ಸಾ ನಿಧ ಸರಿ । ಮಾಗರಿಸ ।
ರಿಮ ಪದ ನಿಧ ಸಾ ಸನಿ ಧಪ ಪಾ ।
ಮಗರಿಸ । ನಿಧಸರಿ ಮಪನಿಧ ಮಪಧಸ ॥
ಗರಿಸಧಾ ಆರಿಸ ಧಾಅಸ । ಧಾಅ ಗರಿ ನಿಧಮ ಗರಿಸಧ ॥

ರಾಗ ಮಧ್ಯಮಾವತಿ :

ಭರತನಿಗೆ । ವಾರ್ತೆ ಕಳುಹಿ । ಸ್ವಪುರ ಸೇರಿ । ಮಾತೆ
ಗೊಂದಿಸಿ ಪುರವಲಂಕೃತ । ಮಂತ್ರಿಯಿಂದ । ಸುರರು ವೇದ । ಪಠಿಸುತಿರೆ
ಪಟ್ಟಾಭಿಷಕ್ತ । ಪುರದಿ ಸಂಭ್ರಮ ।
ದಿಂದ ಜನರು ಶಂಸಿಸೆ ಹನುಮಗ ಸಹ ಭೋಗವಿತ್ತು ।
ಭೂ ಭಾರ ಕಳೆದಖಿರು ಗೋವಿಂದ ವಿಠಲ ೬

ಚಿಟ್ಟೆಸ್ವರ

ರೀ ಮರಿ ಮಪ । ನೀ ಪಮ ಪನಿ ಸಾ ರಿಸನಿ ।
ಪಪ ಮಮರಿ ಸ ॥ ರೀಪಮ ರಿಸನಿಪ ರಿಮಪಾ ॥

ರಾಗ : ಪೂರ್ವಕಲ್ಯಾಣಿ ॥ ಧಪ ಸಾ ನಿಧಪಮ । ಮಪಗರಿ
ರಾಗ : ಮೋಹನ ॥ ಸರಿಮಾ ಗರಿ ಸರಿಗಾ । ಪಗರಿ ಸರಿ
ಪದಸ
ರಾಗ : ಮುಖಾರಿ । ರೀ ಸದಾ ಪದಪ ಗಾರಿ ಸ
ರಾಗ : ನಾಟಿಕುರಂಜಿ ॥ ನಿಸ ಮಗ ಧನಿ ಪಧನಿಸ

ರಾಗ : ಸಾವೇರಿ ॥ ಗರಿ ಸದಾ ರಿಸ ಧಾ ಸ । ಧಾ ಗ ರಿ
ನಿದಮ ಗರಿಸದ

೩೦೭

ಶ್ರೀ ಮದ್ಭಾಗವತ

ಚಿಂತಯಾಮಿ । ಶಿರಿಕೃಷ್ಣ । ಸತತ ಸುಗುಣೋ । ಪೇತಂ ಪ

ಸಂತತ ಭಕುತರ ಕೃಪಾ । ಪಾಂಗ ವೀಕ್ಷಾ ಹಸಿತಂ ಅ.ಪ.

ಚಿಟ್ಟೆಸ್ವರ –

ಸರಿ ಗಸರೀ । ಮಪ ದಪ ಧಾ ।
ರಿಸ ನಿಧ ನಿಧ । ಪಮ ಗರಿ ಸಧ ।
ದ್ರುತ :– ಸರಿಮಾ ಗರಿ । ಮಪ ದಾಸಮ ॥
ಪದ ಸಾ ನಿಧ । ನಿಧ ಪಮಪಧ ।
ಗರಿ ಸಧ । ರಿಸ ಧಾ ಸ । ಧಾ ಗರಿ ನಿಧಮ ಗರಿಸಧ ॥

ರಾಗ – ನಾಟಿಕುರಂಜಿ

ನಿಶಿಕರಾನ್ವಯ ತಿಲಕಂ ಸುಶಂಖಾರಿ, ಗದಾದಿಧೃತ ।
ನಿಶಿಯೊಳುದಿತ, ಕಾರಾಗೃಹ । ನಂದ ಗೋಕುಲ,
ಕಾನೀತಂ । ಯಶೋದೆಯ ಶಿಶು, ಮಧುರಾ ನೀತಂ,
ಶಿಶುವಸುಹರ ದುರುಳ ಬಂಧಂ । ವಸುಮತಿಯೆಂ,
ಗಗನಖಾರಿ, ಕಂಸಗರ್ವಹರ, ದುರ್ಗಾಂಬಂ ೧

ರಾಗ – ಚಿಟ್ಟೆಸ್ವರ

ಮಗ ಸಾ ನಿಧ । ನಿ ಸಾ ರಿಗಮ ।
ನಿಧ ಮಾಗರಿ । ಗಮ ಪಗರಿಸ ।

ದ್ರುತ – ನಿಧನಿ ಸ ರಿಗಮನಿ ಧ ನಿಪಧ ।
ನಿಸನಿಧ ನಿಸರಿಗ ಮಗಸ ನಿ ।
ಗರಿ ಸಧಾ, ನಿಸ ಧಾ, ಸ ॥
ಧಾ, ಗರಿ ನಿದಮ ಗರಿಸಧ ॥

ರಾಗ – ಧನ್ಯಾಸಿ

ವಿಗತಾ ಅಸು, ಪಾಲುಣಿಸಿದ, ರಕ್ಕಸಿ, ಪೂಥಣಿಯು
ಮಿಗೆ ಊರ್ವಶಿ ಸುರೆ ಶಾಪಹರಂ । ಶಕಟಾಖ್ಯಾಸುರ
ವಿಗಡ ಪ್ರಾಣಹರ । ಶೀಲಂ ತೃಣ ವತ್ಸಾಹರ । ಬಕ ಧುನಿ ಚಮು
ಮಿಗಿಲಾದವರ ಅಸುಹರಣಂ । ಮಣಿಗೊರಳರ ಶಾಪಹರಂ ।
ಮದ ವಿಭಂಜನ ಕಾಳೀಯನ । ವನ್ಹಿಯ ಪಾನಂ ಚರಿತಂ ೨

ಚಿಟ್ಟೆಸ್ವರ –

ನಿಸ ಗಾ ಮಪ । ಗಮ ಪಾ ನಿಸ ।
ರಿ ಸ ರಿ ನಿ ಸಸ । ಧಪ ಗಾರಿಸ ।
ನೀ ಸಗ ಮಪ ಗಾ ಮಪನಿಸ ।
ಪಾನಿಸ ಗರಿಸನಿ ಧ ಪನಿಸ ।
ಗರಿಸಧ, ಆರಿಸ ಧಾ, ಸ ॥
ಧಾ, ಗರಿ ನಿಧಮ ಗರಿಸಧ ॥

ರಾಗ ಮೋಹನ :

ಹನನ ಅಸುರ । ವಿಷತರು ರೂಪಿ । ಘನ ಧೇನುಕ ಭಂಜನ
ಹನನ ಪ್ರಲಂಬನು ಬಲ ನಿಂ । ಪುನರಪಿ ವನ್ಹಿಯ ಪಾನಂ
ಮುನಿ ಪತ್ನ್ಯಾನೀತಾನ್ನ । ಸುಭೋಜನ ಶೀಲಂ ।
ತೃಣಸಮ ಗಿರಿಧರ ಶಂಖನ । ಮಣಿಹರ ಅರಿಷ್ಟಾ ಅಸುರ ಹರ ೩

ಚಿಟ್ಟೆಸ್ವರ

ಗಾ ಅಪ ಗರಿ, ಗರಿ ಸಧ ಸರಿ ।

ಗಾಪ ಧಸ, ಧಪ ಗರಿ ಸರಿ ।
ಗಪ ಗಗ ರಿಸ, ರಿಗ ರಿರಿಸ ಧ ।
ಸರಿಗರಿ ಗಪಗಪ ಧಪ ಧಸ ।
ಗರಿಸಧ, ಆರಿಸ, ಧಾ ಸ ॥ ಧಾ, ಗರಿ ನಿಧಮ ಗರಿಸಧ ॥

ರಾಗ – ಪೂರ್ವಿಕಲ್ಯಾಣಿ

ಕೇಶಿ ಅಸುರನ ಅಂತೆ ವ್ಯೋಮಾಸುರ ಹನನದ
ಕ್ಲೇಶ ವಾರ್ತೆಯ ಕೇಳಿ ಕಂಸನು ದಾನಪತಿಯನು
ಯಶೋದೆ ಕಂದನ ಕರೆಯೆ ಅಜ್ಞಾಪಿಸಿದ ಬಿಲ್ಲು ಹಬ್ಬಕೆ
ಲೇಸೆನುತ ಬರವಾಯ್ತು ಸಖ ಅಕ್ರೂರ ಗೋಕುಲಕೆ ೪

ಚಿಟ್ಟೆಸ್ವರ –

ಗಾ ಮಗರಿಸ । ಧಸ ಅರಿ ಗಮ ।
ಪಾಧಪಸ । ನಿಧಪಮಗರಿ
ಗಮಪ ಮಾಪ, ಗಾಮರೀಗ,
ಸಾರಿಗಾ ಮ, ಪದ ಪ, ಸಾನಿ ॥
ಗರಿ ಸಧಾ, ರಿ ಸಧಾ ಸದಾ ಗರಿ ನಿಧಮ, ಗರಿ ಸಧ ॥

ರಾಗ – ಮುಖಾರಿ

ಅನಘ ಹರಿ ಸಖನೊಡನೆ । ರಥವೇರಿ ಬರುತಿರಲು
ಯಮುನೆಯಲ್ಲಿ । ದಾನ ಪತಿ । ಸ್ನಾನದಲಿ ಹರಿ ವೀಕ್ಷಣಂ
ಮನ ಕಲಕಿ ಹರಿ ಮಹಿಮೆ ಆಶ್ಚರ್ಯದಿ ಮಧುರೆ ಸೇರಿ
ವನದಿ ಪರಿವಾರ ನಿಲೆ ಬಲ ಸಹಿತ ಪುರಖೊರಟ ೫

ಚಿಟ್ಟೆಸ್ವರ

ಪಾ ಮಗರಿ । ಸಾ ನಿಧ ಸರಿ ।
ಮಾ ಗರಿಸ । ರಿಮ ಪಮನಿಧ ।
ಸಾ ಸನಿ ಧಪ ಪಾ ಮಗರಿಸ ।

ನಿಧ ಸರಿ ಮಪನಿಧ ಮಪಧಸ ।
ಗರಿ ಸಧ ಆರಿ ಸ ಧಾ ಸ ॥ ಧಾ ಗರಿ ನಿಧಮ, ಗರಿಸಧ ॥

ರಾಗ : ಮಧ್ಯಮಾವತಿ

ರಜಕನಸು । ನೀಗಿ ಹರಿಯು । ಸ್ರಜ ನಿರ್ಮಾತ್ಯಗೊಲಿದು ಮುಂದೆ ।
ಕುಬ್ಜೆವಕ್ರ । ತಿದ್ದಿ ಧನುವ । ಮುರಿದು, ಆನೆ । ಬರಲದರ । ಜಜ್ಜಿ ಹುಲ್ಲು ।
ಹನನ ಮಲ್ಲರ । ಕೊಂದು ಕಂಸನುಗ್ರಸೇನ । ನಿಜ ಪಟ್ಟಾಭಿಷಕ್ತ ಧರಣಿ ।
ಭಾರ ಕಳೆದ ಗುರು ಗೋವಿಂದ ವಿಠಲ ೬

ಚಿಟ್ಟೆಸ್ವರ

ರೀ, ಮರಿ ಮಪ । ನೀ ಪಮ ಪನಿ ।
ಸಾರಿಸನಿ । ಪಪ ಮಮ ರಿಸ ।
ರೀ ಪಮ ರಿಸ ನಿಸ ರಿಮಪಾ ॥

ರಾಗ : ಪೂರ್ವಿಕಲ್ಯಾಣಿ : ಧಪಸಾ ನಿಧಪಮ । ಪಮಗರಿ

ರಾಗ : ಮೋಹನ : ಸರಿಮಾ ಗರಿ ಸರಿಗಾ । ದಪಗರಿ ಸರಿ
ಗಪದಸ

ರಾಗ : ಮುಖಾರಿ : ರೀ ಸದಾ ಪ ದಪ ಗಾರಿಸ ।

ರಾಗ : ನಾಟಿ ಕುರಂಜಿ : ನಿಸ ಮಗ ಮನಿ ಧನಿ ಪದನಿಸ ।

ರಾಗ : ಸಾವೇರಿ : ಗರಿ ಸಧಾ ರಿಸ ಧಾ ಸ ॥ ಧಾ ಗರಿ
ನಿದಮ ಗರಿ ಸಧ

೩೦೮

ಚಿಂತಿಸೋ ಭಾರತವ ನೀ ಚಿಂತಿಸೊ ಪ.

ಚಿಂತಿಸೊ ಭಾರತ ಮಹಿಮಾ । ಸಿರಿ
ಕಾಂತನೆ ಉತ್ತಮೋತ್ತಮಾ । ಆಹ

ಪಂಕ್ತಿಪಂಕ್ತಿಯೊಳಂತೆ । ಚಿಂತಿತ ಫಲದನ
ಸಂಗ್ತಿ ಪೇಳುವ ಶ್ರುತಿ । ಅರ್ಥ ಭೋಧಿಪುದೆಂದು ಅ.ಪ.

ವಾಸುದೇವನ ಬಹು ಮಹಿಮಾ । ನಿರ್ಣ
ಯಿಸಲು ಕಥೆಗಳ ಸ್ತೋಮಾ । ಜರಾ
ಕೂಸಿನ್ನ ವಧಿಸಲು ನೇಮಾ । ವನ
ವಾಸುವು ಯುದ್ಧದ ಸ್ತೋಮ । ಆಹ
ದೇಶ ದೇಶವು ಮಿಳಿತು । ವಾಸರಪ್ಟಾದಶ
ಲೇಸು ಕಾಳಗ ಸರ್ವ । ಧೀಶನ ಮಹಿಮೆಯ ೧

ಅಧಿಭೂತ ಅಧ್ಯಾತ್ಮ ಉಂಟು । ಮತ್ತೆ
ಅಧಿದೈವವೆಂಬುದು ಉಂಟು । ಕೇಳು
ವಿದಿತವಾಗುವುದಲ್ಲ ಗಂಟು । ಗುರು
ಮುದದಿಂದ ಬಿಡಿಸಲೀ । ಗಂಟು । ಆಹ
ಅದುಭುತಾರ್ಥಗಳೆಲ್ಲ । ವಿದಿತವಾಗುತ ಹರಿ
ಹೃದಯಾಂತರಂಗನ । ನಿಧಿಧ್ಯಾಸನಕ್ಕವಕಾಶ ೨

ಮೂರ್ಬಗೆ ಭಾಷೆಗಳಲ್ಲಿ । ಉಕ್ತ
ಸಾರ ಪ್ರಮೆಯಂಗಳಲ್ಲಿ । ಹರಿ ಉ–
ದಾರ ಗುಣಂಗಳು ಅಲ್ಲಿ । ಉಕ್ತ
ಮೀರದೆ ಸ್ಪಷ್ಟತ್ವದಲ್ಲಿ । ಆಹ
ನೇರವಾಗಿಯೆ ಪೇಳ್ದ । ಕಾರಣ ಕರೆವರು
ಮೂರರೊಳ ಗೊಂದು । ಸಾರಸಮಾಧ್ಯೆಂದು ೩

ದರ್ಶನಾಂತರ ಸಿದ್ಧವಾದ । ವೈಷ್ಣವ
ದರ್ಶನ ಪ್ರತ್ಯುಕ್ತವಾದ । ಶೈವ
ದರ್ಶನಾದಿ ಸಿದ್ಧವಾದ । ವಸ್ತು
ದರ್ಶಿತ ಶಿವನರ್ಚಿಸೀದ । ಆಹ ವಿ–
ಮರ್ಶನ ಯೋಗ್ಯ ಸ । ದೃರ್ಶನ ದಿಂದಲಿ
ದರ್ಶನ ಭಾಷೆ ದಿ । ಗ್ದರ್ಶನ ವಿದು ತಿಳಿ ೪

ಶೂಲಾಟ್ಟ ಜನಪದವೆಂಬ । ಶಿವ
ಶೂಲವು ಚತುಷ್ಪಥವೆಂಬ । ಕೇಶ
ಶೂಲಿಗಳ್ಗಮದೇರು ಎಂಬ । ಯುಗ
ಕಲಿಯೊಳಗಿಹರು ಎಂಬೆಂಬ । ಆಹ
ಮೇಲಾದ ಗೂಢಾರ್ಥ । ಜಾಲಗಳೆಲ್ಲವು
ಓಲೈಸು ಗುಹ್ಯದ । ಭಾಷೆ ಎಂದೆನುತಲಿ ೫

ವೇದಾದಿ ಶಾಸ್ತ್ರದೊಳಂತೆ । ಇನ್ನು
ಆದಿಯಲ್ಲಿ ಮಧ್ಯ ಅಂತ । ವಿಷ್ಣು
ಭೋದಿತನಲ್ಲಿ ಸರ್ವತ್ರ । ನೆಂಬು
ಧೋದಿಸಿ ಕೊಂಬನು ಎಂತ । ಆಹ
ಸಾಧಿಸು ಪರಿಚರೇ । ತ್ಯಾದಿ ವಾಕ್ಯಂಗಳ
ಮಾಧವ ಪರ ಪಾಂಡವಾದಿಗಳ್ಗೆಸರೆಂದು ೬

ಸ್ವರವರ್ಣ ವಾಕ್ಯ ಭಾರತ । ಗ್ರಂಥ
ಸರ್ವವು ಮುಖ್ಯ ಪ್ರವೃತ್ತ । ಹರಿ
ಸರ್ವೋತ್ತಮನೆಂಬ ತತ್ವ । ಪೇಳೆ
ಸಿರಿ ವೇದವ್ಯಾಸ ವಿರಚಿತ । ಆಹ
ಪರಮ ಭಕ್ತರು ಪೃಥೆ । ವರ ಉದರೋದ್ಭವ
ಧರ್ಮಾದ್ಯರ ಚರಿತೆ । ಅರುಹುವುದೆನುತಲಿ ೭

ಗುಣಗಳು ಭಕ್ತ್ಯಾದಿ ದಶವು । ಇನ್ನು
ಕರ್ಣದಿಂ ಕೇಳ್ವುದೆಲ್ಲವು । ಹಾಗೆ
ಗುಣಗಳು ಶೀಲ ವಿನಿಯಾವು । ಮತ್ತೆ
ಗುಣಸುವುದು ಮೂರು ವೇದವು । ಆಹ
ಮನು ಪದ ವಾಚ್ಯಗ । ಳೆನಿಸುವುದೀ ಪಂಚ
ಗುಣಧರ್ಮ ವಾಚ್ಯರು । ಪಾಂಡವರೆನಿಪರು ೮

ಅಭಿಮಾನಿ ಧರ್ಮಕ್ಕೆ ಎಂದು । ಮನು
ಅಭಿಧನು ಧರ್ಮಜನೆಂದು । ಇನ್ನು

ಅಭಿಮಾನಿ ಭಕ್ತ್ಯಾದಿಗೆಂದು । ಭೀಮ
ನಭಿಧನಾಗಿಹನವ ಎಂದು । ಆಹ
ಅಭಿಧನರ್ಜುನ ಶ್ರುತ । ಕಭಿಮಾನ ಎನುತಲಿ
ಶುಭ ಶೀಲ ವಿನಯಕ್ಕೆ । ಅಭಿಮಾನಿಯಮಳರು ೯

ಔಪನಿಷದಾದಿ ವೇದ । ಮಾನಿ
ದ್ರೌಪದಿ ಮನುಪದ ಭೋಧ । ಕೇಳು
ಈ ಪರಿ ಪರಲೋಕ ಸದಾ । ಇನ್ನು
ಶ್ರೀ ಪತಿ ಇರುವ ಸರ್ವದಾ । ಆಹಾ
ಈ ಪರಿ ಜ್ಞಾನುಳ್ಳ । ಆ ಪೃಥೆ ಸುತರೆಲ್ಲ
ನೀ ಪರಿಭಾವಿಸು । ಆಸ್ತೀಕರೆನುತಲಿ ೧೦

ದ್ರುಪದಜೆ ಧರ್ಮಾದಿ ಐದು । ಜನ
ಸುಪುಣ್ಯ ಶ್ಲೋಕರ ಕಥೆ ಇದು । ಇನ್ನು
ಉಪರಿಚರಾಭಿಧನೆಂದು । ವಿಷ್ಣು
ಸುಪ್ರತಿಪಾಧ್ಯನು ಎಂದು । ಆಹ
ಇಪ್ಪರಿ ಮಹಿಮೆಯು । ಪೇತವು ಭಾರತ
ಸುಪ್ರತಿಷ್ಠಿತವಿದು । ಅಬ್ಜಜಾಂಡದಲೆಂದು ೧೧

ಭಕ್ತಿವೈರಾಗ್ಯವು ಜ್ಞಾನಾ । ಮತ್ತೆ
ಧೃತಿಯು ಸುಮೇಧಾ ಸುಪ್ರಜ್ಞಾ । ಇನ್ನು
ಸ್ಥಿತಿ ಬಲಯೋಗವು ಪ್ರಾಣಾ । ಭೀಮ
ಹತ್ತು ಗುಣಾತ್ಮಕ ಮಾನಾ । ಆಹ
ಉತ್ತಮ ಗುಣಿಪರ । ನಾತ್ಮನಾ ಅದರಿಂದ
ತತ್ತನು ಎನಿಸೀಹ । ಪೃಥ್ವಿಪ ಭೀಮನು ೧೨

ಸರ್ವ ವಿಧ್ಯಾಭಿಧೆ ದ್ರೌಪದೀ । ಅಂತು
ಕರೆಸಿಹಳವಳೆ ಸರಸ್ವತಿ । ಕಲಿ
ದುರ್ಯೋಧನ್ನ ಜ್ಞಾನ ಮೂರ್ತಿ । ಇನ್ನು
ಅರಿ ದುಶ್ಯಾಸನ್ವಿಪರೀತ ಮೂರ್ತಿ । ಆಹ

ಕರೆಸಿಹ ಶಕುನಿಯು । ಮೂರುತಿ ನಾಸ್ತಿಕ್ಯ
ಸರ್ವದೋಷಾತ್ಮಕ । ರೆನಿಪರಂಧಜರೆಲ್ಲಾ ೧೩

ಹರವನಾತರನು ಎಂದು । ದ್ರೌಣಿ
ಕರೆಸುವನಹಂಕಾರನೆಂದು । ಇನ್ನು
ಕರಣಗಳ್ವಾಣಾದಿ ಎಂದು । ಮತ್ತೆ
ವರ ಸೈನ್ಯ ಪಾಪಗಳೆಂದು । ಆಹ
ಅರಿವುದರ ಪುಣ್ಯ । ಪರವೆಂದು ಪಾಂಡವರ
ಇರುತಿಹ ವಿಷ್ಣುವು । ಅವರ ನಿಯೋಜಕ ೧೪

ಸರ್ವವು ಅಧ್ಯಾತ್ಮನಿಷ್ಟ । ಗ್ರಂಥ
ದುರ್ವಿಜ್ಞೇಯ ಸರ್ವಗ್ಗ ಎನುತ । ವ್ಯಾಸ
ಸರ್ವಜ್ಞ ತಾನೆಲ್ಲ ಜ್ಞಾತ । ನಿಹ
ಪೂರ್ವ ಮಾರುತ ಹರಿದೂತ । ಆಹ
ಅರಿವ ಗುರು ಗೋವಿಂದ । ವಿಠಲಾನುಗ್ರಹದಿಂದ
ಮರುತಾನುಗ್ರಹದಿಂದ । ಅರಿವರು ಇತರರು ೧೫

೩೦೯

ಪುಟ್ಟಿದನು ಜಗದೀಶ । ಜಗಭಾರ ನೀಗಲು
ವೃಷ್ಣಿಕುಲದಲಿ ಈಶ । ದೇವಕಿಯ ಜಠರದಿ
ಕೊಟ್ಟು ಅವಳಿಗೆ ಹರ್ಷ । ಕರುಣಾಬ್ಧಿ ಭೇಶ ಪ

ಅಟ್ಟಹಾಸದಿ ದೇವದುಂದುಭಿ ।
ಶ್ರೇಷ್ಠವಾದ್ಯಗಳೆಲ್ಲ ಮೊಳಗಲು
ಅಷ್ಟಮಿಯ ದಿನದಲ್ಲಿ ಬಲು ಉ ।
ತ್ಕೃಷ್ಟದಲ್ಲಿರೆ ಗ್ರಹಗಳೆಲ್ಲವು ಅ.ಪ.

ಶಂಖಚಕ್ರವ ಧರಿಸಿ । ಅಭಯ ಪ್ರದಾತನು
ಸೊಕ್ಕಿದವರನು ಅರಸಿ । ನಿಗ್ರಹಿಸಲೋಸುಗ

ಅಕ್ಕರದ ಮನವೆರಸೀ । ನರಮೃಗನ ಪರಿ ದೇ-
ವಕ್ಕಿಯಲಿ ಉದ್ಭವಿಸೀ । ಸಜ್ಜನರ ಹರ್ಷಿಸಿ ॥
ವಕ್ರಮನದವನಾದ ಕಂಸನು । ಕಕ್ಕಸವ ಬಡಿಸುವನು ಎನುತಲಿ
ನಕ್ರಹರ ಪ್ರಾರ್ಥಿತನು ದೇ । ವಕ್ಕಿ ವಸುದೇವರಿಂದಲಿ ೧

ದೇವ ಶಿಶುತನ ತಾಳೀ । ನಗುಮೊಗವ ತೋರಲು
ದೇವ ವಾಣಿಯ ಕೇಳೀ । ಅನುಸರಿಸಿ ಆದ ವಸು
ದೇವ ತನಯನ ಕೈಲೀ । ಕೊಂಡಾಗ ಬಂಧನ
ಭಾವ ಕಳಚಿತು ಕೇಳೀ । ಶ್ರೀ ಹರಿಯ ಲೀಲೇ ॥
ಪ್ರಾವಹಿದ ಸರಿದ್ಯಮುನೆ ವೇಗದಿ ।
ಭಾವ ತಿಳಿಯುತ ಮಾರ್ಗವೀಯಲು
ಧೀವರನು ದಾಟುತಲಿ ಶಿಶು ಭಾವದವನನ ಗೋಪಿಗಿತ್ತನು ೨

ನಂದಗೋಪನು ಶಿಶುವ । ತಾ ಕೊಂಡು ಮುದದಲಿ
ಬಂದ ಮಾರ್ಗವ ಹಿಡಿದ । ಮನ ಮಾಡಿ ಮಧುರೆಗೆ
ಬಂದ ತ್ವರ ವಸುದೇವ । ಕಾರಾಗೃಹದ ಕದ
ಬಂಧ ವಾಯಿತು ದೇವ । ಮಾಯಾದಿ ವಿಭವ ॥
ತಂದು ಶಿಶು ಸ್ತ್ರೀಯಾಗಿ ಮಲಗಿರೆ । ಬಂದು ಕಂಸನು ಕೈಲಿ ಕೊಳ್ಳುತ
ಕಂದನಸು ಹರಣಕ್ಕೆ ಯತ್ನಿಸೆ । ಬಾಂದಳಕ್ಕದು ಹಾರಿ ಪೇಳಿತು ೩

ದುರುಳ ಕಂಸನೆ ತಿಳಿಯ । ನಿನ್ಹನನ ಗೈಯ್ಯುವ
ತರಳನುದ್ಭವ ಪರಿಯ । ಬೇರೆಡೆಯಲಿ ಇರುತಿಹ
ಕರಿಯ ವೈರಿಯ ಪರಿಯ । ಕೊಲ್ಲುವನು ನಿನ್ನನು
ಮರೆಯದಿರು ಇರು ಖರೆಯ । ತಿಳಿ ರಕ್ಕಸರ ಅರಿಯ ॥
ಒರೆವುತೀಪರಿ ಶಿಶುವು ಹಾರಲು । ದುರುಳ ಭಯವನೆ ಪೊಂದಿ ತೆರಳುತ
ತರಳರಸುಗಳ ನೀಗ ತನ್ನಯ । ಪರಿಜನಕೆ ಅಜ್ಞಾಪಿಸಿದ ಕಂಸ ೪

ಆರೊಂದನೆಯ ದಿನದಿ । ಗೋಕುಲಕೆ ಬಂದಳು
ಕ್ರೂರಿ ಪೂತಣಿ ವಿಷದಿ । ಪೂರಿತದ ಸ್ತನ ಕೊಡೆ
ಹೀರಿ ಅವಳಸು ಭರದಿ । ಮೂರೊಂದು ಮಾಸಕೆ

ಭಾರಿ ಶಕಟನ ಮುದದಿ । ಒದೆದಳಿದೆ ನಿಜಪದದಿ ॥
ಮಾರಿ ಪೂಥಣಿ ತನುವನಾಶ್ರಿತ । ಊರ್ವಶಿಯ ಶಾಪವನೆ ಕಳೆಯುತ
ಪೋರ ಆಕಳಿಸುತ್ತ ಮಾತೆಗೆ । ತೋರಿದನು ತವ ವಿಶ್ವರೂಪ ೫

ತೃಣನ ವತ್ಸನ ಬಕನ । ತರು ಅರ್ಜುನಾಶ್ರಿತ
ಧುನಿಯು ಚಮು ಅಸುರರನ । ಸಂಹರಿಸಿ ಕೃಷ್ಣನು
ಮಣಿಗ್ರೀವ ಯಮಳರನ । ಮೋಚಿಸುತ ಕಾಳೀ
ಯನ್ಹೆಡೆಯಲಿ ಸುನರ್ತನ । ಗೈದು ಮದ ಭಂಜನ ॥
ಪಾನಗೈಯ್ಯುತ ದಾನ ವಹ್ನಿಯೆ । ಹನನ ವಿಷತರು
ರೂಪಿ ದೈತ್ಯನ ಧೇನುಕಾಸುರ ಮಥನ ಅಂತೆಯೆ ।
ಹನನ ಬಲದಿಂದಾ ಪ್ರಲಂಬನು ೬

ಪುನಹ ವಹ್ನಿಯ ಪಾನ । ಗೈಯುತ್ತ ಹರಿ ಋಷಿ
ಪತ್ನಿಯರು ಕೊಟ್ಟನ್ನ । ಭುಜಿಸುತ ನಗಧೃತ
ತೃಣವ ಪರಿ ಗೋವರ್ಧನ । ಶಂಖ ಚೂಡನ ಶಿರ
ಮಣಿಯು ಬಲು ಅಪಹರಣ । ಅರಿಷ್ಟಾಸುರ ಹನನ ॥
ಹನನಗೈಯ್ಯಲು ಕೇಶಿ ಅಸುರನ । ಘನಸುವ್ಯೋಮಾಸುರನ
ಅಂತೆಯೆ ಮನದಿ ಯೋಚಿಸಿ ಕಂಸ ಕಳುಹಿದ ।
ದಾನ ಪತಿಯನು ಹರಿಯ ಬಳಿಗೆ ೭

ಬಲ್ಲ ಮಹಿಮೆಯ ಹರಿಯ । ಅಕ್ರೂರ ವಂದಿಸಿ
ಬಿಲ್ಲಹಬ್ಬಕೆ ಕರೆಯ । ತಾನೀಯೆ ಕೃಷ್ಣನು
ಎಲ್ಲ ತಿಳಿಯುತ ನೆಲೆಯ । ಪರಿವಾರ ಸಹಿತದಿ
ಚೆಲ್ವ ರಥದಲಿ ಗೆಳೆಯ । ಅಕ್ರೂರ ಬಳಿಯ ॥
ಕುಳ್ಳಿರುತ ಶಿರಿ ಕೃಷ್ಣ ತೆರಳುತ । ಅಲ್ಲಿ ಯಮುನೆಲಿ
ಸ್ನಾನ ವ್ಯಾಜದಿ ಚೆಲ್ವತನ ರೂಪಗಳ ತೋರುತ ।
ಹಲ್ಲೆಗೈದನು ಗೆಳೆಯ ಮನವನು ೮

ಕೊಲ್ಲ ಬಯಸುತ ಇವರ । ಮಾವಟಿಗನಾನೆಯು
ಹಲ್ಲ ತೋರುತ ಬವರ । ಗೈವುದಕೆ ಬರ ಹರಿ

ಹಲ್ಲು ಮುರಿಯುತ ಅದರ । ಸಂಹರಿಸಿ ಬಿಸುಡಲು
ಮಲ್ಲ ಬರೆ ಚಾಣೂರ । ಹೂಡಿದನು ಸಂಗರ ॥
ಚೆಲ್ವ ಕೃಷ್ಣನು ತೋರಿ ವಿಧ್ಯೆಯ । ಮಲ್ಲನನು
ಸಂಹರಿಸುತಿರಲು ಬಲ್ಲಿದನು ಬಲರಾಮ ಮುಷ್ಟಿಕ ।
ಮಲ್ಲನನು ಹುಡಿಗೈದು ಬಿಸುಟನು ೬

ನೆರೆಯ ಸೇನೆಯ ಜಲಧಿ । ಆವರಿಸಿ ಬರುತಿರೆ
ಹರಿಯ ಬಲ ಸಹ ಭರದಿ । ಸಂಹರಿಸಿ ಅವರನು
ಕರಿಯ ವೈರಿಯ ತೆರದಿ । ಹಾರುತಲಿ ಮಂಚಿಕೆ
ಲಿರುವ ಕಂಸನ ಶಿರದಿ । ಪದಮೆಟ್ಟಿ ಶಿಖೆ ಪಿಡದಿ ॥
ಗರುಡನುರಗನ ಪಿಡಿದು ಕೊಲ್ಲುವ । ತೆರದಿ ಕೃಷ್ಣನು
ಪಿಡಿದ ಕಂಸನ ಕರದಿ ಖಡ್ಗದಿ ಶಿರವ ನಿಳುಹಲು ।
ನೆರೆದ ಸುಜನರು ಮೋದಪಟ್ಟರು ೧೦

ಹರನು ಆಗಲು ಮಂದ । ಸುರನಿಕರ ಪೂ ಮಳೆ
ವಿತತ ಭಕ್ತಿಯಲಿಂದ । ಗೈದುಗ್ರಸೇನಗೆ
ಕೃತವು ರಾಜ್ಯವಲಂದ । ಪಟ್ಟಾಭಿಷೇಕವು
ಪಿತನ ಬಂಧದಲಿಂದ । ಮೋಚಿಸಿದ ಕಂದ
ಹಿತ ಗುರು ಗೋವಿಂದ ವಿಠಲನ । ಕ್ಷಿತಿಯ
ಭಾರವನಿಳುಹೆ ಪೀಠಿಕೆ ಪ್ರಥಮ ಸಾಧಿತ ಪಠಿಸೆ ಭಕುತಿಲಿ ।
ಗತಿಯ ನೀಡುತ ಮೋದ ಪಡಿಸುವ ೧೧

೩೧೦

ಸಂಪ್ರದಾಯ

ಏಕಾಂತ ಭಕ್ತ ಪ್ರಿಯ ಜೋಜೋ । ಹರಿಯೇ
ಏಕಮೇವಾದ್ವಿತೀಯ ಜೋಜೋ ಪ

ಮತ್ಸ್ಯಕೂರ್ಮನೆ ಕೋಲ ಜೋಜೋ
ವತ್ಸ ಪರಿಪಾಲ ನೃಹರಿ ಜೋಜೋ ೧

ಕಾಶ್ಯಪಿಯನಳೆದವನೆ ಜೋಜೋ
ಕಾಶ್ಯಪಿಯ ಪ್ರದಾತ ಜೋಜೋ ೨

ದಶಗ್ರೀವ ಸಂಹಾರ ಜೋಜೋ
ಅಸುರ ಪೂಥಣಿ ಹರನೇ ಜೋಜೋ ೩

ತ್ರಿಪುರೆಯರ ವ್ರತಭಂಗ ಜೋಜೋ
ನಿಪುಣ ಹಯವೇರಿದವಗೆ ಜೋಜೋ ೪

ಗುರುರಾಜವರದಾಶ್ವ ಮುಖ ಜೋಜೋ
ಗುರು ಗೋವಿಂದ ವಿಠ್ಠಲನೆ ಜೋಜೋ ೫

೩೧೧

ಸಂಕ್ಷಿಪ್ತ ಸದಾಚಾರ

ಪೂಜಾನುಷ್ಠಾನವ ಯೋಚಿಸಿ ಮನದೊಳು
ಪೂಜೆ ಷೋಡಶಗಳ ಮಾಜದೆ ಮಾಡಿರೋ ಪ

ಉಷಃ ಕಾಲದಲೆದ್ದು । ಋಷಕೇತು ಪಿತ ನಾಮ
ಉಸುರು ತಿಪ್ಪುದೇ ಪೂಜೆಯೋ ೧

ಶೌಚ ಬಾಹ್ಯವು ಮೃತ್ತು ಶೌಚ ಮಾಡಿಕೊಂಡು
ಶುಚಿಷತ್ತು ನಿನ ನಾಮ ಉಚ್ಚರಿಪುದೆ ಪೂಜೆಯೋ ೨

ತುಲಸಿ ಮೃತ್ತಿಕೆ ಹಚ್ಚಿ । ತುಲಸಿ ವಂದನೆ ಮಾಡಿ
ಅಲಸಾದೆ ಕೃಷ್ಣನ ವಲಿಸೂವುದೇ ಪೂಜೆಯೋ ೩

ಗೋವನೆ ಬಳಸುತ್ತ ಗೋಪುಚ್ಛ ಪಿಡಿಯುತ್ತ
ಗೋವ ವಂದಿಪುದೆಲ್ಲ ಗೋಪಾಲ ನಿನ ಪೂಜೆಯೋ ೪

ಸ್ನಾನ ಸಂಧ್ಯಾನ ಮೇಣೂರ್ಧ್ವ ಪುಂಡ್ರವ ಧರಿಸಿ
ಭಾನುಗರ್ಘ್ಯವ ನೀಯೆ ಶ್ರೀನಿವಾಸ ಪೂಜೆಯೋ ೫

ಅಂಭ್ರಣಿ ಸೂಕ್ತದಿಂ ನಿರ್ಮಾಲ್ಯವನೆ ತೆಗೆದು
ಅಂಭ್ರಣಿಪತಿ ಪಾದ ತೀರ್ಥ ಸೇವನೆ ಪೂಜೆಯೋ ೬

ಅಷ್ಟ ಮಹಾಮಂತ್ರ ಶಿಷ್ಟನಾಗುತ ಹೃದಯ
ಅಷ್ಟ ಕಮಲದಲ್ಲಿ ಧ್ಯಾನ ಮಾಳ್ಪುದೆ ಪೂಜೆಯೋ ೭

ಮಂಟಪೋತ್ತಮ ಪೂಜೆ ಸುಷ್ಠು ಕಲಶ ಪೂಜೆ
ಶ್ರೇಷ್ಠ ಪಂಚಾಮೃತ ಪೀಠ ಶಂಖ ಪೂಜೆಯೋ ೮

ಘಂಟನಾದಾ ಅಖಂಡ ಶ್ರೇಷ್ಠ ದೀವಿಗೆ ಪೂಜೆ
ಪೀಠಾವರಣ ಹೃತ್ಪೀಠ ಚಿಂತನೆ ಪೂಜೆಯೋ ೯

ಶಾಂತ ಚಿತ್ತದಿ ಬಾಹ್ಯಾನಂತ ಮೂರ್ತಿಯ ಪರಮ
ಗುರುರ್ವಂತರ್ಗತ ಮೂರ್ತಿ ಗುರುಮೂರ್ತ್ಯೈಕ್ಯವೆ ಪೂಜೆಯೋ ॥

ಚಿಂತಿಸಿ ಸ್ವಾಂತಸ್ಥ ಬಿಂಬನೊಳ್ಳೈಕ್ಯವ
ಚಿಂತಿಸುತ್ತಾನೇಕ ಗೈವ ವೈಭವ ಪೂಜೆಯೋ ೧೧

ಹೃತ್ಪುಂಡರೀಕಗೆ ಕಲ್ಪ ತರುವನೆ ಬೇಡುತ್ತ
ಪ್ರೀತ್ಯಾದ ಮಾನಸ ಪದಾರ್ಥಗಳ ಪೂಜೆಯೋ ೧೨

ಪೂರ್ಣ ಶೃತಿಯ ಭಾವ ಚೆನ್ನಾಗಿ ಗ್ರಹಿಸುತ್ತ
ಪೂರ್ಣನ ಕಳೆಯೊಂದು ಪ್ರತಿಮಾದಲ್ಲಿರಿಸೋ ೧೩

ನಿಷುಸೀದ ಶ್ರುತಿಯಂತೆ ವಸುದೇವ ಕೃಷ್ಣನೆ
ಅಸಮ ಪೂಜಕ ಪೂಜ್ಯ ಅವನೇವೆ ತಿಳಿಯೊ ೧೪

ಬಾಹ್ಯದರ್ಚನೆಗಳು ಶ್ರೀ ಹಸ್ತದಿಂದಲಿ
ವ್ಯಾಹರಣೆಂಬೋದೆ ಹರಿ ಪೂಜೆಯೋ ೧೫

ಆವಾಹನಭಿಷೇಕ ನೈವೇದ್ಯಾದಿ ಪೂಜೆ
ದೇವಗಾರುತಿ ಶಂಖ ಭ್ರಮಣಾದಿ ಪೂಜೆಯೋ ೧೬

ಸರ್ವವನರ್ಪಿಸಿ ಅಸ್ವಾತಂತ್ರ್ಯವ ಗ್ರಹಿಸಿ
ಶರ್ವಾದಿ ವಂದ್ಯ ಬಿಂಬಗೆ ಸರ್ವ ಪೂಜೆಯೋ ೧೭

ಸರ್ವಾಪರಾಧವ ಸರ್ವೇಶನಲಿ ಪೇಳಿ
ವೈಶ್ವ ದೇವಾದಿಗಳ್ ಸತ್ಕರ್ಮಗಳೆ ಪೂಜೆಯೋ ೧೮

ಯತಿಗಳರ್ಚನೆಯನ್ನು ಮತಿಯಿಂದ ಗೈಯುತ್ತ
ಸುತ ವಿಪ್ರಾದಿಯ ಸಹ ಹುತಶೇಷ ಮೆಲ್ಲೋದೆ ಪೂಜೆಯೋ ೧೯

ಪ್ರಾಣಾಗ್ನಿ ಹೋತ್ರಾನು ಸಂಧಾನದಲಿ ಮದ್ದು
ಪ್ರಾಣನ ಪ್ರಾಣ ವೈಶ್ವಾನರಗೀಯೋದೆ ಪೂಜೇ ೨೦

ಅಂತರಂಗದ ಪೂಜೆಗೊಲಿದ ಸಂತತ ಪರಿ
ಕಂತು ಪಿತನು ಗುರು ಗೋವಿಂದ ವಿಠಲಾ ೨೧

೩೧೨

ಲಾಲಿ ಲಯ ಜಲ ಶಯ್ಯ । ಲೋಲ ಕೃಷ್ಣಯ್ಯ
ಲಾಲಿ ವಟದೆಲೆ ಶಾಯಿ । ಹರಿಯೆ ತುರಗಾಯ ಲಾಲೀ ಪ

ಭಕುತ ಜನ ಪರಿಪಾಲ । ರುಕುಮಿಣಿಯ ಲೋಲ
ಯುಕುತಿ ಇಂದ್ರಿಯ ಜಾಲ । ಮೀರಿದನೆ ಕೋಲ

ಪ್ರಖರ ತಿಂಗಳ ಜಾಲ । ಮುರುಳಿಯ ವಿಲೋಲ
ಮಕರ ಕುಂಡಲ ಲೋಲ । ಸಿರಿಕೃಷ್ಣ ಬಾಲ ೧

ಪುಂಡರೀಕನಿಗೊಲಿದ । ಪಾಂಡವರ ಪ್ರೀಯ
ಪಿಂಡಾಂಡದೊಳಗಿರುವ । ಬ್ರಹ್ಮಾಂಡದೊಡೆಯ
ಉಂಡು ಉಟ್ಟದ್ದೆಲ್ಲ ನಿನಗೆಂಬ ಗೆಳೆಯಾ
ಅಂಡಜಾಧಿಪ ತುರಗ । ಪೊರೆವ ಇದು ಖರೆಯ ೨

ಇಂದು ಭಾಗ ನಿವಾಸ । ಮಂದಿ ಜನ ಪೋಷ
ಸಿಂಧೂರ ಗಿರಿವಾಸ । ಅಮಿತ ಶಶಿ ಭಾಸ ।
ಕಂದರ್ಪ ಸಂಕಾಶ । ಕಾಯೊ ಕಮಲೇಶ ।
ಬಿಂಧು ಮಾಧವ ಶ್ರೀಶ ಮುಖ್ಯ ಪ್ರಾಣೇಶ ೩

ಬೆಲ್ಲದಚ್ಚಿನ ಬಿಂಬ । ಗುರು ಹೃದಯಬಿಂಬ
ಎಲ್ಲೆಲ್ಲಿಯೂ ತುಂಬ । ಗುಣ ಮೌಳಿಬಿಂಬ ।
ಮಲ್ಲ ಮರ್ಧನನೆಂಬ । ಸೊಲ್ಲು ಬಾಯ್ತುಂಬ
ಸಲ್ಲಿಪಗೆ ದಯ ತುಂಬ । ಉಣಿಪ ಮದ್ಬಿಂಬ ೪

ಕರಿ ವರದನೇ ಹರಿಯೆ । ಗೋಪಿಯ ಬಾಲ
ಪೊರೆಯೆ ತಾ ತರಳೆಯ । ರುಕ್ಮಿಣಿಯಲೋಲ
ಪರವ ಅಕ್ಷಯ ಹೊಯ್ಯೆ । ಶೀರೆಗಳ ಜಾಲ
ಸುರಿಸಿದನೆ ತಾ ಗುರು । ಗೋವಿಂದ ವಿಠಲ ೫

ಭಜನೆ

೩೧೩

ಶ್ರೀ ರಾಮ ಭಜನೆ

ಆಮ್ನಾಯ ವಿಸ್ತರ । ಭೂಮಾ ಗುಣಾರ್ಣವ
ಶ್ರೀ ಮನ್ನಾರಾಯಣ । ರಾಮ್ ರಾಮ್ ರಾಮ್ ಪ

ಶ್ರೀಶನೇ ವಿಭುದೇಶನೇ ॥
ಅಸುರಿ ವೃಷಹರ । ಶೇಷಾದ್ರಿ ಮಂದಿರ
ಶ್ರೀ ಮನ್ನಾರಾಯಣ । ರಾಮ್ ರಾಮ್ ರಾಮ್ ಅ.ಪ.

ಪೃಥ್ವಿಧರಾಧರ । ಸತ್ಯ ಮನೋಹರ
ಭಕ್ತಾರ್ತಿ ಪರಿಹರ । ರಾಮ್ ರಾಮ್ ರಾಮ್
ನಿತ್ಯನೇ ನಿರ್ಲಿಪ್ತನೇ ॥
ಶಕ್ತ್ಯಾದಿ ರೂಪಧರ । ಆಪ್ತರೊಳಗೆ ವರ
ಭೃತ್ಯರ್ಗ ಭೀಷ್ಟದ । ರಾಮ್ ರಾಮ್ ರಾಮ್ ೧

ದಾನವ ಧ್ವಂಸನೆ । ಆನಂದ ಪೂರ್ಣನೆ
ಆನಂದ ಮುನಿನುತ । ರಾಮ್ ರಾಮ್ ರಾಮ್
ಶ್ರೀ ನಿಧೇ ಕರುಣಾಂಬುಧೇ ॥
ಮಾನುನಿ ವರದನೆ । ಮೌನಿಯ ಕಾಯ್ದನೆ
ಜ್ಞಾನ ಸುಗಮ್ಯನೆ । ರಾಮ್ ರಾಮ್ ರಾಮ್ ೨

ಈಶಾಹಿ ವಂದ್ಯನೆ । ವಾಸಿಷ್ಠ ಕೃಷ್ಣನೆ
ವಸುದೇವ ತನಯನೆ । ರಾಮ್ ರಾಮ್ ರಾಮ್
ಈಶನೇ ವರದೇಶನೇ ॥
ದಶಾಸ್ಯ ಕುಲವನ । ಕೃಶಾನು ಎನಿಪನೆ
ದಾಶರಥಿಯೆ ಪಾಹಿ । ರಾಮ್ ರಾಮ್ ರಾಮ್ ೩

ತ್ರಯೀ ವಿರೋಧಿಯ । ಕಾಯ ವಿಧ್ವಂಸಕ
ಮಾಯಾಪತಿ ಪಾಹಿ । ರಾಮ್ ರಾಮ್ ರಾಮ್
ಆರ್ಯನೆ ಬಹು ವೀರ್ಯನೇ ॥
ಕಾರ್ಯ ಕಾರಣ ವ್ಯಾಪ್ತ । ಸೂರ್ಯ ವೀರ್ಯದಾತ
ಪ್ರೇರ್ಯ ಪ್ರೇರಕ ಪಾಹಿ । ರಾಮ್ ರಾಮ್ ರಾಮ್ ೪

ನೀರದ ನಿಭಕಾಯ । ವಾರಿಜಾಕ್ಷಿಗೆ ಪ್ರಿಯ
ನಾರಿ ಚೋರಾರಿಯೆ । ರಾಮ್ ರಾಮ್ ರಾಮ್

ಧೀರನೆ ಗಂಭೀರನೇ ॥
ಮೂರು ಲೋಕಗಳಲ್ಲಿ । ಆರುಂಟು ನಿನ್ನ ಸರಿ
ಕಾರುಣ್ಯ ಮೂರುತಿ । ರಾಮ್ ರಾಮ್ ರಾಮ್ ೫

ಬಿಂಬರೂಪಿಯೆ ಪ್ರತಿ । ಬಿಂಬರಿಗೆಲ್ಲ ಜೀವ
ಅಂಬಾರಮಣ ಪಾಹಿ । ರಾಮ್ ರಾಮ್ ರಾಮ್
ಕುಂಭಿಣೀ ಪರಿಪಾಲನೇ ॥
ಅಂಭ್ರಣಿ ದೇವಿ ಪತಿ । ನಂಬೀದ ಭಕ್ತರ
ಬೆಂಬಿಡದಲೆ ಕಾವ । ರಾಮ್ ರಾಮ್ ರಾಮ್ ೬

ಜಗ ಪ್ರಾಣನೊಳಗೆ ಇದ್ದು । ಜಗವನ್ನು ಸೃಜಿಸುವಿ
ಜಗದೇಕ ಕಾರಣ । ರಾಮ್ ರಾಮ್ ರಾಮ್
ಪ್ರಾಣನೇ ಜಗತ್ತ್ರಾಣನೇ ॥
ಅಗಜೆ ಪತಿಯೊಳಿದ್ದು । ಜಗವೆಲ್ಲ ಲಯಿಸುವಿ
ಜಗದೇಕ ಕಾರಣ । ರಾಮ್ ರಾಮ್ ರಾಮ್ ೭

ಪ್ರಾಣನೀತಾನುಜ । ಪ್ರಾಣದಾತೃ ಹರಿ
ಪ್ರಾಣಂಗೆ ಪ್ರಾಣನೆ । ರಾಮ್ ರಾಮ್ ರಾಮ್
ಪ್ರಾಣನಾ ಆಲಿಗಂನಾ ॥
ನೀನಾಗಿ ಮಾಡಿ ಅವಗೆ । ಸಾರ್ಷ್ಣಿ ಮುಕ್ತಿಯನಿತ್ತೆ
ಕಾಣೆ ಕಾರುಣ್ಯ ಕೆಣೆ । ರಾಮ್ ರಾಮ್ ರಾಮ್ ೮

ಅಂಜನಿ ಸುತನಾಗಿ । ಕಂಜಸಖನಿಗ್ಹಾರ್ದ
ಸಂಜೀವ ಧರ ಧರ । ರಾಮ್ ರಾಮ್ ರಾಮ್
ದೈತ್ಯನಾ ಪ್ರಭಂಜನಾ ॥
ಸಂಜೆಯ ಚರರನು । ಭಂಜಿಸಿ ಅರ್ಪಿಸಿದ
ಸಂಜೀವರಾಯ ಪಿತ । ರಾಮ್ ರಾಮ್ ರಾಮ್ ೯

ಪದ್ಮಾಕ್ಷಿ ಸೀತೆ ಪತಿ । ಪದ್ಮಾಸನನ ಪಿತ
ಪದ್ಮನಾಭನೆ ಪಾಹಿ । ರಾಮ್ ರಾಮ್ ರಾಮ್

ರುದ್ಧನೇ ಅನಿರುದ್ಧನೇ ॥
ಮುದ್ದಿನ ಮೊಗದವ । ಗೆದ್ದು ಕುಜನ ತತಿ
ಸದ್ಮದೊಳಗೆ ತೋರೊ । ರಾಮ್ ರಾಮ್ ರಾಮ್ ೯

ಇಂದಿರೆ ರಮಣನೆ । ಚಂದಿರ ವದನನೆ
ಮಂದರೋದ್ಧಾರಿಯೆ । ರಾಮ್ ರಾಮ್ ರಾಮ್
ಸುಂದರಾ ಬಹು ಸುಂದರಾ ॥
ಕಂದರ್ಪ ಕೋಟಿ ಬಹು । ಸುಂದರ ಗುರು ಗೋ–
ವಿಂದ ವಿಠಲ ಪಾಹಿ । ರಾಮ್ ರಾಮ್ ರಾಮ್ ೧೦

೩೧೪

ಶ್ರೀಗೋಪಾಲ ಕೃಷ್ಣಾತ್ಮಕ ಶ್ರೀರಾಮ ಭಜನೆ

ರಾಮ ರಾಮ ಜಯರಾಮ ಪರಾತ್ಪರ ।
ನೌಮಿ ಪದಾಂಬುಜ ಶ್ರೀರಾಮ
ಸೋಮ ಕುಲೋದ್ಭವ ಭೂಮ ಗುಣಾರ್ಣವ ।
ಕಾಮ ಪಿತನೆ ಶ್ರೀಕೃಷ್ಣ ೧

ಖೂಳರ ಬಾಧೆಗೆ ಸುಜನರು ಮೊರೆಯಿಡೆ ।
ಪಾಲುಂಬುಧಿ ಶಯ ಶ್ರೀರಾಮ
ಪಾಲಿಪೆನೆಂದ್ವರ ಪಾಲಿಸಿದನು ।
ಪಾಲಾಂಬುಧಿಶಯ ಶ್ರೀಕೃಷ್ಣ ೨

ದಶಮುಖ ದೈತ್ಯನು ಲೋಕವ ಬಾಧಿಸೆ ।
ದಶರಥಗುದಿಸಿದ ಶ್ರೀರಾಮ
ವಸುಧೆಯ ಭಾರವ ನೀಗುವೆನೆಂ ।
ದ್ವಸುದೇವ ಸುತನಾದ ಶ್ರೀಕೃಷ್ಣ ೩

ಅನುಜರು ಲಕ್ಷ್ಮಣ ಭರತ ಶತೃಘ್ನರ ।
ಅನುಮೋದಿಸುತಲಿ ಶ್ರೀರಾಮ
ಅನುಜನು ತಾ ಬಲರಾಮನಿಗಾಗುತ ।
ಅನುಜೆಯಳೊಂದಿಗೆ ಶ್ರೀಕೃಷ್ಣ ೪

ಶಿಶುತನ ಲೀಲೆಯ ದಶರಥಗೇ ।
ಕೌಸಲ್ಯಗೆ ತೋರಿದ ಶ್ರೀರಾಮ
ಶಿಶುತನ ಲೀಲೆ ಯಶೋದೆಗೆ ನಂದೆಗೆ ।
ಸಂತೋಷವು ಶ್ರೀಕೃಷ್ಣ ೫

ಯಾಗವ ರಕ್ಷಿಸೆ ಕರೆದೊಯ್ದನು ।
ಆ ಗಾಧಿಜ ನಿನ್ನನು ಶ್ರೀರಾಮ
ಬಾಗುತ ಬಂದ ಕ್ರೂರನು ಧನು ।
ರ್ಯಾಗಕೆ ಒಯ್ದ ನಿನ್ನ ಶ್ರೀಕೃಷ್ಣ ೬

ಮಾರ್ಗದಿ ಮಂತ್ರಗಳುಸುರಿದ ಮುನಿ ।
ನೈರರ್ಗಳದೀ ಶ್ರೀರಾಮ
ಗರ್ಗಾಚಾರ್ಯನು ಭೋದಿಸೆ ಮಂತ್ರವ ।
ನಿರ್ಗಮಿಸಿದೆಯೋ ಶ್ರೀಕೃಷ್ಣ ೭

ಪ್ರಥಮದಲಾಹುತಿ ಇತ್ತೆಯೊ ಕ್ರತುವಿಗೆ ।
ದಿತಿಜೆಯ ತಾಟಕಿ ಶ್ರೀರಾಮ
ದಿತಿಜೆಯು ಪೂಥಣಿ ಅಸುವನು ಹೀರಿದೆ
ಪ್ರಥಮದಿ । ಕವಳಕೆ ಶ್ರೀಕೃಷ್ಣ ೮

ಅಸುರ ಸುಬಾಹುವನಳಿಯುತಲಬ್ಧಿಗೆ ।
ಎಸೆದೆ ಮಾರೀಚನ ಶ್ರೀರಾಮ ।
ಉಸಿರನು ಹೀರಿದೆ ತೃಣವರ್ತನ ನೀ ।
ಅಸುರ ಶಕಟನ ಅಳಿದೆಯೊ ಶ್ರೀಕೃಷ್ಣ ೯

ತೋರಿದೆ ಕೌಶಲ ವಿಶ್ವಾಮಿತ್ರಗೆ ।
ಚಾರು ಸುಂದರನೇ ಶ್ರೀರಾಮ
ತೋರಿದೆ ವದನದಿ ವಿಶ್ವವ ಮಾತೆಗೆ ।
ಚಾರ್ವಾಂಗನೆ ಶ್ರೀಕೃಷ್ಣ ೧೦

ವರಪದ ಶಿಲೆ ಸೋಕಲಹಲ್ಯಾ ।
ಶಾಪ ವಿಮೋಚನೆ ಶ್ರೀ ರಾಮ
ವರಳೆಳೆಯುವಾಗ ಮಣಿಗ್ರೀವರ ।
ಶಾಪ ವಿಮೋಚನೆ ಶ್ರೀಕೃಷ್ಣ ೧೧

ವ್ಯಾಕುಲರಾಗಿದ್ದಾ ಋಷಿಕುಲ ನಿ ।
ರಾಕುಲರಾದರು ಶ್ರೀರಾಮ
ಗೋಕುಲವೂ ತವ ಲೀಲೆಗಳಿಂ ನಿ ।
ರಾಕುಲ ವಾಯಿತು ಶ್ರೀಕೃಷ್ಣ ೧೨

ವೃಂದಾರಕ ವೃಂದವ ಸಲಹಿದನೂ ।
ಸುಂದರ ಮೂರುತಿ ಶ್ರೀರಾಮ
ವೃಂದಾವನ ವೃಂದವ ಸಲಹೆ ದು ।
ರ್ವೃಂದವನಳಿದನು ಶ್ರೀಕೃಷ್ಣ ೧೩

ಭಾಮಿನಿ ಸೀತೆಯ ಸ್ವಯಂವರ ನೇಮದಿ ।
ಪಾಣಿ ಗ್ರಹಣ ಶ್ರೀರಾಮ
ಭೈಷ್ಮೀ ರುಕ್ಮಿಣಿ ಸ್ವಯಂವರ ನೇಮದಿ ।
ಪಾಣಿ ಗ್ರಹಣ ಶ್ರೀಕೃಷ್ಣ ೧೪

ಭಾರ್ಗವನೂ ತಾ ನೊಂದೆಂಬುದ ನೈ ।
ರರ್ಗಳ ತೋರ್ದನು ಶ್ರೀರಾಮ ।
ವಾಕು ಸಲಿಸೆ ಬಹು ಪತ್ನಿಯರಾಳಿದ ।
ಏಕ ಮೇವ ತಾ ಶ್ರೀಕೃಷ್ಣ ೧೫

ಏಕಮೇವ ತಾನೇಕ ಪತ್ನಿತ್ವವ ।
ಲೋಕಕೆ ತೋರಿದ ಶ್ರೀರಾಮ ।
ವಾಕು ಸಲಿಸೆ ಬಹು ಪತ್ನಿಯರಾಳಿದ ।
ಏಕಮೇವ ತಾ ಶ್ರೀಕೃಷ್ಣ ೧೬

ರಾಜ್ಯವ ಬಿಟ್ಟನ ರಾಜ್ಯವ ಸಾರ್ದ ನಿ ।
ರ್ಲಜ್ಜರ ಸದೆಯಲು ಶ್ರೀರಾಮ
ರಾಜ್ಯವ ಕಟ್ಟಿ ಸ್ವರಾಜ್ಯವ ಮಧುರೆಲಿ ನಿ ।
ರ್ಲಜ್ಜರ ಹನ ಶ್ರೀಕೃಷ್ಣ ೧೭

ಖರದೂಷಣ ಮತ್ತನ್ಯಸುರರ ।
ಮಾರಣ ಮಾಡಿದ ಶ್ರೀರಾಮ
ಖರಕೇಶಿಯು ಬಕ ವತ್ಸಾಸುರ ।
ಧೇನುಕ ಭಂಜನ ಶ್ರೀಕೃಷ್ಣ ೧೮

ದಂಡಕ ವನದಲಿ ಮುಂಡರ ದಂಡಿಸೆ ।
ದಂಡವ ಪಿಡಿದನು ಶ್ರೀರಾಮ ।
ಮಂಡೆಯ ಪಿಡಿದು ಕಂಸನ ಶಿರ ।
ಚೆಂಡಾಡಿದನು ಶ್ರೀಕೃಷ್ಣ ೧೯

ಶಬರಿಯ ಭಕ್ತಿಗೆ ಎಂಜಲ ಮೆ ।
ದ್ದಬುಜಾಂಡೋದರ ಶ್ರೀರಾಮ ।
ಕುಬುಜೆಯ ಭಕ್ತಿಗೆ ವಕ್ರವ ತಿದ್ದಿದ ।
ಅಬುಜಾಂಡೋದರ ಶ್ರೀಕೃಷ್ಣ ೨೦

ಮಾಯಾಮೃಗ ಹಿಂಬಾಲಿಸಿ ।
ಹೇಯನ ಮಾರಣ ಶ್ರೀರಾಮ ।
ದಾಯಿಗ ಪೌಂಡ್ರಕ ಕಾಯ ಭೇದ ಉ ।
ಪಾಯದ ಗೈದೆಯೊ ಶ್ರೀಕೃಷ್ಣ ೨೧

ಪಕ್ಷಿ ಜಟಾಯುವನುದ್ಧರಿಸೀ ತಾ ।
ಮೋಕ್ಷವನಿತ್ತನು ಶ್ರೀರಾಮ
ಪಕ್ಷಿಯು ಗರುಡನ ವಾಹನ ಗೈಯುತ ।
ಮೋಕ್ಷವನಿತ್ತನು ಶ್ರೀಕೃಷ್ಣ ೨೨

ಸೀತೆಯ ಕಳಕೊಂಡ್ವೆಥೆಯನೆ ನಟಿಸಿದ ।
ಪೃಥ್ವೀಪತಿಯು ಶ್ರೀರಾಮ
ಕೌತುಕ ತೋರಿದ ನಾರದಗೇ ಬಹು ।
ಪತ್ನಿಯರಲ್ಲಿ ಶ್ರೀಕೃಷ್ಣ ೨೩

ಅಬುಧಿಯ ಬಂಧಿಸೆ ಸೈನ್ಯವು ಸಾಗಿತು ।
ವಿಭವದ ಲಂಕೆಗೆ ಶ್ರೀರಾಮ ।
ಅಬುದಿಲಿ ದ್ವಾರಕ ರಚಿತವು ಮಾಯಾ ।
ವೈಭವ ಪೊಗಳಿರಿ ಶ್ರೀಕೃಷ್ಣ ೨೪

ಜೋಡಿಸಿ ಬಹು ಸೈನ್ಯವ ಹೂಡಿದ ।
ರಾವಣ ಸಂಗರ ಶ್ರೀರಾಮ
ಜೋಡಿಸಿ ಬಹು ಸೈನ್ಯವ ಜರೆ ಜನು ।
ಹೂಡಿದ ಯುದ್ಧವ ಶ್ರೀಕೃಷ್ಣ ೨೫

ರಾವಣ ಕುಂಬ ಶ್ರೋತ್ರರು ಮಡಿದರು ।
ದೇವ ನೀ ಬಾಣವ ಬಿಡೆ ರಾಮ ।
ತೀವರ ಮುರ ನಬಕರು ಮಡಿದರು ।
ದೇವ ನೀ ಬಾಣವ ಬಿಡೆ ಶ್ರೀಕೃಷ್ಣ ೨೬

ಸೀತೆಯನಗ್ನಿ ನಿವೇಶವ ಗೈಸುತ ।
ಪೂತಳು ಎನಿಸಿದ ಶ್ರೀರಾಮ ।
ಕೌತುಕಳು ವೇದ್ವತಿಯಳ ನೀ ।
ನಾಂತೆಯೊ ಶ್ರೀ ವೆಂಕಟ ಕೃಷ್ಣ ೨೭

ಪ್ರಥಮಾಂಗನು ಮಾರುತನಿಂ ।
ಪೃಥ್ವೀ ಭಾರವನಿಳುಹಿದೆ ರಾಮ ।
ಪ್ರಥಮಾಂಗನು ಭೀಮನಿಂ ।
ಪೃಥ್ವೀ ಭಾರವನಿಳುಹಿದೆ ಕೃಷ್ಣ ೨೮

ಭರತನಿಂ ವಾರ್ತೆಯ ಕಳುಹಿ ।
ಭರತನ ಉಳುಹಿದೆ ಶ್ರೀರಾಮ ।
ಅರದಿ ರವಿ ಮರೆ ಮೌಡುತ ನೀ ।
ನರನನು ಉಳುಹಿದೆ ಶ್ರೀಕೃಷ್ಣ ೨೯

ಸೀತೆಯು ಸಹ ಪುರಿ ಕೋಸಲೆಗೆ ನೀ ।
ಮಾತುಳಹಲು ಬಂದೆ ಶ್ರೀರಾಮ ।
ನೀತರು ನರಕನಿಂದಾ ತರುಣಿಯರ ।
ಪ್ರೀತಿಲಿ ತಂದೆಯೊ ಶ್ರೀಕೃಷ್ಣ ೩೦

ಪಟ್ಟವಗಟ್ಟಲಯೋಧ್ಯಾಪುರಿಲಿ ।
ಶಿಷ್ಟರ ಸರ್ವರ ಮಾಡಿದೆ ರಾಮ
ಪಟ್ಟ ಭದ್ರ ಪ್ರಭು ದ್ವ್ಯಷ್ಟಸಾಸಿರ ಪ ।
ತ್ನ್ಯಷ್ಟರನಾಳಿದೆ ಶ್ರೀಕೃಷ್ಣ ೩೧

ಕುಶಲವರ್ಹ ಸುಳೆಗಳಾ ಮಗೆ ।
ಅಸಮ ಸಾಹಸಿಗಳ್ ಶ್ರೀರಾಮ ।
ಶಿಶುಗಳ್ಕೃಷ್ಣಗೆ ಗಣನೆಗಸಾಧ್ಯವು ।
ಅಸಮ ಸಾಹಸಿಗಳ್ ಶ್ರೀಕೃಷ್ಣ ೩೨

ರಾಜ್ಯ ಸುಭೀಕ್ಷವು ಪತಿವ್ರತೆರೆಲ್ಲರು ।
ವ್ಯಾಜ್ಯ ರಹಿತ ಸ್ವರಾಜ್ಯದಿ ಶ್ರೀರಾಮ
ಪರ್ಜನ್ಯವರ್ಷಿಸಿ ರಾಜ್ಯ ಸುಭಿಕ್ಷವು ।
ಆರ್ಜವರು ಪ್ರಜೆ ರಾಜ್ಯದಿ ಕೃಷ್ಣ ೩೩

ದುಷ್ಟರ ಸಂಹರ ಶಿಷ್ಟರ ಪಾಲನ ।
ಸುಷ್ಟು ಎಸಗಿದ ಶ್ರೀರಾಮ
ದುಷ್ಟ ದುರ್ಯೋಧನ ಭ್ರಷ್ಟರ ಸಂಹರ ।
ಶಿಷ್ಟರ ಪಾಲನ ಶ್ರೀಕೃಷ್ಣ ೩೪

ಭಕ್ತಲಿ ರಾಮನ ಚರಿತೆಯ ಕೇಳಿ ।
ಮುಕ್ತಿದನು ಕೃಷ್ಣಾತ್ಮಕ ರಾಮ
ಭಕ್ತಿಯಿಂದಾಲಿಸೆ ಭಾಗವತಾ ಕಥೆ ।
ಮುಕ್ತಿದನು ಗುರು ಗೋವಿಂದ ವಿಠಲ ೩೫

೩೧೫

ಗೋವಿಂದಾಷ್ಟೋತ್ತರ ನಾಮಾವಳಿ

ಹೃದ್ಗತ ತಮನಾಶ ಗೋವಿಂದ । ಎನ್ನ
ಹೃದ್ಗುಹದೊಳು ತೋರೋ ಗೋವಿಂದ ಪ

ಅಲವ ಮಹಿಮ ಹರಿ ಗೋವಿಂದ । ನಮ್ಮ
ಅಲವ ಬೋದರ ಪ್ರಿಯ ಗೋವಿಂದ ॥
ಆಲಯದೊಳು ನಿಲ್ಲೊ ಗೋವಿಂದ । ಹೃ–
ದಾಲಯದಲಿ ತೋರೊ ಗೋವಿಂದ ೧

ಇಕ್ಷುಚಾಪನ ಪಿತನೆ ಗೋವಿಂದ । ನೀ
ನಿಕ್ಷುಧನ್ವಾರಿ ನುತ ಗೋವಿಂದ ॥
ಈಕ್ಷಿಸೋ ಕರುಣದಿ ಗೋವಿಂದ । ನಿ–
ನ್ನೀಕ್ಷಿಸ ಲೋಶವೇನೊ ಗೋವಿಂದ ೨

ಉರಗ ಶಯನನೆ ಗೋವಿಂದ । ನಮ್ಮ
ಉರಗಾಯಿ ವೈಕುಂಠ ಗೋವಿಂದ ॥

ಊರೂರು ಚರಿಸಿದೆ ಗೋವಿಂದ । ನಿ–
ಮ್ಮೂರಿಗೆ ಕರೆದೊಯ್ಯೊ ಗೋವಿಂದ ೩

ಋಗಾದಿ ತ್ರಯಿಮಯಿ ಗೋವಿಂದ । ಹರಿ
ಋಗ್ವಿನುತನೆ ಗುರು ಗೋವಿಂದ ॥
ಋೂಕ್ಷ ಸದ್ವಿನುತನೆ ಗೋವಿಂದ । ಹರಿ
ಋೂಕಾರ ಪ್ರತಿಪಾದ್ಯ ಗೋವಿಂದ ೪

ಏತತ್ತೆನಿಸಿಯು ಹೃದ್ಗ ಗೋವಿಂದ । ನೀ
ನೇತಕೆ ಕಾಣಿಯಾಗಿಹೆ ಗೋವಿಂದ ॥
ಐತದಾತ್ಮ್ಯಕ ಸರ್ವ ಗೋವಿಂದ । ನೀ
ನೈತರುವುದು ಮನಕೆ ಗೋವಿಂದ ೫

ಓತ ಪ್ರೋತನೆ ಜಗದಿ ಗೋವಿಂದ । ನಿ
ನ್ನೋತತ್ವವನೆ ತಿಳಿಸೊ ಗೋವಿಂದ ॥
ಔತಣಿತ್ತಳೆ ಸತಿ ಗೋವಿಂದ । ನೀ
ನೌತು ಕೊಂಡಿಹದೇಕೊ ಗೋವಿಂದ ೬

ಅಂಗಾಂಗಿ ಭಾವದಿ ಗೋವಿಂದ । ನೀ
ನಂಗಾಂಗದಿ ಕ್ರೀಡಿಪೆ ಗೋವಿಂದ ॥
ಅಹರರ್ಹಮನದಲಿ ಗೋವಿಂದ । ನೀ
ಅಹರಹರ್ವಿಹರಿಸೋ ಗೋವಿಂದ ೭

ಕಪಿಲಾತ್ಮ ಶ್ರೀ ಹರಿ ಗೋವಿಂದ । ನಮ್ಮ
ಕಪಿವರ ಪೂಜ್ಯನೆ ಗೋವಿಂದ ॥
ಖಪತಿಗಮನ ಗುರು ಗೋವಿಂದ । ಜಗ
ಖರ್ಪರ ಸೀಳಿದ ಗೋವಿಂದ ೮

ಗರುಡಧ್ವಜನೆ ಬಾರೋ ಗೋವಿಂದ । ಜಗ
ಗರುವವ ಕಳೆಯೊ ಗೋವಿಂದ ॥

ಘರ್ಮಾಸ ಸಮಂತಾತು ಗೋವಿಂದ । ಸೂಕ್ತ
ಘರ್ಮಕ್ಕೆ ವಿಷಯನೆ ಗೋವಿಂದ ೯

ಓಂಕಾರ ಪ್ರತಿಪಾದ್ಯ ಗೋವಿಂದ । ಪಾ–
ಙ್ತವು ಜಗವೆಲ್ಲ ಗೋವಿಂದ ॥
ಚರ್ಮದೊಳುದ್ಗೀಥ ಗೋವಿಂದ । ಇದ್ದು
ಚರ್ಮ ಲಾವಣ್ಯದ ಗೋವಿಂದ ೧೦

ಛಂದಸ್ಸಿನಿಂಛನ್ನ ಗೋವಿಂದ । ನಾಗಿ
ಛಂದೋಭಿಧನೆನಿಪೆ ಗೋವಿಂದ ॥
ಜಂಗಮ ಚರವ್ಯಾಪ್ತ ಗೋವಿಂದ । ಎಮ್ಮ
ಜಂಗುಳಿಗಳ ಕಳೆಯೊ ಗೋವಿಂದ ೧೧

ಝಷ ರೂಪಿ ಕಮಠನೆ ಗೋವಿಂದ । ನಮ್ಮ
ಝಷ ಕೇತುಪಿತ ಕಾಯೊ ಗೋವಿಂದ ॥
ಜ್ಞಾನ ಜ್ಞೇಯ ಜ್ಞಾತೃ ಗೋವಿಂದ । ಪ್ರ–
ಜ್ಞಾನ ಘನನೆನಿಪೆ ಗೋವಿಂದ ೧೨

ಟಂಕಿ ಎಂಬುವನೆ ಗೋವಿಂದ । ನಮ್ಮಾ
ಟಂಕವ ಕಳೆಯೋ ಗೋವಿಂದ ॥
ಠಕ್ಕು ಠವಳಿಗಾರ ಗೋವಿಂದ । ನಮ್ಮ
ಠಕ್ಕಸಿ ಹಾಕದಿರು ಗೋವಿಂದ ೧೩

ಡರಕೊ ಡಯಾಭಿಧ ಗೋವಿಂದ । ನಮ್ಮೆ
ಡರನು ಪರಿಹರಿಸೊ ಗೋವಿಂದ ॥
ಢಣ ಢಣ ನಾದದಿ ಗೋವಿಂದ । ಬಲು
ಢಣಿರೆಂಬೊ ವಾದ್ಯದಿ ಗೋವಿಂದ ೧೪

ಣನಾಮ ವಾಚ್ಯನೆ ಗೋವಿಂದ । ಪ್ರ–
ಣಮನ ಮಾಡುವೆನೋ ಗೋವಿಂದ ॥

ತರುಣಾರ್ಕ ಪ್ರಭೆಯ ಗೋವಿಂದ । ನಮ್ಮ
ತರುಣಿ ದ್ರೌಪದಿ ವರದ ಗೋವಿಂದ ೧೫

ಥರಥರವರ್ಣನೆ ಗೋವಿಂದ । ಬಲ್ವಮ
ಥನ ಶೀಲನೆ ಗುರು ಗೋವಿಂದ ॥
ದರ ಕಂಬುಧರನೆ ಗೋವಿಂದ । ತ್ರಿ–
ದಶರ ಪರಿಪಾಲ ಗೋವಿಂದ ೧೬

ಧರ್ಮಸು ಗೋಪ್ತನೆ ಗೋವಿಂದ । ಸ–
ದ್ಧರ್ಮ ನಾಮಕ ಗುರು ಗೋವಿಂದ ॥
ನರೆಯಣಾಭಿಧ ಗುರು ಗೋವಿಂದ । ನಮ್ಮ
ನರಸಖನೆನಿಸಿಹೆ ಗೋವಿಂದ ೧೭

ಪರಮ ಪುರುಷ ಗುರು ಗೋವಿಂದ । ಕಾಯೊ
ಪರಮಾನಂದ ಪ್ರದನೆ ಗೋವಿಂದ ॥
ಫಲರೂಪನು ನೀನೆ ಗೋವಿಂದ । ಇದೆ
ಫಲಿತಾರ್ಥವೊ ಗುರು ಗೋವಿಂದ ೧೮

ಬಗೆ ಬಗೆ ಕರ್ಮಗಳ್ ಗೋವಿಂದ । ಮಾಡಿ
ಬಗೆ ಬಗೆ ಲೀಲನೆ ಗೋವಿಂದ ॥
ಭರ್ಗ ರೂಪಿಯೆ ಗುರು ಗೋವಿಂದ । ನಮ್ಮ
ಭರ್ಮ ಗರ್ಭನ ಪಿತ ಗೋವಿಂದ ೧೯

ಮದಜನಕಮಜ್ಜದಿ ಗೋವಿಂದ । ನಮ್ಮ
ಮದನ ಗೋಪಾಲನೆ ಗೋವಿಂದ ॥
ಯಜ್ಞ ಭುಗ್ಯಜ್ಞನೆ ಗೋವಿಂದ । ಮತ್ತೆ
ಯಜ್ಞ ಸಾಧನ ನೀನೇ ಗೋವಿಂದ ೨೦

ರಣದೊಳರ್ಜುನ ಪಾಲ ಗೋವಿಂದ । ಹಗ
ರಣವನೆ ಕಳೆಯೊ ಗೋವಿಂದ ॥

ಲವಕುಶ ಪಿತನೆನಿಪೆ ಗೋವಿಂದ । ನೀನ
ಲವಪೂರ್ಣ ಮಹಿಮ ಗೋವಿಂದ ೨೧

ವರ್ಣಗಳ್ಧ್ವನಿಗಳು ಗೋವಿಂದ । ಸರ್ವ
ವರ್ಣಿಪುದು ನಿನ್ನ ಗೋವಿಂದ ॥
ಶರೊ ಆಭಿಧ ಜೀವನ್ನ ಗೋವಿಂದ । ಮೀಟಿ
ಶರೀರಾಖ್ಯನೆನಿಸುವೆ ಗೋವಿಂದ ೨೨

ಷಡ್ಗುಣ ಪರಿಪೂರ್ಣ ಗೋವಿಂದ । ನೀನೆ
ಷಡ್ಜಾದಿ ಸ್ವರ ವ್ಯಾಪಿ ಗೋವಿಂದ ॥
ಸತ್ತಾದಿ ಪ್ರದ ರೂಪಿ ಗೋವಿಂದ । ನೀನೆ
ಸತ್ತತ್ವ ಪ್ರತಿಪಾದ್ಯ ಗೋವಿಂದ ೨೩

ಹರಿ ಹರಿ ಎಂದರೆ ಗೋವಿಂದ । ಪಾಪ
ಹರಿ ಸೂವಿ ನೀನೇ ಗೋವಿಂದ ॥
ಳಾಳೂಕ ಆಭಿಧ ಗೋವಿಂದ । ಕಾಯೊ
ಳಕಾರ ಪ್ರತಿಪಾದ್ಯ ಗೋವಿಂದ ೨೪

ಕ್ಷಮಿಸೆನ್ನ ಅಪರಾಧ ಗೋವಿಂದ । ಬಲಿ
ಕ್ಷಮೆಯನಳೆದ ಗುರು ಗೋವಿಂದ ॥
ಕ್ಷಮಕ್ಷಾಮಾಭಿಧ ಗುರು ಗೋವಿಂದ । ನೀಲ
ಕ್ಷುಮಿ ಸಹ ನೆಲಸೊ ಗೋವಿಂದ ೨೫

ಜ್ಞಾನಗಮ್ಯನೆ ಗುರು ಗೋವಿಂದ । ತತ್ವ
ಜ್ಞಾನವ ಪಾಲಿಸೋ ಗೋವಿಂದ ॥
ಜ್ಞಾನಿಗೆ ಪ್ರಿಯತಮ ಗೋವಿಂದ । ನಿನಗೆ
ಜ್ಞಾನಿ ಜನರು ಪ್ರಿಯರು ಗೋವಿಂದ ೨೬

ಏಕ ಪಂಚಾಶತು ಗೋವಿಂದ । ವರ್ಣ
ಏಕಾತ್ಮ ಮಾಲೇಯ ಗೋವಿಂದ ॥

ಲೋಕೈಕನಾಥ ಗುರು ಗೋವಿಂದ । ವಿಠಲ
ಸ್ವೀಕರಿಸೆನ್ನ ಕಾಯೋ ಗೋವಿಂದ ೨೭

೩೧೬

ತಾಯಿತಂದೆಯರಿಗೆ ನಮನ (ವಾರ್ಧಕ ಷಟ್ಪದಿ)

ಆನಮಿಪೆ ಮಾತೆ ಪಿತರರ್ಗೆ ಪ

ಆನಮಿಸಿ ಈರ್ವರಿಗೆ । ಜ್ಞಾನ ಸಾಧನ ದೇಹ
ದಾನ ಮಾಡ್ದದಕವರ । ಧೇನಿಸುತ ಪದವನಜ
ಗಾನ ಮಾಡುವೆ ವಂಶದ ಅಕ್ಷೀಣ
ವಾರ್ತೆಗಳ ಕೇಳ ಬಯಸುವರಾಲಿಸಿ ಅ.ಪ.

ವಿಸ್ತರದ ಕೀರ್ತಿಯುತ । ಚಿತ್ತೂರು ಕೃಷ್ಣಾಖ್ಯ
ರಿತ್ತ ಮಹಿ ಶೂರೊಳಗೆ । ನೆಲೆಸುತ್ತ ತಮ ಧರ್ಮ
ಪತ್ನಿಯಲಿ ಚತುರ ಕುವ । ರರ ಪಡೆದು
ಚತುರರರಂಗೆಅಯ್ಯುತಿರೆ ವಿಧಿವಶದಲಿ ।
ಪೆತ್ತ ಪಿತ ಪರಪುರಕಡರೆ ಮಾತೆ ಕಡೆ ಕುವರ
ಗೆತ್ತಣದು ವಿದ್ಯೆ ಎಂ । ದೆನ್ನಿಸದೆ ಸಲಹುತ್ತ
ಉತ್ತಮರು ಬಕ್ಷಿತಿರು । ಮಲರ ವಂಶೋದ್ಭೂತ
ಸುಬ್ಬರಾಯರ ಕುವರಿಯ ೧

ಶಿರಿ ರಂಗನಾಥಾಖ್ಯ । ವರ ಕುವರಗೀಯುತ್ತ
ವರಲಗ್ನ ಜರುಗಿಸಿರೆ । ದಾಂಪತ್ಯ ಸುಖದೊಳಗೆ
ಇರುತಿರಲು ಇಭರಾಮ । ಪುರದ ಮುನಿಸುತರ
ಬರವಾಯ್ತು ಚಿಕ್ಕಮಗಳೂರಿಗೆ ।
ವರಮುನಿಯನುಗ್ರಹದ । ಲೋರ್ವಸುತನುದಯವನೆ
ನೆರೆತಿಳುಪಿ ಪೊರಮಡಲು । ಸತಿಯು ಲಕ್ಷ್ಮೀಬಾಯಿ

ವರ ಕುವರನಂ ಪ್ರಸವಿಸುತ ಪತಿಯೊಡನೆ
ಸಂತಸದಿ ಕಾಲ ಕಳೆಯುತಿರಲು ೨

ನಾರಿಮಣಿ ಮನ್ಮಾತೆ । ಶಿಶುವಲಾಲಿಸುತಿರಲು
ಮೂರೊಂದು ವಯದಲ್ಲಿ । ಪತಿ ವಿಯೋಗವು ಆಯ್ತು
ಮಾರಿ ಕೋಪದ್ರವದಿ । ಮಾರಿ ಕಣಿವೆಲಿ
ಪ್ರಥಮ ಅಪಮೃತ್ಯು ಸಂಭವಿಸಲು ।
ತಾರುಣ್ಯ ಉರುತರ । ವ್ಯಸನದಿಂ ನೂಕುತ್ತ
ಪೋರನಭಿವೃದ್ಧಿಗಿ । ನ್ನೇನುಗತಿ ಎಂದೆನುತ
ನಾರಾಯಣ ಸ್ಮರಣೆ । ಪರಿಪರಿಯಗೈಯ್ಯುತ್ತ
ನಿಟ್ಟುಸಿರ ಬಿಡುತ್ತಿದ್ದಳು ೩

ನಾಲ್ಕಾರು ವರುಷಗಳು । ದಾಯಾದ್ಯರೊಳು ದುಡಿದು
ನಾಲ್ಕೆಂಟು ಕಡುಕ್ರೂರ । ವಾಕ್ಕುಗಳ ಸಹಿಸುತ್ತ
ಪ್ರಾಕ್ಕು ಕರ್ಮದ ಫಲವ । ಮುಕ್ಕಲೇಬೇಕೆಂಬ
ವಾಕ್ಕುಗಳ ಮನ್ನಿಸುತಲಿ ॥
ನೂಕುತಿರೆ ಕೆಲಕಾಲ । ತೋಕಗಾಯ್ತುಪನಯನ
ಕಾಕು ಮಾತುಗಳಾಡಿ । ನೂಕಲೂ ಗೃಹದಿಂದ
ಆ ಕುಮಾರ ಧೃವನ । ನೂಕಿದಾಪರಿಯಾಯ್ತು
ಎಂದೆನುತ ಹೊರ ಹೊರಡಲು ೪

ಧೃವ ವರದ ನಂಘ್ರಿಯನೆ । ಪವಿತರದು ಮನದಿ ಸು–
ಸ್ತುವನಗೈಯ್ಯುತ ಬರಲು । ದಿನದಲ್ಲಿ ಪೊಳಲೊಳಗೆ
ನವರತುನ ಕುಲ ಬಂಧು । ನವವೆರಡು ವಯಸಿನ
ಕುವರನಂ ಮಾತೆಯೊಡನೆ ।
ಸವಿ ನುಡಿಯಲಾದರಿಸಿ । ತವಕದಲಿ ಸಲಹುತಿರೆ
ಧವ ರಹಿತೆ ಮಾತೆ ಮಾ । ಧವನ ಅನವರತ ಸು–
ಸ್ತವನದಲಿ ಭವ ತರಣ । ಧವಣೆಯಲಿ
ಕುವರಂಗೆ ವೈವಾಹ ತಾವಿರಚಿಸಿ ೫

ವ್ರತನೇಮ ಉಪವಾಸ । ವಿತತ ಶಾಸ್ತ್ರ ಶ್ರವಣ
ರತಳಾಗಿ ದೇಹವನೆ । ಅತಿಯಾಗಿ ದಂಡಿಸುತ
ಹಿತದಿ ಪರರುಪಕಾರ । ಅತಿಶಯದಿ ಗೈಯ್ಯುತ್ತ
ತನುಮನವ ಹರಿಗರ್ಪಿಸಿ ।
ಕೃತಕಾರ್ಯ ಸಪ್ತದಶ ಮತ್ತಾರು ವಯದಲ್ಲಿ
ಶೃತಗೈದು ಭಾಗವತ ಸಪ್ತಾಹ ಕ್ರಮದಿ ವಿ-
ಕೃತಿ ವತ್ಸರ ವಸಿತ ದ್ವಿತಿಯ ತೃತಿಯ ತಿಥಿ
ಹರಿ ಸ್ಮೃತಿಲಿತನು ವಪ್ಪಿಸಿದಳು ೬

ನಮೋ ನಮೋ ಜಪತಪಾನುಷ್ಠಾತೆ ವಿಖ್ಯಾತೆ
ನಮೋ ನಮೋ ಶಾಂತಾತ್ಮೆ ಸುದಾಂತೆಯೇ
ನಮೊ ನಮೋ ಪರರಿಗುಪಕಾರಿ ವ್ರತಚಾರಿ
ಹಸಿತೃಷಗಳಂ ಗೆಲ್ದಳೇ ॥
ನಮೊ ನಮೋ ಪತಿವ್ರತೆಯೆ ಹರಿಗುರೂ ಭಕ್ತಿಯುತೆ
ನಮೊ ನಮೋ ಭಾರತೀಶ ಪ್ರಿಯಗಭಿನ್ನಾತ್ಮ
ನಮೊ ಗುರು ಗೋವಿಂದ ವಿಠ್ಠಲನ ದಾಸ
ದಾಸಿಯರಿಗೇ ನಮೊ ಎಂಬೆನು ೭

೩೧೭

ನಮಿಸುವೆನು ಮನ್ಮಾತೆ ಪದಯುಗಳಕೇ ಪ

ಅಮಮ ಎನ್ನಲಿ ನಿಮ್ಮ । ಮಮತೆ ಎಷ್ಟಮ್ಮಾ ಅ.ಪ.

ಮೋದ ಮುನಿಮತ ನಿಷ್ಠೆ । ಆದರದೊಳನುಷ್ಠಾತೆ
ಸಾದರದಿ ಭಾಗವತ । ಮೊದಲಾದ ಶಾಸ್ತ್ರಶೃತೆ
ಖೇದ ಮೋದಾದಿ ಎನೆ । ದ್ವಂದ್ವಗಳ ಸಹಿಷ್ಣುತೆ
ಸಾಧನೋತ್ತಮಗೈದೆ । ಈ ದೇಹ ದಾತೇ ೧

ವಿಷ್ಣು ಪಂಚಕ ದ್ವಯವು । ಕೃಷ್ಣ ದರ್ಶನವಷ್ಟೆ
ಕೃಷ್ಣ ಕಾವೇರ್ಯಾದಿ । ನಿಷ್ಠೆಯಲಿ ಮಜ್ಜನವ ।

ಕೃಷ್ಣ ಸಿರಿ ವೆಂಕಟನ । ಬೆಟ್ಟಕ್ಕ ತ್ರೈಬಾರಿ
ಕಷ್ಟದಲಿ ಸಾಧನ । ಸ । ಹಿಷ್ಣುತೆಯು ಎಷ್ಟಮ್ಮಾ ೨

ಸೇತು ರಾಮೇಶ್ವರದ । ಯಾತ್ರೆಗಳ ಗೈದು ಸ–
ತ್ಪಾತ್ರರನ್ನಾದರಿಸಿ । ಕಾತುರತೆಯಲ್ಲೀ ।
ವಾತಾಂತರಾತ್ಮ ಗುರು । ಗೋವಿಂದ ವಿಠ್ಠಲನ
ಕೀರ್ತನೆಯ ಚತುರೆ ತವ । ಪಾದಕಾ ನಮಿಪೇ ೩

೩೧೮

ಪರಶುರಾಮಗೆ ಪರಮ ಪ್ರೀತ್ಯಾಗಲೀ ಪ

ವರವೆನಿಪ ನರದೇಹದ್ಧವಿಷನರ್ಪಿಸುವೆ ಅ.ಪ.

ಜಪತಪಾನುಷ್ಠಾನ । ಅಪರಿಮಿತಸದ್ಯಾತ್ರೆ
ಉಪಕೃತಿಯು ಪರರಿಗೆ । ಕಪಟ ವಿರಹಿತವೂ ।
ವಿಪುಲದಲಿ ಗೈದು ಸೂ । ಪಕ್ವವಾಗಿರುವಂಥ
ಸುಪವಿತ್ರ ದೇಹವನೆ । ಅರ್ಪಿಸುವೆ ಹರಿಯೇ ೧

ಯಜ್ಞ ಕೃದ್ಯಜ್ಞನೇ । ಯಜ್ಞ ನಾಮಕದೇವ
ಯಜ್ಞ ಸಾಧನ ನೀನೆ । ಯಜ್ಞ ಭೋಕ್ತಾ
ಯಜ್ಞ ಕೃತು ನೀನಾಗಿ । ಯಜ್ಞ ಫಲನೆಂದೆನಿಸಿ
ಯಜ್ಞ ಗೈಸಿದ ಕರ್ಮ । ಪ್ರಾಜ್ಞ ನಿನದೈಯ್ಯಾ ೨

ಶಂಕೆ ಇಲ್ಲದೆ ಭಜಿಸೆ । ಭಾರತೀಶ ಪ್ರಿಯನ
ಅಂಕಿತವ ಗೊಂಡು ನಿ । ಷ್ಪಂಕವೆನಿಸಿದ ದೇಹ ।
ಪಂಕಜ ಭವ ವಂದ್ಯ । ಪರುಶು ರಾಮಾಭಿನ್ನ
ಪಂಕಜಾಕ್ಷ ಗುರು । ಗೋವಿಂದ ವಿಠಲ ಕೊಳ್ಳೋ ೩

೩೧೯

ಕ್ಷೇತ್ರ ದರ್ಶನ

ಉಡುಪಿಯ ಯಾತ್ರೆಯ ಮಾಡಿ – ಉಡುಪಿಯಾ ಪ

ಉಡುಪಿಯ ಯಾತ್ರೆಯನ್ನೆ ಮಾಡಿ । ಭಕ್ತಿ
ಮುಡುಪಿತ್ತು ಪ್ರಮೋದ ಬೇಡಿ । ಆಹ
ನಡುದೇಹ ದೋಳೀಹ । ನಡುನಾಡಿ ಕಮಲದಿ
ಒಡೆಯ ಶ್ರೀ ಕೃಷ್ಣನ್ನ । ಧೃಡ ಭಕ್ತಿಯಿಂ ಭಜಿಸಿ ಅ.ಪ.

ಆನಂದ ತೀರಥ ಸರಸಿ । ಯೊಳು
ಮೀನನಾಗಿ ಬಹು ಈಸಿ । ಹರಿ
ಧ್ಯಾನದಿ ಸ್ನಾನ ಪೊರೈಸಿ । ಮತ್ತೆ
ಮೌನವೆಂಬಾಸನ ಹಾಸಿ । ಆಹ
ಮೂರ್ಧ್ನಿ ಲಲಾಟದೋಳ್ । ಗೋಣು ಮಧ್ಯೋದರ
ಸ್ಥಾನಾದಿಯಲಿ ಹರಿ । ಧ್ಯಾನ ನಾಮವ ಹಚ್ಚಿ ೧

ಮಧ್ವ ಕಿಂಕರನೆಂಬೊ ದೊಂದು । ಹರಿ
ವಿದ್ವೇಷಿಗಳ ಬಡಿವೊದೆಂದು । ಮತ್ತೆ
ಸದ್ವೈಷ್ಣವರ ಸೇವೋದೊಂದು । ಇನ್ನು
ಬುದ್ಧಿಪೂರ್ವಕ ಹರಿ ಪರನೆಂದು । ಆಹ
ಶ್ರದ್ಧಾಳು ವೆಂದೆನಿಪ । ಮುದ್ದು ಮುದ್ರೆಗಳೈದು
ತಿದ್ದಿ ವಿಸ್ತರಿಸೂತ । ಕೃದ್ದೋಲ್ಕಾದಿಯನೆನೆ ೨

ಸಂಧ್ಯಾ ಮೂಡಿಹುದು ನೀ ನೋಡು । ಕಾಲ
ಮುದ್ಧಿಂದಾಗದಲೆ ನೀ ಮಾಡು । ಯಾವ
ದೊಂದು ಮಂತ್ರಾರ್ಥವ ನೋಡು । ಇನ್ನು
ಸಂಧ್ಯಾ ನಾಮಕನ ಕೊಂಡಾಡು । ಆಹ

ಛಂದದಿ ನಿನ ಜ್ಞಾನ । ಮುಂದು ಮುಕ್ಕಿಲು ಒಪ್ಪ
ಮಂದೇಹ ದೈತ್ಯರ । ಮಂದಿಯ ಕೊಲ್ಲುತ ೩

ಕಂಟಕ ಕಳೆದು ಶರೀರ । ಮಧ್ಯ
ಮಂಟಪ ಚಿಂತಿಸೊ ಧೀರ । ಅದಕೆ
ಎಂಟರ್ಧ ಮತ್ತೊಂದು ದ್ವಾರ । ಕಾಯ್ವ
ಭಂಟ ಮಾರುತನ ವ್ಯಾಪಾರ । ಆಹ
ಎಂಟ್‌ಟಾರು ನಾಲ್ಕು ಸ್ತಂಭ ಮಧ್ಯದಿ ಲಕ್ಷ್ಮಿ
ಮಂಟಪ ಚಿಂತಿಸಿ ಒಂಟಿಯಾಗೊ ಮನದಿ ೪

ಕೆಳ ಮುಖಾಬ್ಜವನೇ ನೀ ನೋಡೀ । ಮಂತ್ರ
ಮೂಲದಿಂದ ಮೇಲು ಮಾಡಿ । ಅಲ್ಲಿ
ಇಳೆಯಾಣ್ಮನನ ಚಿಂತೆ ಮಾಡಿ । ಸರ್ವ
ಅಲಂಕಾರ ದಿಂದೊಡಗೂಡೀ । ಆಹ
ನೆಲೆಸೀಹ ಕೃಷ್ಣನ್ನ । ಒಲಿಸೆ ಭಕ್ತಿಯಿಂದ
ಸ್ಥಳ ತನ್ನ ಅರಮನೆ । ಯೊಳು ಕೊಟ್ಟು ಸಲಹುವ ೫

ಕಂಬು ಚಕ್ರ ಗದಧರನ । ಪದ
ನಂಬುತಲರ್ಘ್ಯ ಆಚಮನ । ಸರ್ವ
ಸಂಭ್ರಮದಲಿ ಕೊಟ್ಟು ಅವನ । ಜ್ಞಾನ
ಧಂಬಲಿನೊಳು ನಿತ್ಯ ಸ್ತವನ । ಆಹ
ಇಂಬಿಟ್ಟು ಸ್ತೋತ್ರದಿ । ಉಂಬುಡುವೋ ಸರ್ವ
ಬಿಂಬನೋಳರ್ಪಿಸಿ । ಸಂಭ್ರಮದಲ್ಲಿರು ೬

ಮಧ್ವ ಸರೋವರ ಸ್ನಾನ । ಭಕ್ತಿ
ಶುದ್ಧದಿ ಶ್ರೀಕೃಷ್ಣಧ್ಯಾನ । ಮಾಡೆ
ಹೃದ್ಯನು ಹೃದ್ಯದಿಷ್ಠಾನ । ದಲ್ಲಿ
ಸಿದ್ಧಿಸೂವನು ಗುಣ ಪೂರ್ಣ । ಆಹ
ಮುದ್ದು ಕೃಷ್ಣನು ಗುರು । ಗೋವಿಂದ ವಿಠಲನು
ಶ್ರದ್ಧೆ ಸತ್ವಕ್ಕೊಲಿವ । ಸಿದ್ಧ ಕನಕನ ನೋಡಿ ೭

ತೀರ್ಥ ಕ್ಷೇತ್ರ ಮಾಲಾ

೧೯೫೨ ರಲ್ಲಿ ಇಡೀ ಭರತ ವರ್ಷದಲ್ಲಿ ಪ್ರದಕ್ಷಿಣಾಕಾರವಾಗಿ ಹೊರಟು ಆಸೇತು ಹಿಮಾಚಲ ಪರ್ಯಂತವಿರುವ ಅನಂತ ತೀರ್ಥ ಕ್ಷೇತ್ರಗಳಲ್ಲಿ ಈ ಅಲ್ಪಾಧಿಷ್ಠಾನದ ಯೋಗ್ಯತಾಪ್ರಕಾರ ಬಿಂಬನು ಮಾಡಿ ಮಾಡಿಸಿದ ಯಾತ್ರಾ ಪ್ರಕರಣವೂ, ಮತ್ತೆ, ೧೯೫೪ ರಲ್ಲಿ ಉಡುಪಿ ಇತ್ಯಾದಿ ಪಶ್ಚಿಮ ಕ್ಷೇತಗಳ ಮತ್ತು ೧೯೫೭ ರಲ್ಲಿ ಮಲಖೇಡದಲ್ಲಿ ಬೃಹತೀ ಸಹಸ್ರವಾದಾಗ ಆಕಡೆ ಹೋದಾಗ ನೋಡಿದ ಅನೇಕ ಕ್ಷೇತ್ರಗಳ ಮತ್ತು ೧೯೬೧ ರಲ್ಲಿ ಸ್ವಾದಿ, ದ್ವಾರಕ, ಪುಷ್ಕರ, ಬದರಿ (ದ್ವಿತೀಯಾವರ್ತಿ) ಹೋಗಿ ಬಂದಾಗ ನೋಡಿದ ಯಾತ್ರಾ ಪ್ರಕರಣಗಳ ಜ್ಞಾಪಕಾರ್ಥವಾಗಿ ಈ ತೀರ್ಥಕ್ಷೇತ್ರಮಾಲಾ ಅಸ್ಮದ್ಗುರ್ವಂತರ್ಗತ ಬಿಂಬ ಮೂರುತಿ ಪ್ರೇರಿಸಿದಂತೆ ಬರೆಯಲ್ಪಡುತ್ತೆ :-

೩೨೦

ತೀರ್ಥಗಳ ಯಾತ್ರೆಯ ಮಾಡು – ತೀರ್ಥಗಳ ಪ

ತೀರ್ಥ ಯಾತ್ರೆಗಳನ್ನೆ ಮಾಡು – ಪರ
ಮಾರ್ಥಕ್ಕೆ ಮನವನ್ನೆ ಮಾಡು – ಆಹ
ಕಾರ್ತ ಸ್ವರೇತ್ಯಾದಿ ಅರ್ಥಚಿಂತನೆ ಬಲು
ವ್ಯರ್ಥವೆನುತ ಪರಮಾರ್ಥನ ಚಿಂತಿಸಿ ಅ.ಪ.

ಕಟ್ಟೋ ನೀ ಗಂಟು ಮೂಟೆಗಳ – ಬಲು
ಬಟ್ಟೆ ಸಾಗಲು ಬೇಕೂರುಗಳ – ಅರ
ಳಿಟ್ಟು ಪೃಥುಕು ತಂಡುಲಗಳ – ಯೋಗ್ಯ
ಬಟ್ಟೆ ಬರೆಯು ಪಾತ್ರೆಗಳ – ಆಹ
ವಿಠ್ಠಲನ್ನ ಕಾಂಬ ಶ್ರೇಷ್ಠ ಕರ್ಮದ ಮೂಟೆ
ಕಟ್ಟಿ ಭಕುತಿ ಮುಡುಪಿಟ್ಟು ನಮಿಸುತ ಹರಿಯ ೧

ಸ್ನಾನಾದಿ ಕರ್ಮ ಪೂರೈಸೀ । ಬಲು
ಜ್ಞಾನಿಗಳಿಗೆ ಅಭಿನಮಿಸೀ । ಅವರ

ಆಜ್ಞೆಗಳನ್ನು ಸ್ವೀಕರಿಸೀ । ಮತ್ತೆ
ಜ್ಞಾನಿ ಸತ್ಪಾತ್ರರ ವೆರಸೀ । ಆಹ
ಸಾನುರಾಗದಿ ನಿತ್ಯ ಕರ್ಮಾನುಷ್ಠಾನದಿ
ಗಾನಲೋಲನ ಪಾಡಿ ಆನಮಿಸುತ ಮುಂದೆ ೨

ಡಿಂಗರಿಗಭಿಮತಗರೆವಾ – ಸಿರಿ
ರಂಗ ಪಟ್ಟಣ ದೊಳು ಮೆರೆವಾ । ಸಿರಿ
ರಂಗ ಪಾದಾಬ್ಜವ ತೊಳೆವಾ । ದಕ್ಷ
ಗಂಗೆಂದು ಪ್ರಸಿದ್ಧಿ ಇರುವಾ । ಆಹ
ಮಂಗಳ ಕಾವೇರೀಲ್ಯಂಗ ಮಜ್ಜನದಿಂದ
ಅಘಂಗಳ ಕಳೆದು ಸತ್ಸಂಗದಿ ಸಾಗುತ ೩

ಸರಿತ್ಕಣ್ವ ತಟದಲಿ ಮೆರೆವಾ । ಇನ್ನು
ವರ ರವಿ ಕ್ಷೇತ್ರವೆನಿಸಿರುವಾ । ಅಲ್ಲಿ
ವರ ಬೃಂದಾವನದೊಳು ಇರುವ । ಭಾ
ಸ್ಕರ ಬ್ರಹ್ಮಣ್ಯತಿ ಪದಯುಗವ । ಆಹ
ಸ್ಮರಿಸುತ ನಮಿಸುತ ವರ ಅಪ್ರಮೇಯನ
ಚರಣಾರವಿಂದಕೆ ಎರಗಿ ಚರಿಸು ಮುಂದೆ ೪

ಪಾವನವೂ ಕ್ಷೇತ್ರವರ್ಗಾ । ದೊಳು
ದೇವರಾಯನ ನಾಮ ದುರ್ಗಾ । ದಲ್ಲಿ
ದೂರ್ವಾಸ ರೂಪ । ಪೂಜಿತ ಭರ್ಗಾ
ಆವ ನರಹರಿ ಈವ ಸ್ವರ್ಗ । ಆಹ
ಆವಾತ ಬಂದಿಲ್ಲಿ । ಭಾವಭಕುತಿಯಲ್ಲಿ
ಭಾವುಕನಾಗುತ್ತ । ಸೇವಿಸೆ ವಲಿವಂಥ ೫

ದ್ವಯ ರೂಪಿ ಯೋಗಭೋಗಾನು । ಭಕ್ತಾ
ಭಯದನು ಎನಿಸುತ್ತಲವನು । ಬಂದ
ಭಯ ಪರಿಹರಿಸೂವ ತಾನು । ತನ್ನ
ಪ್ರಿಯನು ಪ್ರಹ್ಲಾದ ಪೋಷಕನು । ಆಹ

ಲಯ ವಿವರ್ಜಿತ ತನ್ನ । ಶಯ್ಯನಿಂ ಸುಸೇವ್ಯ
ತ್ರಯ್ಯಗೋಚರ ಲಕ್ಷ್ಮೀ । ಸಹಿತಾಗಿ ಕುಳಿತೀಹ ೬

ಶಿವ ಮೊಖದಲಿ ಬಂದು ತುಂಗ । ಮಿಂದು
ಶಿವ ಜಲದಲಿ ಪಾಪ ಭಂಗ । ಗೈದು
ಶಿವಬಿಂಬ ಕೂಡ್ಲಿ ನರಸಿಂಗ । ಮತ್ತೆ
ಶಿವನಂಶ ಜಾತ್ಯತಿಪುಂಗ । ಆಹ
ಆ ವೆಂಕಟನ ಪಿಳ್ಳಂಗೆ । ರೆಯೊಳು ನಮಿಸುತ್ತ
ಭವಭಯ ಹರನೆಂದು । ಸ್ತವನದಿ ಮಂಬರಿಯೊ ೭

ಶ್ರೀಪತಿ ದ್ವಾರಕೆಯಿಂದ । ಬಂದು
ಗೋಪಿಚಂದನದುಂಡೆಯಿಂದ । ಬಂದು
ಸ್ಥಾಪಿತ ಮಧ್ವಾರ್ಯರಿಂದ । ತೀರ
ಆ ಪಶ್ಚಿಮ ತಟವನಧಿ ಛಂದ । ಆಹ
ನಾ ಪೇಳಲಳವಲ್ಲ । ಗೋಪಾಲ ಮಹಿಮೆಯ
ವ್ಯಾಪಾರವದ್ಭುತ । ಅಪ್ರಮೇಯನು ಕೃಷ್ಣ ೮

ಶುದ್ಧ ಪಾಜಕ ಕ್ಷೇತ್ರ ನೋಡು । ಅಲ್ಲಿ
ಮಧ್ವರುದಯವ ಕೊಂಡಾಡು । ಸ್ನಾನ
ಶುದ್ಧದಂಡೋದಕದಿ ಮಾಡು । ಗಿರಿ
ಊರ್ಧ್ವಗಾಮಿ ದುರ್ಗ ನೋಡು । ಆಹ
ಮಧ್ವ ಸರಸಿ ಮತ್ತೆ । ಅಬ್ಧಿಯ ಮೀಯುತ್ತ
ಉದ್ಧೃತನಾಗು ಶ್ರೀ । ಮಧ್ವೇಶನ ನಮಿಸಿ ೯

ಅಂಬುಜಾಕ್ಷನು ಶಾಲಿಗ್ರಾಮ । ಶಿಲೆಯ
ಲ್ಲಿಂಬಿಟ್ಟು ಗೈದನು ಧಾಮ । ಸ್ತ್ರೀ
ಪುಂ ಭೇದದಲಿರುವ ಸುನೇಮ । ಮೂಕ
ಅಂಬಿಕೆಯೆನುತಲಿ ನಾಮ । ಆಹ
ಅಂಭ್ರಣಿ ಪತಿ ತನ್ನ ನಂಬಿದ ಮುನಿ ಕೋಲ
ನ್ನಂಬಲ ಸಲಿಸೀದ ಪೊಂಬಸಿರ ವಂದ್ಯನ ೧೦

ಯಾಕೆ ಯೋಚಿಸುತಿದ್ದಿ ಭಾಳಾ । ನಿನ್ನ
ಪ್ರಾಕ್ಕು ಕರ್ಮಹ ಪಡುಗಡಲ । ಮಿಂದು
ಗೋಕರ್ಣಾಕೃತಿ ಪುರ ಪೊಳಲಾ । ಸೇರಿ
ಗೋಕರ್ಣೇಶನ ನಮಿಸು ಬಾಲಾ । ಆಹ
ಜೋಕೆಯಿಂ ಮನೋ । ಪ್ರೇರಕನೆನಿಪನು
ತೋಕನ ಭಿನ್ನಪ । ವಾಕನ್ನು ಮನ್ನಿಪ ೧೧

ಸ್ವಾದಿ ಪುರದಿ ಧವಳಗಂಗಾ । ಮಿಂದು
ವಾದಿರಾಜರ ಪಾದ ಭೃಂಗ । ನಾಗಿ
ವೇದಕದ್ದನ ಬಲು ಭಂಗ । ಗೈದ
ಆದಿ ಹಯಮೊಗನ ಚಿದಂಗ । ಆಹ
ಮೋದದಿಂ ನಮಿಪರ ಸಾಧನ ಮುಕ್ತಿಗೆ
ಶ್ರೀದನು ಕೃಪೆಗೈವ ಸಾದರದಲಿ ಕೇಳೋ ೧೨

ಅಣ್ಣಯ್ಯ ಸಾಗೆಲೊ ದಾರಿ । ಮಲೆ
ಚೆನ್ನೂರು ಪುರಕಾಗಿ ಜಾರಿ । ಸನಿಯ
ಚೆನ್ನ ಹೆಳವನಕಟ್ಟೆ ಸಾರಿ । ಸುಸಂ
ಪನ್ನ ರಂಗನ ಪಾದ ಭೂರಿ । ಆಹ
ನನ್ನೆಯಿಂ ನಮಿಸುತ್ತ ಪನ್ನಂಗ ಶಯನನ
ಹೆಣ್ಣು ಗಿರಿಯಮ್ಮನ ನೆನೆದು ಸಾಗೆಲೊ ಮುಂದೆ ೧೩

ಅಂಗ ಮಜ್ಜನಗೈಯ್ಯೋ ಜಾಣ । ಮತ್ತೆ
ತುಂಗ ಸರಿತುವಿನಲ್ಲಿ ಕೇಣ । ತೊರೆದು
ಮಂಗಳ ಹರಿಹರ ಚರಣ । ಬಾಗಿ
ಅಂಗನೆ ಸಹವೆರಸಿ ಜಾಣ । ವೇಗ
ಅಂಗ ಅಷ್ಟಕ ಚಾಚಿ ಮಂಗಳ ಮಹಿಮ ನರ
ಸಿಂಗನಿಗೆರಗುತ್ತ ಸಂಗಿಸುಜನನಾಗೋ ೧೪

ಮುದದಿಂದ ಮುಂದೆ ನೀ ಸಾಗೊ । ಧೀರ
ಕದರುಂಡಲ್ಗೀಶಗೆ ಬಾಗೊ । ವರದ

ನದಿಯ ತೀರಕೆ ನೀನು ಹೋಗೊ । ಅಲ್ಲಿ
ಸದಮಲ ಧೀರೇಂದ್ರರ್ಗೆರಗೊ । ಆಹ
ಬಧಿರ ಮೂಕರು ಹೆಳವ ವಿಧವಿಧ ರೋಗಿಗಳ್
ವದಗಿ ಸೇವಿಸಿ ಗುರುಪದಕೆ ಬೀಳುವರಯ್ಯ ೧೫

ಆದಿಕೇಶವನಿಹ ಬಂಕಾ । ಪುರಕೆ
ಮೋದದಿ ಬಂದ ನಿಶ್ಶಂಕ । ಭಕ್ತ
ಮೋದ ಕಾರಣ ನಿಷ್ಕಳಂಕ । ತೊರವೆ
ಶ್ರೀದ ನೃಹರಿ ಛಲದಂಕ । ಆಹ
ಪಾದ ನಮಿಸಿ ಸತ್ಯಬೋಧರ ಸುದಿವ್ಯ
ಪಾದಕ್ಕೆ ಎರಗುತ್ತ ಐದು ಮುಂದಿನ ಪಥ ೧೬

ಆರ್ಥಿಲಿ ಮಿಂದು ಕುಶ ಸರಿತು । ವಿಷ್ಣು
ತೀರ್ಥರ ನಮಿಸುವದೊಳಿತು । ಪಂಪ
ಕ್ಷೇತ್ರಕ್ಕೆ ಸಾಗುತ್ತ ತ್ವರಿತೂ । ವ್ಯಾಸ
ತೀರ್ಥರ ಪಾದಕ್ಕೆ ಕ್ರಾಂತು । ಆಹ
ಸಾರ್ಥಕದೊಳು ಆಗಿ ಪಾರ್ಥ ಸಖಸಖ ಪ್ರ-
ಮಥೇಶಗೆರಗಿ ನೀ ಯಂತ್ರೋದ್ಧಾರರ ನಮಿಸು ೧೭

ಪುರಂದರ ಕಾಲೀನರಾದ । ಗದಗು
ನರೆಯಣನಿಗೆ ಪ್ರೇಮಾಸ್ಪದ । ದಿವ್ಯ
ಭಾರತ ರಚಿಸೀದರಾದ । ವೀರ
ನಾರಾಯಣನ್ನ ಪೆಸರಾದ । ಆಹ
ಶರಣರಂತರ್ಯಾಮಿ ನರೆಯಣನ ನಮಿಸುತ್ತ
ವರಪ್ರಸನ್ವೇಂಕಟ ಶರಣರಿಗಭಿನಮಿಸಿ ೧೮

ಮಲ ಪಹಾರಿಯ ತೀರ । ಅಲ್ಲಿ
ಚೆಲುವ ನಿಂತಿರುವ ಸಮೀರ । ಮತ್ತೆ
ಅಲವಬೋಧಋಗ ಪರಾಯಣರ । ಹಾಗೆ
ವಾಲಗ ಗೈಯಾದ ವಾರ್ಯರ । ಆಹ

ತುಳಸಿಹಾರಗಳಿಂದ ಗಳದಲಿ ಶೋಭಿತ
ಚೆಲುವ ವ್ಯಾಸರ ಪ್ರತೀಕಗಳ ನೀ ನಮಿಸುತ ೧೯

ದೇವಿ ಭಾರತಿರಮಣ ಪ್ರಾಣ । ಬೆಳ
ಗಾವಿಯಲ್ಲಿಹ ಕರವೀಣಾ । ಪಾಣಿ
ಭಾವದಲ್ಲಿಹ ಜಗತ್ರಾಣ । ಭಕ್ತ
ಆ ವೆಂಕಣ್ಣಾರ್ಯರಿಂ ಸ್ಥಾನಾ । ಆಹ
ಭಾವಿಮರುತ ವೃಂದಾವನವನ ನಮಿಸುತ್ತ
ಧಾವಿಸುವುದು ಮುಂದೆ ದೇವಿಯ ಪುರಕಾಗಿ ೨೦

ಸಕಲಾಭೀಷ್ಟದಳೆಂದೆನಿಸೀ । ಮಹ
ಲಕುಮಿ ಕೊಲ್ಲಾಪುರದರಸೀ । ಅಲ್ಲಿ
ಪ್ರಕಟಳು ಭಕ್ತರನುಸರಿಸೀ । ನೀನು
ಚೊಕ್ಕ ಮನದಿ ಪೋಗಿ ನಮಿಸೀ । ಆಹ
ಭಕುತರವೆರಸುತ್ತ ಆಕಳಂಕ ಮಹಿಮಳ
ಪ್ರಕಟ ಸ್ತೋತ್ರದಿ ನೀ ನಿಷ್ಪಂಕನೆಂದೆನಿಸುತ್ತ ೨೧

ಕೃಷ್ಣಾ ತೀರದಿ ಸತ್ಯವ್ರತರ । ವೃಂದಾ
ವನವ ಸೇವಿಸೆ ಸಾಂಗ್ಲಿಪೂರ । ಸೇರಿ
ಮನಮುಟ್ಟಿ ಪೂಜಿಸುತವರ । ಮುಂದೆ
ಅನನುತ ಪಂಢರಿಪೂರ । ಆಹ
ಅನುಮಾನತೀರ್ಥರ ಘನ ಶಿಷ್ಯರನು ನಮಿಸಿ
ಘನಸುಭಕ್ತಿಲಿ ವಿಠಲನ ಪಾದಕೆ ಬೀಲು ೨೨

ತೊರೆವೆ ನರಸಿಂಹಗೆ ಬಾಗೀ । ಮಣಿ
ಪುರದೊಳು ಗುರುಗಳಿಗೆರಗೀ । ಅಲ್ಲಿ
ಶಿರಿ ಕೇಶವ ಚರಣಕ್ಕೆ ಎರಗಿ । ಮುಂದೆ
ವರಪೂಣ ಪತ್ತನಕಾಗೀ । ಆಹ
ತೆರಳುತ ಲಲ್ಲಿಹ ವರದೇಂದ್ರರ ನಮಿಸಿ
ಭರಿತ ಭಕ್ತಿಲಿ ಮುಂದೆ ಚೆರಿಸೆಲೊ ಮನುಜ ೨೩

ಸಾಧಾರಣಲ್ಲವೊ ಯಾತ್ರೆ । ವೃದ್ಧ
ಗೋದಾವರಿಯ ಮೀವಚಿಂತೆ । ನಾಸಿ
ಕಾದೊಳ್ ಪಿತೃಕಾರ್ಯವಂತೆ । ಅಲ್ಯ
ಗಾಧ ರಾಮನ ವಾಸ ಚಿಂತೆ । ಆಹ
ಗೋದಾವರಿಯ ಮೂಲ ಆದರದೊಳು ನಮಿಸಿ
ಮೋದದಿಂ ತ್ರಿಯಂಬಕ ಪಾದಕ್ಕೆ ಬೀಳುತ್ತ ೨೪

ಸಾರೊ ನೀ ತಪತಿಯನದವ । ಹಾಗೆ
ಸಾರಿ ಮೀಯಲೊ ನರ್ಮದವ । ಅಲ್ಯೋಂ
ಕಾರೇಶನ ನೋಡಿ ಮುದವ । ನೀನು
ಬೀರುತ್ತ ಕ್ಷಿಪ್ರ ಸರಿತೂವ । ಆಹ
ಸಾರಿ ಮಹಕಾಲಾಖ್ಯ । ವೀರಭದ್ರನನಮಿಸಿ
ಶ್ರೀರಮಣ ಕೃಷ್ಣ ಸು । ಧಾಮರ ಸ್ಮರಿಸುತ್ತ ೨೫

ಎಸೆವೊ ನರ್ಮದ ತೀರದಲ್ಲಿ । ಘಾಟು
ದಶ ಅಶ್ವಮೇಧ ಎಂಬಲ್ಲೀ । ಭೃಗು
ಋಷಿಗಳಾಶ್ರಮ ವಿಹುದಲ್ಲಿ । ನೀನು
ನುಸುಳಿಪೋಗುತ ವೇಗದಲ್ಲಿ । ಆಹ
ನಸಿಗೀಲಿ ಸ್ನಾನವ । ವೆಸಗುತ್ತ ಮನದಲ್ಲಿ
ಹೃಷಿಕೇಶನ ಧ್ಯಾನ । ಹಸನಾಗಿ ನೀ ಮಾಡು ೨೬

ಆಮಹ ಪ್ರತ್ಯಕು ಸರಸ್ವತಿ । ಮತ್ತೆ
ಹೇಮದ ಪ್ರತಿ ನಾಮವತಿ । ಸೇರ್ವ
ಆಮಹ ಪ್ರಭಾಸಪ್ರತಿ । ಪೋಗಿ
ಸೋಮನಾಥಗೆ ನಮಿಸು ಅಪ್ರತಿ । ಆಹ
ಭಾಮಾಪತಿ ಕೃಷ್ಣ । ನಾ ಮಹಲೀಲೆಗಳ
ಸೋಮಧರನು ಪೇಳ್ವ । ಸೀಮಾತೀತಾವೆನುತ ೨೭

ಸ್ತುತ್ಯ ಪಶ್ಚಿಮ ಶರನಿಧಿಯು । ಮತ್ತೆ
ಪ್ರತ್ಯಕು ಗೋಮತಿ ನದಿಯು । ಸೇರಿ

ತೀರ್ಥ ಚಕ್ರವು ಪ್ರಸಿದ್ಧಿಯ । ಅಲ್ಲೆ
ಸತ್ಯ ದ್ವಾರಕಪುರ ಸ್ಥಿತಿಯು । ಆಹ
ಸತ್ಯಭಾಮೆಯ ಪತಿ ಪ್ರತ್ಯಕ್ಷನಾಗಿಹ
ಭಕ್ತಿಯಿಂದ ಸ್ತೋತ್ರ ಕೃತ್ಯವ ಮಾಳ್ಪಗೆ ೨೮

ಗೋಪಿಕೆರೆಯು ಎಂಬ ತೀರ್ಥ । ಅಲ್ಲಿ
ಗೋಪ ಪದ ಚಕ್ರಾಂಕನವತ । ವಾದ
ಗೋಪಿಚಂದನ ವೈಷ್ಣವ ಧೃತ । ಮತ್ತೆ
ಗೋಪಬೇಟ್‌ದ್ವಾರಕಸ್ಥಿತಿ । ಆಹ
ಆ ಪರಬೊಮ್ಮನ ಸುಪ್ರತೀಕವ ನಮಿಸಿ
ಶ್ರೀಪತಿಯಿಂಶಂಖ ಪಾಪನು ಹತನೆನ್ನು ೨೯

ಗಿರಿಯು ರೈವತವನ್ನೆ ನೋಡು । ಅಲ್ಲಿ
ಸಿರಿ ಬಲರಾಮಾದಿಯನೆ ಪಾಡು । ಬಿಂದು
ಸರವ ಮೀಯಲು ನೀನು ಹೊರಡು । ಅಲ್ಲಿ
ಪರಮಾತ್ಮ ಕಪಿಲನ್ನ ಪಾಡು । ಆಹ
ವರ ಋಷಿಕರ್ದಮ ಅವರ ಪತ್ನಿಯ ಸ್ಮರಿಸಿ
ಸರಸತಿಯನೆಮಿಂದು ತೆರಳು ನೀ ಪುಷ್ಕರಕೆ ೩೦

ಬಲುದೂರ ಸಾಗಲಿ ಬೇಕೂ । ಅಲ್ಲಿ
ಚೆಲುವ ಪುಷ್ಕರ ಮೀಯಬೇಕು । ಅದು
ಹೊಳೆವ ಹರಿರೂಪೆನ್ನಬೇಕು । ಅಲ್ಲಿ
ನಾಲ್ಮೊಗ ಪೂಜಿತನೆನಬೇಕು । ಆಹ
ಬಲುರಮ್ಯ ಪುಷ್ಕರ ಸುಲಭವಲ್ಲವೊ ಕೇಳು
ಅಲವ ಬೋಧರ ದಯ । ಬಲದಿಂದ ಸಾಧ್ಯವು ೩೧

ಕಂಸನಿದ್ದ ಪುರ ಮಧುರಾ । ಅಲ್ಲಿ
ಕಂಸಾರಿ ಗುಣ ಬಹು ಮಧುರಾ । ಗೈದು
ಅಂಶುಮಾಲಿಯ ಪೌತ್ರಿ ಪೋರ । ಸ್ನಾನ
ಶಂಶಿಸುತಲಿಗೈಯ್ಯೋ ಧೀರ । ಆಹ

ಹಂಸವೈರಿಯ ಪದ । ಪಾಂಸುಧರಿಸಿದ ಗೋಕ್ಷ
ಶಂಸನ ವೃಂದಾವ್ನ । ಶಂಸಿಸಿ ಮುಂದಕ್ಕೆ ೩೨

ಮಂಗಳ ಹರಿಪಾದ ಜಾತೆ । ನಾಮ
ಗಂಗೆ ಗಂಗೆ ಎಂಬ ಖ್ಯಾತೆ । ತನ್ನ
ಮಂಗಳನಾಮ ಕೀರ್ತಿಸೆ । ಬಪ್ಪ
ಘಂಗಳ ಹರಿಸುವ ಮಾತೆ । ಆಹ
ತುಂಗ ಮಹಿಮೆ ಉತ್ತುಂಗ ದೂರದಲಿಂದ
ಮಂಗಳ ಕೊಡೆ ದ್ರವ । ಅಂಗದಿಂ ಬಪ್ಪಳು ೩೩

ಗಂಗಾ ಯಮುನಾ ಸರಸ್ವತಿ । ದಿವ್ಯ
ಸಂಗಮ ಮೀಯುತ್ತಲತಿ । ಮೋದ
ಸಂಗದಲ್ವೇಣಿಯನ್ನತಿ । ಪ್ರೀತಿ
ಹೆಂಗಳದಾನದ ಕೃತಿ । ಆಹ
ಸಂಘ ಕಣ್ಮನ । ನೋಡಿ ಮಂಗಳ ಮಹಿಮ ಕೃ-
ಪಾಂಗ ಮಾಧವನ ಹಿಂಗದೆ ಸ್ಮರಿಸುತ್ತ ೩೪

ವಟ ಬುಡವನ್ನು ದರ್ಶೀಸಿ । ಧೂರ್
ಜಟಿ ವಿಶ್ವನಾಥ ನಿಹ ಸುಕಾಶಿ । ಹರಿಯುಂ
ಗುಟ ಜನಿತ ತಟ ಅರುಣಾಸಿ । ಮಧ್ಯ
ಸ್ಫುಟವು ಮಂಗಳ ವಾರಣಾಸಿ । ಆಹ
ಜಟೆಯೊಳ್ಗಂಗಾಧಾರಿ । ನಿಟಿಲ ನೇತ್ರನತುತಿಸಿ
ಕುಟಿಲ ರಹಿತ ವ್ಯಾಸ । ಕೃಷ್ಣಗೆ ಅಭಿನಮಿಸಿ ೩೫

ತರುವಟ ಸ್ಕಂದದಿಂ ಸಾಗೀ । ಫಲ್ಗು
ಸರಿತ್ತಟ ಶ್ರಾದ್ಧಕೆ ಪೋಗೀ । ಗಯಾ
ಶಿರದೀಹ ಹರಿಪಾದಕ್ಕಾಗಿ । ಅಲ್ಲಿ
ಹರಿ ಗಧಾಧರನಿಗೆ ಎರಗಿ ।
ತರುವಟ ಛಾಯದಿ । ಸರುವ ಪಿತರ ಋಣ
ಪರಿಹಾರಗೈಸುತ ಅರಿಷಡ್ವರ್ಗವನಳಿದು ೩೬

ಗಜಪುರವನು ಸೇರಿ ಜಾಣ । ಹರಿ
ನಿಜಭಕ್ತ ಪಾಂಡವ ಪ್ರಾಣ । ನೆಂದು
ನಿಜ ಮನದೊಳುಗೈದುಗಾನ । ಮುಂದೆ
ಸುಜನ ದುರ್ಜನ ಕಲಹ ಸ್ಥಾನ । ಆಹ
ಧ್ವಜ ವಜ್ರಾಂಕಿತ ಹರಿ । ಯಜಮಾನ ಭೀಮನಿಂ
ಯಜನಾಖ್ಯ ಆಹವ । ಸ್ವಜನರಿಂಗೈಸೀದ ೩೭

ಶಮಂತ ಪಂಚಕ ಮೀಯೋ । ಪರಶು
ರಾಮನಿಂ ರಚಿತವು ತಿಳಿಯೋ ॥ ಮತ್ತೆ
ಭೀಷ್ಮಾದಿ ಪ್ರಮುಖರ ನೆನೆಯೋ । ಮುಂದೆ
ಪ್ರೇಮದಿಂ ಹರಿದ್ವಾರ ಖರೆಯೋ । ಆಹ
ಸುಮಹ ಭಕ್ತರು ವಿದುರ । ಮೈತ್ರೇಯರನು ತುತಿಸಿ
ಆ ಮಹಾಗಂಗೆಯ । ಸುಮಹಾಯತ್ಮೆಯನು ಸ್ಮರಿಸೊ ೩೮

ಹೃಷಿಕೇಶದಲಿ ಇದ್ದು ನೀನು । ಗಂಗ
ಹಸನಾಗಿ ಮೀಯುತಲಿನ್ನೂ । ಗುರು
ದಶಮತಿಗಳಿಗೆ ಬಿಕ್ಷವನ್ನು । ಶಿವ
ನೆಸಗಿದ ಚರಿತೆ ಸ್ತುತಿಯನ್ನು । ಆಹ
ಉಸುರಿ ಆದಿಯ ಬದರಿ । ಋಷಿಕೇಶ ಹಿಂಗಳೆದು
ನುಸುಳಿ ಪೋಗೆಲೊ ಕಂಡು । ಎಸೆವ ಪ್ರಕೃತಿ ಸೊಬಗ ೩೯

ಧಾವಿಸಿ ಮುಂದೆ ಪ್ರಯಾಗ । ಇನ್ನು
ದೇವ ರುದ್ರಕರ್ಣಭಾಗ । ಗಳು
ಆವ ನಂದಾಕಿನೀ ಯೋಗ । ಎಲ್ಲ
ಭಾವಿ ಗಂಗಾಲಕ ಯೋಗ । ಆಹ
ಭಾವ ಭಕುತಿಲಿಂದ । ಲಾವ ಸಂಗಮ ಸ್ನಾನ
ಪಾವನಗೈವುದು । ಶ್ರೀವರನದಯದಿಂದ ೪೦

ಮುದದಿ ಮಿಂದೂ ಗರುಡ ಗಂಗ । ಭಾವಿ
ಬದರಿ ಯೋಳು ನರಸಿಂಗಾ । ಧಾರ

ವಿಧಿ ಪೂರ್ವ ಸ್ನಾನಾಂತರಂಗ । ಧ್ಯಾನ
ವದಗಿ ಗೈದೂ ಮಂಗಳಾಂಗ । ಆಹ
ಬದರಿನಾಥನ ದಿವ್ಯ ಪದ ಮಹಿಮೆಗಳನ್ನ
ಮುದದಿ ಪಾಡಿ ವಿಷ್ಣ್ವಾ । ಭಿದ ಪ್ರಯಾಗವ ದಾಟೊ ೪೧

ಯೋಗ ಬದರಿ ಪಾಂಡು ಕೇಶ । ಮುಂದೆ
ಸಾಗಲು ಚಟ್ಟಿ ಹನುಮೇಶ । ಛಳಿ
ಯೋಗದಿ ಅಸಾಧ್ಯವಾಸ । ಮಾಡಿ
ಬಾಗೊ ಪದಕೆ ಹನುಮೇಶ । ಆಹ
ಸಾಗುತ ಮುಂದೆ ಲೇ । ಸಾಗಿ ಕಾಣುವಿ ಬದರಿ
ಆಗಾರ ಹೇಮದ । ಸೋಗಿನ ಗೋಪುರ ೪೨

ಶ್ರಮ ಚಿಂತೆಗಳು ದೂರವಾಗಿ । ಇನ್ನು
ಹಿಮತುಳಿದು ಮುಂದಕೆ ಸಾಗಿ । ಕಾಣು
ವಿಮಲ ಮಂದಿರದೊಳು ಪೋಗಿ । ಬದರಿ
ಸ್ವಾಮಿಯ ಪದಗಳಿಗೆರಗೀ । ಆಹ
ಕ್ರಮದಿ ಗೋಳಕ ಚಿಂತೆ । ವಿಮಲ ಮನದಿ ಗೈದು
ಸುಮನಸ ವಂದ್ಯನ । ನಮಿಸೊ ಭಕುತಿಯಿಂದ ೪೩

ಪಂಚ ಕುಂಡಗಳಲ್ಲಿ ಮಿಂದು । ನಿಷ್ಪ
ಪಂಚ ನಾಗುತ ನೀನು ಬಂದು । ಆಸು
ಪಂಚಶಿಲೆಗಳಲ್ಲಿ ನಿಂದು । ಪೂರ್ಣ
ಪಂಚರೂಪಗಳನೆ ತಂದು । ಆಹ
ಪಂಚ ನಾಡಿಯ ಮಧ್ಯ ಮಿಂಚಿಪಗೃಹದಿ ವಿ-
ರಿಂಚಿಪಿತನ ಕಂಡು । ಸಂಚಿತಾದಿಯ ಕಳೆ ೪೪

ಚತುರಾಸ್ಯ ಕಪಾಲದುಪರಿ । ಪಿಂಡ
ಪಿತರುಗಳಿಗಾಗಿ ಇಡಿರಿ । ನಿಮ್ಮ
ಪಿತರುಗಳು ಸ್ವರ್ಗಕ್ಕಡರಿ । ಬಲು
ಸುತುಷ್ಟೀಲಾಶಿಷ ನಿಮ್ಮ ಪರಿ । ಆಹ

ಸತತಗೈಯುತ ವಂಶ । ವಿತತ ಮಾಡುವರಯ್ಯ
ಕೃತಕಾರ್ಯನೆನಿಸಿ ಸ । ದ್ಗತಿಗೆ ಪಥವ ಪಡೆಯೊ ೪೫

ಹರಿಯದ್ವಾರಕೆ ಮರಳಿ ಬಂದು । ಮತ್ತೆ
ಹರಿಯ ಪಾದೋದಕ ಮಿಂದು । ಇನ್ನು
ವರಗಂಗಾಜಲ ತುಂಬಿ ಅಂದು । ನೈಮಿ
ಶಾರಣ್ಯಕೆ ಸಾಗುತ ಮುಂದು । ಆಹ
ಸರಿತು ಗೋಮತಿ ಮಿಂದು । ಸ್ಮರಿಸುತ್ತ ಋಷಿಗಳ
ಸಿರಿ ಭಾಗವತ ಪೇಳಿ ಹರಿಪಾದಕೆರಗುತ್ತ ೪೬

ಸರಯು ನದಿಯ ಮೀಯ ಪೋಗಿ । ಅಲ್ಲಿ
ಪೆರೆವಯೋಧ್ಯಾ ನಗರಿಗಾಗಿ । ಬಂದು
ಸಿರಿರಾಮ ಚರಣಕ್ಕೆ ಎರಗಿ । ದಿವ್ಯ
ಅರಮನೆಗಳ ಮುಂದೆ ಸಾಗಿ । ಆಹ
ಪುರವು ಪಾಟಲಿ ಸೇರಿ । ಸರಿತು ಗಂಡಕಿ ಮಿಂದು
ಸಿರಿ ವೈದ್ಯನಾಥೇಶ । ಚರಣ ಕಾಣಲು ಸಾಗು ೪೭

ಜ್ಯೋತಿಲಿಂಗದಿ ಹರನಿರುವಾ । ಹರ ವಿ-
ಭೂತಿಯಿಂದಲಿ ಬಹು ಮೆರೆವಾ । ಮತ್ತೆ
ಸೀತಾಪತಿಯ ನಾಮನುಡಿವಾ । ಶಿವಗೆ
ಪ್ರೀತಿಯಿಂದಲಿ ನೀರನೆರವಾ । ಆಹ
ಕೈತವರಹಿತಾನು । ಭೂತ ಪತಿಯ ನಮಿಸಿ
ಪೋತಭಾವದಿ ಕಾಳಿ । ಮಾತೆ ನೋಡಲು ಪೋಗು ೪೮

ಕಾಳೀ ಘಟ್ಟಕೆ ನೀನು ಬಂದು । ಮತ್ತೆ
ಶೀಲದಿ ಗಂಗೆಯ ಮಿಂದು । ಇನ್ನು
ಕಾಳಿಮಾತೆಗೆ ನಮಿಸಿ ಬಂದು । ಋಷಿ
ಮೌಳಿ ಕಪಿಲ ಹರಿ ಎಂದು । ಆಹ
ತೂಳಿದಾನಂದದಿ । ಕಾಲ ಕಳೆದು ಮಂದೆ
ಶ್ರೀ ಲೋಲ ಜಗನ್ನಾಥ । ನಾಲಯ ನೆನೆಸುತ್ತ ೪೯

ಮೂಡಲ ಶರಧಿಯ ಮಿಂದು । ಇನ್ನು
ನಾಡು ದೈವಂಗಳ ಹಿಂದು । ಗಳೆದು
ಜೋಡಿಸಿ ಕರಗಳ ಅಂದು । ನೀನು
ಪಾಡು ಜಗನ್ನಾಥನಂದು । ಆಹ
ಗಾಢ ಭಕ್ತಿಯ ಮಾಡೆ ರೂಢಿಗೊಡೆಯ ಹರಿ
ಬೇಡಿದಿಷ್ಟಾರ್ಥ ಕೈ । ಗೂಡಿಪನೆನುತಲಿ ೫೦

ಸಿಂಗಾಚಲವು ಬಲುದೂರ । ನರ
ಸಿಂಗನಿರುವ ಲಿಂಗಾಕಾರ । ಸಾರಿ
ತುಂಗ ಮಹಿಮ ಗುಣಾಕಾರ । ನೆನ್ನೆ
ಭಂಗ ಹರಿಪ ಭವದೂರ । ಆಹ
ಕಂಗಳಾದಿ ಅಷ್ಟ । ಲಿಂಗಾದಿ ನಮಿಸೆ ದು–
ಸ್ಸಂಗವ ಕಳೆದು ಸ । ತ್ಸಂಗವ ನೀಯುವ ೫೧

ನೀನು ಗೋದಾವರಿ ಮೀಯೋ । ಸತ್ಯ
ಜ್ಞಾನರ ಚರಣವ ನೆನೆಯೋ । ಮುಂದೆ
ಕೃಷ್ಣಾದಲ್ಲಿ ಪುನಃ ಮೀಯೋ । ಪೂಜಾ
ಪಾನಕ ನೃಹರಿಗೆ ಗೈಯ್ಯೋ । ನಿಂತ
ಶಿವ ಆದಿ ಶಿಲೆಯೊಳು ನಿಂದೂ । ಆಹ
ಜ್ಞಾನ ಭಕ್ತಿಯ ಮುಡುಪು । ಸಾನುರಾಗದಿ ಕೊಡೆ
ಗಾನ ಲೋಲನು ಮುಕ್ತಿ । ಆನಂದವನು ಉಣಿಪ ೫೨

ಶಿವಲಿಂಗ ಶ್ರೀಶೈಲ ನೆನೆದು । ಮುಂದೆ
ಗದ್ವಾಲಿಪುರಕೆ ಪೋಗುವುದು । ಇನ್ನು
ಶಿವಗಾಗಿ ವೆಂಕಟ ಬಂದೂ । ನಿಂತ
ಶಿವ ಆದಿಶಿಲೆಯೊಳು ನಿಂದು । ಆಹ
ಭವಹರ ವೆಂಕಟನ ಸ್ತವ ಶೇಷದಾಸರ
ನವನವ ಮಹಿಮೆ ವೈಭವವನೆ ಪೊಗಳುತ್ತ ೫೩

ವಿಜಯದಾಸರಲ್ಲಿ ಶಿಷ್ಯರಾ । ಗುರು
ವಿಜಯಾರು ಇದ್ದದರೂರ । ನೋಡಿ
ಐಜಿ ಆಚಾರ್ಯರೆಂಬುವರ । ನೆನೆ ನಿ–
ರ್ವ್ಯಾಜದಲ್ಯತಿಗಳ ಊರ । ಆಹ
ನಿಜವೇಣಿ ಸೋಮಕೆ । ಬಿಜಯಿಸುತಲಿ ವೇಗ
ಸುಜನ ಸಂಗದಿ ಹರಿ । ಭಜನೆಯ ಮಾಳ್ಪುದು ೫೪

ಉತ್ತನೂರಿಗೆ ಪೋಗಿ ಅಲ್ಲಿ । ದಾಸ
ಉತ್ತಮ ಭಾಗಣ್ಣರಲ್ಲಿ । ಇದ್ದ
ಉತ್ತಮ ಸ್ಮೃತಿ ಕೊಳ್ಳುತಲ್ಲಿ । ಮುಂದೆ
ಸ್ತುತ್ಯ ಮಳಖೇಡವು ಅಲ್ಲಿ । ಆಹ
ಚಿತ್ತ ಜನ್ನ ಗೆದ್ದ । ಮತ್ತ್ಯಕ್ಷೋಭ್ಯರ ಕರಜ
ಉತ್ತಮ ಯತಿಪದ । ತುತ್ತಿಸುತಲಿ ನಡೆ ೫೫

ವಾತಸುತನು ಭಕ್ತಿಗಾಗಿ । ಬಂದು
ಮೋತಂಪಲ್ಲಿಲಿ ನಿಂತನಾಗಿ । ಅದ
ಕಾತುರತೆಲಿ ನೋಡ ಹೋಗಿ । ಮುಂದೆ
ಖ್ಯಾತ ಯರಗೊಳ ಕಾಣ ಹೋಗಿ । ಆಹ
ಆತು ರಾಮಚಂದ್ರ । ತೀರ್ಥರ ಪದಪಾಂಸ್ವ
ಯತಿ ವಿದ್ಯಾನಿಧಿ ಪಾದ । ಪೃಥುಕು ವಂದನೆಗೈದು ೫೬

ನಮಿಸು ವಾದಿರಾಜಾಚಾರ್ಯ । ರನ್ನು
ಜಮಖಂಡಿಯೊಳು ಬಲು ಆರ್ಯ । ಮುಂದೆ
ಆಮಹ ಶೂರ್ಪಾಲಿವರ್ಯ । ಯತಿ
ಸುಮಹ ವಿದ್ಯಾಧೀಶ ಆರ್ಯ । ಆಹ
ಕ್ರಮ ಪ್ರತಿಷ್ಠಿತವಾದ । ವಿಮಲ ಮೂರುತಿಯನ್ನು
ನಮಿಸುತ ನರಹರಿ । ಅಮಲ ಪದಯುಗವನ್ನು ೫೭

ಗಲಗಲಿ ಪುರದೊಳು ಸಾಗೀ । ಜ್ಞಾನಿ
ಗಲಗಲಿ ಆರ್ಯಗೆ ಬಾಗಿ । ಮುಂದೆ

ತುಳಸೀ ಗೆರೆಗೆ ನೀನು ಹೋಗಿ । ಅಲ್ಲಿ
ಸುಲಲಿತಾಂಗ ಹನುಮಗೆ ಬಾಗಿ । ಆಹ
ಗಳದೊಳು ನಳಿನಾಕ್ಷಿ । ತುಳಸಿಯ ಮಾಲೆಯಿಂ
ಹೊಳೆವ ಮಹಿಮರ ಮಂತ್ರಾಲಯದೊಳು ನಮಿಸುತ್ತ ೫೮

ಅಗಮ್ಯ ಮಹಿಮರು ಎನಿಸೀ । ಮಹ
ಋಗರ್ಥ ಪೇಳಿಹ ತಪಸೀ । ಅಂಥ
ರಾಘವೇಂದ್ರರ ಪಾದ ನಮಿಸೀ । ಮುಂದೆ
ಜಗನ್ನಾಥದಾಸರ ನುತಿಸೀ । ಆಹ
ನಿರ್ಗಮಿಸು ಮಾನವಿ ಸುಗ್ರಾಮ ದಾಟುತ್ತ
ಭೃಗು ಅಂಶರೆನಿಪರ ವಿಜಯಾರ್ಯ ಪುರಕಾಗಿ ೫೯

ಶ್ರೀಪತಿ ವರಹನಿಂ ಜನಿತಾ । ತುಂಗ
ರೂಪಳ ತಟದಲ್ಲಿ ಸ್ಥಿತಾ । ತರು
ಶ್ರೀಪಾದ ಸ್ಥಾಪಿತಶ್ವತ್ಥಾ ಅಲ್ಲಿ
ಶ್ರೀಪ ಶ್ರೀ ನರಹರಿ ಸ್ಥಿತಾ । ಆಹ
ಈಪರಿಯೊಳು ಚೀಕ । ನಾ ಪರಿಗ್ರಾಮವ
ಪ್ರಾಪಿಸುತಲಿ ಮುಂದೆ । ಚಿಪ್ಪಿಗಿರಿಗೆ ಸಾಗು ೬೦

ಒಪ್ಪುವೊ ಭಾಸ್ಕರ ಕ್ಷೇತ್ರ । ಅದೆ
ಚಿಪ್ಪಿಗಿರಿಯು ದಾಸಕ್ಷೇತ್ರ । ಅಲ್ಲಿ
ಸುಪ್ರತಿಷ್ಠಿತ ವಿಠಲಗಾತ್ರ । ಭಕ್ತಿ
ಕಪ್ಪಕೆ ವಲಿವಂಥ ಪಂಥ । ಆಹ
ಸ್ವಪ್ನದಿ ಪುರಂದರ । ಅಪ್ಪಂಥ ತನುಜ ದಾ
ಸಪ್ಪನ ನಮಿಸಿ ತಿಮ್ಮಪ್ಪನ ಸ್ಮರಿಸೋದು ೬೧

ವೇಣುಗೋಪಾಲರ ಸ್ಮರಿಸಿ । ಆದ
ವಾನಿಯಲ್ಲವರನು ನಮಿಸಿ । ಮುಂದೆ
ಶ್ರೀನಿವಾಸನ ನೋಡೆ ಗಮಿಸೀ । ಇನ್ನು
ಜ್ಞಾನಿಜನರ ಸಹ ವೆರಸೀ । ಆಹ

ಆನಂದಗಿರಿ ಏರಿ । ಗಾನದಿಂ ಮೈಮರೆದು
ಶ್ರೀನಿವಾಸನ ಕಂಡು । ಆ ನಮಿಪುದು ಧೀರ ೬೨

ಕೃತಿವಾಸನು ಇಹಪುರಕೇ । ಕಾಳ
ಹಸ್ತೀಲಿ ವಾಯು ಲಿಂಗಕ್ಕೆ । ಕರ
ವೆತ್ತಿ ಮುಗಿದು ಪದ್ಮ ಸರಕೆ । ಪೋಗಿ
ನೆತ್ತಿ ಬಾಚು ಲಕ್ಷ್ಮಿ ಪದಕೇ । ಆಹ
ಸುತ್ತಿ ನರಸಿಂಹನ । ತೀರ್ಥ ಮುಳಬಾಗಿಲೋಳ್
ಹಸ್ತವ ಮುಗಿಯುತ । ಯತಿಶಿರಿಪಾದರಿಗೇ ೬೩

ನಿಲಯ ಮರುತ ನರಹರಿಗೆ । ಘಟಿಕಾ
ಚಲದಿ ನಿಂತಿಹ ಅವರಿಗೆ । ಕಂಚಿ
ನಿಲಯ ವರದರಾಜನಿಗೇ । ಅಲ್ಲಿ
ನಿಲುವಾ ಪೃಥ್ವಿಲಿಂಗನಿಗೆ । ಆಹ
ವಲಿಮೆಯಿಂದಲಿ ನಿನ್ನ ತಲೆಯ ಬಾಗುತ ಅರುಣಾ
ಚಲದಿ ನಮಿಸುತ ಲಿಂಗ । ಚೆಲುವ ಸುದರ್ಶನದ ೬೪

ತಿರಕ್ಕೊಯಿಲೊಳು ತ್ರಿವಿಕ್ರಮ । ಅಲ್ಲೆ
ಎರಗೋ ಗುರು ರಘೂತ್ತಮ । ಪದಕೆ
ಹರ ನಟರಾಜ ಪದ ಪದುಮ । ಚಿದಂ
ಬರದಿ ಅಲ್ಲೆ ವ್ಯೋಮ ನಾಮ । ಆಹ
ಹರಲಿಂಗ ನಮಿಸುತ್ತ । ವರಹರೂಪನ ಮುಂದೆ
ಶಿರಿಮುಷ್ಣದೊಳು ನಮಿಸಿ । ಗುರುಮಧ್ವರನು ನೆನೆಯೊ ೬೫

ಕುಂಭಕೋಣಕೆ ಮುಂದೆ ಗಮಿಸಿ । ಅಲ್ಲಿ
ಕುಂಭೇಶಗೆ ನೀನು ನಮಿಸಿ । ಮತ್ತೆ
ಇಂಬಿಲಿ ಶಾರ್ಙಧರಗೆ ನುತಿಸಿ । ಅಲ್ಲೆ
ಸಂಭ್ರಮ ವಿಜಯಿಂದ್ರ ಸನ್ಯಾಸಿ । ಆಹ
ನಂಬುತ್ತ ಗುರುಪಾದ । ಅಂಬುಜ ನಮಿಸುತ್ತ
ಶಂಬರಾರಿಯ ಪಿತ । ಅಂಬುಜಾಕ್ಷನ ನಮಿಸು ೬೬

ಮಂಗಳ ಚಂದ್ರ ಪುಷ್ಕರದೀ । ಮಿಂದು
ರಂಗನಾಥನ ಪಾದ ಪದ್ಮದಿ । ಅಪ್ಪು
ಲಿಂಗನು ಹರ ಪಾದಾಂಬುಜದಿ । ಬಹು
ಭೃಂಗರೆನಿಸಿಹ ಗುರುಪದದೀ । ಆಹ
ಅಂಗವ ಚಾಚಿ ವ । ರಂಗಳ ಬೇಡುತ್ತ
ಸಂಗೀತ ಲೋಲ ಗು । ಣಂಗಳ ಪಾಡುತ್ತ ೬೭

ಮಾನಾ ಮಧುರೆಯ ಸಾರುತ್ತ । ಅಲ್ಲಿ
ಜ್ಞಾನಿ ಪ್ರೀಯರ ನಮಿಸುತ್ತ । ನವ ಪಾ–
ಷಾಣಂಗಳ ತುತಿಸುತ್ತ । ಮತ್ತೆ
ನೀನು ದರ್ಭಶಯ್ಯಗೆ ಬಾಗುತ್ತ । ಆಹ
ಸ್ಥಾಣು ರಾಮೇಲಿಂಗ । ಕಾನಮಿಸುತ ಅಲ್ಲಿ
ನಾನಾ ತೀರ್ಥದಿ ಜ್ಞಾನ । ಸ್ನಾನವ ಮುಗಿಸುತ್ತ ೬೮

ಧಾನುಷ್ಕೋಟಿಗೆ ಮುಂದೆ ಸಾಗಿ । ಸೇತು
ಸ್ನಾನವ ವಿಧ್ಯುಕ್ತವಾಗೀ । ಗೈದು
ಮೀನಾಕ್ಷಿ ಪದದ್ವಯ ಬಾಗಿ । ನದಿ
ಸ್ನಾನ ಕೃತಮಾಲದೊಳಾಗೀ । ಆಹ
ಆ ನಮಿಸುತ ಹರನ ಸಾನುರಾಗದಿ ತಾಮ್ರ
ಪರ್ಣಿಯ ಮೀಯುವ ಮನವ ಮಾಡೆಲೊ ಮನುಜ ೬೯

ತಾಮರ ಪರ್ಣೀಯ ಮಿಂದು । ನವ
ಧಾಮ ತಿರುಪತಿ ಸಮವೆಂದು । ನವ
ನಾಮ ವೈಕುಂಠಾದಿ ನೆನೆದು । ಪೂರ್ಣ
ಕಾಮನ ಸ್ತೋತ್ರವಗೈದು । ಆಹ
ಆ ಮಹಿಮಾ ತೋತಾದ್ರಿ । ಧಾಮನ ನೆನೆಯುತ್ತ
ರೋಮಹರ್ಷಣ ಮಿಂದು । ಕಾಮನಯ್ಯನ ನಮಿಸೋ ೭೦

ನವ ತಿರುಪತಿ

೧. ಶ್ರೀ ವೈಕುಂಠ – ವೈಕುಂಠನಾಯಕ (ಉತ್ಸವರು ಚೋರನಾಥ) ೨. ವಿಜಯಾನಂದ ೩. ಕಾಶೀನಂದ ೪. ಮಾಯಕುತ್ತರ್ ೫. ತೇವಪಿರಾನ್ ೬. ಕೊಳಕ್ಕಾದರ್ ೭. ಮಧುರವಿ ಅಳ್ವಾರ್ ೮. ನಮ್ಮಾಳ್ವಾರ್ ಪೆರುಮಾಳ ೯. ಆದಿನಾಥರ್ ಪೆರುಮಾಳ್

ಪನ್ನಗ ಗುಡಿಯೊಳು ಪೋಗಿ । ಶಿರ
ಚೆನ್ನಾಗಿ ಬಾಗುತ್ತ ಸಾಗಿ । ಮುಂದೆ
ಕನ್ಯಕುವರಿಯ ನೋಡ ಪೋಗಿ । ಶರಧಿ
ರನ್ನ ಸಂಗಮದೊಳು ಮುಳುಗಿ । ಆಹ
ನನ್ನೆಯಿಂವನಧಿಯೋಳ್ । ಕನ್ಯೆರೂಪದಿ ದುರ್ಗೆ
ಯನ್ನೆ ನಮಿಸಿ ಪೋಗು । ಅನ್ನಂತ ಶಯನಕ್ಕೆ ೮೧

ಮುಂದೆ ಸನ್ನಿಹಿತವು ಪುರಿಯ । ಸುಧಿ
ಇಂದ್ರಪುರದಿ ಬಹು ಸದಯ । ಅಹಿ
ಪೇಂದ್ರಾದಿ ವಂದ್ಯನು ಹರಿಯ । ನಮಿಸಿ
ಮುಂದಕೆ ನೀ ಸಾಗೊ ತ್ವರಿಯ । ಆಹ
ಒಂದೆರಡು ದ್ವಾರದಿ । ಸಂದರುಶನ ಕೊಡುವ
ಚೆಂದುಳ್ಳಹಿಶಾಯಿ । ಇಂದಿರೆ ಪತಿ ನಮಿಸು ೮೨

ತೀರ್ಥಾದಿ ಸ್ನಾನವ ಮುಗಿಸೀ । ವಲ್ಕಲ
ಕ್ಷೇತ್ರಾಕ್ಕಾಗಿ ನೀನು ಗಮಿಸೀ । ಸುಪ
ಮಿತ್ರ ಶರಧಿ ಸ್ನಾನ ಮುಗಿಸೀ । ಸೃಷ್ಟಿ
ಕರ್ತೃ ಜನಾರ್ದನ ನಮಿಸಿ । ಆಹ
ನೇತ್ರಾವತಿಯ ಮಿಂದು । ಕ್ಷೇತ್ರ ಧರ್ಮಸ್ಥಳದಿ
ಕೃತ್ತಿವಾಸಗೆ ಬಾಗಿ । ಸ್ತೋತ್ರಾದಿಗಳ ಗೈದು ೮೩

ತಾರಕಾರಿಯ ಗಿರಿಯಲ್ಲಿ । ಕುವರ
ಧಾರಾ ಎಂಬ ನದಿಯಲ್ಲಿ । ಮಿಂದು

ಆರು ಮೊಗನ ಪಾದದಲ್ಲಿ । ಬಿದ್ದು
ಯಾರು ಸಂಪುಟಗ ಹರಿಯಲ್ಲಿ । ಆಹ
ಧಾರಾಕಾರದಿ ಮನ । ಹಾರೈಸಿ ತಪಗೈಯೆ
ಕಾರುಣ್ಯವನೆ ಮಾಳ್ಪ । ನಾರಸಿಂಹಸ್ವಾಮಿ ೭೪

ಹೃದ್ಯಸ್ಥಳದಿ ಕಣ್ವ ತೀರ್ಥ । ಅಲ್ಲೆ
ಸಿದ್ಧವಾಗಿಹ ಶರಧಿತೀರ್ಥ । ಮಿಂದು
ಮಧ್ವಾಚಾರ್ಯರು ಇದ್ದ ಕ್ಷೇತ್ರ । ಉಡುಪಿ
ಅಬ್ಧಿಮೀಯುತ ಮಧ್ವತೀರ್ಥ । ಆಹ
ಶ್ರದ್ಧೆಯಿಂದಲಿ ಮಿಂದು । ಮುದ್ದು ಕೃಷ್ಣನ ನಮಿಸೆ
ಹೃದ್ಯಧಿಷ್ಠಾನದಿ । ಸಿದ್ಧನಾಗುವನಯ್ಯ ೭೫

ಹರಿಹರ ಕ್ಷೇತ್ರವು ಎನಿಸಿ । ಅದುವೆ
ಶಿರಿ ಕುಂಭಾಸಿ ಮೋಕ್ಷದ ಎನಿಸಿ । ಯುಗ
ವೆರಡೆರಡರಲಿ ಪ್ರಸಿದ್ಧೆನಿ ಸೀ । ಅಲ್ಲಿ
ಹರಿಹರೇಶ್ವರರ ನೀ ನಮಿಸಿ । ಆಹ
ತರುವಾಯ ಹೂವಿನ । ಕೆರೆ ಗ್ರಾಮ ಸೇರುತ್ತ
ಗುರುವಾದಿರಾಜರ । ವರ ಜನ್ಮಸ್ಥಳ ನಮಿಸು ೭೬

ಕೋಟಿತೀರ್ಥದಿ ಸ್ನಾನಗೈದು । ಇನ್ನು
ಕೋಟಿಲಿಂಗೋದ್ಭವ ತಿಳಿದು । ಅಲ್ಲೆ
ಕೋಟೀಶ್ವರಗೆ ಪೂಜೆಗೈದು । ಮಧು
ಕೈಟಭಾರಿಯ ಪದನೆನೆದು । ಆಹ
ಖೇಟಪ ಶೇಷ ಲ । ಲಾಟ ನೇತ್ರರು ಇವಗೆ
ಸಾಟಿರಹಿತರೆಂದು । ನೇಟಾಗಿ ನೀ ತಿಳಿದೂ ೭೭

ಸಾರುತ್ತ ಕ್ರೋಡಕ್ಕೆ ಮುಂದೂ । ಅಲ್ಲಿ
ತೀರಥ ಕ್ರೋಡವ ಮಿಂದೂ । ಮತ್ತೆ
ವಾರಾಹಿ ನದಿಯನೆ ಮಿಂದು । ಶಂಕರ್
ನಾರಾಯಣಗೆ ನಮಿಸಿ ನಿಂದು । ಆಹ

ವಾರಾಹಿ ತಟ ತೀರ । ನೂರಾರು ಕ್ಷೇತ್ರವ
ಬಾರಿಬಾರಿಗೆ ಸ್ಮರಿಸಿ । ಸಾರುವುದು ಮುಂದೆ ೭೮

ಹುಲಿಕಲ್ ಗ್ರಾಮಕೆ ನೀನುಸಾಗಿ । ಅಲ್ಲಿ
ಹುಲಿರೂಪ ನೃಹರಿಗೆ ಬಾಗಿ । ದಾರಿ
ಬೆಳೆಸಿ ಭಿಮನ ಕಟ್ಟೆಗ್ಹೋಗಿ । ಅಲ್ಲಿ
ಮೂಲ ಮುನಿವೃಂದಕ್ಕೆ ಬಾಗಿ । ಆಹ
ಬಾಳಾಗಾರದಿ ತುಂಗ । ಜಲದೊಳು ಮೆರೆಯುವ
ಚೆಲುವ ಶ್ರೀ ನರಹರಿ । ಶಿಲೆಯ ವಿಗ್ರಹ ನಮಿಸು ೭೯

ಮೆಚ್ಚಿನ ಮಹಿಷಿಗೆ ಪೋಗಿ । ಅಲ್ಲಿ
ಸ್ವಚ್ಛಾಜಶ್ವತ್ಥಕ್ಕೆ ಬಾಗಿ । ಮತ್ತೆ
ಅರ್ಚನೆ ಸತ್ಯಸಂಧರಿಗಾಗಿ । ಗೈದು
ಹುಚ್ಚರಾಯನ ಪುರಕಾಗಿ । ಆಹ
ನಿಚ್ಚಳ ಮನದಲ್ಲಿ । ಅರ್ಚಿಸೆ ಪ್ರಾಣನೆ
ದೃಚ್ಛಾಲಾಭದಲ್ಲಿ । ಪ್ರೋಚ್ಚನಾಗುತ್ತಲೀ ೮೦

ಹೊನ್ನಾಳಿ ಪುರಕಾ ಗಮಿಸಿ । ವೃಂದಾ
ವನ್ನಾದಿ ಯತಿ ಪದನಮಿಸಿ । ಬಹು
ರನ್ನ ಶ್ರೀನಿವಾಸರ ನೆನಿಸೀ । ವೆಂಕ
ಟನ್ನ ನೋಡಲು ಮನ ಹೊಗಿಸಿ । ಆಹ
ಗಣ್ಯ ಮಾಲೆಕಲ್ಲು । ಚಿಣ್ಣ ತಿರುಪತಿಯೊಳು
ಘನ್ನದಯಾನಿಧೆ । ಯನ್ನ ನೀನಮಿಸುತ್ತ ೮೧

ಶೀಲಮನದಿ ವಿಷ್ಣು ಜಲಧಿ । ಮಿಂದು
ಬೇಲೂರಚೆನ್ನನ ಪದದಿ । ಬಿದ್ದು
'ವಲ್ಲಾದ' ರಂಗನ ಮನದೀ । ನೆನೆದು
ಹೊಳೆಯ ನರಸಿಂಹನ ಪುರದೀ । ಆಹ
ಹೊಳೆಯು ಹೇಮಾವತಿ । ಜಲದಿ ಮೀಯುತಲಿನ್ನು
ಶೀಲ ಶ್ರೀನೃಹರಿಯ । ಕಾಲೀಗೆ ಎರಗುತ್ತ ೮೨

ಸರಸು ಸ್ಫಟಿಕ ಕಾವೇರಿಯ । ಕಪಿಲ
ಸರಿತು ಸೇರ್ವ ತ್ರಿಮಕೂಡಲಿಯ । ಮಿಂದು
ತೀರಸ್ಥ ಗುಂಜಾ ನೃಹರಿಯ । ಅಂದ
ಚರಣಕ್ಕೆ ಬಾಗುತ್ತ ಗುರುವರ್ಯ । ಆಹ
ಶಿರಿ ಶೇಷಚಂದ್ರಿಕಾ । ಚಾರ್ಯರ ನಮಿಸುತ್ತ
ವರ ಅಶ್ವತ್ಥಗಸ್ತೇಶ । ಹರನಿಗೆ ಬಾಗುತ್ತ ೮೩

ಶ್ವೇತಾದ್ರಿಯಲಿ ರಾಜಿಸೂವ । ಬಹು
ಪೂತ ಗಜಕುಂಡದ ಜಲವ । ಮಿಂದು
ಧೌತನಾಗುತ ರಂಗ ಪದವ । ನಮಿಸಿ
ಪಾತಕ ಕಳೆಯುತ ಮುದವ । ಆಹ
ಆತು ಭೂಕೈಲಾಸ । ಖ್ಯಾತ ಕಪಿಲತಟ
ಭೂತನಾಥನ ನತಿಸಿ । ಪ್ರಾರ್ಥಿಸು ಸನ್ಮತಿ ೮೪

ಮರುತನ ಮತವ ಸ್ವೀಕರಿಸಿ । ನಿರತ
ಹರಿಪದದಲಿ ಮನವಿರಿಸಿ । ಸತಿ
ವೆರಿಸಿ ತೀರ್ಥ ಸಂಚರಿಸೀ । ನಿತ್ಯ
ಕರಮ ನಿಪುಣತೆಲುತ್ತರಿಸೀ । ಆಹ
ಹರಿಯೆ ಸರ್ವೋತ್ತಮ । ಸಿರಿವಾಯು ಮೊದಲಾ
ಸುರರು ಕಿಂಕರರೆಂಬ । ವರಜ್ಞಾನ ಸಾರುತ್ತ ೮೫

ಗಾತ್ರ ನಿರ್ಮಲನಾಗಿ ಚರಿಸಿ । ಸತ್
ಪಾತ್ರರ ಸಂಗಡವೆರಸೀ । ಹರಿ
ಸ್ತೋತ್ರಾದಿಯಲಿ ಮನವಿರಿಸಿ । ಕಾ–
ಳತ್ರಾದಿಗಳು ಸಹಕರಿಸೀ । ಆಹ
ಸೂತ್ರಾಂತರಾತ್ಮನ । ಕೀರ್ತನೆಗೈಯುತ
ಯಾತ್ರೆಯ ಚರಿಸಿ ಪ । ರತ್ರವ ಪಡೆಯೋದು ೮೬

ತಂಬೂರಿಯನ್ನೆ ಮೀಟುತ್ತ । ಬಹು
ಸಂಭ್ರಮದೊಳು ಕುಣಿಯುತ್ತ । ನಿನ್ನ

ಡಿಂಬದಭೀಮಾನ ಬಿಡುತಾ । ಜಗ
ದಂಬಾರಮಣ ಪರನೆನುತ । ಆಹ
ಉಂಬುಡುವೊ ಸರ್ವ । ಬಿಂಬ ಮಾಡಿಸೆ ಪ್ರತಿ
ಬಿಂಬಕುಂಟೆಂಬುವ । ಬಿಂಬ ಕ್ರಿಯವ ಸ್ಮರಿಸಿ ೮೭

ಶೃಣ್ವನ್ ಸುಭದ್ರಾಣಿ ರಥಾಂಗ ಪಾಣೇ ಜನ್ಮಾನಿ
ಕರ್ಮಾಣಿ ಚ ಯಾನಿಲೋಕೇ ।
ಗೀತಾನಿ ನಾಮಾನಿ ತದರ್ಥಕಾನಿ
ಗಾಯನ್ವಿಲಜ್ಜೋ ವಿಚರೇದಸಂಗಃ ॥ ಭಾ ಸ್ಕ – ೬ ೨–೩೯

ವಜ್ಜೆ ಮಾಡದೆ ನಿನ್ನ ಗಾತ್ರ । ಅಲ್ಪ
ಗೊಜ್ಜು ಅನ್ನದಲಿ ತೃಪ್ತ । ನಾಗಿ
ಗೆಜ್ಜೆ ನಾದದಿ ಪರಿಚರಿತ । ಗೈ ನಿ–
ರ್ಲಜ್ಜನಾಗೀ ಕುಣಿಯುತ್ತ । ಆಹ
ಅರ್ಜುನ ಸಾರಥಿ । ಸಜ್ಜುಗೊಳಿಸಿರುವಂಥ
ಹೆಜ್ಜೆಹೆಜ್ಜೆಲಿ ಕ್ಷೇತ್ರ । ಸಜ್ಜಾಗಿ ಚರಿಸುತ ೮೮

ನೀಚಾಧಿಷ್ಠಾನದಿ ಹರಿಯ । ನೀನು
ಯಾಚಿಸದಿರು ಬಲು ಖರೆಯ । ಶೈವ್ಯ
ರಾರ್ಚಿತ ತ್ಯಜಿಸುತ ಧರೆಯ । ಚರ್ಸಿ
ಅರ್ಚನೆ ಮಾಡುವ ವಿಧಿಯ । ಆಹ
ಕೀಚಕಾರಿಯ ಭಕ್ತ । ಸೂಚನೆಯೊಳು ಗೈ
ನೀಚೋಚ್ಚತರತಮ । ವಾಚಿಸುತಲಿ ನಿತ್ಯ ೮೯

ಗೋಳಕ ಚಿಂತನೆ ಕ್ರಮದಿ । ಹರಿ
ಆಲಯದೊಳು ವಿಗ್ರಹದಿ । ಹೃ–
ದಾಲಯ ಮೂರ್ತಿಯ ಭರದಿ । ಇಟ್ಟು
ಕೇಳಿಕೊ ವರಗಳ ದೃಢದಿ । ಆಹ
ಶ್ರೀಲೋಲಪದ ಭಕ್ತಿ । ಶೀಲಜ್ಞಾನವ ಬೇಡಿ
ಓಲೈಸಿ ಶ್ರೀಹರಿಯ ಸು । ಖಾಲಯ ಸೇರೊ ನೀ ೯೦

ಕಾಲದೇಶಕೆ ಅನುಗುಣ್ಯ । ವಾದ
ಶೀಲಾಚಾರಾದಿ ಸಂಪನ್ನ । ನಾಗಿ
ಮಾಲೋಲನಾಜ್ಞೆಗಳನ್ನ । ಗೈದು
ಏಳಾಲ ಮಾಡದಲಿನ್ನ । ಆಹ
ಓಲೈಸಿ ಗುರು ಪಾದ । ಮೂಲತತ್ವದ ಮೂಲ
ಆಲಿಸುತ್ತಲಿ ಕರ್ಮ । ಮೂಲವ ಕಳೆಯೋ ನೀ ೯೧

ಸಂತತ ಸ್ಮರಿಸುತ್ತ ಹರಿಯ । ಕರ್ಮ
ಸಂತತಿ ಕಳೆಯೋ ನೀ ತ್ವರ್ಯ । ಕಲಿ
ಸಂತರಣುಪನಿಷತ್ಹರಿಯ । ನಾಮ
ಸ್ಮರಣೆಯ ವಿಧುಪುದು ತಿಳಿಯ । ಆಹ
ಚರಿಸುತ್ತಲೀ ಪರಿ । ಪರಿಯ ಸುಕ್ಷೇತ್ರವ
ಹರಿ ಗುಣಗಣಗಳ । ಮರೆಯಾದೆ ಸ್ಮರಿಸುತ್ತ ೯೨

ಹಠದಿಂದ ಸಾಧನೆ ತೊರೆಯೊ । ನಮ್ಮ
ವಿಠಲನು ಒಲಿದನು ಖರೆಯೊ । ಭಕ್ತಿ
ಪಟುತರ ಹರಿಯಲ್ಲಿ ಪಿಡಿಯೊ । ನೀನು
ಕುಟಿಲ ರಹಿತನಾಗಿ ನೆನೆಯೋ । ಆಹ
ಎಟ ಪಾದಾಂಗುಟನಖ । ಕುಟಕಲುಖರ್ಪರ
ತಟಿನಿಯುದ್ಭವ ಹರ । ಜಟೆಯು ಭೂಷಿತವೆಂದು ೯೩

ಎರಡೇಳು ವಿಧ ಹರಿದ್ವೇಷ । ದಿಂದ
ನಿರತ ದೂರನಾಗೊ ದಾಸ । ಸಿರಿ
ಪರಿಭಕ್ತಿ ನವವಿಧ ತೋಷ । ಗೈದು
ಪರಮನ ಕಂಡು ನಿರ್ದೋಷ । ಆಹ
ಇರಲು ಪರಮಾನಂದ । ಭರಿತನಾಗುತ ನೀನು
ಹರಿ ಪಾದದಲಿ ಭಕುತಿ । ಭರಿತ ಭಾವುಕನಾಗು ೯೪

ತಿಳಿಯೊ ಜೀವನು ಅಸ್ವತಂತ್ರ । ಮತ್ತೆ
ತಿಳಿ ಹರಿ ಸರ್ವಸ್ವತಂತ್ರ । ಇನ್ನು

ತಿಳಿಯೊ, ಪ್ರಮಿತಿ, ಪ್ರವೃತಿ, ಸತ್ತ । ಇವು
ಗಳಿಗೆ ಬಿಂಬನಾಗಿ ನಿರತ । ಆಹ
ಘಳಿಗೆ ಬಿಡದಲೆ ಕಾಲ । ಜಲಜನಾಭನ ಪಾದ
ಜಲಜಕ್ಕೆ ಶಿರಬಾಚಿ । ಕಳೆಯೋ ಈ ಸಂಸ್ಕೃತಿ ೯೫

ಜೀವ ಕತೃತ್ವವ ಮರೆದೂ । ಹರಿ
ಸರ್ವಕರ್ತಾನೆಂದು ತಿಳಿದು । ಕರ್ಮ
ನಿರ್ವಹಿಸುತ ಫಲ ತೊರೆದು । ಪೇಳು
ಸರ್ವವು ಹರಿಗೆಂದು ಒಲಿದು । ಆಹ
ಭಾವಜಪಿತ ಗುರು । ಗೋವಿಂದ ವಿಠಲ ಸ್ವ–
ಭಾವದೊಳಗೆ ತೋರಿ । ಭವವನುತ್ತರಿಸುವ ೯೬

೩೨೧

ಶ್ರೀ ಹರಿಹರೇಶ್ವರನ ಸ್ತೋತ್ರ

ತುಂಗಭದ್ರೆ ಸುತರಂಗಿಣಿ ತೀರಗನ್ಯಾರೇ ಪೇಳಮ್ಮಯ್ಯ ಪ

ಮಂಗಳ ಮಹಿಮ ಶುಭಾಂಗ ಮೂರುತಿ ।
ಶ್ರೀ ಹರಿಹರ ಇವ ಕಾಣಮ್ಮ ಅ.ಪ.

ಬಹು ಕಂಟಕಿ ಆ ಗುಹನ ತಪಸಿಗೆ । ಮೆಚ್ಚಿದ ಹರ ನೋಡಮ್ಮಮ್ಮ ।
ಅಹಿ ಭೂಷಣ ತಾ ವರವನು ಕೊಟ್ಟನು । ಬಹು ಬೇಗನೆ ನೋಡಮ್ಮಮ್ಮ।
ವಿಹಗವಾಹ ಹರಿ ಮತ್ತೆ ರುದ್ರನಿಂ । ಇವನ ಜೇಯ ನೋಡಮ್ಮಮ್ಮ ।
ಮಹಿಯೊಳು ಸುರರಾಹವ ಕೆಡಸುತ । ಬಹು ಹಿಂಸಕ ನೋಡಮ್ಮಮ್ಮ ೧

ಸುರಲೋಕಕು ಈ ಅಸುರನ ಬಾಧೆಯು । ತಟ್ಟಿತು ನೋಡಮ್ಮಮ್ಮ ।
ಸುರ ಭೂಸುರರೆಲ್ಲರು ಮೊರೆಯಿಟ್ಟರು । ಹರಿಯಲಿ ನೋಡಮ್ಮಮ್ಮ ।

ಸಿರಿಯರಸನು ತಾನಭಯವನಿತ್ತವರನು । ಕಳುಹಿದ ನೋಡಮ್ಮಮ್ಮ ।
ಕರುಣಾಕರ ತಾ ಹರಿಹರ ರೂಪದಿ । ದುರುಳನ ತರೆದ ನೋಡಮ್ಮಮ್ಮ ೨

ಕೃತ್ತಿವಾಸ ತಾ ನಿತ್ತ ವರವ ಹರಿ । ಪಾಲಿಸಿದನು ನೋಡಮ್ಮಮ್ಮ ।
ದಿತಿಸುತನಾಯುವು ದಶಶತಕಳೆಯಲು । ವತ್ತಿದ ಕೆಳಗವನಮ್ಮಮ್ಮ ।
ಹಿತದಿಂದಲಿ ತಾ ಭಕುತರ ಪೊರೆಯುವ । ಹರಿಹರನ ನೋಡಮ್ಮಮ್ಮ ।
ದೈತ್ಯನ ಪೆಸರಿಲಿ ಪಾವನವಾಯಿತು । ಈ ಕ್ಷೇತ್ರವು ಕಾಣಮ್ಮಮ್ಮ ೩

ದಕ್ಷಿಣ ಪಾರ್ಶ್ವದಿ ಅಭಯ ಹಸ್ತ । ತ್ರಿಶೂಲ ಧರನ ನೋಡಮ್ಮಮ್ಮ ।
ಅಕ್ಷಿಯ ಮಾನಿಯು ದಕ್ಷಿಣ ಶಿರದಲಿ । ಮೆರೆಯುವನು ನೋಡಮ್ಮಮ್ಮ ।
ದಕ್ಷಸುತೆಯು ತಾ ವಿರೂಪಾಕ್ಷನ । ಸೇವಿಪಳೂ ನೋಡಮ್ಮಮ್ಮ ।
ಪಕ್ಷಿವಾಹಗೆ ತಾನರ ಮೈಯ್ಯಾದನು । ತ್ರ್ಯಕ್ಷನು ಕಾಣಮ್ಮಮ್ಮ ೪

ವಾಮಾಂಕದಿ ನಿಂದಿಹ ಚಕ್ರ ಕಂಬು । ಧರನಾ ನೋಡಮ್ಮಮ್ಮ
ಲಕ್ಷ್ಮೀವನಿತೆಯು ಕಾಮನ ಜನಕನ । ಸೇವಿಪಳೂ ನೋಡಮ್ಮಮ್ಮ
ಶುಮಲಾಂಗ ವನಮಾಲೆಗಳನು । ಧರಿಸಿಹ ನೋಡಮ್ಮಮ್ಮ ।
ಸಾಮಸನ್ನುತ ಗುಣಧಾಮನ ಲೀಲೆ । ಇದೆಲ್ಲವು ಕಾಣಮ್ಮಮ್ಮ ೫

ಕ್ರೋಶ ಪಂಚ ನಾಲ್ಕಾರದಿ ಮೀಸಲು । ಸುಕ್ಷೇತ್ರವ ನೋಡಮ್ಮಮ್ಮ ।
ಭಾಸಿಸುವವು ಇಲ್ಲೆಕಾದಶ ವರ । ತೀರ್ಥಂಗಳು ನೋಡಮ್ಮಮ್ಮ ।
ಈ ಸುಕ್ಷೇತ್ರವು ಆ ಮಹಕಾಶಿಗೆ । ಸಮವೆನಿಸಿದೆ ನೋಡಮ್ಮಮ್ಮ ।
ಅಸಮ ಮಹಿಮ ಹರಿ ಅಸುರಗೆ ಕೊಟ್ಟನು । ಈ ಪರಿವರ ಕಾಣಮ್ಮಮ ।೬।

ಆದುದೀ ಕೃತಿ ಮಹ ಕೃತ ಯುಗದೊಳು । ಕೇಳಮ್ಮಮ್ಮ ।
ಬಾದರಾಯಣರುಸಿರಿದ ಸ್ಕಾಂದ । ಪುರಾಣವ ನೋಡಮ್ಮಮ್ಮ ।
ಶ್ರೀದ ಮಿತ್ರನಿಗೂ ವಿಧಿ ಜನಕನಿಗೂ । ಭೇದವೆ ಸರಿ ಕೇಳಮ್ಮಮ್ಮ ಮೋದಮಯ
ಗುರು ಗೋವಿಂದ ವಿಠಲನ । ಲೀಲೆಗಳಿವು ಕಾಣಮ್ಮಮ್ಮ ೭

೩೨೨

ಶೂರ್ಪಾಲಯ ಕ್ಷೇತ್ರದ ನರಹರಿ ಸ್ತೋತ್ರ

(ಕೃಷ್ಣಾತೀರ)

ನರಹರೀ ಪಾಹಿ । ಮರನೂರ ನರಹರೀ ಪ

ನರಹರಿ ವಂದಿಪೆ ನಿನ್ನ । ಪಾದ
ಸರಸೀರುಹಕೆ ನೀನು ಎನ್ನ । ಆಹ
ಪರಿ ಪರಿ ಭವಣೆಯ । ಪರಿಹರಿಸುತ ಮುನ್ನ
ವರ ವೈರಾಗ್ಯವನಿತ್ತು । ಕರುಣೀಸೊ ಸಂಪನ್ನ ಅ.ಪ.

ಕೃಷ್ಣಾತೀರಗ ಲಕುಮೀಶ । ನಿನ್ನ
ತೃಷ್ಣೆಯೊಳಿಡು ಎನ್ನ ಅನಿಶ । ದಿವ್ಯ
ದೃಷ್ಟಿಯ ಪಾಲೀಸೋ ಶ್ರೀಶ । ಬಲು
ಹೃಷ್ಟನ್ನ ಮಾಡೊ ಸರ್ವೇಶ । ಆಹ
ಜಿಷ್ಣು ಸಖನೆ ಸತಿ । ಕೃಷ್ಣೆಗಕ್ಷಯ ವಸನ
ಸೃಷ್ಟಿಗಿತ್ತವ ಹರಿ । ಕೃಷ್ಣನೆ ಸಲಹೆನ್ನ ೧

ಕೆಂಗಣ್ಣ ಮೀನ ನೀನಾದೆ । ಭಾರಿ
ನಗವನು ಬೆನ್ನಿಲ್ಲಿ ಪೊತ್ತೆ । ಮಣ್ಣ
ನಗಿದು ಚೋರನ ನೀನು ಗೆದ್ದೆ । ಪುಟ್ಟ
ಮಗುವಿಗಾಗವತಾರ ಮಾಡ್ದೆ । ಆಹ
ಭೃಗುರಾಮ ರಾಮನೆ । ನಗಧರ ಕೃಷ್ಣನೆ
ಸೊಗಸು ಮಾತಿನ ಬುದ್ಧ । ಅಘಹರ ಕಲ್ಕಿಯೆ ೨

ಭೃಗು ಕುಲೋದ್ಭವ ರಾಮ ನಿನ್ನ । ಚೆಲ್ವ
ದೃಗು ಜನಿತ ಸುಖ ಜಲ ಕಣ್ಣ । ಬಿಂದು
ಯುಗಳವು ಬೀಳೆ ಪಾವನ್ನ । ವೃಕ್ಷ

ಯುಗಳೋದಯವಾಯ್ತು ಮುನ್ನ । ಆಹ
ಅಗಣಿತ ಮಹಿಮ । ಅಶ್ವತ್ಥ ಸನ್ನಿಹಿತನೆ
ನಿಗಮ ವೇದ್ಯನೆ ಸರ್ವ । ಜಗದೀಶ ಸಲಹೆನ್ನ ೩

ಶೂಲಿಯಿಂದೊಡಗೂಡಿ ರಾಮ । ಚಂದ್ರ
ಪಾಲಿಸುತಿಹ ಸಾರ್ವಭೌಮ । ಸುಜ
ನಾಳಿ ಪಾಪಾರಣ್ಯ ಧೂಮ । ಕೇತು
ಓಲೈಪ ಜನರಘ ಭಸ್ಮ । ಆಹ
ಲೀಲೆಯಿಂದಲಿ ಗೈವ । ಆಲಯವಿದು ಶೂರ
ಪಾಲೀಯ ಕ್ಷೇತ್ರದಿ । ಶ್ರೀಲೋಲ ನರಹರಿ ೪

ನಡು ನದಿಯೋಳು ಕೋಟೇಶ । ಮತ್ತೆ
ಪಡುವಲಯದೋಳು ಕಂಕೇಶ । ಇನ್ನು
ಬಡಗ ನರಹರಿ ಬಳಿ ಬೈಲೇಶ । ಆಹ
ರೊಡಗೂಡಿ ನೆಲಸೀಹ । ಕಡು ಮುದ್ದು ರೂಪದಿ
ದೃಢ ಭಕ್ತನೆನಿಸೀಹ । ಮೃಡನಿಂದ ಪೂಜಿತ ೫

ಅಜಪಿತ ಪದಜಳು ಎನಿಪ । ಮತ್ತೆ
ಅಜಾಂಡ ಕಟಹದಿಂ ಬರ್ಪ । ಇನ್ನು
ಅಜಸುತ ಶಿರದಲಿ ಧರಿಪ । ಸಗ
ರಜರ ಪಾಪವನ್ನು ಹರಿಪ । ಆಹ
ಮರುಖಬಾಪು ಗಂಗೆಯ । ನಿಜ ಪಾಪ ಕಳೆಯಲು
ಅಜಸುತ ನಾಜ್ಞೆಯಿಂ । ಬಿಜಯಿಸಿದಳು ಇಲ್ಲಿ ೬

ಪರರಘಗಳ ಹೊತ್ತು ಗಂಗೆ । ಬಂದು
ಹರ ಪೇಳಿದಂಥ ದ್ವಿಜಂಗೆ । ಶೂರ್ಪ
ವರ ವಾಯು ನ್ವಿತ್ತಳವಂಗೆ । ಪಾಪ
ಹೊರದೂಡಿದಳು ಮಂಗಳಾಂಗೆ । ಆಹ
ಗುರುಕನ್ಯಾಗತನಾಗೆ । ಸರಿದ್ವರ ಕೃಷ್ಣೇಲಿ
ಬೆರೆಯುತ ಸುರ ನದಿ । ಹರಿಪಳು ಜನರಘ ೭

ಮಧ್ವಾರ್ಯ ಸಂತತಿ ಜಾತ । ಗುರು
ವಿದ್ಯಾಧೀಶರು ಇಲ್ಲಿ ಖ್ಯಾತ । ದ್ವಾದ
ಶಬ್ದ ಪರಿಯಂತನುಷ್ಠಾತ । ಪ್ರಾಣ
ಮುದ್ದು ಪ್ರತಿಮೆ ಪ್ರತಿಷ್ಠೀತ । ಆಹ
ಶುದ್ಧ ದ್ವಾದಶಿ ದಿನ । ಸದ್ವೈಷ್ಣವ ಲಕ್ಷರ್ಗೆ
ವಿಧ್ಯುಕ್ತ ಭೋಜನ । ಶ್ರದ್ಧೆಯಿಂದಲಿ ಗೈದರ್ ೮

ನಂದ ತೀರ್ಥರ ಶಿಷ್ಯನೆನಿಸಿ । ಕೃಷ್ಣೆ
ಮಿಂದು ತಾ ಭಕ್ತಿಯವೆರಸಿ । ನಂದ
ಕಂದನೆ ಪರ ತತ್ವವೆನಿಸಿ । ಸ್ತುತಿ
ಸ್ಕಂದೋಕ್ತ ಮಹಿಮೆಯ ಸ್ಮರಿಸಿ । ಆಹ
ಇಂದುಪ ಗುರು ಗೋ । ವಿಂದ ವಿಠಲನ
ಹೊಂದಿ ಭಜಿಪರ್ಗ । ಬಂಧನವೆಲ್ಲಿಹದೋ ೯

೩೨೩

ಶ್ರೀ ಬದರಿ

ಬದರೀಯಾ । ಯಾತ್ರೆಯಾ ಮಾಡಿ । ಬದರೀಯಾ ಪ

ಬದರಿಯ ಯಾತ್ರೆಯ ಮಾಡಿ । ನಿಮ್ಮ
ಮುದ ಶಾಶ್ವತವನ್ನೆ ಬೇಡಿ । ಆಹ
ಸದಮಲ ದೇಹದಾಲಯವೆ । ಸದಾಶ್ರಿತ್ಥಿಮಾಲಯ
ಹೃದಯ ಮಧ್ಯದಲೀಹ । ಬದರೀನಾಥನ ನೋಡೀ ಅ.ಪ.

ಅಪರಿಮಿತದ ಪುಣ್ಯ ಗಳಿಸೀ । ತತ್ವಾ
ದಿಪರ ಒಲಿಮೆ ಸಂಗ್ರಹಿಸೀ । ಕರ್ಮ
ನಿಪುಣತೆಯಿಂದ ಉತ್ತರಿಸೀ । ಮಧ್ವ
ಸುಪಥ ದಾಸತ್ವವ ವಹಿಸೀ । ಆಹ
ವಿಪುಲ ದೇಹದಿ ಶ್ವೇತ । ದ್ವೀಪಾದ್ಯಾಲಯಗಳ
ಸುಪದ ತೀರ್ಥವು ಸ । ರಿತ್ತವರಾದಿ ಚಿಂತಿಸಿ ೧

ತನುಮನ ಧನಗಳಾಶೆಯ । ತೊರೆದು
ಮನ ಆದಿಕರಣಗಳ್ಹರಿಯ । ಪಾದ
ವನಜದಲ್ಲಿಡೆ ಅದು ಅಭಯ । ಸುದತಿ
ಮಣಿ ಸಹ ಪೋಗೋದೆ ಹೃದಯ । ಆಹ
ವನ ಭುವನ ಚರಿಸಿ ಸತ್ವಾ । ವನ ಕ್ಷೇತ್ರಗಳ
ಮಣಿದು ಸರ್ವತೀರ್ಥ । ಸ್ನಾನಾದಿ ಗೈಯುತ ೨

ಸುರ ನದಿಯನು ನಾಡಿ ಇಡೆಯೊಳ್ । ಮತ್ತೆ
ವರ ಸಿಂಧು ಸರಿತವ ಹಸ್ತಿಣಿಯೋಳ್ । ಇನ್ನು
ಸರಸ್ವತಿಯನು ಸುಷುಮನದೋಳ್ । ಆ
ತರಣಿಜೆಯನು ಪಿಂಗಳದೊಳ್ । ಆಹ
ಹರಿರೂಪ ಮಾಧವ । ಕ್ಷೀರಾಬ್ಧಿಶಾಯಿಯ
ವರ ಪದ್ಮನಾಭನ । ಸಿರಿ ಕೃಷ್ಣನ ನೆನೆದು ೩

ವಾರುಣಿಯೊಳು ಗೋದಾವರಿಯ । ನೀನು
ಸ್ಮರಿಸುತ್ತ ಕುಹುವೆ ನರ್ಮದೆಯ ಮುಂದೆ
ವರನಂದ ನಾಡೀಲಿ ಕೃಷ್ಣೆಯ । ಬಹು
ಮರುಗುವಲ್ಲಿ ಭೀಮರಥಿಯ । ಆಹ
ನಾರಾಯಣ ವಿಷ್ಣು । ಶೌರಿ ಪಾಂಡುರಂಗ
ರಾರಾಧನೆಯ ಗೈದು । ತೋರುತ ಮುದವನು ೪

ಶಾರದ ನಾಡೀಲಿ ಗಂಡಕೀ ಮತ್ತೆ
ಚಾರು ಲಂಬುಶಿಖಿ ಗೋಮತಿ । ಆ ಗಾಂ–
ಧಾರಿಯೊಳಗೆ ಮಾರುಧೃತಿ । ನೆನೆ
ಚಾರು ಶಂಕಿನಿ ನಾಡಿ ತಪತೀ । ಆಹ
ವೀರ ರಾಮಾ ಮಧು । ವೈರಿಯು ಶ್ರೀರಂಗ
ನಾರಾಯಣನ ರೂಪ । ಸಾರುತ ತಪತೀಲಿ ೫

ಭರತ ವರ್ಷದಿ ಇಹ ಸರಿತ । ನಾಮೋ
ಚ್ಚರಣ ಅಸಾಧ್ಯವನಂತ । ಮೂರು

ವರೆ ಕೋಟಿ ದೇಹಾದಿ ಅಂತ । ತೀರ್ಥ
ನರ ರೋಮ ಕೂಪದೊಳ್ಗತ । ಆಹ
ಸರುವ ತೀರಥರಾಜ । ಸಿರಿ ಮಾಧವನ ನೆನೆಯೆ
ಪರಿಹರಿಸುತ ಪಾಪ ಸರುವಾಭೀಷ್ಟವ ನೀವ ೬

ಸ್ತವರನದಲೀಪರಿ ಮಿಂದು । ದೇಹ
ಪವಿತರವಾಯಿತು ಎಂದು । ಕ್ಷೇತ್ರ
ಸರ್ವವ ಸ್ತುತಿಸುತ ಮುಂದೆ । ಪೋಗೆ
ಭವರಹಿತ ಹರಿದ್ವಾರ ಅಂದು । ಆಹ
ಭುವನ ಪಾವನ ಗಂಗಾ । ಪ್ರವಹಮೀಯುತ ಮತ್ತೆ
ಭವಹರ ಹರಿನಾಮ । ಶ್ರವಣ ಮನನಗೈದೂ ೭

ಹೃಷೀಕೇಶವೆ ಆದಿ ಬದರಿ । ಮುಂದೆ
ನುಸುಳಿ ಪೋಗಲು ವೃದ್ಧ ಬದರಿ । ವನ
ವೆಸೆವ ತಪಕೆ ಭಾವಿ ಬದರಿ । ಪಾಂಡು
ಕೇಶ್ವರವೇ ಯೋಗ ಬದರಿ । ಆಹ
ಎಸೆವ ಮನಸು ಬುದ್ಧಿ । ಶಶಿ ಸೂರ್ಯ ಪ್ರಭೆ ನೇತ್ರ
ಎಸೆವೊ ಲಲಾಟದಿ । ಹೃದಯ ದೊಳ್ವಿಕಾಲ ೮

ಅಗೊ ಅಲ್ಲಿ ಕಾಂಬುದು ಹೇಮ । ಮಯ
ಸುಗೋಪುರವು ಹರಿ ಧಾಮ । ಕಂಡು
ನೀಗೊ ನೀ ದೇಹದ ಶ್ರಮ । ಓಡಿ
ಪಂಚ ರೂಪಗಳನೆ ತಂದು । ಆಹ
ಪಂಚ ನಾಡಿಯ ಮಧ್ಯ । ಮಿಂಚಿಪ ಗೃಹದಿ ವಿ-
ರಂಚಿ ಪಿತನ ನೋಡಿ । ಸಂಚಿತಾದಿಯ ಕಳೆ ೯

ಬದರಿನಾಥನ ದಿವ್ಯ ರೂಪ । ತಂದು
ಹೃದಯ ಬಿಂಬನಲ್ಲಿ ನೋಳ್ಪ । ಬಲು
ಮುದವ ಪೊಂದಿದವನೆ ಭೂಪ । ಸಾಧ್ಯ
ವಿದಹುದೆಲೊ ಒಲಿದರೆ ಶ್ರೀಪ । ಆಹ

ಮಧುಸೂದನ ಗುರು । ಗೋವಿಂದ ವಿಠಲನ್ನ
ಹೃದಯ ಕಮಲ ಮಧ್ಯ । ಮುದದಲರ್ಚಿಸುತಲಿ ೧೦

೩೨೪

ತೊರವಿ ನರಹರಿ ಸ್ತೋತ್ರ

ಹರಿಯು ನಿಂದಿಹ ನೋಡೀ । ಭೂತಳದಿ ತೊರವಿಲಿ
ಹರಿಯು ಇಂದಿರೆಗೂಡಿ । ಒಡವೆರೆಸಿ ಸರ್ವದ
ಶರಣ ಜನರೊಡನಾಡೀ । ಸುಖವೀವ ನೋಡೀ ಪ

ಹರಿಯೆ ಪರನೆಂಧ್ಹೇಳ್ವ ಬಾಲಕೆ
ದುರುಳ ಕಾಶ್ಯಪು ಪರಿಪರೀಯಲಿ
ಕರ ಕೆರೆಯ ಗೊಡಲಾಗ ನರಹರಿ
ತರುಳನುದ್ಧರ ಗೈದ ಶ್ರೀಹರಿ ಅ.ಪ.

ಉದರ ಪೋಷಕ ಬೋಧಾ ಗುರುಶಂಡಮರ್ಕರು
ಮುದದಿ ತಿಳುಹಲ ಗಾಧ । ಸರಿಸುತ್ತ ದೂರದಿ
ಹದನ ಪೇಳಿದ ವೇದ । ಪ್ರತಿಪಾದ್ಯ ಶ್ರೀಹರಿ
ವಿಧ ವಿಧವು ಕಾರ್ಯಗಾಧ । ಸೃಷ್ಟಿ ಲಯ ಮೊದಲಾದ
ಅದುಭೂತವು ಎನೆ ಕಾರ್ಯ ಬಹಳವ
ಗೈದು ಲೀಲೆಯ ತೋರಿ ಜಗದೊಳು
ಮುದವ ಬೀರುತ ಸಾಧು ಸಜ್ಜನ
ಮೋದ ಬಡಿಸುವೆ ನೆಂದು ಪೇಳಿದ ೧

ಕರಿಯಪದತಳ ತುಳಸೀ । ಪ್ರಹ್ಲಾದ ಬಾಲನ
ಓರಿದು ಶರಧಿಯೊಳಿರಿಸೀ । ಮತ್ತವನು ಉಳಿದಿರೆ
ಧರೆಯ ಗುಹೆಯೊಳಗಿರಿಸೀ । ಮೇಲ್ಕಿಲೆಯ ಮುಚ್ಚಲು
ಮರಳಿ ಬಂದನು ಜೀವಿಸೀ । ಹರಿಯ ವಿಶ್ವಾಸೀ

ತರಳನಿಗೆ ಅಹಿಯಿಂದ ಕಚ್ಚಿಸಿ
ಕರುಣಿ ಮಾತೆಯು ವಿಷವನೂಡಿಸೆ
ಗರಸಹೋದರಿ ಪೊರೆಯಲವನನು
ತರಳನಿಂಧ್ಧರಿವರನುಯೆಂದ ೨

ಬಂದ ಚಿಮ್ಮಲಿಗಿಂದ । ಭಕುತಂಗೆ ಪೇಳುತ
ನಂದ ಹುಲ್ಲೆಸೆಯಂದ । ಅದು ಹತ್ತಿ ಉಳಿಯಲು
ನಿಂದಿಹೆ ತಾ ನಲ್ಲೆಂದ । ಅದರಂತೆ ಗೈಯಲು
ನಿಂದ ತೋರವಿಲಿ ಛಂದ । ಹರಿಯು ಬಹು ಆನಂದ
ನಂದ ನಂದನನಾದ ಗುರು ಗೋ–
ವಿಂದ ವಿಠಲನ್ನಕೇಸರಿಯು
ಚಂದದಿಂ ದೂರ್ವಾಸ ಪೂಜಿತ
ನಂದ ಕಂದ ಮುಕುಂದ ಶ್ರೀಹರಿ ೩

ದೀರ್ಘ ಕೀರ್ತನೆಗಳು

೩೨೫

ಗಜೇಂದ್ರ ಮೋಕ್ಷ (ಶ್ರೀಮದ್ಭಾಗವತೋಕ್ತದಂತೆ)

ಆನೆಯು ಬಂದಿತು ಕಾಸಾರಕ್ಕೆ । ಶಾಪದ ಭೋಗಕ್ಕೆ
ಆನೆ ಹೆಣ್ಣು ಮರಿಯಾನೆಗಳೊಂದಿಗೆ
ಕಾನನದೊಳಗಿಹ ನೀರನು ಹುಡುಕುತ ಅ.ಪ

ಮೌನವ್ರತದಿಂಧ್ಧರಿ ಆರಾಧನೆಯಲ್ಲಿ । ಇರುತಿಹ ನೃಪನಲ್ಲಿ
ಮೌನಿ ಕುಂಭೋಧ್ಭವ ಬಂದನು ಅಲ್ಲಿ । ಅರ್ಹಣವಿಲ್ಲಲ್ಲಿ
ಧ್ಯಾನದೊಳಿರುತಿಹ । ಮಾನವೇಂದ್ರನಿಗೆ
ಆನೆಯ ಜನ್ಮವು । ಬರಲೆಂಧ್ಧೋದನು ೧

ಕ್ಷೀರಸಾಗರ ಆವೃತ್ತ ಮಧ್ಯದಲ್ಲಿ । ಗಿರಿ ತ್ರಿಕೂಟದಲ್ಲಿ
ಮೂರು ಶೃಂಗಗಳು ತಾಪ್ಯಾಯಸವಲ್ಲಿ । ಕನಕವು ಮತ್ತಲ್ಲಿ
ಮೇರುವಿನಂದದಿ ರಾರಾಜಿಸುತಲಿ
ಆರೆರಡು ಎರಡ್ಯೋಜನ ವಿಸ್ತೃತ ೨

ಪಾರಿಜಾತಾಂಬೋಜವು ಶ್ರೀ ತುಲಸೀ । ಮಲ್ಲೆ ಜಾಜೀ ಅತಸೀ
ಕೈರವ ನೀಲೋತ್ಪಲ ಸುಮ ಭಾಸೀ । ಆರಾಮ ವಿಲಾಸೀ
ಚಾರುತರವು ಸುಮ ಗುಲ್ಮ ದ್ರುಮಂಗಳು
ರಾರಾಜಿಸುವುದು ಕ್ರೀಡಾಸ್ಪದವೆನೆ ૩

ಸಿದ್ಧ ಚಾರಣರು ಸುರಗಂಧರ್ವರು । ಕಿನ್ನರ ಮಹೋರಗರು
ವಿಧ್ಯಾಧರ ನರ್ತಕಿ ಅಪ್ಸರೆಯರು । ಅಲ್ಲಿ ಗುಹಾಶ್ರಿತರು
ಹೃದ್ಯದಿ ಮಾಳ್ಪ ಸುಗೀತ ಧನಿತ ಗಜ ।
ಶಬ್ದವೆಂದು ಆಮರ್ಷಿತ ಕೇಸರಿ ೪

ಸರಿತು ಪ್ರವಹ ನಿರ್ಮಲ ಸರಸುಗಳಲ್ಲಿ । ಸುರರಂಗನೆರಲ್ಲ
ಪರಿಪರಿಯಲಿ ಮಜ್ಜನ ಚರಿಸುವಲ್ಲಿ । ಪೂಸಿತ ಗಂಧಗಳಲ್ಲಿ
ಸುರಭಿಯ ಮರುತನು ಪಸರಿಸಿ ದಶದಿಶ
ಸುರ ಪೆಣ್ಣುಗಳಿಹ ಕುರುಹನೆ ಸೂಚಿಪ ೫

ವರುಣೋದ್ಯಾನವು ರಾಜಿಪುದಲ್ಲಿ । ಋತುಮನ್ನಾಮದಲಿ
ಸರುವಾಲಂಕೃತ ಪುಷ್ಪಗಳಿಂದಲ್ಲಿ । ಸುರ ಸೇವಿತವಲ್ಲಿ
ಪರಿಪರಿ ತರುಗಳು ಗಗನವ ಚುಂಬಿಸಿ
ಪರಮಾನಂದವ ನೋಳ್ಪರಿಗೇಯುತ ೬

ಬಿಲ್ವಕಪಿತ್ಥವು ಪನಸಗಳಾಮ್ರ । ಭಲ್ಲಾತಕಿ ಜಂಭೀರ
ಚೆಲ್ವ ಕದಳಿ ತಮಾಲವು ಕರ್ಪೂರ । ಪಾಟಲ ಖರ್ಜೂರ
ಸಾಲ್ವ ತಾಲ ಔದುಂಬರ ಪ್ಲಕ್ಷವು
ನೆಲ್ಲೆ ಬದರಿ ವಟ ಕಿಂಶುಕ ರಾಜಿತ ೭

ವನರಾಜ ಸೇವಿತ ಮಧುಕರರಿಂದ । ಪರಿಪರಿ ಪಕ್ಷಿಗಳಿಂದ
ಗಿಣಿಯು ಹಂಸ ಕಾರಂಡವು ಕೂಜಿತ
ಮೀನ ಕಮಠ ಸಂಚಾರಿತ ಜಲವಿರೆ ೮

ಗಿರಿಯು ತತ್ಕಾನವಾಶ್ರಿತ ಗಜವು । ಹೆಣ್ಣೊಡ ಸಂಚರವು
ಕರಿಯ ವಾಸನೆಯಿಂದದರ ಬರವು । ಅರಿಯುತಿತರ ಮೃಗವು
ಹರಿಯು ವ್ಯಾಘ್ರ ಶಾರ್ದೂಲವು ಖಡ್ಗವು
ಉರಗ ದುಷ್ಟಮೃಗ ಭಯದಾವ್ರವಣವು ೯

ಅನ್ಯವರಾಹ ಮರ್ಕಟ ವೃಷ ಶಶವು । ಮಹಿಷರ್ಕ್ಷ ವೃಕವು
ಮಾನ್ಯ ಗೋಕುಲ ಶಲ್ಯ ಹರಿಣಾವು । ಈ ಪರಿ ಮೃಗ ಅಲ್ಪವು
ವನ್ಯ ಸಮೂಹವು ಹರಿಭಯ ವಿರಹಿತ
ಮನ್ನ ಬಂದ ಪರಿ ಕರಿ ಕರುಣದಿ ಚರ ೧೦

ಬಿಸಲೀನ ಬೇಗೆಯಲಿಂದಲಿ ತಪ್ತ । ಯೂಥಪ ಪರಿವೃತ
ವಸರುತ್ತಿಹ ಮದಸಹ ಕಲಭಾವೃತ । ಬರುತಿರೆ ಗಿರಿ ಕಂಪಿತ
ಮೂಸುತ ಪಂಕಜ ರಸ ವಾಸನೆಗಳ
ಪುಷ್ಕರ ಬಲಿ ಇಹದರಿತು ಬಂದಿತು ೧೧

ಸರಸೀಯೊಳಿಳಿಯುತ ಯೂಥಪ ಛಂದ । ಅವಗಾಹನದಿಂದ
ನೀರನ ಮೃತ ಸಮ ಸೊಂಡಲಿನಿಂದ । ಕುಡಿದುದೆ ಆನಂದ
ವಾರಣ ಶ್ರಮವ ನಿವಾರಿಸಿ ಜಲವನು
ತೂರಿ ಕರೇಣುಗಳೊಡನಾ ಕ್ರೀಡವು ೧೨

ಆನಂದ ವಾರಿಧಿಲಿ ಮದವಾರಣವು । ಇರೆ ದೈವ ಚೋದಿತವು
ಆನೇಯ ಕಾಲ್ಪಿಡಿದೆಳೆಯಿತು ನಕ್ರಾವು । ವಿಕ್ರಮದಲಿ ಗಜವು
ಏನೊಂದು ಸಾಹಸ ಪರಿವಾರ ಸಹಕೃತ
ಕಾಣಿಸಧ್ಯೋಯಿತು ನೆಗಳಿನ ಬಲಕೆ ೧೩

ಅತ್ತ ನೆಗಳೆಳೆಯುವುದು ನೀರಲ್ಲಿ । ಗಜವು ಮೇಲಲ್ಲಿ
ಇತ್ತಂಡದಿಂದ ಕಾದುತ್ತಿರುವಲ್ಲಿ । ಸಾಸಿರೊರ್ಷವಲ್ಲಿ
ಅತ್ತ ಸರಿದು ಕರಿ ಶಕ್ತಿಯು ಕುಗ್ಗಿತು
ಇತ್ತ ಮಡುವಲಿಹ ಜಲಚರ ತಲ್ಲಣ ೧೪

ಒದಗೀತು ಸಂಕಟ ಅಪರಿಹಾರ್ಯ । ವ್ರಯ ವಾಯತು ವೀರ್ಯ
ವಿಧಿತವಾಯಿತು ಪರಿವಾರದ ಕಾರ್ಯ । ಬಲುಪರಿ ನಿರ್ವೀರ್ಯ
ಅದುಭುತ ಹರಿದಯ ಪ್ರಾಕ್ ಜನ್ಮ ಸ್ಮೃತಿ
ಒದಗಿ ನಾರಾಯಣ ಹರಿ ಶರಣೆಂದನು ೧೫

ಆರಲ್ಲಿ ಈ ಜಗವು ಇರುವೋದು । ಲಯದಲು ಹೊಗುವೋದು
ಆರೆಂದಲೆ ಜಗವೆಲ್ಲ ಪುಟ್ಟುವುದು । ಸತ್ತಾದಿ ಪಡೆಯುವುದು
ಕಾರಣ ಮೂಲ ಪರೇಶ ಪುರುಷ ವಿಭು
ನಾರಾಯಣ ಹರಿ ಶರಣ್ಯ ಪಾಹಿ ೧೬

ನಿನ್ನ ಮಹಿಮೆಯಲಿ ನೀ ಪ್ರತಿಷ್ಠಿತನು । ನಿನಗೆ ನೀ ಕಾರಣನು
ನಿನ್ನ ಇಚ್ಛೆಯಿಂದಲೆ ಜಗವೆಲ್ಲವನು । ಉದಕದಲಿಡುವವನು
ಭಿನ್ನ ಜಗಕೆ ಅವಿಲುಪ್ತ ಜ್ಞಾನಿ ಜಗ
ನಿನ್ನಿಂದೀಕ್ಷಿತ ಸಾಕ್ಷಿರೂಪ ನಮೋ ೧೭

ಭೂತಾದಿಕಾರಣ ಕಾರ್ಯಗಳೆಲ್ಲ । ಮಹದಾದಿಗಳೆಲ್ಲ
ವಾತ ಸಲಿಲಾತ್ಮಕ ತಮ ಆವೃತವೆಲ್ಲ । ದುರ್ಜ್ಞೇಯವು ಬಹಳ
ದಾತ ಪರಾತ್ಪರ ಮೀರುತ ತಮವನು
ದ್ಯೋತ ಜ್ಯೋತಿ ವಿಭು ಹರಿಗಾ ನಮಿಸುವೆ ೧೮

ಸೃಷ್ಟಾ್ಯದೃಷ್ಟರ ಕಾರಣ ಕರ್ತ । ನಟರಂದದಿ ನಾಟ್ಯ
ಶಿಷ್ಟಸಾಧುಗಳ್ ತವಪದ ಶತಪತ್ರ । ನೋಡಲು ಅಸಮರ್ಥ
ಕಷ್ಟ ಕೇಶ ಹರ ಭಕ್ತಾಭೀಷ್ಟದ
ಹೃಷ್ಟ ಪುಷ್ಟ ಅನಿದಿಷ್ಟ ನಮೊ ನಮೋ ೧೯

ರೂಪಾವು ನಾಮ ವಿಹೀನನೆ ದೇವ । ಜನ್ಮ ಕರ್ಮ ಅಭಾವ
ರೂಪಂಗಳ ಧರಿಸೂವ ಸ್ವಭಾವ । ಲೋಕಾನುಗ್ರಹ ಭಾವ
ಹೇ ಪರೇಶ ಹರಿ ಅಪ್ರಮೇಯ ಬಹು
ರೂಪ ಅರೂಪನೆ ಆಶ್ಚರ್ಯನೆ ನಮೊ ೨೦

ಚಿತ್ತಾವು ಮನವಚನಕ್ಕತಿ ದೂರ । ಸ್ವಪ್ರಭೆ ಸಾಕಾರ
ಸತ್ವವು ನೈಷ್ಕರ್ಮ್ಯಗಳ ದ್ವಾರ । ಪ್ರಾಪ್ಯ ಭಕ್ತಿದ್ವಾರ
ಚಿತ್ತವಿಸೆನ್ನಯ ಬಿನ್ನಪ ಶ್ರೀ ಹರಿ
ಮುಕ್ತಿ ನಾಥ ನಿರ್ವಾಣ ಸುಖಪ್ರದ ೨೧

ಸರ್ವರೂಪಾಯ ಸೂಶಾಂತಾಯ । ಘೋರ ಸುಮೂಢಾಯ
ನಿರ್ವಿಶೇಷಾಭಿಧನೆ ಸಾಮ್ಯಾಯ । ಸುಜ್ಞಾನ ಘ ನಾಯ
ದುರ್ವಿಭಾವ್ಯ ಗುಣ ಕರ್ಮಣೆ ಸಾಕ್ಷಿಣೆ
ಸರ್ವಕ್ಷೇತ್ರವಿದ್ದಧ್ಯಕ್ಷನೆ ಪಾಹಿ ೨೨

ಸರ್ವೇಂದ್ರಿಯ ಗುಣಕಾರ್ಯಂಗಳ ದ್ರಷ್ಟ । ಸರ್ವ ಭೋದ ಚೇಷ್ಟ
ಸರ್ವ ಜೀವರ ಮೋಚಕ ಶ್ರೇಷ್ಠ । ದೇಹಗಳ್ನಿರ್ದುಷ್ಟ
ಸರ್ವ ಹೇತು ಅಪವರ್ಗದ ನರೆಯಣ
ಸರ್ವವೇದ ಪ್ರತಿಪಾದ್ಯನೆ ಪಾಹಿ ೨೩

ಜ್ಞಾನಾಖ್ಯ ಜ್ಯೋತಿಯೆ ಹರಿ ಅವಿಕಾರಿ । ಭಕ್ತವಶೀಕೃತ ಹರಿ
ನೀನಾಗಿ ತೋರುವೆ ಹೃದ್ಗುಹದ್ವಾರಿ । ಷಾಡ್ಗುಣ್ಯ ಉದಾರಿ
ಜ್ಞಾನಿಕಾಮ್ಯ ಪುರುಷಾರ್ಥ. ಫಲಪ್ರದ
ಪೂರ್ಣ ದಯಾನಿಧೆ ತೋರೊ ಸ್ವರೂಪ ೨೪

ಅತ್ಯದ್ಭುತ ಮಂಗಳ ಚರಿತಾರ್ಥ । ಭಜಿಪೇಕಾಂತ ಜನಾಪ್ರ
ವ್ಯಕ್ತಾ ವ್ಯಕ್ತನೆ ಅಕ್ಷರ ಶಾಂತ । ದೂರ ಸಮೀಪಸ್ಥ
ನಿತ್ಯ ಅತೀಂದ್ರಿಯ ಸೂಕ್ಷ್ಮ ಮಹಾಘನ
ಪ್ರಾರ್ಥಿಪ ಆದ್ಯಾನಂತರ ಪೂರ್ಣ ೨೫

ರವಿಯು ಅಗ್ನಿಗಳಿಂದಲಿ ಜ್ವಾಲಾ । ನಿರತ ಪರಿವದಂತ್ವಿಮಲ
ಭುವಿಯೊಳ್ಗುಣ ಪ್ರವಾಹದ ಜಾಲಾ । ತವಸರ್ಗ ವಿಶಾಲಾ
ಸರ್ವ ಸೃಷ್ಟಿ ಸುವಿಲಕ್ಷಣ ದೇವನೆ
ನಿರ್ವಿಕಾರ ನಮೊ ಸಂಸ್ಕೃತಿ ನಾಶ ೨೬

ಅಂಗಾಂತರ ಬಾಹಿ ಆವೃತವೆನ್ನ । ದುಷ್ಟಕೃತಿಗಳನ್ನ
ತುಂಗ ಕಳೆಯಲು ಸಾಧನ ಜ್ಞಾನಾನ್ನ । ಕೊಟ್ಟುಧರಿಸೆನ್ನ
ಲಿಂಗ ಶರೀರದ ನಾಶವ ಬಯಸುವೆ
ಭಂಗಗೈಸಿ ಅದ ಉದ್ಧರಿಸೆನ್ನ ೨೭

ಸೃಷ್ಟಿ ಸೀಹ ಜಗವೆಲ್ಲವ ಪ್ರವಿಷ್ಟ । ವಿಶ್ವಾಭಿಧ ಶ್ರೇಷ್ಠ
ಸೃಷ್ಟೀಸಿಹ ಜಗ ಬಾಹ್ಯ ನಿದಿಷ್ಟ । ಅದಿಶ್ವಾಖ್ಯ ಬಹಿಷ್ಠ
ಸುಷ್ಠು ನಮಿಪೆ ಸರ್ವಜ್ಞ ಅಜ
ಕಷ್ಟ ಹರಿಸೊ ಪರಿ ಪೂರ್ಣ ಪರಂಪದ ೨೮

ಯೋಗದಿಂದಲಿ ಕರ್ಮವು ದಗ್ಧಾ । ಆಗಿರುವ ಪ್ರಬುದ್ಧ
ಯೋಗಿಗಳಿಂದಲಿ ನೀನು ಸುಲಬ್ಧ । ಪರಿಪಾಲಿಸು ಹೃದ್ಯ
ಯೋಗಿಪ ಶಕ್ತಿತ್ರಯ ಸೃಷ್ಟ್ಯಾದಿಯ
ವೇಗ ದುರಂತಾ ಗೋಚರ ಇಂದ್ರಿಯ ೨೯

ವಿಧಿಯು ರುದ್ರಾದಿಯು ಕೇಳುತಲಿದನ । ಅಖಿಲಾತ್ಮಕ ಸ್ತವನ
ಪದದಿಂದಲಿ ಚಲಿಸಲಿಲ್ಲವು ಅವನ । ನೋಡುತ ಸಿರಿ ಸದನ
ವಿಧಿಯು ಭವಾದಿಯು ಒಡೆಯನು ವ್ಯಾಪ್ತನು
ಉದುಭವನಾದನು ಶ್ರೀ ಹರಿ ಕ್ಷಣದಿ ೩೦

ಬಂದೀಹ ಶ್ರೀಹರಿ ಗರುಡನ ಏರಿ । ಚಕ್ರಾಯುಧ ಧಾರಿ
ವೃಂದಾರಕ ಮಂದಿಯೆ ಸ್ತೋತ್ರದ ಲಹರಿ । ಕೇಳುತ್ತಲಿ ಶೌರಿ
ಬಂದು ನಿಲ್ಲೆ ಧೃತ ಕಮಲ ಕರದಿ ಕ–
ರೀಂದ್ರನೆಂದ ನಾರಾಯಣಖಿಲ ಗುರೋ ೩೧

ನೆಗಳನ್ನ ಸೀಳುತ ಹರಿ ದಯವನಧಿ । ಚಕ್ರದಿಂದ ತ್ವರದಿ
ನೆಗಹುತ್ತ ಕಮಲವ ಸೊಂಡಲ ಕರದಿ । ಇಟ್ಟನು ಹರಿ ಶಿರದಿ
ಮಿಗೆ ದೈವತ ವೃಂದವು ಸ್ತೋತ್ರ ಮಾಡುತಿರೆ
ವಿಗಡ ಕಷ್ಟದಿಂ ಮೋಚನ ಗೈದನು ೩೨

ದೇವ ನಾಯಕ ಹೂ ಹೂ ತ್ಯಕ್ತ । ನಕ್ರಾಕೃತಿಯತ್ತ
ದೇವಲ ಋಷಿಯ ಶಾಪ ವಿಮುಕ್ತ । ರೂಪಾಶ್ಚರ್ಯವ ಪೊತ್ತ
ಧಾವಿಸಿ ಹರಿಪದ ನಮಿಸುತ ಹರಿಯಶ
ಸ್ತವನ ಗೈದು ತವ ಧಾಮಕೆ ಪೋದನು ೩೩

ಹರಿಯ ಸ್ಪರ್ಶದಿ ಕರಿವರ ಅಜ್ಞಾನ । ಪಾಶ ಕಳೆದ ಜ್ಞಾನ
ಬರಲಾಗ ತಾಳಿದ ಭುಜ ನಾಲ್ಕರನ । ಧೃತ ಪೀತ ವಸನ
ಪರಿಹೃತ ಶಾಪದಿ ಇಂದ್ರದ್ಯುಮ್ನನ
ವೆರಸುತ ಖಗ ವಹ ಪೊರಟ ವೈಕುಂಠಕೆ ೩೪

ಉತ್ತಮ ಜಲಜೋತ್ತಮ ಊದುತ್ತ । ಸುರಮೞದ ಪಡಿಸುತ್ತ
ಭಕ್ತವತ್ಸಲ ಮಂದಸ್ಮಿತ ನಾಗುತ್ತ । ಗರುಡನ ಏರುತ್ತ
ನಿತ್ಯ ಮಂಗಳ ಮೂರ್ತಿ ಸರ್ವೋತ್ತಮ ಹರಿ
ವಿಸ್ತರಿಸಿದ ತನ ಭೃತ್ಯ ವತ್ಸಲತೆಯ ೩೫

ಉದಯ ಕಾಲದಲೇಳುತಲೆನ್ನ । ನಿನ್ನನು ಸರಸಿಯನ
ವಿಧಿಯಾಹಿಪ ವಿಪ ರುದ್ರರುಗಳನ । ಗಿರಿ ಕಂದರವು ವನ
ಮುದದಿ ಕ್ಷೀರಾಬ್ಧಿಯ ತ್ರೈಧಾಮಗಳನು
ವದಗಿ ತುತಿಪರಿಗೆ ಪಾಪವ ಹರಿಸುವೆ ೩೬

ಇಂದ್ರಾದಿ ದೇವತೆ ತತ್ಪರಿವಾರ । ಹರ್ಯಾಯುಧ ವಿಸ್ತರ
ಚಂದ್ರಾರ್ಕ ಪ್ರಹ್ಲಾದರು ನಾಗಪರ । ಸಿರಿವತ್ಸವು ಹಾರ
ಚಂದದಲಂಕೃತ ಮತ್ಸ್ಯಾದೀ ದಶ
ಅಂದ ವಪುಷ ಅವತಾರವ ನೆನೆವರ ೩೭

ಗಂಗಾ ಸರಸ್ವತಿ ಯಮುನಾ ನಂದಾ । ಕಾವೇರಿ ಗೋದಾ
ಮಂಗಳ ಪ್ರಣವ ವಿಪ್ರರ ವೃಂದಾ । ಹರಿ ಗುಣಗಳ ವೃಂದ
ಸಂಗೀತದಿ ಉರು ಗಾಯನ ಮಾಳ್ಪರ
ತುಂಗವೆನಿಪ ಭವ ಭಂಗವ ಮಾಳ್ಪೆನು ೩೮

ಇಂತಪ್ಪ ವರಗಳನಿತ್ತನು ಹರಿಯು । ಸೌಭಾಗ್ಯದ ಸಿರಿಯು
ಸಂತತ ನೆನೆವರಿಗಭಯದ ದೊರೆಯು । ಅಂತ್ಯಕೆ ಸದ್ಗತಿಯು
ಕಂತು ಜನಕ ಗುರು ಗೋವಿಂದ ವಿಠಲ
ಸಂತರಿಗೀಯುವ ಪಂಥವ ಪಾಲಿಪ ೩೯

೩೨೬

ಪರೀಕ್ಷಿದ್ರಾಜನ ಚರಿತ್ರೆ

ಕೇಳಿರಿ – ಚರಿತೆಯ ಕೇಳಿರೀ ॥ಪ॥

ಕೇಳಿರಿ – ಪರೀಕ್ಷಿತು ಚರಿತೆ । ರೂಪ
ತಾಳುತ್ತ ಪರೀಕ್ಷಿತುವಂತೆ । ಆಹ
ಕಾಲ ಕರ್ಮವು ಗುಣ । ಜಾಲ ಸ್ವಭಾವಗ
ಳಾಲಯ ಉಳ್ಳಂಥ । ಮೇಲು ಜೀವಿಯ ಚರಿತೆ ॥ಅ.ಪ॥

ಶಾರದ್ವತನು ಗುರು ಬೇಕು । ಸುಖ
ಸಾರ ಜ್ಞಾನವ ಪೊಂದಬೇಕು । ತತ್ವ
ಸಾರವ ಗ್ರಹಿಸಲಿ ಬೇಕು । ಕೃಪಾ
ಚಾರ್ಯರಂತಾಗಲಿ ಬೇಕು । ಆಹ
ಧೀರ ತತುವ ಮಾನಿ । ಚಾರು ರೂಪವ ಕಂಡು
ಸಾರುತ್ತ ಹರಿಪಾದ । ಮಾರಮಣನ ಕಂಡ ೧

ಉತ್ತರ ತನಯಳ ಗ್ರಹಣ । ಬಲು
ಉತ್ಕೃಷ್ಟ ಜ್ಞಾನ ಅರ್ಜನ । ಅಲ್ಲಿ

ಪುತ್ರರು ನಾಲ್ವರ ಜನನ । ಧರ್ಮ
ಅರ್ಥ ಕಾಮ ಮುಕ್ತಿಗಳನ । ಆಹ
ಉತ್ತಮನಿಗೆ ರಾಜ್ಯ । ಅರ್ಥಿಲಿ ಈವಂತೆ
ಚಿತ್ತದೊಳಗೆ ಸ್ಥಾನ । ಮುಕ್ತಿಗೆ ಕೊಟ್ಟಂಥ ೨

ಬುಧ ಜನರಿಗೆ ಯೋಗ್ಯವಾದ । ಬುದ್ಧಿ
ಸುದತಿ ಮಣಿಯ ಕೂಡಿ ಮೋದ । ದಿಂದ
ವಿದ್ಯುಕ್ತ ದೋಳಾಶ್ವಮೇಧ । ಯಜ್ಞ
ಮುದದಿ ಮೂರು ಬಾರಿ ಮಾಡ್ದ । ಆಹ
ಆಧಿ ಭೂತ ಅಧ್ಯಾತ್ಮ । ಆಧಿ ದೈವವನೆ ತಿಳಿದು
ಸದಮಲ ಹೃದಯದಿ । ಬುಧಜನರನು ಕಂಡ ೩

ನಿಷ್ಠೆಯಿಂದಲಿ ಗೈದ ಮೇಧ । ದೊಳು
ತ್ಕೃಷ್ಟ ದಾನವ ರಾಜ ಮಾಡ್ಡ । ಭೂರಿ
ಶ್ರೇಷ್ಠ ದಕ್ಷಿಣೆಯನು ನೀಡ್ಡ । ಎಲ್ಲ
ತುಷ್ಟರಾದರು ಸ್ತೋತ್ರಾಗಾಧ । ಆಹ
ಶ್ರೇಷ್ಠನು ಶ್ರೀಹರಿ । ಇಷ್ಟ ರಮಾ ಹೃದ್ಯ
ಧಿಷ್ಠಾನದೊಳು ಧ್ಯಾನ । ದಕ್ಷಿಣೆಯನು ಇತ್ತ ೪

ಕುರುಜಾಂಗಲದಲ್ಲಿ ವಾಸ । ಇರೆ
ದುರುಳ ಕಲಿಯ ಪ್ರವೇಶ । ಆರ್ತು
ಶರವ ಹೂಡಿದ ಭೂಮೀಶ । ಕಲಿಯ
ತರಿಯುವೆನೆಂಬುವಾವೇಶ । ಆಹ
ನರದೇಹದೊಳು ದುಷ್ಟ । ಸುರ ವಿರೋಧಿಗಳ್ವರ್ಯ
ಅರಿತು ಪ್ರಣವ ಧನು । ಶರವನ್ಹೂಡಿದ ಧೀರ ೫

ತನುವೆಂಬ ರಥವ ಶೃಂಗರಿಸಿ । ಧ್ವಜ
ಕನುಗುಣ ನೃಹರಿಯ ನೆನಿಸೀ । ಅಶ್ವ
ನೆನಿಪ ಇಂದ್ರಿಯಗಳ ಮನಸೀ । ವೃತ್ತಿ
ಯಾನಂತ ಕಾಲಾಳು ವೆರಸೀ । ಆಹ

ಮನ ಬುದ್ಧಿ ಚಿತ್ತಾಹಂ । ಸೇನಾಂಗ ಚತ್ವಾರ
ಗಣ ಮಧ್ಯ ರಾಜಿಸು । ತನು ವಾರ ದಿಗ್ವಿಜಕೇ ೬

ನವಖಂಡ ಪೃಥ್ವಿಯು ಇಲ್ಲೇ । ದೇಹ
ನವ ಇಂದ್ರಿಯಂಗಳ ಬಲ್ಲೆ । ರಾಜ
ಅವ ಜಯಿಸೋಣೆಂಬ ಸೊಲ್ಲೆ । ಭೂಮಿ
ದಿಗ್ವಿಜಯವಾಯಿತು ಅಲ್ಲೆ । ಆಹ
ಪ್ರವರ ಪರೀಕ್ಷಿತ್ತು । ಶ್ರವಣಾದಿ ಸಾಧನ
ಭವಹರ ಕೃಷ್ಣಗೆ । ಸುವಿವೇಕದೊಳು ಕೊಟ್ಟ ೭

ವಸುಮತೀಶನು ಬರಬರುತ । ಬಂದು
ವೃಷಭೈಕ ಪಾದದಿಂದಿರುತ । ಒಂದು
ಹಸುವು ತಾ ಕಣ್ಣೀರನಿಡುತ । ರಹಿತ
ವತ್ಸವೆಂಬುವುದೆ ಪ್ರತೀತ । ಆಹ
ವೃಷಭನೆ ಧರ್ಮನು । ಹಸುವೆ ತಾ ಭೂದೇವಿ
ಕುಶಲ ಪ್ರಶ್ನೋತ್ತರ । ಹಸನಾಯ್ತು ಲೋಕಕೆ ೮

ಮೂರು ಪಾದೆನಗಿಲ್ಲವೆಂದು । ಮತ್ತೆ
ದೂರ ಬಂಧುವಿಗಾಗಿ ನೊಂದು । ನಿನ್ನ
ಕ್ರೂರ ಶೂದ್ರನು ಮೆಲ್ವನೆಂದು । ಯಜ್ಞ
ಸಾರ ಹೃತರು ಸುರರಿಗೆಂದು । ಆಹ
ನೀರದನ ವರ್ಷಣ । ಹಾರುವ ಬ್ರಹ್ಮಣ್ಯ
ಆರಿಗೋಸುಗ ಶೋಕ । ಧಾರುಣಿ ಪೇಳೆಂದ ೯

ಪೋಷಕ ರಹಿತರಿಗಾಗಿ । ಕಲ್ಯಾ
ವೇಶಿತ ಕ್ಷತ್ರೇರಿಗಾಗಿ । ಮತ್ತೆ
ದೇಶಗಳ್ನಾಶನಕಾಗಿ । ಹಾಗೆ
ಈಶನಂತರ್ಹಿತಕಾಗಿ । ಆಹ
ಶ್ರೀಶ ವಿಯೋಗವೆ । ಕ್ಲೇಶ ಕಾರಣನೆಂದು
ನೀ ಶೋಕ ಪಡುವುದು । ಭಾಸಿಪುದೆನಗೆಂದ ೧೦

ಸತ್ಯ ಶೌಚವು ತ್ಯಾಗ ಧ್ಯಾನ । ಬಲು
ಸ್ತುತ್ಯ ಓಜವು ಬಲಜ್ಞಾನ । ಇನ್ನು
ನಿತ್ಯ ಪ್ರಭೈಶ್ವರ್ಯ ಗುಣ । ನಿಧಿ
ಕೃತ್ಯವನಂತ ಕಲ್ಯಾಣ । ಆಹ
ವ್ಯತ್ಯಯ ವಿರಹಿತ । ಸತ್ಯಭಾಮೆಯ ಪತಿ
ಪೃಥ್ವಿಗಗೋಚರ । ನೆತ್ತೋದ ಶೋಕವೆ ? ೧೧

ನಿಜವು ಪೇಳ್ವ ಮಾತೆಲ್ಲ । ಇನ್ನು
ಧ್ವಜ ವಜ್ರಾಂಕುಶಪಾದ ಉಳ್ಳ । ಎನ್ನ
ನಿಜಸ್ವಾಮಿ ಕಾಂಬುವ ಸೊಲ್ಲ । ಧರ್ಮ
ನಿಜರೂಪಿ ನೀ ಪೇಳೊ ಎಲ್ಲ । ಆಹ
ಸುಜನರಂತಿರೆ ವೃಷಭ । ರಾಜನು ಗೋವನ್ನ
ನಿಜ ಪಾದಲೊದೆದುದ । ರಾಜ ತಾ ಕಂಡನು ೧೨

ನೃಪಲಿಂಗ ನರ ಕಲಿಯೆಂದು । ರಾಜ
ಶಪಥಗೈಯ್ಯಲು ಕೊಲ್ವೆನೆಂದು । ಕಲಿ
ವಪುವ ಕೆಡಹಿದ ಶರಣೆಂದು । ಆಗ
ನೃಪ ಪರೀಕ್ಷಿತು ಕ್ಷಮಿಸ್ಯೆಂದು । ಆಹ
ಕುಪಥಗಾಮಿಯೆ ನೃಪ । ವಪುವ ಪ್ರವೇಶಿಸೆ
ಅಪರಿಮಿತಾ ಅಧರ್ಮ । ವಿಪರೀತವೆಸಗುವೆ ೧೩

ಮನುಜ ದೇಹದಿ ನೀನು ಬರುತ । ನಿನ್ನ
ಅನುಬಂಧಿ ಜನಲೋಭಾ ಅನೃತ । ಇನ್ನು
ಅನಾರ್ಯ ಚೌರ್ಯಂಹೊ ಜೇಷ್ಟ । ಅದ
ಕನುಸಾರ ಮಾಯಾದಿಯುತ । ಆಹ
ಗುಣ ತಮೋ ಕಾರ್ಯಾಭಿ । ಮಾನಿ ಎಂದೆನಿಸುತ್ತ
ಗುಣ ಉಳ್ಳವರ ನಾಶ । ಮನಸಾರ ವೆಸಗುವ ೧೪

ಪುಣ್ಯಸ್ಥಲವೀಬ್ರಹ್ಮಾವರ್ತ । ಇಲ್ಯ
ಗಣ್ಯ ಯಜ್ಞಗಳು ಆಗುತ್ತ । ಲಿರೆ

ವಿನ್ಯಸ್ತ ಮನ್ಯು ಸಕ್ತ್ರೋಕ್ತ । ಯಜ್ವಗ
ಗಣ್ಯ ಫಲವೀವ ವೇದೋಕ್ತ । ಆಹ
ಅನ್ಯನಾದವ ನೀನು । ಎನ್ನ ದೇಶವ ಬಿಟ್ಟು
ಅನ್ಯ ಸ್ಥಲವ ಸೇರೆ । ನಿನ್ನ ಮನ್ನಿಪೆನೆಂದ ೧೫

ಗಡಗಡ ಕಲಿನಡುಗುತ್ತ । ಎಲ್ಲ
ಎಡೆಗಳ ತಿರುಗಿ ಬರುತ್ತ । ನಿನ್ನ
ಪಿಡಿದಿಹ ಖಡ್ಗದಿಂದ್ಯುಕ್ತ । ರೂಪ
ಎಡಬಿಡದಲ್ಲೇ ಕಾಣುತ್ತ । ಆಹ
ಕಡುನೊಂದು ಇರುವಗೆ । ಕೊಡುವುದು ಸ್ಥಳವನು
ಬಿಡಿವಾರವಿಲ್ಲದೆ । ಅಡಗುವೆನೆಂದು ೧೬

ದ್ಯೂತ ಪಾನವು ಸ್ತ್ರೀಯು ಸೂನಾ । ಪುನಃ
ದಾತನ ಬೇಡ್ಯನ್ಯ ಸ್ಥಾನಾ । ಕೊಟ್ಟು
ಜಾತರೂಪದಿ ಅಭಿಮಾನ । ಇನ್ನು
ಖ್ಯಾತ ಧರ್ಮಗೆ ಪದಗಳೂನ । ಆಹ
ಪ್ರೀತಿಲಿತ್ತೂ ಭೂ । ಮಾತೆಯ ಸಂತೈಸಿ
ಧೌತ ಪಾಪದ ರಾಜ್ಯ । ಖ್ಯಾತಿಯಿಂದಲಿ ಆಳ್ದ ೧೭

ಧನುವ ಧರಿಸಿ ರಾಜ ತಾನು ಒಂದು
ದಿನ ಮೃಗಬೇಟೆ ಗಾಗವನು । ಪೊಕ್ಕು
ವನವನ ಸಂಚರಿಸಿನ್ನು । ಶ್ರಾಂತ
ಮನದಿ ಕ್ಷೂದಿತ ತೃಷಿತಾನು । ಆಹ
ಸನಿಯ ಜಲಾಶಯ । ಕಾಣದೆ ಕ್ಷಿತಿಪನು
ಮುನಿಗಳಾಶ್ರಮ ಪೊಕ್ಕು । ಮನನ ಶೀಲನ ಕಂಡ ೧೮

ಪ್ರತಿರುದ್ಧೇಂದ್ರಿಯ ಪ್ರಾಣ ಮನ । ಉಪಾ
ರತದ ಬುದ್ಧಿಯು ತ್ರಯ ಸ್ಥಾನ । ಮೀರಿ
ಗತ ಸುಪ್ರಾಪ್ತನು ಬಿಂಬ ಪೂರ್ಣ । ಇನ್ನು
ಗತ ಕ್ರಿಯ ಜಟ ವಿಪ್ರಕೀರ್ಣ । ಆಹ

ಯುತ ಮೃಗ ಚರ್ಮ ಅಜಿನ । ಸ್ಥಿತನಾದ ಮುನಿಯನ್ನು
ಕ್ಷಿತಿಪ ಯಾಚಿಸಿದನು । ಉದಕವ ಕೊಡುಯೆಂದು ೧೯

ಆಸನಘ್ರ್ಯಾ ಪಾದ್ಯಾಚಮನ । ಒಂದು
ಲೇಸು ಮಾತನಾಡದವನ । ಚಕ್ರಾ
ಧೀಶನು ತನಗವಮಾನ । ಕಂಡು
ಕ್ರೋಶ ಪೂರಿತನಾಗಿ ಅವನ । ಆಹ
ಭಾಸುರ ಕೊರಳೊಳ್ಗ । ತಾಸೂರಗ ತನ್ನ
ಲೇಸು ಧನುವಿನ ಕೊನೆ । ಲಾಶು ಹಾಕುತ ಪೋದ ೨೦

ಕಲಿಯು ಕಾಯುತಲಿದ್ದ ಸಮಯ । ನೃಪ
ನೊಳಗೆ ಪ್ರವೇಶಿಸಿ ಮೃಗಯಾ । ವ್ಯಸ್ನ
ಬಲದಿ ಪ್ರೇರಿಸಿದ ದುಶ್ಚರ್ಯ । ರಾಜ
ಆಲೋಚಿಸಿದ ತನ್ನ ಕಾರ್ಯ । ಆಹ
ಸುಳಿಯ ದಿಂದ್ರಿಯ ಕಾರ್ಯ । ಮೀಲಿತೇಕ್ಷಣನಾಗಿ
ಜಾಲ ಸುಸಮಾಧಿ । ಯೊಳಗಿಹನೆನುತಲಿ ೨೧

ಋಷಿ ಪುತ್ರಾರ್ಭಕರಿಂದ ವೆರಸಿ । ಕಂಡು
ರುಷದಿಯಾವೇಶಿತ ನೆನಿಸಿ । ರಾಜ
ನೊಶನು ಅಧರ್ಮಕೆ ಎನಿಸಿ । ಶೃಂಗಿ
ಕುಶಪಾಣಿಯಾಗಿ ಉಚ್ಚರಿಸಿ । ಆಹ
ವಸುಮತೀಶನು । ವಾತ ಅಶನ ನಿಂದಲಿ ಮೃತ್ಯು
ವಶನುಯೇಳನೆ ದಿನ । ಉಸುರುವೆನಿದು ಸತ್ಯ ೨೨

ತಪಸಿನಿಂ ಬಹಿರ್ಮುಖ ಸಮಯ । ಪುತ್ರ
ವಿಪರೀತ ಆಳುತಿದ್ದ ಧ್ವನಿಯ । ಕೇಳಿ
ವಿಪುಲಿತ ನೇತ್ರವು ವಲಯಾ । ಕಾರ
ಅಪಗತಾ ಸೋರಗ ಹೊಳಯ । ಆಹ
ಅಪಸರಿಸುತಲದ । ವಿಪುಲಮತಿಯು ಸುತ
ನಪಕೃತಿ ತಿಳಿಯುತ್ತ । ನೃಪನಾಗಿ ಮರುಗಿದ ೨೩

ಧೀರ ನೃಪನು ರಹಿತ ದೇಶ । ಬಹು
ಚೋರರಿಂದಲಿ ಸುಪ್ರವೇಶ । ವಾಗೆ
ಘೋರಾನರ್ಥ ಸನ್ನಿವೇಶ । ಆಯ್ತು
ಪೋರ ನಿನ್ನಯ ಶಾಪಾದೇಶ । ಆಹ
ಭೂರಿ ಕರುಣಿ ಹರಿ । ವಾರಿಸಿ ಅವನಘ
ಚಾರು ಮಂಗಳ ವೀಯ । ಹಾರೈಪೆನೆಂದನು ೨೪

ಕ್ಷಿತಿಪ ತನ್ನಯ ಅಪಕೃತಿಗೇ । ಬಲು
ವ್ಯಥೆಯಿಂದ ಮೊರೆಯಿಟ್ಟ ಹರಿಗೆ । ತನ್ನ
ಅತುಳ ವಿಭವ ರಾಜ್ಯಗಳಿಗೆ । ಕ್ಷಿಪ್ರ
ಹುತ ಆಶನನು ವಹಿಪ ಬಗೆ । ಆಹ
ಅತಿಶಯದಲಿ ಬೇಡೆ । ಸುತಪ ಶಮೀಕನು
ಸುತಶಾಪ ನೃಪನೀಗೆ । ಸ್ಮೃತಿಕೊಟ್ಟ ಶಿಷ್ಯರಿಂ ೨೫

ತಕ್ಷಕನಿಂ ತನಗೆ ಮೃತ್ಯು । ಕೇಳಿ
ನಿಶ್ಚಿಯಿಸಿದ ಪರೀಕ್ಷಿತ್ತು । ರಾಜ್ಯ
ತಕ್ಷಣ ಉತ್ತಮಗಿತ್ತು । ತ್ರಿಪದ
ಬಿಕ್ಷುಪದ ಖರ್ಪರ ಕಿತ್ತು । ಆಹ
ಪ್ರಕ್ಷಾಲಿತ್ವರಿಪಾದ । ಲಕ್ಷಣ ಗಂಗೆಯ
ಲಕ್ಷಿತ ಕೂಲದೋಳ್ । ಲಕ್ಷ್ಯನನಶನ ವ್ರತ ೨೬

ಭುವನ ಪಾವನ ಬುಧ ಜನ । ಬಂದ
ರವರ ಶಿಷ್ಯ ಸಹಾಗಮನ । ತೀರ್ಥ
ಪವಿತರ ಗೈವಂಧ ಜನ । ಕೇಳಿ
ಚವನ ಗೌತಮ ಕುಂಭ ಭವನ । ಆಹ
ಕವಷ ಭಾರದ್ವಾಜ । ಔರ್ವ ಮೇದಾತಿಥಿ
ಭೃಗ್ವಂಗಿರರು ಅತ್ರಿ । ದೇವಲಾರ್ಷ್ಟಿಷೇಣ ೨೭

ಶರದ್ವಾ ನಂಗಿರ ಗಾಧಿಸುತ । ಪರಾ
ಶರರು ವಸಿಷ್ಠರುತದ್ಯ । ಮೈತ್ರ್ಯ

ಪರಶುರಾಮ ಪಿಪ್ಪಲಾದ । ವ್ಯಾಸ
ನಾರದರು ಇಂದ್ರ ಪ್ರಮತಿ । ಆಹ
ಅರಿಷ್ಟನೇಮಿಯು ಮತ್ತೆ । ವರ ಇಧ್ಮವಾಹರು
ವರ ದೇವ ಬ್ರಹ್ಮರ್ಷಿ । ವರ್ಯೆ ರಾಜರ್ಷಿಗಳ ೨೮

ಬಂದವರನೆಲ್ಲ ಕುಳ್ಳಿರಿಸಿ । ನೃಪ
ವಂದಿಸುತಲಿ ತನ್ನ ಶಿರಸಿ । ಮತ್ತೆ
ಅಂದ ಅರ್ಘ್ಯಪಾದ್ಯ ಧರಿಸಿ । ತನ್ನ
ನಿಂದ್ಯ ಕರ್ಮವನೆ ವಿಸ್ತರಿಸಿ । ಆಹ
ಅಂದನು ತನು ಮನ । ಇಂದಿರೇಶನ ಪದ
ದ್ವಂದ್ವದೊಳಗೆ ಸದಾ । ಬಂಧಿಸಿ ಇರುವಂತೆ ೨೯

ಕುಳಿತ ಸರ್ವರ ಯಾಚಿಸಿದ । ತನ್ನ
ಬಳಿಯ ಕುಳ್ಳಿರುವಂತೆ ಬೇಡ್ದ । ಗಂಗಾ
ಕೂಲ ದಕ್ಷಿಣಕೆ ವಿಧಿಸೀದ । ತಾನು
ಒಳಿತು ದರ್ಭಾಸನ ಹಾಕ್ದ । ಆಹ
ವ್ಯಾಳ ಕುಹಕಿ ಬಂದು । ಅಳಿವ ಮನದಿ ಕಚ್ಚ
ಅಲುಗುವ ನಾನಲ್ಲ । ಒಲುಮೆ ನಿಮ್ಮದು ಇರಲು ೩೦

ರತ್ನ ಕೆತ್ತಿದ ಸರ್ವಾಭರಣ । ಮತ್ತೆ
ಉತ್ತಮಾಂಬರ ಸರ್ವ ತ್ಯಜನ । ನಾರು
ವಸ್ತ್ರಗಳ್ಧರಿಸೀದ ನೃಪನ । ವರ
ವಿರಕ್ತಿಗೆ ಮೆಚ್ಚುತಲವನ । ಆಹ
ಉತ್ತುಮಾಂಗದಿ ದೇವ । ತತ್ತಿಗಳ್ಕರೆದರು
ಉತ್ತಮ ಸುಮ ವರ್ಷ । ಮತ್ತೆ ದುಂದುಭಿನಾದ ೩೧

ಅರಸನಾಡಿದ ದಿವ್ಯ ವಚನ । ಅನು
ಸರಿಸುತ್ತ ಕುಳ್ಳಿರ್ದ ಅವನ । ಕರ್ಮ
ಸ್ಮರಿಸುತ್ತ ತುತಿಸಿದರವನ । ಅದ
ನರಿತು ಕೇಳ್ದನು ದಿವ್ಯ ಪ್ರಶನ । ಆಹ

ಮರಣ ಶೀಲನು ಮಾಳ್ಪ । ವರ ಕೃತ್ಯವನು ಪೇಳೆ
ಸುರ ಋಷಿಗಳ ಬೇಡ್ದ । ಅರಸು ವಂದಿಸುತವರ ೩೨

ಈ ಕ್ಷಣದಲಿ ವ್ಯಾಸಸೂನು । ಅನ
ಪೇಕ್ಷನವನು ಗಾಂ ಅಟನು । ನೋಡ್ಯ
ಲಕ್ಷ್ಯಲಿಂಗದಿ ಶೋಭಿತನು । ಹರಿ
ಇಚ್ಛೆಯಿಂದಲಿ ಬಂದ ಶುಕನು । ಆಹ
ಕುಕ್ಷಿಯೊಳಿಹ ಹರಿ । ಈಕ್ಷಣದಲಿ ತೃಪ್ತ
ಈ ಕ್ಷೋಣಿಪತಿಯು ಪ । ರೀಕ್ಷಿತನ ಉದ್ಧರಿಸೆ ೩೩

ವಿಷಯಾಶೆ ರಹಿತಾನಪೇಕ್ಷ । ಮತ್ತೆ
ಶ್ವಸನಯ್ಯನೊಳು ಬಲು ಈಕ್ಷಾ । ಇನ್ನು
ಅಸುವ ಪೋಷಿಸೆ ವಾಯು ಭಕ್ಷ । ಪೊಂದಿ
ಬಿಸಿಜಾಕ್ಷಿ ಲಕ್ಷ್ಮೀ ಕಟಾಕ್ಷ । ಆಹ
ಝುಷಕೇತುವಿನ ಗೆದ್ದ । ಅಸಮ ಸುಂದರ ಷೋ
ಡಶ ವರ್ಷದವ ಬರೆ । ಋಷಿಗಳಿಂ ಮಾನಿತ ೩೪

ಅತಿಥಿ ಸತ್ಕಾರವ ರಚಿಸಿ । ತ್ವರ್ಯ
ಮೃತಿಯನುತ್ತರಿಸುವೆನೆನಿಸಿ । ಪರೀ
ಕ್ಷಿತು ಬೇಡ್ದ ಶುಕರನ ನಮಿಸಿ । ತನ್ನ
ಕೃತ ಕೃತ್ಯನೆಂದೆನುತೆನಿಸಿ । ಆಹ
ಶ್ರೋತವ್ಯ ಜಪ್ಯವು । ಸ್ಮರ್ತವ್ಯ ಭಜನೀಯ
ಧ್ಯಾತವ್ಯೇತ್ಯಾದಿಯ । ಕರ್ತವ್ಯ ಕೇಳಿದ ೩೫

ವಿಷ್ಣುರಾತಗೆ ಪೇಳ್ದ ಶುಕನು । ಹರಿ
ಸೃಷ್ಟ್ಯಾದಷ್ಟ ಕಂಗಳನು । ಒಳ
ದೃಷ್ಟಿಗೆ ಗೈದ ಪಂಥವನು । ಹೃದ್ಯ
ಧಿಷ್ಟಾನದೊಳು ಹರಿಯನ್ನು । ಆಹ
ದೃಷ್ಟಿಸಿ ಖಗ ವಾಹ । ಕೃಷ್ಣನ ಪಾದಬ್ಜ
ಶ್ರೇಷ್ಠ ಮುಕ್ತಿಯ ಪೊಂದಿ । ತಕ್ಷಕನನು ಗೆದ್ದ ೩೬

ವೇದ ಪೀಠಗೆ ಮೊದಲ್ತೊರೆದ । ಕಥೆ
ಬಾದರಾಯಣ ಬೃಹತ್ಪೇಳ್ದ । ಭವ
ವಾರ್ಧತಾರಕ ಭಾಗವತವ । ಬಹು
ಆದರದೊಳು ಕೇಳ್ವನಾದ । ಆಹ
ವೇದ ವಿನುತ ಗುರು । ಗೋವಿಂದ ವಿಠಲನ
ಪಾದವ ಸೇರಿ ಸ । ಮ್ಮೋದವ ಪಡೆಯುವ ೩೭

೩೨೭

'ಶ್ರೀ ಮದ್‌ಭಾಗವತ' ತೃತೀಯಸ್ಕಂದ
೨೯ನೇ ಅಧ್ಯಾಯ

ಧೇನಿಸೋ ಶ್ರೀ ಹರಿಯ ನೀ ಧೇನಿಸೋ ॥ಪ॥

ಧೇನಿಸೋ ಶ್ರೀ ಹರಿಯ ಪಾದ । ಯೋಗ
ಧ್ಯಾನದಿ ಪುರುಷಾರ್ಥ ಪ್ರದ । ಆಹ
ಮೌನಿಯಾಗುತ ಶುದ್ಧ । ಜ್ಞಾನವನ್ನರ್ಜಿಸಿ
ಯೇನೊಂದನ್ಯವ ಬೇಡ್ದೆ । ಜ್ಞಾನಭಕ್ತಿಯ ಬೇಡಿ ॥ಅ.ಪ॥

ಕರ್ಮ ನಿಷಿದ್ಧವ ತ್ಯಜಿಸಿ । ವಿಹಿತ
ಕರ್ಮಾಚರಣೆಯನ್ನು ವಹಿಸಿ । ಮತ್ತೆ
ಬ್ರಹ್ಮ ಜ್ಞಾನಿಗಳನ್ನರ್ಜಿಸಿ । ಪರ
ಬ್ರಹ್ಮವಿತ್ತುದೆ ಸಾಕೆಂದೆನಿಸಿ । ಆಹ
ಗ್ರಾಮ್ಯ ಧರ್ಮ ತ್ಯಾಗ । ಧರ್ಮಮಾರ್ಗದಿರತಿ
ನಿರ್ಮಲ ಮನದಿಂದ । ಬೊಮ್ಮನಯ್ಯನ ಭಜಿಸೋ ೧

ಮಿತ ಮೇಧ್ಯಾಶನದಿಂದ ಯುಕ್ತ । ವೀ
ವಿಕ್ತ ಕ್ಷೇತ್ರಗಳೊಳಾಸಕ್ತ । ಹಿಂಸೆ
ಶಾಸ್ತ್ರೋಕ್ತಿಗನುಸಾರ ತ್ಯಕ್ತ । ಹಾಗೂ
ಸತ್ಯವಸ್ತೇಯವು ಅರ್ಥ । ಆಹ

ಸ್ಥಿತಿಮಿತಿ ಪರಿಗ್ರಹ । ಸತ್ಯ ಶೌಚವು ಜಪ
ಮತ್ತೆ ಬ್ರಹ್ಮಚರ್ಯ । ಕೃತ್ಯಸ್ವಾಧ್ಯಾಯಾರ್ಚ ೨

ಅಸನೋತ್ತಮವನೆ ಜಯಿಸು । ಹರಿ
ಸುಸಿದ್ಧಾಂತ ಸ್ಥೈರ್ಯವ ಗಳಿಸು । ಪ್ರಾಣ
ಶಾಸನ ದಿಂದ್ರೀಯ ಜಯಿಸು । ಕರಣ
ವಿಷಯಗಳಿಂದಲಿ ಮನಸು । ಆಹ
ಶ್ವಸನಯ್ಯ ಹೃದಯಸ್ಥ । ಅಸಮ ದೇವನಪಾದ
ಬಿಸಜಕ್ಕೆ ಸೆಳೆಯುತ್ತ । ವಿಷದ ಗುಣವಸ್ಮರಿಸು ೩

ಹರಿಯಂಗ ಒಂದೊಂದರಲ್ಲಿ । ಧ್ಯಾನ
ಸ್ಥಿರವಾಗೆ ಸರ್ವಾಂಗದಲ್ಲಿ । ಮನ
ವಿರಿಸುತ್ತ ಮಹಿಮೆಗಳಲ್ಲಿ । ಅವಶ
ನಿರಂತರ ತುತಿಸುತಲಲ್ಲಿ । ಆಹ
ವರ ಸುಸಾಮಾದಿಯೋ । ಳಿರಿಸುತ್ತ ಚಿತ್ತವ
ಮರೆದು ಬಾಹ್ಯವನೆಲ್ಲ । ಸ್ಮರಿಸುವದರಿ ಲೀಲೆ ೪

ದುಷ್ಟವಾದ ಮನ ಚರ್ಯ । ಬಲು
ನಿಷ್ಠೆಯೊಳ್ಯೋಜಿಸು ಬುಧ್ಯಾ । ಇನ್ನು
ಕಷ್ಟದೊಳ್ಜಯಿಸುತಿಂದ್ರಿಯ । ಜಿತ
ಸುಷ್ಠುಆಸನದೊಳು ನೆಲೆಯ । ಆಹ
ಶ್ರೇಷ್ಠ ಪ್ರದೇಶ ಪ್ರ । ತಿಷ್ಟಿತ ತಾನಾಗಿ
ನಿಷ್ಟೇಲಿ ಋಜುಕಾಯ । ಸುಷ್ಠು ಅಭ್ಯಸಿಸೋದು ೫

ಪ್ರಾಣ ಸತ್ವಥವ ಶೋಧೀಸು । ಹಾಗೂ
ಪ್ರಾಣ ರೇಚಕ ಪೂರ ಸಾಧಿಸು । ಮತ್ತೆ
ನೀನು ಕುಂಭಕ ಶ್ವಾಸ ನಿಲಿಸು । ಪುನಹ
ಜ್ಞಾನದಿಂ ಮನ ಅಚಲ ಪಡಿಸು । ಆಹ
ಜ್ಞಾನಿಯ ಮನ ವಿರಜ । ಸಾನುಕೂಲಿಪ ವಾಯು
ಅನಲರಿಂ ಮಲಹೀನ । ಘನಲೋಹಕ್ಕಾದಂತೆ ೬

ಪೂರಕಾಲದಿ ದೋಷಹರವು । ಇನ್ನು
ಧಾರಣದಿಂ ದುರಿತ ಹರವು । ಪ್ರತ್ಯಾ
ಹಾರದಿ ಸಂಗರಜ ಹೀನವು । ಮತ್ತಾ
ಪಾರ ಧ್ಯಾನದಿ ಅನೀಶ್ವರವು । ಆಹ
ಸಾರ ತ್ರೈಗುಣ ದಹನ । ವಾರುತೆ ತಿಳಿಯುತ್ತ
ಧೀರನಾದವ ಮಾಳ್ಪ । ಕಾರ್ಯವ ತಿಳಿವುದು ೭

ಮನ ದೋಷದಿಂ ರಹಿತಾಗೆ । ಹರಿಯ
ಪೂರ್ಣ ಮೂರ್ತಿಯ ಧ್ಯಾನಕಾಗೆ । ನಾಸ
ಕೊನೆಯಲ್ಲಿ ದೃಷ್ಟಿ ಸ್ಥಿರವಾಗೆ । ಪ್ರಸ
ನ್ನಾನ ನಾಂಬುಜ ಕರ್ಣಿಕೆಯೊಳಗೆ । ಆಹ
ಕಾಣುತ ಹರಿಯನ್ನ । ಧೇನಿಸು ಪಿಂಗಾಕ್ಷ
ಆ ನೀಲೋತ್ಪಲ ಶ್ಯಾಮ । ವರ್ಣ ಶಂಖಾದ್ಯುತನ ೮

ಪದ್ಮದ ತಿಂಜಲ್ಕ ಲಸಿತ । ಪೀತ
ಶುದ್ಧಾಂಬರದಿ ಸುಭೂಷಿತ । ವಕ್ಷ
ಪದ್ಮ ಶ್ರೀವತ್ಸ ಭ್ರಾಜೀತ । ಕೊರಳು
ಬದ್ಧ ಕೌಸ್ತುಭ ಮುಕ್ತಶೋಭಿತ । ಆಹ
ಬದ್ಧ ಬೃಗಂಗಳಿಂ ವಿ । ಶುದ್ಧ ವನಮಾಲಾದಿ
ಭದ್ರಾನರ್ಘ್ಯದಹಾರ । ಮುದ್ದು ಅಂಗದನೂಪ್ರ ೯

ಮಸ್ತಕ ಕಿರೀಟ ಭೂಷ । ಶ್ರೋಣಿ
ಉತ್ತಮ ಕಾಂಚಿಗುಣೋಲ್ಲಾಸ । ಪೀತ
ಭಕ್ತರ ಹೃತ್ಕಮಲ ದೇಶ । ನೋಳ್ವರಿ
ಗುತ್ತಮೋತ್ತಮ ಸುಶಾಂತ । ಆಹ
ಸಿಕ್ತ ಮನೋ ನಯನ । ಕುತ್ತಮ ಸಂತೋಷ
ಪ್ರಾಪ್ತ ಷೋಡಶ ವರ್ಷ । ದಂತೆ ಕಾಣಿಸುವವನ ೧೦

ವರ್ತಿಸುತಿಹನು ಕೈಶೋರ । ಭಾವ
ಕೀರ್ತನೀಯ ನವ ಗಂಭೀರ । ಯಶ

ವರ್ತಿಸುತಿಹುದು ವಿಸ್ತಾರ । ಪುಣ್ಯ
ಕೀರ್ತನರ ಸೃಷ್ಟಿಪ ಭಾರ । ಆಹ
ವಾರ್ತೆ ಇಂತುಳ್ಳವನ । ಮೂರ್ತೀಲಿ ಸ್ಥಿರಮನ
ಅರ್ಥಿಲಿ ಇರಿಸುತ್ತ । ಕೀರ್ತನೆಗೈವುದು ೧೧

ಒಂದೆಡೆಯಲ್ಲಿ ಸ್ಥಿತವಾದ । ಇನ್ನು
ಒಂದೆಡೆ ಪೋಗುವನಾದ । ಮತ್ತೆ
ಒಂದೆಡೆ ಕುಳಿತವನಾದ । ಹಾಗೂ
ಒಂದೆಡೆ ಮಲಗಿದನಾದ । ಆಹ
ಇಂದಿರೇಶನು ಹೃದಯ । ಮಂದಿರದೊಳು ಶಾಯಿ
ಕಂದರ್ಪ ಪಿತ ಸುರ । ವೃಂದ ಚೇಷ್ಟಕನ ೧೨

ಉಕ್ತ ಸರ್ವಾವಯವ ಧ್ಯಾನ । ಸ್ಥಿರ
ಚಿತ್ತಕ್ಕೆ ಬರದಿರೆ ನಿನ್ನ । ಮುಂದೆ
ಸಕ್ತವಾಗಲಿ ಪರಧ್ಯಾನ । ಅಂತೆ
ಯುಕ್ತ ಒಂದಂಗದಿ ಮನ । ಆಹ
ಉತ್ತಮ ಶ್ಲೋಕನ । ನೆತ್ತಿವರಿಗೀಪರಿ
ಯುಕ್ತ ಸರ್ವಾವಯವ । ಚಿತ್ತದೊಳಿಡುತಲಿ ೧೩

ಅಜಭವ ವಂದಿತ ಪಾದ । ಧ್ವಜ
ವಜ್ರಾಂಕುಶಾಂಕಿತ ಪಾದ । ಮತ್ತೆ
ಅಬ್ಜದಂತೆ ಸವಸುಪಾದ । ನಖ
ರಜನೀಶ ವಲಯ ಸುಪಾದ । ಆಹ
ನಿಜಯೋಗಿ ಹೃದಯಾಂಧ । ರಜನೀಯ ಕಳೆಯುವ
ಅಜ ಪಿತನ ಉತ್ತುಂಗ । ಭ್ರಾಜಿಪ ನಖಪಂಕ್ತಿ ೧೪

ಆರ ಚರಣಾಬ್ಜವ ತೊಳೆದ । ನೀರು
ಸರಿತ್ವರ ಗಂಗೆ ಅಭಿಧ । ಅದ
ಧರಿಸಿದ ಶಿವ ಶಿವ ನಾದ । ಇದ
ಸ್ಮರಿಸಿದವರಘವು ಅಗಾಧ । ಆಹ

ಪರ್ವತ ಶಮಲಕ್ಕೆ । ಸುರಪ ವಜ್ರಾಯುಧ
ಪರಿಯಂತಿರುವ ಹರಿ । ಚರಣಾಬ್ಜಯುಗಳವ ೧೫

ಅಗಸೇಯ ಕುಸುಮಾವಭಾಸ । ಊರು
ಖಗವರ ಭುಜ ದ್ವಯ ವಾಸ । ಸೊಂಟ
ಮಿಗಿಲಾಗಿ ಪಿತಾಂಬ್ರ ಭೂಷ । ಅದರೊ
ಳಗಿಹ ಕಂಚಿ ಕಲಾಪ ಭೂಷ । ಆಹ
ಮಿಗಿಲಾದ ಪಿತಾಂಬ್ರ । ಸೊಗಸನುಧೇನಿಸೆ
ಅಘಹರ ಒಲಿಯುವ । ಬಗೆ ಬಗೆಯಲಿ ಮಾತೆ ೧೬

ಹದಿನಾಲ್ಕು ಲೋಕಕ್ಕಾಶ್ರಯಾ । ನಾಭಿ
ಹೃದಯದಲ್ಲಿ ಕಮಲದ ಉದಯ । ಹರಿ
ಉದರವು ಅದಕೆ ಆಶ್ರಯ । ಅಬ್ಜ
ವಿಧಿಗೆ ಅದುವೆ ಮುಖ್ಯಾಶ್ರಯ । ಆಹ
ಇಂದ್ರ ನೀಲದ ಮಣಿ । ಅದುಭೂತ ಕಾಂತ್ಯುತ
ಎದೆಯ ಸ್ಥನ ದ್ವಯ । ವದಗಿ ಧವಳದ ಹಾರ ೧೭

ಸ್ಮರಿಪರ ಮನಸಿಗಾನಂದ । ಉದಯ
ಕಾರಣ ಮಹಭೂತಿಯಾದ । ಲಕ್ಷ್ಮಿ
ವರವಾಸ ನೆಂದೆನಿಸೀದ । ವಕ್ಷ ವರ
ಕೌಸ್ತುಭ ಮಣಿಗಾಸ್ಪದ । ಆಹ
ವರ ಕಂಭು ಕಂಠವು । ಹಾರ ಕೌಸ್ತುಭ ಶೋಭಿ
ಸರುವ ಸಜ್ಜನ ನುತ । ವರ ಋಷಿಭಾಖ್ಯಿನ ೧೮

ಮಥಿಸಿ ಮಂದರ ಗಿರಿ ಭುಜವು । ಶೋಭಿ
ತತು ವಲಯ ಸುರರಿಗಾಶ್ರಯವು । ಧೃತ
ಶತ ದಶ ದಳ ಚಕ್ರ ತೇಜವು । ಅಂತೆ
ಧೃತವು ಕರಕಮಲಶಂಖವು । ಆಹ
ಶತೃಗಳಿಗಾಸಹ್ಯ । ಶತದಶದಳ ಚಕ್ರ
ಧೃತ ಶಂಖ ತತ್ಕರ । ಸಿತರಾಜ ಹಂಸವ ೧೯

ಅರಿಭವ ಶೋಣಿತ ಕೆಸರ । ಸಿಕ್ತ
ಹರಿಪ್ರಿಯ ಗದೆ ಪ್ರಭೆ ಪ್ರಖರ । ಚೈತ್ಯ
ಪರಮೇಷ್ಟ್ಯಾದಿಷ್ಠಿತ ಮಣಿವರ । ಕಂಠ
ವರ ಮಧುಕರ ಜುಷ್ಟಹಾರ । ಆಹ
ಶರಣರಿಂ ಸುಸ್ಸೈವ್ಯ । ವರ ಮಧುಕರ ಪರಿ
ವರ ವೈಭವವನ್ನೆ । ಪರಮ ಸ್ತುತಿಗಳಿಂದ ೨೦

ಭೃತ್ಯಾನು ಕಂಪಿತ ಶೌರಿ । ಹರಿ
ಮೂರ್ತಿ ಗೃಹೀತಾನುಸಾರಿ । ಮುಖ
ಸ್ತುತ್ಯವು ಅರವಿಂದ ಪರಿ । ಅದು
ಅತ್ಯಲ್ಪ ಅಲುಗಾಡೆಮಕರಿ । ಆಹ
ಕೃತ್ಯದ ಪರಿಶೋಭಿ । ಸ್ತುತ್ಯ ಕುಂಡಲದಂತೆ
ಅತ್ಯಂತಾಮಲ ಕಪಾ । ಲೋತ್ಥದ ಹಾಸವ ೨೧

ಪರಮ ಮಂಗಳಕ್ಕಾಶ್ರಯ । ಅಳಿ
ಪರಿವೃತನಾಗಿ ಸುಸೇವ್ಯ । ಶಿರಿ
ಸ್ವರೂಪ ಭೂತಳಿಂ ವಂದ್ಯ । ಮತ್ತೆ
ಶಿರಿರೂಪ ಕುಟಿಲ ಸುಕೇಶ್ಯ । ಆಹ
ವರ ಮಾನದ್ವಯ ಕಾಂತಿ । ಮಾರ್‍ವಬ್ಜನೇತ್ರವ
ವಿರಹಿತಾಲಸ್ಯದಿ । ವರಭ್ರೂವಿಲಾಸವ ೨೨

ಘೋರ ತಾಪತ್ರಯಗಳನು । ಹರಿ
ಕಾರುಣ್ಯ ದೀಕ್ಷಣಕದನು । ಪರಿ
ಹಾರ ಮಾಡಲು ನಿರ್ಮಿಸಿಹನು । ಭಕ್ತಿ
ಭಾರಣೆಯಿಂದ ಹರಿಯನ್ನು । ಆಹ
ಚಿರಕಾಲ । ಹೃದ್ಗುಹದಿ । ಉರುಸಾಂದ್ರ ಸ್ಮಿತ ಸಹ
ಹರಿಯನ್ನು ನೋಡಲು ಪರಮ ಪ್ರಸನ್ನನು ೨೩

ಶರಣು ಹೊಕ್ಕಾಖಿಲ ಜನರ । ಉರು
ತರಶೋಕ ಅಶ್ರು ಸಾಗರ । ಅದ

ಪರಿಶೋಷಣ ಅತ್ಯದಾರ । ಪಂಚ
ಶರಗುಮೋಹಕ ಭ್ರೂವಿಸ್ತಾರ । ಆಹ
ವಿರಚಿತ ಸ್ವೇಚ್ಛೇಲಿ । ಪರಿಪರಿ ಮೋಹಕ
ಹರಿಮಾಯ ತಿಳಿವುದು । ಪರಮ ಅಸಾಧ್ಯವು ೨೪

ಏಕಾಂತ ಸ್ಥಳವನಾಶ್ರಯಿಸಿ । ತನ್ನ
ಹೃತ್ಕು ಹರ ಸ್ಥಿತನಚಿಂತಿಸಿ ಅವನ
ಏಕೈಕಾವಯವ ಧ್ಯಾನಿಸಿ । ಮತ್ತೆ
ರಕುತ ವರ್ಣ ವಿಶಿಷ್ಟನಿಸಿ । ಆಹ
ಪ್ರಕ್ಕತಾಧರೋಷ್ಠವು । ಸಕಲಸಾಂದ್ರ ಉಳ್ಳ
ರಕುತವ ದ್ವರ್ತನ । ಭಕುತಿಯಿಂ ನೋಳ್ಪದು ೨೫

ವದನಾರವಿಂದದಿದಂತಾ । ಅವೆ
ಕುಂದ ಕುಡ್ಮಲ ಪಂಕ್ತಿನಿಯತ । ಭಕ್ತಿ
ಆದ್ರತೆಯಲಿ ಮನ ಅರ್ಪಿತ । ಮಾಡಿ
ಹೃದಯ ಅನರ್ಪಿತ ಇತರತ್ರ । ಆಹ
ಸದಮಲ ಭಕ್ತೀಲಿ । ಆದ್ರಿತ ಆವಶ
ವಿಧಿಪಿತನ್ನೀಕ್ಷಿಸಿ । ಸಾಧಿಸು ಸಮಾದಿ ೨೬

ತ್ಯಕ್ತವು ಹರಿಗನ್ಯಸ್ಮರಣ । ಅಪ್ರ
ಮತ್ತದಿಂ ಹರಿಗುಣಧ್ಯಾನ । ತೈಲ
ವರ್ತಿಲ್ಲದಿರೆ ದೀಪಶಮನ । ಪರಿನಿ
ರ್ಗತ್ವ ವಿಷಯದಿಂ ಮನ । ಆಹ
ಮುಕ್ತಾಶ್ರಯನರಕ್ತಿ । ತ್ಯಕ್ತದುರಭಿಮಾನ
ಪ್ರತ್ಯಕ್ಷ ತನ ಬಿಂಬ । ವ್ಯಕ್ತವು ಭಕುತಗೇ ೨೭

ಜೀವಿಸಿದ್ದರು ಅವಮುಕ್ತ । ಹರಿ
ತತ್ವಾಪರೋಕ್ಷದಿ ಯುಕ್ತ । ಮನ ನಿ
ವೃತ್ತಿಯ ಚರಮ ಅವಸ್ಥಾ । ಮತ್ತೆ
ಸ್ವಸ್ಥಜ್ಞಾನಾನಂದ ಯುಕ್ತ । ಆಹ

ತ್ಯಕ್ತ ದೋಷನು ಹರಿ । ನಿತ್ಯಾನಂದನು ಸರ್ವ
ಕುತ್ತಮ ಹರ್ಯಧೀ । ನತ್ವವ ತಿಳಿಯುವ ೨೮

ಅಪರೋಕ್ಷಿಯಾದವ ತನ್ನ । ದೇಹ
ಸುಪರಿ ಪೋಷ್ಗವಲ್ಲಣ್ಣ । ದೈವಾ
ದುಪೇತವು ವಸನ । ಮರೆ
ದಪವಿತ್ರ ಮದಿರ ಸೇವನ । ಆಹ
ಅಪರಿ ಅಭಿಮಾನ । ಅಪಗತನಾಗುತ
ಆಪಾರ ಮಹಿಮಾನ । ರೂಪದೊಳಾಸಕ್ತ ೨೯

ಪ್ರಾರಬ್ಧ ಕರ್ಮ ಕ್ಷೀಣೇಸೇ । ಅಂಥ
ಧೀರ ಸಮಾಧಿ ಯೋಜೀಸೆ । ಸ್ವಾಪ
ಮೀರುತ್ತ ಜಾಗ್ರತ್ತು ಎನಿಸೆ । ಆಗ
ಪಾರ ಸ್ವಪ್ನ ದ್ರೂಷ್ಟ ತೈಜಸೆ । ಆಹ
ಮರು ದೇಹವಾ ಪರಿ । ತೋರದೆ ಚರಮನ್ನೆ
ಶರೀರ ಪೋಷಣ । ತೊರೆಯುವ ಸುಜ್ಞಾನಿ ೩೦

ಸರ್ವ ಭೂತಸ್ಥನು ಆಗಿ । ಹಾಗೂ
ಸರ್ವರಿಂ ಭಿನ್ನನು ಆಗಿ । ವ್ಯಾಪ್ತ
ಸರ್ವವು ಒಳಹೊರಗಾಗಿ । ಇಹ
ಸರ್ವೋತ್ತಮ ಭಜಕಾಗಿ । ಆಹ
ಸರ್ವ ಸುಂದರ ಗುರು । ಗೋವಿಂದ ವಿಠಲನ
ಸರ್ವತ್ರ ಈಕ್ಷಿಸಿ । ಸರ್ವಜ್ಞ ಪದವ ಸೇರೋ ೩೧

೩೨೮

ಕುಚೇಲೋಪಾಖ್ಯಾನ

ನಮಿಸುತ್ತ ಶ್ರೀ ಹರಿಗೆ ಲಕ್ಷ್ಮಿಯೂ ಬಲಗೊಂಡು ।
ಅಮಲ ಋಜುವರ್ಯ ತತ್ವರ್ಗೆ ॥

ಸುಮನ ಯತಿ ದಾಸರ್ಗೆ । ನಮಿಸಿ ಪೇಳುವೆ ಕೇಳಿ ।
ವಿಮಲ ಸುಧಾಮ ಚರಿತೆಯ ||ಪ||

ಧರಣಿ ಭಾರವ ನಿಳುಹಿ । ಪುರಿಯ ದ್ವಾರಾವತಿಗೆ
ಸಿರಿ ಕೃಷ್ಣ ಬರಲವಗೆ ಸುಸ್ವಾಗತ ॥
ಪುರಜನರ ಕಲಶಾದಿ । ಕರಗಳಲಿ ಪಿಡಿಯುತ್ತ
ಮೆರವಣಿಗೆಯಿಂದ ತಾಂಕರೆದೊಯ್ದರು ೧

ಸೃಷ್ಟಿ ಸಂಹಾರಾದಿ । ಅಷ್ಟಕರ್ತೃವು ಆದ
ಕೃಷ್ಣಕಥೆ ಮುಂದ್ವರಿಸೆ–ಪರೀಕ್ಷಿತ್ತು ॥
ಶ್ರೇಷ್ಠ ಪ್ರಶ್ನೆಯ ಗೈಯೆ । ಸುಷ್ಠು ಶುಕ ವಿಭೂತಿಯು
ಪೃಷ್ಟವ್ಯಕುತ್ತರವ ತಾ ಪೇಳಿದನು ೨

ನಾಲಿಗ್ಗೆ ಭೂಷಣವು । ಶ್ರೀ ಲೋಲ ಕಥೆ ಪೇಳೆ
ವಾಲಿ ಭಂಜನ ಸೇವೆ ಮಾಳ್ದಂಥ ॥
ನೀಳವಾದ್ಹಸ್ತಗಳು । ಹಸ್ತವೆಂದಿನಿಸುವುವು
ಲೀಲೆಗಳನ್ನೈಯ್ದುಪುದೆ ಮನುವೆನ್ನಿ ೩

ಉತ್ತುಮ ಶ್ಲೋಕನಾ । ಉತ್ಕರ್ಷ ಕೇಳ್ವಂಥ
ಶ್ರೋತೃವೇ ಶ್ರೋತೃವೆಂದೆನಿಸುವುವು ॥
ಮತ್ತೆ ಆಚಲ ಅಚಲ । ಪ್ರತಿಮೆಗೆ ವಂದಿಸುವ
ನೆತ್ತಿಯೇ ನೆತ್ತಿಯದು ನೀವೆ ಕೇಳಿರಿ ೪

ಈಕ್ಷಿಸುವ ಹರಿಮೂರ್ತಿ । ಚಕ್ಷುವೇ ಚಕ್ಷುಸ್ಸು
ಪ್ರಕ್ಷಾಳನೋದಕದಿ ಹರಿಪಾದವ ॥
ಪ್ರೋಕ್ಷಿತದ ಧರಿಸುವ । ಕೋಮಲಾಂಗವೇ ಅಂಗ
ಕುಕ್ಷಿಯೊಳಿದುವೆ । ಪೆಸರತಾಗಳಿಸಿತು ೫

ವೇದ ವೇದಾಂಗದಲಿ । ಮೇಧಾವಿಯಹ ವಿಪ್ರ
ಗೈದಿಂದ್ರಿಜಯವದೆ ಪ್ರಶಾಂತವು ॥

ಯಾದೃಚ್ಛ ಲಾಭದಿಂ । ಆದರಿಸಿ ಸತಿಸುತರ
ಮೋದದಿಂ ಸಂಸಾರ ನಡೆಸಿದ್ದ ೬

ಹರಹರಕು ಬಟ್ಟೆಗಳ । ಧರಿಸಿ ದಾರಿದ್ರ್ಯದಿಂ
ಇರಲು ಆ ಕುಚೇಲ ಕ್ಷುಧಾರ್ತನ
ಇರುವ ಮಕ್ಕಳ ಕಂಡು । ವರಪತಿವ್ರತೆ ಪತಿಗೆ
ಅರುಹಿದಳು ಭಿನ್ನಪವ ತಲೆಯಬಾಗಿ ೭

ಆ ಪನ್ನ ಪರಿಪಾಲ । ಶ್ರೀಪತಿಯು ಸಖ ನಿಮಗೆ
ಕಾಪಿಡುವ ಬೇಡುವುದವನ ತಪ್ಪದೆ ॥
ನೀಂಪೋಗಿ ದರ್ಶಿಸಲು । ಕೈಪಿಡಿದು ಆದರಿಸಿ
ಪ್ರಾಪ್ತಿಸುವ ಧನವನ್ನು ಪತಿದೇವನೆ ೮

ಎಂದ ವಚನಕೆ ಕೃಷ್ಣ । ಸಂದರ್ಶನ ವಹ ಆ
ನಂದದಿಂ ಪೊರಮಡಲು ಉಪಾಯನವ ॥
ಇಂದಿರಾಪತಿಗೆ ತಾ । ಎಂದೆನಲು ಸುಧಾಮನು
ಒಂದು ಮೂರ್ಹಿಡಿ ಅವಲಕ್ಕಿಯ ಕೊಟ್ಟಳು ೯

ಚಿಂದಿ ವಸನದಿ ಕಟ್ಟಿ । ಮುಂದೆ ದ್ವಾರಕಿ ಸೇರಿ
ಅಂದ ಮೂರ್ಬಿಡದಿಪುಕೊಷ್ಟ ॥
ಚೆಂದಂದಿಂ ದಾಟುತ್ತ । ಸುಂದರಿಯರಮನೆಗಳ
ಪೊಂದಿ ಕಂಡನು ಕೃಷ್ಣ ಸುಖಶಯನನು ೧೦

ಕಂಡೊಡನೆ ಸಖನಾದ । ಬಂಡುಣಿ ಸುಧಾಮನೆದುರ್
ಗೊಂಡು ಅಪ್ಪುತ್ತ ಕರೆದೊಯ್ದು ॥
ಕೊಂಡ ವತ್ಸಲ ಸಖನ । ಕೊಂಡು ಪರ್ಯಂಕದಲಿ
ಮಂಡಿಸಿದ ಆನಂದವೇನೆಂಬೆನು ೧೧

ಇಂದಿರಾಪತಿ ಸಖನ । ಅಂದ ಪಾದೋದಕವ
ಚಂದದಿಂ ಶಿರದಲ್ಲಿ ಧರಿಸುತ್ತ ॥

ಗಂಧಪೂಸಲು ಮಿತ್ರ । ವಿಂದೆ ತಾ ಚಾಮರವ
ತಂದು ಬೀಸಿದಳು ವಿಪ್ರೋತ್ತಮನಿಗೆ ೧೨

ಸತಿಯು ರುಕ್ಮಿಣಿ ಸಹಿತ । ಶತ ದರಿದ್ರನ ಸೇವೆ
ಅತುಲ ವಿಭವದಿಗೈವ ಕೃಷ್ಣನ್ನ ॥
ಮತಿವಂತೆ ಮಹಿಷಿಯರು । ಇತರರೆಲ್ಲರು ಕಂಡು
ಅತಿಯಾಗಿ ಪಟ್ಟರು ಆಶ್ಚರ್ಯ ೧೩

ಎಂತು ಪುಣ್ಯೈವನದು । ಆಂತಿರ್ಪ ಹರಿಹಸ್ತ
ಸಂತೃಪ್ತಿ ಸೇವೆ ಸೊಬಗೀಲಿ ॥
ಇಂತಪ್ಪ ಅವಧೂತ । ಸಂತ ಭಿಕ್ಷುಕನೇವೆ
ಎಂತಪ್ಪ ಪುಣ್ಯಗೈದಿರ್ಪ ೧೪

ಮಿತ್ರರಿಬ್ಬರ ಮಧ್ಯೆ । ಹತ್ತಿದವು ಮಾತುಗಳು
ಅತ್ತ ಗುರು ಸಾಂದೀಪ ಶುಶ್ರೂಷ ॥
ಕೃತ್ಯಗಳ ನೆನೆಸುತ್ತ । ಪೊತ್ತ ಪೋಗಾಡಿದರು
ರಾತ್ರಿಯಲ್ಲವರು ಬಹುವಾಗಿ ೧೫

ಗೆಳೆಯನೇ ಪೇಳು ಗುರು । ಕುಲವನಾಚರಿಸಿ ಬಹು
ಒಲವಿನಿಂ ಗುರುವಿಗೆ ಕಾಣಿಕೆ ॥
ನಲಿದಿತ್ತು ಪುರಕ್ಪೋಗಿ । ಬಳಿಕ ಲಗ್ನವು ಆಗಿ
ಬೆಳೆದ ಮಕ್ಕಳ ಸಹ ಸುಖವೇನೊ ೧೬

ಧನವನಿತೆ ಸಂತ್ಯಾಗ । ಗುಣವುಳ್ಳ ನಿನಗೆಂತು
ಎಣೆಯುಂಟೆ ಇತರರು ಇಹದಲ್ಲಿ ॥
ನಿನಮೇಲೆ ಎನಪ್ರೀತಿ । ಘನವಾಗಿ ಇಹುದಯ್ಯ
ಪ್ರಾಣಸಖ ಸುಧಾಮ ಕೇಳಯ್ಯ ೧೭

ಗುರುಕುಲದಿ ಕಳೆದಂಥ । ಪರಿಪರಿಯ ದಿನಚರ್ಯ
ಮರೆಯದಲೆ ಸ್ಮರಿಸುವೆಯ ಕುಚೇಲ ॥

ಗುರುಸೇವೆ ಶ್ರೇಯಸಿಗೆ । ಪರಮ ಸಾಧನವಯ್ಯ
ಗುರುವಿನಂತಸ್ಥನ್ನ । ಉಪದೇಶ ೧೮

ಉಪದೇಶ ಪೊಂದಿದವ । ಅಪರಿಮಿತ ಧನ್ಯನೂ
ಉಪದೇಶ ರಹಿತನು ಸಂಸಾರ ॥
ಕೂಪಾರ ದಾಟಲ್ಕೆ । ವಿಫಲನೇ ಆಗುವನು
ಸುಪವಿತ್ರ ಗುರುವಿನಿಂದುಪದೇಶ ೧೯

ಸುಷ್ಠು ಗುರು ಶುಶ್ರೂಷೆ । ತುಷ್ಟನಾಗುವ ಪರಿಯು
ಎಷ್ಟೊ ತಪದಾನ ಕೃತ್ಯದಿ ॥
ತುಷ್ಟನಾಗುವುದಿಲ್ಲ । ದುಷ್ಟಜನ ಗುರುಭಕ್ತಿ
ನಷ್ಟರಾದವರ ಯಜ್ಞದಿಂ ೨೦

ಗುರುಪತ್ನಿಯೊಂದಿನವು । ತರಲಿಂಧನಾದಿಗಳ
ಅರುಹೆ ನಾವುಗಳೂ ವನಸಾರೆ ॥
ಜರುಗಿದ್ವೈ ಚಿತ್ರಗಳ । ಮರೆತೆಯಾ ಕುಚೇಲ
ಬಿರುಗಾಳಿ ಮಳೆ ಮಿಂಚು ಸಿಡಿಲೇನು ೨೧

ಎರಗುತಿರೆ ಬೆದರುತ್ತ । ಇರುಳಲ್ಲಿ ವನಮಧ್ಯ
ತಿರುತಿರುಗಿ ಕಣ್ಕಾಣ್ದೆ ನೀಯನ್ನ ॥
ಕರಪಿಡಿದು ಗಿಡದಡಿಯ । ಒರಗಿ ನಿಂತುದ ನಾನು
ಮರೆತಿಲ್ಲ ಕಂಡ್ಯಾ ಸುಧಾಮ ೨೨

ಗುರುಗಳೇ ನಮ್ಮನ್ನು । ಮರುದಿನದಿ ರವ್ಯುದಯ
ಅರಸುತ್ತ ಬಂದವರು ಕಾಣದೆ ॥
ಸುರಿವ ಕಣ್ಣೀರೊರಸಿ । ಅರಚಿ ಕೃಷ್ಣಾ । ಎಂದು
ಮರಳಿ ಕುಚೇಲ ಎಲ್ಲೋದ್ರಿ ೨೩

ಮೆಚ್ಚಿದೆನು ನಿಮ್ಮಯ । ಅಚ್ಚ ಗುರುಭಕ್ತಿಗೆ
ಸ್ವಚ್ಛಮನದರ್ಪಣೆಗೆ ಮತ್ತಿನ್ನು ॥

ಹೆಚ್ಚಿನದು ಏನುಂಟು । ಅಚ್ಚ ದ್ವಿಜ ಬಾಲಕರೆ
ಅಚ್ಯುತನ ದಯದಿ ವಿದ್ಯೆ ಸಫಲ ೨೪

ಹರಸಿದನು ನಮ್ಮನ್ನು । ಗುರುವು ಸಾಂದೀಪನಿಯು
ಗುರುಕುಲದಿ ಪಟ್ಟ ಕಷ್ಟಂಗಳ ನಾ ॥
ಸ್ಮರಣೆ ಮರೆವಂತಿಲ್ಲ । ಗುರುವನುಗ್ರಹ ಪೂರ್ಣ
ನರಯೋಗ್ಯನವ ಮುಕ್ತೀಗೆ ೨೫

ಹರಿ ಆಡ್ದ ಮಾತುಗಳ । ವರವಿಪ್ರ ಕೇಳುತ್ತ
ವರ್ಣಿಸಿದ ಹರಿಮಹಿಮೆ ಲೀಲೆಯ ॥
ಗುರುವು ಜಗತಿಗೆ ನೀನು । ಗುರುಕುಲವು ನಿನಗುಂಟೆ
ಮರುಳು ಮಾಡುವೆಯಾ ನೀಯೆನ್ನ ೨೬

ಇಂತಪ್ಪ ಲೀಲೆಗಳ । ಶಾಂತ ಚಿತ್ತದಿ ಸ್ಮರಿಸಿ
ಸಂತ ವಿಪ್ರನು ನಿಂತ ಮಾತಾಡ್ದೆ ॥
ಅಂತಸ್ಥ ಸರ್ವಜ್ಞ । ಕಂತು ಜನಕನು ಕೇಳ್ದ
ಕಂಥೆಯೊಳಗೇನಿಹುದು ಪೇಳಯ್ಯ ೨೭

ಅತ್ತಿಗೆಯ ಪ್ರೇಮದಲಿ । ಇತ್ತ ಉಪಾಯನವ
ಜತ್ತಾಗಿ ತಂದಿರುವೆ ನಾಬಲ್ಲೆ ॥
ಭಕ್ತಿರಸ ಮಿಳಿತಾಗಿ । ಇತ್ತುದನು ಸ್ವೀಕರಿಪೆ
ಗೊತ್ತು ನಿನಗಿದು ಎಂದು ಕೈಚಾಚಿ ೨೮

ಚಿಂದಿಗಂಟನು ಬಿಚ್ಚಿ । ಒಂದ್ಹಿಡಿ ಅವಲಕ್ಕಿ
ನಂದದಿಂ ಮೆಲ್ಲುತ್ತ ಹರಿತಾನು ॥
ಸಂದೆರಡನೇ ಹಿಡಿಗೆ । ಅಂದ ಹಸ್ತವ ಚಾಚೆ
ಬಂದು ಕೈ ತಡೆದಳು ರುಕ್ಮಿಣಿ ೨೯

ಅಪ್ರಮೇಯನೆ ನಿನ್ನ । ಸುಪ್ರೀತಿ ಸಾಧನೆಗೆ
ಒಪ್ಪಿಡೀ ಅವಲಕ್ಕಿ ಸಾಲದೆ ॥

ಒಪ್ಪಿಕೊ ಎನಮಾತು । ಅಪ್ಪಾರ ಸಂಪತ್ತು
ವಿಪ್ರಂಗೆ ಬಂದಿಹುದು ಸಾಕಿನ್ನು ೩೦

ತಂದ ಉಪಾಯನವ । ಮಂದಿಗೂ ಕೊಡಬೇಕು
ನಂದಜನೆ ಕೊಡು ಎನಗೆ ಪ್ರಸಾದ ॥
ಎಂದು ರುಕ್ಮಿಣಿ ಹರಿಯ । ಅಂದ ಹಸ್ತವ ತಡೆದು
ಮುಂದೆ ತಾ ನಿಂತಳು ನಗುತಲ್ಲಿ ೩೧

ಅಂದು ದಿನ ಸುಧಾಮ । ಇಂದ್ರಭೋಗ್ವನುಭವಿಸಿ
ಮುಂದೆ ಬೆಳಗಾಗೆ ಪಯಣಕ್ಕೆ
ಸಂದು ಒದಗಲು ಕೃಷ್ಣ । ವಂದಿತನು ತಾನಾಗಿ
ಚಂದದಿಂ ಸಾಗಿದ ತನ್ನ ಪುರಿಗೆ ೩೨

ಹರಿಯ ಬೇಡದ ಮನಕೆ । ಹಿರಿಹರೀ ಹಿಗ್ಗುತ್ತ
ಶರಣಜನವತ್ಸಲನ ಕೊಂಡಾಡಿ ॥
ಸಿರಿಪತಿಗು ಪಾಪಿ ಇಹ । ನರನುತನಗೆಲ್ಲಿಸಮ
ಹರಿಯೊಲಿಮೆಲೀ ನಾನೆ ಕೃತಾರ್ಥ ೩೩

ಅಷ್ಟ ಸಿದ್ಧಿಗಳೆಲ್ಲ । ಕಷ್ಟವಿಲ್ಲದೆ ಬಹುದು
ಸ್ಪಷ್ಟವಿದು ಸಿರಿಕೃಷ್ಣ ಪಾದಾಬ್ಜ ॥
ಮುಟ್ಟಿ ಭಜಿಸುವ ಯೋಗ । ಕಟ್ಟಲೆಯ ನಾ ಬೇಡ್ವೆ
ಕೃಷ್ಣಯ್ಯ ಇದಕನ್ಯ ನಾನೊಲ್ಲೆ ೩೪

ಧನವ ನೀ ಕೊಟ್ಟಿದ್ರೆ । ಘನಮದವು ಬಂದೊದಗಿ
ಗುಣವನಧಿ ನಿನ್ನ ತುತಿಸದೆ ॥
ತನು ಸೌಖ್ಯ ಹವಣಿಸುತ । ಅನುಗಾಲ ಭವದಲ್ಲಿ
ಮುಣುಗಿ ನಾವ್ಯಥೆಯ ಪಡುತಿದ್ದೆ ೩೫

ಈ ರೀತಿ ಕೃಷ್ಣನ್ನ । ಬಾರಿ ಬಾರಿಗೆ ಹೊಗಳಿ
ಊರುತನದೆಂಬಲ್ಲಿ ನಿಂತನು ॥

ಸೂರ್ಯಭವಿಮಾನ । ಭಾರಿ ಸೌಧಂಗಳನು
ಆರಾಮಂಗಳ ಕಂಡನು ೩೬

ಮಾರುತನು ತಂಗಾಳಿ । ಬಾರಿ ಬಾರಿಗೆ ಬೀಸಿ
ನೀರಜದ ಗಂಧ ತಂದಿತ್ತ ॥
ಪೂರ್ವದ ತನ್ನೂರು । ಬೇರೆಂಬ ಭ್ರಾಂತಿಯು
ಘೋರ ಆಲೋಚನೆಯೊಳಿದ್ದನು ೩೭

ಸುಧಾಮನರಸಿ ತಾ । ವೇದಘೋಷಗಳಿಂದ
ಐದಿ ತನ ಪತಿಯನ್ನ ವಂದಿಸಿ ॥
ಸುದತೇರು ಆರುತಿಯ । ಮೋದದಿಂದೆತ್ತುತಿರೆ
ವಾದ್ಯಗಳು ಮೊಳಗಿದುವು ಬಹುವಾಗಿ ೩೮

ಸರುವ ಭೂಷಿತಳಾಗಿ । ಕರಪಿಡಿದು ಪತಿಯನ್ನು
ಅರಮನೆಲಿ ಪೀಠದಲಿ ಕೂಡಿಸಿ ॥
ಮೆರೆವಲಂಕಾರದಿಂ । ಪರಿಚರರು ತಿರುಗುತಿರೆ
ವಿರಚಿಸಿದಳೂ ಸೇವೆ ಪತಿದೇವ್ಗೆ ೩೯

ಮಣಿಖಚಿತ ಸ್ತಂಭಗಳು । ರತ್ನಮಯ ಪರ್ಯಂಕ
ರತ್ನ ಮುತ್ತುಗಳ ತೋರಣ ॥
ರತ್ನದೀಪಗಳೊತ್ತ । ಮಣಿಮಯದ ಬೊಂಬೆಗಳ
ಗುಣಮಣಿಯು ನೋಡಿ ಬೆರಗಾದ ೪೦

ಮನದಿ ಮದವೇರದಲೆ । ಗುಣ ಪೂರ್ಣ ಹರಿಯಿತ್ತ
ಘನವಾದ ಸಂಪದವು ಎನ್ನುತ್ತ ॥
ಅಣುಮಹತು ವ್ಯಾಪ್ತನ್ನ । ಗುಣಮಾಲೆ ಚಿಂತಿಸುತ
ದಿನಗಳನು ಕಳೆಯುತ್ತಲಿದ್ದನು ೪೧

ಮುಷ್ಟಿ ಅವಲಕ್ಕಿಗೆ । ಇಷ್ಟೊಂದು ಸಂಪತ್ತೆ
ಕೃಷ್ಣತವ ಕಲ್ಯಾಣ ಗುಣಗಳ ॥

ಎಷ್ಟೆಂದು ವರ್ಣಿಸಲಿ । ವಿಷ್ಟರ ಶ್ರವ ನಿನ್ನ
ಶ್ರೇಷ್ಟ ಮಹಿಮೆಗಳು ಅನಂತ ೪೨

ಜನುಮ ಜನಮಗಳಲ್ಲಿ । ಗುಣನಿಧಿಯೆ ತವದಾಸ್ಯ
ಅನುನಯದಿ ಕೊಟ್ಟೆನ್ನ ಪಾಲೀಸೊ ॥
ದಿನದಿನದಿ ತವನಾಮ । ನೆನೆದಂಥ ಸೌಭಾಗ್ಯ
ಮಣಿದು ಬೇಡವೆ ಹರಿಯೆ ಪಾಲಿಸೊ ೪೩

ಭಕ್ತರಿಗೆ ಸಂಪದವ । ಇತ್ತಡಾದರೆ ಅವರು
ಭಕ್ತಿಪಂಥವ ತೊರೆದು ಮದವೇರಿ ॥
ಲೆತ್ತ ಪಗಡೆಯನಾಡಿ । ವಿತ್ತಗಳ ಪೋಗ್ಯಾಡಿ
ಮತ್ತೆ ಮತ್ತೆ ಪುಟ್ಟಿ ದಣಿಯೋರು ೪೪

ಎಂತೆಂದು ಕೊಡನವನು । ಸಂತರಿಗೆ ಸಂಪದವ
ಇಂತೆಂದು ಅವನ ಸಂಕಲ್ಪ ॥
ಚಿಂತಿಸುತ ಪರಿವಾರ । ಕಾಂತೆ ಸುತರಿಂ ಕೂಡಿ
ಸಂತಸದಿ ಕಳೆದ ಆಯುಷ್ಯ ೪೫

ಚರಿತೆ ಸುಧಾಮನದು । ಪರಿಪರಿಯ ವರ್ಣಿಸುತ
ಒರೆವರಿಗೆ ಕೇಳ್ವರಿಗೆ ಮಹತಾದ ॥
ವರಗಳನೆ ಪಾಲಿಸುತ । ಸರುವ ಸೌಭಾಗ್ಯಗಳ
ಹರಿಯೆ ತಾ ಕರುಣಿಸುವ ನಿಜವಿದು ೪೬

ಚಿತ್ತದಲಿ ತವಧ್ಯಾನ । ಸಕ್ತರಾದವರಿಗೆ
ಭಕ್ತಿ ವೈರಾಗ್ಯ ಸುಜ್ಞಾನ ॥
ಮತ್ತೆ ಶಾಶ್ವತ ಸುಖವ । ಇತ್ತಪನು ತಪ್ಪದಲೆ
ಕರ್ತೃ ಗುರು ಗೋವಿಂದ ವಿಠ್ಠಲ್ಲ ೪೭

ಅಸ್ಮಾದ್ಬಿಂಬಾರ್ಪಣಮಸ್ತು । ಶ್ರೀ ಮಧ್ವೇಶಾರ್ಪಣಮಸ್ತು ॥

(ಕುಸುಮ ಷಟ್ಪದಿಯ ಧಾಟಿಯಲ್ಲಿದೆ)

೩೨೯

ನೋಡಿರೇ ಬೃಹತಿ ಸಹಸ್ರನ ನೋಡಿರೇ ||ಪ||

ನೋಡಿರೆ ಶಿರಿ ನಾರಾಯಣನ । ಕರ
ಜೋಡಿಸಿ ವಂದಿಸಿ ಅವನ । ಆಹ
ಈಡು ರಹಿತ ದೇವ । ಜೋಡು ಕುಂಡಲಧಾರಿ
ಬೇಡುವರಭೀಷ್ಟ । ನಿಡುವ ದೇವನ ||ಅ.ಪ||

ಪಂಚಾತ್ಮ ಅನಿರುದ್ಧ ಆದಿ । ಅವ
ಪಂಚ ದ್ವೀಪದಿ ಸುಪ್ರಮೋದಿ । ಮತ್ತೆ
ಪಂಚ ಪ್ರಸ್ತಾರ ಪ್ರಭೇದಿ । ಚಿತಿ
ಹಂಚಿಪ ವಿಸ್ತಾರ ಓದಿ । ಆಹ
ಪಂಚಾಂಗ ವಿಪಗನ । ಪಂಚ ಶಸ್ತ್ರೋಕ್ತನ
ಸಂಚಿಂತನೆಯ ಮಾಡೆ । ಸಂಚಿತಾಗಮ ನಾಶ ೧

ಮಹದುಕ್ಥ ನಾಮಕವೆನಿಪ । ಋಕ್ಕು
ಸಾಹಸ್ರ ಸಂಖ್ಯಾಕ ವೆನಿಪ । ಅದೆ
ಸಾಹಸ್ರ ಹರಿ ವಾಚ್ಯವೆನಿಪ । ಪಂಚ
ಮಹದುಕ್ಥವು ಅಪರೂಪ । ಆಹ
ಇಹ ಸ್ತೋಮಸಾಮವು । ಇಹುದು ಛಂದವು ಚಿತಿ
ಸಹಜ ಶಸ್ತ್ರಾಖ್ಯನ । ಮಹ ಅನಿರುದ್ಧಾದಿ ೨

ಪಂಚವಿಧವು ಸ್ತೋಮವು । ತ್ರಿವೃತ್
ಪಂಚದಶ ಸಪ್ತದಶವು । ಮತ್ತೆ
ಪಂಚ ದ್ವಿದ್ವಯ ಏಕವು । ಇನ್ನು
ಪಂಚ ವಿಂಶಾತ್ಮಕ ನಿರವು । ಆಹ
ಪಂಚಾನಿರುದ್ಧಾದಿ । ಪಂಚಾತ್ಮತಾನಿರುವ
ಕೊಂಚರಹಿತ ಮಹಿಮ । ಮಿಂಚಿನಂತೆ ಪೊಳೆವ ೩

ಸ್ತೋಮದೊಳೂರ್ಬಗೆ ಸ್ಥಿತ । ತ್ರಿವೃ
ನ್ನಾಮ ವಧ್ಯಾತ್ಮಾದಿಗತ । ಅಲ್ಲಿ
ನಾಮನಿರುದ್ಧ ರುದ್ಧಗತ । ಮತ್ತೆ
ಸ್ತೋಮ ತ್ರಿಪಂಚದಿ ಧೃತ । ಆಹ
ಆ ಮಹಾಧ್ಯಾತ್ಮತ್ರಿ । ಭೂಮ್ಯಾದಿ ಪಂಚದಿ
ನೇಮದಿಂದ ನಿರುದ್ಧ । ನಾಮ ದ್ಯುಮ್ನನ ರೂಪ ೪

ಶಾರೀರ ಲಿಂಗಾಖ್ಯವದು । ಹದಿ
ನಾರು ಕಳೇಗಳೊಪ್ಪೋದು । ಮೂಲ
ಸೇರುತ್ತ ಸಪ್ತದಶವಹುದು । ಅಲ್ಲಿ
ಧಾರಿತ ಸಪ್ತದಶ ಇಹೋದು । ಆಹ
ಮೂರ್ಕೈದೆರಡು ರೂಪ । ಧಾರಿ ರುದ್ಧನು ಸಂ–
ಕರುಷಣಾಖ್ಯನುಹರಿ । ಪ್ರೇರಿಪ ಸರ್ವರನ ೫

ಭೂತವಧ್ಯಾತ್ಮಾದಿ ದೇವ । ಮತ್ತೆ
ಅಸ್ಥ್ಯಾದಿ ಸಪ್ತಕ ದೇವ । ಗುಣಿಸೆ
ಮೊತ್ತವು ಏಕ್ವಿಂಶ ಭಾವ । ಅಲ್ಲಿ
ಸ್ಥಿತನಷ್ಟ ರೂಪದಿ ದೇವ । ಆಹ
ತತ್ತ್ವನ್ನಾಮನಿರುದ್ಧ । ಮತ್ತೆ ವಾಸೂದೇವ
ಸ್ಥಿತನಾಗಿ ವ್ಯಾಪಾರ । ಕೃತವು ಅವನಿಂ ದೇವ ೬

ಮನೋಬುದ್ಧ್ಯಹಂಕಾರ ಚಿತ್ತ । ಚೇತ್ನ
ಎಣಿಸು ರಜಸ್ತಮಸತ್ವ । ಅಷ್ಟ
ಗುಣಿಸೋದು ತ್ರಿವಿಧವಧ್ಯಾತ್ಮ । ಮೂಲ
ಎಣಿಸಲದು ಪಂಚವಿಂಶಾತ್ಮ । ಆಹ
ಅನಿರುದ್ಧ ನರೆಯಣ । ಚಿನುಮಯ ರೂಪಿಯು
ಮನ ಆದಿಯೋಳಿದ್ದು । ತನು ಕಾರ್ಯಗೈಸುವ ೭

ಮೂರೆರೆಡೂ ವಿಧಸಾಮ । ತಿಳಿ
ವರಗಾಯಿತ್ರಿ ರಥಂತ್ರ ನೇಮ । ಮತ್ತೆ

ವರ ಬೃಹದ್ಭದ್ರರಾಜನ್ನಾಮ । ಅಲ್ಲಿ
ಸಿರಿದ್ಯುಮ್ನ ಸಾಮಗ ಧಾಮ । ಆಹ
ಇರುವ ಸಾಮಗದ್ಯುಮ್ನ । ಎರಡು ಮೂರ್ಜಗೆಯಲಿ
ವರ ಅನಿರುದ್ಧಾದಿ । ಪರಿ ಪರಿ ಭೇದದಿ ೮

ಸಾಮ ಗಾಯಿತ್ರಿಯು ಅಲ್ಲಿ । ಹರಿ
ದ್ಯುಮ್ನ ನಾನಿರುದ್ಧನು ಅಲ್ಲಿ । ಇದ್ದು
ಸ್ವಾಮಿಯ ಗಾಯನದಲ್ಲಿ । ಸ್ತುತಿ
ನೇಮದಿ ಮಾಳ್ಪರೆಂಬಲ್ಲಿ । ಆಹ
ನಾಮ ಗಾಯತ್ರ್ಯೆಂಬ । ಸಾಮಾಧಿ ರೂಢನು
ಆ ಮಹಾ ಗಾಯಕರ । ಸ್ವಾಮಿಯು ರಕ್ಷಿಪ ೯

ಸಾಮ ರಥಂತರದಲ್ಲಿ । ದೇಹ
ನಾಮ ರಥಾ ರೂಢನಲ್ಲಿ । ಹರಿ
ದ್ಯುಮನ ದ್ಯುಮ್ನ ತಾನಲ್ಲಿ । ಇದ್ದು
ನಾಮ ರಥಂತರನಲ್ಲಿ । ಆಹ
ಸ್ವಾಮಿ ತಾ ಕರೆಸುತ್ತ । ನೇಮದಿ ದೇಹಾಖ್ಯ
ಈ ಮಹಾರಥದಲ್ಲಿ । ಮಾಮನೋಹರನಿಹ ೧೦

ಸಾಮ ಬೃಹತ್ಯಾಖ್ಯದಲ್ಲಿ । ಇಹ
ಸ್ವಾಮಿ ಬೃಹದ್ರಥದಲ್ಲಿ । ಇದೆ
ನೇಮದಿ ಬೃಹನ್ನಾಮದಲ್ಲಿ । ಹರಿ
ದ್ಯುಮ್ನನ ಸಂಕರುಷಣನಲ್ಲಿ । ಆಹ
ಸನ್ಮೋಕ್ಷ ಮಂಗಳದ । ನಾಮ ಭದ್ರಾಖ್ಯದ
ಸಾಮದಲ್ಲಿರುತಿಹ । ದ್ಯುಮನ ವಾಸೂದೇವ ೧೧

ಮುಕ್ತ ರಂಜಕನವ ಕಾರಣ । ಹರಿ
ಗುಕ್ತಿ ರಾಜನ್ನಾಮ ಭಜನ । ಅಲ್ಲಿ
ಸಕ್ತ ದ್ಯುಮ್ನನು ನಾರಾಯಣ । ತಿಳಿ
ಯುತ್ತ ರಾಜನ ಸಾಮಗತನ । ಆಹ

ಉಕ್ತಗಾಯಿತ್ರ್ಯುಷ್ಣಿಕ್ । ಮತ್ತೆ ಬೃಹತಿ ತ್ರಿಷ್ಟುಪ್
ಸ್ತುತ್ಯ ದ್ವಿಪದನೆಂದು । ಉಕ್ತ ಛಂದಸಿನಲ್ಲಿ ೧೨

ಸ್ತುತ್ಯನು ತ್ರಿ ಸಂಧ್ಯಾಕಾಲ । ಎಂಬ
ಗುಕ್ತಿಗನುಸಾರ ಶ್ರೀಲೋಲ । ಗಾ
ಯತ್ರಿ ನಾಮಾಖ್ಯನ ಲೀಲ । ಅವ
ನುಕ್ತ ಜಯಪತಿ ಶಾಂತಿಲೋಲ । ಆಹ
ದೈತ್ಯರ ತಾಪಕ । ಉಕ್ತ ಉಷ್ಣಿಕ್ಕಭಿದ
ತತ್ಪ್ರತಿಪಾದ್ಯನು । ಪತಿರೂಪಿ ಜಯೆ ಕೃತಿಗೆ ೧೩

ಬೃಹದಾಖ್ಯ ಛಂದಸ್ಸಿನಲ್ಲಿ । ಹರಿ
ಮಹಿಮೆಯು ಭಾಳ ಎಂಬಲ್ಲಿ । ಅವ
ಬೃಹತಿ ಸಾಮಾಖ್ಯನು ಅಲ್ಲಿ । ರೂಪ
ಮಹಸಂಕರ್ಷಣದ್ವಯನಲ್ಲಿ । ಆಹ
ಬಹು ತುತ್ಯತ್ರಯದಿಂದ । ಇಹನು ತ್ರಿಷ್ಟುಪ್‌ನಲ್ಲಿ
ಮಹಿತ ಜಯಾಪತಿ । ಮಹ ವಸುದೇವನು ೧೪

ಸ್ತ್ರೀ ಪುಮು ಭೇದ ತಾನಾಗಿ । ಹರಿ
ರೂಪದ್ವಯ ತಾನೆ ಆಗಿ । ನಾಮ
ದ್ವಿಪದಾಖ್ಯ ಛಂದಸು ಆಗಿ । ಅಲ್ಲ
ಯೆಪತಿ ನರೆಯಣನಾಗಿ । ಆಹ
ಈ ಪರಿ ಛಂದದೊಳ್ । ಅಪಾರ ಮಹಿಮನ
ವ್ಯಾಪಾರ ತಿಳಿದವ । ಪಾಪವ ಕಳೆಯುವ ೧೫

ಇಷ್ಟಕ ಗರುಡನಾಕಾರ । ದಲ್ಲಿ
ಕಟ್ಟಿಹ ಚಿತಿ ಪಂಚಾಕಾರ । ಅವು
ಸುಷ್ಠು ದಕ್ಷಪಕ್ಷವು ಶಿರ । ಮತ್ತೆ
ಶ್ರೇಷ್ಠ ಉತ್ತರಪಕ್ಷಪೆಸರ । ಪೊತ್ತು
ಪೃಷ್ಠ ಮಧ್ಯದೇಹ ವಿವರ । ಆಹ
ಶಿಷ್ಟ ವಾಸೂದೇವ । ಇಷ್ಟ ಅನಿರುದ್ಧಾದಿ

ಒಟ್ಟು ರೂಪೈದರಿಂ । ಇಷ್ಟಿಕಾಚಿತಿಲಿಹ ೧೬

ವಸುದೇವಜ ಅನಿರುದ್ಧನು । ಶಿರದಿ
ವಸುದೇವ ಸುತನು ದ್ಯುಮ್ನನು । ಬಲ
ವಸುದೇವ ಸುತ ಸಂಕರ್ಷಣನು । ಎಡ
ವಸುದೇವ ಸುತ ವಾಸುದೇವನು । ಆಹ
ಹಸನಾಗಿ ಪುಚ್ಛದೊಳ್ । ವಾಸ್ತೇವ್ನಾರಾಯಣ
ಎಸೆವುತಿಪ್ಪನು ಮಧ್ಯ । ಅಸಮಸದ್ದೇಹದಿ ೧೭

ಯೋಚಿಸು ಪ್ರಾಕು ಗಾಯತ್ರಿ । ಅದು
ತ್ರ್ಯಚಾಶೀತಿ ಮತ್ತೆ ಬಾರ್ಹತಿ । ಅದುವೆ
ತ್ರ್ಯಚಾಶೀತಿ ಜಾಷ್ಣಿಕ್ಕು ಇತಿ । ಹಾಗೂ
ತ್ರ್ಯಚಾಶೀತ್ಯೋತ್ತರ ರೀತಿ । ಆಹ
ಪಾಂಚ ವಿಧ್ಯಾತ್ಮಕ । ಊಚನಾರಾಯಣನು
ಮಚ್ಛಾದಿ ಭೇದದಿ । ಶಸ್ತದೊಳಿರುತಿಹ ೧೮

ನರಯಣ ಮತ್ಸ್ಯನುವರ್ತಿ । ಪ್ರಾಕು
ನರೆಯಣ ಕೂರ್ಮ ಗಾಯತ್ರಿ । ಮತ್ತೆ
ನರೆಯಣ್ವರಾಹ ಬಾರ್ಹತಿ । ಹಾಗು
ನರೆಯಣ ನೃಹರೌಷ್ಣಿಕ್ಕು ಇತಿ । ಆಹ
ಮೂರು ತ್ರ್ಯಚಾಶೀತಿ । ಪೂರ್ವೋಕ್ತದಲ್ಲಿಹ
ನರೆಯಣ ವಾಮನ । ಇರುತಿಹೋತ್ತರದಲ್ಲಿ ೧೯

ನರೆಯಣ ಮತ್ಸ್ಯ ಶಾಂತೀಶ । ಪ್ರಾಕು
ನರೆಯಣ ಕೂರ್ಮ ಕೃತೀಶ । ಹಾಗು
ನರೆಯಣ ವರಹ ಜಯೇಶ । ಮತ್ತೆ
ನರೆಯಣ ನೃಹರಿ ಮಾಯೇಶ । ಆಹ
ಬರೆದಿಹ ೩ುಗಶೀತಿ । ಮೂರರ ಪ್ರತಿಪಾದ್ಯ
ನರೆಯಣ ವಾಮನ । ನರೆಯಣೋತ್ತರದಲಿ ೨೦

ನರೆಯಣ ಮತ್ಸ್ಯ ಶಾಂತೀಶ । ಮತ್ತೆ
ಇರುವನು ಶಾಂತೀಶ ಶೀರ್ಷ । ಇನ್ನು
ನರೆಯಣ ಮತ್ಸ್ಯ ಶಾಂತೀಶ । ಮತ್ತೆ
ಇರುವ ಕೃತೀಶ ಬಲಪಾರ್ಶ್ವ । ಆಹ
ನರೆಯಣ ಮತ್ಸ್ಯನು । ಮರಳಿ ಅನಿರುದ್ಧನು
ಮರಳಿ ಜಯೇಶನು । ಇರುವ ಪಕ್ಷೋತ್ತರ ೨೧

ನರೆಯಣ ಮತ್ಸ್ಯ ಶಾಂತೀಶ । ಇನ್ನು
ಹರಿ ಮಾಯೇಶ ಪುಚ್ಛದಿವಾಸ । ಮುಂದೆ
ನರೆಯಣ ಮತ್ಸ್ಯ ಶಾಂತೀಶ । ಹಾಗು
ನರೆಯಣ ತನು ಮಧ್ಯದೇಶ । ಆಹ
ಪೂರ್ವ ಭಾಗಸಹ । ಈ ರೀತಿ ಬಗೆ ಪಂಚ
ಶಿರ ದಕ್ಷ ಪಕ್ಷೋತ್ರ । ಮರಳಿ ಸಪುಚ್ಛಾತ್ಮಕ ೨೨

ಮೂರೆರೆಡೂ ಬಗೆ ಒಡೆದ । ಶಸ್ತ್ರ
ದಿರುತಿಹ ರೂಪಗಳ್ಮೋದ । ಅವು
ಗರುಡಾಕೃತಿ ಚಿತಿಗಳಾದ । ರೂಪ
ಸರುವ ಪ್ರತಿಪಾದ್ಯ ವಿನೋದ । ಆಹ
ನರೆಯಣ ಮತ್ಸ್ಯನು । ಮರಳ್ಯನಿರುದ್ಧನೊಳ
ಇರುವ ಶಿರೋಭಾಗ । ಪರಿಯನು ಕೇಳಿರಿ ೨೩

ಚಿತಿಯ ಶಿರಸ್ಥನು ಎನಿಪನ । ಮಾಯೆ
ಪತಿಯು ಮತ್ತೆ ಅನಿರುದ್ಧನ । ಬೋಧ
ರೀತಿಯ ತಿಳಿವುದು ನರೆಯಣ । ಮತ್ಸ್ಯ
ಪತಿಯು ಶಾಂತಿಗೆ ಕೃತೀಶನ್ನ । ಆಹ
ಪ್ರತಿಪಾದ್ಯ ಬಲ ಪಕ್ಷ । ಚಿತಿಯ ಬಲಪಕ್ಷಸ್ಥ
ಪತಿಯು ಮಾಯಗೆ ಮತ್ತೆ । ಕೃತೀಶ ಪ್ರತಿಪಾದ್ಯ ೨೪

ನರೆಯಣ ಮತ್ಸ್ಯ ಶಾಂತೀಶ । ಮತ್ತೆ
ಹರಿ ರೂಪ ಸಂಕರ್ಷಣ ವಾಸ । ಅಂಥ

ವರ ಉತ್ತರಪಕ್ಷವು ಪಾರ್ಶ್ವ । ಅದು
ವರ ಚಿತ್ಯೋತ್ರ ಪಕ್ಷದಿ ವಾಸ । ಆಹ
ಇರುವ ವಾಸುದೇವ । ಹರಿಯು ಜಯೇಶನ
ಉರುತ್ತರ ಮಹಿಮೆಯ । ಪರಿಪರಿ ತಿಳಿಪುದು ೨೫

ನರೆಯಣ ಮತ್ಸ್ಯ ಶಾಂತೀಶ । ಹಾಗು
ಹರಿ ರೂಪ ಮಾಯೇಶ ವಾಸ । ನಿಹ
ವರ ಪುಚ್ಛವೆಂಬುವ ಪಾರ್ಶ್ವ । ಅದು
ಹರಿ ಪೃಚ್ಚಗನಾಗಿ ಈಶ । ಆಹ
ಹರಿ ರೂಪ ಮಾಯೇಶ । ಹರಿರೂಪ ಮಾಯೇಶ
ಉರುತರ ಮಹಿಮೆಯ । ಪರಿಪರಿ ತಿಳಿಪುದು ೨೬

ನರೆಯಣ ಮತ್ಸ್ಯ ಶಾಂತೀಶ ಹಾಗು
ಹರಿಯು ನಾರಾಯಣ ವಾಸ । ನಿಹ
ವರ ಆತ್ಮವೆಂಬುವ ಪಾರ್ಶ್ವ । ಅದು
ವರ ಚಿತಿಯಲಿ ಆತ್ಮದೊಳ್ವಾಸ । ಆಹ
ಇರುತಿಹ ಮಾಯೇಶ । ನರೆಯಣಾಖ್ಯನ ರೂಪ
ಉರುತರ ಮಹಿಮೆಯ । ಪರಿಪರಿ ತಿಳಿಪೋದು ೨೭

ತೃಚಾಶೀತ್ಯ ಪ್ರಾಚೀನ ಭಾಗ । ತತು
ಪಂಚ ವಿಧವು ಚಿತಿಯ ಭಾಗ । ವಿಹವಿ
ವೇಚಿಸು ಶಿರ ಆದಿ ಭಾಗ । ಅಲ್ಲಿ
ವಾಚಾಮ ಗೋಚರನ ಯೋಗ । ಆಹ
ಯೋಚಿಸು ಶೀರ್ಷಾದಿ । ವಾಚಕವೆನುತಲಿ
ವಾಚಸ್ಪತಿಗು ಸಹ । ಯೋಚನೆಗಳವಲ್ಲ ೨೮

ಉಕ್ತಾ ವಶಿಷ್ಟ ಗಾಯತ್ರ । ತೃಚಾ
ಶೀತ್ಯಾದಿ ಅವುಗಳ ಸ್ತೋತ್ರ । ಭಾಗ
ಉತ್ತರವೇ ಕೊನೆ ಪಾತ್ರ । ಅವು
ಚತ್ವಾರ ಭಾಗವು ಗಾತ್ರ । ಆಹ

ಚಿತ್ತಿಸ್ಥ ಸುವಿಶಿಷ್ಟ । ಮೂರ್ತಿ ಪ್ರತಿಪಾದಕ
ಹೃತ್ಸ್ಥ ಗುರು ಗೋವಿಂದ । ವಿಠಲನೊಳೈಕ್ಕಿಸು ೨೯

೩೩೦

ಶ್ರೀ ಬಿಳಿಗಿರಿರಂಗನ ಮಹಾತ್ಮೆ

ನೋಡಿರೇ । ರಂಗಯ್ಯನ ನೋಡಿರೇ ॥ಪ॥

ನೋಡಿರಿ ಬಿಳಿಗಿರಿ ರಂಗನ । ಕರ
ಜೋಡಿಸಿ ಮಹಿಮ ಉತ್ತುಂಗನ । ಆಹ
ಬೇಡಲು ವರಗಳ । ಕೊಡುವಂಥ ದೇವನಿ
ಗೀಡು ರಹಿತನೆಂದು । ಪಾಡಲು ವಲಿವನ ॥ಅ.ಪ॥

ವೆಂಕಟಾದ್ರಿಗೆ ತಾನು ಬಂದು । ಮುನಿ
ಪಂಕೇರುಹಜ ಸುತ ನಿಂದು । ತಪ
ಶಂಕೆ ಇಲ್ಲದೆ ಗೈಯ್ಯೆ ಅಂದು । ಕಂಡ
ಪಂಕಜನಾಭವನಂದೂ । ಆಹ
ಸಂಕಟಹರನಾದ । ಶಂಖ ಚಕ್ರಾಂಕಿತ
ವೆಂಕಟೇಶನ ಪಾಡೆ । ಬಿಂಕದಿ ವರವಿತ್ತ ೧

ಸತಿಯೊಡಗೂಡಿ ಕಾವೇರಿ । ಸನಿಯ
ಸಿತ ಗಿರಿಯನು ತಾನು ಸಾರಿ । ಧ್ಯಾನ
ಮತಿ ಮಾಡೀದನು ಮನೋಹಾರಿ । ಅದಕೆ
ಹಿತದಿಂದ ಬಂದಾನು ಹರೀ । ಆಹ
ಸುತ ಸುತ ಸುತನಾಗಿ । ಶೃತಿ ಪ್ರತಿಪಾದ್ಯನು
ಮತಿ ಪೂರ್ಣ ವ್ಯಾಸಾಖ್ಯ । ಹಿತನೊಳು ದೀಸುವನ ೨

ಸರ್ವ ವ್ಯಾಪ್ತನಾದ ಆತ್ಮ । ಗುಹಾಂ
ತರ್ವತೀಯು ಅಂತರಾತ್ಮ । ನುತ

ಸರ್ವೇಂದ್ರಾದೀ ಪರಮಾತ್ಮ । ಮನ
ಗರ್ವ ಹರನೆ ಪ್ರಜ್ಞಾನಾತ್ಮ । ಆಹ
ಗೀರ್ವಾಣಾದ್ವರ ಪಾಲ । ಉರ್ವಿಯೊಳವಗಧಿಕ
ಸರ್ವೇಶ ರಹಿತಾನ । ಸರ್ವೋತ್ತುಮೋತ್ತಮನ ೩

ಕರಿಕುಂಡ ತೀರ್ಥದಿ ಸ್ನಾನ । ನಿತ್ಯ
ನರೆಯಣಷ್ಟಾಕ್ಷರಧ್ಯಾನ । ಮಾಡೆ
ವರುಷಾಂತಕ್ಕೊಲಿದು ಆಕ್ಷಣ । ಇತ್ತ
ವರದಲ್ಲಿ ತನ ಸನ್ನಿಧಾನ । ಆಹ
ವರವಿಪ್ರ ಭೃಗುಮುನಿ । ವರದಿಂದ ಸಹವೆರಸಿ
ವರ ವೈಖಾನ ಸರೀತ್ಯ । ಸ್ಥಿರಿಪಡಿಸೆ ನಿಂತನು ೪

ಶ್ವೇತಾದ್ರಿ ಸೊಬಗಿನ ಸೊಂಪು । ಸುತ್ತ
ಕೇತಕಿ ಚಂಪಕ ಕಂಪು । ಮತ್ತೆ
ವಾತ ಮಲಯಾನಿಲ ಸಂಪು । ಮಣಿ
ಮುಕ್ತ ಖಚಿತ ಕೊಳದಿಂಪು । ಆಹ
ಈ ತೆರವಿರೆ ಪುಷ್ಪ । ಕೇತು ಗಾಯಕ ಸತಿ
ಪ್ರೀತಿ ವಿಹರದೊಳಿರೆ । ಆತಪಸಿಯು ಕಂಡ ೫

ತಾಪಸಿ ದೂರ್ವಾಸ ತಾನು । ಬಲು
ಕೋಪದಿಂ ನೋಡುತ್ತಲವನು । ಗಜ
ರೂಪರಾಗೀ ಬಾಳಿರಿನ್ನೂ । ಎಂದು
ಶಾಪವೀಯಲು ಗಂಧರ್ವಾನು । ಆಹ
ತಾ ಪತ್ನೀ ಸಹ ಬಂದು । ಶಾಪ ವಿಮೋಚನೆಗೆ
ಪ್ರಾಪಿಸ್ಯಪರ ಚರಣ । ತಾಪಸಿಯನು ಬೇಡ್ದ ೬

ಸಿತಗಿರಿಯನು ಪೊಕ್ಕು ಅಲ್ಲಿ । ಇಹ
ಸಿತ ಹರಿಪದ ತೀರ್ಥದಲ್ಲಿ । ಮಿಂದು
ವಿತತಗೈಯ್ಯೆ ವಂತದಲ್ಲಿ । ಬರುವ
ಚತುರ್ಮುಖ ಪಾಡಜನಲ್ಲಿ । ಆಹ

ಶೃತ ವಸಿಷ್ಠನಿಗೆದುರು । ಮತಿಯ ಮಾಡಲು ನಿಮಗೆ
ಕೃತ ಜಲ ಪ್ರೋಕ್ಷದಿ । ಗತ ಕ್ಲೇಶರಾಗುವಿರಿ ೭

ಇರುತಿರಲ್ವಸಿಷ್ಠ ಮುನಿಯು । ಬಂದು
ಸರಸಿ ಮೀಯಲು ಪೋಗೆ ಕರಿಯು । ತಪೋ
ವರನ ದೂಡಲು ಪೋಗೆ ಮುನಿಯು । ಜಲ
ಕರದಿ ಪ್ರೋಕ್ಷಿಸೆ ಪಾಪಧರೆಯು । ಆಹ
ತ್ವರದಿ ಕಳೆದು ಸತಿ । ವೆರಸಿ ಪುಷ್ಪಕೇತು
ಶಿರಬಾಗಿ ನಮಿಸುತ್ತ । ಸುರಲೋಕ ಸಾರ್ದನು ೮

ಅಂಡಜವಾಹನನೊಲಿಯೇ । ಗಜ
ಕುಂಡವೆಂದೆನಿಸುತ್ತ ಮೆರೆಯೆ । ಗಂಗೆ
ಅಂಡಲೆಯುತ ಪಾಪ ಕಳೆಯೆ । ಬ್ರಹ್ಮ
ಅಂಡದೊಡೆಯಗೆ ಮೊರೆಯೆ । ಆಹ
ದಿಂಡುಗೆಡಹಿ ಗಜ । ಕುಂಡದಿ ವಸಿಸಲು
ಭಂಡ ಸಂಗದ ದೋಷ । ಸುಂಡಿ ಪೋಪುದು ಎಂದ ೯

ಒಂದಂಶದಲಿ ಗಂಗೆ ಸತತ । ಇಲ್ಲಿ
ನಿಂದಿರೆ ಕೀರ್ತಿಯು ವಿತತ । ವಾಯ್ತು
ಇಂದಿರೇಶನ ದಯ ಭರಿತ । ದಿಂದ
ಸಂದಿತು ತೀರ್ಥ ಶ್ರೇಷ್ಠತ । ಆಹ
ಮುಂದೆ ಪೇಳುವೆ ಭೃಗು । ನಂದನ ವ್ಯಾಜದಿ
ಅಂದೂದಿಸಿದ ಸರಿ । ದಂದದ ಮಹಿಮೆಯ ೧೦

ಪರಶುರಾಮನು ತಂದೆ ನುಡಿಯ । ಕೇಳಿ
ತ್ವರದಿ ತರೆದು ತಾಯಿ ಕೊರಳ । ಮತ್ತೆ
ವರವ ಬೇಡು ಎಂಬ ನುಡಿಯ । ಕೇಳಿ
ಪರಶುರಾಮನು ಬೇಡ್ದ ತಾಯ । ಆಹ
ವರವ ಸಲ್ಲಿಸಿ ಶ್ವೇತ । ಗಿರಿಯ ಸಾರುತ ತಪ
ಚರಿಸಲೀ ದೋಷವು । ಪರಿಹರವೆಂದನು ೧೧

ಸಾಸಿರ ದಶ ವರ್ಷ ತಪವಾ । ಗೈದು
ತೋಷಿಸಲು ಹರಿ ಪದವಾ । ಆವಿ
ರಾಸೀತಾದ ಹರಿ ಪದವಾ । ನಮಿಪನೆ
ಲೇಸು ಸ್ತೋತ್ರವ ಗೈಯ್ಯು ವರವ । ಆಹ
ಶೇಷ ಸಮಪದ ವಿನು । ತಾ ಸುತನನ ಕಳುಹಿ
ಆಸುವಿರಜೆಯ ಜಲ । ಲೇಸಾಗಿ ತರಿಸೆಂದ ೧೨

ಪನ್ನಗಾರಿಯು ತಂದ ವಿರಜ । ಜಲ
ನನ್ನೆಯಿಂ ಹರಿಪದ ಬಿಸಜ । ತೊಳೆಯೆ
ಘನ್ನ ಸರಿತಾಯ್ತು ಪದಜ । ಕೇಳು
ಇನ್ನಾಯ್ತು ಪೆಸರದಕೆ ಭೃಗುಜ । ಆಹ
ಮುನ್ನ ಮಜ್ಜನದಿ ಪಾ । ವನ್ನ ವಾಗುತ ತಾನು
ಸ್ವರ್ಣಾದ್ರಿ ಸುತ ಹಿಮ । ನನ್ನು ಸಾರಿದ ತಪಕೆ ೧೩

ತಂಪಾದೀ ಸರಿತದೊಳಿರುವ । ಒಂದು
ಚಂಪಕ ತರುವಿಹುದಾವ । ಶಾಖ
ಸೊಂಪು ಯೋಜನಾಂತವಿರುವ । ಅಲ್ಲಿ
ಗುಂಪಾಗಿ ಮುನಿಗಳ್ವಾಸಿಸುವ । ಆಹ ತರು ಬಳಿ ।
ಪಂಪೇಶ ಸತಿ ಸಹ ನೋಂಪಿಗೈವುತ ತಾನು ।
ಇಂಪು ಸೇವೆಯ ಕೊಳ್ವ ೧೪

ರಾಜಿಸುವೀ ಕ್ಷೇತ್ರದೋಳು । ವನ
ರಾಜಿ ಋಷ್ಯಾಶ್ರಮಗಳು । ಪುರ
ಭ್ರಾಜಿಸುತಿದ್ದ ಕಾಲಗಳು । ಸ್ಮೃತಿ
ರಾಜಮಾನಗಳವುಗಳು । ಆಹ
ಮಾಜದೆ ಸಾರುವೆ । ರಾಜಿಪ ನದಿ ಮಹಿಮೆ
ಯೋಜಿಸಿ ಮನವ ನಿ । ರ್ವ್ಯಾಜದಿ ಕೇಳ್ವುದು ೧೫

ತರಣಿ ಕರ್ಕಾಟಕೆ ಬರುತ । ಸರ್ವ
ಸರಿತಕಾಹುದು ರಜ ಕಲಿತ । ಆಗ

ಸರಿತಾಭಿಮಾನಿಗಳ್ ಕ್ವಣಿತ । ದಿಂದ
ಬರುವರೀ ಸರಿಸಕ್ಕೆ ತ್ವರಿತ । ಆಹ
ಪರಶುರಾಮನ ದಯದಿ । ಪರಿಶುದ್ಧವಾಗುತೀ
ಸರಿತಮೀಯುವರಟ । ಪರಿಹರಿಸುವರಯ್ಯ ೧೬

ಸುರ ವಿಪ್ರ ಗೋಗಣ ಸದವ । ಭಸ್ಮಾ
ಸುರನೆಂಬೂವನ ಹಿಂಸಪರವ । ತಪ
ಚರಣಕ್ಕೆ ಶಿವ ಬರೆ ವರವ । ಬೇಡ್ದ
ಕರ ಸ್ಪರ್ಶಕ್ಕಾವಾವ ಶಿರವ । ಆಹ
ಉರಿದು ಭಸ್ಮವ ಮಾಳ್ಪ । ವರವ ತಾನೀಯಲು
ಪರಿಕಿಸಿಲೋಸುಗ । ಹರ ಶಿರ ಬಯಸೀದ ೧೭

ಸುತ್ತುತ ವನದೇಶವೆಲ್ಲ । ಓಡಿ
ಹತ್ತುತ ಶ್ವೇತಾದ್ರಿ ನಲ್ಲ । ವನ್ನೂ
ಸುತ್ತಿಸೆ ಗಿರಿ ಇಳಿದನಲ್ಲ । ಹರಿ
ಪೊತ್ತನು ಸ್ತೀರೂಪ ಚೆಲ್ವ । ಆಹ
ಇತ್ತಲಾಸುರ ಕಂಡು । ಒತ್ತೊತ್ತಿ ಬರುತಿರೆ
ಪೃಥ್ವಿಯುಂಗಷ್ಠದಿ । ಒತ್ತುತ ನಿಂತಳು ೧೮

ರಂಗನಾದನು ನವನಾರಿ । ಬಹು
ರಂಗು ಪೀತಾಂಬರಧಾರಿ । ಬೆಳ
ದಿಂಗಳ ನಾಚಿಪ ಮಾರ । ಲೋಕ
ಹೆಂಗಳೊಳಗೆ ಮೀತಿ ಮೀರಿ । ಆಹ
ಅಂಗನಾಮಣಿ ತನ್ನ । ಅಪಾಂಗ ವೀಕ್ಷಣದಿ
ನಿಸ್ಸಂಗಿಗಾದರು ವೇಗ । ಅಂಗ ವಿಭ್ರಮವಯ್ಯ ೧೯

ಅಂಗುಷ್ಠಲಿಖಿತದಿ ಸರಸಿ । ಆಗಿ
ಶೃಂಗಾರ ವಿಸ್ತಾರವೆರಸಿ । ಮುಂದೆ
ಮಂಗಳ ಗಜ ಕುಂಡವೆನಿಸಿ । ಇರೆ
ಅಂಗಜಾಸ್ತ್ರಕೆ ಪರಿಭವಿಸಿ । ಆಹ

ಅಂಗನಾಮಣಿಯೆ ಜ । ಗಂಗಳೊಳಗೆ ನಿನ್ನ
ಅಂಗ ಸೌಂದರ್ಯಕ್ಕೆ । ಅಂಗಜ ನಾಚಿಪ ೨೦

ಏನುತಲಾಸುರ ಬರುತಿರಲು । ಹೆಣ್ಣು
ನಿನಗಾಗಿ ಬಂದಿಹೆನೆನಲು । ನಿನ್ನ
ತನುವನಿಲ್ಲವಗಾಹಿಸೆನಲು । ಆಪ
ಮನದಿಂದ ಕರ ಶಿರ ತಗಲೂ । ಆಹ
ತನಗಿತ್ತ ವರದಿಂದ । ತನಗೆ ಮೃತ್ಯುವಾಯ್ತು
ಮನಕ ಗೋಚರ ಹರಿ । ಗೆಣೆಯುಂಟೆ ಲೋಕದಿ ೨೧

ಅಸುರಾರಿ ಮೋಹಿನಿ ರೂಪ । ನೋಡ
ಲೆಸಗುತ್ತಗೈದ ಪ್ರಲಾಪ । ಶಿವ
ಬಿಸಜಾಕ್ಷಿಯ ಕಂಡು ತಾಪ । ದಿಂದ
ಕುಸುಮಾಸ್ತ್ರವಶನು ಗೌರೀಪ । ಆಹ
ಕುಸುಮಗಂಧಿಯು ವೇಗ । ಎಸೆವ ಪುರುಷನಾಗೆ
ಭಸುಮಧರನು ನಾಚಿ । ಅಸಮ ಸ್ತೋತ್ರವ ಗೈದ ೨೨

ಅಕ್ಕರದೋಳ್ ವಸಿಪ ಶಿವನೂ । ತೆಂಕ
ದಿಕ್ಕನೋಳ್ ಸಿತಗಿರಿಗವನೂ । ಉತ್ತ್ರ
ದಿಕ್ಕಿನಲತ್ತಿ ತರುವಾನೂ । ಕೇಳ
ಗಿಕ್ಕಹ ಹರಿ ಪಾದವನ್ನೂ । ಆಹ
ಚೊಕ್ಕ ಮನದಿ ಬಂದು । ಪಕ್ಷಿವಾಹನ ಪಾದ
ಫಕ್ಕಾನೆ ಸೇವಿಸೆ । ದಕ್ಕಿಪ ಸದ್ಗತಿಯ ೨೩

ಸ್ವಾಮಿ ಪುಷ್ಕರ ಗಜ ಸರಸಿ । ಕೇಳಿ
ಹೇಮ ಮುಖರಿ ಸ್ವರ್ಣಸ್ತೋತಸಿ । ಈಶ
ಆಯ ಕಪಿಲ ಸೋಮೇಶನಿಸಿ । ಮತ್ತೆ
ವ್ಯೋಮ ಗಂಗೆಯ ಭೃಗುಜನೆನಿಸಿ । ಆಹ
ಆ ಮಹ ಕಾಪಿಲ । ಸಮವು ತಾಪಹಾರಿ
ಭೂಮ ವೆಂಕಟೇಶ । ಶ್ವೇತಾದ್ರಿ ವಾಸನೆ ೨೪

ಅರುಣಾಬ್ಜೋಪಮ ಚಾರು ಚರಣ । ಊರು
ಮೆರೆವ ಕದಳೀಕಂಬ ಹಸನ । ಕಟಿ
ಕರಿವೈರಿ ಮಧ್ಯಕ್ಕೊಪ್ಪುವನ । ಊ–
ದರ ತ್ರಿವಳಿ ಬಿಳಿಗಿರಿ ರಂಗನ । ಆಹ
ವರ ವೈಜಯಂತೀಯು । ಮೆರೆವ ಕೌಸ್ತುಭಮಣಿ
ಧರಿಸಿ ನೂಪುರ ಬಾಹು । ಪುರಿಯಿಂದಲೊಪ್ಪುವ ೨೫

ಕಂಭುಕಂಧರ ಕೊರಳ ಹಾರ । ಬಹು
ಸಂಭ್ರ ಕಿರೀಟ ಭಾರ । ರವಿ
ಬಿಂಬಾ ಅಮಿತ ದ್ಯುತಿ ಪ್ರಖರ । ಆನ
ನಾಂಬುಜ ಸ್ಮೃತಿ ತಾಪ ಹರ । ಆಹ
ಕಂಬು ಚಕ್ರಧರ । ಕುಂಭಿಣಿ ಪರಿಪಾಲ
ಅಂಬುಜೋದ್ಭವನುತ । ಇಂಬಿಟ್ಟು ಸಲಹುವ ೨೬

ಭಾವನಿಗೊಲಿದ ಹೆದ್ದೈವ । ತ್ರೈ
ಭೂವನದಿ ನಿನ್ನ ಪೋಲ್ವ । ಅನ್ಯ
ದೇವತಾರಹಿತನೆ ಚೆಲ್ವ । ಶ್ರೀ ಭೂ
ದೇವಿಯರರಸನೆ ದೇವ । ಆಹ
ಭ್ರೂವಿಲಾಸದಿ ಜಗ । ಕಾವ ಕೊಲ್ಲುವ ಗುರು
ಗೋವಿಂದ ವಿಠಲ ಸ್ವ । ಭಾವವ ತೋರಿಪ ೨೭

೩೩೧

ಶ್ರೀ ವೆಂಕಟೇಶ ಕಲ್ಯಾಣ

ಪೊಗಳಲೆನ್ನಳವೆ ಎನ್ನಿಂದ ಪ । ನ್ನಗ ನಗ ನಿಲಯ ॥ಪ॥

ಪೊಗಳಲೆನ್ನಳವೆ ಪನ್ನಗ ನೆನಗ ನಿಲಯನೇ
ನಿಗಮ ಸದಾಗಮಗಳಿಗ ಗೋಚರನೆ ಹರೀ ॥ಅ.ಪ॥

ಅಸುರಿ ವೃಷಭನು । ವಾಸಿಸೀ ಗಿರಿಯೋಳು
ಕ್ಲೇಶಪಡಿಸೆ ಬಹು । ಋಷಿ ಸಮುದಾಯ ಓ
ಲೈಸಿ ತವಪಾದ ವಾ । ರಾಶಿಜಕೆ ಬೀಳೆ
ಲೇಸು ಗೈಯ್ಯುವ ಮನ । ದಾಶಯವನೆ ತೋರಿ
ಅಸುರ ವೃಷಭನ । ಆಸೆ ಸಲ್ಲಿಸೆ ಯುದ್ಧ
ಲೇಸು ಗೈಯ್ಯುತ ಅವ । ನಾಶೆಯಿಂತೀ ಗಿರಿ
ವೃಷಭಾದ್ರಿಯೆಂದೆನಿಸೀ ॥ ಭಕ್ತರ ದಿಗ್
ದೇಶದಿಂ ಕರೆತರಿಸೀ । ಅವರುಗಳಭಿ
ಲಾಷೆ ಸಲ್ಲಿಸೆ ನೆಲೆಸೀ । ಇಪ್ಪೆಯೊ ಅಲ್ಲಿ
ಭಾಸುರ ಕೀರ್ತಿಯುತನೆ । ತವ ಸತಿ ವೆರಸೀ ೧

ಅಂಜನಾದೇವಿ ನಿ । ರಂಜನೆ ತಪಸೀಗೆ
ಮಂಜುಳ ಮೂರುತಿ । ಕಂಜಾಕ್ಷ ನೀ ಮೆಚ್ಚಿ
ಸಂಜೀವರಾಯನೆ । ಅಂಜನಿ ಮಗನಾಗಿ
ಸಂಜನಿಸಲು ಆಜ್ಞೆ। ಮುಂಜಾಗ್ರತೆಗೆ ಈಯೆ
ಅಂಜನಿಸುತ ದುಷ್ಟೆ । ಭಂಜನೆ ಗೈಯ್ಯೆ ಪ್ರ–
ಭಂಜನನೆನಿಸಿ ಪ । ರಂಜ್ಯೋತಿ ಗಿರಿಗೆ
ಅಂಜನಾಚಲವೆನಿಸೀ ॥ ಉತ್ತಮತೀರ್ಥ
ಪುಂಜಸ್ಥಳವು ಎನಿಸೀ । ಭಕ್ತರ ದೋಷ
ಭಂಜನ ಗಿರಿ ಎನಿಸೀ । ಮೆರೆದೊ ಹರಿ
ಕಂಜ ಸಖನ ಕುಲ । ಜಾತನೆಂದೆನಿಸೀ ೨

ಮೂರನೆ ಯುಗದಿ ಸ । ಮೀರಗು ಪೂರ್ವದ
ಮಾರಾರಿಗು ಬಹು । ವೈರ ವಾಕ್ಯಗಳೊಳು
ಶೂರರು ಆರೆನ್ನೆ । ನಾರಾಯಣನು ತಾ
ತಾರತಮ್ಯವ ತಿಳುಹೆ । ಪ್ರೇರಿಸೆ ವಾಯುವು
ಮೇರು ಜನ್ಮೊತ್ತಿಹ । ಶೂರ ಶೇಷನ ತಾನು
ದೂರಕ್ಕೆ ಚಿಮ್ಮಿ ಸ । ಮೀರ ನಿಲ್ಲಲು ಪುರ
ದ್ವಾರ ಧ್ವೊರಗೆ ಹರಿ ಬಂದಾ ॥ ಶೇಷನು ತ್ವರ
ಸಮೀರನೆ ಬಲನೆಂದಾ । ಅವನಾಶಗೆ

ವಾರಧಿ ಶಯ್ಯನೆಂದಾ । ಖ್ಯಾತವು ಭೂ
ಧಾರನು ಶೇಷಾಚಲವು । ಆಗಲೆಂದಾ ೩

ವಿಪ್ರಸಂಭವ ಸ । ದ್ದ ಪ್ರಮೇಯನು ಹರಿ
ಸುಪ್ರಮೇಯವ ತಿಳಿ । ದೊಪ್ಪುತಿರಲು ಕಾಮ
ನುಪ್ಪಟಳಕೆ ಸಿಕ್ಕಿ । ಒಪ್ಪುವ ಸತಿಯನು
ಕ್ಷಿಪ್ರ ಗೃಹಕೆ ಕಳುಹೆ । ಕುಪ್ರಮದೆಯಳನು
ಅಪ್ಪುವೆನೆನುತವಳ । ಸರ್ಪ್ವೇಣಿ ಪಿಡಿಯಲು
ಕುಪ್ಪಳಿಸುತ ಓಡೆ । ಕುಂತಳೆ ತಾ ಬಲು
ಒಪ್ಪುವ ನೀತಿಯಿಂದಾ ॥ ಪೇಳಲು ಜರಿದು
ಅಪ್ಪೀದ ನರ್ಥಿಯಿಂದಾ । ಪುರಾಕೃತ
ತಪ್ಪದು ಆರಿಗೆಂದಾ । ಭಾನುಜಗಂಜಿ
ವಪ್ಪೀದ ಮಾಧವ । ವೈರಾಗ್ಯದಿಂದಾ ೪

ಕಾಲಕ್ರಮದಿ ಸತಿ । ಕಾಲವಾಗಲು ದುಃಖ
ಭಾಳ ಬಡುತ ವಿಪ್ರ । ಶ್ರೀ ಲೋಲನಿಗೆ ಮೊರೆ
ಪೇಳಲಾತನು ಭಕ್ತ । ಜಾಲ ಸಂಗದಿ ಫಣಿ
ಶೈಲವೇರುವ ಯೋಗ । ಕೀಲಿಸೆ ಮಾಧವ
ಶೀಲಾಚಾರದಿ ತೀರ್ಥ । ಮುಳುಗಿ ಮೃತ್ಪಿಂಡದಿ
ಓಲೈಸಿ ಪಿತೃಗಳ । ಶೈಲವೇರಲು ಪೋಗೆ
ಕಾಳವಾದಘಗಳೂ ॥ ವಮನ ಮಾರ್ಗ
ಬೀಳೆ ದುರ್ನಾತಗಳು । ಕಾಣುತ ದೇವ
ಜಾಲವು ಕೊಂಡಾಡಲು । ಸರಸಿಜ ಭವ
ಕೇಳಿಗಿರಿಗೆ ವೆಂಕ । ಟಾಚಲ ವೆನಲೂ ೫

ಅಜನ ಸುತರು ಋಷಿ । ದ್ವಿಜ ಕುಲಾಗ್ರಣಿಗಳ್ನಾ
ಕಜ ತೀರದಿ ಜ್ಞಾನ । ಯಜನಕ್ಕೆ ಸೇರಲು
ಅಜಸುತ ನಾರದ । ಬಿಜಯಿಸಿ ಸಂಶಯ
ಸೃಜಿಸಿ ಯಜ್ಞದ ಭೋಕ್ತೃ । ಅಜನಯ್ಯನೋ ಮನ
ಸಿಜ ವೈರಿಯೋ ಎನೆ । ದ್ವಿಜರೆಲ್ಲ ಪ್ರಾರ್ಥಿಸೆ

ಅಜನ ಮಗನು ಭೃಗು । ನಿಜ ಪಿತ ಲೋಕಕೆ
ಬಿಜಯಿಸುತಲಿ ನೋಡಿದ ॥ ಮೌನದಲಿದ್ದ
ಸುಜನಾಗ್ರಣಿಯ ಶಪಿಸೀದ । ಲೋಕದಿ ನಿನ್ನ
ಪೂಜೆ ಬೇಡೆನು ತೊರೆದ । ತ್ವರದಿ ತಾ
ನಜಸುತಾ ಧ್ವರ ವೈರಿ । ಪುರಕೆಗಮಿಸೀದ ೬

ಮಾರ ಕೇಳಿಯಲಿದ್ದ । ಗೌರೀ ಪತಿಯ ಪುರ
ಸಾರುತಿಹುದ ಕಂಡು । ಮಾರಾರಿ ಮುನಿಯನ್ನು
ಹೇರುವೆನೆನು ತೋಡೆ । ದೂರ ದೋಷನು ಎಂದು
ತೋರದಿರಲು ಭೃಗು । ಸಾರಿ ಲಿಂಗದ ಪೂಜೆ
ಜಾರಿ ಅಲ್ಲಿಂದ ಖ । ರಾರಿ ಪುರಕೆ ಬರೆ
ತೋರಲವಗೆ ಹರಿ । ಭಾರಿ ನಿದ್ರೆಯಲ್ಲಿ
ಹಾರುವ ಪದದಿ ಪ್ರಹಾರಿಸಿದ ॥ ಹರಿಯು ಬಿಸಿ
ನೀರ ತಾತರಿಸೀದ । ಪಾದವ ತೊಳೆದು
ದಾರ ಮತಿಯ ತೋರಿದ । ತೆರಳುತ ಮುನಿ
ಸಾರುವೆ ವೇಗ ಹರಿಯೆ । ಪರನೆಂದು ತೊರೆದ ೭

ಅತ್ತ ಲಕುಮಿ ಮುನಿ । ಪೋತ್ತಮನ ಪಾದ
ವತ್ತಿಯಿಂದ ಪತಿ ಕೊಡೆ । ಎತ್ತಿ ಜಗಳವಾಡಿ
ಎತ್ತಣ ಸಂಸಾರೆ । ನುತ್ತಮಳು ಕೊಲ್ಲಾ
ಪತ್ತನವನು ಸಾರೆ । ಇತ್ತ ಶ್ರೀರಮಣ ತಾ
ಸ್ಥತ್ತಿ ವೆಂಕಟ ಶೈಲ । ನೊತ್ತಟ್ಟನೊಳು ಸ್ವಾಮಿ
ತೀರ್ಥ ಸನಿಯ ಬಂದು । ಹುತ್ತನಾಶ್ರಯಿಸಿರೆ
ಅತ್ತ ಲಕುಮಿ ಚಿಂತಿಸೀ ॥ ಬೊಮ್ಮನ ತ್ವರ
ಉತ್ತಮ ಗೋವೆನಿಸೀ । ಮೃಡನ ಅವರ
ತೊತ್ತಮ ಎಂದೆನಿಸೀ । ತಾನ್ಹರಿ ಅರ
ಸುತ್ತ ಬಂದಳು ವೇಗ । ಲಕ್ಷ್ಮಿಯು ನಟಿಸೀ ೮

ಚೋಳ ದೇಶದಿ ಭೂ । ಪಾಲ ಕಾಣುತ ಗೋ
ಪಾಲಿಯ ಬೆಸಸ್ಯಾಕೆ । ಪೇಳಿದ ಮೌಲ್ಯ ತಾ

ವ್ಯಾಳ್ಯ ಮಾಡದೆ ಕೊಟ್ಟು । ಕಾಲ ಕಾಲಕೆ ಗೋವ
ನೋಲ್ಕೆಪುದೆನುತ ಗೋ । ಪಾಲಗೆ ಪೇಳಲು
ಶೈಲನೇರುತ ಗೋವು । ವ್ಯಾಳಾಗಾರದಿ ಶ್ರೀ
ಲೋಲ ನಿರವ ಕಂಡು । ಕಾಲ ಕಾಲಕೆ ಬಂದು
ಪಾಲನ್ನಭಿಷೇಚಿಸಲು ॥ ಅರಸಿ ತನ್ನ
ಬಾಲಗದಿರದಿರಲು । ಕೋಪಿಸಿ ಧೇನು
ಪಾಲಗವಳು ಹೊಡಿಸಲು । ತ್ವರದಿ ತಾನ್ವಿ
ಬಾಲಿಸುತ ಅದರ । ಮರುದಿನ ಪೋಗಲೂ ೯

ಹಿಂಡು ಗೋವ್ಗಳ ಬಿಟ್ಟು । ಅಂಡಲೆಯುತ ಪುತ್ತ
ಕಂಡು ಪಾಲ್ಗರೆದುದ । ಕಂಡು ಗೋಪಾಲನು
ದ್ದಂಡ ಕೊಡಲಿಯಿಂದ । ಮಂಡೆ ಶೀಳುವುದನು
ಕಂಡು ಶ್ರೀ ಹರಿ ತನ್ನ ಮಂಡೆಯ ಚಾಚೆ ಪ್ರ-
ಚಂಡ ಪೆಟ್ಟಿಗೆ ಹರಿ । ಮಂಡೆಯಾ ಬಿಸಿ ರಕ್ತ
ಕಂಡು ಸಪುತ ತಾಲ । ದಿಂಡಿನ ಮಿತಿಯಿಂದ
ಭಂಡ ಗೋಪಾಲನು ತ್ವರದಿ ॥ ಅಸು ನೀಗೆ ಭೂ
ಮಂಡಲಧಿಪ ಭರದೀ । ಅಲ್ಲಿಗೆ ಬರೆ
ತೊಂಡ ವತ್ಸಲ ವಿನೋದಿ । ಪಿಶಾಚ್ಯೆಂದು
ದ್ದಂಡ ಶಾಪವನಿತ್ತ ನೃಪಗೆ ದಯವನಧೀ ೧೦

ಮತ್ತೆ ವಿಶಾಪ ಕೊ । ಡುತ್ತಲಿ ವ್ಯೋಮೇಶ
ನಿತ್ತ ಕಿರೀಟವ । ಪೊತ್ತ ದಿನದಿ ನಿನಗೆ
ಉತ್ತಮ ಸುಖ ವಹುದೆ । ನುತ್ತಲಿ ಹರಿ ಪೇಳೆ
ಅತ್ತ ಚೋಳನು ತೆರಳೆ । ಇತ್ತ ಹರಿಯು ಬೃಹ
ಸ್ಪತ್ತಿಯ ಸ್ಮರಿಸೆ ಬ । ರುತ್ತ ಬೂರುಗ ವೃಕ್ಷ
ಹತ್ತಿಯೆ ನೆನೆಸುತ । ಅತ್ತಿ ಮರದ ಹಾಲೊಳ್
ನೆತ್ತಿಗ್ಹಾಕೆನು ತೊರೆದ ॥ ಅದರಂತವ
ಪ್ರತಿ ದಿನದಿ ಮಾಡಿದ । ಇರುತಿರಲಿಂತು
ಅತ್ತ ಹೊಲವ ಕಾಯುವ । ವ್ಯಾಜದಿ ಬಂದ
ಉತ್ತಮ ವರಹನವಗೆ । ಗೋಚರನಾದ ೧೧

ಭೂ ವರಹನ ಮತ್ತೆ । ಶ್ರೀವರ ಚೇಷ್ಟೆಯ
ದೇವತೆಗಳು ಕಂಡು । ಓದಿ ತುತಿಸಿ ಮೇಲೆ
ಪೂವಿನ ಮಳೆಯನು । ತೀವರ ಸುರಿಸಲು
ದೇವ ಶ್ರೀನಿವಾಸ । ಭೂ ವರಹನ ಬೇಡಿ
ತಾ ವಾಸೀಸಿರಲೊಂದು । ದಿನಸದಿ ಕಿರಾತ
ಭಾವದಿ ಮೃಗ ಭೇಟೆ । ಗಾವ ಹಯವನೇರಿ
ಧಾವಿಸಿ ಬರ ಬರುತ ॥ ಕಂಡನು ಗಜ
ಧಾವಿಸಿ ಹಿಂದೋಡುತ । ಬಾಣವ ಬಿಡೆ
ನೋವಿಗದುವೆ ಬಾಗುತ । ಓಡಲು ಹರಿ
ಹೂವ ಕೊಯ್ಯುವ ಕನ್ಯೆ । ಗುಂಪು ಕಾಣುತ್ತ ೧೨

ವ್ಯೋಮ ಭೂಮಿಪ ಸುತೆ । ಕಮಲೋದ್ಭವೆಯು ಮತ್ತೆ
ಕಮಲಾಕ್ಷಿಯರ ಕೂಡೆ । ಸುಮನ ಸಂಚಯದಿರೆ
ದೃಮ ಮಧ್ಯ ಬರುತೀಹ । ಕಮನೀಯನ ಕಂಡು
ವಿಮಲೆ ಪದ್ಮೆಯು ಸಖಿ । ಸುಮುಖದಿ ಪೇಳಿಸೆ
ಸ್ವಾಮಿ ಪೇಳ್ ಪೆಸರೂ । ದ್ಯುಮಗಳ ನೆಲ್ಲವ
ಪದ್ಮೆ ಬಳಿಗೆ ಪೋಗೆ । ತಾ ಮನ ಮಾಡಲು
ವಾಮಾಂಗನೆರು ಕಲ್ಲನು ॥ ಬೀರಲು ಹಯ
ತಾ ಮೃತಿ ಪೊಂದಿದನು । ಕಾಣುತ ಹರಿ
ಸಾಮಜ ವರದಾನು । ಶಯ್ಯಾದೋಳ್
ತಾ ಮಲಗಿ ತೋರಿದ । ಆಶ್ಚರ್ಯಗಳನು ೧೩

ಪಂಕಜೋದ್ಭವ ಪಿತ । ಪರ್ಯಂಕದೊಳಗಿರೆ
ಲೆಂಕತನದ ಬಕುಳೆ । ಯಾತಂಕದೊಳು ಮನ
ಶಂಕವೇನಿಹುದೆನ್ನ । ಅಕಳಂಕ ಮಹಿಮನು
ಸಂಕಟಗಳನು ನಿ । ಶ್ಯಂಕದಿ ಪೇಳಿ ವ್ಯೋ
ಮಾಂಕ ರಾಜನ ಸುತೆ । ಪಂಕಜೋದ್ಭವೆಯಾದ
ಪಂಕಜ ನಯನೆ ಮೀ । ನಾಂಕ ಗೊಪ್ಪಿಸಿ ಎನ್ನ
ಬಿಂಕವ ಮುರಿದಿರುವ ॥ ಆಕೆಯ ಸಂಗ
ಶಂಕೆ ಇಲ್ಲದೆ ಗೈಸೂವ । ಕಾರ್ಯವು ತವ

ಕೈಂಕರ್ಯವೆನ್ನುತವ । ಭಾವದಿ ತನ್ನ
ಅಂಕೆಯೊಳಿಹಳ ಕಳುಹಿದ । ನಭ ಪುರವಾ ೧೪

ಇತ್ತ ಶ್ರೀಹರಿ ಚಿಂತಿ । ಸುತ್ತ ಹೆಂಗಳ ಕಾರ್ಯ
ವೆತ್ತಣದೆನುತ ತಾ ಪೊತ್ತ ಕೊರವಂಜಿಯ
ಉತ್ತಮೋತ್ತಮ ರೂಪ । ಹಸ್ತಿ ಚರ್ಮಂಬರನ
ಬೆತ್ತದ ತೆರ ಮಾಡಿ ಚತ್ತುರ ಮೊಗದವನ
ತೊತ್ತನೆ ಮಾಡಿ ಕೊಂ । ಡುತ್ತಮ ಶ್ಲೋಕನು
ಹತ್ತು ನಾಲ್ಕರ ಲೋಕ । ಬೆತ್ತದ ಪುಟ್ಟಿಯ
ಪೊತ್ತು ಶರದಿ ಬರುತ ॥ ನಭದ ಪುರ
ಧತ್ರಿರ ಓಡಾಡುತ । ಜನಂಗಳ
ಹಸ್ತಗಳನೆ ನೋಡುತ । ಅದೃಷ್ಟವ
ಬಿತ್ತರಿಸುತ ತಲೆ । ಕೈಗಳ ಬೀಸುತ್ತ ೧೫

ವ್ಯೋಮರಾಜನ ಸತಿ । ಧರ್ಮದೇವತೆಯನ್ನ
ಹರ್ಮ್ಯಕ್ಕ ಕರೆತಂದು । ಪದ್ಮಾವತಿಯ ಚಿಂತೆ
ಮರ್ಮವ ತಿಳುಹೆನ್ನ ಸುಮ್ಮಾನದಲಿ ಪೇಳ್ವೆ
ಬಮ್ಮನದಲಿ ಕೇಳು । ನಿಮ್ಮಯ ಸುತೆ ಓರ್ವ
ಅಮ್ಮಹ ಪುರುಷನ । ಪೇರ್ಮೆ ಹಯವ ಕೊಂದು
ಕಮ್ಮ ಗೋಲಿನ ಪಿತ । ನಮ್ಮಹ ಸೌಂದರ್ಯ
ಕ್ಕೊಮ್ಮೆಲಿ ಮರುಳಾಗುತ ॥ ಪ್ರಜ್ಞೆಯ ನೀಗಿ
ನಿರ್ಮಲೆ ಜ್ವರ ಪೀಡಿತ । ಪದ್ಮಾಕ್ಷಿಯ
ಬೊಮ್ಮಪಿತಗೆ ಕೊಡುತ । ಪಡೆವುದು ಸುಖ
ಇಮ್ಮನ ಗೈಯ್ಯೆ । ನೀಗು ವಳಸುವೆನುತ ೧೬

ಶುದ್ಧರೂಪಿಯು ಹರಿಯು । ವೃದ್ಧಳ ಬರುವಿಕೆ
ತಿದ್ದಿ ಪೇಳುತ ವೆಂಕ । ಟಾದ್ರಿಗೆ ತೆರಳಲು
ವೃದ್ಧ ಬಕುಳೆ ಇತ್ತ । ಹೆದ್ದಾರಿ ನಡೆತಂದು
ರುದ್ರಗಸ್ಯೇಶಗೆ । ರುದ್ರ ಸೂಕ್ತಗಳಿಂದ
ಪದ್ಮಗೋಸುಗವಾಗಿ । ಶುದ್ಧಭಿಷೇಚಸು

ತಿದ್ದುದ ದರ್ಶಿಸಿ । ಶ್ರದ್ಧೆಯಿಂ ಪ್ರಸಾದ
ಪೊದ್ದು ಪೋಪರವೆರಸೀ ॥ ಪೋಗಲು ಬಕುಳೆ
ಎದ್ದು ಧಾರಣಿ ಅರಸಿ । ಸ್ವಾಗತ ವಿತ್ತು
ಬುದ್ಧಿಯಿಂ ನಿಶ್ಚಯಿಸಿ । ವೆಂಕಟಗು
ಪದ್ಮಜೆಗು ವೈವಾಹವ । ಮಾಳ್ಪೆನೆಂದೆನಿಸೀ ೧೭

ಅಭಯವ ತಾ ಕೊಂಡು । ನಭರಾಜ ಪುರಿ ಬಿಟ್ಟು
ಇಭರಾಜ ವರದನ । ಶುಭ ಸದನಕೆ ಪೋಗಿ
ಪ್ರಭು ವ್ಯಾಸಾತ್ಮಜ ಶುಕ । ಶುಭ ಪತ್ರಿಕೇಯಿತ್ತು
ವಿಭುವಿನಾಲಿಂಗನ । ವೈಭವದೊಳು ತೆರಳ
ಸುಭಗೆ ತಾ ಬಕುಳೆಯು । ನಭರಾಜ ಪುರಿಗೀಶ
ನಭಯ ಪೇಳುತ ಕೊರವಿ । ವಿಭವವ ಪೊಗಳುತ್ತ
ಸುಭಗಣಧೀಶ ವಂಶನ ನಮಿಸಿ ॥ ಯಶೋದೆ ತನ
ಗಭಯ ವಿತ್ತುದ ಸ್ಮರಿಸಿ । ಕೃಷ್ಣನ ಲಗ್ನ
ವಿಭವ ಕಣ್ಮನ ದಣಿಸಿ । ನೋಡುವೆನೆಂದು
ಶುಭಗುಣಗಳಾದಳಾನಂದ । ಸದ್ಭರಿತಳೆನಿಸೀ ೧೮

ತಂದೆ ತಾಯಿಯು ಮತ್ತೆ । ಬಂಧು ಬಳಗವಿಲ್ಲ
ವೆಂದೆನುತಲಿ ಚಿಂತೆ । ಯಿಂದ ನಟಿಸೆ ಬಕುಳೆ
ಅಂದಳು ತನ್ನನು । ಒಂದಾನಂತವ ಮಾಳ್ಪ
ಇಂದಿರೇಶನೆ ತವ । ಬಂಧುಗಳ್ಬಹ್ಮಾದಿ
ವೃಂದವ ಸ್ಮರಿಸಲು । ಬಂದು ನಿಲ್ವರುಕ್ಷಣ
ಕೆಂದು ಪೇಳಲು ಸ್ಮರಿಸೆ । ಮಂದಾಕಿನಿಯ ಪಿತ
ನಂದದಿ ಬಂದರಾಕ್ಷಣ ॥ ರವಿಯ ಕಳುಹೆ
ಇಂದಿರೆ ಬಂದಳಾಕ್ಷಣ । ನಟಗೆ ಪುಷ್ಪ
ವೃಂದಾರಕರು ಆಕ್ಷಣ । ಸುರಿಸುತ ಮಹಾ
ನಂದದಿ ಅಷ್ಟ ವರ್ಗವು । ಪೂರ್ಣಕ್ಷಣ ೧೯

ನಾಂದಿ ಪೂಜೆಯ ಗೈದು । ಬಂಧು ಬಳಗ ಅನ್ನ
ದಿಂದ ತೋಷಿಸದಲೆ । ಮುಂದೆ ಪ್ರಯಾಣವು

ಛಂದವಲ್ಲವು ಎಂಬ । ನಂದನ್ನ ನುಡಿ ಕೇಳಿ
ಇಂದಿರೇಶನು ಧನಪ । ನಿಂದಲಿ ಧನ ಕೊಂಡು
ವೃಂದಾರಕರು ತತ್ವ । ವೃಂದಾಭಿಮಾನಿಗ
ಳಿಂದ ತತ್ತತೀರ್ಥ । ಅಂದ ಪಾತ್ರೆಗಳಲ್ಲಿ
ಛಂದ ಪಾಕವ ಮಾಡೀಸಿ ॥ ನೃಹರಿಗ್ವೊಲ
ವಿಂದ ನೈವೇದ್ಯರ್ಪಿಸೀ । ಶ್ರೀ ಶೈಲಾಂತ
ಮಂದಿ ಸಾಲುಗಳ್ನಿಸೀ । ಸುರಪರಿವೇಷ
ದಿಂದ ಸರ್ವರ ಪೂರ್ಣ । ತೃಪ್ತಿಯಗೊಳಿಸೀ ೨೦

ಮರುದಿನದಲಿ ಎದ್ದು । ಸುರರೆಲ್ಲ ತಮ ತಮ್ಮ
ವರ ವಾಹನಗಳೇರಿ । ಗಿರಿಯ ನಿಳಿಯುವಾಗ
ಸುರರ ದುಂದುಭಿ ಭೇರಿ । ವರ ವಾದ್ಯಂಗಳು ಬಹು
ಮೊರೆಯುತ್ತಿರಲು ಗುಂಪು । ಸರಿದು ತಿಕ್ಕಾಡುತ್ತ
ದೂರ ಪೋದವರನ । ಅರಸಿ ಚೀರಾಡುತ್ತ
ವರ ಶುಕಾಶ್ರಮದೊಳಾ । ವರದಾತಿಥ್ಯ ಹರಿ
ನೆರೆ ತೃಪ್ತಿಯನೆ ತೋರುತ್ತ ॥ ಇರಲು ಋಷಿನಿ
ಕರ ಶಪಿಸುವೆವೆನುತ । ಎನುತಿರಲಾಗ
ಹರಿಯು ಒಡನೆ ತೇಗುತ । ತೋರಿದ ಜಗಕೆ
ತರು ಬೇರಿಗೆರೆದ ನೀ । ರಾದ ಶಾಖವು ತೃಪ್ತ ೨೧

ಅಸಮ ಸಾಹಸಿಗಳು । ಉಸಿರನಾಡಲು ತೆರ
ಲೇಸು ಕಾಣದಲಂದು । ನಿಶಿಯ ಕಳೆದು ರವಿಯು
ದಿಸೆ ಸಾಗೀ ನಭ । ದೀಶ ಪುರಿಯಲಿ ಸುರ
ಧೀಶನಾಜ್ಞೆಯಲ್ಲಿ । ವಿಶ್ವಕರ್ಮನರಚಿತ
ವಾಸಸ್ಥಾನಗಳನ್ನು । ಆಶ್ರಯಿಸುತಲಿರೆ
ವಸುಮತೀಶನು ಶ್ರೀನಿ । ವಾಸನ ಕಾಣುತ
ಲೇಸಾಗೆದುರುಗೊಳ್ಳುತ್ತ ॥ ವಧುವರರನೇ
ರಿಸಿ ಊರ ಸುತ್ತುತ್ತ । ವೈಭವದೊಳ
ರಸ ವೈವಾಹ ಗೈಯ್ಯುತ್ತ । ಅಳಿಯನಿಗಿತ್ತ
ಎಸೆವ ಕಿರೀಟಾಭರ । ಣಾದಿಗಳ್ನಲಿಯುತ್ತ ೨೨

ಜಗಕುತ್ಪತ್ತಿಯು ಲಯ । ಮಿಗಿಲಾಗಿ ಗೈಯುವ
ನಗಧೀಶ ನಿಲ್ಲುತ । ದಿಗ್ದೇಶದಿಂ ಬಪ್ಪ
ಮಿಗಿಲು ಭಕ್ತರ ಸೇವಾ । ದಿಗಳ ಕೈ ಕೊಳ್ಳುತ್ತ
ಜಗಕಾಶ್ಚರ್ಯವ ತೋರಿ । ವರಗಳ ಸಲಿಸುತ
ಖಗವಾಹನನು ಮುಕ್ತ । ಜಗವ ತರಿಸಿ ಇಲ್ಲಿ
ಬಗೆ ಬಗೆ ಕ್ರೀಡೆಯಿಂ । ಲಘುವಾಗಿ ಸಾಧನ ತ್ರಿ
ಬಗೆ ಜೀವರಿಗೆ ಗೈಸುತ್ತಾ ॥ ಇಹಪರ
ಸುಖಗಳನು ಕೊಡುತ್ತ । ಭಕ್ತರಿಗೆ ತೆ-
ತ್ತಿಗನಾಗ್ಯಾಡುತ್ತ । ವೈಕುಂಠಕ್ಕೆ
ಮಿಗಿಲು ಎನ್ನುವ ತೆರೆ । ವಿಭವ ತೋರುತ್ತ ೨೩

ವಾರಿಚರನೆ ಕೂರ್ಮ । ವರಹ ಸಿರಿ ನರಹರಿ
ವರ ವಟು ವಾವನ । ಪರಶುರಾಮನೆ ನೆಶಿ
ಚರರ ಸಂಹರ ರಾಮ । ತರುಣಿ ದ್ರೌಪದಿ ವರದ
ಚಾರು ಮಾತಿನ ಬುದ್ಧ । ಧೀರ ತೇಜಿಯ ವಾಹ
ನಾರಾಯಣನೆ ಆದಿ । ನೂರು ರೂಪನೆ ವಿಶ್ವ
ಮೂರುತಿ ಮೊದಲಾಗಿ । ನೂರು ಹತ್ತರ ರೂಪಿ
ಚಾರು ಅಜನೆ ಆನಂದ ॥ ಅನಂತನೆ ಯಾರು
ತುತಿಪರೊ ನಿನ್ನಿಂದ । ಮಹಾತ್ಮೆಯ
ತಾರಕವಗೆ ಗೋವಿಂದ । ನಿನ್ನಯ ಲೀಲೆ
ಬಾರಿ ಬಾರಿಗೆ ತೋರಿ । ಸಲಹೊ ಮುಕುಂದ ೨೪

ದಕ್ಷಿಣಾಕ್ಷಿಯ ವಿಶ್ವದಕ್ಷ ಸ್ವಪ್ನದಿ ತೇಜ
ದಕ್ಷಿಣಾಪ್ರಿಯ ಪ್ರಾಜ್ಞ । ಸಾಕ್ಷಿರೂಪನೆ ತುರ್ಯ
ಲಕ್ಷ್ಮೀವರಸನೆ ಆತ್ಮ । ಸೂಕ್ಷ್ಮಾಂತರಾತ್ಮನೆ
ಪಕ್ಷಿಯ ವಹ ಪರಮ । ಈಕ್ಷಣಪ್ರದ ಜ್ಞಾನ
ದಕ್ಷಹ ಸಖ ಕೃಷ್ಣ । ಚಕ್ಷು ಶ್ರವನೆ ಶಯ್ಯ
ಲಕ್ಷಿಸದಲೆ ಎನ್ನ । ಅಕ್ಷಯ್ಯ ದುರಿತವ
ಮಾಕ್ಷ ಮಾಧವ ಮುಕುಂದ ॥ ನಿನ್ನಯ ರೂಪ
ಈಕ್ಷಿಪರಿಗೆ ಆನಂದ । ವ್ಯಕ್ತಿಯ ಗೈದು

ಮೋಕ್ಷವ ಗುರು ಗೋವಿಂದ । ವಿಠಲ ಅಪ
ರೋಕ್ಷ ಪಾಲಿಸಿ ಪೊರೆ । ಪೂರ್ಣ ಆನಂದ ೨೫

೩೩೨

ಶ್ರೀ ಕೃಷ್ಣ ಮಹಿಮಾ

ಶಕ್ಯವೇನೇ ಗೋಪಿ ಶಕ್ಯವೇನೇ ಪ

ಠಕ್ಕು ಠವಳಿಗಾರ ಕೃಷ್ಣ । ಲೆಕ್ಕಿಸದೆ ಲಕುಮಿಯ
ಪೊಕ್ಕಳಿಂದಜನ ಪಡೆದ । ಗಕ್ಕರದಿ ಮಗನೆಂಬೆ ಅ.ಪ

ಪುಟ್ಟುವಾಗ ಶಂಖಚಕ್ರ । ಇಟ್ಟುಗದೆ ಪದುಮ ಕರದಿ
ಸುಷ್ಠು ತನ್ನ ದಿವ್ಯರೂಪ । ದಿಟ್ಟಿಸಿ ನೋಡೆಂದಂಗೆ ೧

ಕಂಸ ಶಿಶುವ ಕೊಲ್ವನೆಂಬ । ಅಂಶದಿಂ ವಸುದೇವ ಬೆದರಿ
ಪ್ರಶಂಶಿಸೆ ತೋಳೆರಡರ । ಶಿಶುವು ತಾನಾದವನಿಗೆ ೨

ಸಾಕಾರನ್ನ ವಾಸುದೇವ । ಗೋಕುಲಕ್ಕೆ ಒಯ್ಯುವಾಗ
ಕಾಕು ಬಂಧನಗಳೆಲ್ಲ । ನೂಕಿಸಿದ ಮಾಯಾವಿಗೆ ೩

ಕುಂದನೆಣಿಸದೆ ಭವ । ಬಂಧ ಕಳೆವಗೆ ಸೆರೆಯ
ಬಂಧವಮೀರ್ವೂವನ್ನು । ತಂದೆಗೆ ತಾ ತೋರಿದಗೆ ೪

ಭಾನುವಿನ ನಂದನೆಯು । ತಾನು ಮುದದಿ ಎಡೆಯಕೊಡೆ
ಗೇಣು ಆಳ ನೀರಿನಲ್ಲಿ । ತಾಣ ಸೇರ್ಸಿದ ಶಿಶುವಿಗೆ ೫

ಶಿಶುವನಿಡುತ ತೊಟ್ಟಿಲಲ್ಲಿ । ಆಶು ಹೆಣ್ಣು ಶಿಶುವ ಕೊಂಡು
ವಸುದೇವ ಮಧುರೀಗೆ । ನಿಶಿಯಲ್ಲೇವೆ ಬಂದನಲ್ಲೆ ೬

ಕಾರಾಗೃಹ ಕದಗಳು । ಥೇರವಾದ್ರು ಸೇರಿಕೊಂಡು
ಆರಿಗರಿವಿಲ್ಲವಾಳ್ಗೆ । ಭಾರಿನಿದ್ರೆ ಬರಿಸಿದಗೆ ೭

ಬೆಳಗು ಆಗಿ ಜನರೆದ್ದು । ಅಳುವ ಶಿಶುವ ಧ್ವನಿಯ ಕೇಳಿ
ಆಳು ಪೋಗಿ ದೊರೆಗೆ ಪೇಳೆ । ತಿಳಿದ ವಿಷಯನೆಲ್ಲ ಅವ ೮

ಉಗ್ರ ಕಂಸ ಸೆರೆಮನೆಯ । ಮಾರ್ಗವಿಡಿದು ಬರುತಲ್ಲಿ
ದುರ್ಗೆ ರೂಪಿ ಶಿಶುವ ಕೊಂಡು । ಕರ್ಗಗಳಿಂ ಕೊಲ್ಲೆನಿದಾಗೆ ೯

ಜಿಗಿದು ಬೇಗ ನಭೋ ಮಾರ್ಗ । ಬಗೆಯನರಿಯ ಮೂಢ ನಿನ್ನ
ಸಿಗಿದು ಕೊಲ್ವ ಶಿಶು ತಾನು । ಸಾಗಿರುವ ಬೇರೆಡೇಲಿ ೧೦

ಅಸುರೆ ಕೊಟ್ಟ ಮೊಲೆಯನುಂಡು । ವಿಷದಸಹ ಅಸುವ ಹೀರಿ
ಪೋಷಿಸಿದಲ್ಲಿದ್ದ ಊ । ರ್ವಶಿಯ ಶಾಪ ಮೋಚಿಸಿದಗೆ ೧೧

ನಿನ್ನ ಮಗನೆಂಬ ಮಮತೆ । ಯನ್ನು ನೀಗೆ ಆಕಳಿಸೆ
ಘನ್ನ ವಿಶ್ವವೆಲ್ಲ ತೋರ್ದ । ಚಿಣ್ಣಶಿಶು ಕೃಷ್ಣನೀಗೆ ೧೨

ನಿನ್ನ ತೊಡೆಯಲ್ಲಿದ್ದವನು । ಘನ್ನ ಭಾರ ತೋರುತಿರಲು
ಮಣ್ಣು ಮೇಲೆ ಇಡಲು ಅವನ । ತೃಣಾವರ್ತ ಅಸುರ ಬಂದ ೧೩

ಸುಂಟಿರುಗಾಳಿ ರೂಪನಾಗಿ । ಒಂಟಿ ಶಿಶುವ ಕೊಂಡು ಹಾರೆ
ಕಂಠಹಿಸಗಿ ಅವನ ಪ್ರಾಣ । ಕುಂಠಿಸೀದ ಕೃಷ್ಣನಿಗೆ ೧೪

ನಂದ ವ್ರಜಕೆ ಬರುವಂತಾಗೆ । ಬಂಧುವರ್ಗ ಮುನಿಯು ಆಗ
ನಂದನರ್ಗೆ ಪೆಸರಿಸೀದ । ಅಂದು ರಾಮಕೃಷ್ಣರೆಂಧು ೧೫

ಮಗನು ಎಂಬ ಭಾವವಳಿಯೆ । ಮಗುವು ಮಣ್ಣ ತಿಂದ ಬಾಯ
ವೇಗ ತಾಯ್ಗೆ ತೋರುತಲಿ । ಜಗವನೆಲ್ಲ ತೋರಿದಗೇ ೧೬

ಸ್ತನ್ಯ ಪಾನದಿರಲು ಶಿಶು । ವನ್ನ ಕೆಳಗೆ ಇರಿಸಿ ಪೋಗೆ
ಅನ್ಯ ವೃತ್ತಿಗಾಗಿ ಮೊಸರ । ಮಣ್ಣು ಪಾತ್ರೆ ಒಡೆದವಂಗೆ ೧೭

ದಧಿಯ ಮತಿಯ ಗೈಯ್ಯೆ ಬೆಣ್ಣೆ । ಉದಯಿಸಲು ಇಂದುನಿಭ
ಮುದ್ದುಕೃಷ್ಣ ಕೊಂಡು ಆದ । ಮೆದ್ದವಗೆ ಗುಪಿತದಲ್ಲಿ ೧೮

ಮಗನು ತುಂಟನೆಂದು ಬಗೆದು । ವೇಗಕೋಲ ಪಿಡಿದುಹೊಡೆಯೆ
ಸಿಗದೆ ಓಡಿ ತಾಯಿ ಶ್ರಮ । ಕ್ಕಾಗಿ ಮಗುಳೆ ಸಿಕ್ಕಿದವಗೆ ೧೯

ಅಮ್ಮ ನೊಶಮಗನು ಎಂಬ । ಮರ್ಮ ತೋರೆ ಜಗಕ್ಕೆಲ್ಲ
ಪೆರ್ಮೆಯಿಂದ ಅವನೇವೆ । ಸುಮ್ಮನೆ ತಾ ಸಿಕ್ಕಿದಗೆ ೨೦

ಬಿಗಿವೆ ಹಗ್ಗದಿಂದ ಎಂದು । ಮಗುಳೆ ನೀನು ಧಾಮ ಪಿಡಿದು
ಬಿಗಿಯೆ ಪೋಗೆ ಸಾಲದೋಯ್ತು । ಹೇಗೇ ಎಷ್ಟು ತಂದರದು ೨೧

ಬಂಧರಹಿತನೆಂದು ತೋರಿ । ಅಂದು ಲೀಲೆಯಿಂದ ಮತ್ತೆ
ಬಂಧಿತನು ವರಳಕಲ್ಲೆ । ಅಂದೆ ತರುವೆರಡ ಮುರಿದಗೆ ೨೨

ಮಣಿಗ್ರೀವ ನಳಕು ಬೇರ । ರ್ಥೀನ ಪಾಪ ಕಳೆವ ನೆವದಿ
ಧುನಿಯ ಚುಮು ಅಸುರಜನರ । ಪ್ರಾಣಹರಣಕ್ಕಾಗಿ ಹೊಡ್ದಗೆ ೨೩

ವೃಂದಾವನವ ಹೊಗಲು ಇಚ್ಛೆ । ಯಿಂದ ತನ್ನ ರೋಮಕೂಪ
ದಿಂದ ವ್ಯಾಘ್ರ ಸದೃಶ ವೃಕ । ವೃಂದಗಳ ಸೃಜಿಸಿದಗೆ ೨೪

ಇಂದಿರಾಪತ್ಯಾನಂದನು । ವೃಂದಾವನದಿ ನಂದಾದಿಗೆ
ನಂದಾವನೆ ತೋರಿಗೋಪ । ವೃಂದಕಾನಂದ ವಿತ್ತವಗೇ ೨೫

ದೈತ್ಯಧೇನುಕ ವತ್ಸಾಸುರರು । ಪೊತ್ತು ಕಂಸನಾಣತಿಯ
ವೆತ್ತಿ ಬರಲು ಪಿಡಿದು ಅವರ । ಎತ್ತಿ ಹೊಡೆದು ಕೊಂದವಗೆ ೨೬

ಬಕ್ಕಾಸುರ ಕೊಕ್ಕ ತೆಗೆದ । ಕುಕ್ಕಿತಿನ್ನಲುಬರಲುಶಿಶುವ
ಕೊಕ್ಕನೆರಡ ಶೀಳಿ ಬಿಸುಟ । ಪಕ್ಷಿದೈತ್ಯನ ಕೊಂದವಗೇ ೨೭

ಬ್ರಹ್ಮಾದಿಗಳ್ಕುಸುಮ ವರ್ಷ । ವಿಮಲ ಮೂರ್ತಿ ಮೇಲೆ ಸುರಿಸಿ
ಸುಮ್ಮನ ಸರು ಕೊಂಡಾಡಲು । ಹರ್ಮ್ಯಸಾಯಂ ಸೇರಿದಗೆ ೨೮

ಆರು ವರ್ಷ ತುಂಬುತಿರಲು । ಸರ್ವ ಜಗ ಪಾಲಕನು
ಚಾರು ಗೋವ್ಗಳ ಪಾಲನಾಗಿ । ಸಾರಿ ವನಗಳ ತಿರುಗಿದಗೇ ೨೯

ಕಾಳಿಯ ಮಡುವಿನಲ್ಲಿ ಗೋ । ಪಾಲರೆಲ್ಲ ನೀರ ಕುಡಿದು
ಹಾಲಾಹಲ ಮೆದ್ದತಾಗಿ । ಭಾಳನೊಂದರ್ಪೊರೆದವಗೆ ೩೦

ವಿಷದ ಜಲ ಯಮುನೇಲಿ । ಹಸನು ಆಗಿ ಮಾಳ್ವೆನೆಂದು
ವಿಷದ ಮಡುವಿಗ್ಹಾರಿ ಹರಿ । ವಿಷದ ಫಣಿಯ ತುಳೀದಗೆ ೩೧

ಹರಿಯ ಮಹಿಮೆ ತಿಳಿಯದೆಲೆ । ಕ್ರೂರ ವಿಷದ ಹಲ್ಲಿನಿಂದ
ಬಾರಿ ಬಾರಿ ಕಚ್ಚಿ ಹರಿಯರು । ಘೋರ ಸರ್ಪಗಳ ಮುತ್ತಿದಗೆ ೩೨

ಕಾಳಿ ಫಣಿಯ ತುಳಿದು ಕುಣಿದು । ಲೀಲೆಯಿಂದ ನಾಟ್ಯವಾಡೆ
ಮೇಲೆ ಗಂಧರ್ವಾಪ್ಸರೆಯ । ತಾಳಮೇಳದಿ ಕುಣಿಯುತಿರಲು ೩೩

ಸುಮ್ಮರಸರ್ ಕುಸುಮ ವರ್ಷ । ಬೊಮ್ಮ ವಂದ್ಯನ್ಮೇಲೆ ಕರೆಯೆ
ಹಮ್ಮಿನವ ಕಾಳಿಂಗನ । ಸೊಮ್ಮ ಅಡಗಿ ಕಣ್ಬಿಡುತಿರೆ ೩೪

ಸರ್ಪಗನ್ನಿಕೇರು ಎಲ್ಲ । ಗೊಪ್ಪ ಭಕ್ತಿ ಸ್ತೋತ್ರಮಾಡೆ
ಸರ್ಪಶಯ್ಯ ಕರುಣದಿಂದ । ಒಪ್ಪಿನಾಗನಸಲಹಿದಗೆ ೩೫

ವಿಷದ ಸರ್ಪ ಕಾಳಿಂಗನ । ಯೇಸೋ ದೂರ ಓಡಿಸುತ್ತ
ಹಸನು ಆಗಿ ಯಮುನೆ ಜಲವ । ಒಸೆದು ಗೈದ ಅಸಮನೀಗೆ ೩೬

ನಿಶಿಯ ಕಳೆಯೆ ಯಮುನ ತಟದಿ । ಮಸೆದು ಮುಸುಗ್ಗೆದಾವ ಅಗ್ನಿ
ಒಸೆದು ಕುಡಿದು ಭಕ್ತರನ್ನ । ಪೋಷಿಸೀದ ಕೃಷ್ಣನೀಗೆ ೩೭

ತರುವು ರೂಪಿ ಉಗ್ರ ದೈತ್ಯ । ಸುರಭಿ ಮಾತ್ರದಿಂದ ಜನರು
ಮರಣ ಪ್ರಾಪ್ತವಾಗುತಿರಲು । ತರುವ ದೈತ್ಯಕೊಂದವಗೆ ೩೮

ಸರಸಿಜಾಸನ ವರಗಳಿಂದ । ಮರಣ ರಹಿತ ರನ್ಯರಿಂದ
ಇರುವ ತರು ದೈತ್ಯರನೆಲ್ಲ । ಉರುಳಿಸಿ ಕೊಂದು ದಹಿಸಿದಗೆ ೩೯

ಅತ್ಯುಗ್ರವೀರ್ಯ ಘೂಳಿ ಸಪ್ತ । ದೈತ್ಯನೀಕ ಕೊಂದು ಕುಂಭಕ
ಸ್ತುತ್ಯ ಮಗಳು ನೀಲಾಕನ್ಯೆ । ಹಸ್ತವನ್ನು ಪಿಡೀದವಗೆ ೪೦

ಠಕ್ಕಿನ ಧೇನೂಕ ದೈತ್ಯ । ಪಕ್ವ ತಾಲು ಫಲಂಗಳ
ಅಕ್ಕರದಿ ಕಾಯುತಿರಲು । ದಕ್ಕಿಸಿ ಕೊಡೆನ್ನಗೋಪಕ್ ೪೧

ದೈತ್ಯ ಧೇನುಕನ್ನ ಕೊಂದು । ಮತೆ ತಜ್ಜಾತೀಯರ
ಹತ್ತಿಕ್ಕೆ ತಾಲು ಫಲವ । ಇತ್ತವಗೆ ಮೆಲುವುದಕ್ಕೆ ೪೨

ಆಟದಲಿ ಸೋತು ದೈತ್ಯ । ನೀಟಾಗಿ ಬಂದು ಬಲನ
ಘಟ್ಯಾಗೆತ್ತಿ ಅಂಬರಕ್ಕೆ । ಹಾರುತಿರಲು ಪ್ರಲಂಬನು ೪೩

ಮುಷ್ಠಿಯಿಂದ ಪ್ರಲಂಬನ । ಕುಟ್ಟಿಕೊಲ್ಲೆ ಬಲರಾಮ
ಪುಷ್ಠಿ ಮಾಡೆ ಬಲವನ್ನು । ಆವಿಷ್ಟನಾದ ಕೃಷ್ಣಂಗೇ ೪೪

ಗೋಗಣವ ಗೋಪರನ್ನು । ಸಾಗಿದಹಿಪ ಅಗ್ನಿಯನ್ನು
ವೇಗ ಕುಡಿದು ಪಾಲಿಸೀದ । ನಾಗರಕ್ಷಕ ಕೃಷ್ಣಂಗೇ ೪೫

ಹಸಿದು ಇರುವ ಗೋಪರೀಗೆ । ಋಷಿಪತ್ನೇರಿಂದನ್ನತರಿಸಿ
ಆಶೆಯನ್ನು ಪೂರೈಸಿದ । ಈಶನಾದ ಕೃಷ್ಣನೀಗೆ ೪೬

ಅನ್ಯ ದೈವತ ಪೂಜೆಯನ್ನು । ಇನ್ನು ಬಿಡಿಸೆ ಗೋಪರೀಗೆ
ಅನ್ನರಾಶಿ ಗಿರೀಗಿಟ್ಟು । ದನ್ನು ತಾಸಿ ಭುಜಿಸಿದವಗೆ ೪೭

ಇಂದ್ರನಿದ ಕಂಡು ಕೋಪ । ದಿಂದ ಬಹು ವರ್ಷ ಗರೆಯೆ
ಛಂದದಿಂದ ಗಿರಿಯನೆತ್ತಿ । ಮಂದಿ ಎಲ್ಲ ಪೊರೆದವಗೆ ೪೮

ಪಾಪಿ ಶಂಖ ಚೂಡ ತಾನು । ಗೋಪೇರನ್ನ ಅಪಹರಿಸೆ
ಶ್ರೀಪತಿ ಶ್ರೀಕೃಷ್ಣ ಅವನ । ಕೊಂದು ಮಣಿ ತಂದವಗೆ ೪೯

ವೃಷಭ ಅಸುರ ಅರಿಷ್ಟನು । ಭೀಷಿಸೆ ಗೋಗಣಗಳ
ಶ್ರೀಶ ಕೃಷ್ಣ ವಿಷಾಣ್ಹಿಡಿದು । ಅಸುರ ನವನ ಕೊಂದವಗೆ ೫೦

ಕೇಶಿ ಅಸುರ ತುರಗ ರೂಪಿ । ಕೇಶವನ್ಹಿಂಸಿಸೆಬರೆ
ಶ್ರೀಶ ಅವರ ಗಂಟಲೊಳು । ಚಾಚಿ ಕೈಯ್ಯ ಸಾಯ್ಸಿದಗೆ ೫೧

ಅಸುರಿ ವ್ಯೋಮ ಮಯನ ಪುತ್ರ । ನಿಶ್ಯೇಷರ ಬಿಲದೊಳ್ಹಾಕೆ
ಶ್ರೀಶ ಕೃಷ್ಣ ಅವನ ಕೊಂದು । ಬಿಲದ ಜನರ ಹೊರತಂದಗೇ ೫೨

ದೇವ ಮುನಿಯು ವಸುದೇವ । ಆವ ಕೃಷ್ಣನ ಗೋಪಿಗಿತ್ತ
ಯಾವ ವಾರ್ತೆನೆಲ್ಲ ಅರುಹೆ । ಕಂಸ ಅವರ ಬಂಧಿಸೇ ೫೩

ದಾನವಾರಿಯ ಕರೆದು ತರಲು । ದಾನ ಶೂರನ ಕಳುಹೆ ಕಂಸ
ದಾನಿ ಜೊತೆ ಕೃಷ್ಣ ಹೊರಡೆ । ಯಾನದಲ್ಲಿ ಬರುತಿರಲು ೫೪

ಸ್ನಾನಕಾಗಿ ಯಮುನೆ ಮುಳುಗೆ । ಧಾನಿ ಜಪಿಸಿ ಅಘಮರ್ಷಣ
ದಾನವಾರಿ ಕೃಷ್ಣನ ಕಂಡು । ಮೌನಿ ಆದ ಪುಳಕಾಂಕಿತ ೫೫

ಮತ್ತೆ ರಥದಿ ಹರಿಯ ಕಂಡು । ಅತ್ಯಂತಾಶ್ಚರ್ಯದಿಂದ
ತುತ್ತಿಸಿ ಮುಂದಿನ ಪಯಣ । ಹತ್ತಿದನು ಅಕ್ರೂರನು ೫೬

ಶ್ವಾಫಲ್ಕೀಯ ಪುರಿಗೆ ಕಳುಹಿ । ಶ್ರೀಪತಿ ಬಲ ಸಹ ಹೊರಟು
ಆಪುರಿ ಮಧುರೆಯ ನೋಡೆ । ಸೂಪುರರೆಲ್ಲ ಕೊಂಡಾಡಲು ೫೭

ಗಜದ ಮೇಲೆ ಹೇರಿಕೊಂಡು । ರಜಕ ವಸ್ತ್ರ ತರುತಿರಲು
ಅಜನು ಬೇಡಿ ಕೊಡದಿರಲು । ರಜಕನ ಕೊಂದ ಮಹಿಮಗೆ ೫೮

ಒಳ್ಳೆ ವಸ್ತ್ರ ಉಟ್ಟುಕೊಂಡು । ಕೊಳ್ಳೊ ಎಂದು ಬಲಗೆ ಕೊಟ್ಟು
ಎಲ್ಲ ಹಂಚಿ ಮಿಕ್ಕವನ್ನ । ಚೆಲ್ಲ ಪಿಲ್ಲಿ ಮಾಡಿದವಗೆ ೫೯

ಮಾಲೆಕಾರ ಸುಧಾಮನು । ಮಾಲೆ ಕಟ್ಟಿ ತರುತಿರಲು
ಕೇಳೆ ಅವನ ಕೃಷ್ಣನಾಗ । ಮಾಲೆ ಅರ್ಪಿಸಿ ನಮಿಸೀದ ೬೦

ವರವ ನೀಡಿ ಸುಧಾಮನಿಗೆ । ಬರುತಿರಲು ಮಾರ್ಗ ಮಧ್ಯೆ
ಕುರೂಪಿ ಕುಬ್ಜೆಯು ಗಂಧ । ತರುವಳ ಕಂಡಚ್ಯುತನು ೬೧

ಅರ್ಥಿಸೆ ಆದ ತ್ರಿವಕ್ರೆಯು । ಅರ್ಥಿಲಿ ತಾನೀಯೆ ಹರಿಗೆ
ಲಿಪ್ತನಾಗಿ ಗಂಧದಿಂದ । ತೃಪ್ತ ವಕ್ರೇಯ ತಿದ್ದಿದವಗೆ ೬೨

ಆಯುಧಾಗಾರ ಸಾರಿ । ಆಯಾವ ರುದ್ರ ಧನುಗೆ
ವೀರ್ಯದಿಂ ಚಾಪ ಹೊಡೆ । ಶೈವ ಧನುವು ಭಗ್ನವಾಗೆ ೬೩

ಧನುರ್ಭಂಗ ಶಬ್ದ ಕೇಳಿ । ಭಗ್ನನಾದ ಕಂಸ ಬಿದ್ದು
ಅಣಿ ಮಾಡಿ ಸೈನ್ಯ ಕಳುಹೆ । ಹಣಿದಗಡನೆ ಬಲ ಸಹ ೬೪

ಏರಿ ಕಂಸ ಮಂಚ ತಾನು । ಭಾರಿ ಗಜವು ಕುವಲ್ಯಾಪೀಡ
ತೂರಿಕಳುಹೆ ಸಾದಿ ಸಹಿತ । ಧೀರ ಚಾಣುರ ಮುಷ್ಟಿಕ ಸಹ ೬೫

ಆಟವಾಡಿ ಆನೆ ಕೈಲಿ । ಏಟಿನಿಂದ ಕೊಂದು ಅದನ
ಕೂದೀಲಿ ಸಾದೀಯ ಕೊಂದು । ನೀಟುದಂತ ಕೈಲಿ ಪಿಡಿದಗೇ ೬೬

ಮಲ್ಲ ಬಾಣರ ಹರಿಗೆ ಎಂದ । ಮಲ್ಲಯುದ್ಧ ಹೂಡೋಣಣ್ಣ
ಮಲ್ಲ ಮುಷ್ಟಿಕನೊಡನೆ ಬಲನು । ಚೆಲ್ವ ಸಮರ ತೋರಲಣ್ಣ ೬೭

ಆಟ ತೋರಿ ಅಲ್ಪಕಾಲ । ನೀವಾಗ್ಯವನ ಕಾಲ ಪಿಡಿದು
ಸೂಟಿಯಿಂದ ಗಗನದೊಳು । ಕಾಟೆಯಂತೆಸಗಿ ಕೊಂದವಗೆ ೬೮

ಜಟ್ಟಿ ಮಲ್ಲ ಮುಷ್ಠಕರೊಡನೆ । ದಿಟ್ಟ ಬಲನು ಯುದ್ಧಗೈದು
ಮುಷ್ಠಿಯಿಂದ ಕುಟ್ಟಿ ಅವನ । ಭ್ರಷ್ಟ ಮಲ್ಲನ ಅಸುವ ಕೊಂಡ ೬೯

ದಶಕ ದ್ವಯ ಅಕ್ಷೋಹಿಣಿ । ಸುಸಜ್ಜಿತರ ಕಂಸಕಳುಹೆ
ನಿಶ್ಯೇಶ್ಯದಿ ಬಲವ ಸವರಿ । ಶ್ರೀಶ ಬಲಸಹ ಮೆರೆದನ್ ೭೦

ಚರ್ಮ ಅಸಿ ಪಿಡಿದು ಕಂಸ । ಬೊಮ್ಮನಯ್ಯ ಮೇಲೆ ಬರಲು
ಹಮ್ಮಿಲವನ ಕೇಶ ಪಿಡಿದು । ಒಮ್ಮೆಲೆ ಶಿರವ ತಂದಗೆ ೭೧

ಪೂರ್ಣ ಗುಣ ಹರಿಯೆಂದು । ನಾನಾ ದೋಷರಹಿತನೆಂದು
ಜ್ಞಾನಿ ದೈವತ ಗಣ ಭಜಿಸಿ । ಕಾಣುವರ್‍ಯೋಗ್ಯ ಮುಕ್ತಿಯನ್ನ ೭೨

ಹರಿಯುಗೈದ ಕಾರ್ಯನೋಡಿ । ಸುರರು ಮೋದ ಪೂಮಳೆಯ
ವರ್ಷಿಸಲು ಹರಿಯ ಮೇಲೆ । ಹರುಷ ಪಟ್ಟರ್ ಸುಜನರೆಲ್ಲಾ ೭೩

ತಂದೆ ತಾಯಿ ಬಂಧ ಬಿಡಿಸಿ । ತಾಯಿ ತಂದೆಗೆ ಪಟ್ಟಗಟ್ಟಿ
ನಂದಗೋಪನ ಸಂತವಿಸಿ ಬಂಧು ಗೋಪರ ಕಳುಹಿವಗೆ ೭೪

ಕೃಷ್ಣ ಸರ್ವೋತ್ತಮನೆಂದು । ಸೃಷ್ಟಿ ಸ್ಥಿತಿ ಸಂಹಾರವು
ಒಟ್ಟೆಲ್ಲ ಜಗ ಕಾರ್ಯಗಳು । ಕೃಷ್ಣಂದೆ ಎಂಬಗೆ ಮುಕ್ತಿ ೭೫

ಗುರು ಗೋವಿಂದ್ವಿಠಲ ಕೃಷ್ಣ । ಸರ್ವಕ್ಕೆ ಕಾರಣನೆಂದು
ಅರಿತು ಭಜಿಪ ಸುಜನಕ್ಕೆಲ್ಲ । ಪರಮ ಮೋಕ್ಷ ವೀವ ತಿಳಿಯಿರಿ ೭೬

೩೩೩

ಪರೀಕ್ಷಿದ್ರಾಜನ ಸಂಕ್ಷಿಪ್ತ ಚರಿತ್ರೆ

ಧನ್ಯ ಧನ್ಯ ಧನ್ಯ ಪರೀಕ್ಷಿತೂ ಪ

ಅನ್ಯ ಸಾಧ್ಯ ರಹಿತವಾದ । ಸನ್ನಿವೇಶ ವದಗಿತಾಗಿ ಅ.ಪ

ಗರ್ಭದೊಳಗೆ ಇರಲು ಕೃಪೆಯ । ಗರ್ಭಜಾಸ್ತ್ರ ಬಂದು ಮುಸುಕೆ ।
ಸರ್ಬ ಮೂಲನೆನಿಸಿ ಪೂ । ಗರ್ಭ ಪಿತನು ಪೊರೆದನವನ ೧

ಪ್ರಸವ ಕಾಲದಲ್ಲಿ ಶಿಶುವು । ಅಸು ವಿಹೀನವಾಗಿ ಜನಿಸೆ
ಕುಸುಮ ನಾಭ ತ್ವರದಿ ಬಂದು । ಅಸುವನಿತ್ತು ರಕ್ಷಿಸೀದ ೨

ಇಳೆಯ ನಾಳುತಿರಲು ಒಮ್ಮೆ । ಕಲಿ ಪ್ರವೇಶ ತಿಳಿದು ಖಡ್ಗ
ಝಳಪಿಸುತ್ತ ರಥದಿ ಬರಲು । ಕಳೆ ವಿಹೀನ ವೃಷಭ ಕಂಡ ೩

ವೃಷಭ ರೂಪನಾದ ಧರ್ಮ । ಹಸುವಿನಂತೆ ಧರೆಯು ತಾನು
ಕುಶಲ ಕೇಳೆ ಒಂದಕ್ಕೊಂದು । ಉಸುರಿತಾಗ ಹಸುವು ವ್ಯಸನದಿ ೪

ಸತ್ಯ ಶೌಚ ದಯಾ ಅಹಿಂಸೆ । ಪೃಥ್ವಿಯೊಳಗೆ ಮರೆಯುತಿತ್ತು
ಸತಭಾಮೆ ಪತಿಯು ತೆರಳೆ । ಮೃತ್ಯುರೂಪಿ ಕಲಿಯು ಬಂದ ೫

ಇಂತು ಪ್ರಶ್ನೆ ನಡೆಯುತಿರಲು । ಹೊಂತಕಾರಿ ವೃಷಲಜಾತ
ಅಂತೆ ನೃಷನ ವೇಷ ಧರಿಸಿ । ಪಂತೆ ನಿಂದು ಭಯವ ತೋರಿದ ೬

ಅಚ್ಚರೀಯ ಕಂಡು ಅರಸು । ನಿಶ್ಚಯೀಸಿ ನಿಜವ ತಾನು
ದುಶ್ಚರೀತ ವೃಷಲ ನೃಪನ । ಕೊಚ್ಚಿ ಕೊಲ್ವೆನೆನುತ ಪೇಳ್ದನು ೭

ಮೃತಿಯು ತಪ್ಪದೆಂದು ತಿಳಿದು । ಗತನೃವೇಷ ತಾನು ಕಲಿಯು
ಗತಿಯು ನೀನೆ ಎಂದು ತ್ವರದಿ । ಕ್ಷಿತಿಪ ಪದದಿ ಶಿರವನಿಟ್ಟನು ೮

ಶರಣು ಎಂದು ಬಂದವಾನ । ಜರಿದು ಪೋಗು ಎಂಬ ವಚನ
ನರನ ಯಶವ ಶಿರದಿ ಧರಿಪ । ನರಪ ಎನಗೆ ಸಲ್ಲದ್ವಚನವು ೯

ಬಂಧು ಲೋಭಗಳಿಗೆ ಅದ । ರಿಂದ ನೀನು ಎನ್ನ ರಾಜ್ಯ
ದಿಂದ ದೂರ ಪೋಗಬೇಕು । ಎಂದು ಅರಸ ನುಡಿಯಲೂ ೧೦

ಆವದೇಶ ಪೋದರಲ್ಲಿ । ಯಾವ ಖಡ್ಗ ಪಿಡಿದ ನಿನ್ನ
ಭಾವ ಬಿಡದೆ ಕಾಂಬೆ ನಾನು । ಕಾವ ಭಾರ ನಿನ್ನದೆಂದನು ೧೧

ದ್ಯೂತ ಪಾನ ಸ್ತ್ರೀಯರಲ್ಲಿ । ಹೋತ ಹಸುವ ಕಡಿವ ಸ್ಥಳದಿ
ಪ್ರೀತಿಯಿಂದ ವಸಿಪುದೆಂದು । ಖ್ಯಾತ ನುಡಿದನವನಿಗೇ ೧೨

ಇಳೆಯ ಪತ್ಯುದಾರ ಮನವ । ಕಲಿಯು ಕಂಡು ಮತ್ತೆ ಬೇರೆ
ಸ್ಥಳವ ಬೇಡೆ ಜಾತರೂಪ । ದೊಳಗೆ ನೆಲೆಸು ಎಂದನು ೧೩

ವೃಷಭರೂಪಿ ಧರ್ಮನೀಗೆ । ಎಸೆವ ತಪವು ಶೌಚ ದಯಾ
ಕುಸಿದ ಪದತ್ರಯಂಗಳಿತ್ತು । ಹಸನ ಮುಖಿಯನೆಸಗಿದ ೧೪

ಸಾರ ಭುಜಿಯು ಕಲಿಯೊಳಿದ್ದ । ಸಾರ ಗ್ರಹಿಸಿ ವೃಕ ಸ್ವಭಾವ
ಶೂರ ಭೀರು ಕಲಿಯ ಕಳುಹಿ । ವೀರರಾಜ್ಯನಾಳಿದ ೧೫

ಇರಲು ಒಮ್ಮೆ ಧನುವಧರಿಸಿ । ಅರಸು ಮೃಗದ ಬೇಟೆಗಾಗಿ
ಚರಿಸಿ ವನವ ಶ್ರಾಂತನಾಗಿ । ಅರಸಿ ಜಲವ ಕಾಣದೇ ೧೬

ಪೊಕ್ಕು ಮುನಿಗಳಾಶ್ರಮಾವ । ಕರ್ಕಸನ್ನೆ ತಪದಿ ಕುಳಿತ
ಚೊಕ್ಕ ಸ್ಥಾಣು ಮುನಿಯ ಕಂಡು । ಅಕ್ಕರದಿ ಜಲವ ಬೇಡಿದ ೧೭

ಚಕ್ಷುರಾದಿ ಇಂದ್ರಿಯಂಗಳ್ । ಮುಚ್ಚಿ ಮೀರಿ ತ್ರಯ್ಯಾವಸ್ಥೆ
ಲಕ್ಷ್ಯವಿಟ್ಟು ಹರಿಯ ಪದದಿ । ಸ್ವಚ್ಛ ಸ್ಥಾಣು ಪರಿಯಲಿದ್ದನು ೧೮

ಚಕ್ರವರ್ತಿ ಸಾರ್ವಭೌಮ । ಶುಷ್ಕ ತಾಲು ವದನದಿಂದ
ಪೊಕ್ಕ ಅರ್ಘ್ಯ ಸೂನೃತಾವ । ಸಿಕ್ಕದೇನೆ ಕೃದ್ಧನಾದನು ೧೯

ಕಲಿಯು ಕಾದು ತನ್ನ ಸಮಯ । ಇಳೆಯ ಪತಿಯ ಮನವ ಪೊಕ್ಕು
ಖಳ ಕುಕರ್ಮ ಗೈವ ಪರಿಯ । ಛಲದಲೆಸಗಿ ನೆಲೆಸಿದ ೨೦

ಅರಸು ಧನಸು ಕೊನೆಯಲಿಂದ । ಉರಗ ಮೃತಕವನ್ನು ಮುನಿಯ
ಕೊರಳೊಳ್ಹಾಕಿ ಪೋಗಿ ಬಾಲ । ವರ ಸುತಪಸಿ ಶೃಂಗಿ ಕಂಡನು ೨೧

ತಂದೆ ಕೊರಳೊಳುರಗ ಮೃತಕ । ಅಂದು ಕಂಡು ತನಯ ಕ್ರೋಧ
ದಿಂದ ಕುಶಿಕ ಪಾಣಿಯಾಗಿ । ಅಂದೆ ನಿಶಿತ ಶಾಪವಿತ್ತನು ೨೨

ಇಂದಿನೇಳನೇಯ ದಿನದಿ । ಬಂದು ತಕ್ಷಕಾನು ಕಚ್ಚಿ
ಛಂದದಿಂದ ಕೊಲ್ಲಲೆನುತ । ತಂದೆ ಬಳಿಗೆ ಬಂದು ನಿಂತನು ೨೩

ತರಳ ಬಹಳ ಅಳುವ ಸಮಯ । ತೆರೆದು ತನ್ನ ಕಂಗಳನ್ನ
ಕೊರಳೊಳಿರ್ದ ಮೃತಕ ಸರ್ಪ । ತೊರೆದು ಬಿಸುಟು ಕೇಳ್ದನು ೨೪

ಅರಿತು ಕ್ಷಿತಿಪಗಿತ್ತ ಶಾಪ । ವರ ಶಮೀಕ ಬಟ್ಟು ತಾಪ
ತರಳ ಕೃತಿಯ ನಿಂದೆಗೈದು । ಮರುಗಿ ಬಹಳ ನೊಂದನು ೨೫

ನೃಪನು ರಹಿತ ರಾಜ್ಯವಾಗೆ । ಕುಪಥಗಾಮಿ ಪ್ರಜೆಗಳಾಗಿ
ಅಪರಿಮಿತದ ಚೋರ ಭಯದಿ । ತಪಸಿ ಲೋಕ ಕ್ಷೋಭಯು ೨೬

ಚಕ್ರವರ್ತಿಗೈದ ಅಲ್ಪ । ವಕ್ರಗತಿಗೆ ಕ್ರೂರ ಶಾಪ
ಸೊಕ್ಕಿ ಇತ್ತ ಅದಕೆ ಪಾಪ । ಅಕ್ಕಟಕ್ಕಟೆಮಗೆ ಒದಗಿತು ೨೭

ಕರೆದು ತನ್ನ ಶಿಷ್ಯರನ್ನು । ತ್ವರದಿ ಕಳುಹಿ ನೃಪನ ಬಳಿಗೆ
ಬರೆದು ಬನ್ನಿ ಇರುವ ಸ್ಥಿತಿಯ । ಹರಿಯು ಕೊಡಲಿ ಮಂಗಳ ೨೮

ಇಷ್ಟು ಹೊತ್ತಿಗರಸು ತನ್ನ । ದುಷ್ಟ ಕಾರ್ಯನೆನೆದು ಮನದಿ
ಸುಟ್ಟು ಹೋಗಲೆನುತ ರಾಜ್ಯ । ಕಷ್ಟ ಪರಂಪರೆಯ ಬೇಡಿದ ೨೯

ಬಂದು ಪೇಳೆ ಮುನಿಯ ವೃಂದ । ವಂದಿಸುತ್ತ ಅವರ ಕಳುಹಿ
ನಂದ ನಂದನ ಕರುಣವನ್ನ । ಛಂದದಿಂದ ಪಾಡಿ ಪೊಗಳಿದ ೩೦

ತುಳಸಿ ಮಿಶ್ರ ಕೃಷ್ಣನಂಘ್ರಿ । ತೊಳೆದ ಉದಕ ಉಭಯ ಲೋಕ
ಬಲು ಪವಿತ್ರ ಗಂಗೆ ಸೇವೆ । ಕೊಳರೆ ? ಮರಣಶೀಲರು ೩೧

ಮುಕ್ತ ಸಂಗನಾಗಿ ಅರಸು । ತ್ಯಕ್ತ ಅಶನವ್ರತದಿ ಮನವ
ಮುಕ್ತಿದಾ ಮುಕುಂದನಲ್ಲಿ । ಭಕ್ತಿಲಿದ್ದ ವಿಷ್ಣು ಪದಿಯೊಳು ೩೨

ವ್ಯಾಸ ಪರಶು ರಾಮ ರಾದ್ಯ । ಶೇಷ ಋಷಿಗಳೆಲ್ಲ ತಾವು
ಲೇಸು ವೆರಸಿ ಶಿಷ್ಯರೊಡನೆ । ಈ ಸುಸಮಯ ಬಂದರು ೩೩

ಬಂದ ಋಷಿಯ ನಿವಹಕರಸು । ವಂದಿಸುತ್ತ ಅರ್ಘ್ಯ ಪಿಡಿದು
ಇಂದಿರೇಶ ದಯದಿ ಧನ್ಯ । ನೆಂದು ಮನವ ಪೇಳ್ದನು ೩೪

ಕಚ್ಚಲೇನು ಎನ್ನ ದೇಹ । ತುಚ್ಛ ತಕ್ಷಕಾನು ಬಂದು
ಅಚ್ಯುತನ್ನ ಚರಣ ಮಹಿಮ । ನೆಚ್ಚಿ ತುತಿಪ ಮನವ ಬೇಡಿದ ೩೫

ಪಾರ್ಥಿವದ ಸುತನು ವಿನಂತ । ಪಾರ್ಥ ಸಖನ ಮಹಿಮೆಯನ್ನ
ಕೀರ್ತಿಸುತ್ತಲಿರುವುದೆಂದು । ಪ್ರಾರ್ಥಿಸಿದ ಋಷಿಗಳೆಲ್ಲರ ೩೬

ಮುಂತೆ ಬರುವ ಜನುಮಗಳಲಿ । ಇಂತು ಹರಿಯ ಸಂತ ಸಂಗ
ಕಂತು ಪಿತನು ಕೊಡಲಿ ಎಂದು । ಸಂತರಾಶಿಷವ ಬೇಡಿದ ೩೭

ಉತ್ತರೆದುರು ದಿಕ್ಕಿನಲ್ಲಿ । ಉತ್ತರಾಭಿಮುಖನು ಆಗಿ
ಉತ್ತರೇಯ ಪುತ್ರಕುಶದ । ಉತ್ತಮಾಸನ್ಹಾಕಿ ಕುಳಿತನು ೩೮

ಹಾರ ಮುಕುಟ ಮೌಳಿ ರತ್ನ । ಚಾರು ಅಂಗುಲೀಗಳೆಸೆದು ।
ನಾರು ವಸ್ತ್ರ ಪವಿತ್ರ ಪಾಣಿ । ಧೀರ ಮುನಿಯು ಆದನು ೩೯

ದೇವ ತತಿಯು ಮೋದದಿಂದ । ಸಾರ್ವಭೌಮ ಚರ್ಯತುತಿಸಿ
ಪೂವ ಮಳೆಯ ಕರೆಯುತಿರಲು । ದೇವ ವಾದ್ಯಗೈದರು ೪೦

ದೇವರಾತ ದೇಹದೊಡನೆ । ಆವವರೆಗು ಇರುವ ತನಕ
ನಾವು ಸನಿಯ ಇಹೆವು ಎಂದು । ಸಾರ್ವ ಸುಜನರೊರೆದರು ೪೧

ಅಜನು ಪರನು ಶೋಕರಹಿತ । ರಜ ವಿದೂರನಾದ ಹರಿಯ
ನಿಜ ಸುಪಾದ ಮೂಲ ಸೇರ್ವ । ನಿಜ ವಿದೆನುತ ತುತಿಸಲು ೪೨

ಅನಿಲ ಪಿತನ ಇಚ್ಛೆಯಿಂದ । ಮೌನಿ ಶುಕನು ನಿಜಾನಂದ
ಅನಪೇಕ್ಷ್ಯ ಅಲಕ್ಷ್ಯಲಿಂಗ । ಮುನಿಗಳ್ಮಧ್ಯವ್ಯಕ್ತನು ೪೩

ಶಿರದಿ ಧರಿಶಿ ಅರ್ಘ್ಯ ಪಾದ್ಯ । ಶಿರವ ಬಾಗಿ ಬಂದ ಶುಕಗೆ
ಮರಣ ಶೀಲ ಮಾಳ್ಪ ಕೃತ್ಯ । ಅರುಹಿ ಪೊರೆವುದೆಂದನು ೪೪

ಶ್ರವಣ ಮನನ ಭಜನೆ ಜಾಪ್ಯ । ಇವುಗಳೂ ಮತ್ತನ್ಯ ಪೇಳಿ
ಭವ ವಿಮುಕ್ತನೆನ್ನ ಮಾಳ್ಪ । ಹವಣೆ ತಿಳಿಸಿ ಪೊರೆವುದೆಂದನು ೪೫

ಸಪ್ತ ದಿನವು ಭಾಗವತವ । ಭಕ್ತಿಯಿಂದ ಕೇಳಿ ಅರಸು
ಉತ್ತಮ ಶ್ಲೋಕನ್ನ ಪಾದ । ಪ್ರಾಪ್ತಿ ಗೈಅದ ವಿಭವದೀ ೪೬

ಕೃಷ್ಣ ಸಂಕೀರ್ತನೇಲಿ । ಇಷ್ಟ ಸರ್ವ ಲಭಿಪಕಾಲ
ನಿಷ್ಠರರಿತು ಮರ್ಮವಿದನ । ಪುಟ್ಟೆ ಕಲಿಯೊಳ್ಬಸೋರು ೪೭

ದೋಷ ನಿಧಿಯು ಕಲಿಯ ಕಾಲ । ಲೇಸು ಮಹಾಗುಣವು ಉಂಟು
ವಾಸುದೇವನ ಕೀರ್ತಿಸೆ ಉ । ಲ್ಲಾಸದಿಂದ ಮುಕ್ತಿ ಕೊಡುವ ೪೮

ಪರೀಕ್ಷಿತನ್ನ ಚರಿತೆ ಕೇಳಿ । ನಿರತ ಹರಿಯ ಧ್ಯಾನಾಸಕ್ತ
ಶರಣರನ್ನ ಬಿಡದೆ ಪೊರೆವ । ಗುರು ಗೋವಿಂದ ವಿಠ್ಠಲ ೪೯

೩೩೪

ಪಂಚಕೋಶದ ವಿವರ

ಧೇನಿಸೋ – ಪಂಚಕೋಶಗನ ಧೇನಿಸೋ ಪ

ಧೇನಿಸೋ ಪಂಚಕೋಶಗನ । ತನ್ನ
ಮಾನಿನಿ ಯೊಡನಿರುವವನ । ಆಹ
ಷಣ್ಣ್ಯ ವತ್ಯಂಗುಲ । ಮಿನುಗುವ ಗಾತ್ರದಿ
ವಿನಿಮಯ ಗೈದಿಹ । ತನ್ವೀ ತತ್ವಗಳನು ಅ.ಪ

ಅನ್ನ ಪ್ರಾಣವು ಮನೋಮಯ । ಕೋಶ್ವಿ
ಜ್ಞಾನವು ಆನಂದಮಯ । ತಿಳಿ
ದಾನು ಸಂಧಿಸೆ ತತ್ವಮಯ । ಅಲ್ಲಿ
ಅನುಪೂರ್ವದಿ ಅಪ್ರಮೇಯ । ಆಹ
ಅನಿರುದ್ಧ ದ್ಯುಮ್ನನು । ವೇಣು ಸಂಕರ್ಷ್ಣನು
ಇನ್ನು ವಾಸುದೇವ್ನ । ನೆನೆಯೊ ನಾರಾಯಣನ ೧

ಪೃಥಿವಿ ಉದಕ ಅನ್ನಮಯ । ವಾಯು
ತತ್ವಗ್ನಿ ನಭ ಪ್ರಾಣಮಯ । ಮುನ್ನ
ಮತ್ತಹಂ ಅದು ಮನೋಮಯ । ಮಹ
ತತ್ವದಿಂ ವಿಜ್ಞಾನಮಯ । ಆಹ
ತತ್ವವವ್ಯಕ್ತದಿಂ । ಕೃತ್ಯವಾನಂದವು
ಚಿತ್ತದೀ ಚಿಂತೆಯಿಂ । ವ್ಯಕ್ತನಾಗುವ ಹರಿ ೨

ಧರಣಿ ವರುಣ ಅನ್ನಮಯ । ಇನ್ನು
ಮರೀಚ್ಯಗ್ನಿ ಗಣಪ ಪ್ರಾಣ್ಮಯ । ಹಾಗು

ಸುರಪ ರುದ್ರರು ಮನೋಮಯ । ಕೇಳು
ಸುರಜೇಷ್ಠ ವಿಜ್ಞಾನಮಯ । ಆಹ
ಶಿರಿಯು ತಾನಾಗಿಯೆ । ಇರುವಾಳನಂದದಿ
ಪರಿಪರಿ ಇವರೆಲ್ಲ ಹರಿಯ ಪೂಜಿಸುವರೊ ೩

ತುತ್ತನ್ನ ಉದಕವು ಉದರ । ದಲ್ಲಿ
ಕ್ಷಿಪ್ತವಾಗೆ ವಿಂಶ ಚತುರ । ಕೇಳು
ತತ್ವಗಳಿಪ್ಪವು ಮಿಶರ । ಭಾವ
ಅತ್ಯಣ್ವನಂತವು ಪ್ರಖರ । ಆಹ
ವಿಸ್ತರಂಶಿ ಅಂಶ । ತತ್ವರು ಉಪಚಯ
ಕರ್ತರು ತನುವಿಗೆ । ತುತ್ತಿಪುದವರನು ೪

ಅರುಹುವೆ ಅನ್ಮಯ ತತ್ವ । ಪೃಥ್ವಿ
ಸುರಭಿಯು ಘ್ರಾಣ ಉಪಸ್ಥ । ಮತ್ತೆ
ನೀರು ರಸ ಜಿಹ್ವೆಯು ಮಿತ್ರ । ಇಲ್ಲಿ
ಗೆರಡಾರು ಎಣಿಕೆಯ ತತ್ವ । ಆಹ
ನಿರುತ ಕೋಶಾಂತ ಸ್ಥ । ವಿರಂತೋಪಚಯಗಳ
ವಿರಚೀಸಿ ಸುರರದನ । ಹರಿಗೆ ಅರ್ಪಿಸಿರಯ್ಯ ೫

ವರತೇಜ ರೂಪವು ಚಕ್ಷು । ಪಾದ
ಮರುತ ಪ್ರವಹ ಸ್ಪರ್ಷ ತ್ವಕ್ಕು । ಪಾಣಿ
ಮಿರುಗುವ ನಭ ಶಬ್ದಶ್ರೋತ್ರ । ವಾಕು
ಸರಿಸೆ ತತ್ವಂಗಳೆರಡತ್ತ । ಆಹ
ಪರಣ ಮಯ ಕೋಶಸ್ಥ । ನಿರುತೋಪಚಯವಾಗಿ
ಹರಣ ವ್ಯಾಪಾರಗಳ್ । ಪರಿಪರಿಯಾಗೋದು ೬

ಮರಳಿ ಮನಸು ಅಹಂಕಾರ । ತತ್ವ
ವೆರಡವು ಮನೊ ಮಯಕಾರ । ಇನ್ನು
ಸ್ಮರಿಪುದು ಮಹತ್ತತ್ವವಿವರ । ಅದಕೆ
ಇರುವೋದು ವಿಜ್ಞಾನಾಕಾರ । ಆಹ

ಪರಮ ವ್ಯಕ್ತ ತತ್ವ । ಸರಿವುದಾನಂದದಿ
ಸ್ಥಿರವಾದೀ ವಿವರವ । ಅರಿವರೆ ಧನ್ಯರೋ ೭

ತತ್ವತು ತತ್ವಗಳಲ್ಲಿ । ಲೀನ
ತತ್ತತು ಕೋಶಗಳಲ್ಲಿ । ದಿನ
ಪ್ರತ್ತಿ ಹೀಗೆ ಗಾತ್ರದಲ್ಲಿ । ಮಿತಿ
ತತ್ವ ಕಾರಣ ಕಾರ್ಯದಲ್ಲಿ । ಆಹ
ಅತಿಶಯವು ಸ್ಥೂಲ । ಮತ್ತೆ ವಿಣ್ಮೂತ್ರವು
ಹತ್ತಿದ ಮಜ್ಜಾಸ್ಥಿ । ಪೊತ್ತ ಭೌತಿಕದಲ್ಲಿ ೮

ಕಾರ್ಯವು ಅನಿರುದ್ಧದಲ್ಲಿ । ಸೂಕ್ಷ್ಮ
ಧಾರ್ಯ ಕೇವಲ ಲಿಂಗದಲ್ಲಿ । ಮತ್ತೆ
ಕಾರ್ಯ ರಹಿತ ತಿಳಿ ಅಲ್ಲಿ । ಕೇವ್ಲ
ಪ್ರೇರ್ಯವು ಲಕುಮಿಯದಲ್ಲಿ । ಆಹ
ಭಾರ್ಯರ ವರೆಸುತ್ತ । ಆರ್ಯಮರುತ ಬೊಮ್ಮ
ಸ್ಥೈರ್ಯಕ್ಕೆ ಲಕುಮಿಯಿಂ । ಪ್ರೇರ್ಯರೆನಿಸುತಲ್ಲಿ ೯

ತೃತಿಯ ಪರಿಚ್ಛೇದ ತನುವು । ಲಿಂಗ
ಸಿತದಲ್ಲಿ ಅವ್ಯಕ್ತ ಮಹವು । ಮತ್ತೆ
ರಕ್ತದಿ ದಶ ಇಂದ್ರಿಯಾವು । ಇನ್ನ
ಸಿತದಲ್ಲಿ ಭೂತ ಮಾತ್ರವು । ಆಹ
ಸ್ಥಿತಕಾಲ ಕಾರ್ಯಗಳ । ಗತಿ ತಪ್ಪದೆಲೆ ಮಾಡೆ
ವಿತತವು ಹರಿಯಜ್ಞೆ । ಮತವಿದು ಅನಾದಿ ೧೦

ಹೆಂಚು ಹಾಟಕ ವೆರಡರ । ಸಮ
ಸಂಚಿಂತಿಪನೆ ಅವಧೀರ । ಇನ್ನು
ಪಂಚ ಕೋಶಗಳ ವಿವರ । ಅರಿಯೆ
ಪಂಚ ಪಂಚಾತ್ಮಕ ವಿವರ । ಆಹ
ವಾಂಛಿತಾರ್ಥವ ಗುರು । ಗೋವಿಂದ ವಿಠಲನು
ವಂಚಿಸದೆಲೆ ಕಳೆವ । ಸಂಚಿತಾಗಮಗಳ ೧೧

೩೩೫

ಬಿಡು ಬಿಡು ಬಿಡು ಮನ – ಬಿಡು ಭಯ – ಇನ್ನು
ಪಡೆ ಹರಿ ಕಡು ದಯಾನಿಧಿ ದಯ ಪ

ಯುಗ ಯುಗದೊಳು ಹರಿ ಅವತಾರ – ಮಾಡಿ
ಬಗೆ ಬಗೆಯಲಿ ಕಾಯ್ವ ಶರಣರ ।
ಯುಗ ಕೃತ್ಯಪ್ರವರ್ತಕನ ಸ್ಮರಿಪರ – ಬಹು
ಅಘಗಳ ಹರಿಸೂವ ರಘು ವೀರ ೧

ಮೃಗು ಧೃವ ಪ್ರಹ್ಲಾದನ ನೋಡು । ಕೃತ
ಯುಗದಿ ಕಾಯ್ದದ ತಿಳಿದು ಬೇಡು ।
ಯುಗ ತ್ರೇತದಿ ಸುಗ್ರೀವನ ನೋಡು – ಮತ್ತೆ
ಯುಗ ಮೂರರೊಳ್ ಕುಂತಿಜರ ನೋಡು ೨

ಕಲಿಯುಗದಲಿ ಹರಿ ಬರಲಿಲ್ಲ । ಎಂದು
ಪೇಳಲಾಗದೊ ಮೂಢ ಸೊಲ್ಲಾ ।
ಕಳುಹುತಲಿರುವ ಭಕ್ತರನೆಲ್ಲಾ । ನಮ್ಮ
ನೆಲ್ಲಾನುದ್ಧರಿಸಾಲು ಲಕ್ಷ್ಮಿನಲ್ಲಾ ೩

ಪವನರಾಯರು ಮಧ್ವರಾಗಿ । ಬಂದು
ಅವನೀಯೋಳ್ ಗ್ರಂಥ ರಚಿಸಿದವರಾಗಿ ।
ಶ್ರವಣ ಮನನ ಮಾಡಿ ಯೋಗೀ – ಆಗಿ
ಭವ ಭಯ ಕಳೆಯೊ ಮುಂದಕೆ ಸಾಗಿ ೪

ಮಧ್ವ ಶಾಸ್ತ್ರಂಗಳ ಪ್ರವಚೀಸೆ । ಸುರ
ನಿವಹವು ಬರಲಿಲ್ಲ ಆಶೀಸೇ ।
ಅವನಿ ಸುರರ ಜನ್ಮ ಓಲೈಸೇ । ಬರೆ
ಭುವನ ಸಜ್ಜನಕೆಲ್ಲಾ ಮೇಲೈಸೇ ೫

ದಿಗ್ಗಾವ್ಯಾ ಚಾರ್ಯರ ನೋಡಾ । ಬಲು
ವೆಗ್ಗಳ ತಿಮ್ಮಪ್ಪನ ಕೂಡಾ ।
ಹೆಗ್ಗ ಲೀಲಾದಿಗಳ್ಹಾಡಾ । ತಿಳಿ
ಸಗ್ಗಕೆ ಮಾರ್ಗವು ನೋಡಾ ೬

ಪಿತೃ ದಿನದಲಿ ದುಷ್ಟ ದ್ವಿಜರೂ । ತ್ಯಜಿಸೆ
ಮಾತೃ ಭಾವವ ತಿಳಿದು ಇವರೂ ।
ಗಂತೃ ವೆಂಕಟನವರು ಕರೆದಾರು । ಬಂದು
ಭೋಕ್ತೃಗಳಾಗಿ ಪೊರೆದಾರು ೭

ದ್ವಿಜ ಕುಜನ ಪರಿಕಿಸೆ ಈ ದಿನಾ । ಕಾದು
ದ್ವಿಜರ ಹಿಂಬಾಲಿಸೆ ಆಕ್ಷಣಾ ।
ಅಜನಯ್ಯನ ವ್ಯಕ್ತ ಮರುಕ್ಷಣಾ । ಪೇಳ್ದ
ಭೋಜನೋರ್ಜನರಾತ್ರಿ ಆ ದಿನಾ ೮

ಅಚ್ಚರಿಯನು ಕೇಳೆಲೋ ನೀನು । ನಮ್ಮ
ಅಚ್ಚುತ ವೆಂಕಟೇಶನು ತಾನು ।
ಮೆಚ್ಚಿನ ದತ್ತ ಧೋತ್ರಗಳಾನು । ತಾನೆ
ಬಿಚ್ಚಿ ಉಟ್ಟಾಶ್ಚರ್ಯವನು ೯

ಭೂವರಾಹನ ಬಳಿ ತಿಲದರ್ಭಾ । ನೋಡು
ಶ್ರೀ ವೆಂಕಟನ ಬಳಿ ಯವದರ್ಭಾ ।
ಯಾವ ದಕ್ಷಿಣೆ ತಂಬ್ಲ ಪೂಗರ್ಭಾ । ನಯ್ಯ
ಧಾವಿಸಿ ಕೊಂಡಿಹ ಜಗಗರ್ಭಾ ೧೦

ಜಲಜನಾಭನ ವ್ಯಾಪ್ತಿ ಜಗದೊಳು । ಕಂಡು
ಮೊಲವ ಹುಲಿಯ ಒಂದೆ ಸಮದೊಳು ।
ಹುಲಿಗೆ ಅಂಗಾರವನಿಡುವ್ರೋರು । ಇದ
ತಿಳಿಯೊ ಹೆಚ್ಚಿನದಲ್ಲಿ ಭಕ್ತ್ರೋಳು ೧೧

ಗವಿದ್ವಾರ ಬಂಧನ ಮಹಂತಾ । ಗೈಯ್ಯದಿ
ಗ್ಗಾವಿ ಆಚಾರ್ಯ ನಿಂತಂಥಾ ।
ಗವಿಯನು ಮಾರ್ವಾಡಿ ಸತ್ವಂಥಾ । ಸೇಟಿ
ನವನಕೈಲಿ ತೆಗೆಸಿದ ಶ್ರೀ ಕಾಂತ ೧೨

ನಾಲಕ್ಕು ಮೂರು ತಲೆಯಾಯ್ತು । ಇದು
ಮೇಲುಗಿರೀಯಲ್ಲಿ ಬರೆದಾಯ್ತು ।
ಕೇಳಲೋ ಮನುಜ ಲಾಗಾಯ್ತು । ಹರಿ
ಯಾಳುಗಳಲ್ಲೀ ಬರವಾಯ್ತು ೧೩

ಲೀಲೆಗಳೀಪರಿ ಹರಿಯಿಂದಾ । ನಮ್ಮ
ಮೇಲುಗಿರಿಯ ವೆಂಕಟನಿಂದಾ ।
ಕಾಲ ಕಾಲಕೆ ತೋರ್ವ ಛಂದಾ । ಕೇಳಿ
ಕೇಳಿ ಪೊಂದೆಲೊ ಬಹು ನಂದಾ ೧೪

ಗುಪ್ತ ಮಹಿಮ ಭಕ್ತ ವತ್ಸಲ್ಲಾ । ತನ
ಗಾಪ್ತ ಸಜ್ಜನ ಮಾತನೆಲ್ಲಾ ।
ಪ್ರಾಪ್ತಿ ಗೈಸುವ ತಿಳಿ ಸೊಲ್ಲಾ । ಪರ
ಮಾಪ್ತ ಗುರು ಗೋವಿಂದ ವಿಠ್ಠಲ್ಲ ೧೫

೩೩೬

ಯಜ್ಞವಾಚರಿಸೋ ನೀ । ಯಜ್ಞಾವ
ಯಜ್ಞ ಆತ್ಮಾರ್ಪಣವೆಂಬೊ । ಬಹು
ಸುಜ್ಞರಿಂದಾಚರಿತೆಂಬೊ । ಆಹ
ಅಜ್ಞಾನಿಗಳವಲ್ಲ । ವಿಜ್ಞಾನಕ್ಕಭಿಮಾನಿ
ಯಜ್ಞಾಖ್ಯ ವಾಯು ನಿ । ರ್ವಿಘ್ನದಿ ನಡೆಸುವ ಅ.ಪ

ಬದ್ಧ ಜೀವನೆ ಯಜಮಾನ । ಶ್ರದ್ಧೆ
ಬುದ್ಧಿಯೆ ಪತ್ನಿ ಸಮಾನ । ತನು

ಇಧ್ಮವು ತಿಳಿ ಇದು ಮಾನ । ಎದೆ
ಶುದ್ಧ ವೇದಿಕೆಗೆ ಸಮಾನ । ಆಹ
ಸಿದ್ಧಿ ತನುರುಹ ದರ್ಭೆ । ವಿದ್ಧಿ ಶಿಖಿಯು ವೇದ
ಹೃದ್ಗುಹದಲಿ ಯೂಪ । ಬುದ್ಧಿಯ ಮಾಡುತ್ತ ೧

ವಿಷಯದಾಸೆ ಅಜ್ಯವೆನಿಸಿ । ಕ್ರೋಧ
ಪಶುವನು ಯೂಪಕ್ಕೆ ಬಿಗಿಸಿ । ತಪ
ವಸುರೇತ ಸ್ಥಾನದಲ್ಲಿರಿಸಿ । ದಮ
ವಸುವೆಂದು ನೀನು ಚಿಂತಿಸಿ । ಆಹ
ಎಸೆವ ವಾಕು ಜಿಹ್ವೆ । ಅಸಮ ಹೋತೃಸ್ಥಾನ
ಶ್ವಾಸೋಚ್ಛಾಸವು ಮತ್ತೆ । ನಾಸ ಉದ್ಗಾತನ ೨

ಕಣ್ಣುಗಳ ಧ್ವರ್ಯು ಸ್ಥಾನ ತಿಳಿ
ಮನ್ನವೆ ಬ್ರಹ್ಮಾಭಿಧಾನ । ಶ್ರೋತ್ರ
ಅಗ್ನೀಧ್ರವೆಂಬುದು ಮಾನ । ಬಹು ಸ–
ಹಿಷ್ಣುತೆಯೇ ದೀಕ್ಷಾಸ್ಥಾನ । ಆಹ
ಅನ್ನ ಅಶನ ಕ್ರಿಯ । ವಿನ್ನು ಹವಿಸ್ಸನ್ನು
ನೆನ್ನೆಯ ಜಲಪಾನ । ಚನ್ನ ಸೋಮದರಸ ೩

ರಮಿಸುವುದೇ ಉಪಸದಾಖ್ಯ । ಮತ್ತೆ
ಭ್ರಮಣಾದಿಯೇ ಸುಪ್ರವರ್ಗ್ಯ । ತಿಳಿ
ಸುಮುಖಾಗ್ನಿ ಆಹವನೀಯ । ಮುಂದೆ
ಸಮಭಿವ್ಯಾಹರನೆ ಸುಹೋಮ್ಯ । ಆಹ
ಸಮಿಧೆಗಳೆರಡೂಟ । ಕರ್ಮ ತ್ರೈಕಾಲಿಕ
ಸುಮಹ ತ್ರೈಸವನಾಖ್ಯ । ಕರ್ಮವೆಂದ್ಯೋಚಿಸಿ ೪

ದರ್ಶ ಪೂರ್ಣಾ ಮಾಸವೆರಡು । ತಿಳಿ
ನಿಶಿ ಹಗಲಿಗೆ ಪೆಸರೆಂದು । ಮತ್ತೆ
ಮಾಸಾರ್ಧ ಪಕ್ಷಮಾಸೆಂದು । ನಾಲ್ಕು
ಮಾಸ ಚಾತುರ್ಮಾಸ್ಯವೆಂದು । ಆಹ

ವಸಂತಾದಿ ಋತುಗಳೆ । ಪಶುಬಂಧವೆನಿಪವು
ವತ್ಸರಾದಿಗಳಿಗೆ । ಪೆಸರಹರ್ಗಹಿವೆಂದು ೫

ಸರ್ವ ಆತ್ಮಾತ್ಮೀಯವೆಲ್ಲ । ಮತ್ತೆ
ಸರ್ವ ಇಂದ್ರಿಯಗಳನೆಲ್ಲ । ಹರಿ
ಸರ್ವ ವ್ಯಾಪ್ತಿಗೆ ಎಂಬೊವೆಲ್ಲ । ತಿಳಿ
ಸರ್ವ ದಕ್ಷಣೆ ಎಂಬ ಸೊಲ್ಲ । ಆಹ
ಚರಮ ದೇಹದ ತ್ಯಾಗ । ಕರೆಸುವುರವಭೃತ
ಅರಿತವರಿಂದಿದನ । ಅರಿತು ಆಚರಿಪುದು ೬

ಇಂತು ಸತ್ರಂಗಳ ಜ್ಞಾನ । ಇದ್ದು
ಅಂತ್ಯದವರೆಗನುಷ್ಠಾನ । ದಲ್ಲು
ತ್ವಾಂತ ನಾದವನುದಗಯನ । ಲೋಕ
ಕಾಂತಿಯುಕ್ತ ಹೊಂದಿಪನ । ಆಹ
ಅಂತೆಯೆ ಚಾಂದ್ರಮಸ । ಮುಂತಾಗಿ ಪೊಂದಿಪ
ಕಾಂತ ಗುರು ಗೋವಿಂದ । ವಿಠಲ ಮುಕ್ತಿಯನೀವ ೭

३३೭

ಪ್ರಾರ್ಥನಾ ನವಕ ಸ್ತೋತ್ರ

ಶುದ್ಧಾನಂದ ಜ್ಞಾನ – ಗೋವಿಂದ । ನಮ್ಮ
ಮಧ್ವಮುನಿಯ ವರದ – ಮುಕುಂದ ॥ಪ॥

ಆಗಮ ವಿಭಜನ – ಗೋವಿಂದ । ಸದ್ ।
ಆಗಮೈಕ ಜ್ಞೇಯ ಮುಕುಂದ
ಆಗಮ ಬೋಧಕ – ಗೋವಿಂದ । ದುಷ್ಟ ।
ಆಗಮ ಛೇದಕ – ಮುಕುಂದ ೧

ಯೋಗೀಶ ವಂದ್ಯನೆ – ಗೋವಿಂದ । ಕೊಡು ।
ಯೋಗ ನಿದ್ರೆಯನು – ಮುಕುಂದ
ಯೋಗ ಸದ್ ಯೋಗನೆ – ಗೋವಿಂದ । ಭಕ್ತಿ ।
ಯೋಗವನೆ ಕೊಡು – ಮುಕುಂದ ೨

ಪ್ರಾಗ್ಜೋತಿಷ ಪುರ – ಗೋವಿಂದ । ದುರ್ ।
ಯೋಗ ನಿವಾರಿಸು – ಮುಕುಂದ ।
ಆಗುಹೋಗುಗಳೆಲ್ಲ – ನಿನ್ನಿಂದ । ಭವ ।
ರೋಗನಿವಾರಿಸು – ಮುಕುಂದ ೩

ಯೋಗ ನೃಹರಿಯೆ – ಗೋವಿಂದ । ವರ ।
ಭೋಗನೃಹರಿಯ ಮುಕುಂದ
ಕೂಗಿದರೊದಗುವ – ಗೋವಿಂದ । ನಮ್ಮ ।
ಕೂಗುಕೇಳದೇನೋ – ಮುಕುಂದ ೪

ಮಾರ್ಗನೆನೀಪನೆ – ಗೋವಿಂದ । ಸನ್ ।
ಮಾರ್ಗದಲಿರಿಸೆನ್ನ ಮುಕುಂದ
ಕಾರ್ಗತ್ತಲೆ ಹರ – ಗೋವಿಂದ । ಕಾಯೋ ।
ಭಾರ್ಗವಿ ರಮಣಗೆ ಮುಕುಂದ ೫

ವೃಂದಾವನಪತಿ – ಗೋವಿಂದ । ಸದ್ ।
ವೃಂದಾವನನೇ ಮುಕುಂದ
ವೃಂದಾರಕ ವಂದ್ಯ – ಗೋವಿಂದ । ದುರ್ ।
ವೃಂದವ ಛೇದಿಸು – ಮುಕುಂದ ೬

ವೃಂದಾವ್ನಿ ವರದ – ಗೋವಿಂದ । ಜನ ।
ವೃಂದದಲ್ಲಿಡದಿರು ಮುಕುಂದ
ವೃಂದಾವನಚರ – ಗೋವಿಂದ । ನಾಮ ।
ವೃಂದಾವನುಡಿಸು – ಮುಕುಂದ ೭

ಬಾಧ್ಯ ಬಾಧಕನೆ – ಗೋವಿಂದ । ನಮ್ಮ ।
ಸಾಧ್ಯ ಸಾಧಕನೆ – ಮುಕುಂದ
ಆದ್ಯ ಸುವೇದ್ಯನೆ – ಗೋವಿಂದ । ವೇದ ।
ವೇದ್ಯನೆ ಪೊರೆವುದು – ಮುಕುಂದ ೮

ಗುರು ಹಯವದನನೆ – ಗೋವಿಂದ । ನಮ್ಮ ।
ಗುರುರಾಜರ ಗುರು – ಮುಕುಂದ ।
ಸರುವೋತ್ತಮೋತ್ತಮ – ಗೋವಿಂದ । ಕೊಡು ।
ಗುರು ಗೋವಿಂದ ವಿಠಲ ನಿಜಾನಂದ ೯

ಅನುಬಂಧಗಳು

೧. ಕಠಿಣ ಶಬ್ದಗಳ ಅರ್ಥ

೨. ಪೂರ್ವಕಥೆಗಳು ಮತ್ತು ಟಿಪ್ಪಣಿಗಳು

೩. ಸಹಾಯಕ ಸಾಹಿತ್ಯ

೪. ಕೀರ್ತನೆಗಳ ಅಕಾರಾದಿ

ಅನುಬಂಧ – ೧

ಕಠಿಣ ಶಬ್ದಗಳ ಅರ್ಥ

ಅಂಜೆಗಮನ	– ವಾಯುದೇವರು	ಕೃತ್ತಿವಾಸ	– ರುದ್ರದೇವರು
ಅಂಬರ	– ಆಕಾಶ	ಕೆಸರುಕರ್ಮ	– ಪ್ರಾರಬ್ಧಕರ್ಮ
ಅಖಣಾಶ್ಮ	– ವಜ್ರಶರೀರ	ಕೋಡಗ	– ಕಪಿ
ಅಘ	– ಪಾಪ, ದೋಷ	ಖಂ	– ಆಕಾಶ
ಅಜ	– ಬ್ರಹ್ಮ, ಜನನವಿಲ್ಲದವ	ಖಗ	– ಗರುಡ
		ಗಡಣೆ	– ಸರಣಿ
ಅನಲ	– ಬೆಂಕಿ	ಗರಳ	– ವಿಷ
ಅನುಪೂರ್ವ	– ವಿಶೇಷವಾದ	ಗೋತ್ರಾರಿ	– ಇಂದ್ರ
ಅರ	– ದೋಷ	ಚಕ್ರಿಪುರಿ	– ವೈಕುಂಠ
ಅಹಿ	– ಶೇಷ	ಚಾರುದೇಷ್ಣ	– ರುಕ್ಮಿಣಿಯ ಮಗ
ಇನ	– ಸೂರ್ಯ	ಚೈಲ	– ಅಸ್ತ್ರ
ಇಭ	– ಆನೆ	ಛಾತ್ರ	– ಶಿಷ್ಯ
ಇಭಗಿರಿ	– ಕರಿಗಿರಿ	ಜವ	– ಯಮ
ಇಕ್ಷುಚಾಪ	– ಮನ್ಮಥ	ತ್ರ್ಯಕ್ಷ	– ಮೂರು
ಈರ	– ವಾಯುದೇವರು	ಕಣ್ಣುಳ್ಳವ	– ರುದ್ರ
ಉರಗಾದ್ರಿ	– ವೇಂಕಟಾದ್ರಿ	ತ್ರಾತ	– ರಕ್ಷಿಸು
ಕಂತುಹರ	– ರುದ್ರ	ತಿಮಿರ	– ಕತ್ತಲು
ಕುಂಭಿಣಿ	– ಭೂಮಿ	ತುರುಕರು	– ಹಸು–ಕರು
ಕುಭವ	– ಪ್ರಾರಬ್ಧಕರ್ಮ	ತೋಕ	– ಬಾಲಕ

ತೋಯಜ – ನೀರಿನಲ್ಲಿ ಹುಟ್ಟುವ ಕಮಲ

ದಶಮತಿ

ಬೋಧ – ಪೂರ್ಣಬೋಧ

ದಶಮಾಸ – ಪುಷ್ಯಮಾಸ

ಧವ – ಪತಿ (ಗಂಡ)

ನಾಸಿಕ – ಮೂಗು

ನಿರಶನ – ಉಪವಾಸ

ಪನಸ – ಹಲಸು

ಪನ್ನಗ – ಶೇಷ

ಪ್ರತ್ಯಹಕ್ – ಪ್ರತಿನಿತ್ಯ

ಪರಿಸರನ ಮತ – ವಾಯುಮತ

ಪಾಚಕ – ಅಡಿಗೆಯವನು

ಪುರಟ – ಹಿರಣ್ಯ

ಪುರಾಕೃತ – ಹಿಂದೆಮಾಡಿದ

ಪುಷ್ಕರ – ಕಮಲ

ಬಂಡುಣಿ – ದುಂಬಿ

ಬಧಿರ – ಕಿವುಡ

ಬವರ – ಯುದ್ಧ, ಧುರ

ಬಾಂಪೊಳೆ – ಬಾನಿನ ಹೊಳೆ, ಗಂಗಾ

ಬುಧಜನ – ಜ್ಞಾನಿಜನ

ಭವ – ರುದ್ರ

ಭ್ರುಕುಟ – ಹುಬ್ಬು

ಭೋಗಿ – ಸರ್ಪ

ಮತ್ಸ್ಯಕೇತ – ಮೀನಿನ ಬಾವುಟ

ಉಳ್ಳವ – ಮನ್ಮಥ

ಮಧುಕರ – ಭಿಕ್ಷಾ

ಮಾಗಧ – ಜರಾಸಂಧ

ಮಾದ್ರವೇಯರು – ನಕುಲ ಸಹದೇವರು

ಮಾನಮೇಯ – ಪ್ರಮಾಣ ಪ್ರಮೇಯ

ರಜತ ಪುರಿ – ಉಡುಪಿ

ರವಿಜ – ಸುಗ್ರೀವ, ಕರ್ಣ

ವನಧಿ – ಸಮುದ್ರ

ವಸುಮತಿ – ಭೂಮಿ

ವ್ರಯ – ವ್ಯರ್ಥ

ವಾಂಚಿತಾರ್ಥ – ಇಷ್ಟಾರ್ಥ

ವಾಸವ – ಇಂದ್ರ

ವಿಪವರ – ಗರುಡ

ವೃಷಭ – ಎತ್ತು

ವ್ಯೋಮಕೇಶ – ರುದ್ರ

ಶತಕ್ರತು – ನೂರು ಯಜ್ಞ ಗಳನ್ನು ಮಾಡಿದವ

ಶಿಖಿ – ನವಿಲು

ಸಂಗರ – ಯುದ್ಧ

ಸಾಧಿ – ಕುದುರೆ ಸವಾರ

ಸುಧೆ – ಅಮೃತ

ಸುರದ್ರುಮ – ಕಲ್ಪವೃಕ್ಷ

ಸುರಪ – ಇಂದ್ರ

ಹಾಟಕ – ಬಂಗಾರ

ಅನುಬಂಧ – ೨

ಪೂರ್ವಕಥೆಗಳು ಮತ್ತು ಟಿಪ್ಪಣಿಗಳು

ಕೀರ್ತನೆ ೧ – ೮

ವಿಘ್ನೇಶ್ವರನಾದ ಗಣಪತಿಯನ್ನು ಕುರಿತು ಮಾಡಿರುವ ಕೃತಿಗಳು. ಆಕಾಶತತ್ವಕಾ ಅಭಿಮಾನಿ, ರುಕ್ಮಿಣಿಯ ಮಗ ಚಾರುದೇಷ್ಣ ಎಂದೆನಿಸದವನು ಇವನು, ಪಾರ್ವತಿಯ ಕುಮಾರ ಶ್ರೀ ವೇದವ್ಯಾಸರ ಪ್ರಣೀತ ಮಹಾಭಾರತ ರಚನೆ ಮಾಡಿದವನು. ರುದ್ರದೇವರ ವರದಿಂದ ಶಿವನ ಆತ್ಮಲಿಂಗವನ್ನು ಪಡೆದು ತೆರಳುತಿದ್ದ ರಾವಣನಿಂದ ಗುಹೆಯಲ್ಲಿ ಇಡುವಂತೆ ಮಾಡಿ ಗೋಕರ್ಣವನ್ನು ಕ್ಷೇತ್ರವನ್ನಾಗಿ ಮಾಡಿದವ.

ಪತ್ತೆಂಟು ಮೊಗ ಮಧ್ಯ ಹಸ್ತಿಯ ಮೊಗದವನ = ವಿಶ್ವಂಭರ ನಾಮಕ ಪರಮಾತ್ಮನಿಗೆ ಹದಿನೆಂಟು ಮುಖ ಮಧ್ಯೆ ಆನೆಯ ಮುಖ ಇವನನ್ನು ಉಪಾಸಿಸುವನು ಗಣಪತಿ ಆದ್ದರಿಂದ ಇವನು ಗಜಮುಖ.

ಕೀರ್ತನೆ ೯

ಶ್ರೀ ಹರಿಯನ್ನು ಕುರಿತು ಮಾಡಿರುವ ಪ್ರಾರ್ಥನೆ ಅಂತರಂಗದ ಕುರುಡ ನಾನಾಗಿದ್ದೇನೆ. ಅದರ ಕಣ್ಣು ತೆರೆಸು ಎಂದು ಪ್ರಾರ್ಥಿಸಿದ್ದಾರೆ. ಮಾನಸ ಪೂಜಾ ವಿಧಾನವನ್ನು ತಿಳಿಸುತ್ತ ಹೃದಯವೆಂಬ ಮಂದಿರದಲ್ಲಿ ಗುರು ಗೋವಿಂದ ವಿಠಲನನ್ನ ಕಾಣಿಸುವಂತೆ ಮಾಡು ಎಂದಿದ್ದಾರೆ.

ಕೀರ್ತನೆ ೧೦

ನೈವೇದ್ಯ ಸಮರ್ಪಣೆಯ ಕಾಲದಲ್ಲಿ ಚಿಂತಿಸಬೇಕಾದ ಭಗವದ್ರೂಪಗಳ ಚಿಂತನೆಯನ್ನರಹುವ ಸುಳಾದಿ.

ಕೀರ್ತನೆ ೧೧

ವೇದವ್ಯಾಸರ ಸ್ತುತಿ ಅನಿಲ ಹೃತ್ಕಮಲಸ್ಥ – ವಾಯುದೇವರ ಹೃದಯ ಕಮಲದಲ್ಲಿರುವ ಚತುರ ರೂಪವ ಧರಿಸಿ – ವಾಸುದೇವ, ಪ್ರದ್ಯುಮ್ನ, ಸಂಕರ್ಷ, ಅನಿರುದ್ಧನಾಗಿ, ಮುನಿಪರಾಶರ

ತನುಜ – ಪರಾಶರರಿಂದ ಸತ್ಯವತಿ ದೇವಿಯಲ್ಲಿ ಅವತರಿಸಿದವ ಸೂತ್ರಗಳ ನಿರ್ಮಾತ್ – ಬ್ರಹ್ಮಸೂತ್ರಗಳನ್ನು ರಚನೆ ಮಾಡಿದವ.

ಕೀರ್ತನೆ ೧೨

ಅಪಮೃತ್ಯು ಪರಿಹರಿಸೋ ಎಂದು ನರಸಿಂಹನನ್ನು ಬೇಡಿದ್ದಾರೆ. ಮನ್ಯು ಸೂಕ್ತೋದಿತ – ಮನ್ಯು ಸೂಕ್ತದಿಂದ ಪ್ರತಿಪಾದ್ಯ.

ಕೀರ್ತನೆ ೧೩

ಶಿಷ್ಯನೋರ್ವನಿಗೆ ಸುಳ್ಳು ಅಪವಾದ ಬಂದಾಗ ಪರಿಹರಿಸಬೇಕೆಂದು ದೇವರಲ್ಲಿ ಮೊರೆಯಿಟ್ಟಿರುವ ಕೃತಿ.

ಕೀರ್ತನೆ ೧೪

ಕೇಶವನಾಮ (ದಾಸರು ಮಾಡಿದ ಕೇಶವನಾಮ) ಭಗವಂತನ ಇಪ್ಪತ್ತು ನಾಲ್ಕು ರೂಪಗಳ ಸ್ತುತಿ.

ಕೀರ್ತನೆ ೧೫

ದಾಸರು ಮಾಡಿರುವ ದಶವತಾರ ಸ್ತುತಿ. ತೆರೆದ ಕಣ್ಣನು ಮತ್ಸ್ಯ, ಗಿರಿಯ ಧರಿಸಿಹೆ – ಕೂರ್ಮ, ಧರಸಿ ಕೆದರುವೆ – ವರಾಹ, ತರಳನುಳಹಿದೆ – ನರಸಿಂಹ ವರಸುವಟುವೆ – ವಾಮನ ಧರಣಿಜೆಯ ಪತಿ – ಸೀತಾಪತಿ ಶ್ರೀರಾಮ ಗುರುಸುತ ಪ್ರದ – ಶ್ರೀಕೃಷ್ಣ ಹಯವನೇರಿದ – ಕಲ್ಕಿ.

ಕೀರ್ತನೆ ೧೬

ದಾಸರು ತಿರುಪತಿಯ ಯಾತ್ರೆಮಾಡಿದ ಕ್ರಮ ಈ ಕೀರ್ತನೆಯಲ್ಲಿದೆ. ಕಲ್ಯಾಣಪುರಿ ಬೆಂಗಳೂರು.

ಕೀರ್ತನೆ ೧೭ – ೧೯

ದಾಸರಾಯರು ಹರಿಯನ್ನು ಕುರಿತು ಮಾಡಿರುವ ಪ್ರಾರ್ಥನೆಯ ವಿವಿಧ ಪ್ರಾಕಾರದ ಕೀರ್ತನೆಗಳು.

ಕೀರ್ತನೆ ೨೦

ಹದಿನಾಲ್ಕು ಲೋಕಗಳನ್ನು ವ್ಯಾಪಿಸಿರುವ ಭಗವಂತನ ರೂಪ ವರ್ಣನೆ. ಪಾತಾಳದಲ್ಲಿ ಪಾದ ಸತ್ಯಲೋಕದಲ್ಲಿ ಮುಕುಟ ವಿರುವ ಬೃಹತ್ ವರ್ಣನೆ.

ಕೀರ್ತನೆ ೨೧

ಇತರಾದೇವಿಯ ಸುತನಾದ ಐತರೇಯ ರೂಪ ಭಗವಂತನ ಸ್ತುತಿ.

ಕೀರ್ತನೆ ೨೨ - ೨೩

ಸುಬ್ರಮಣ್ಯ ಮಠದ ಯತಿಗಳಾದ ಶ್ರೀ ವಿಶ್ವಜ್ಞ ತೀರ್ಥ ಶ್ರೀ ಪಾದಂಗಳವರು ಸಂಪುಟ ನರಸಿಂಹನ ಪೂಜೆ ಮಾಡುವ ಕಾಲದಲ್ಲಿ ದಾಸರು ಹಾಡಿದ ಹಾಡುಗಳು.

ಕೀರ್ತನೆ ೨೪

ಕೊಂಡಜ್ಜಿ ಜನಾರ್ಧನ ಸ್ವಾಮಿ ಸ್ತೋತ್ರ. ಅಲ್ಲಿಯ ಸ್ಥಳಪುರಾಣ.

ಕೀರ್ತನೆ ೨೫

ಪಂಡರಪುರದ ಪಾಂಡುರಂಗ ವಿಠಲನ್ನ ಕಾಣುವ ಹಂಬಲ.

ಕೀರ್ತನೆ ೨೬

ಶ್ರೀ ರಂಗ ಕ್ಷೇತ್ರದ ರಂಗನಾಥನ ವರ್ಣನೆ, ಯಲರುಣಿ ಶಯನ - ಶೇಷಶಯನ ಕಾಳೀ ರಮಣನುತ - ಭಾರತೀರಮಣನುತ.

ಕೀರ್ತನೆ ೨೭ - ೨೯

ಪರಮಾತ್ಮನ ವಿವಿಧ ಮಹಿಮೆಗಳನ್ನು ವರ್ಣಿಸುವ ಕೃತಿಗಳು.

ಕೀರ್ತನೆ ೩೦

ಉದಯ ರಾಗ ಇದರಲ್ಲಿ ಲಕ್ಷ್ಮೀ ಮೊದಲ್ಗೊಂಡು ಎಲ್ಲರಿಗೂ ಈತ ಒಡೆಯ ಎಂಬುದನ್ನು ಅರುಹಿದ್ದಾರೆ.

ಕೀರ್ತನೆ ೩೧

ದಾಸರು ೪೭ನೇ ವರ್ಷದ ಹುಟ್ಟು ಹಬ್ಬದಲ್ಲಿ ಮಡದಿ ಮಕ್ಕಳ ಮೋಹ ಬಿಡಿಸೆಂದು ಪ್ರಾರ್ಥಿಸಿದ್ದಾರೆ. ಚತುರನಾರಿ - ಮೋಹಿನಿ ರೂಪ.

ಕೀರ್ತನೆ ೩೨

ಶ್ರೀ ಹರಿಯನ್ನ ಮನ ಮಂದಿರಕೆ ಬಾ ಎಂದು ಕರೆದು ಭವರೋಗ ಪರಿಹರಿಸು ಎಂದು ಪ್ರಾರ್ಥಿಸಿದ್ದಾರೆ.

ಕೀರ್ತನೆ ೩೩

ಹೃತ್ಕಂಜನಿಲಯ – ಹೃದಯ ಕಮಲ ಬಿಂಬಾ ಪ್ರಾಜ್ಞಾದಿ ರೂಪ ಪ್ರಾಜ್ಞ, ತೈಜಸ, ವಿಶ್ವ ರೂಪಗಳು. ಅವಸ್ಥಾತ್ರಯಗಳಲ್ಲಿ ಇರುವ ರೂಪಗಳು.

ಕೀರ್ತನೆ ೩೪ ರಿಂದ ೩೫

ಉಡುಪಿಯ ಕೃಷ್ಣನನ್ನು ಕಂಡು ಮಾಡಿರುವ ಸ್ತೋತ್ರ.

ಕೀರ್ತನೆ ೩೬ ರಿಂದ ೩೭

ದೇವರಾಯನ ದುರ್ಗ ನರಸಿಂಹ ದೇವರ ಸ್ತೋತ್ರ.

ಕೀರ್ತನೆ ೩೮

ಮೊಗಟಖಾನ ಹುಬ್ಬಳ್ಳಿ ಶ್ರೀ ಯಾದವಾರ್ಯರ ಕರಾರ್ಚಿತ ಶ್ರೀ ನರಸಿಂಹ ದೇವರ ಸ್ತೋತ್ರ.

ಕೀರ್ತನೆ ೩೯ ರಿಂದ ೪೨

ಪರಮಾತ್ಮನ ವಿವಿಧ ರೂಪಗಳಲ್ಲಿ ಮಾಡಿರುವ ವಿವಿಧ ಪ್ರಾರ್ಥನೆಗಳು.

ಕೀರ್ತನೆ ೪೪

ಭಕ್ತವತ್ಸಲನಾದ ಶ್ರೀ ಹರಿಯನ್ನು ಮಾಡಿರುವ ಪ್ರಾರ್ಥನೆ.

ಕೀರ್ತನೆ ೪೫

ಇಂದಿನ ನಮ್ಮ ಜೀವನವನ್ನ ಚಿತ್ರಿಸಿ ಅದೂ ಹೇಗಿದೆ ಹೇಗಾಗಬೇಕು ಎಂಬುದನ್ನು ಅರುಹಿದ್ದಾರೆ.

ಕೀರ್ತನೆ ೪೬

ಓರ್ವ ಶಿಷ್ಯಳಿಗಾಗಿ ಮಾಡಿರುವ ಧನ್ವಂತ್ರಿ ಸ್ತೋತ್ರ ತತ್ವಸುವ್ವಾಲಿ ಧಾಟಿಯಲ್ಲಿ.

ಕೀರ್ತನೆ ೪೬ ರಿಂದ ೪೭

ಕಾಲನಾಮಕ ಪರಮಾತ್ಮನ ವ್ಯಾಪಾರ ಚಿತ್ರಣ.

ಕೀರ್ತನೆ ೪೮ ರಿಂದ ೪೯

ಶ್ರೀ ಕೃಷ್ಣನ ಸ್ತುತಿ.

ಕೀರ್ತನೆ ೫೦

ನರಸಿಂಹ ಅವತಾರ ವರ್ಣನೆ.

ಕೀರ್ತನೆ ೫೧ ರಿಂದ ೬೪

ಗರುಡ, ಶೇಷ, ರುದ್ರ ಮೊದಲಾದವರ ಅಂತರ್ಯಾಮಿಯಾದ ಭಗವಂತ ನನ್ನು ಸ್ತುತಿ ಮಾಡಿರುವ ವಿವಿಧ ಪ್ರಕಾರದ ಗೀತೆಗಳು. ಅಂತೆಯೇ ವಿವಿಧ ಕ್ಷೇತ್ರಗಳಲ್ಲಿರುವ ಕ್ಷೇತ್ರ ಮೂರ್ತಿಗಳ ವರ್ಣನೆ. ಈ ಪದ್ಯಗಳಲ್ಲಿ ಉಂಟು.

ಕೀರ್ತನೆ ೬೫

ಆಯುಷ್ಯ ವ್ಯರ್ಥವಾಗಿ ಹೋಗಲು ಬಿಡಬೇಡ, ಆಯು ಹೋಗುವ ಮುನ್ನ ವಾಯುರಮಣನನ್ನು ಸ್ಮರಿಸು ಎಂದು ಅರುಹಿದ್ದಾರೆ.

ಕೀರ್ತನೆ ೬೬ ರಿಂದ ೭೩

ಭಗವಂತನ ವಿವಿಧ ರೂಪಗಳನ್ನು ವಿವಿಧ ರೀತಿಯಲ್ಲಿ ಮಾಡಿರುವ ಪ್ರಾರ್ಥನೆಗಳು.

ಕೀರ್ತನೆ ೭೫

ತೊರವಿ ಕ್ಷೇತ್ರ ನರಸಿಂಹ ದೇವರ ಸ್ತೋತ್ರ. ಇದರಲ್ಲಿ ತೊರೆವಿಯ ಸ್ಥಳ ಪುರಾಣವು ಉಂಟು.

ಕೀರ್ತನೆ ೭೬

ಶ್ರೀ ಬದರಿಕ್ಷೇತ್ರದ ಬದರಿ ನಾರಾಯಣನ ಸ್ತುತಿ.

ಕೀರ್ತನೆ ೭೭

ದಾಸರೋರ್ವರ ಓರ್ವ ಶಿಷ್ಯೆ ತನ್ನ ಗಂಡನ ಪ್ರಾಣಕ್ಕೆ ಅಪಾಯ ಬರಬಹುದು ಎಂದು ಶಂಕಿಸಿ ದಾಸರನ್ನು ಪ್ರಾರ್ಥಿಸಿದಾಗ ಅವಳ ಪರವಾಗಿ ದಾಸರು ಧನ್ವಂತ್ರಿಯನ್ನು ಪ್ರಾರ್ಥಿಸಿ ಮಾಂಗಲ್ಯ ಭಾಗ್ಯ ಉಳಿಸಿದರು.

ಕೀರ್ತನೆ ೭೮

ಪಂಡರಪುರದಲ್ಲಿ ದಾಸರಿಗಾದ ಒಂದು ಅನುಭವ.

ಕೀರ್ತನೆ ೮೦

ಯಕ್ಕುಂಡಿಯಲ್ಲಿರುವ ಶ್ರೀ ವೇದವ್ಯಾಸರ ಸ್ತೋತ್ರ.

ಕೀರ್ತನೆ ೮೧ ರಿಂದ ೮೫

ವಿವಿಧ ಕ್ಷೇತ್ರ ಮೂರ್ತಿಗಳ ನೋಡಿದ ಅನುಭವವನ್ನು ದಾಸರು ವಿವಿಧ ರೀತಿಯಲ್ಲಿ ವರ್ಣಿಸಿದ್ದಾರೆ.

ಕೀರ್ತನೆ ೮೬

ದರ್ಭಶಯನದಲ್ಲಿ ಇರುವ ಶ್ರೀ ರಾಮದೇವರ ಸ್ತೋತ್ರ.

ಕೀರ್ತನೆ ೮೬ ರಿಂದ ೯೬

ದಾಸರು ವಿವಿಧ ಕ್ಷೇತ್ರಗಳಿಗೆ ಭೇಟಿ ಇತ್ತಾಗ ಅಲ್ಲಿಯ ಕ್ಷೇತ್ರ ಮೂರ್ತಿಗಳನ್ನು ತಮ್ಮದೇ ಆದ ಧಾಟಿಯಲ್ಲಿ ವರ್ಣಿಸಿದ್ದಾರೆ.

ಕೀರ್ತನೆ ೯೮

ಮೈಸೂರಿನ ತಮ್ಮ ಮನೆಯಲ್ಲಿ ವಿಠ್ಠಲನನ್ನು ಪ್ರತಿಸ್ಥಾಪಿ ಸಲುದ್ದೇಶಿಸಿ ಸಿದ್ಧತೆ ಯಲ್ಲಿದ್ದಾಗ ಮಾರ್ಗಶೀರ್ಷ ಮಾಸ ಶುಕ್ಲ ಪಕ್ಷ ನವಮಿ ಶುಕ್ರವಾರ ವಿಠ್ಠಲದೇವರ ಪ್ರತಿಮೆ ಮನೆಗೆ ತಂದರು. ಆಗ ಭಾವ ಪರವಶರಾಗಿ ಹಾರಿರುವ ಕೃತಿ.

ಕೀರ್ತನೆ ೯೯ ರಿಂದ ೧೦೫

ಭಗವಂತನ ವಿವಿಧ ರೂಪಗಳನ್ನು ಬಂದ – ಬಂಧ ಎಂಬುದಾಗಿ ಕರೆದಿರುವ ವಿವಿಧ ಭಂಗಿಗಳು.

ಕೀರ್ತನೆ ೧೦೬ ರಿಂದ ೧೦೮

ಪ್ರಾರ್ಥನಾ ಪದಗಳು.

ಕೀರ್ತನೆ ೧೦೯ ರಿಂದ ೧೧೪

ಭಗವಂತನಿಗೆ ಹಾಡಿರುವ ಮಂಗಳ ಪದ್ಯಗಳು.

ಕೀರ್ತನೆ ೧೧೬

ಕಾಲಕ್ಕೆ ಸರಿಯಾಗಿ ಸಂಧ್ಯಾವಂದನೆ ಮಾಡಬೇಕೆಂದು ಇದರಲ್ಲಿ ಅರಹುತ್ತಾರೆ.

ಕೀರ್ತನೆ ೧೧೬ ರಿಂದ ೧೬೫

ಶ್ರೀ ಹರಿಯ ವಿವಿಧ ಅವತಾರಗಳು. ಅವತಾರದಲ್ಲಿ ತೋರಿದ ಲೀಲೆಗಳು ಬ್ರಹ್ಮಾಂಡದಲ್ಲಿ ಇರುವ ರೂಪ, ಪಿಂಡಾಂಡದೊಳಗೆ ಇರುವ ಬಗೆಯನ್ನ ವಿಶೇಷವಾಗಿ ವರ್ಣನೆ ಮಾಡಿರುವ ಅಪೂರ್ವ ಕೃತಿಗಳು. ಇವುಗಳಲ್ಲಿ ಬಂದಿರ ಬಹುದಾದ ಕಠಿಣಪದಗಳ ಅರ್ಥಗಳನ್ನು ಪ್ರತ್ಯೇಕವಾಗಿಯೇ ತಿಳಿಸಲ್ಪಟ್ಟಿದೆ.

ಕೀರ್ತನೆ ೧೬೭ ರಿಂದ ೧೮೦

ಶ್ರೀ ಮಹಾಲಕ್ಷ್ಮೀದೇವಿಯ ಪರವಾಗಿ ಮಾಡಿರುವ ಅಪೂರ್ವ ಕೀರ್ತನೆಗಳು. ಅಜನಮ್ಮ – ಬ್ರಹ್ಮದೇವರ ತಾಯಿ. ಗುಣ ಮೂರ ಮಾನಿನಿ – ತ್ರಿಗುಣಗಳ ಅಭಿಮಾನಿ. ಕನ್ಯೆಕುವರಿ – ಕನ್ಯಾಕುಮಾರಿ. ಚಾರುದೇಷ್ಣನ ಜನನಿ. ಚಾರುದೇಷ್ಣನನ್ನು ಮಗನ್ನಾಗಿ ಪಡೆದ ರುಕ್ಮಣಿ, ಮಾರ ಜನನಿ, ಮನ್ಮಥನ ತಾಯಿ. ಕ್ಷೀರಸಾಗರ ಭವ – ಸಮುದ್ರ ಮಥನ ಕಾಲದಲ್ಲಿ ಹುಟ್ಟಿದವಳು, ದಶಾವತಾರಗಳಿಗೆ ಲಕ್ಷ್ಮೀಯ ರೂಪಗಳು ಮತ್ಸ್ಯ – ವೇಧಾಭಿದೆ – ಕೂರ್ಮ ವೇದವತಿ – ವರಾಹ – ಧಾತ್ರಿ, ನಾರಸಿಂಹ – ಲಕ್ಷ್ಮಿ, ವಾಮನ – ಸುಖಾಬಿಧೆ ಪರುಶುರಾಮ – ಹರಿಣಿ, ಶ್ರೀರಾಮ – ಸೀತ, ಶ್ರೀಕೃಷ್ಣ – ರುಕ್ಮಿಣಿ ಬುದ್ಧ – ದೇವಕಿ. ಕಲ್ಕಿ – ಪ್ರಭ ಈ ವಿಚಾರಗಳನ್ನು ಈ ಕೃತಿಗಳಲ್ಲಿ ಅರುಹಿದ್ದಾರೆ.

ಕೀರ್ತನೆ ೧೮೧

ಬ್ರಹ್ಮದೇವರನ್ನು ಕುರಿತು ಮಾಡಿರುವ ಕೃತಿ. ಸಂಸ್ಕೃತ ಪದಗಳನ್ನೇ ಹೆಚ್ಚು ಬಳಸಿದ್ದಾರೆ.

ಕೀರ್ತನೆ ೧೮೨ ರಿಂದ ೨೧೨

ಮುಖ್ಯ ಪ್ರಾಣದೇವರ ಮೇಲೆ ಮಾಡಿರುವ ಕೃತಿಗಳು ಹನುಮ, ಭೀಮ, ಮಧ್ವರಾಗಿ ಅವತಾರ ಮಾಡಿದ ವಾಯುದೇವರ ಲೀಲೆಗಳ ವರ್ಣನೆ. ಮುಖ್ಯ ಪ್ರಾಣದೇವರ ಶ್ವಾಸ ಮಂತ್ರ ಜಪದ ವರ್ಣನೆ. ಪ್ರಾಣ, ಆಪಾನ, ವ್ಯಾನ, ಉದಾನ, ಸಮಾನ ಐದು ರೂಪಗಳಿಂದ

ಅವರು ಮಾಡುವ ವ್ಯಾಪಾರ. ವಿವಿಧ ಕ್ಷೇತ್ರಗಳಲ್ಲಿರುವ ಮುಖ್ಯ ಪ್ರಾಣ ದೇವರ ಮಹಿಮೆ. ವಾಯು, ಕೂರ್ಮ ರೂಪದಿಂದ ಭೂಮಂಡಲವನ್ನು ಎತ್ತಿ ಹಿಡಿದಿರುವ ಮಹಿಮೆ ಎಲ್ಲವೂ ವರ್ಣಿತವಾಗಿದೆ. ಸುಂದರಕಾಂಡ ರಾಮಾಯಣದ ಕಥನ ಕಾವ್ಯವು ಇಲ್ಲಿದೆ.

ಕೀರ್ತನೆ ೨೧೩ ರಿಂದ ೨೨೦

ಬ್ರಹ್ಮದೇವರ ಪತ್ನಿ ಸರಸ್ವತಿಯನ್ನು ಕುರಿತು ಮಾಡಿರುವ ಸ್ತುತಿ, ಮಹಿಮಾ ವರ್ಣನೆ, ಪ್ರಾರ್ಥನೆ ಎಲ್ಲವೂ ಈ ಕೃತಿಗಳಲ್ಲಿದೆ.

ಕೀರ್ತನೆ ೨೨೧ ರಿಂದ ೨೩೦

ವಾಯುದೇವರ ಪತ್ನಿ ಭಾರತೀ ದೇವಿಯನ್ನು ಕುರಿತು ಮಾಡಿರುವ ಕೃತಿಗಳು. ಕೃತ್ತಿವಾಸನ ತಾಯಿ – ರುದ್ರದೇವರ ತಾಯಿ. ಕಾಳಿ, ದ್ರೌಪದಿ, ಶಿವಕನ್ಯಾ ಇದು ಇವಳ ಅವತಾರಗಳು.

ಕೀರ್ತನೆ ೨೩೧ ರಿಂದ ೨೩೮

ಗರುಡ ದೇವರ ಮೇಲೆ ಮಾಡಿರುವ ಕೃತಿಗಳು. ಈತ ಕಾಲಾಭಿಮಾನಿ. ಸೌಪರ್ಣಿಯ ಪತಿ ಖೇಟಪತಿ – ಆಕಾಶದಲ್ಲಿ ಸಂಚರಿಸುವ ಪಕ್ಷಿಗಳ ಒಡೆಯ ಕಶ್ಯಪರಿಂದ ವಿನುತೆಯಲ್ಲಿ ಜನಿಸಿದವ. ಸೂತ್ರಾತ್ಮಜಾತ – ಸೂತ್ರ ನಾಮಕ ವಾಯುದೇವರ ಪುತ್ರ.

ಕೀರ್ತನೆ ೨೩೯ ರಿಂದ ೨೪೨

ಶ್ರೀ ಶೇಷದೇವರ ಮೇಲೆ ಮಾಡಿರುವ ಪದಗಳು. ಚಕ್ಷುಶ್ರವ – ಕಣ್ಣೇ ಕಿವಿಯಾಗಿ ಉಳ್ಳವ ಕುಕ್ಷಿಯೇ ಪಾದವೆಂಬ ಲಕ್ಷಣ – ಹೊಟ್ಟೆಯೆ ಪಾದವಾಗಿ ಉಳ್ಳ ಅಕ್ಷಾರಿ ಪದ ಪಾಂಸುಧಾರ – ಅಕ್ಷಯ ಕುಮಾರನ ಶತ್ರುವಾದ ವಾಯು ದೇವರ ಪದಧೂಳನ್ನು ಆಹಾರವಾಗಿ ಉಳ್ಳವ. ವಾಯು ಪುಚ್ಛ ಆಶ್ರಯಿಸಿ ಜಗದಾಧಾರನೆ ವಾಯು ಕೂರ್ಮನನ್ನು ಆಶ್ರಯಿಸಿ ಜಗವನ್ನು ಹೊತ್ತಿರುವನೆ. ಪಕ್ಷಿವಾಹಗೆ ಶಯ್ಯ – ಗರುಡ ವಾಹನನಾದ ಶ್ರೀ ಹರಿಗೆ ಹಾಸಿಗೆಯಾದವನೆ. ಪಕ್ಷಿಯ ಸಮ – ಗರುಡನ ಸಮಕಕ್ಷೆಯಲ್ಲಿ ಬರುವನೆ ಪೂರ್ವತ್ರಕ್ಷ – ಪೂರ್ವ ದಲ್ಲಿ ರುದ್ರದೇವರು ಆಗಿದ್ದವನು. ಜೀವಮಾನಿ – ಜೀವಕ್ಕೆ ಅಭಿಮಾನಿ ಶ್ರದ್ಧೆಯ ಸುತ ಶ್ರದ್ಧಾನಾಮಕ ಭಾರತಿದೇವಿಯ ಸುತ. ಬಲನೆನಿಸುತ – ಬಲರಾಮನಾಗಿ ಹುಟ್ಟಿ ವಾತಾಶಾನ – ಗಾಳಿಯೆ ಆಹಾರವಾಗಿ ಉಳ್ಳ.

ಕೀರ್ತನೆ ೨೪೩ ರಿಂದ ೨೭೨

ಮಹರುದ್ರ ದೇವರ ಪರವಾದ ಸ್ತುತಿಗಳನ್ನು ದಾಸರು ಮಾಡಿದ್ದಾರೆ. ರುದ್ರದೇವರು ಮಾಡಿದ ಅವತಾರಗಳು ಅಶ್ವತ್ಥಾಮ, ದೂರ್ವಾಸರು, ಶುಕ್ರಾಚಾರ್ಯರು, ಜೈಗೀಶವ್ಯ,

ಇವುಗಳನ್ನು ವಿವಿಧ ಕೀರ್ತನೆಯಲ್ಲಿ ಸ್ತುತಿ ಮಾಡಿದ್ದಾರೆ. ಹರ್ಯಕ್ಷ – ಅಗ್ನಿನೇತ್ರ ಹನದಕ್ಷ – ದಕ್ಷ ಪ್ರಜಾಪತಿಯ ಯಜ್ಞವನ್ನು ಧ್ವಂಸಮಾಡಿದವರು. ನಿಟಿಲಾಕ್ಷ – ಹಣೆಗಣ್ಣ ಅಕ್ಷಾರಿ ಪದದೀಕ್ಷಾ – ಅಕ್ಷಯ ಕುಮಾರನು ಕೊಂದ ವಾಯುದೇವರ ಪಾದಗಳಲ್ಲಿ ದೀಕ್ಷಾ ಬದ್ಧರು. ವೃಷಾಂಕ – ಚಂದ್ರಶೇಖರ. ವೃಷಧ್ವಜ – ಎತ್ತನ್ನು ಧ್ವಜವನ್ನಾಗಿ ಉಳ್ಳವನು. ವೃಷಭೇಕ್ಷಣ – ನಂದಿಯಿಂದ ವಂದಿತನಾಗಿರುವವ. ವೃಷಭೂತ – ಪ್ರಮಥ ಗಣಗಳು. ವೃಷಶರ – ಪಿನಾಕ ಧನುಸ್ಸಿಗೆ ಸೇರಿಸುವ ಬಾಣ. ವೃಷಪತಿ – ಭೂತಗಣಗಳಿಗೆ ಒಡೆಯ. ವೃಷೇಶ್ವರ – ಸುರಗಣಗಳಿಗೆ ಒಡೆಯ ವೃಷಬೋಧರ – ವಿಷಕಂಠ ಸ್ವರ್ಣಕೇಶ – ಕೆಂಜೆಡೆ ಉಳ್ಳವ ಚೀರವಾಸ – ಆನೆಯ ಚರ್ಮ ಹುಲಿಯ ಚರ್ಮ ಬಟ್ಟೆಯಾಗಿ ಉಳ್ಳವನು. ಅವ್ಯಕ್ತಕೇಶ – ವ್ಯೋಮಕೇಶ – ವಿರೂಪಾಕ್ಷ – ಮೂರು ಕಣ್ಣುಳ್ಳವ. ಭದ್ರಾಣಿಪತಿ – ಪಾರ್ವತಿ ಸತಿ. ಹೀಗೆ ರುದ್ರದೇವರ ಪರವಾದ ಕೀರ್ತನೆಗಳಲ್ಲಿ ಅಪೂರ್ವ ಪದಗಳನ್ನು ಬಳಸಿ ಹರಿದಾಸ ಸಾಹಿತ್ಯದ ಸೊಬಗಿನ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ.

ಕೀರ್ತನೆ ೨೭೩ ರಿಂದ ೨೭೪

ಭೂತರಾಜರು ಭಾವೀರುದ್ರದೇವರನ್ನು ಕುರಿತು ಮಾಡಿರುವ ಕೀರ್ತನೆಗಳು.

ಕೀರ್ತನೆ ೨೭೫ ರಿಂದ ೨೮೦

ಹರಿದಾಸ ಸಾಹಿತ್ಯದಲ್ಲಿ ದೊರಕಿರುವ ಅಪೂರ್ವ ಕೀರ್ತನೆಗಳು. ಪರಮಾತ್ಮನ ಷಣ್ಮಹಿಷಿಯರ ಸ್ತೋತ್ರ ಹರಿಕಥಾಮೃತಸಾರದಲ್ಲಿ ಇರುವುದನ್ನು ಬಿಟ್ಟರೆ ಬೇರ್‍ಯಾವುದು ನಮಗೆ ದೊರೆತಿಲ್ಲ. ಲಕ್ಷಣ, ಮಿತ್ರವಂದ್ಯ, ಲೀಲಾದೇವಿ, ಕಾಳಿಂದಿ, ಭದ್ರಾ, ಜಾಂಬವತಿ ಇವರುಗಳು ಶ್ರೀ ಕೃಷ್ಣನನ್ನು ಹೇಗೆ ವಿವಾಹ ಮಾಡಿಕೊಂಡರು ಎಂಬುದನ್ನು ಅರುಹಿದ್ದಾರೆ.

ಕೀರ್ತನೆ ೨೮೧ ರಿಂದ ೨೮೨

ಗರುಡಪತ್ನಿಯ ಸೌಪರ್ಣಿ ಶೇಷನ ಪತ್ನಿ ವಾರುಣಿ ಇವರನ್ನು ಕುರಿತು ಮಾಡಿರುವ ಸ್ತುತಿಗಳು.

ಕೀರ್ತನೆ ೨೮೩ ರಿಂದ ೨೮೭

ತುಳಸಿದೇವಿಯ ಮೇಲೆ ಮಾಡಿರುವ ಕೃತಿಗಳು. ಸಮುದ್ರಮಥನ ಮಾಡಿದಾಗ ಅಮೃತ ಕಲಶವನ್ನು ಧರಿಸಿ ಪರಮಾತ್ಮ ಪ್ರತ್ಯಕ್ಷನಾದ. ಅವನ ಆನಂದಭಾಷ್ಪದ ಬಿಂದು ಕಲಶದಲ್ಲಿ ಬಿದ್ದು ತುಳಸಿ ಉತ್ಪನ್ನಳಾದಳು. ಸರ್ವತೀರ್ಥಗಳ ಸನ್ನಿಧಾನ ತುಳಸಿಯ ಬುಡದಲ್ಲಿ ಉಂಟು. ಶ್ರೀ ಕೃಷ್ಣ ಪತ್ನಿ ಜಾಂಬವತಿಯೇ ತುಳಸಿಯಾಗಿ ಬಂದಿದ್ದಾಳೆ.

ಕೀರ್ತನೆ ೨೮೮ ರಿಂದ ೨೯೬

ಪಾರ್ವತಿದೇವಿಯ ಕೀರ್ತನೆಗಳು. ೭ನೇ ಕಕ್ಷೆಯಲ್ಲಿ ಬರುವಳು. ಪರ್ವತರಾಜನ ಮಗಳು ಮತಿ ಪ್ರೇರಕಳು ಭದ್ರಾಣಿ, ಅದ್ರಿಜೆ – ಸಮುದ್ರಜ ಶಿರಧರ ಅರ್ಧಾಂಗಿ ಸಮುದ್ರ ಮಥನ ಕಾಲದಲ್ಲಿ ಜನಿಸಿದ ಚಂದ್ರನನ್ನು ಶಿರದಲ್ಲಿ ಧರಿಸಿದ ರುದ್ರದೇವರ ಮಡದಿ. ಇಂದ್ರನಿಗೆ ಸ್ವರೂಪ ಗುರುಗಳು.

ಕೀರ್ತನೆ ೨೯೭ ರಿಂದ ೨೯೮

ಆಗ್ನೇಯ ಪುರಾಣದಲ್ಲಿ ವರ್ಣಿಸಲ್ಪಟ್ಟಿರುವ ಕಾವೇರಿ ನದಿಯ ಕಥನಕಾವ್ಯ ೩೭ ನುಡಿಗಳಲ್ಲಿ ಭಾಮಿನೀ ಷಟ್ಪದಿಯಲ್ಲಿ ರಚಿಸಿರುವ ಅಪೂರ್ವ ಕೃತಿ. ಕಾವೇರಿ ಹರಿದು ಬರುವ ಕ್ಷೇತ್ರಗಳ ಮಹಿಮೆಯನ್ನೂ ಸಹ ತಿಳಿಸಿದ್ದಾರೆ. ತುಲಾಮಾಸದಲ್ಲಿ ಒಂದು ತಿಂಗಳಕಾಲ ಕಾವೇರಿಯಲ್ಲಿ ಗಂಗಾ ಸನ್ನಿಧಾನವಿರುತ್ತದೆ ಎಂಬುದನ್ನು ಅರುಹಿದ್ದಾರೆ. ಕಾವೇರಿ ತೀರದಲ್ಲಿ ಪಿತೃ ಕಾರ್ಯ ಮಾಡಲು ಗಯಾ ಶ್ರಾದ್ಧದ ಪುಣ್ಯಬಹುದು. ೨೯೮ ನೆಯ ಕೀರ್ತನೆ ನರ್ಮದಾ ನದಿಯನ್ನು ಕುರಿತು ಮಾಡಿರುವ ಕೀರ್ತನೆ.

ಕೀರ್ತನೆ ೩೦೦ ರಿಂದ ೩೦೫

ಆತ್ಮ ನಿವೇದನೆಯ ಪದಗಳು ನಾನು ಅಸ್ವಾತಂತ್ರ ನೀನು ಸ್ವತಂತ್ರ ಈ ಲೋಕಕ್ಕೆ ನನ್ನನು ತಂದಿದ್ದೀಯಾ ಕರ್ಮಬಂಧಕ ವಾಗದ ಹಾಗೆ ಮಾಡು ಬೂಟಾಟಿಕೆಯ ಕರ್ಮಗಳ ಬಿಡಿಸು ಅನ್ಯ ದೇವತ ಉಪಾಸನೆಯ ತ್ಯಜಿಸು ನಿನ್ನಲ್ಲಿ ಮನವನ್ನಿರಿಸು ಭಾಗವತದಿ ಗ್ರಂಥಗಳನ್ನು ಕೇಳಿಸು ಹರಿ ಭಕುತಿಯ ಹುಚ್ಚು ಹಿಡಿಸು.

ಕೀರ್ತನೆ ೩೦೬ ರಿಂದ ೩೦೯

ಶ್ರೀಮದ್ರಾಮಾಯಣ, ಮಹಾಭಾರತ, ಭಾಗವತ ಕಥನ ಕಾವ್ಯಗಳು. ಇದನ್ನು ಶಾಸ್ತ್ರೀಯ ಸಂಗೀತ ಧಾಟಿಯಲ್ಲೂ ಹಾಡಲು ಅನುವಾಗುವಂತೆ ಸ್ವರ ಪ್ರಸ್ತಾರವನ್ನು ಹಾಕಿದ್ದಾರೆ. ಸಂಸ್ಕೃತ ಪದಗಳು ವಿಶೇಷವಾಗಿ ಹರಿದಾಸ ಸಾಹಿತ್ಯದೊಂದಿಗೆ ಬಳಸಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಕೀರ್ತನೆ ೩೧೦

ಆಚಾರ್ಯರ ಸದಾಚಾರ ಸ್ಮೃತಿಯಲ್ಲಿರುವ ವಿಚಾರಗಳನ್ನು ಕನ್ನಡದಲ್ಲಿ ಭಟ್ಟಿ ಇಳಿಸಿದ್ದಾರೆ. ಝಷಕೇತು ಪಿತ ಮೀನನ್ನು ಧ್ವಜವನ್ನಾಗಿ ಇಟ್ಟುಕೊಂಡಿರುವ ಮನ್ಮಥನ ತಂದೆ. ಪ್ರಾತಃಕಾಲದಲ್ಲಿ ಎದ್ದು ಮಾಡಬೇಕಾದ ಕರ್ತವ್ಯಗಳನ್ನು ಆರಂಭಿಸಿ ರಾತ್ರಿ ಮಲಗುವ ತನಕ ಮಾಡಬೇಕಾದ ಎಲ್ಲಿ ಕ್ರಿಯೆಗಳ ವರ್ಣನೆ ಇದರಲ್ಲುಂಟು.

ಕೀರ್ತನೆ ೩೧೧ ರಿಂದ ೩೧೩

ಭಜನೆಗೆ ಯೋಗ್ಯವಾದ ಕೀರ್ತನೆಗಳು. ಭೂಮಿಯ ಗುಣ, ಕ್ಷಮಾಗುಣ ನಾರಿಚೋರ – ರಾವಣಮಾರ್ಗ – ಬಾಣ. ಇಕ್ಷುಚಾಪ – ಕಬ್ಬನ್ನು ಬಿಲ್ಲಾಗಿ ಉಳ್ಳವ (ಮನ್ಮಥ)ಇಕ್ಷುಧನ್ವಾರಿ – ಕಬ್ಬನ್ನು ಬಿಲ್ಲಾಗಿ ಉಳ್ಳವ ಮನ್ಮಥನ ಶತೃ ರುದ್ರದೇವರು. ಉರಗ – ಶೇಷಶಯನ, ಗೋವಿಂದ ಅಷ್ಟೋತ್ತರ ನಾಮದಲ್ಲಿ ಮಾತೃ ಕಾನ್ಯಾಸದ ದೇವತೆಗಳ ವರ್ಣನೆ ಇದೆ. ೨೭ ನುಡಿಗಳಲ್ಲಿ ೧೦೮ ಬಾರಿ ಗೋವಿಂದನನ್ನು ಸ್ಮರಿಸಿರುವ ಓರ್ವ ಕೃತಿ.

ಕೀರ್ತನೆ ೩೧೪ ರಿಂದ ೩೧೯

ತೀರ್ಥಕ್ಷೇತ್ರಗಳ ಯಾತ್ರೆಯನ್ನು ದಾಸರು ಮಾಡಿದಾಗ ಅಲ್ಲಿ ಹರಿಯುವ ನದಿ, ಇರುವ ಕ್ಷೇತ್ರ ಮೂರುತಿ, ಸ್ಥಳ ಪುರಾಣ ಇವುಗಳನ್ನು ತಿಳಿಸುವುದರ ಜೊತೆಗೆ ಈ ಯಾತ್ರೆಗಳ ಆಧ್ಯಾತ್ಮಿಕ ಅರ್ಥವನ್ನ ತಿಳಿಸಿರುತ್ತಾರೆ. ಬ್ರಹ್ಮಾಂಡದೊಳಗಿರುವ ಕ್ಷೇತ್ರಗಳನ್ನ ಪಿಂಡಾಂಡದೊಳಗೆ ಕಾಣುವ ಬಗೆಯನ್ನು ಅರುಹಿದ್ದಾರೆ. ೧೯೫೨ ರಲ್ಲಿ ಇಡೀ ಭರತ ವರ್ಷದಲ್ಲಿ ಉತ್ತರ ಭಾರತ ಯಾತ್ರೆ ೧೯೫೪ ರಲ್ಲಿ ಪಶ್ಚಿಮ ಕ್ಷೇತ್ರಗಳ ಯಾತ್ರೆ ೧೯೫೭ ರಲ್ಲಿ ಮಳಖೇಡ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಯಾತ್ರೆ ೧೯೬೧ ರಲ್ಲಿ ಸ್ವಾದಿ ಮತ್ತು ಸುತ್ತಮುತ್ತಲಿನ ಯಾತ್ರೆ ಮಾಡಿಬಂದ ಜ್ಞಾಪಕಾರ್ಥವಾಗಿ ತೀರ್ಥಕ್ಷೇತ್ರ ಮಾಲಾ ಎಂಬ ಕೃತಿಯನ್ನು ೯೬ ಪದ್ಯದಲ್ಲಿ ಬರೆದಿದ್ದಾರೆ.

ಕೀರ್ತನೆ ೩೨೦ ರಿಂದ ೩೩೨

ಈ ಕೃತಿಗಳಲ್ಲಿ ಶ್ರೀ ಮದ್ಭಾಗವತಾಂತರ್ಗತ ಗಜೇಂದ್ರಮೋಕ್ಷ ಪರೀಕ್ಷಿತ್ ರಾಜನ ಚರಿತ್ರೆ, ಕುಚೇಲೋಪಾಖ್ಯಾನ, ಬೃಹತಿ ಸಹಸ್ರ ಹೋಮದ ಮಹಿಮೆ, ಬಿಳಿಗಿರಿರಂಗನ ಮಹಾತ್ಮೆ, ವೆಂಕಟೇಶ ಕಲ್ಯಾಣ ಪಂಚ ಮಹಾಯಜ್ಞಗಳು ಇವುಗಳನ್ನು ಕುರಿತು ದೀರ್ಘಕಾಲಿನ ಕೃತಿಗಳನ್ನು ರಚಿಸಿದ್ದಾರೆ.

ಅನುಬಂಧ - ೩.

ಸಹಾಯಕ ಸಾಹಿತ್ಯ

೧. ಹರಿಭಕ್ತವಿಜಯ ಮಾಲೆಯಲ್ಲಿ ಶ್ರೀಗುರುಗೋವಿಂದದಾಸರು ಪ್ರಕಟಿಸಿರುವ ಎಲ್ಲ ಕೃತಿಗಳು.

೨. ಶ್ರೀ ಗುರುಗೋವಿಂದ ದಾಸರು - ಲೇ. ಜಯಸಿಂಹ, ಪರಿಮಳ ಗೆಳೆಯರ ಬಳಗ, ಬೆಂಗಳೂರು.

ಅನುಬಂಧ – ೪

ಕೀರ್ತನೆಗಳ ಅಕಾರಾದಿ

ಕ್ರಮ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಕೀರ್ತನೆ ಸಂಖ್ಯೆ
ಆ		
೧೭.	ಆನಂದ ಗಿರಿ ರಾಯನೆ	೧೭
೧೮.	ಆನಮಿಪೆ ಮಾತೆ ಪಿತರರ್ಗೆ	೩೧೬
೧೯.	ಆನೆಯು ಬಂದಿತು ಕಾಸಾರಕೆ	೩೨೫
೨೦.	ಆರ್ತನಾಭೀಷ್ಟವನು	೧೬
೨೧.	ಆಮ್ನಾಯ ವಿಸ್ತರ	೩೧೩
೨೨.	ಆರ ಮೊರೆ ಇಡಲೋ	೧೮
೨೩.	ಆರೀಗೆ ಮೊರೆ ಇಡಲೋ	೧೯
ಇ		
೨೪.	ಇಂದಿರೆಯರಸನ ಚೆಂದದಿಂದ ಭಜಿಸೋ	೨೦
೨೫.	ಇತರೆಳೆಯಳ ಸುತನೆನಿಪ ಐತರೇಯ	೨೧
ಈ		
೨೬.	ಈರಾ ಹರಿ ಪದ	೧೮೨
ಉ		
೨೭.	ಉಡುಪಿ ಯಾತ್ರೆಯ ಮಾಡಿ	೩೧೯
೨೮.	ಉಮಾ ನಿನಗೆ ಸರಿಯಾರೆ	೨೮೮
೨೯.	ಉಮಾರಮಣ ಶಂಭೋ	೨೪೭
ಎ		
೩೦.	ಎಂತು ಶೋಭಿಪ ನೋಡೀ?	೨೨
೩೧.	ಎಂತು ಶೋಭಿಪ ನೋಡಿ ಶ್ರೀ ವ್ಯಾಸ ವಿಠಲ	೨೩
೩೨.	ಎಂಥಾ ದಯವಂತನೀತನು	೧೮೩
೩೩.	ಎಂಥಾ ಸುಂದರನೋ ಶ್ರೀ ಕಾಂತನು	೨೪

ಕ್ರಮ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಕೀರ್ತನೆ ಸಂಖ್ಯೆ
೧೬೩.	ಪಂಪಾಪತಿಯೆ ಶಂಭೋ	೨೫೮
೧೬೪.	ಪಂಪಾಪುರದ ನಿವಾಸನೆ ಶಿವನೆ	೨೫೯
೧೬೫.	ಪದ್ಮದಳಾಯತಾಕ್ಷಿ ಸೌಪರ್ಣಿ	೨೮೧
೧೬೬.	ಪದ್ಮಾಕ್ಷಿ – ಪದ್ಮಾಕ್ಷಿ	೧೭೪
೧೬೭.	ಪನ್ನಗಾಚಲವಾಸ	೮೯
೧೬೮.	ಪರಶು ರಾಮಗೆ ಪ್ರೀತ್ಯಾಗಲೀ	೩೧೮
೧೬೯.	ಪರಾಕೆಂಬೆ ಕರಿಗಿರೀಶ	೯೦
೧೭೦.	ಪವಮಾನ ಪವಮಾನ ಪವಮಾನ	೧೯೩
೧೭೧.	ಪಾರ್ಥಿವ ವತ್ಸರ	೯೧
೧೭೨.	ಪಾವಮಾನಿಯೆ ತವ	೧೯೪
೧೭೩.	ಪಾರ್ವತಿ ಮತಿ ಎನಗೆ	೨೯೧
೧೭೪.	ಪಾರ್ವತಿ ಶರ್ವಾನ ಜಾಯೆ	೨೯೨
೧೭೫.	ಪಾರು ಮಾಡೋ ಕೃಷ್ಣಾ	೯೨
೧೭೬.	ಪಾಲಿಸಯ್ಯ ಪವನ ಕುವರನೆ	೨೬೦
೧೭೭.	ಪಾಲಿಸೆ ಕೃಷ್ಣರಮಣಿ	೧೭೫
೧೭೮.	ಪಾಲಿಸೋ ಕೃಷ್ಣಾ	೯೩
೧೭೯.	ಪಾಲಿಸೋ ಪವಮಾನ	೧೯೫
೧೮೦.	ಪಾಲಿಸೋ ಮಗುವ ನೀ	೯೪
೧೮೧.	ಪಾಲಿಸೋ ಮನ್ಮನಾಸ	೯೫
೧೮೨.	ಪಾವನ್ನೆ – ಪಾವನ್ನೆ	೨೮೬
೧೮೩.	ಪಾಹಿ ಪಾಹಿ ಪರ್ವತ ರಾಜಕುಮಾರಿ	೨೯೩
೧೮೪.	ಪ್ರಾಣ ದೇವನೆ	೧೯೬
೧೮೫.	ಪ್ರಾಣ ಬಾರೋ ಜಗತ್ರಾಣ ಬಾರೋ	೧೯೭
೧೮೬.	ಪ್ರಾಣಾಂತರ್ಗತ ಜ್ಞಾನಾನಂದ	೯೬
೧೮೭.	ಪ್ರಾಣೇಶ ಭಾವಿ ಬ್ರಹ್ಮಾಣಿ	೧೯೮

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು